# ಅಮೆರಿಕ ಪ್ರವಾಸ ಕಥನಗಳು ಒಂದು ಸಾಂಸ್ಕೃತಿಕ ಅಧ್ಯಯನ

ಪಿಹೆಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧನಾರ್ಥಿ

ಎಸ್.ಪೂರ್ಣಿಮ

ಮಾರ್ಗದರ್ಶಕರು

ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್

ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು.



ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ ಹಂಪಿ,

ವಿದ್ಯಾರಣ್ಯ - ೫೮೩ ೨೭೬

೨೦೧೨

# ಅಮೆರಿಕ ಪ್ರವಾಸ ಕಥನಗಳು ಒಂದು ಸಾಂಸ್ಕೃತಿಕ ಅಧ್ಯಯನ

ಪಿಹೆಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧನಾರ್ಥಿ

**ಪೂರ್ಣಿಮ ಎಸ್.**

ಮಾರ್ಗದರ್ಶಕರು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ ಹಂಪಿ,

ವಿದ್ಯಾರಣ್ಯ – ೫೮೩ ೨೭೬.

೨೦೧೨

## ದೃಢೀಕರಣ ಪತ್ರ

ಅಮೆರಿಕ ಪ್ರವಾಸ ಕಥನಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವು ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲೆಂದು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದುದಾಗಿದೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿ ಮತ್ತು ಇತರ ಉದ್ದೇಶಕ್ಕಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣ ಮಾಡುತ್ತೇನೆ.

ದಿನಾಂಕ : 16/5/12

ಸ್ಥಳ : ಬೆಂಗಳೂರು

(ಪೂರ್ಣಿಮ ಎಸ್.)

ಸಂಶೋಧನಾರ್ಥಿ

# ಮಾರ್ಗದರ್ಶಕರ ಪ್ರಮಾಣ ಪತ್ರ

ಅಮೆರಿಕ ಪ್ರವಾಸ ಕಥನಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯವನ್ನು ಕುರಿತು ಮಹಾಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಸಲ್ಲಿಸಲು ಪೂರ್ಣಿಮ ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧದ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿಗಾಗಿ ಅಥವಾ ಪ್ರಕಟಣೆಗಾಗಿ ಸಮಗ್ರವಾಗಿ ಅಥವಾ ಅಂಶಿಕವಾಗಿ ಸಲ್ಲಿಸಿಲ್ಲವೆಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 16/5/12

ಸ್ಥಳ : ಬೆಂಗಳೂರು

ಮಲ್ಲೇಪುರಂ ಜಿ. ವೆಂಕಟೇಶ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು.

# ನನ್ನ ನುಡಿ

ಅಮೆರಿಕ ಪ್ರವಾಸ ಕಥನಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಸಂಶೋಧನ ಮಹಾಪ್ರಬಂಧ ಸಲ್ಲಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆಯುವುದಕ್ಕೆ ಮಾರ್ಗದರ್ಶಕರಾಗಲು ಸಮ್ಮತಿಸಿ ಸರ್ವ ರೀತಿಗಳಿಂದ ಸಹಕರಿಸಿ ಮಾರ್ಗದರ್ಶನ ಮಾಡಿದ ಗುರು, ದೈವ ಎಲ್ಲವೂ ಆಗಿರುವ ಪಿತೃ ಸಮಾನರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರಿಗೆ ಭಕ್ತಿಪೂರ್ವಕ ಕೃತಜ್ಞತೆಗಳು.

ಈ ಮಹಾಪ್ರಬಂಧದ ಕುರಿತು ಹಲವಾರು ಸಲಹೆ-ಸೂಚನೆಗಳನ್ನು ನೀಡಿ, ಪದ-ವಾಕ್ಯ-ವಿಷಯ ಪರೀಕ್ಷೆಗಳನ್ನು ಮಾಡಿ, ನಾನು ಎದೆಗುಂದಿದಾಗಲೆಲ್ಲಾ ಆತ್ಮವಿಶ್ವಾಸವನ್ನು ತುಂಬಿ ಉತ್ತೇಜಿಸಿದ ಸಮಾನ ಉಪನ್ಯಾಸಕರಾದ ಡಾ॥ ಅನ್ನದಾನೇಶ್ ದಂಪತಿಗಳಿಗೆ ಹೃತ್ಪೂರ್ವ ಧನ್ಯವಾದಗಳು.

ನನ್ನ ಈ ಸಂಶೋಧನಾ ಮಹಾಪ್ರಬಂಧದ ರಚನಾತ್ಮಕ ಕಾರ್ಯಗಳಿಗೆ, ಪುಸ್ತಕ ಮೊದಲಾದವುಗಳನ್ನು ಒದಗಿಸಿ ಅನೇಕ ರೀತಿಗಳಲ್ಲಿ ನೆರವು ನೀಡಿದ ಪ್ರೀತಿಯ ಗೆಳತಿ ಶ್ರೀಮತಿ. ಪದ್ಮಾ ದಂಪತಿಗಳಿಗೆ ನಾನು ಚಿರಋಣಿಯಾಗಿದ್ದೇನೆ.

ನನ್ನ ಈ ಸಂಶೋಧನಾಧ್ಯಯಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ತಮ್ಮ ಎರಡು ಗ್ರಂಥ ಚೀಟಿಗಳನ್ನು ನಾಲ್ಕೈದು ವರ್ಷಗಳಿಂದ ನೀಡಿ ಆರು ತಿಂಗಳಿಗೊಮ್ಮೆ ಗ್ರಂಥ ಚೀಟಿಗಳ ಮೂಲಕ ಪುಸ್ತಕ ಪಡೆಯಲು ಒಪ್ಪಿಗೆ ಪತ್ರವನ್ನು ನೀಡಿರುವುದಲ್ಲದೆ ಹಲವಾರು ವಿಧಗಳಲ್ಲಿ ಪ್ರೋತ್ಸಾಹಿಸುತ್ತಿದ್ದ ಡಾ॥ಎಚ್.ವಿಜಯಕುಮಾರ್ ದೊಡ್ಡಮನಿ ದಂಪತಿಗಳಿಗೂ ನಾನು ಆಭಾರಿಯಾಗಿದ್ದೇನೆ.

ಸಂಶೋಧನಾ ವಿಷಯದಾಯ್ಕೆಗೆ ವಿಷಯವನ್ನು ಸೂಚಿಸಿದ ಪ್ರೀತಿಯ ಗುರುಗಳಾದ ಡಾ॥ಎಸ್.ವಿದ್ಯಾಶಂಕರ್‌ರವರಿಗೆ, ಮಹಾಪ್ರಬಂಧದ ಅಧ್ಯಯಕ್ಕೆ ಹಲವು ಸಲಹೆ-ಸೂಚನೆಗಳನ್ನು ನೀಡಿದ ಡಾ॥ಬಸವರಾಜು ಕಲ್ಗುಡಿಯವರಿಗೆ ಹಾಗೂ ಕೆಲವು ಅಪರೂಪದ ಪುಸ್ತಕವನ್ನು ಅನ್ಯರಿಂದ ಪಡೆದುಕೊಟ್ಟು

ಸಹಾಯ ಮಾಡುವುದಲ್ಲದೆ, ನನ್ನನ್ನು ಹುರಿದುಂಬಿಸಿದ ಕೆ.ಪಿ.ಕೃಷ್ಣಮೂರ್ತಿಯವರಿಗೆ ನನ್ನ ಗೌರವ ಪೂರ್ವಕ ಧನ್ಯವಾದಗಳು.

ಈ ಮಹಾಪ್ರಬಂಧವನ್ನು ಅಂದವಾಗಿ ಮುದ್ರಿಸಿಕೊಟ್ಟ ಐಸಿರಿ ಪ್ರಕಾಶನ ಮತ್ತು ಯಶ್ ಕ್ರಿಯೇಶನ್ಸ್ ಮಾಲೀಕರು ಮತ್ತು ಸಹಪಾಠಿಗಳಾಗಿದ್ದ ಡಾ॥ ಮಂಜುನಾಥ್ ಮತ್ತು ಕುಂಟುಂಬವರ್ಗದವರಿಗೆ ಹಾಗೂ ಕುಮಾರಿ ಲಕ್ಷ್ಮಿರವರಿಗೆ ಪ್ರೀತಿ ಪೂರ್ವಕ ನಮನಗಳು.

ನನ್ನ ಸಂಶೋಧನಾಧ್ಯದಲ್ಲಿನ ಬಹುತೇಕ ಕಾರ್ಯಗಳಲ್ಲಿ ಅನನ್ಯ ನೆರವಿನಿಂದ ಸಹಕರಿಸಿದ ಬಾಳಸಂಗಾತಿ ಎಂ.ಆರ್. ಮುನಿರಾಜು ಮತ್ತು ಮಗಳು ಎಂ. ಹಿಮರನ್ನು ಅಕ್ಕರೆಯಿಂದ ಸ್ಮರಿಸುತ್ತೇನೆ.

ನನ್ನ ಸಂಶೋಧನಾಧ್ಯನಕ್ಕೆ ಪರಿತಪಿಸಿದ ನನ್ನ ತಾಯಿ ಎಚ್.ಸಾವಿತ್ರಮ್ಮನವರಿಗೆ, ರುಕ್ಮಿಣಿ ಆಂಟಿಯವರಿಗೆ ಮತ್ತು ಒತ್ತಾಸೆಯಾಗಿ ಸಹಕರಿಸಿದ ಅತ್ತೆ-ವೆಂಕಟಲಕ್ಷ್ಮಮ್ಮ ಮತ್ತು ಮಾವ-ಎಂ.ರುದ್ರಯ್ಯನವರಿಗೂ ಋಣಿಯಾಗಿದ್ದೇನೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಎಲ್ಲಾ ಬೋಧಕ ಮತ್ತು ಬೋಧಕೇತರ ವರ್ಗದವರಿಗೂ ಹಾಗೂ ವಸತಿ ಗೃಹದ ನೆಚ್ಚಿನ ಗೆಳತಿಯರಾದ ದರ್ಶಿನಿ ಮತ್ತು ವಿಜಯರವರಿಗೂ ನಾನು ಉಪಕೃತಳಾಗಿದ್ದೇನೆ.

**ಎಸ್. ಪೂರ್ಣಿಮ**

**ಸಂಶೋಧನಾರ್ಥಿ**

# ಪರಿವಿಡಿ

# ಅಧ್ಯಾಯ – 1

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
2. ಪ್ರವಾಸದ ಪೂರ್ವೋತ್ತರ
3. ಪ್ರವಾಸ ಮತ್ತು ಪ್ರವಾಸ ಸಾಹಿತ್ಯದ ಹುಟ್ಟು ಬೆಳವಣಿಗೆ
4. ಕನ್ನಡ ಪ್ರವಾಸ ಸಾಹಿತ್ಯದ ನಿರ್ವಚನ
5. ಪ್ರವಾಸ ಕಥನಗಳ ಸಮೀಕ್ಷೆ

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರವಾಸ ಸಾಹಿತ್ಯವು ಕನ್ನಡದ ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಬಹಳ ತಡವಾಗಿ ತನ್ನ ಅಧ್ಯಯನದ ನೆಲೆಗಳನ್ನು ಗುರುತಿಸಿಕೊಂಡಿದೆ. ಅಂದರೆ ಕನ್ನಡದ ಮೊಟ್ಟ ಮೊದಲ ಪ್ರವಾಸ ಕಥನ, 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ'ಯವರ 1980ರಲ್ಲಿ ಪ್ರಕಟವಾದ 'ದಕ್ಷಿಣಭಾರತ ಯಾತ್ರೆ'. ಕನ್ನಡ ಸಾಹಿತ್ಯಕ್ಕೆ ಒಂದು ಶತಮಾನ ಅಥವಾ ನೂರ ಹದಿನಾರು ವರ್ಷಗಳ ಇತಿಹಾಸ ಇದ್ದರೂ, ಪ್ರವಾಸ ಕಥನಗಳು ಹೆಚ್ಚು ರಚನೆ ಆಗಿರುವುದು ಮತ್ತು ಪ್ರಸಿದ್ಧವಾಗಿರುವುದು ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದೀಚೆಗೆ ಎಂಬುದು ಸರ್ವವಿಧಿತ.

ಪ್ರವಾಸ ಕಥನವನ್ನು ಅಥವಾ ಪ್ರವಾಸ ಸಾಹಿತ್ಯವನ್ನು ಇಂಗ್ಲಿಷಿನಲ್ಲಿ ಟ್ರಾವೆಲೋಗ್ (Travel logue) ಅಥವಾ ಟ್ರಾವೆಲ್ ಲಿಟರೇಚರ್ (Travel Literrature) ಎಂದೂ, ಕಥನವನ್ನು ನಿರೂಪಣೆ ಎಂದೂ, ಪ್ರವಾಸ ಕಥನವನ್ನು 'ನಾನ್ ಫಿಕ್ಷನಲ್ ಫಾರ್ಮ್' ಎಂದು ಪಾಶ್ಚಾತ್ಯರು ವಿವರಿಸಿದ್ದಾರೆ.

ಮನುಷ್ಯನ ಸ್ವಾತಂತ್ರ್ಯವನ್ನು ಆಧ್ಯಾತ್ಮಕ್ಷೇತ್ರದಲ್ಲಿ 'ಮುಮುಕ್ಷುತ್ವ' ಎನ್ನುತ್ತಾರೆ. ಕೋಶ ಓದಿ ದೇಶ ಸುತ್ತಿ ನೋಡಬೇಕು; ಹಕ್ಕಿಯಂತೆ ಹಾರಾಡಿ, ಹುಲ್ಲೆಯಂತೆ ನಡೆದಾಡಿ, ಮೀನಿನಂತೆ ತೇಲಾಡಿ ನಾನೇ ನಾನಾಗಿದ್ದುಕೊಂಡು ಹೊರಜಗತ್ತನ್ನೆಲ್ಲ ನೋಡಬೇಕು, ತಿಳಿಯಬೇಕು ಎಂಬುದೇ ಅಲೌಕಿಕ ಮುಮುಕ್ಷುತ್ವ. ಇದಕ್ಕೂ ಸಂಸ್ಕಾರಬೇಕು, ಕಾಣುವ ಒಳನೋಟಬೇಕು. ಕಂಡದ್ದನ್ನು, ಕೇಳಿದ್ದನ್ನು ಬಿತ್ತರಿಸುವ ಪ್ರತಿಭೆಯೂ ಬೇಕೆಂದು ಡಾ॥ಕೆ. ಅನಂತರಾಮು ಅವರು ಪ್ರವಾಸ ಲೇಖಕನಿಗೆ ಹೇಳಿದರೆ, ಪ್ರೊ.ಎಂ.ಎಚ್. ಕೃಷ್ಣಯ್ಯನವರು ಉತ್ತಮ ಪ್ರವಾಸ ಸಾಹಿತ್ಯ ರಚನೆಗೆ ಪ್ರವಾಸ ಕಥನಕಾರನಲ್ಲಿ ಸೂಕ್ಷ್ಮಸಂವೇದನೆ, ಅಂತರ್‌ದೃಷ್ಟಿ ಅಥವಾ ಅಂತರ್‌ಬೋಧೆಯೂ ಇರಬೇಕಾಗುತ್ತದೆ ಎಂದಿದ್ದಾರೆ. ಅಲ್ಲದೆ, ಪಾಶ್ಚಾತ್ಯರು ಸೇರಿದಂತೆ ಹಲವರು, ಪ್ರವಾಸ ಕಥನಗಳ ಹಲವು ಅರ್ಹತೆಗಳನ್ನು, ಗುಣಗಳನ್ನು ವ್ಯಾಖ್ಯಾನಿಸುತ್ತಾರೆ.

ಪ್ರವಾಸ ಸಾಹಿತ್ಯದ ಅಗತ್ಯವನ್ನು ಕುರಿತು ಪಂಡಿತ್ ಜವಹರ್‌ಲಾಲ್ ನೆಹರೂರವರು ಕೆ.ಪಿ.ಎಸ್. ಮೆನನ್ ಅವರ 'ವಿಶ್ವಪರ್ಯಟಣೆ ಎಂಬ ಗ್ರಂಥಕ್ಕೆ 'ಮುನ್ನುಡಿ' ಬರೆಯುತ್ತ ಹೀಗೆ ಹೇಳಿದ್ದಾರೆ: "ಪ್ರವಾಸ ಮಾಡುವುದು ಒಳ್ಳೆಯದು, ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ"ವೇ.

ಪ್ರವಾಸ ಸಾಹಿತ್ಯ ಅನೇಕ ದೃಷ್ಟಿಗಳಿಂದ ಉಪಯುಕ್ತ. ಪ್ರವಾಸ ಕಥನಗಳನ್ನು ಓದುವುದರಿಂದ ನಮ್ಮ ತಿಳಿವಳಿಕೆ ಹೆಚ್ಚುತ್ತದೆ; ಮನಸ್ಸು ವಿಶಾಲಗೊಳ್ಳುತ್ತದೆ; ಅನುಭವ ಇಮ್ಮಡಿಸುತ್ತದೆ; ವಿವಿಧ ದೇಶಗಳ, ವಿವಿಧ ಜನಾಂಗಗಳ ನೀತಿ ನಡವಳಿಕೆಗಳ ಪರಿಚಯವಾಗುತ್ತದೆ. ನಾವು ಕಲಿತದ್ದೇನು? ಕಲಿಯದಿರುವುದು ಏನು? ಎಂಬುದು ಕೆಲವು ಸಂದರ್ಭಗಳಲ್ಲಿ ಸ್ಪಷ್ಟಗೊಳ್ಳಬಹುದು. ಪ್ರವಾಸ ಸಾಹಿತ್ಯದ ಮೂಲಕ ಬೇರೆ ಬೇರೆ ದೇಶ, ಜನಾಂಗಗಳ ಸಮಕಾಲಿನ ಚಿತ್ರ ದೊರೆಯುತ್ತದೆ. ಅಮೇರಿಕ ದೇಶದ ಇಂದಿನ ರೀತಿ-ನೀತಿಗಳನ್ನು, ತಾಂತ್ರಿಕ ವಿದ್ಯೆಯಲ್ಲಿ ಅದು ಪಡೆದಿರುವ ಪರಿಣತಿಯನ್ನು ಆ ದೇಶದ ಪ್ರವಾಸ ಕಥನಗಳನ್ನು ಓದುವುದರಿಂದ ಅರಿಯಬಹುದು. ಹಾಗೆಯೇ ನಾವು ಹೋಗಬೇಕಾದ ಪ್ರಗತಿಯ ಹಾದಿ ಯಾವುದು? ಸಾಧಿಸಬೇಕಾದದ್ದು ಏನು ಎಂಬುದು ಗೋತ್ತಾಗುತ್ತದೆ. ನಮ್ಮ ವಿಜ್ಞಾನ, ಸಮಾಜ, ಸಂಸ್ಕೃತಿ, ರಾಜಕೀಯ, ಸಾಹಿತ್ಯ ಕ್ಷೇತ್ರಗಳಲ್ಲಿ ಇರುವ ಓರೆ-ಕೊರೆಗಳ ಚಿತ್ರವೂ ಪ್ರವಾಸ ಸಾಹಿತ್ಯದ ಓದುವಿಕೆಯಿಂದ ಲಭ್ಯವಾಗುತ್ತದೆ. ಇದೆಲ್ಲಕ್ಕಿಂತ ಪ್ರವಾಸ ಸಾಹಿತ್ಯ ನಾಳಿಗೊಂದು ದಾಖಲೆಯಾಗುತ್ತದೆ; ಅಲ್ಲದೆ ಜ್ಞಾನವೃದ್ಧಿಯಾಗುತ್ತದೆ ಎಂಬುದು ಸತ್ಯವಾದದ್ದು ಎಂದು ಡಾ॥ಎನ್.ಎಸ್. ತಾರಾನಾಥ್ ಅವರು ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣದಲ್ಲಿ ವ್ಯಕ್ತಪಡಿಸುತ್ತಾರೆ.

ಪ್ರವಾಸಿಗರು ಇಬ್ಬಗೆಯಾಗಿ ಅಮೇರಿಕಕ್ಕೆ ಭೇಟಿ ನೀಡುತ್ತಿದ್ದಾರೆ. ಒಂದು ಹವ್ಯಾಸಿ ಪ್ರವಾಸಿಗರಾದರೆ, ಎರಡು ನಿಯೋಗಿ ಪ್ರವಾಸಿಗರು. ಈ ಪ್ರವಾಸಿಗರ ಅನುಭವದ ನಿರೂಪಣೆಯನ್ನು ದಿನಚರಿ ರೂಪದಲ್ಲಿ, ಪತ್ರ ಸಾಹಿತ್ಯ ರೂಪದಲ್ಲಿ, ಕಥಾ ರೂಪಗಳಲ್ಲೆಲ್ಲಾ ಇದ್ದರೂ, ದಿನಚರಿ ಮತ್ತು ಪತ್ರ ಸಾಹಿತ್ಯದ ಪ್ರವಾಸ ಕಥನಗಳು ತೀರಾ ಕಡಿಮೆ ಇವೆ ಅಲ್ಲದೆ, ಈ ವಿಧಾನಗಳ ಕುರಿತು ಅನೇಕರ ಅಸಮ್ಮತಿಯೂ ಇದೆ.

ಪ್ರವಾಸ ಕಥನಗಳಲ್ಲಿ ಯೂರೋಪ್. ಜಪಾನ್. ಜರ್ಮನಿ, ಅಮೇರಿಕ ಮುಂತಾದ ದೇಶಗಳ ಪ್ರವಾಸ ಕಥನಗಳು ಇವೆ. ಇವುಗಳಲೆಲ್ಲಾ ಅಮೇರಿಕ ದೇಶದ ಪ್ರವಾಸ ಕಥನಗಳೇ ಅತ್ಯಧಿಕ ಎಂದು ನಿಸ್ಸಂಶಯವಾಗಿ ಹೇಳಬಹುದು ಇದರ ಬಗ್ಗೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು "ಅಮೇರಿಕ ದೇಶದ ಮೇಲೆ ಬಂದಿರುವಷ್ಟು ಪ್ರವಾಸ ಕಥನಗಳು ಇನ್ಯಾವುದರ ಮೇಲೂ ಬಂದಿಲ್ಲ. ಪ್ರವಾಸ ಅಂದರೆ ಅಮೇರಿಕಕ್ಕೆ ಹೋಗಿ ಬರುವುದಕ್ಕೆ ಮಾತ್ರ ಸೀಮಿತವಾಗಿಬಿಟ್ಟಿದೆಯೇ ಹೊರತಾಗಿ. ಬೇರೆ ರಷ್ಯಾ, ಜಪಾನ್ ಕಡೆಗಾಗಲಿ; ಅಥವಾ ಬೇರೆ ಬೇರೆ ದ್ವೀಪಗಳಿಗೆ ಆಗಲಿ, ಆಥರದ ಪ್ರದೇಶಕ್ಕೆ ಹೋಗಿ ಬಂದ ಹಾಗೆ ಕಾಣಿಸುತ್ತಿಲ್ಲ". ಎಂದು 'ಪ್ರವಾಸ ಕಥನಗಳ ನಿಲುವು' ಎಂಬ ತಮ್ಮ ಲೇಖನದಲ್ಲಿ

ಅಭಿಪ್ರಾಯ ಪಡುತ್ತಾರೆ. ಹಾಗಾಗಿ ಇದರಿಂದ ಸ್ಪಷ್ಟವಾಗುವ ವಿಚಾರವೆಂದರೆ ವಿದೇಶಿ ಪ್ರವಾಸಿಗರಲ್ಲಿ ಮತ್ತು ವಿದೇಶಿ ಪ್ರವಾಸಗಳಲ್ಲಿ ಅಮೇರಿಕಕ್ಕೆ ಭೇಟಿ ನೀಡುವವರು ಹಾಗೂ ವಿದೇಶಿ ಪ್ರವಾಸ ಕಥನಗಳನ್ನು ರಚಿಸಿರುವವರಲ್ಲಿ ಅಮೇರಿಕ ದೇಶವೇ ಪ್ರಥಮ ಸ್ಥಾನವನ್ನು ಪಡೆದಿದೆ ಎಂದು ನಿಸ್ಸಂದೇಹವಾಗಿ ಖಚಿತಪಡಿಸಬಹುದು. ಅಷ್ಟೇ ಏಕೆ ನಮ್ಮದೇ ಭಾರತ ಮತ್ತು ಕರ್ನಾಟಕಗಳನ್ನು ಸಂಪೂರ್ಣವಾಗಿ ನೋಡದ ಬಹುಪಾಲು ಜನ ಅಮೇರಿಕವನ್ನು ನೋಡಿ ಬಂದಿದ್ದಾರೆ. ಪ್ರಸ್ತುತ ಸಂದರ್ಭದಲ್ಲಂತೂ ಸಾಮಾನ್ಯವಾಗಿ ಎಲ್ಲರೂ ಅಮೇರಿಕಕ್ಕೆ ಹೋಗುವ, ನೋಡುವ ಅದಮ್ಯ ಆಸೆಯನ್ನು ಹೊಂದಿದ್ದಾರೆ.

ಅಮೇರಿಕ ಪ್ರವಾಸ ಕಥನಗಳು ರಚನೆಯಾಗಿದ್ದರೂ, ಇದುವರೆಗೂ ಯಾರೂ ಸಹ ಆ ಕುರಿತು ಸಮಗ್ರ ಅಧ್ಯಯನ ಮಾಡಿಲ್ಲ. ಅಂದರೆ ಅಮೇರಿಕ ಪ್ರವಾಸ ಕಥನಗಳ ಬಗ್ಗೆ ಒಂದು ಸ್ಥೂಲವಾದ ಅಧ್ಯಯನವನ್ನು ಮಾಡಿರುವ ಕೃತಿಗಳು ಮತ್ತು ಲೇಖನಗಳು ಬೆರಳೆಣಿಕೆಯಷ್ಟು ಮಾತ್ರವಿದ್ದೂ ಅಂಥ ಕೃತಿಗಳನ್ನು ಸಂಕ್ಷಿಪ್ತವಾಗಿ ವಿವರಿಸುವುದಾದರೆ, ಡಾ.ಎಸ್. ವಿದ್ಯಾಶಂಕರ್ ಅವರ 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಕೃತಿಯೂ ತನ್ನದೆ ಆದ ಘನತೆಯನ್ನು ಹೊಂದಿದೆ. ಈ ಕೃತಿ ಒಟ್ಟು ಐನೂರ ಮೂವತ್ತೆರಡು ಪುಟಗಳನ್ನು ಹೊಂದಿದ್ದು; ಸುಮಾರು ಹತ್ತು ವರ್ಷಗಳ ಸುದೀರ್ಘವಾದ ಪರಿಶ್ರಮದಿಂದ ಉದ್ಭವಿಸಿದ ಅತ್ಯುತ್ತಮ ಕೃತಿಯಾಗಿದೆ. ಈ ಕೃತಿ ಮುಖ್ಯವಾಗಿ ಎರಡು ಭಾಗಗಳನ್ನೊಳಗೊಂಡಿದ್ದು, ಒಂದು ಪ್ರವಾಸೋದ್ಯಮವಾದರೆ, ಇನ್ನೊಂದು ಪ್ರವಾಸ ಸಾಹಿತ್ಯಕ್ಕೆ ಸಂಬಂಧಿಸಿದೆ. ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಏಳು ಪ್ರಧಾನ ಅಧ್ಯಾಯಗಳನ್ನು ಹೊಂದಿದ್ದು, ಅದಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಗಳನ್ನೊಳಗೊಂಡಿದೆ. ಎರಡನೆಯ ಭಾಗದಲ್ಲಿ ಪ್ರವಾಸ ಸಾಹಿತ್ಯ ಮತ್ತು ಅದಕ್ಕೆ ಸಂಬಂಧಿಸಿದಂತೆ ಸ್ವದೇಶಿ ಹಾಗೂ ವಿದೇಶಿ ಪ್ರವಾಸಿಗರ ಮತ್ತು ಪ್ರವಾಸ ಕಥನಗಳ ಪರಿಚಯಾತ್ಮಕ ಮಾದರಿಯ ಸ್ಥೂಲ ಅಧ್ಯಯನವಾಗಿದೆ. ಈ ಕೃತಿಯ ಮೂರು ಪುಟಗಳಲ್ಲಿ ಸುಮಾರು ಮೂವತ್ತೊಂದು ಅಮೇರಿಕ ಪ್ರವಾಸ ಕಥನಗಳನ್ನು ಸೂಚಿಸಿದ್ದರೂ, ಕೆಲವು ಗುಣಾತ್ಮಕ ಅಮೇರಿಕ ಪ್ರವಾಸ ಕಥನಗಳನ್ನು ಸ್ಥೂಲವಾಗಿಯೂ, ಇನ್ನೂ ಕೆಲವು ಪ್ರವಾಸ ಕಥನಗಳನ್ನು ಸಂಕ್ಷಿಪ್ತವಾಗಿಯೂ ತೊಂಬತ್ತೆಂಟು ಪುಟಗಳಲ್ಲಿ ಅಮೇರಿಕ ಪ್ರವಾಸ ಕಥನಗಳ ಕುರಿತು ವಿವರಿಸಿರುವ, ಈ ಕೃತಿ 1991ರಲ್ಲಿ ಪ್ರಕಟವಾಗಿದೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು 1992ರಲ್ಲಿ ಸಂಪಾದಿಸಿರುವ 'ಪ್ರವಾಸ ಸಾಹಿತ್ಯ: ಒಂದು ಅಧ್ಯಯನ' ಮೊಟ್ಟ ಮೊದಲ ವಿಶ್ಲೇಶಣಾತ್ಮಕ ಮಾದರಿಯ ಕೃತಿಯಾಗಿದೆ. ಇದು ಮುಖಪುಟ

ಸೇರಿದಂತೆ 20+180 ಪುಟಗಳಿದ್ದು, ಇದರಲ್ಲಿ ಸಂಪಾದಕರು ಸೇರಿದಂತೆ, ಜಿ.ಎಸ್.ಎಸ್ ಮೊದಲಾದ ಸೃಜನಶೀಲ ವಿದ್ವಾಂಸರ ಹಲವು ಲೇಖನಗಳಿವೆ. ಅಲ್ಲದೆ, 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ-ಅಮೆರಿಕ' ಎಂಬ ಪ್ರತ್ಯೇಕ ಲೇಖನವನ್ನು ಪ್ರೊ. ಎಂ.ಎಚ್.ಕೃಷ್ಣಯ್ಯನವರು ರಚಿಸಿರುವುದನ್ನು ಒಳಗೊಂಡಿದೆ.

ಪ್ರವಾಸ ಹೋಗುವ ದೇಶಗಳಲ್ಲಿ ಎರಡು ಮಾದರಿಗಳುಂಟು. ಅದರಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಒಂದು ಮಾದರಿಗಳಾದರೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಎರಡನೆಯ ಮಾದರಿ. ಆದರೆ ಅಮೇರಿಕ ದೇಶ ಕೇವಲ ಎರಡು ಶತಮಾನಗಳಲ್ಲಿ ಇಡಿ ವಿಶ್ವವನ್ನೇ ತನ್ನತ್ತ ಸೆಳೆದು, ಬೆರಗುಗೊಳ್ಳುವಂತೆ ಅತ್ಯಂತ ಕ್ಷಿಪ್ರ ಗತಿಯಲ್ಲಿ ಪ್ರಗತಿಯನ್ನು ಸಾಧಿದ ದ್ಯೋತಕವಾಗಿದೆ. ಇದು ಆರ್ಥಿಕ, ತಾಂತ್ರಿಕ, ಶೈಕ್ಷಣಿಕ, ಔದ್ಯೋಗಿಕ ಮುಂತಾದ ರಂಗಗಳಲ್ಲಿ ಬಲಾಢ್ಯ ಸಾಧನೆಯನ್ನು ಗೈಯುತ್ತ ಇಡಿ ವಿಶ್ವದ ಮೇಲೂ ತನ್ನ ಬಲಿಷ್ಠತೆಯನ್ನು ಸಾಧಿಸಲು ಹವಣಿಸುತ್ತಿದೆ.

ಪ್ರವಾಸ ಕಥನಗಳಿಗೆ ಸಂಬಂಧಿಸಿದ ಕೃತಿ ಮತ್ತು ಲೇಖನಗಳಲ್ಲಿ, ಪ್ರವಾಸ ಕಥನ ಎಂದರೇನು? ಪ್ರವಾಸ ಕಥನವನ್ನು ಸಾಹಿತ್ಯ ಪ್ರಕಾರವಾಗಿ ಪರಿಗಣಿಸಬೇಕೆ? ಬೇಡವೆ? ಪ್ರವಾಸ ಕಥನ ಸೃಜನಶೀಲ ಸಾಹಿತ್ಯ ಪ್ರಕಾರವೇ? ಅಲ್ಲವೆ? ಹಾಗೂ ಪ್ರವಾಸ ಕಥನಗಳ ಮೌಲ್ಯಾತ್ಮಕ ಅಂಶಗಳು, ನಕಾರಾತ್ಮಕ ಅಂಶಗಳು ಮತ್ತು ಪ್ರವಾಸ ಕಥನಗಳ ದೃಷ್ಟಿ, ಧೋರಣೆಗಳೇನು? ಸೃಜನಶೀಲ ಪ್ರವಾಸ ಕಥನಗಳ ಅರ್ಹತೆಗಳೇನು? ಎಂಬ ಪ್ರಶ್ನೆಗಳನ್ನೇ ಕುರಿತು ಪ್ರಮುಖವಾಗಿ ಚರ್ಚಿಸಿದ್ದಾರೆಯೇ ವಿನಹ ಪ್ರತ್ಯೇಕ ದೇಶಗಳ, ಪ್ರತ್ಯೇಕ ದೇಶದ ಪ್ರವಾಸ ಕಥನಗಳ ಆಳವಾದ ಅಧ್ಯಯನಗಳು ಪ್ರಾಯಶಃ ಇದುವರೆಗೂ ನಡೆದಿಲ್ಲವಾದ್ದರಿಂದ ಅಮೆರಿಕ ಪ್ರವಾಸ ಕಥನಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂದು ಸಂಶೋಧನಾಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. ಈ ವಿಷಯದಾಯ್ಕೆಯ ಪ್ರಮುಖ ಉದ್ದೇಶಗಳು;

1. ಹದಿನೆಂಟನೇ ಶತಮಾನದಲ್ಲಿ ಅಥವಾ ಕೇವಲ ಇನ್ನೂರು ವರ್ಷಗಳ ಆಸುಪಾಸಿನಲ್ಲಿ ಸ್ವಾತಂತ್ರ್ಯವಾದರೂ ಇಡೀ ವಿಶ್ವವೇ ತನ್ನತ್ತ ಬೆರಗುಗಣ್ಣಿನಿಂದ ನೋಡುವಂತೆ ಮಾಡಿರುವ ಅಮೇರಿಕಾವನ್ನು, ಅಮೇರಿಕಾ ಪ್ರವಾಸ ಕಥನಗಳಿಂದ ಅರಿಯಬಹುದೆಂಬ ಉದ್ದೇಶ.

2. ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸ ಸಾಹಿತ್ಯದ ಕುರಿತಾದ ಸಂಶೋಧನೆಗಳಾಗಿರುವುದು ಅತ್ಯಲ್ಪವಾದ್ದರಿಂದ

3. ಪ್ರಕಟವಾಗಿರುವ ವಿದೇಶಿ ಪ್ರವಾಸ ಕಥನಗಳಲ್ಲೆಲ್ಲಾ ಅಮೇರಿಕಾ ಪ್ರವಾಸ ಕಥನಗಳು ಅತ್ಯಧಿಕವಾಗಿರುವುದರಿಂದ.

4. ನೂರಾರು ಅಮೇರಿಕಾ ಪ್ರವಾಸ ಕಥನಗಳಿದ್ದರೂ ಅವುಗಳ ಕುರಿತಾದ ಆಳವಾದ ಅಧ್ಯಯನ ನಡೆಯದಿರುವ ಕಾರಣದಿಂದ

5. ಹಿರಿಯರಿಂದ ಕಿರಿಯರವರೆಗೂ ಅಮೇರಿಕಾವನ್ನು ನೋಡುವ ಆಕಾಂಕ್ಷೆ, ಅಮೇರಿಕಾದಲ್ಲಿ ಕೆಲಸ ಮಾಡಬೇಕೆಂಬ ನವ ಪೀಳಿಗೆಯ ಅಭಿಲಾಶೆ, ಅಮೇರಿಕಾದವರೊಡನೆ ವಿವಾಹವಾಗಬೇಕೆನ್ನುವ ಆಶಯ ಹೀಗೆ ಇನ್ನೂ ಮೊದಲಾದ ಆಕರ್ಷಣಾ ಕೇಂದ್ರವಾದ ಅಮೇರಿಕಾವನ್ನು ತಿಳಿಯಬೇಕೆನ್ನುವ ಸಹಜ ಕುತೂಹಲದಿಂದ

6. ಜಗತ್ತಿನ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮುಂತಾದ ಪ್ರತಿಯೊಂದು ರಂಗಗಳಲ್ಲೂ ತನ್ನ ಛಾಪನ್ನು ಮೂಡಿಸಿರುವ ಮತ್ತು ಮೂಡಿಸುತ್ತಿರುವುದಲ್ಲದೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಜಗತ್ತಿನ ಮೇಲೆ ನಿಯಂತ್ರಣವೇರುತ್ತಿರುವ ಅಮೇರಿಕಾದ ಪ್ರತಿಷ್ಠೆಯನ್ನರಿಯಲು

7. ಅಸಂಖ್ಯಾ ಅಮೇರಿಕಾ ಕೃತಿಗಳಿದ್ದರೂ, ಅವುಗಳ ಅಧ್ಯಯನ ಮಾಡಿದ ರಚನಾತ್ಮಕ ಬರಹಗಳಿಲ್ಲದಿರುವುದರಿಂದ

8. ಸರ್ಕಾರದ ಕೆಲಸಗಳಿಗಾಗಿ, ತರಬೇತಿಗಾಗಿ, ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವುದಕ್ಕಾಗಿ, ಉನ್ನತ ಅಧ್ಯಯನಕ್ಕಾಗಿ, ಇಲ್ಲವೆ ಬಂಧು ಬಾಂಧವರನ್ನು ನೋಡಿಕೊಂಡು ಬರುವುದಕ್ಕಾಗಿ ಅಮೇರಿಕೆಗೆ ಹೋಗುವವರ ಸಂಖ್ಯೆ ಬೆಳೆಯುತ್ತಲೇ ಇರುವುದರಿಂದ ಇತರ ಕನ್ನಡ ಸಾಹಿತ್ಯ ಪ್ರಕಾರಗಳಿಗಿಂತ ಅಮೇರಿಕಾ ಪ್ರವಾಸ ಕಥನಗಳು ಹೇರಳವಾಗಿ ಪ್ರಕಟವಾಗುತ್ತಿರುವುರಿಂದ, ಸಂಶೋಧನೆಗೆ ಸಾಕಷ್ಟು ಮಾಹಿತಿ ಇದೆ ಎಂಬ ವಿಶ್ವಾಸದಿಂದ

9. ಪ್ರತಿಯೊಬ್ಬರು ತಮ್ಮೆಲ್ಲಾ ದೈನಂದಿನ ವ್ಯವಹಾರಗಳಲ್ಲೂ, ಚಟುವಟಿಕೆಗಳಲ್ಲೂ, ಕ್ರಿಯೆಗಳಲ್ಲೂ, ಮಾತುಕತೆಗಳಲ್ಲೂ, ಚರ್ಚೆಗಳಲ್ಲೂ ಅಮೇರಿಕಾವನ್ನು ಉದಾಹರಣೆಯಾಗಿ, ನಿದರ್ಶನವಾಗಿ ಬಳಸುತ್ತಿರುವ ಜಿಜ್ಞಾಸೆಯನ್ನರಿಯಲು

[illegible]

ಒಟ್ಟು ಪ್ರವಾಸ ಕಥನಗಳ ಸಾಂಸ್ಕೃತಿಕ ಅಧ್ಯಯನಗಳು ಮತ್ತು ಏಷ್ಯಾ, ಪಶ್ಚಿಮದ ಕೆಲವು ದೇಶಗಳ ಮೇಲೆ ಸಮಗ್ರ ಅಧ್ಯಯನಗಳು ನಡೆದಿದ್ದರೂ, ಅಮೇರಿಕ, ಪೂರ್ವದೇಶಗಳು, ಭಾರತ ಇತ್ಯಾದಿ ದೇಶಗಳ ಪ್ರವಾಸ ಸಾಹಿತ್ಯದ ವಿಶಾಲವಾದ ಅಧ್ಯಯನಗಳು ನಡೆಯದಿರುವುದು ಸಹ ನನ್ನ ಅಮೇರಿಕ ಪ್ರವಾಸ ಕಥನಗಳ ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸಿದೆ.

**ವ್ಯಾಪ್ತಿ :**

ಪ್ರವಾಸ ಕಥನಗಳು ಅಗಣಿತವಾಗಿದ್ದೂ, ಅದರಲ್ಲಿ ಸ್ವದೇಶ ಮತ್ತು ವಿದೇಶ ಪ್ರವಾಸ ಕಥನಗಳು ಇರುತ್ತವೆ. ಬೇರೆಲ್ಲಾ ದೇಶಗಳ ವಿದೇಶ ಪ್ರವಾಸ ಕಥನಗಳೂ ಅಸಂಖ್ಯವಾಗುವುದರಿಂದ ಅಮೇರಿಕಾ ದೇಶದ ಪ್ರವಾಸ ಕೃತಿಗಳನ್ನು ಮಾತ್ರ ಅಧ್ಯಯನ ಮಾಡಬೇಕೆಂದುಕೊಂಡರೂ, ಅಮೇರಿಕಾ ಒಂದೇ ದೇಶದ ಮೇಲೆ ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಬಹಳಷ್ಟು ಪ್ರವಾಸ ಕೃತಿಗಳಿರುವುದರಿಂದ ಕನ್ನಡದಲ್ಲಿರುವ ಅಮೇರಿಕಾ ಪ್ರವಾಸ ಕಥನಗಳಲ್ಲಿ ಪ್ರಮುಖವಾದ ಪ್ರಾತಿನಿಧಿಕ ಅಮೆರಿಕ ಪ್ರವಾಸ ಕಥನಗಳನ್ನು ಬಳಸಿಕೊಂಡು ಅಮೆರಿಕ ಪ್ರವಾಸ ಕಥನಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಬೇಕೆಂದು ಕೊಂಡಿದ್ದೇನೆ.

ನಾನು ಮುಖ್ಯವಾಗಿ ಅಮೇರಿಕ ಪ್ರವಾಸ ಕಥನಗಳನ್ನು ಮೂಲ ಪಠ್ಯವನ್ನಾಗಿಟ್ಟುಕೊಂಡು, ಅಲ್ಲಿಯ ಸಾಮಾಜಿಕ, ಸಾಹಿತ್ಯಕ, ಆರ್ಥಿಕ ಮೊದಲಾದ ವಿಷಯಗಳನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅಳವಡಿಸಿ, ಕರ್ನಾಟಕದ ಸಮಾಜ ಮತ್ತು ಅಮೇರಿಕದ ಸಮಾಜ ಹಾಗೂ ಕರ್ನಾಟಕದ ಸಾಹಿತ್ಯ ಮತ್ತು ಅಮೇರಿಕದ ಸಾಹಿತ್ಯಸಂಬಂಧಗಳನ್ನು ವಿಶ್ಲೇಷಣಾತ್ಮಕ ಮಾದರಿಯಲ್ಲಿ ವಿವೇಚಿಸಿ ಮಹಾಪ್ರಬಂಧವನ್ನು ಸಿದ್ಧಪಡಿಸಬೇಕೆನ್ನುವ ಆಶಯವನ್ನು ಹೊಂದಿದ್ದೇನೆ.

## 2. ಪ್ರವಾಸ ಸಾಹಿತ್ಯದ ಪೂರ್ವೋತ್ತರ

ಟೂರಿಸ್ಟ್ ಅಥವಾ ಪ್ರವಾಸಿ ಪದದ ವ್ಯುತ್ಪತ್ತಿ: ಕ್ರಿ.ಶ. ಸುಮಾರು 1292ರಲ್ಲಿ ಲ್ಯಾಟಿನ್ ಭಾಷೆಯಲ್ಲಿ ಬಳಕೆಯಲ್ಲಿದ್ದ 'tornus' ಎಂಬ ಪದದಿಂದ 'tour' ಎಂಬ ಪದವೂ, 'tour' ಎಂಬ ಪದದಿಂದ ಟೂರಿಸ್ಟ್ ಎಂಬ ಪದವೂ ಬಂದಿದೆ; ಸುಮಾರು ಹನ್ನೆರಡನೇ ಶತಮಾನದ ಉತ್ತರಾರ್ಧದಲ್ಲಿ ಟೂರಿಸ್ಟ್

ಪದದ ವ್ಯುತ್ಪತ್ತಿಯಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಟೂರಿಸ್ಟ್ ಪದವನ್ನು ಹದಿನೇಳನೇ ಶತಮಾನದ ಪ್ರಾರಂಭದಲ್ಲೆಲ್ಲಾ; ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಸಂಚಾರ, ವಿಹಾರ, ಯಾತ್ರೆ, ಪ್ರಮುಖ ದೇಶ ಅಥವಾ ಸ್ಥಳಗಳನ್ನು ಸೇರುವ ಅಥವಾ ಸಂಧಿಸುವ, ಸುತ್ತಿ ಬಳಸು (Circuitious) ಪ್ರವಾಸ ಎಂದೇ ಅರ್ಥೈಸಲಾಗುತ್ತಿದ್ದರಿಂದ ಇದು ಗಮನಾರ್ಹವಾದ ಸಂಗತಿಯಾಗಿದೆ.

19ನೇ ಶತಮಾನದ ನಿಘಂಟುವೊಂದರಲ್ಲಿ ಟೂರಿಸ್ಟ್ ಪದಕ್ಕೆ "ಕುತೂಹಲದಿಂದ ಪೇರಿತನಾದ ವ್ಯಕ್ತಿಯೊಬ್ಬ ತನಗೆ ಮಾಡಲು ಬೇರೆ ಯಾವುದೂ ಕೆಲಸವಿಲ್ಲದಿದ್ದರಿಂದ ಸುತ್ತಾಟದಿಂದ ಖುಷಿ ಹೊಂದಲು ಪ್ರವಾಸ ಕೈಗೊಂಡವನು ಎಂದು ಹೇಳಿದೆ. 'Oxford Dictionary'ಯಲ್ಲಿ ಕ್ರಿ.ಶ. 1800ಕ್ಕಿಂತ ಹಿಂದೆಯೇ ಬಳಸಲ್ಪಟ್ಟ ಪದವೆಂದು ಸೂಚಿಸುತ್ತದೆ. Dictionnaire Universalನಲ್ಲಿ 'Tourist' ಎಂದರೆ "ವ್ಯಕ್ತಿಯೋರ್ವನು ಕುತೂಹಲಕ್ಕಾಗಿ, ಸಂಚಾರದಿಂದ ಪಡೆಯಬಹುದಾದ ಖುಷಿಗಾಗಿ ಅಥವಾ ತಾನು ಸುತ್ತಾಡಿದುದನ್ನು ಬೇರೆಯವರಿಗೆ ಹೇಳಲಿಕ್ಕಾಗಿ ಮಾಡಿದ ಸಂಚಾರ"[1] ಎಂದು ಪ್ರವಾಸ ಮತ್ತು ಪ್ರವಾಸಿಯ ಅಭಿವ್ಯಕ್ತಾನುಭವವನ್ನು ಹೇಳುತ್ತದೆ. ಹಾಗಾಗಿ ಡಾ. ಎಸ್. ವಿದ್ಯಾಶಂಕರ್ ಅವರು ತಮ್ಮ 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ' ಸಾಹಿತ್ಯ ಕೃತಿಯಲ್ಲಿ 19ನೇ ಶತಮಾನದ ಮೊದಲಿಗೆ 'tourist ಪದವನ್ನು ಮನರಂಜನೆಗಾಗಿ, ಆನಂದಕ್ಕಾಗಿ, ಕುತೂಹಲಕ್ಕಾಗಿ, ಸುಂದರ ದೃಶ್ಯಗಳ ವೀಕ್ಷಣೆಗಾಗಿ ಮಾಡುವ ಪ್ರವಾಸ ಎಂಬ ಅರ್ಥವಿದ್ದು ಇತ್ತೀಚೆಗೆ 'ಖುಷಿ ಸಂಚಾರ' ಎಂಬರ್ಥದಲ್ಲಿ ಟೂರಿಸ್ಟ್ (Tourist) ಪದ ಬಳಕೆಯಲ್ಲಿದೆ ಎನ್ನುವ ಅಭಿಪ್ರಾಯವನ್ನು ಸಾಮಾನ್ಯವಾಗಿ ಪುರಸ್ಕರಿಸಬಹುದಾಗಿದೆ.

ಪರಸ್ಥಳದ ವಾಸದಲ್ಲಿ ಭಾಗಿಯಾಗುವವನೇ ಪ್ರವಾಸಿ. ಹೀಗಾಗಿ, Touristಗಳಲ್ಲಿ ಎರಡು ವಿಧ; ಒಂದು ಸ್ವದೇಶಿ ಪ್ರವಾಸಿ ಮತ್ತೊಂದು ವಿದೇಶಿ ಪ್ರವಾಸಿ. 1945ರಲ್ಲಿ ಸಂಯುಕ್ತ ಸಂಸ್ಥಾನಗಳ ಪ್ರಕಾರ Tourist ಎಂದರೆ, ವ್ಯಕ್ತಿಯೊಬ್ಬ ಯಾವುದೇ ವಲಸೆ ಹೋಗುವ ಉದ್ದೇಶವಿಲ್ಲದೆ, ವಿದೇಶವೊಂದರಲ್ಲಿ 24 ಗಂಟೆಗಳಿಗಿಂತ ಹೆಚ್ಚಿಗೆ ಮತ್ತು ಆರು ತಿಂಗಳುಗಳಿಗಿಂತ ಕಡಿಮೆ ಕಾಲ ನೆಲೆ ನಿಲ್ಲುವವನು" ಎಂಬುದನ್ನು ಬಹಳಷ್ಟು ದೇಶಗಳು ಮನ್ನಿಸಿದರೂ, 1963ರಲ್ಲಿ ರೋಮ್‌ನಲ್ಲಿ ನಡೆದ "ಅಂತರ ರಾಷ್ಟ್ರೀಯ ಪ್ರವಾಸ ಹಾಗೂ ಪ್ರವಾಸೋದ್ಯಮ"ದ ಮೇಲೆ ಸಂಯುಕ್ತ ಸಂಸ್ಥಾನಗಳ ಸಮಾವೇಶ ನಡೆದು 'Tourist' ಮತ್ತು 'Visitor' ಪದಗಳು ಎಲ್ಲ ರೀತಿಯಲ್ಲೂ ಪುನರ್ವಿಮರ್ಶಿತವಾದವು[2].

ಈ ಸಮಾವೇಶದ ಪ್ರಕಾರ ಯಾವುದೇ ವ್ಯಕ್ತಿಯು ತಾನು ಸಾಮಾನ್ಯವಾಗಿ ವಾಸವಿರುವ ಸ್ಥಳದಿಂದ ಹೊರಗೆ, ತಾನು ಭೇಟಿಕೊಟ್ಟ ದೇಶದ ಒಳಗೆ, ಆದಾಯ ತರುವ ವೃತ್ತಿಯೊಂದನ್ನು ಅನುಸರಿಸಿ ದೇಶವೊಂದಕ್ಕೆ ಭೇಟಿ ನೀಡುವುದಕ್ಕೆ 'Visitor' ಪ್ರವಾಸಿ ಎನ್ನಲಾಗುವುದು. ದೇಶದೊಳಗಡೆ ಮನರಂಜನೆ, ರಜೆ, ಆರೋಗ್ಯ, ಅಧ್ಯಯನ, ಧಾರ್ಮಿಕ ಕ್ರೀಡೆ; ವ್ಯಾಪಾರ, ಕುಟುಂಬ, ಆಯೋಗ ಹಾಗೂ ಸಭೆ ಇತ್ಯಾದಿಗಳಿಗಾಗಿ ಸಂದರ್ಶಿಸುವವರನ್ನು ಸ್ವದೇಶಿ ಪ್ರವಾಸಿಗರೆನ್ನಬಹುದು. ಸ್ವದೇಶಿ ಪ್ರವಾಸಿ ಪದಕ್ಕೆ ಸಂವಾದಿಯಾಗಿ ದೇಶಿಯ ಪ್ರವಾಸಿ, ಸ್ಥಳಿಯ ಪ್ರವಾಸಿ ಹಾಗೂ Domestic Travel ಇತ್ಯಾದಿಗಳನ್ನು ಬಳಸುತ್ತಾರೆ. ಸಂಚಾರಿಗೂ, ಪ್ರವಾಸಿಗೂ ಇರುವ ಮೂಲಭೂತ ವ್ಯತ್ಯಾಸವೆಂದರೆ ವ್ಯಕ್ತಿಗಳು ಬೇರೊಂದು ಪ್ರದೇಶಗಳಿಗೆ ಹೋಗಿ ತನ್ನ ಪರಿಚಿತರ ಅಥವಾ ಬಂದು ಬಳಗದವರ ಮನೆಯಲ್ಲಿ ಯಾವುದೇ ಖರ್ಚಿಲ್ಲದೆ ತಂಗಿದ್ದರೆ ಅವರನ್ನು ಸಂಚಾರಿಗಳು ಅಥವಾ Traveller ಎನ್ನಬಹುದು. ಇವರನ್ನು ಪ್ರವಾಸಿ ಅಥವಾ 'Tourist' ಎನ್ನಲಾಗದು. 'ವಿದೇಶಿ ಪ್ರವಾಸಿ'ಯಾದ ವ್ಯಕ್ತಿಯೊಬ್ಬ ವಿದೇಶೀ ಪಾಸ್‌ಪೋರ್ಟ್‌ನ ಮೇಲೆ ಭೇಟಿ ನೀಡುವವನಾಗಿದ್ದೂ, ಅವನು ಕನಿಷ್ಟ ಇಪತ್ನಾಲ್ಕು ಗಂಟೆಗಳ ಕಾಲ ಭಾರತದಲ್ಲಿ ವಾಸ್ತವ್ಯ ಹೂಡುವವನಾಗಿರಬೇಕು ಎಂಬುದು 1963 ರೋಮ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾವೇಶದ ಶಿಫಾರಸ್ಸಾಗಿತ್ತು. ಇದನ್ನು ಸಂಯುಕ್ತ ಸಂಸ್ಥಾನಗಳು ಸೇರಿದಂತೆ ಭಾರತ ಮುಂತಾದ 110 ಸದಸ್ಯ ರಾಷ್ಟ್ರಗಳೂ ಅಂಗೀಕರಿಸಿದವು. ಹಾಗಾಗಿ ಸಂಚಾರಿಗೂ ಮತ್ತು ಪ್ರವಾಸಿಗೂ ಇರುವ ಮೂಲಭೂತ ವ್ಯತ್ಯಾಸವೆಂದರೆ 'ಹಣದ ವೆಚ್ಚ'. ಸಾಮಾನ್ಯವಾಗಿ ವಿದೇಶಿ ಪ್ರವಾಸಿಯ ಉದ್ದೇಶಗಳನ್ನು ಎರಡು ತೆರನಾಗಿ ವಿಂಗಡಿಸಿಕೊಳ್ಳಬಹುದು.

1. ವಿರಾಮ (ಮನರಂಜನೆ, ರಜೆ, ಆರೋಗ್ಯ, ಅಧ್ಯಯನ, ಧಾರ್ಮಿಕ ಹಾಗೂ ಕ್ರೀಡೆ)
2. ವ್ಯಾಪಾರ, ಕುಟುಂಬ, ಆಯೋಗ ಮತ್ತು ಸಭೆ[3].

## ಸ್ವದೇಶಿ ಮತ್ತು ವಿದೇಶಿ ಪ್ರವಾಸಗಳ ನಡುವಿನ ವ್ಯತ್ಯಾಸಗಳು :

ದೇಶಿಯ ಪ್ರವಾಸದಲ್ಲಿ ಜನರು ತಮ್ಮ ವಾಸಸ್ಥಾನದಿಂದ ಹೊರಗೆ, ದೇಶದ ಒಳಗಡೆ ನಿರ್ದಿಷ್ಟ ಸ್ಥಳಗಳಿಗೆ '50' ಮೈಲಿಗಳಿಗಿಂತಲೂ ಹೆಚ್ಚಿಗೆ ಪ್ರಮಾಣ ಮಾಡಬೇಕಾಗುತ್ತದೆ. ಅಂತಾರಾಷ್ಟ್ರೀಯ ಪ್ರವಾಸದಲ್ಲಿ ದೇಶದ ಗಡಿಯ ಹೊರಗೆ ಕನಿಷ್ಠ ಒಂದು ರಾತ್ರಿ ಹೋಟೆಲೊಂದರಲ್ಲಿ ಅಥವಾ ಬೇರಾವುದೊಂದು ಕಡೆ ತಂಗಿದ್ದು ಅದಕ್ಕಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ದೇಶೀಯ ಪ್ರವಾಸದಲ್ಲಿ ಯಾವ ನಿರ್ಬಂಧಗಳೂ ಇಲ್ಲದಿರುವುದರಿಂದ ಅದು ಸುಲಭ. ಇಲ್ಲಿ ಕರೆನ್ಸಿಯ ಬದಲಾವಣೆ, ಭಾಷೆ, ಪಾಸ್‌ಪೋರ್ಟ್, ವೀಸಾ

ಹಾಗೂ ಉತ್ತಮ ಆರೋಗ್ಯದ ಬಗೆಗಿನ ದಾಖಲೆ ಇತ್ಯಾದಿ ಸಮಸ್ಯೆಗಳನ್ನು ದೇಶೀಯ ಪ್ರವಾಸಿ ಎದುರಿಸಬೇಕಾಗಿಲ್ಲ. ಆದರೆ ವಿದೇಶಿ ಪ್ರವಾಸಗಳಲ್ಲಿ ಇವುಗಳೆಲ್ಲಾ ಅತ್ಯವಶ್ಯಕವಾಗಿರುತ್ತವೆ[4].

**ಪ್ರವಾಸದ ಪರಿಗ್ರಹಿಕೆ :**

ಹಲವು ಸಂದರ್ಭಗಳಲ್ಲಿ ಹಲವು ಕಾರಣಗಳಿಗಾಗಿ ನಡೆಯುವ ಪ್ರಕ್ರಿಯೆಯನ್ನು ಪ್ರವಾಸವೆನ್ನಬಹುದು. "ವ್ಯವಸ್ಥಿತ ಸಮಾಜದ ಮಾನವನಿಗೆ ಒಂದು ಶಾಶ್ವತ ನೆಲೆಯಿದ್ದು ಯಾವುದೊ ಒಂದು ಉದ್ದೇಶದಿಂದ ತಾತ್ಕಾಲಿಕವಾಗಿ ಪ್ರಯಾಣ ಮಾಧ್ಯಮದ ಮೂಲಕ ತಾನಿದ್ದಂತ ನೆಲೆಯು ಬದಲಾದಾಗ ಅಥವಾ ಸ್ಥಳಾಂತರವಾದಾಗ ಪ್ರವಾಸವಾಗುತ್ತದೆಂದು ಹೇಳಬಹುದಾದರೂ, ನಿಶ್ಚಿತವಾಗಿ ನಿರ್ದಿಷ್ಟವಾಗಿ ಹೇಳುವುದು ಅಸಾಧ್ಯ. ಕೆಲವೊಮ್ಮೆ ಪ್ರವಾಸ ಎಂದರೆ ಆಹ್ಲಾದಕ್ಕಾಗಿಯೊ, ಮನರಂಜನೆಗಾಗಿಯೊ ಅಥವಾ ಸ್ಥಳ ಬದಲಾವಣೆಗಾಗಿಯೊ ಮಾಡಿಕೊಂಡ ಪರ್ಯಾಯ ವ್ಯವಸ್ಥೆ ಎಂದು ಸಂಕುಚಿತಾರ್ಥದಲ್ಲಿ ಪರಿಗ್ರಹಿಸಿದ್ದಾರೆ. ಪರಸ್ಥಳಗಳ ವಾಸವು ತನ್ನ ಪರಿಚಿತ ಸಮಾಜ, ಸಂಸ್ಕೃತಿ ಹಾಗೂ ಭೌಗೋಳಿಕ ಇತ್ಯಾದಿ ಪರಿಸರಕ್ಕಿಂತ ವಿಭಿನ್ನವಾಗಿದ್ದಾಗ ಮಾತ್ರ ಪ್ರವಾಸವು ಸೂಕ್ತವೂ ಪ್ರಯೋಜನಕಾರಿಯೂ ಆಗುತ್ತದೆ.

**ಪ್ರವಾಸ ಪದದ ಅರ್ಥ :**

ಕನ್ನಡದಲ್ಲಿ ಪ್ರದಕ್ಷಿಣೆ, ಪರ್ಯಟನೆ, ಪ್ರಯಾಣ, ಯಾತ್ರೆ, ಸುತ್ತಾಟ, ಅಲೆದಾಟ, ಸಂಚಾರ, ವಿಹಾರ ಇತ್ಯಾದಿ ಪದಗಳನ್ನು ಪ್ರವಾಸ ಪದಕ್ಕೆ ಪೂರಕವಾಗಿಯೂ, ಸಂವಾದಿಯಾಗಿಯೂ ಬಳಸುತ್ತಿದ್ದೇವೆ. ಪ್ರವಾಸ ಎಂಬ ಪದ ಮೂಲತಃ ಸಂಸ್ಕೃತದಿಂದ ಬಂದಿದ್ದು, ಇಂಗ್ಲಿಷಿನಲ್ಲಿ Travel ಎಂದು ಸುಪ್ರಸಿದ್ಧವಾಗಿದೆ. 1894ರಲ್ಲಿ ಪ್ರಕಟವಾದ ಕಿಟ್ಟೆಲ್‌ರವರ ಪ್ರಖ್ಯಾತ ಕನ್ನಡ–ಇಂಗ್ಲಿಷ್ ನಿಘಂಟಿನಲ್ಲಿ ಪ್ರವಾಸ Pravasa: So journing abroad, Foreign Residence, Being away from home, a temporary So journey, a Foreign abode[5] ಎಂದಿದ್ದರೆ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ 833ನೇ ಪುಟದಲ್ಲಿ ಪ್ರವಾಸ(ನಾ) ಪರಸ್ಥಳಕ್ಕೆ ಹೊರಟು ಬರುವುದು ಅಥವಾ ಹೋಗುವುದು; ಪರಸ್ಥಳದ ಪ್ರಯಾಣ, ಸಂಚಾರ[6] ಎಂದಿದೆ. ಡಾ. ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶದಲದಲ್ಲಿ ದೂರದೇಶಕ್ಕೆ ಹೋಗುವವನು, ಪರದೇಶ ಸಂಚಾರ ಪ್ರಯಾಣ ಮಾಡುವಿಕೆ[7]. ಎಂಬ ಪುಲ್ಲಿಂಗ ಪ್ರಧಾನವಾಗಿದೆ. Webster's New 20th Century Dictionary of English languageನಲ್ಲಿ Travel ಪದಕ್ಕೆ: To pass or to make journey from place to another, To travel for

health, for pleasure, for improvement or the like[8] ಎಂದಿದೆ. The consise Oxford Dictionary of Current Englishನಲ್ಲಿ Travel: Make a journey esp one of some length to distant countries as ordered to his health spent his life in travelling[9] ಎಂದು ಕಂಡುಬರುತ್ತದೆ.

ಪ್ರೊ.ಎಲ್.ಎಸ್. ಶೇಷಗಿರಿರಾವ್ ಸಂಪಾದಿಸಿದ 'ಸುಭಾಷ್' ನಿಘಂಟುವಿನಲ್ಲಿ ಪ್ರವಾಸಕ್ಕೆ ಪ್ರಯಾಣವೆಂದು, ಪ್ರವಾಸಿ(ನಾ), ಪ್ರವಾಸ ಮಾಡುತ್ತಿರುವವನು; ಪಯಣಿಗ (n) traveler, tourist[10] ಎಂದಿದೆ. ಡಾ. ಪ್ರಭುಶಂಕರ ಮತ್ತು ಭಾ.ವೇ. ಶ್ರೀಧರರವರು ಸಂಪಾದಿಸಿರುವ ಕನ್ನಡ-ಇಂಗ್ಲಿಷ್ ನಿಘಂಟುನಲ್ಲಿ ಪ್ರವಾಸ n. travel; journey; tour[11] ಎಂಬ ಅರ್ಥವಿದೆ. "ಪ್ರೊ.ತೀ.ನಂ.ಶ್ರೀ.ರವರು ಪ್ರವಾಸಿಗರಲ್ಲಿ ಎರಡು ಜಾತಿಗಳಿವೆ. ಒಂದು ಯಾತ್ರೆಗಳನ್ನು ವ್ರತದಂತೆ, ಉಗ್ರನಿಷ್ಠೆಯಿಂದ ಧಾರ್ಮಿಕವಾಗಿಯೋ, ಲೌಕಿಕವಾಗಿಯೋ ಅಥವಾ ಎರಡರ ಮಿಶ್ರಣವಾಗಿಯೋ ಪೂರ್ವಯೋಜಿಸಿ ತಮ್ಮ ಸ್ವಹಣವನ್ನು ವಿನಿಯೋಗಿಸಿ ಕೃತಾರ್ಥರಾಗುವ ಶ್ರೀಮಂತರು ಅಥವಾ ಸಂಕಲ್ಪ ಸಾಧಕರು ಒಂದು ಜಾತಿ ಇರುವವರನ್ನೆ ಹವ್ಯಾಸಿ ಪ್ರವಾಸಿಗಳೆಂದು ಸ್ಥೂಲವಾಗಿ ಹಲವರು ಒಪ್ಪಿದ್ದಾರೆ. ಏಕಾಂಗಿ ಪ್ರವಾಸಿಗೆ ಜವಾಬ್ದಾರಿ ಮತ್ತು ಜಾಗರೂಕತೆಗಳ ಅವಶ್ಯಕತೆ ಅಧಿಕವಾಗಿರುವುದರೊಂದಿಗೆ ಧೈರ್ಯ, ಸ್ಥೈರ್ಯ, ದಿಟ್ಟತನ, ತಾಳ್ಮೆ, ಸಮಯಾವಧಾನ, ತನಗೆ ತಾನೇ ಸಂಗಾತಿಯಾಗಬಲ್ಲ ಸ್ವಭಾವಗಳನ್ನು ಹೊಂದಿರುವ ಏಕಾಂಗಿ ಪ್ರವಾಸಿಗೆ ಪ್ರವಾಸ ಕಾಲದಲ್ಲಿ ಸ್ವಾತಂತ್ರ್ಯ, ಆನಂದ ಹಾಗೂ ಜ್ಞಾನಾನುಭವಗಳ ಗಳಿಕೆಯು ಹೆಚ್ಚಾಗಿರುತ್ತದೆ. ಇನ್ನೂ ಎರಡನೇ ಜಾತಿಯವರಲ್ಲಿ; ಪ್ರವಾಸ ಕುರಿತ ಹಣವಾಗಲಿ, ಹಠವಾಗಲಿ ಇರುವುದಿಲ್ಲ ಇವರಿಗೆ ತಾನಾಗಿಯೇ ಅವಕಾಶವೊದಗಿದಾಗ ಪ್ರೇಕ್ಷಕನ ಕುತೂಹಲಕ್ಕಾಗಿಯೋ, ವೃತ್ತಿ ಬಲದಿಂದ ದೇಶಪರ್ಯಟನೆಗಾಗಿಯೋ ಸರ್ಕಾರದ ಪ್ರತಿನಿಧಿಗಳಾಗಿಯೋ, ಆಮಂತ್ರಿತ ಅತಿಥಿಗಳಾಗಿಯೋ, ಉನ್ನತ ಶಿಕ್ಷಣಕ್ಕಾಗಿಯೋ, ಉದಾರ ಸಂಸ್ಥೆಯೊಂದರ ವಿಶೇಷ ಕೃಪೆಯಿಂದಲೋ ಪರಸ್ಥಳ; ಪರದೇಶಗಳಿಗೆ ಹೋಗಿ ಬರುವ ಅನುಕೂಲ ಸಂದರ್ಭವೂ ಒದಗಬಹುದು. ಇಂಥವರನ್ನು ಎರಡನೇ ಜಾತಿಯವರೆಂದು ತೀ.ನಂ.ಶ್ರೀಯವರು ಹೇಳಿದರೆ[12], ಇವರನ್ನೆ ನಿಯೋಗಿ ಪ್ರವಾಸಿಗಳೆಂದು ವಿಚಾರವಾದಿಗಳು ಸ್ಥೂಲವಾಗಿ ಅಭಿಪ್ರಾಯಪಡುತ್ತಾರೆ.

ಒಟ್ಟಿನಲ್ಲಿ ಈ ಪ್ರಕಾರದವರೂ ದೈನಂದಿನ ಯಾಂತ್ರಿಕ ಬದುಕಿನಿಂದ ಕೆಲ ಕಾಲವಾದರೂ ಎಲ್ಲ ಬಂಧನ, ಜವಾಬ್ದಾರಿಗಳಿಂದ ಮುಕ್ತರಾಗಿ ಸ್ವಾತಂತ್ರ್ಯದ ಸವಿಯುಣ್ಣಬೇಕು ಎಂಬ ಚಾಪಲ್ಯದ ಪ್ರೇಮದಲ್ಲಿ

ಮಾನವನ ನವೀನ ವೀಕ್ಷಣೆಯ ಸಹಜ ಪ್ರವೃತಿಯನ್ನು ನಾವು ಕಾಣಬಹುದಾಗಿದೆ. ಅನಾದಿ ಕಾಲದಿಂದಲೂ ಮನುಷ್ಯ ಪರಸ್ಥಳಗಳ ಭೇಟಿಗೆ ಹಾತೊರೆಯುತ್ತಿದ್ದಾನೆ ಎಂಬುದು ಹಲವು ಕಾರಣಗಳಿಂದ ಸ್ಪಷ್ಟವಾಗುತ್ತದೆ. ಕೆಲವರಿಗೆ ಪ್ರವಾಸವು ಸಹಜ ಸ್ವಾಭಾವಿಕ ಕುತೂಹಲವಾದರೆ ಮತ್ತೆ ಕೆಲವರಿಗೆ ಸಾಹಸದ ಪ್ರವೃತ್ತಿಗಾಗಿ; ಇನ್ನೂ ಕೆಲವರಿಗೆ ಜ್ಞಾನ ದಾಹಕ್ಕಾಗಿ, ವ್ಯವಹಾರಕ್ಕಾಗಿ, ವ್ಯಾಪಾರೋದ್ಯಮಕ್ಕಾಗಿ, ವಾಣಿಜ್ಯ ನೆಲೆಗಳ ವಿಸ್ತರಣೆಗಾಗಿ, ಲೂಟಿಯ ಸಲುವಾಗಿ ಹಾಗೂ ದಂಡೆಯಾತ್ರೆಗಳಿಗಾಗಿ, ಜಾತ್ರೆಗಾಗಿ, ತೀರ್ಥಯಾತ್ರೆಗಳಿಗಾಗಿ ಒಟ್ಟಾರೆ ಒಂದಲ್ಲ ಒಂದು ಕಾರಣದಿಂದ ಮಾನವ ಜನಾಂಗಕ್ಕೆ ಪ್ರವಾಸ ರೋಚಕವಾದುದ್ದಾಗಿತ್ತೆಂಬುದು ಸುಸ್ಪಷ್ಟವಾಗುತ್ತದೆ. ಇಷ್ಟೆ ಅಲ್ಲದೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಗಾಗಿಯೂ ಸಹ ಪ್ರವಾಸ ಮಾಡುವವರಿದ್ದಾರೆ.

"ವಾಣಿಜ್ಯೋದ್ಯಮಿಗಳು; ಅದೃಷ್ಟವನ್ನು ಅರಸಿ ಸಾಗರ ಯಾತ್ರೆ ಕೈಗೊಳ್ಳುತ್ತಿದುದ್ದರ ಪರಿಣಾಮವಾಗಿ ಹೊಸ ವಾಣಿಜ್ಯ ಮಾರ್ಗಗಳ ಕಾರಣದಿಂದಾಗಿ ಪ್ರವಾಸವು ಸರಳ, ಸುಲಭ ಹಾಗೂ ಸುಸಂಘಟಿತವೂ ಆಗತೊಡಗಿತು, ಸುಮಾರು ಕ್ರಿ.ಪೂ. 4000ರಲ್ಲಿ ಸುಮೇರಿಯನ್ನರು ವಾಣಿಜ್ಯೋದ್ಯಮದಲ್ಲಿ ಹಣದ ಪ್ರಾಮುಖ್ಯತೆಯನ್ನು ಕಂಡುಕೊಳ್ಳುವುದರ ಮುಖಾಂತರ ಪ್ರವಾಸದ ಹೊಸ ಶಕೆ ಪ್ರಾರಂಭಿಸಿದ್ದು ಇತಿಹಾಸದಿಂದ ತಿಳಿಯುತ್ತದೆ. ಬೇಬಿಲೋನಿಯಾದ ಅರಸನಾದ ಶುಲ್ಗಿಯೂ ಸಾರಿಗೆ ಸೌಕರ್ಯಗಳ ಜೊತೆಗೆ ವಿಶ್ರಾಂತಿಧಾಮಗಳನ್ನು ನಿರ್ಮಾಣ ಮಾಡಿರುವುದನ್ನು ಸಹ ಚರಿತ್ರೆಯಲ್ಲಿ ಕಾಣಬಹುದು. ಪ್ರಪಂಚದ ಸಂಪದ್ಭರಿತ ರಾಷ್ಟ್ರಗಳಾದ ಭಾರತ, ಚೈನಾ ಸೇರಿದಂತೆ ಇತರ ದೇಶಗಳಿಗೆ ಪೊನಿಷಿಯನ್ನರು, ಯೂರೋಪಿನ್ನರು, ಅರಬರು, ಪೋರ್ಚುಗೀಸರು, ಸ್ಪೇನಿನವರು, ಬ್ರಿಟೀಷರು, ಫ್ರೆಂಚರು ಮುಂತಾದವರೆಲ್ಲರು ಪ್ರವಾಸಿಗರಾಗಿ ಭಾರತಕ್ಕೆ ಬಂದಿರುವುದೆಲ್ಲ, ಐತಿಹಾಸಿಕ ದಾಖಲೆಗಳಾಗಿವೆ. ಅವುಗಳಲ್ಲಿ ಕೆಲವನ್ನು ಗಮನಸುವುದಾದರೆ ಭಾರತದ ಮಾರ್ಗ ಶೋಧನೆಗಾಗಿ ಸ್ಪೇನಿನ ಕ್ರಿಸ್ಟೊಫರ್ ಕೊಲಂಬಸ್‌ನು ಕ್ರಿ.ಶ. 1492ರಲ್ಲಿ ದಿಕ್ಸೂಚಿ ಮತ್ತು ನಕ್ಷತ್ರಗಳ ಸಹಾಯದೊಂದಿಗೆ 'ಆಳಿಲು ಅಥವಾ ಸ್ಕ್ವಿರ್ಲ್' ಎಂಬ ನೌಕೆ ಪ್ರಯಾಣ ಬೆಳೆಸಿ ಭಾರತದ ಬದಲು ವೆಸ್ಟ್ ಇಂಡೀಸ್ ಕಂಡುಹಿಡಿದಿರುವುನ್ನು ಅರಿಯಬಹುದು. ಕೊಲಂಬಸ್‌ನಿಗಿಂತ ಐನೂರು ವರ್ಷಗಳ ಮೊದಲೇ 'ಲೀಫ್' ಮತ್ತು 'ನಾರ್ಸ್' ಎನ್ನುವವರು ಅಮೇರಿಕಾ ತಲುಪಿದ್ದರೆಂದು, ನಾರ್ಸ್ ಆರ್ಟಿಕ್ ಸಾಗರದ ಮೂಲಕ ತೆರೆದ ನಾವೆಯಲ್ಲಿ ಕಂಪಾಸು, ನಕ್ಷೆಗಳ ಯಾವುದೇ ಸಹಾಯವಿಲ್ಲದೆ ಸುರಕ್ಷಿತವಾಗಿ ಅಮೇರಿಕಾ ತಲುಪಿದ್ದರೆಂದು ತಿಳಿದುಬರುತ್ತದೆ. 'ಮಂಗೋಪಾರ್ಕ್'ನು ಆಫ್ರಿಕಾದ ಮಹಾನದಿಗಳಾದ ನೈಲ್-ಕಾಂಡೋ-ಜಾಂಬೇಜಿ ಮತ್ತು ನೈಜರ್‌ಗಳ

ಉಗಮವನ್ನು ಕಂಡುಹಿಡಿಯಲು ಪ್ರಾಣಭಯವನ್ನು ಲೆಕ್ಕಿಸದೆ ಪ್ರಯತ್ನಿಸಿದ್ದನೆಂದು ಹಾಗೂ 'ಮ್ಯಾಗೇಲಿನ್' ಎಂಬಾತ ದಕ್ಷಿಣ ಅಮೇರಿಕೆಯ ತುದಿಯನ್ನು ಸುತ್ತಿಕೊಂಡು ಪೂರ್ವದಿಕ್ಕಿನಲ್ಲಿದ್ದ ಮಸಾದೆ ದ್ವೀಪಗಳನ್ನು ತಲುಪುವ ಸಾಹಸ ಮಾಡಿದ್ದನೆಂಬುದನ್ನು ಮತ್ತು 'ಲಿವಿಂಗ್ ಸ್ಟನ್'ನು ದಕ್ಷಿಣ ಮತ್ತು ಮಧ್ಯ ಆಫ್ರಿಕೆಗಳನ್ನು ಕಂಡುಹಿಡಿದ್ದನ್ನು, ಕ್ಯಾಪ್ಟನ್ ಕುಕ್‌ನು ಸಹ ಶಾಸ್ತ್ರಜ್ಞಾನದ ಹಂಬಲದಿಂದಾಗಿ ಜಗತ್ತನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿದುದನ್ನು, ಮೆಸಡೋನಿಯಾದ ಅಲೆಕ್ಸಾಂಡರ್‌ನು ಒಳಗೊಂಡು ಅನೇಕ ಹೊರದೇಶದ ದಂಡಯಾತ್ರಿಗಳಷ್ಟೆ ಅಲ್ಲದೆ ಮಹಾನ್ ಮಹಾನ್ ಪ್ರವಾಸಿಗರು ಸಹ ವಾಣಿಜ್ಯ ನೆಲೆಗಳ ಸ್ಥಾಪನೆಗಾಗಿ ಭಾರತಕ್ಕೆ ಆಗಮಿಸಿದ್ದ ಮುಂತಾದ ಮಾಹಿತಿಗಳನ್ನು ಇತಿಹಾಸದಿಂದ ತಿಳಿಯಬಹುದಾಗಿದೆ.

ಪ್ರಾಚ್ಯದೇಶಗಳಲ್ಲಿ ಸಂಚರಿಸಿದ ಮೊದಲ ಮಧ್ಯಕಾಲೀನ ಪ್ರವಾಸಿಗರಲ್ಲಿ ಜ್ಯುವಿಶ್ ವಿದ್ವಾಂಸನಾದ 'ಟುಡೆಲಾದ ಬೆಂಜಮಿನ್' ಕ್ರಿ.ಶ. 1160ರಲ್ಲಿ ಸಾರಗೋಸ್ಸಾವದಿಂದ ಪ್ರಾರಂಭಿಸಿ ಯೂರೋಪ್, ಪರ್ಷಿಯಾ ಹಾಗೂ ಭಾರತ ಮುಂತಾದ ಇತರ ದೇಶಗಳನ್ನು ಸುಮಾರು ಹದಿಮೂರು ವರ್ಷಗಳ ನಿರಂತರ ಪ್ರವಾಸಾನುಭವಗಳನ್ನು ದಾಖಲಿಸಿದ್ದಾನೆ. ಇದೇ ರೀತಿ ಕ್ರಿ.ಶ. 1304 ಟಾಂಗ್ಯೆರ್‌ನಲ್ಲಿ ಜನಿಸಿದ 'ಇಬ್ನಿ ಬಟೂಟ'ನು 1925 ರಿಂದ 1333ರವರೆಗೆ ಆಫ್ರಿಕಾ, ಪಶ್ಚಿಮ ಏಷ್ಯಾ, ಸಿಂಧೂನದಿ, ಇಂಡೋನೇಷ್ಯಾ, ಚೈನಾ ಮುಂತಾದ ಹಲವಾರು ದೇಶಗಳು ಸೇರಿದಂತೆ ಸುಮಾರು 17000 ಮೈಲಿಗಳನ್ನು ಕ್ರಮಿಸಿದ್ದ ಅಂಕಿ ಅಂಶಗಳನ್ನು ನಾವು ಕಾಣಬಹುದು.

ಅಲೆಕ್ಸಾಂಡರನು ಭಾರತಕ್ಕೆ ಭೇಟಿ ನೀಡಿದಾಗ ಇಲ್ಲಿನ ಸುರಕ್ಷಿತ ರಸ್ತೆಗಳನ್ನೂ, ನೆರಳಿಗಾಗಿ ಬೆಳೆಸಿದ ಸಾಲುಮರಗಳೂ ಸೇರಿದಂತೆ ಸುಮಾರು 1920 ಕಿ.ಮೀ. ಉದ್ದದ ಹಾಗೂ ಹತ್ತೊಂಬತ್ತು ಮೀಟರ್ ಅಗಲದ ಒಂದು ರಾಜಮಾರ್ಗದಲ್ಲಿ ಜನರು ರಥ, ಪಲ್ಲಕ್ಕಿ, ಎತ್ತಿನಗಾಡಿ, ಕುದುರೆ, ಒಂಟೆ ಮತ್ತು ಆನೆಗಳ ಮೇಲೆ ಸಂಚರಿಸುತ್ತಿದ್ದುನ್ನು ಕಂಡುದಾಗಿ ಹೇಳಿಕೊಂಡಿದ್ದಾನೆ. ಯೂರೋಪಿನಿಂದಲೂ ಸಹ ಅನೇಕರು ಭಾರತಕ್ಕೆ ಭೇಟಿ ನೀಡಿದ ವರದಿಗಳಿವೆ. ಜಾನ್ ಆಫ್ ಮಾಂಟೆ ಕೊರ್ರಿನೋ (Jhon of monte corrino)ದ ಫ್ರಾನ್ಸಿಸ್ಕೊ ಫ್ರಯಾರನು ಸುಮಾರು ಹದಿಮೂರನೇ ಶತಮಾನದ ಕೊನೆಯ ದಶಕದಲ್ಲಿ ಚೈನಾದಿಂದ ಹಿಂದಿರುಗುವಾಗ ಭಾರತಕ್ಕೆ ಭೇಟಿ ನೀಡಿದ್ದರೆಂಬ ಮಾಹಿತಿಗಳಿವೆ. ಇವುಗಳೊಂದಿಗೆ ಪೋರ್ಚುಗೀಸ್‌ನ ಇತಿಹಾಸ ತಜ್ಞನಾದ ಆಲ್ಫೋನ್ಸೋ ಡಿ ಅಲ್ಬುಕರ್ಕ್‌ನ ವರದಿಗಳನ್ನು ಸಹ ನೋಡಬಹುದು. ಅನಂತರ ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲೂ ಯೂರೋಪ್ ಮತ್ತು ಇತರ ದೇಶಗಳಿಂದಲೂ

ಸಹ ಸನ್ಯಾಸಿಗಳು, ಪ್ರವಾಸಿಗರು, ಸಾಹಸಿಗಳು ಭಾರತಕ್ಕೆ ಭೇಟಿ ನೀಡಿರುವ ಅನೇಕ ಸಂದರ್ಭಗಳನ್ನು ಸ್ಮರಿಸಬಹುದು.

ಪಾಶ್ಚಿಮಾತ್ಯರ ಪ್ರಸಿದ್ಧವಾದ 'ಋಷಿ ಸಂಚಾರದ' ಹರಿಕಾರರೆಂದರೆ 'ರೋಮನ್ನರು'. ಇವರು ಪ್ರತಿ ದಿನ ಕ್ರೀಡೆಗಾಗಿ, ಈಜಿಪ್ಟಿನ ಪಿರಮಿಡ್ಡು ಮತ್ತು ಮೆಡಿಟರೇನಿಯನ್ ದೇವಾಲಯಗಳು ಮೊದಲಾದ ವೀಕ್ಷಣೆಗಾಗಿ ನೂರಾರು ಮೈಲಿ ಸಂಚರಿಸುವ ಸಾಮರ್ಥ್ಯ ಹಾಗೂ ಅಭಿರುಚಿಯುಳ್ಳವರಾಗಿದ್ದರು. ಈ ಋಷಿ ಸಂಚಾರವೇ ಕಾಲಕ್ರಮೇಣ 'ಸ್ಪಾಸ್' ಆಗಿ ಪರಿವರ್ತನೆಯಾಗಿದೆ. ಪಾಶ್ಚಿಮಾತ್ಯರಲ್ಲಿ ಕಡಲು ಮತ್ತು ತೀರಪ್ರದೇಶಗಳ ದಂಡೆಗಳಲ್ಲಿ ಖನಿಜಯುಕ್ತ ಜಲ ಸೇವನೆ ಅಥವಾ ಸ್ನಾನ ಮಾಡುವುದರಿಂದ ರೋಗ ನಿವಾರಣೆಯಾಗುತ್ತದೆಂಬ ವಿಶ್ವಾಸವಿತ್ತು. ಅದಕ್ಕಾಗಿ ನಿರ್ಮಾಣವಾದ ವಿಶ್ರಾಂತಿ ಧಾಮಗಳನ್ನೇ ಸ್ಪಾಸ್‌ಗಳೆನ್ನುವರು. ಮುಂದೆ ಇವುಗಳೆಲ್ಲಾ ಮನರಂಜನಾ ಧಾಮಗಳಾಗಿ ಬಳಕೆಯಾದವು. ಕ್ರಿ.ಶ. 1865ರಲ್ಲಿ ಮಧ್ಯ ಯೂರೋಪಿನ ಬ್ರಿಟನ್, ಫ್ರಾನ್ಸ್ ಮುಂತಾದ ದೇಶಗಳಲ್ಲಷ್ಟೆ ಅಲ್ಲದೆ ವಿಶ್ವದಾದ್ಯಂತ ಸ್ಪಾಸ್ ಮತ್ತು ವಿಶ್ರಾಂತಿಧಾಮಗಳು ತಲೆಯೆತ್ತಿದವು. ಇದರ ಪ್ರಭಾವ ಎಷ್ಟಿತ್ತೆಂದರೆ ಪ್ರತಿ ವರ್ಷ ಮಿಲಿಯನ್‌ಗಟ್ಟಲೆ ಜನರು ಇವುಗಳ ಆಕರ್ಷಣೆಗೆ ಸಿಲುಕಿದ ಕಾರಣ ಇದೂ ಸಹ ಪ್ರವಾಸಕ್ಕೆ ಪ್ರೇರಣೆಯನ್ನೋದಗಿಸಿತು.

18ನೇ ಶತಮಾನದಲ್ಲಿ ಯೂರೋಪಿನಲ್ಲಿ ಅಸ್ತಿತ್ವಕ್ಕೆ ಬಂದ ವಾರ್ಷಿಕ ರಜೆ ಅಥವಾ annual holiday ಪ್ರವಾಸದ ಸಮಗ್ರಾಭಿವೃದ್ಧಿ ಹಾಗೂ ಬೆಳವಣಿಗೆಗೆ ಕಾರಣವಾಯಿತು. Holydays ಎಂಬ ಪದದಿಂದ Holyday ಎಂಬ ಪದವೂ ಬಂದಿದ್ದೂ, ಇದು ಮಾನವನ ಆನಂದದಾಯಕ ವಿಷಯವಾಗಿ; ಕ್ರಮೇಣ ಸಾರ್ವತ್ರಿಕ ರಜೆಯಾಗಿ; ಅನಂತರ ಡಿಸೆಂಬರ್‌ನಲ್ಲಿ ಎಲ್ಲರೂ ಸೇರಿ ಆಚರಿಸಿ ಸಂಭ್ರಮಿಸುವ 'ಸ್ಯಾಟರ್ ನಾಲಿಯಾ (Saturnalia) ಹಬ್ಬವಾಯಿತು.

ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ವಾಣಿಜ್ಯೀಕರಣ, ಜಾಗತೀಕರಣ, ಗಣಕೀಕರಣ ಮೊದಲಾದ ಆರ್ಥಿಕ ಸುಧಾರಣೆಯ ಪರಿಣಾಮದಿಂದಾಗಿ ಪ್ರವಾಸಕ್ಕೆ ಪೂರಕವಾದ ಸೌಲಭ್ಯ ಹಾಗೂ ಸೌಕರ್ಯಗಳು ಅಭಿವೃದ್ಧಿಗೊಂಡವು. ನಂತರ ರೈಲು ಪ್ರಯಾಣ, ಸಮುದ್ರ ಪ್ರಯಾಣ, ವಿಮಾನ ಪ್ರಯಾಣ, ಸಂಬಳ ಸಹಿತ ರಜೆಗಳು ಹಾಗೂ ಸಾಮೂಹಿಕ ಪ್ರವಾಸಗಳು ಮೊದಲಾದ ಪ್ರಗತಿಗಳು ಪ್ರವಾಸಾಭಿವೃದ್ಧಿಗೆ ಕಾರಣವಾದವು[13].

## ಪ್ರಾಚೀನ ಪ್ರವಾಸದ ಮಾದರಿಗಳು :

ಪ್ರಾಚೀನ ಕಾಲದಲ್ಲಿ ಪ್ರವಾಸವು ಕ್ಲಿಷ್ಟಕರವೂ, ದುಸ್ಸಾಧ್ಯಮಯವೂ ಆಗಿದ್ದು ಹಲವಾರು ರೀತಿಯ ಸಂಕಷ್ಟಗಳು, ಸಾವು-ನೋವುಗಳ ಹಾನಿಯೂ ಸಂಭವಿಸುತ್ತಿತ್ತು. ಪ್ರಾಚೀನ ಭಾರತೀಯರಂತು ತೀರ್ಥಯಾತ್ರೆಯ ಅನ್ವಯಾನುಸಾರ ಬದುಕಿನ ಅಂತ್ಯಾವಧಿಗಳಲ್ಲಿ ಕರ್ತವ್ಯ, ಜವಾಬ್ದಾರಿಗಳಿಂದ ಮುಕ್ತರಾದ ನಂತರ ಧಾರ್ಮಿಕ ಕ್ಷೇತ್ರಗಳಿಗೆ ತೀರ್ಥಯಾತ್ರೆ ಕೈಗೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ತಮಗೆ ಮರಣ ಸಂಭವಿಸುವುದು ಪುಣ್ಯವೆಂದು ಪರಿಗಣಿಸಿದ ಕಾರಣ ಯಾರಾದರೂ ಸರಿಯೇ, ಹೇಗಾದರೂ ಸರಿಯೇ ಮುಪ್ಪಿನಲ್ಲಿ ಕಾಶಿ, ರಾಮೇಶ್ವರ ಮೊದಲಾದ ಕ್ಷೇತ್ರಗಳ ದರ್ಶನ ಮಾಡಿ ಪುನೀತರಾಗಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ಅವರವರ ಆರ್ಥಿಕತೆಗನುಗುಣವಾಗಿ ಪ್ರಯಾಣಗಳನ್ನು ಸಂಯೋಜಿಸಿಕೊಳ್ಳುತ್ತಿದ್ದರು. ಪ್ರಾರಂಭದಲೆಲ್ಲಾ ಪಾದಯಾತ್ರೆಗಳ ಮೂಲಕ, ಸಾಕು ಪ್ರಾಣಿಗಳ ಸಹಾಯದಿಂದ ಹಡಗುಯಾನಗಳ ಮೂಲಕ ಅತ್ಯಲ್ಪವಾಗಿ ಯಂತ್ರವಾಹನಗಳ ಮೂಲಕ ಸಂಚರಿಸುತ್ತಿದ್ದರು. ಅನಂತರ ಕಾಲಕ್ಕೆ ತಕ್ಕಂತೆ ಪಾದಯಾತ್ರೆ ಹಾಗೂ ಪ್ರಾಣಿ ವಾಹನದ ಪ್ರಯಾಣಗಳು ಕಣ್ಮರೆಯಾಗಿ ಭೂಯಾನ, ನೌಕಾಯಾನ, ವಾಯುಯಾನಗಳು ಪ್ರಚಲಿತವಾದವು ಬುದ್ಧ, ಮಹಾವೀರ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಕನಕದಾಸ, ಪುರಂದರದಾಸ, ಸರ್ವಜ್ಞ, ಅಕ್ಕ ಮಹಾದೇವಿ, ಬಸವಣ್ಣನವರು ಸೇರಿದಂತೆ ಅನೇಕ ವಚನಕಾರರು, ವಚನಕಾರ್ತಿಯರು ಮತ್ತು ದಾಸರು, ಸಾಧು-ಸಂತರು ಮುಂತಾದವರೆಲ್ಲ ತಮ್ಮ ಅಲೆಮಾರಿ ಜೀವನದ ಮೂಲಕ ಸಮಾಜ ಜಾಗೃತಿಗಾಗಿ ತಮ್ಮ ಜೀವನ್ನವನ್ನೇ ಮುಡುಪಾಗಿಟ್ಟಿದ್ದನ್ನು ಸಮೃದ್ಧ ಕನ್ನಡ ಸಾಹಿತ್ಯದಿಂದ ತಿಳಿಯಬಹುದಾಗಿದೆ.

## ವಿದೇಶಿ ಪ್ರವಾಸದ ಕ್ಷೀಣತೆಗೆ ಕಾರಣ ಮತ್ತು ಸಮಸ್ಯೆಗಳು :

1. "ಭಾರತದಲ್ಲಿ ಸ್ಥಿತಿವಂತರು, ಹೊಸ ಅನುಭವಗಳ ಅಪೇಕ್ಷೆಯುಳ್ಳಂಥ ಕೆಲವರು ಮಾತ್ರ ಬಸ್ಸು, ರೈಲು, ಕಾರು, ವಿಮಾನಗಳಲ್ಲಿ ದೇಶ ವಿದೇಶಗಳನ್ನು ಸಂಚರಿಸುವವರ ಸಂಖ್ಯೆ ವಿರಳವಾಗಿರುವುದು.

2. ಯುವ ಪೀಳಿಗೆಯ ಸಾಹಸ ಮನೋಭಾವ ಕಾಲ ಕ್ರಮೇಣ ಇಳಿಮುಖವಾಗಿದೆ.

3. ಹಣವಿಲ್ಲದಿದ್ದರೂ ಕಾಲಿನಲ್ಲೊ, ಸೈಕಲ್‌ನಲ್ಲೊ ಸುತ್ತಬಲ್ಲೆ ಎಂಬ ಧೈರ್ಯ-ಸ್ಥೈರ್ಯಗಳ ಕೊರತೆ.

4. ಸಾರಿಗೆ ವೆಚ್ಚಗಳ ದುಬಾರಿ.

5. ವೃತ್ತಿನಿರತರ ವಿರಾಮದ ಅಭಾವ.

6. ಕೌಟಂಬಿಕ ಜವಾಬ್ದಾರಿಗಳ ಒತ್ತಡ.

7. ಪ್ರವಾಸ ಪ್ರಾಮುಖ್ಯತೆಯ ಅಜ್ಞಾನ ಮತ್ತು ಅಜಾಗರುಕತೆ.

8. ನೈಜ ಶಿಕ್ಷಣವಾದ ಪ್ರವಾಸದ ಬಗ್ಗೆ ಅನಾಸಕ್ತಿ.

ಇನ್ನೂ ಮುಂತಾದ ಕಾರಣಗಳಿಂದ ನಮ್ಮಲ್ಲಿ ದೂರದ ಸ್ಥಳ ಹಾಗೂ ಪ್ರದೇಶಗಳ ಪ್ರವಾಸ ಮಾಡುವವರು ಸಂಖ್ಯೆ ತೀರಾ ಕಡಿಮೆ. ಪ್ರವಾಸ ಕೈಗೊಂಡರೂ ನಂದಿ, ಕೆಮ್ಮಣ್ಣುಗುಂಡಿ, ಊಟಿ, ಕೊಡೈಕೆನಾಲ್, ಸಿಮ್ಲಾ, ಕಾಶ್ಮೀರಾ ಇತ್ಯಾದಿ ತಂಪು ತಾಣಗಳಿಗೆ ಅಥವಾ ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಬಾದಾಮಿ, ಐಹೊಳೆ ಪಟ್ಟದಕಲ್ಲು, ಹಂಪಿ, ಸೋಮನಾಥಪುರ, ಅಬು, ಎಲ್ಲೋರಾ, ಅಜಂತಾ, ಕೂಜುರಾಹು, ಕೊನಾರ್ಕ್, ಮಹಾಬಲಿಪುರಂ ಮೊದಲಾದ ಶಿಲ್ಪಕಲೆಯ ಬೀಡುಗಳಿಗೆ, ಸುಪ್ರಸಿದ್ಧ ದೇವಾಲಯಗಳಿಗೆ, ಪವಿತ್ರ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ. ಒಟ್ಟಿನಲ್ಲಿ ದೇಶಿಯ ಅಥವಾ ಪಿಕ್ನಿಕ್ ಮಾದರಿಯ ಪ್ರವಾಸಗಳೆ ಹೆಚ್ಚು ಸುಪ್ರಸಿದ್ಧವಾಗಿವೆ"[14].

## 3. ಪ್ರವಾಸ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆ

ಪ್ರವಾಸ ಸಾಹಿತ್ಯವನ್ನು ಆಂಗ್ಲಭಾಷೆಯಲ್ಲಿ 'ಟ್ರಾವೆಲೋಗ್' (Travelogue) ಅಥವಾ 'ಟ್ರಾವೆಲ್ ಲಿಟರೇಚರ್' (Travel Literature) ಎಂದು ಕರೆದರೂ, ಈ ಕುರಿತ ಹೆಚ್ಚಿನ ಮಾಹಿತಿಗಳು ಆಂಗ್ಲ ನಘಂಟುಗಳಲ್ಲಿ ದೊರೆಯುವುದಿಲ್ಲ. ಜೋಸೆಫ್ ಪಿಪ್ಲಿ, ರೋಜರ್ ಫಾವ್ಲರ್ ಹಾಗೂ ಜೆ.ಎ.ಸಡನ್ ಮತ್ತಿತರ ಸಾಹಿತ್ಯ ಪರಿಭಾಷಾ ಶಬ್ದ (Literary terms)ಗಳಲ್ಲೂ ಟ್ರಾವೆಲ್ ಲೋಗ್‌ನ ವಿವರಣೆಗಳಿಲ್ಲದಿರುವುದು ಕುತೂಹಲಕರ ಮತ್ತು ಆಶ್ಚರ್ಯಕರವಾದುದೆಂದು ಡಾ॥ಎನ್.ಎಸ್. ತಾರಾನಾಥ್‌ರವರು ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಉಪನ್ಯಾಸದ ಸಂದರ್ಭದಲ್ಲಿ ಹೇಳಿದ್ದಾರೆ.

'ಪ್ರವಾಸ ಸಾಹಿತ್ಯ' ತನ್ನ ಸ್ವಂತ ಅಸ್ತಿತ್ವವನ್ನು ಗುರುತಿಸಿಕೊಂಡು ಭದ್ರವಾದ ಪ್ರಕಾರವಾಗಿ ಬೇರೂರಿದ್ದು ತೀರ ಇತ್ತೀಚೆಗೆ. ಕನ್ನಡದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿ ಕೂಡ ಹೀಗೆಯೇ ಎಂದು ಕಾಣುತ್ತದೆ.

ಕಾರಣ ಹಡ್ಸನ್ ಬಹಳ ಹಿಂದೆಯೇ 'ಇಂಟ್ರಡಕ್ಷನ್ ಟು ದಿ ಸ್ಟಡಿ ಆಫ್ ಲಿಟರೇಚರ್' ಎಂಬ ಕೃತಿಯಲ್ಲಿ ಪ್ರಸಿದ್ಧವಾದ ಸಾಹಿತ್ಯ ಪ್ರಕಾರಗಳ ಉಲ್ಲೇಖವಿದ್ದೂ ಪ್ರವಾಸ ಸಾಹಿತ್ಯ ಕುರಿತ ಯಾವುದೇ ಉಲ್ಲೇಖವಿಲ್ಲ ಎಂದು ಡಾ॥ಸಿ.ಪಿ. ಕೃಷ್ಣಕುಮಾರ್‌ರವರು ಪ್ರವಾಸ ಸಾಹಿತ್ಯದ ನೆಲೆ-ಬೆಲೆಗಳ ಉಪನ್ಯಾಸ ನೀಡುವ ಸಂದರ್ಭದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಪ್ರವಾಸ ಸಾಹಿತ್ಯವು ಮೊದಲಿಗೆ ಸೃಷ್ಟಿಯಾದುದು ಬ್ರಿಟೀಷರಿಂದ. ಪಾಶ್ಚಾತ್ಯರಿಗೆ ಪ್ರವಾಸವು ಒಂದು ಹವ್ಯಾಸವಾಗಿದ್ದರಿಂದ ಸಾಕಷ್ಟು ವಿರಾಮ, ಹಣಕಾಸು ಇತ್ಯಾದಿ ಸೌಲಭ್ಯಗಳ ಮೂಲಕ ಹೊಸ, ಹೊಸ ಅನುಭವಗಳನ್ನು ಹೊಂದಿ ಪ್ರಯಾಣದಿಂದ ಮುದುಡಿದ ಮನಕ್ಕೆ ಚೈತನ್ಯ ಉಕ್ಕಿಸಲು; ಜೀವನೋತ್ಸಾಹ ಮೂಡಿಸಲು ಪ್ರವಾಸ ಕೈಗೊಳ್ಳುತ್ತಿದ್ದರು. ಆ ಸಂದರ್ಭಗಳಲ್ಲಿ ಒದಗಿದ ವಿಶಿಷ್ಟಾನುಭವಗಳನ್ನು ಬರಹದಲ್ಲಿ ಹಿಡಿದಿಡುವ ಪ್ರಯತ್ನವನ್ನು ಪ್ರವಾಸ ಸಾಹಿತ್ಯವೆಂದು ಡಾ॥ ಎಸ್. ವಿದ್ಯಾಶಂಕರ್ ಅವರು ತಮ್ಮ ಕೃತಿ 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ'ದಲ್ಲಿ ಹೇಳಿದ್ದಾರೆ.

ಕನ್ನಡದಲ್ಲಿ ಸುಮಾರು ಹತ್ತೊಂಬತ್ತನೇ ಶತಮಾನದವರೆಗೆ ಜಾತ್ರೆಯಾಗಿ, ತೀರ್ಥಯಾತ್ರೆಯಾಗಿ, ಅನಂತರ ಕ್ಷೇತ್ರ ಮಹಿಮೆ ಇತ್ಯಾದಿಗಳಿಂದ ಪ್ರಾಮುಖ್ಯ ಪಡೆದುಕೊಂಡಿತ್ತೇ ವಿನಃ ಸಾಹಿತ್ಯಾಂಶ ಗುಣಗಳು ಗೌಣವಾಗಿದ್ದನ್ನು ಕಾಣಬಹುದು. ಚರಿತ್ರೆ, ಕಾವ್ಯ ಮೊದಲಾದವುಗಳಲ್ಲಿ ಸ್ಥಳಾಭಿಮಾನಗಳ ಉಲ್ಲೇಖಗಳು ದೊರೆತರೂ, ಪ್ರವಾಸ ಸಾಹಿತ್ಯ ಪ್ರಕಾರವಾಗಿ ಉಪಲಬ್ಧವಾಗಿರುವುದು ಸುಮಾರು 1890ರಲ್ಲಿ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿಗಳಿಂದ ರಚಿತವಾದ 'ದಕ್ಷಿಣ ಭಾರತ ಯಾತ್ರೆ'ಯೆ ಕನ್ನಡದ ಮೊಟ್ಟ ಮೊದಲ ಪ್ರವಾಸ ಸಾಹಿತ್ಯವಾಗಿದೆ.

ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ ಅವರು 1872-1893ರ ಅವಧಿಯೊಳಗೆ ರಚಿಸಿರುವ 'ದಕ್ಷಿಣ ಭಾರತ ಯಾತ್ರೆ' ಕನ್ನಡದ ಮೊದಲ ಪ್ರವಾಸ ಕಥನವೆಂದು ಬಲ್ಲವರೆಲ್ಲರೂ ತಿಳಿದಿದ್ದಾರೆ. ಶಾಸ್ತ್ರಿಗಳು ಉಡುಪಿ ಗುರುವಾಯೂರುಗಳವರೆಗಿನ ಕ್ಷೇತ್ರಗಳನ್ನು; ಒಂದೊ, ಎರಡೊ ಪದ್ಯಗಳಲ್ಲಿ ವರ್ಣಿಸಿದ್ದಾರೆಂದು ಮೂವತ್ತೇಳು ಪದ್ಯಗಳ ಅಂಗೈಯಗಲದ ಪುಸ್ತಕವೆಂದೂ ಇದರ ಬಗ್ಗೆ ಶ್ರೀನಿವಾಸ ಹಾವನೂರರು ಬರೆದಿದ್ದಾರೆ ಎಂಬುದನ್ನು ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸಂಪಾದಿರುವ ಕೃತಿಯಿಂದ ತಿಳಿಯಬಹುದು. ಇದರ ನಂತರ 1921ರಲ್ಲಿ ಪ್ರಕಟವಾಗಿರುವ ಬಿ. ಪುಟ್ಟಯ್ಯನವರ 'ಅಭಿವೃದ್ಧಿ ಸಂದೇಶ' ಉದ್ದೇಶಿತ ಪ್ರವಾಸ ಕಥನವಲ್ಲದಿದ್ದರೂ ಪ್ರವಾಸದ ಒಳಮೈಯನ್ನು ಪಡೆದಿದೆ. ಇದು ಮೊದಲು ಪತ್ರ

ರೂಪವಾಗಿ ಒಕ್ಕಲಿಗ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. ಇದನ್ನು ಪತ್ರ ರೂಪದ ಪ್ರವಾಸಾನುಭವ ಎಂದು ಸಡಿಲವಾಗಿ ಕರೆಯಬಹುದೇನೋ ಎಂದು ಎನ್.ಎಸ್. ತಾರಾನಾಥರು ಹೇಳುತ್ತಾರೆ. ಆದರೆ ಪ್ರಕಟವಾಗಿರುವ ಪುಸ್ತಕ ನೋಡಿದರೆ, ಪತ್ರಗಳ ಮಾದರಿಯಲ್ಲಿ ಇಲ್ಲದೆ ತಮಗಾದ ಅನುಭವಗಳನ್ನು ತೆಳುವಾಗಿ ಹೇಳಿದ್ದರೂ 'ಪ್ರವಾಸ'ದ ಛಾಯೆಯಂತೂ ಇದ್ದೇ ಇದೆಯಂದು ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್‌ರವರು ತಮ್ಮ ಸಂಪಾದನಾ ಕೃತಿಯಾದ 'ಪ್ರವಾಸ ಸಾಹಿತ್ಯ' ಒಂದು ಅಧ್ಯಯನದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿಯವರು 'ದಕ್ಷಿಣ ಭಾರತ ಯಾತ್ರೆ' ಮತ್ತು ಬಿ. ಪುಟ್ಟಯ್ಯನವರ 'ಅಭಿವೃದ್ಧಿ ಸಂದೇಶ' ಕೃತಿಗಳಲ್ಲಿ ಪ್ರವಾಸ ಸಾಹಿತ್ಯದ ಸ್ಪಷ್ಟ ಲಕ್ಷಣಗಳಿಲ್ಲದಿದ್ದರೂ, ಪ್ರವಾಸ ಸಾಹಿತ್ಯದ ಹೋಲಿಕೆ ಮತ್ತು ಛಾಯೆಗಳನ್ನು ಮಾತ್ರ ಅವು ಒಳಗೊಂಡಿವೆ. 1926ರಲ್ಲಿ ವಿ.ಸೀ.ರವರ 'ಪಂಪಾಯಾತ್ರೆ' ಅತ್ಯುತ್ತಮ ಪ್ರವಾಸ ಕಥನವೆನ್ನಬಹುದು. ಅನಂತರ ರಾಜಮನೆತನ ಚನ್ನಾಜಮ್ಮಣ್ಣಿ 1937–38ರಲ್ಲಿ 'ನನ್ನ ಪ್ರಪಂಚ ಸಂಚಾರ' ಎಂಬ ಕೃತಿ ಪ್ರಕಟವಾಗಿದ್ದೂ, ಮಹಿಳೆಯೊಬ್ಬರ ಮೊದಲ ಪ್ರವಾಸ ಕೃತಿ ಎಂದು ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್‌ರವರು ತಮ್ಮ ಸಂಪಾದನಾ ಕೃತಿಯಾದ 'ಪ್ರವಾಸ ಸಾಹಿತ್ಯ' ಒಂದು ಅಧ್ಯಯನದ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಪ್ರವಾಸ ಸಾಹಿತ್ಯದ ಹಿನ್ನೆಲೆಯನ್ನು ಅವಲೋಕಿಸಿದಾಗ ವಿಭಿನ್ನ ಆಯಾಮಗಳಲ್ಲೂ ಪ್ರವಾಸದ ಮೂಲ ಸೆಲೆಗಳನ್ನು ಕಾಣಬಹುದು ನಮ್ಮ ಆಚಾರ–ವಿಚಾರ, ಸಂಸ್ಕೃತಿ, ಸಂಪ್ರದಾಯ ಸಾಹಿತ್ಯ ಇತ್ಯಾದಿ ಕಡೆಗಳಲ್ಲಿ ಪ್ರವಾಸಕ್ಕೆ ಸಾಮ್ಯತೆಯುಳ್ಳ ಅಂಶಗಳನ್ನು ಗುರುತಿಸಬಹುದು. ನಮ್ಮ ಸಾಂಪ್ರದಾಯಿಕ ಆಚರಣೆಗಳಲ್ಲಿ ಒಂದಾದ ಮದುವೆಗಳಲ್ಲಿ ಮದುಮಗನನ್ನು 'ಕಾಶಿಯಾತ್ರೆ' ಮಾಡಿಸುವ ಆಚರಣೆಯಲ್ಲಿ, ಮಹಾಕಾವ್ಯದ ಲಕ್ಷಣಗಳಾದ 'ಅಷ್ಟಾದಶ' ವರ್ಣನೆಗಳಲ್ಲಿ, ಸುಮಾರು ಹತ್ತು, ಹನ್ನೊಂದನೇ ಶತಮಾನದ ಕಲ್ಹಣನ 'ರಾಜತರಂಗಿಣಿ' ಮತ್ತು ಭೋಜರಾಜ ಮತ್ತವನ ಶಿಷ್ಯ, ಶ್ರೀವರ, ಪ್ರಾಜ್ಯ ಭಟ್ಟ, ಶುಕ, ಸೋಮೇಶ್ವರ, ಅರಿಸಿಂಹ ಮೊದಲಾದವರ ರಚನೆಗಳಲ್ಲಿ ಪ್ರವಾಸದ ಕುರುಹುಗಳಿವೆ[15].

ಹಸ್ತಪ್ರತಿಗಳಲ್ಲೂ ಪ್ರವಾಸ ಸಾಹಿತ್ಯದ ಮಾಹಿತಿಗಳು ಲಭ್ಯವಾಗಿವೆ. ಉದಾಹರಣೆಗೆ 'ಇನ್ಸಿಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್, ಚೆನ್ನೈನಿಂದ ಸುಮಾರು ಹದಿನೇಳನೇ ಶತಮಾನದ ತಾಳೆಗರಿಯನ್ನು ಡಾ. ವಿ. ಗೋಪಾಲಕೃಷ್ಣ ಹಾಗೂ ಕೆಳದಿ ಗುಂಡಾ ಜೋಯಿಸ್ ಅವರುಗಳು ಕೃತಿ ಮತ್ತು ಕರ್ತೃರಹಿತವಾದ

'ತಂಜಾವೂರು ಟು ವಿಜಯರಾಜಗಿರಿದುರ್ಗ' (Thanjavur to Vijayarajagiridurga, A Travel in kannada printed from a palm leaf Manuscript) ಎಂದು ಸಂಪಾದಿಸಿದ್ದಾರೆ.

ಕ್ರಿಸ್ತಶಕದ ಆರಂಭದಿಂದಲೂ ಮಾನವ ನಿಂತಲ್ಲಿ ನಿಲ್ಲದೆ; ಕೂತಲ್ಲಿ ಕೂಡದೆ ಸ್ಥಳಾಂತರ ಮಾಡಿರುವುದು, ಮಾಡುತ್ತಿರುವುದು ಇತಿಹಾಸದುದ್ದಕ್ಕೂ ಗೋಚರಿಸುತ್ತದೆ. ಹಲವು ಜನಾಂಗ, ಸಂಸ್ಕೃತಿ, ಸಮಾಜಗಳೇ ಮೊದಲಾದವು ತಮ್ಮ ಮೂಲ ನೆಲೆಗಳಿಂದ ಬೇರೆಡೆ ಬಂದು ಅನ್ಯ ಸಮಾಜ, ಸಂಸ್ಕೃತಿ, ಜನಾಂಗಗಳೊಂದಿಗೆ ಬೆರೆತು ನವ ಸಂಸ್ಕೃತಿ, ನವ ಸಮಾಜಗಳ ಉದಯಕ್ಕೆ ಕಾರಣರಾಗಿರುವುದರೊಂದಿಗೆ ಹೊಸ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಗೆ ಕಾರಣರಾಗಿದ್ದಾರೆ. ಬಹುತೇಕ ಪಾಶ್ಚಿಮಾತ್ಯರು ಕ್ರೈಸ್ತಧರ್ಮ ಪ್ರಸಾರಕ್ಕಾಗಿ ಬಂದಿರುವ ಹಾಗೂ ಮುಸ್ಲಿಂರು ಬಂದು ದಾಳಿ, ದರೋಡೆ, ಲೂಟಿ ಮುಂತಾದ ಆಕ್ರಮಣ ಮಾಡಿದ ದಾಖಲೆಗಳನ್ನು ನೋಡಬಹುದು.

ಏಷ್ಯಾದ ಅನೇಕ ದುರ್ಬಲ ರಾಷ್ಟ್ರಗಳ ಅವ್ಯವಸ್ಥಿತ ಆಡಳಿತ ವ್ಯವಸ್ಥೆಯೊಂದಿಗೆ ಒಳಸಂಘರ್ಷಗಳು, ಪರಸ್ಪರ ಕುತಂತ್ರ, ಪಿತೂರಿ ಮೊದಲಾದ ದೌರ್ಬಲ್ಯಗಳ ಲಾಭ ಪಡೆದ ಪರಕೀಯರು ತಮ್ಮ ಸುಧಾರಿತ ಯುದ್ಧ ಕೌಶಲ್ಯಗಳಿಂದ ಭಾರತವನ್ನು ಸಂಪೂರ್ಣ ಕೈವಶ ಮಾಡಿಕೊಂಡು ಇಲ್ಲಿನ ಸಕಲ ಸಂಪತ್ತನ್ನು ರವಾನೆ ಮಾಡುವುದಷ್ಟೆ ಅಲ್ಲದೆ ಸುಮಾರು ಎರಡು ಮೂರು ಶತಮಾನಗಳ ಕಾಲ ಸರ್ವಾಧಿಕಾರ ನಡೆಸಿರುವುದನ್ನು ಚರಿತ್ರೆಯು ಸ್ಪಷ್ಟಪಡಿಸುತ್ತದೆ.

ಸಮಾನ ಬೌದ್ಧಿಕ ಪರಂಪರೆಯ ಪ್ರತೀಕಗಳಾದ ಮಹಾನ್ ಪಂಡಿತರು, ಕವಿಗಳು ಮೊಲದವರೆಲ್ಲರೂ ಹಲವಾರು ದೇಶಗಳನ್ನು ಸುತ್ತಿರುವ; ಕೋಶದ ಆಧಾರಗಳನ್ನು ಗಮನಿಸಿದರೆ ಅವುಗಳಲ್ಲಿ ಸಂಸ್ಕೃತದ ಬಾಣನ 'ಹರ್ಷಚರಿತ'ದಲ್ಲಿ ದೇಶ ಪರ್ಯಟನೆ ಕೈಗೊಂಡಿರುವುದರ ಮಾಹಿತಿ ಇದೆ. ಕನ್ನಡದ ಆದಿಕವಿಯಾದ ಪಂಪನು ಸಹ ಉತ್ತರ ಕರ್ನಾಟಕದಲ್ಲಿ ಹುಟ್ಟಿ; ಆಂಧ್ರ ಪ್ರದೇಶ, ರಾಜಸ್ಥಾನಗಳಲ್ಲಿ ವಾಸವಾಗಿದ್ದುದಲ್ಲದೆ ತನ್ನ ಆಶ್ರಯದಾತನಾದ ಅರಿಕೇಸರಿಯೊಂದಿಗೆ ಯುದ್ಧ, ಯಾತ್ರೆ ಮೊದಲಾದ ಪ್ರವಾಸಾನುಭಗಳನ್ನು ತನ್ನ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿಸಿದ್ದಾನೆ. ಉದಾಹರಣೆಗೆ ಪಂಪ ಬನವಾಸಿ ಪ್ರಾಂತ್ಯಕ್ಕೆ ಭೇಟಿ ನೀಡಿ ಅಲ್ಲಿನ ಸೌಂದರ್ಯಕ್ಕೆ ಮನಸೋತಿರುವುದನ್ನು ಪಂಪಭಾರತದ ಬನವಾಸಿ ವರ್ಣನೆಯಲ್ಲಿ ಕಾಣಬಹುದು. ಹಾಗೆಯೇ ಪ್ರಾಚೀನ ಗ್ರೀಕರ ಸಂಚಾರಿ ವ್ಯಾಮೋಹವನ್ನು ಹೋಮರನ ಮಹಾಕಾವ್ಯವಾದ

'ಒಡಿಸ್ಸಿ'ಯಲ್ಲಿ ನೋಡಬಹುದು. ಮುಂದೆ ಬೌದ್ಧ ಯಾತ್ರಿಕ ಹ್ಯೂಯ್ಸನ ತ್ಯಾಂಗ್‌ನ 'ಸಿ-ಯು-ಕಿ' ಗ್ರಂಥದಲ್ಲೂ ಪ್ರವಾಸದ ಅನೇಕ ಮಾಹಿತಿಗಳು ಕಂಡುಬರುತ್ತವೆ. ಒಟ್ಟಾರೆ ಪೌರ್ವಾತ್ಯ ಮತ್ತು ಪಾಶ್ಚಾತ್ಯರ ಕೃತಿಗಳಲ್ಲೂ ಪ್ರವಾಸದ ಸಾಕ್ಷ್ಯಾಧಾರಗಳು ದೊರೆಯುತ್ತವೆ[16].

ಭಾರತದ ಪ್ರಾಚೀನ ಕೃತಿಗಳಾದ ವೇದ, ಪುರಾಣ, ರಾಮಾಯಣ, ಮಹಾಭಾರತ ಮುಂತಾದ ಮಹಾನ್‌ಗ್ರಂಥಗಳಲ್ಲೂ ಪ್ರವಾಸದ ಮಾದರಿಗಳನ್ನು ಗುರುತಿಸಬಹುದು. ಇಲ್ಲೆಲ್ಲಾ ದೇವಾದಿ ದೇವತೆಗಳು ಸಹ ಭೂಲೋಕದ ಪ್ರವಾಸ ಮಾಡಿರುವ, ಜನ್ಮ ತಾಳಿರುವ ಸಂಗತಿಗಳಿವೆ. ವಸಿಷ್ಟ, ವಿಶ್ವಾಮಿತ್ರ ಮೊದಲಾದ ಋಷಿಮುನಿಗಳ ಸಂಚಾರವನ್ನು, ಸತ್ಯ ಹರಿಶ್ಚಂದ್ರನ ದೇಶಾಂತರವನ್ನು, ರಾಮನ ವನವಾಸ ಮತ್ತು ಲಂಕಾಪ್ರಯಾಣವನ್ನು, ರಾವಣನ ಪಂಚವಟಿಯಾನವನ್ನು, ಪಾಂಡವರ ಅಜ್ಞಾತವಾಸ ಹಾಗೂ ಅರ್ಜುನನ ತೀರ್ಥಯಾತ್ರೆ ಇತ್ಯಾದಿಗಳೆಲ್ಲವೂ ಪ್ರವಾಸದ ಅಂಶಗಳೇ ಆಗಿವೆ ಎಂಬ ಅಂಶಗಳನ್ನು ಡಾ॥ ಅನುರಾಧ ಅವರ ಮಹಾಪ್ರಬಂಧದಲ್ಲಿ ನೋಡಬಹುದು.

ಪ್ರವಾಸದಿಂದುಟಾಗುವ ಸ್ವಾನುಭವಗಳನ್ನು ಬೇರೊಬ್ಬರೊಂದಿಗೆ ಮೌಖಿಕವಾಗಿಯೋ, ಲಿಖಿತರೂಪವಾಗಿಯೋ ಅಭಿವ್ಯಕ್ತಗೊಳಿಸುವುದು ಮನುಷ್ಯನ ಸ್ವಾಭಾವಿಕ ಗುಣ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ವಿಶ್ವಕೋಶದಲ್ಲಿ 'ತಮ್ಮ ತಮ್ಮ ಅನುಭವಗಳನ್ನು ಅದರ ವೈಶಿಷ್ಟ್ಯತೆ ಹೊಳೆಯುವಂತೆ ಬರಹಕ್ಕಿಳಿಸಿ ಹೇಳಿದಾಗ ಅದು ಸಾಹಿತ್ಯದಂತೆ ಸಾಕಾರವಾಗುತ್ತದೆ ಎಂದಿರುವುದನ್ನು ಗಮನಿಸಿದಾಗ, ಪ್ರವಾಸದಿಂದ ಪ್ರವಾಸ ಸಾಹಿತ್ಯ ಸೃಷ್ಟಿಯಾಗಿರುವುದು ವೇದ್ಯವಾಗುತ್ತದೆ. ಆಧುನಕ ಭಾರತದ ಪ್ರಥಮ ವಿದೇಶಿ ಕೃತಿಯಾಗಿ ವಿನಾಯಕ ಕೃಷ್ಣ ಗೋಕಾಕ್‌ರವರ 'ಸಮುದ್ರದಾಚೆ' ಪ್ರವಾಸ ಕಥನವನ್ನು ನಾವು ಸದ್ಯ ಗುರುತಿಸಬಹುದು.

## ಪ್ರವಾಸ ಸಾಹಿತ್ಯದ ಸ್ವರೂಪ ಅಥವಾ ಲಕ್ಷಣಗಳು :

ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್‌ರವರು ಸೂಚಿಸಿರುವ ಪ್ರವಾಸ ಸಾಹಿತ್ಯದ ನಾಲ್ಕು ಒಳಮೈ ಲಕ್ಷಣಗಳು

1. ಗದ್ಯ ನಿರೂಪಣೆ
2. ಕಥನಾತ್ಮಕ ಶೈಲಿ

3. ಆತ್ಮ ಕಥನದ ನಿವೇದನೆ

4. ಪ್ರವಾಸ ಕಥನದ ವಸ್ತು ದ್ರವ್ಯ

ಎಂದು ಸ್ಥೂಲವಾಗಿ ಹೇಳಿದರೆ, ಇದಕ್ಕೆ ಸಾದೃಶವಿರುವ ಲಕ್ಷಣಗಳನ್ನು ಡಾ. ಎನ್.ಎಸ್. ತಾರಾನಾಥ್ ಅವರು ಪ್ರವಾಸ ಸಾಹಿತ್ಯದ ಸಾಮಾನ್ಯ ಲಕ್ಷಣಗಳಲ್ಲಿ ಸಾಕಷ್ಟು ವಿವರಗಳೊಂದಿಗೆ ವೀಕ್ಷಿಸಬಹುದು. ಅವುಗಳೆಂದರೆ

1. ಗದ್ಯ ನಿರೂಪಣ

2. 'ನೆರೇಟಿವ್ ಸ್ಟೈಲ್

3. 'ನಾನು' ಎನ್ನುವ ಆತ್ಮವೃತ್ತಾಂತ ನಿರೂಪಣೆಯ ಕ್ರಮ ಅಥವಾ ಧ್ವನಿಯ ಪ್ರಾಧಾನ್ಯತೆ.

4. ಪ್ರಮುಖ ಲಕ್ಷಣವಾದ ಪರಸ್ಥಳಾನುಭವದ ವಸ್ತುದ್ರವ್ಯ

ಎಂಬ ನಾಲ್ಕು ಲಕ್ಷಣಗಳನ್ನು ಸಮರ್ಪಕ ಮಾಹಿತಿಯೊಂದಿಗೆ ವಿಶ್ಲೇಷಿಸಿರುವುದಲ್ಲದೆ ಇವುಗಳನ್ನು ಪ್ರವಾಸ ಸಾಹಿತ್ಯದ ಚತುರಂಗಗಳು ಎಂದು ಮತ್ತೊಂದೆಡೆ ಸೂಚಿಸಿದ್ದಾರೆ.

1. ಗದ್ಯ ರೂಪ

2. ನಿರೂಪಣಾ ಶೈಲಿ

3. ಆತ್ಮಕಥನ ವೃತ್ತಾಂತ

4. ಅನುಭವ ಕಥನಗಳು

ಮೇಲ್ಮೈ ಲಕ್ಷಣಗಳೆಂದು

1. ಸ್ಥಳಗಳ ಬಣ್ಣನೆ

2. ಜನತೆಯ ಜೀವನ ವಿಧಾನದ ಸ್ಪಷ್ಟೀಕರಣ

3. ಭೇಟಿಯಿತ್ತ ದೇಶದ ಜನರ ಸಾಧನೆ ಹಾಗೂ ಪ್ರಗತಿ

4. ವಿದೇಶಗಳ ವಿಶಿಷ್ಟ ಸಂಸ್ಕೃತಿಯ ತೋರುದರ್ಶನಗಳನ್ನು ಒಳಮೈ ಲಕ್ಷಣಗಳು ಎಂದಿರುವುದಲ್ಲದೆ, ವಿಶ್ವದ ವಿಭಿನ್ನ ಪ್ರವಾಸ ಕೃತಿಗಳನ್ನು ಮತ್ತು ಚರ್ಚೆಗಳನ್ನು ಸೂಕ್ಷ್ಮಾವಲೋಕಿಸಿ ಮೂರು ರೀತಿಯಾಗಿ ವಿಭಾಗಿಸಿದ್ದಾರೆ

1. ಮಾಹಿತಿ ಕಥನ ಪ್ರವಾಸ ಸಾಹಿತ್ಯ (Factual account travelogues)

2. ತೋರು ವಾಸ್ತವತೆಯ ಭ್ರಾಮಕ ಪ್ರವಾಸ ಸಾಹಿತ್ಯ (Fantasy purporting to be fact travelogues)

3. ಅನುಭವಗಳು ಕೇವಲ ವರದಿಯಾಗಿಸದೆ ಸಾಹಿತ್ಯವಾಗಿಸುವ ಪ್ರವಾಸ ಸಾಹಿತ್ಯ (travel litrature with a definite purpose)

ವರದರಾಜ ಹುಯಿಲಗೋಳರು ಪ್ರವಾಸ ಸಾಹಿತ್ಯವನ್ನು ಅನುಲಕ್ಷಿಸಿ ಹೀಗೆ ಹೇಳಿದ್ದಾರೆ;

1. ಕರ್ನಾಟಕದಲ್ಲಿಯ ಪ್ರವಾಸ ಪುಸ್ತಕಗಳು

2. ಭಾರತಯಾತ್ರೆಯ ಪ್ರವಾಸ ಪುಸ್ತಕಗಳು

3. ವಿದೇಶಯಾತ್ರೆಯ ಪ್ರವಾಸ ಪುಸ್ತಕಗಳು

ಎಂದು ವರ್ಗೀಕರಿಸಿರುವುದನ್ನು ಸ್ವರಾಜ್ಯ–ಸ್ವದೇಶ–ವಿದೇಶ ಎಂಬ ಗಡಿಗೇಖೆಗಳನ್ನವಲಂಬಿಸಿ ಕರ್ನಾಟಕ–ಭಾರತ–ಜಗತ್ತು ಎನ್ನುವ ಆರೋಹಣ ವ್ಯಾಪ್ತಿಯ ವಿಭಾಗ ಕಲ್ಪನೆಯನ್ನು ಮಾಡಿಕೊಂಡಿದ್ದಾರೆ.

ಈ ಕುರಿತು **ಡಾ.ಎನ್.ಎಸ್. ತಾರಾನಾಥ್** ಅವರು ಕನ್ನಡದಲ್ಲಿ ಬಂದಿರುವ ಪ್ರವಾಸ ಸಾಹಿತ್ಯದ ಸಮೀಕ್ಷೆ, ವಿಶ್ಲೇಷಣೆಗಳ ಮಟ್ಟಿಗೆ ಇದು ಸರಿ ಮತ್ತು ಅಷ್ಟರ ಮಟ್ಟಿಗೆ ಉಪಯುಕ್ತ. ಆದರೆ ಇಂಥ ವರ್ಗೀಕರಣ ಸಾರ್ವತ್ರಿಕ ರೂಪದ್ದಲ್ಲ. ಜಗತ್ತಿನ ಎಲ್ಲಾ ಭಾಷೆಗಳ ಪ್ರವಾಸ ಸಾಹಿತ್ಯಕ್ಕೆ ಅನ್ವಯವಾಗುವುದಿಲ್ಲ ಎಂಬುದನ್ನು ನೆನಪಿಡಬೇಕು ಎಂದಿದ್ದಾರೆ. ಪ್ರವಾಸ ಸಾಹಿತ್ಯದ ರೂಪವನ್ನು (Form) ಆಧರಿಸಿ **ವರದರಾಜ ಹುಯಿಲಗೋಳರು**

1. ಪತ್ರರೂಪ ಪ್ರವಾಸ ಸಾಹಿತ್ಯ

2. ದಿನಚರಿ ಪ್ರವಾಸ ಸಾಹಿತ್ಯ

3. ಕಥಾರೂಪ ಪ್ರವಾಸ ಸಾಹಿತ್ಯವೆಂದು ಮೂರು ಬಗೆಗಳಲ್ಲಿ ಗುರುತಿಸಿದ್ದಾರೆ.

**ಸಾ.ಶಿ. ಮರುಳಯ್ಯನವರು** ಪ್ರವಾಸ ಮಾದರಿಗಳ ಲಿಖಿತ ರೂಪವೇ ಪ್ರವಾಸ ಸಾಹಿತ್ಯದ ರೇಖೆಗಳು ಎಂದು ಹೇಳುತ್ತಾ, ಪ್ರವಾಸಿ ಅಥವಾ ಪ್ರವಾಸ ಕಥನಗಳ ಧ್ಯೇಯೋದ್ದೇಶಗಳನ್ನು ಮುಖ್ಯವಾಗಿ ಆಧರಿಸಿ

1. ತೀರ್ಥಯಾತ್ರಾ ಪ್ರವಾಸ ಸಾಹಿತ್ಯ (Piligrimage)
2. ಸಾಂಸ್ಕೃತಿಕ ಪ್ರವಾಸ ಸಾಹಿತ್ಯ (Cultural)
3. ಶೈಕ್ಷಣಿಕ ಪ್ರವಾಸ ಸಾಹಿತ್ಯ (Educational)
4. ವ್ಯಾವಹಾರಿಕ ಪ್ರವಾಸ ಸಾಹಿತ್ಯ (Commercial)
5. ಪ್ರವಾಸ ಪ್ರೇಮಿ ಪ್ರವಾಸ ಸಾಹಿತ್ಯ (Wanderlust) ಎಂಬುದಾಗಿ ವಿಂಗಡಿಸಿದ್ದಾರೆ.

ಪ್ರವಾಸ ಪ್ರಕಾರದಲ್ಲಿ ವಿಶೇಷ ವ್ಯಾಸಂಗ ಮಾಡಿ ಕೃತಿ ಪ್ರಕಟಿಸಿರುವ **ಡಾ.ಎಸ್. ವಿದ್ಯಾಶಂಕರ್** ಅವರು ಪ್ರವಾಸ ಸಾಹಿತ್ಯವನ್ನು ವಿವಿಧ ವೃತ್ತಿಯವರು ರಚಿಸಿರುವುದನ್ನು ಪ್ರಸ್ತಾಪಿಸುತ್ತಾ ಅದರಲ್ಲಿ ಕನ್ನಡದ ಪ್ರಸಿದ್ಧ ಲೇಖಕರು ಅಧಿಕವಾಗಿ ಬರೆದಿರುವುದನ್ನು ತಿಳಿಸುತ್ತಾರೆ. ಅವುಗಳನ್ನು ಪತ್ರ ಸಾಹಿತ್ಯ, ದಿನಚರಿ ಸಾಹಿತ್ಯ, ಅನುಭವ ಕಥನವೆಂದು ಮೂರು ವಿಧಗಳಲ್ಲಿ ವಿಂಗಡಿಸಬಹುದಾದರೂ ಔಚಿತ್ಯದ ದೃಷ್ಟಿಯಿಂದ ಸಮಂಜಸ ಎನಿಸುವುದಿಲ್ಲವೆಂದು ಪತ್ರ ಸಾಹಿತ್ಯ ಮತ್ತು ದಿನಚರಿರೂಪದ ಸಾಹಿತ್ಯಗಳು ಬೆರಳೆಣಿಕೆಯಷ್ಟಿದ್ದು, ಅನುಭವ ಕಥನಗಳು ಸಾಕಷ್ಟಿರುವುದರಿಂದ ಅಭ್ಯಾಸ ಯೋಗ್ಯವಾಗಿ

1. ವಿಶ್ವ ಪರ್ಯಟನ ಸಾಹಿತ್ಯ
2. ಬಿಡಿ ಬಿಡಿ ದೇಶಗಳ ಪ್ರವಾಸ ಸಾಹಿತ್ಯ
3. ಭರತ ಖಂಡ ಪ್ರವಾಸ ಸಾಹಿತ್ಯ
4. ತೀರ್ಥಯಾತ್ರಾ ಪ್ರವಾಸ ಸಾಹಿತ್ಯ
5. ಕರ್ನಾಟಕ ಪ್ರವಾಸ ಸಾಹಿತ್ಯ
6. ಅನುವಾದ ಪ್ರವಾಸ ಸಾಹಿತ್ಯ

ಎಂದು ಆರು ಬಗೆಯಾಗಿ ವಿಗಂಡಿಸುವುದರಿಂದ ಪ್ರತ್ಯೇಕ ಕೃತಿಗಳ ಸಮಗ್ರ ಅಧ್ಯಯನದೊಂದಿಗೆ ವೈವಿಧ್ಯಮಯ ಶೈಲಿಗಳನ್ನು ತಿಳಿಯಬಹುದು. ಹಲವರು ಹಲವು ಕಾರಣಗಳಿಗಾಗಿ ಹಲವಾರು ರಾಷ್ಟ್ರಗಳ ಅನುಭವಗಳು, ಭಿನ್ನಾಭಿರುಚಿಗಳು, ವೈವಿಧ್ಯ ಆಸಕ್ತಿಗಳು, ವಿಶಿಷ್ಯ ಒಲವುಗಳು, ನಿರೀಕ್ಷಣಾ ವಿಧಾನಗಳ ಅರ್ಥಪೂರ್ಣ ಅಧ್ಯಯನ ನಡೆಸಬಹುದು ಎಂದು ಸಮರ್ಥಿಸಿಕೊಳ್ಳುತ್ತಾರೆ.

ಇದನ್ನೇ ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್‌ರವರು ಅನುಮೋದಿಸುತ್ತಾ ಪ್ರವಾಸ ಸಾಹಿತ್ಯದ ಲಕ್ಷಣವನ್ನು ಬೆರಳು ತೋರಿಸಿ ನಿಶ್ಚಿತವಾಗಿ ಹೇಳಕಿಕ್ಕಾಗದಿದ್ದರೂ ಎಸ್. ವಿದ್ಯಾಶಂಕರರ ಪ್ರವಾಸ ಸಾಹಿತ್ಯದ ಲಕ್ಷಣಗಳನ್ನು ಒಪ್ಪಬಹುದು. ಪ್ರವಾಸ ಸಾಹಿತ್ಯ ವ್ಯಕ್ತಿನಿಷ್ಠ ಸಾಹಿತ್ಯ. ಭಾವಗೀತೆಯಂತೆ, ಲಲಿತ ಪ್ರಬಂಧದಂತೆ ವೈಯಕ್ತಿಕವಾದದ್ದು. ಎಲ್ಲಾ ಪ್ರವಾಸ ಪ್ರಕಾರಗಳಿಗೂ ಸಂಬಂಧಿಸಿದಂತೆ ಪ್ರವಾಸ ಸಾಹಿತ್ಯಕ್ಕೂ ಅನುಭವವೇ ಮೂಲ ಬೇರು ಅಥವಾ ಮೂಲ ಸರಕಾಗಿದೆ ಎಂದು ತಿಳಿಸಿದ್ದಾರೆ.

ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್ ಅವರು ಕನ್ನಡದಲ್ಲಿ ಪ್ರವಾಸ ಸಾಹಿತ್ಯವನ್ನು ಗುಣವರ್ಗದ ಅನುಸಾರ ಮೂರು ರೀತಿ ವರ್ಗೀಕರಣ ಮಾಡಬಹುದೆಂದು ಸೂಚಿರುವುದೆಂದರೆ,

1) ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಂದ ಕೂಡಿದ ಪ್ರವಾಸ ಕಥನಗಳು.

2) ಸಾಮಾಜಿಕ ವಿವರಗಳಿಂದ ಕೂಡಿದ ಪ್ರವಾಸ ಕಥನಗಳು.

3) ಸಾಮಾನ್ಯ ಪ್ರವಾಸ ಕಥನಗಳು.

ಈ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟಾರೆ ಪ್ರವಾಸ ಸಾಹಿತ್ಯವನ್ನು ಮೂಲಭೂತವಾಗಿ ಚರ್ಚಿಸಬಹುದು ಎಂದಿದ್ದಾರೆ.

## ಪ್ರವಾಸ ಸಾಹಿತ್ಯದ ಮಹತ್ವ :

'ಕೋಣೆಯ ಕೂಸು ಕೊಳೆಯಿತು; ಓಣಿಯ ಕೂಸು ಬೆಳೆಯಿತು'. ಎಂಬ ಗಾದೆಯ ಸ್ವಾರಸ್ಯವೆಂದರೆ ಮಗುವಿನಿಂದಲೇ ನಾಲ್ಕಾರು ಕಡೆ ಓಡಾಡಬೇಕು. ಇದರಿಂದ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಾಗಿ ಅರಿವಿನ ಜ್ಞಾನದ ವಿಕಾಸವಾಗುತ್ತದೆ. ಈ ಆಶಯದಲ್ಲಿ 'ಓಡಾಟದ ಮಹತ್ವ'

ಅಡಗಿರುವುದನ್ನು ಕಾಣಬಹುದು. ಮಗು ಹಂತ, ಹಂತವಾಗಿ ಬೆಳೆದು ಸಂವರ್ಧನೆಗೊಳ್ಳುವಂತೆ, ಹೆಜ್ಜೆಯಿಂದ ಪ್ರಾರಂಭವಾಗಿ ಓಡಾಟ, ಅಲೆದಾಟ, ತಿರುಗಾಟ ಇತ್ಯಾದಿಗಳೆವೂ ಪ್ರವಾಸದಲ್ಲಿ ಮೆಳೈಸಿ ಪ್ರವಾಸ ಸಾಹಿತ್ಯದ ಉಗಮಕ್ಕೆ ಕಾರಣವಾಗಿರುವುದು ಸ್ಪಷ್ಟವಾಗುತ್ತದೆ. "ಕುವೆಂಪುರವರು ಹೇಳುವಂತೆ ಮನುಷ್ಯನ ಚಲನೆಗೆ ಅನುಗುಣವಾಗಿ ಮೂರು ರೀತಿಯ ಪ್ರವಾಸಗಳಿವೆ. ಒಂದು ಮಾದಕ ಮತ್ತು ಲೈಂಗಿಕವಾದಿ ಪ್ರಪಂಚಗಳಲ್ಲಿ ತನ್ನನ್ನು ತಾನು ಮರೆಯಲೂ, ಮೀರಲೂ ಮಾನವ ಕೈಗೊಳ್ಳುವ ಸಾಹಸಗಳೆಲ್ಲಾ ಅಧೋಮುಖ ಪ್ರವಾಸವಾಗುತ್ತದೆ. ಇದರ ಪ್ರಾರಂಭ ಸ್ವಾದುವಾದರೆ ಅಂತ್ಯ ಅಸ್ವಾದು ಎಂದಿದ್ದಾರೆ. ಎರಡನೆಯದು; ತನಗೆ, ತನ್ನ ಸಮಾಜಕ್ಕೆ, ತನ್ನ ನಾಡಿಗೆ, ತನ್ನ ಸಾಹಿತ್ಯ, ಸಂಗೀತ, ಕಲೆ, ಲೋಕವೊಪ್ಪುವ ಅಥವಾ ಮೆಚ್ಚುವಂಥ ಯಾವುದಾದರೊಂದು ಸುಧಾರಣೆಯ ಚಳುವಳಿ, ರಾಜಕಾರಣ, ರಾಜ್ಯಸಭೆ ಮತ್ತು ಪರಿಷತ್ತುಗಳಲ್ಲಿ ಭಾಗವಹಿಸುವುದು. ದೇಶಭಕ್ತಿ ದೇಶರಕ್ಷಣೆ, ಸಮಾಜ ಸೇವೆ ಮುಂತಾದ ನಮ್ಮ ನೆರೆ–ಹೊರೆ, ಸುತ್ತ–ಮುತ್ತ ಪ್ರತಿನಿತ್ಯ ನಡೆಯುವ ನೂರಾರು ಜಂಜಾಟ, ವ್ಯಾಪಾರ ಮೊದಲಾದವುಗಳಲ್ಲಿ ತನ್ಮಯರಾಗಿ ನಮ್ಮನ್ನು ನಾವು ಮರೆಯುವುದನ್ನು, ಮೀರುವುದನ್ನು ಸಮತಲಮುಖಿ ಪ್ರವಾಸ ಎನ್ನುತ್ತಾರೆ. ಮೂರನೆಯದು; ಆಧ್ಯಾತ್ಮಿಕ ಶ್ರೇಯಸ್ಸೇ ಧ್ಯೇಯವಾಗಿ ಸರ್ವಸಮರ್ಪಣ ಭಾವದಿಂದ ಸ್ವದರ್ಶನದ ಅನುಸಂಧಾನಕ್ಕಾಗಿ ಕೈಗೊಳ್ಳುವ ಅತ್ಯಂತ ವಿರಳವಾದ ಅತ್ಯಪೂರ್ವ ಸಾಹಸವೆ ಊರ್ಧ್ವಮುಖಿ ಪ್ರವಾಸ ಎಂದಿದ್ದಾರೆ.

ಈ ರೀತಿಯ ಹಲವು ಪ್ರವಾಸಗಳಲ್ಲಿ ಪ್ರವಾಸಿ ತನ್ನದಲ್ಲದ ನಾಡು–ನುಡಿ, ಜನ–ಮನ, ಸಮಾಜ–ಸಂಸ್ಕೃತಿ ಮುಂತಾದ ಮೂರ್ತ ಮತ್ತು ಅಮೂರ್ತ ವಿಚಾರಗಳಲ್ಲಿ ಮುಖಾಮುಖಿಯಾಗಿ ಸಿದ್ಧಿಸಿದ ಅನುಭವಗಳೆಲ್ಲವು ಪ್ರತಿಬಿಂಬವಾಗಿ ಪ್ರವಾಸ ಸಾಹಿತ್ಯದಲ್ಲಿ ಹುಟ್ಟುತ್ತದೆ[17].

ವಿ.ಎಂ. ಇನಾಂದಾರರು 'ಮುಕ್ಕಣ್ಣಯಾತ್ರೆ'ಯ ಮುನ್ನುಡಿಯಲ್ಲಿ "ಪ್ರವಾಸ ನಮ್ಮ ಬದುಕಿನಲ್ಲಿ ಒಂದು ಸಂಯಮಿಸಲಾಗದ ಸೆಳೆತ ಎಂದು ಮುಂದುವರಿಸುತ್ತಾ, ಮನುಷ್ಯನು ಅಂಜುಬುರಕ, ಆಸೆಬುರಕ, ಸುಳ್ಳುಬುರಕ ಸ್ವಭಾವಗಳಂತೆ 'ಕತೆಬುರುಕ' ತನವೂ ಜನ್ಮಸಹಜವಾದುದು. ಮನುಷ್ಯರಿಗೆ ಬಾಲ್ಯದಲ್ಲಿ ಕಥೆಗಳನ್ನು ಕೇಳುವ ಬಯಕೆಯಾದರೆ; ಮುಪ್ಪಿನಲ್ಲಿ ಕಥೆಗಳನ್ನು ಹೇಳುವ ಬಯಕೆ; ಸತ್ತ ಮೇಲೆ ತಾನೇ ಕಥೆಯಾಗಿ ಬಿಡುತ್ತಾನೆ. ಪ್ರವಾಸದಲ್ಲಿ ತಾನು ಕಂಡುಂಡ ಸ್ವಾರಸ್ಯಗಳನ್ನು ಲೋಕಕ್ಕೆ ಹೇಳದ ಹೊರತು ಅವನಿಗೆ ಸಮಾಧಾನವಿಲ್ಲ ಎಂದಿರುವುದನ್ನು ಡಾ. ಕೆ. ಅನಂತರಾಮು ಅವರು ವಿವರಿಸುತ್ತಾ

ಮನೆಯಿಂದ ಹೊರಬಿದ್ದು, ಹೊರ ಜಗತ್ತನ್ನು ತೆರೆದ ಕಣ್ಮನಗಳಿಂದ ನೋಡುತ್ತಾ ಸ್ವಾನುಭಿವಿಸಿದ್ದನ್ನು, ಸವಿದುದ್ದನ್ನು ಆತ್ಮ ಪ್ರತ್ಯಯದೊಡನೆ ಸರಸವಾಗಿ ಬಣ್ಣಿಸುವುದನ್ನು 'ಪ್ರವಾಸ ಕಥನ' ಎಂದಿದ್ದಾರೆ.

ಪ್ರವಾಸ ಸಾಹಿತ್ಯದ ಸೃಜನಶೀಲತೆಯ ಕುರಿತು ಹಲವಾರು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಡಾ॥ ಎನ್.ಎಸ್. ತಾರಾನಾಥರು ಕನ್ನಡದ ಸಾಹಿತ್ಯ ಪ್ರಕಾರಗಳಾದ ಕಥೆ, ಕಾದಂಬರಿ, ನಾಟಕ ಇತ್ಯಾದಿಗಳಂತೆ ಪ್ರವಾಸ ಸಾಹಿತ್ಯದ ವಸ್ತು, ವರ್ಣನೆ ಮುಂತಾದವುಗಳಲ್ಲಿ ಕತೃವಿನ ಕಲ್ಪನಾಶಕ್ತಿ, ಸೃಜನಶೀಲತೆಗಳು ಕ್ರಿಯಾಶೀಲವಾಗಲು ಆಸ್ಪದವಿಲ್ಲದ ಕಾರಣ ಪ್ರವಾಸ ಸಾಹಿತ್ಯ ಸೃಜನಶೀಲವಲ್ಲ ಎಂದಿದ್ದಾರೆ. ಇದನ್ನು ಆಂಶಿಕವಾಗಿ ಒಪ್ಪಬಹುದಾದರೂ ಚಿಂತನೆಗೆ ಇನ್ನಷ್ಟು ಅವಕಾಶವಿದೆ ಎಂದು ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್‌ರವರು ಹೇಳುತ್ತಾರೆ.

ಆದರೆ ಡಾ. ಎಸ್. ವಿದ್ಯಾಶಂಕರ್ ಅವರು ಸಾಕಷ್ಟು ಸಕಾರಣಗಳನ್ನು ಕೊಡುತ್ತಾ ಪ್ರವಾಸ ಸಾಹಿತ್ಯವನ್ನು ಸೃಜನಶೀಲ ಸಾಹಿತ್ಯ ಪ್ರಕಾರವಾಗಿ ಪರಿಗಣಿಸಲು ಯಾವುದೇ ಅನುಮಾನವಿಲ್ಲವೆನ್ನುತ್ತಾರೆ. ಡಾ॥ಕೆ. ಅನಂತರಾಮುರವರು ಪ್ರವಾಸ ಸಾಹಿತ್ಯದಲ್ಲಿ ಸೇಜರ್ಪಡೆಯಾಗದ ವಸ್ತು, ವಿಷಯಗಳೇ ವಿಶ್ವದಲಿಲ್ಲವೆಂದು ಇತಿಹಾಸ, ಭೂಗೋಳ, ಸಮಾಜಶಾಸ್ತ್ರ, ತತ್ತ್ವಶಾಸ್ತ್ರ, ಅರ್ಥಶಾಸ್ತ್ರಗಳನ್ನು ಒಳಗೊಂಡಂತೆ ಐತಿಹ್ಯ, ಪುರಾಣ, ಸಂಸ್ಕೃತಿ, ಶಿಲ್ಪ, ಚಿತ್ರ, ಸಾಹಿತ್ಯ ಮತ್ತು ಜಾನಪದ ಮುಂತಾದ ಹಲವಾರು ವಿವರಗಳೊಂದಿಗೆ ಕ್ಷೇತ್ರಸಾಹಿತ್ಯ, ಲಲಿತ ಪ್ರಬಂಧ, ಜೀವನ ಚರಿತ್ರೆ, ಆತ್ಮಕಥೆ, ವಿಚಾರ ಹಾಗೂ ಪತ್ರ ಸಾಹಿತ್ಯಗಳು, ನಾಟಕ, ವಿಮರ್ಶೆ, ಸಣ್ಣಕತೆ ಮೊದಲಾದ ಸ್ಪರ್ಶವನ್ನು ಪಡೆದುಕೊಳ್ಳುತ್ತದೆ. ದೃಶ್ಯ ಮಾಧ್ಯಮಗಳಾದ ಕಥೆ, ಕಾದಂಬರಿ, ನಾಟಕ ಇತ್ಯಾದಿಗಳಂತೆ ಹೊಸ ಹೊಸ ಸಂಗತಿಗಳ ರಸದೌತಣ ಶೈಲಿಯ ನಿರೂಪಣೆಯಲ್ಲಿ ಔಚಿತ್ಯವನ್ನು, ಕುಶಲತೆಯನ್ನು, ತಂತ್ರಗಾರಿಕೆಯನ್ನು ಮೆರೆಯುತ್ತಾನೆ. ಹಾಗಾಗಿ ಪ್ರವಾಸ ಸಾಹಿತ್ಯ ಅತ್ಯಂತ ಸಂಕೀರ್ಣವಾದ ಸಾಹಿತ್ಯ ಪ್ರಕಾರವೆನ್ನುತ್ತಾರೆ.

ಪ್ರವಾಸ ಸಾಹಿತ್ಯದ ಪೂರ್ವಾಪರಗಳನ್ನು ಅವಲೋಕಿಸಿದರೆ ಉಳಿದ ಸಾಹಿತ್ಯ ಪ್ರಕಾರಗಳಿಗೆ ದೊರಕಿರುವಂತೆ 1980ರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ 'ಅಮೇರಿಕಾದಲ್ಲಿ ಗೊರೂರು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಮತ್ತು ಚಂದ್ರಭಾಗಾದೇವಿಯವರ 'ಗೆಜ್ಜೆಯ ಹೆಜ್ಜೆ ನುಡಿ', ಎ.ಎನ್. ಮೂರ್ತಿರಾಯರ 'ಅಪರವಯಸ್ಕನ ಅಮೇರಿಕಾಯಾತ್ರೆ', ರಂಜನಭಟ್ಟರ 'ಕುಬೇರ ರಾಜ್ಯದ

ಚಿತ್ರ–ವಿಚಿತ್ರ ಮೊದಲಾದ ಅಗಣಿತ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಸಂದಿವೆ. ಇದು ಪ್ರವಾಸ ಸಾಹಿತ್ಯ ಶುದ್ಧ ಸೃಜನಶೀಲ ಸಾಹಿತ್ಯ ಪ್ರಕಾರ ಎಂಬುದಕ್ಕೆ ನಿದರ್ಶನವಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

ಪ್ರವಾಸ ಸಾಹಿತ್ಯವು ರಚನಾತ್ಮಕವಾಗಿ 1) ಪ್ರವಾಸಿ (ಕೃತಿಕಾರ) ಮತ್ತು ಆತನ ಸಿದ್ಧಾಂತಗಳು 2) ದೇಶ (ಪರಸ್ಥಳ) 3) ಕಾಲ ಘಟ್ಟ 4) ಆಕೃತಿಗಳ ಸಂಯೋಜನಾ ಸ್ವರೂಪದಂತಿದೆ.

ಬಿ.ಎ. ವಿವೇಕ ರೈ ತಮ್ಮ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಎಂಬ ಲೇಖನದಲ್ಲಿ ಕೃತಿಕಾರ ಅಥವಾ ಪ್ರವಾಸಿ ಕುರಿತು ಹೇಳುವ ಸಂದರ್ಭದಲ್ಲಿ 'ಹೋದ ಪುಟ್ಟ; ಬಂದ ಪುಟ್ಟ' ಮತ್ತು 'ಅಣ್ಣಪ್ಪ ದಂಡಿಗೆ ಹೋದರೂ ಒಂದೆ; ಮನೆಯಲ್ಲಿದ್ದರೂ ಒಂದೇ ಎಂಬ ಗಾದೆಗಳಂತೆ ಸಾಹಿತ್ಯ, ವಿಜ್ಞಾನ, ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮುಂತಾದ ರಂಗಳಿಂದ ಪ್ರವಾಸಕ್ಕೆ ಹೊರಟರೆ, ಅದರ ಮತ್ತು ಅವರ ಪ್ರಭಾವ ಪರರ ಮೇಲಾಗುವುದಿಲ್ಲ. ಅದರ ಬದಲು ಪ್ರತಿಭಾದೀಪ್ತನೂ, ಸಮರ್ಥನೂ, ಪ್ರಾಮಾಣಿಕನೂ, ರಾಷ್ಟ್ರಾಭಿಮಾನಿಗಳಾದ ವ್ಯಕ್ತಿಗಳ ದೇಶ–ವಿದೇಶಗಳ ಸಂಚಾರದಿಂದ ನಾಡಿಗಾಗುವ ಅತ್ಯಮೂಲ್ಯ ಪ್ರಯೋಜನವೇ ಪ್ರವಾಸ ಕಥನವೆಂದಿದ್ದಾರೆ. "ಡಾ; ಅನುಪಮಾ ನಿರಂಜನರವರು ಪ್ರವಾಸ ಸಾಹಿತ್ಯ ಧನ್ಯತೆಯ ಕ್ಷಣಗಳು ಎಂಬ ಲೇಖನದಲ್ಲಿ ಸೃಜನಾತ್ಮಕ ಲೇಖಕ ಅಥವಾ ಲೇಖಕಿ ಪ್ರವಾಸಕ್ಕೆ ಹೋದರೆ ನಿಜವಾದ ಅರ್ಥದಲ್ಲಿ ಪ್ರವಾಸ ಕಥನ ಬರುತ್ತೆ" ಎನ್ನುತ್ತಾರೆ. ಹಾಗೆಯೇ "ಡಾ. ವಿ.ಕೃ. ಗೋಕಾಕ್ ರವರು ಹೇಳುವಂತೆ 'ಪ್ರವಾಸ ಸಾಹಿತಿಯು ತಾನು ಕಂಡ ಜಗತ್ತನ್ನೆಲ್ಲ ಸ್ಪಷ್ಟವಾಗುಂತೆ ತನ್ನ ಶಬ್ದ ಚಿತ್ರಗಳಲ್ಲಿ ಮೂಡಿಸಬೇಕು ಸ್ವಂತದ ದೃಷ್ಟಿಯು ಆ ನವೀನ ಸೃಷ್ಟಿಯ ಮೇಲೆ ಆರೋಪಿಸಿದ ರೀತಿ ಎಲ್ಲೆಡೆ ಸ್ಫುಟವಾಗಿರಬೇಕು. ಇದು ಸಾಧಿಸಿದಲ್ಲಿ ರಸಾನುಭವ, ಮನೋರಂಜನೆ, ಉಪಯುಕ್ತತೆ ಮೊದಲಾದ ಗುರಿಗಳೆಲ್ಲಾ ಸಫಲವಾಗುವುವು." ಎಂದು ಹೇಳುತ್ತಾರೆ. ಡಾ॥ಎಸ್. ವಿದ್ಯಾಶಂಕರ್‌ರವರು ಅಭಿಪ್ರಾಯ ಪಡುವಂತೆ 'ತನ್ನ ಅನುಭವದ ರಸಯಾತ್ರೆಯಲ್ಲಿ ಓದುಗನನ್ನು ಲೀನವಾಗಿಸುವ ಶಕ್ತಿ ಪ್ರವಾಸ ಸಾಹಿತಿಯಲ್ಲಿರಬೇಕು ಎನುತ್ತಾರೆ. "ಯಾತ್ರೆಗೆ ಹೋದರೆ ಪಾತ್ರೆ ತರಬೇಕು ತಾಪತ್ರಯ ಮರೆಯಬೇಕೆಂಬ ಜಾಣ್ನುಡಿಯಂತೆ ಪಾತ್ರೆ ಜೀವಂತ ಅನುಭವ ಕೋಶದ ವಿಸ್ತಾರವನ್ನು ಸಾರಿದರೆ, ತಾಪತ್ರಯ ಮನುಷ್ಯನ ಹೀನ ಗುಣಗಳನ್ನು ಮರೆತು ಬರಬೇಕೆನ್ನುವ ವಿಚಾರವನ್ನು ಸ್ಪಷ್ಟಪಡಿಸುತ್ತದೆ.

ಕನ್ನಡ ಪ್ರವಾಸ ಸಾಹಿತ್ಯದ ಕ್ರಮಬದ್ಧ ಅಧ್ಯಯನಕ್ಕಾಗಿ ಮತ್ತು ಪ್ರವಾಸ ಸ್ಥಳ ಅಥವಾ ದೇಶಕ್ಕನುಗುಣವಾಗಿ

1) **ಸ್ವದೇಶ ಕಥನ**

ಅ) ಸ್ವರಾಜ್ಯ ಕಥನ ಅಥವಾ ಕರ್ನಾಟಕ ಕಥನಗಳು

ಆ) ಅನ್ಯರಾಜ್ಯ ಕಥನ

2) **ವಿದೇಶ ಕಥನ**

ಅ) ಏಷ್ಯಾ ಕಥನಗಳು

ಆ) ಉತ್ತರ ಅಮೆರಿಕಾ ಕಥನಗಳು

ಇ) ದಕ್ಷಿಣ ಅಮೆರಿಕಾ ಕಥನಗಳು

ಈ) ಯೂರೋಪ್ ಕಥನಗಳು

ಉ) ಆಫ್ರಿಕಾ ಕಥನಗಳು

ಊ) ಆಸ್ಟ್ರೇಲಿಯಾ ಕಥನಗಳು

ಎಂದು ಭಾರತಕ್ಕೆ ಪೂರಕವಾಗಿ ವಿಂಗಡಿಸಬಹುದೆಂದು ಡಾ॥ಕೆ. ಅನಂತರಾಮುರವರು ಪ್ರವಾಸ ಸಾಹಿತ್ಯ (ಧವಳಶ್ರೀ ಪುಟ 227)ಸಂಪಾದನಾ ಕೃತಿಯಲ್ಲಿ ಸೂಚಿಸಿದ್ದಾರೆ.

ಪ್ರವಾಸ ಸಾಹಿತ್ಯದ ಮೂರನೇ ಅಂಶವೇ ಕಾಲಘಟ್ಟ:– ಪ್ರತಿ ಪ್ರವಾಸ ಸಾಹಿತ್ಯವು ನಿಶ್ಚಿತ ಕಾಲದ ಪ್ರತಿನಿಧಿಯಾಗಿರುತ್ತದೆ. ಕೆಲವರು ಭಕ್ತಿಯಿಂದ ತೀರ್ಥಯಾತ್ರೆ ಮಾಡಿದರೆ ಮತ್ತೇ ಕೆಲವರು ಐತಿಹಾಸಿಕ, ಸಾಮಾಜಿಕ, ರಾಜಕೀಯ ಮೊದಲಾದ ಪ್ರವಾಸಾನುಭವಗಳ ವಿಶ್ಲೇಷಣೆಯಲ್ಲಿ ಕಾಲದ ಪ್ರತಿನೀಧಿಕರಣ ಕಂಡುಬರುತ್ತದೆ. ವಚನ ಸಾಹಿತ್ಯದಲ್ಲಿ ಶರಣೆಯರು ಪ್ರವಾಸ ಮಾಡಿದ ಕುರುಹುಗಳಿವೆ. ಹನ್ನೆರಡನೇ ಶತಮಾನದ ಅಕ್ಕಮಹಾದೇವಿಯಂತೂ 'ಹಸಿವದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ–ಹಳ್ಳ–ಬಾವಿಗಳುಂಟು, ಶಯನಕ್ಕೆ ಪಾಳು ದೇಗುಲವುಂಟು, ಆತ್ಮ ಸಂಗಾತವೆನ್ನ ಚೆನ್ನಮಲ್ಲಿಕಾರ್ಜುನ

ನೆನಗುಂಟು ಎಂದು ನಿರ್ಭೀತಿಯಿಂದ ಸಾರಿರುವ ಸಾಕ್ಷಿಯುಂಟು. ಕಾಶ್ಮೀರದಿಂದ ಕಲ್ಯಾಣದ ವರೆಗೆ ರಾಜಕುಮಾರಿ 'ಬೊಂತಾದೇವಿ'ಯ ಬಿಡಾಡಿ ವಚನವಾದ 'ಅಂತು ಇಂತು ಎಂತೆನ ಬೇಡ, ಬಯಲು ಎಲ್ಲೆಲ್ಲೂ ಒಂದೇ ಎಂದು ಸಾರುತ್ತಾ ಸಾಗಿದ ನಿದರ್ಶನಗಳು ಕಾಲಘಟ್ಟದಲ್ಲಿ ಅಂತರ್ಗತವಾಗಿರುವ ಮಾಹಿತಿಗಳಿದ್ದರೂ ಮೊದಲೆಲ್ಲಾ ಮಹಿಳೆಯರೊಬ್ಬೊಬ್ಬರೇ ಪ್ರವಾಸ ಮಾಡಿರುವುದು ವಿರಳ. ಆದರೆ, ಕಾಲ ಕ್ರಮೇಣ ಶಿಕ್ಷಣದ ಪ್ರಭಾವದಿಂದಾಗಿ ಆರ್ಥಿಕವಾಗಿ ಸಬಲರು, ಸದೃಢರು ಆದಂಥ ಸಾಕಷ್ಟು ಮಹಿಳೆಯರು ಏಕಾಂಗಿಯಾಗಿ, ಕುಟುಂಬ ಸಮೇತರಾಗಿ ಪ್ರವಾಸ ಕೈಗೊಳ್ಳುತ್ತಿದ್ದಾರೆ[18].

ಪ್ರತಿಯೊಂದು ಸಾಹಿತ್ಯ ಪ್ರಕಾರಕ್ಕೂ ಅತ್ಯಾವಶಕವಾದದ್ದು 'ಆಕೃತಿ'. ಇದು ಲಿಖಿತ ಸ್ವರೂಪದಲ್ಲಿರುತ್ತದೆ. ಭೌಗೋಳಿಕ ಐಕ್ಯವಿರುವ ಒಬ್ಬನೇ ಲೇಖಕ ರಚಿಸಿರುವ ಪ್ರವಾಸದ ಬಿಡಿ ಬಿಡಿ ಬರಹಗಳನ್ನು ಕ್ರೂಡೀಕರಿಸಿ ಕೃತಿ ಸ್ವರೂಪದಲ್ಲಿದ್ದರೆ ಪ್ರವಾಸ ಕಥನ ಎನ್ನಲು ಅಡ್ಡಿಯಿಲ್ಲವೆಂಬುದು ವಿಚಾರವಾದಿಗಳ ಅಭಿಪ್ರಾಯವಾಗಿದೆ. 'ಗುಂಡ್ಮಿ ಚಂದ್ರಶೇಖರ ಐತಾಳರು ಪ್ರತ್ಯೇಕವಾಗಿ ಮಾಡಿದ ಪ್ರವಾಸದ ಕಾಲಗಳನ್ನು ಕುರಿತು ಹದಿಮೂರು ಲೇಖನಗಳನ್ನು 'ಸೌಂದರ್ಯದ ಸಾನ್ನಿಧ್ಯ' ಎಂಬ ಕೃತಿಯಲ್ಲಿ ಪ್ರಕಟಿಸಿರುವರು. ಸಿಂಪಿಲಿಂಗಣ್ಣನವರ ಗದ್ಯ ಪದ್ಯ ಮಿಶ್ರಿತವಾದ ವಚನ ಶೈಲಿಯ 'ಸನ್ಯಾಸಿ ದಿಬ್ಬ' ಎಂಬ ಪ್ರವಾಸ ಕೃತಿ ಕಥನ ಶರೀರರಹಿತವಾಗಿರುವುದರಿಂದ ಲಲಿತ ಪ್ರಬಂಧವೆಂದು ಡಾ॥ಕೆ. ಅನಂತರಾಮುರವರು ಸೂಕ್ತವಾಗಿ ಹೇಳಿದ್ದಾರೆ.

ಯಾವುದಾದರೂ ಗ್ರಾಮ, ಪುಣ್ಯಕ್ಷೇತ್ರ, ಪ್ರೇಕ್ಷಣೀಯ ಸ್ಥಳಗಳ ಹಾಗೂ ಐತಿಹಾಸಿಕ ಮೌಲ್ಯಗಳ ತಾಣಗಳನ್ನು ನಿರೂಪಿಸುವುದಕ್ಕೆ ಕ್ಷೇತ್ರ ಸಾಹಿತ್ಯ ಎನ್ನುವರು. ಕ್ಷೇತ್ರ ಸಾಹಿತ್ಯಕ್ಕೂ ಪ್ರವಾಸ ಸಾಹಿತ್ಯಕ್ಕೂ ಪರಸ್ಪರ ಸಂಬಂಧಗಳಿದ್ದರೂ, 'ನಾನು' ಎಂಬ ಆತ್ಮಪ್ರತ್ಯಯರಹಿತವಾಗಿರುವುದರಿಂದ ಮತ್ತು ಸಾಹಿತ್ಯ ಗುಣ ಅತ್ಯಲ್ಪವಾದುದರಿಂದ ಕ್ಷೇತ್ರ ಸಾಹಿತ್ಯ ಪ್ರವಾಸ ಸಾಹಿತ್ಯ ಆಗುವುದಿಲ್ಲ ಎಂಬುದು ವಿಮರ್ಶಕರ ಅಭಿಪ್ರಾಯ. ಪ್ರವಾಸ ಸಾಹಿತ್ಯದ ಅಗ್ರಗಣ್ಯರಾದ ವಿ.ಕೃ. ಗೋಕಾಕರ ಪ್ರಕಾರ ಪ್ರವಾಸ ಕಥನಗಳು ಗದ್ಯ, ಕಾವ್ಯ, ಕವನಗಳ ಮಾದರಿಯನ್ನು ಒಳಗೊಂಡಿರಬಹುದೆನ್ನುತ್ತಾ, 'ಉಗಮ ಕಾಶ್ಮೀರ, ಇಂದಿಲ್ಲ ನಾಳೆ' ಮೊದಲಾದವು ಕಾವ್ಯಾತ್ಮಕ ಪ್ರವಾಸ ಕೃತಿಗಳೆಂದು, 'ಸಮಗ್ರ ವಾಙ್ಮಯ' ಸಂಕಲನದಲ್ಲಿನ ಸಿಮ್ಲಾ ಸಿಂಪೋನಿ ಪ್ರಥಮತಃ ಕವಿತೆಗಳಾಗಿದ್ದು ಅನಂತರ ಪ್ರವಾಸ ಸಾಹಿತ್ಯವೆಂದು ಹೇಳಿದ್ದಾರೆ. ಪದ್ಯರೂಪದ ಕೃತಿಗಳನ್ನು ಗಾತ್ರಾನುಸಾರ ಭಾವಗೀತೆಯೆಂದೂ, ಖಂಡ ಕಾವ್ಯವೆಂದೂ ಪರಿಗಣಿಸಿ; ಗದ್ಯ ಕಥನಗಳನ್ನು

ಮಾತ್ರವೆ ಪ್ರವಾಸ ಕಥನಗಳ ಸಾಲಿನಲ್ಲಿ ವಿಮರ್ಶಿಸಬೇಕು ಎನ್ನುವುದು ಹಲವಾರು ಲೇಖಕರ ಸೂಚನೆಯಾಗಿದೆ. ಎಸ್.ವಿ. ಕೃಷ್ಣಮೂರ್ತಿರಾಯರ 'ದಿಲ್ಲಿಯ ಪತ್ರಗಳು', ಕೊ. ಚೆನ್ನಬಸಪ್ಪನವರ 'ದಕ್ಷಿಣೇಶ್ವರ ದರ್ಶನ', ವಿ.ನಾ. ಅವರ ಯಾತ್ರಿಕನ ಪತ್ರಗಳು', ಎಚ್.ಜಿ. ಜೋಶಿಯವರ 'ಶಿಲಾ ಹೃದಯ', ನವರತ್ನರಾಂರವರ 'ಪ್ಯಾರಿಸಿನಿಂದ ಪ್ರೇಯಸಿಗೆ', ಕೆ.ಆರ್. ಕಾರಂತರ 'ಪ್ರವಾಸಿಯ ಪತ್ರಗಳು' ಮೊದಲಾದವು ಪತ್ರ ರೂಪದಲ್ಲೂ ಅನೇಕ ಪ್ರವಾಸ ಸಾಹಿತ್ಯಗಳಿರುವುದುಂಟು ಎಂಬುದಕ್ಕೆ ಸಾಕ್ಷಿಯಾಗಿವೆ. ಅಷ್ಟೆ ಅಲ್ಲದೆ ವೀ.ಪೆ. ಹಿತ್ತಲಮನಿ ಅವರ 'ಶರಾವತಿಯಿಂದ ಸಾಬರಮತಿ' ಎಂಬ ಕೃತಿಯು ಕೃಷಿ ಅಥವಾ ಒಕ್ಕಲುತನದ ಪ್ರವಾಸ ಕಥನವಾಗಿದೆ.

## 4. ಪ್ರವಾಸದ ಪರಿಕಲ್ಪನೆ ಅಥವಾ ನಿರ್ವಚನಗಳು

ಭಾರತೀಯರಲ್ಲಿ ಮೊದಲಿಗೆ ಪ್ರವಾಸದ ಕಲ್ಪನೆ ಈಗಿನ ಕಲ್ಪನೆಗಿಂತ ವಿಭಿನ್ನವಾಗಿತ್ತು. ಈ ಪ್ರವಾಸ ಎಂಬ ಪದವಾಗಲಿ ಅಥವಾ ಇದರ ಪ್ರಚಲಿತವಾಗಲಿ ಆಧುನಿಕವಾದದ್ದು. ಭಾರತೀಯರು ಪ್ರಾಚೀನ ಕಾಲದಲ್ಲಿ ತಾವಿದ್ದ ಮತ್ತು ತಮಗೆ ಪರಿಚಿತವಾದ ಸ್ಥಳಗಳ, ನೆರೆ-ಹೊರೆಯ, ಪರುಸೆ ಜಾತ್ರೆಗಳಿಗೆ ಹೋಗುತ್ತಿದ್ದರು. ಕಾಲ ಕ್ರಮೇಣ ಈ ಜಾತ್ರೆಯೇ ಯಾತ್ರೆಯಾಗಿ ಮಾರ್ಪಟ್ಟಿತ್ತು. ಸಂಸ್ಕೃತ ಪದ 'ಯಾತ್ರೆ'ಯ ತದ್ಭವ ರೂಪವೇ ಕನ್ನಡದ ಜಾತ್ರೆ. ಕಾಲ ಬದಲಾಗುತ್ತಿದಂತೆ ಮನುಷ್ಯನ ಆಸೆಯೂ ಹೆಚ್ಚಾಯಿತು. ಮನುಷ್ಯ ಹುಟ್ಟಿನಿಂದಲೇ ಸ್ವಾತಂತ್ರ ಪ್ರೇಮಿ. ಆದ್ದರಿಂದ ಅವನು ಈ ಬಂಧನದಿಂದ ಬಿಡುಗಡೆ ಹೊಂದಲು, ಹುಟ್ಟು-ಸಾವು ಹಾಗೂ ಸಂಸಾರದಿಂದ ಮುಕ್ತನಾಗಲು ಮತ್ತು ಈ ಭವಸಾಗರದಿಂದ ದೂರ ಸರಿಯಲು ಮನುಷ್ಯ ಅದಕ್ಕೊಪ್ಪುವ ಸಾಧನೆ ಮಾಡುತ್ತಾನೆ. ಆ ಸಾಧನೆಯ ಪ್ರಯತ್ನವೇ ಯಾತ್ರೆಯಾಗಿದೆ. ಪ್ರಾಚೀನ ಭಾರತೀಯರು ಅಕ್ಕ ಪಕ್ಕದ ಊರು ಮತ್ತು ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳಿಗೆ ಭೇಟಿ ನೀಡುತ್ತಿದ್ದವರು ಸ್ವಲ್ಪ ದೂರದೂರದ ದಿವ್ಯ ಮತ್ತು ಪ್ರಸಿದ್ಧ ಕ್ಷೇತ್ರಗಳಿಗೆ ಪ್ರಯಾಣ ಬೆಳೆಸಿದುದೇ 'ಯಾತ್ರೆ'ಯಾಯಿತು. ಪುಣ್ಯಸಂಪಾದನೆಗಾಗಿ, ಸಂಸ್ಕಾರ ಸಂವರ್ಧನೆಗಾಗಿ, ಚಿತ್ತಶುದ್ಧಿಗಾಗಿ ಪುಣ್ಯಕ್ಷೇತ್ರಗಳಿಗೆ ಹೋಗುತ್ತಿದ್ದರು. ಆ ಕಾಲದಲ್ಲಿ ದಿವ್ಯ ಹಾಗೂ ಧಾರ್ಮಿಕ ಕ್ಷೇತ್ರಗಳನ್ನು ವೀಕ್ಷಿಸಿಕೊಂಡು ಬರಲು ವಿಶೇಷವಾದ ಸೌಲಭ್ಯಗಳೇನು ಇರಲಿಲ್ಲವಾದ್ದರಿಂದ ಕಾಲ್ನಡಗೆಯಲ್ಲೇ ಯಾತ್ರೆ ಮಾಡುತ್ತಿದ್ದರು. ಇದು ಪ್ರಯಾಸವಾದರೂ 'ಕಾಲಿಗೆ ಭೂಷಣ ಹರಿಯಾತ್ರೆಯು' ಎಂದು ದೂರದ ಕಾಶಿ, ರಾಮೇಶ್ವರ, ಹರಿದ್ವಾರ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸುತ್ತಿದ್ದರು. ಇದು ಹೆಚ್ಚು ಹೆಚ್ಚು ಪ್ರಚಲಿತವಾಗುತ್ತಾ,

ಇಂತಹ ಕ್ಷೇತ್ರಗಳನ್ನು 'ಪವಿತ್ರ ಕ್ಷೇತ್ರಗಳು, ಪುಣ್ಯ ಕ್ಷೇತ್ರಗಳು, ದಿವ್ಯ ಕ್ಷೇತ್ರಗಳು ಇತ್ಯಾದಿಯಾಗಿ ಪ್ರಸಿದ್ಧವಾದವುಗಳ 'ಯಾತ್ರೆ' ಆಯಿತು.

ಪ್ರಾಚೀನ ಭಾರತೀಯರ ಯಾತ್ರೆ ಪ್ರಮುಖ ಉದ್ದೇಶ ಧಾರ್ಮಿಕ ಕ್ಷೇತ್ರಗಳ ವೀಕ್ಷಣೆಯಾದ್ದರಿಂದ ಅವರ ಯಾತ್ರೆ 'ತೀರ್ಥಯಾತ್ರೆ' ಎಂದು ಪ್ರಖ್ಯಾತವಾಯಿತು. ಸನ್ಯಾಸಿಗಳು, ಭಾಗವತರಂತೂ ತೀರ್ಥಯಾತ್ರೆಯನ್ನು ತಮ್ಮ ಅಧ್ಯಾತ್ಮ ಸಾಧನೆಯ ಒಂದಂಗವಾಗಿ ಮಾಡಿಕೊಂಡಿದ್ದರು. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮೊದಲಾದ ಯತಿಶ್ರೇಷ್ಠರು ಭರತ ಭೂಮಿಯನ್ನೆಲ್ಲ ಕಾಲ್ನಡಗೆಯಲ್ಲಿಯೇ ಸುತ್ತಾಡಿ, ಧರ್ಮ ಪ್ರಸಾರ ಮಾಡಿದ ನಿದರ್ಶನಗಳಿವೆ. ಮಧ್ವಾಚಾರ್ಯರ ಪರಂಪರೆಗೆ ಸೇರಿದ ವಾದಿರಾಜ ಸ್ವಾಮಿಗಳು ತಾವು ಕೈಗೊಂಡ ತೀರ್ಥಯಾತ್ರೆಯ ಕೆಲವು ವಿವರಗಳನ್ನು ಕ್ಷೇತ್ರ ದೇವತೆಗಳ ಸ್ತುತಿರೂಪದಲ್ಲಿ ಬರೆದಿಟ್ಟಿರುವುದು ಉಲ್ಲೇಖನೀಯವಾದ ಸಂಗತಿ. ಇವರು ಸಂಸ್ಕೃತ ಭಾಷೆಯಲ್ಲಿ 'ತೀರ್ಥಯಾತ್ರೆ' ಎಂಬ ಪದ್ಯ ಕೃತಿಯೊಂದನ್ನು ರಚಿಸಿದ್ದಾರೆ. ಇದು ಕನ್ನಡದಲ್ಲಿ ಅನುವಾದವಾಗಿ ಪ್ರಕಟಗೊಂಡಿದೆ. ಇದು ಇಂದಿನ ದೃಷ್ಟಿಯಲ್ಲಿ ಪ್ರವಾಸ ಕಥನವಲ್ಲವಾದರೂ ಬಹಳ ಹಿಂದೆಯೇ ಅಂತಹ ಪ್ರಕಾರವೊಂದಕ್ಕೆ ಅಂಕುರಾರ್ಪಣವಾಯಿತೆಂದು ಕೆಲವರ ಅಭಿಪ್ರಾಯವಾಗಿದೆ.

**ಪ್ರವಾಸದ ಪರಿಕಲ್ಪನೆಗಳನ್ನು ಮೂರು ರೀತಿಯ ದೃಷ್ಟಿಕೋನಗಳಲ್ಲಿ ಅಥವಾ ಅಭಿಪ್ರಾಯಗಳಲ್ಲಿ ಪರಿಗಣಿಸಬಹುದು.**

1. ಭಾರತೀಯರ ದೃಷ್ಟಿಕೋನ ಅಥವಾ ಅಭಿಪ್ರಾಯಗಳು
2. ಪಾಶ್ಚಾತ್ಯರ ದೃಷ್ಟಿಕೋನ ಅಥವಾ ಅಭಿಪ್ರಾಯಗಳು

ಕನ್ನಡ ವಿದ್ವಾಂಸರ ದೃಷ್ಟಿಕೋನ ಅಥವಾ ಅಭಿಪ್ರಾಯಗಳು ಭಾರತೀಯರ ದೃಷ್ಟಿಕೋನ ಅಥವಾ ಅಭಿಪ್ರಾಯಗಳು: ಸಾ.ಶಿ. ಮರುಳಯ್ಯನವರು ತಮ್ಮ ಲೇಖನದಲ್ಲಿ ಭಾರತೀಯರ ಅಭಿಪ್ರಾಯ ಕುರಿತು ಹೀಗೆ ಉಲ್ಲೇಖಿಸಿದ್ದಾರೆ; "ನಮ್ಮ ಪ್ರವಾಸ ಪಾಶ್ಚಾತ್ಯರ ಪ್ರವಾಸದಂತಹ ಬಹಿರಂಗ ಪ್ರದರ್ಶನದ ಪ್ರಗತಿ ಸೂಚಕವಲ್ಲ; ಅಂತರಂಗದ ವಿಕಾಸದ್ಯೋತಕ. ಆತ್ಮ ಪರಮಾತ್ಮನೆಡೆಗೆ ಹೊರಟ ಅನಂತ ಯಾತ್ರೆ. ಅವರು 'invader' ಆದರೆ, ನಮ್ಮವರು ಕೇವಲ ಜೈತ್ರಯಾತ್ರಿಗಳು ಇಲ್ಲವೇ ತೀರ್ಥಯಾತ್ರಿಗಳು. ಅವರದು ಕೇವಲ ಇಹದ ಸಾಧನೆಯಾದರೆ, ನಮ್ಮವರದು ಪರದ ಸಿದ್ಧಿಯೂ ಹೌದು. ಅವರದು

ಛಲ ಬಲಗಳಾದರೆ, ಇವರದು ತಪಶೀಲಗಳ ಸದ್ಗುಣ ಶ್ರೀಕರವಾದುದು. ಅವರದು ಲೌಕಿಕದ ಶ್ರೇಯಸ್ಸು, ಇವರದು ಅಲೌಕಿಕದ ಶ್ರೇಯಸ್ಸು."[19]ಈ ಅಭಿಪ್ರಾಯವನ್ನು ಸಂಪೂರ್ಣ ಒಪ್ಪಲಾಗುವುದಿಲ್ಲ. ಏಕೆಂದರೆ, ಪಾಶ್ಚಾತ್ಯರ ಪ್ರವಾಸ ಬಹಿರಂಗ ಪ್ರದರ್ಶನದ ಸೂಚಕ ಎಂದಿರುವುದು ಅಷ್ಟು ಸಮಂಜಸವಲ್ಲ. ಇದು ಸ್ವಲ್ಪ ಗೊಂದಲವಾಗಿದೆ. ಏಕೆಂದರೆ, ಅವರೆ ತಮ್ಮದೇ ಲೇಖನದಲ್ಲಿ "ವೈಜ್ಞಾನಿಕ ಸಂಶೋಧನೆ ಹಾಗೂ ನೂತನ ಆವಿಷ್ಕಾರಗಳ ಜೊತೆಗೆ ಪೃಥ್ವಿಯ ಪ್ರದೇಶಗಳನ್ನೂ, ನೂತನ ಖಂಡಗಳನ್ನೂ ಪತ್ತೆ ಹಚ್ಚಿ ತಮ್ಮ ವಿಜಯಪತಾಕೆಯನ್ನು ಎತ್ತಿಹಿಡಿಯಲು ಸತತವಾಗಿ ಶ್ರಮಿಸಿದರು. ಅದರ ಫಲವಾಗಿ ಅಮೇರಿಕದ ಶೋಧನೆಯಾಯಿತು ಮತ್ತು ಷೇಕ್ಸಪಿಯರ್‌ನ 'ಟೆಂಪೆಸ್ಟ್' ನಾಟಕ ರಚಿತವಾಯಿತೆಂದು ಹಾಗೂ ಇನ್ನೂ ಮುಂತಾದುವನ್ನು ಗುರುತಿಸಿದ್ದಾರೆ. ಆದರೆ ಮೇಲಿನ ವಾಕ್ಯವೃಂದದಲ್ಲಿ ಪ್ರವಾಸ ಅವರ ಪ್ರತಿಷ್ಠೆಯ ವಿಷಯವಾಗಿತ್ತು ಎಂಬರ್ಥ ವ್ಯಕ್ತವಾಗುವಂತೆ ಸೂಚಿಸಿದ್ದಾರೆ. ಉಳಿದಂತೆ ಭಾರತೀಯರ ಕಲ್ಪನೆ ಕುರಿತಂತೆ ಸೂಚಿಸಿರುವುದು ಸಮಂಜಸವಾಗಿದೆ.

ಡಾ॥ಜಿ.ಎಸ್. ಶಿವರುದ್ರಪ್ಪನವರು ಪ್ರಾಚೀನ ಭಾರತೀಯರ ಆಕಾಂಕ್ಷೆ ಮತ್ತು ಮನಸ್ಥಿತಿಯನ್ನು ಕುರಿತು ಹೀಗೆ ಹೇಳುತ್ತಾರೆ: "ಪ್ರವಾಸ ಅನ್ನುವಂಥ ಒಂದು ಕಲ್ಪನೆ. Concept ಇದೆಯಲ್ಲ ಇದು ಭಾರತೀಯ ಮನೋಧರ್ಮಕ್ಕೆ ಆಧುನಿಕ ಅರ್ಥದಲ್ಲಿ ಹೊಂದುವಂಥದಲ್ಲ. ಏಕೆಂದರೆ; ಸುಮ್ಮನೆ ಸಂತೋಷಕ್ಕೋಸ್ಕರ ಸಂಚಾರ ಮಾಡುವುದು ಭಾರತೀಯ ಮನಸ್ಸಿಗೆ ಒಗ್ಗುವಂಥ ವಿಷಯ ಅಲ್ಲ. ಅದೇನಿದ್ದರೂ ತೀರ್ಥಯಾತ್ರೆಯನ್ನು ಇಷ್ಟಪಡವಂಥ ಮನಸ್ಸು ಅದು. ನಮ್ಮಲ್ಲಿ ಶುದ್ಧ ಪ್ರವಾಸ ಇಲ್ಲವೇ ಇಲ್ಲ. ಏನಿದ್ದರೂ ಪುಣ್ಯಕ್ಷೇತ್ರಗಳನ್ನು ಹುಡುಕಿಕೊಂಡು ಹೋಗಿ, ನದಿಗಳಲ್ಲಿ ಸ್ನಾನ ಮಾಡಿ, ಬೆಟ್ಟಗಳನ್ನು ಹತ್ತಿ, ಅಲ್ಲಿ ದೇವರ ದರ್ಶನ ಮಾಡಿಕೊಂಡು ಪಾಪ ಪರಿಹಾರ ಮತ್ತು ಪುಣ್ಯ ಸಂಪಾದನೆ ಇತ್ಯಾದಿಗಳಿಗೆ ಬದ್ಧವಾದ ಒಂದು ಸಂಚಾರವಾಗಿರತ್ತೆ ಹೊರತಾಗಿ ಆಧುನಿಕ ಅರ್ಥದ ಪ್ರವಾಸ ಅಂತ. ಏನು ಕರೀತೀವಿ ಆ ಕಲ್ಪನೆ ನಮ್ಮಲ್ಲಿ ಇಲ್ಲ. ಪ್ರವಾಸವನ್ನು ಕುರಿತು ಜ್ಞಾಪಿಸಿಕೊಂಡಾಗ ನನಗೆ ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ಗಣಪತಿಯನ್ನು ಕುರಿತು ಒಂದು ಕತೆ ಕೇಳಿರಬಹುದು. ಒಂದು ಸಲ ಷಣ್ಮುಖನಿಗೂ ಗಣಪತಿಗೂ ಒಂದು ಸ್ಪರ್ಧೆ ಏರ್ಪಟ್ಟ ವಿಷಯ ನಿಮಗೆ ಗೊತ್ತಿರಬಹುದು. ಪಾರ್ವತಿ ಹೇಳಿದಳಂತೆ "ಯಾರು ಬೇಗ ಜಗತ್ತನ್ನು ಸುತ್ಕೊಂಡು ಬರ್ತಾರೋ ಅವರಿಗೆ ಒಂದು ಬಹುಮಾನ ಅಂತ." ಷಣ್ಮುಖ ಇದ್ದಕ್ಕಿದ್ದ ಹಾಗೆ ಎದ್ದು ನವಿಲನ್ನು ಏರಿ ಜಗತ್ತನ್ನು ಸುತ್ತಿ ಬಂದನಂತೆ. ಎಷ್ಟು ಹೊತ್ತಾದರೂ ಗಣಪತಿ ಏಳಲೇ ಇಲ್ಲ. ಅಲ್ಲೇ ಕೂತಿದ್ದಾನೆ. ಕೊನೇಲೇನೋ ಸ್ವಲ್ಪ ಆಯಾಸವಾದಂತೆ

[illegible]

[illegible]

[illegible]

ಎದ್ದು ತಂದೆ ತಾಯಿಯರನ್ನು ಒಂದು ಸುತ್ತು ಹಾಕಿ ಕೂತುಬಿಟ್ಟನಂತೆ. ಭಾರತೀಯ ಮನೋಧರ್ಮ ಶುದ್ಧ ಗಣಪತಿ ಮನೋಧರ್ಮ! ನಮಗೆ 'ಸ್ವದೇಶೋ ಭುವನತ್ರಯಂ' ಅಷ್ಟೆ. ಈ ದೇಶವೇ ಮೂಲಭೂತ; ಇದರಾಚೆಗೇನಿದೆಯೋ ಇರಬಹುದು; ಅದು ಬೇಕಾಗಿಲ್ಲ. ಅನ್ನುವಂಥ ಕಲ್ಪನೆಯಲ್ಲಿ ನಮ್ಮ ಭಾರತೀಯರು ಬದುಕಿದ್ದು. ಇವತ್ತು 'ಸ್ವದೇಶೋ ಭುವನತ್ರಯಂ' ಅನ್ನುವ ಒಂದು ಮನೋಧರ್ಮದಿಂದ 'ಭುವನತ್ರಯವೇ ಸ್ವದೇಶ' ಎನ್ನುವ ಕಲ್ಪನೆ ನಮ್ಮಲ್ಲಿ ರೂಢಿಸಿಕೊಂಡಿದ್ದೇವೆ. ಹೀಗಾಗಿ ಸಂಚಾರ ಅನ್ನವುದು ನಿಜವಾಗಿಯೂ ಅರ್ಥಪೂರ್ಣವಾಗುವುದು; ಎರಡನೆಯ ನಿಲುವಿನಲ್ಲಿ. ಈ ಕಾರಣದಿಂದ ಒಂದು ಕಾಲಕ್ಕೆ ನಮ್ಮ ದೇಶದಲ್ಲಿ ನಾನು ಹೇಳಿದ ಹಾಗೆ ತೀರ್ಥಯಾತ್ರೆಯ ಹೊರತಾಗಿ ಹೊರದೇಶಕ್ಕೆ ಹೋಗುವ ಪದ್ಧತಿಯೇ ಇರಲಿಲ್ಲ. ವಿದೇಶಕ್ಕೆ ಹೋಗುವುದೇ ಒಂದು ಮಹಾಪರಾಧ. ಶಾಸ್ತ್ರಗಳ ಪ್ರಕಾರ, ಯಾರಾದರೂ ಪರದೇಶಕ್ಕೆ ಹೋದರೆ, ಸಮುದ್ರವನ್ನು ದಾಟಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತಿತ್ತು. ಇಂಥ ಕತೆಗಳು ಬೇಕಾದಷ್ಟಿವೆ. ಹೀಗೆ ವಿದೇಶಕ್ಕೆ ಹೋಗುವುದು ಒಂದು ಅಪರಾಧವೇ ಆಗಿತ್ತು. ಅದಕ್ಕಾಗಿ ಇಂಡಿಯಾ ದೇಶದ ಜನ ಯಾವತ್ತು ದಂಡಯಾತ್ರೆಗೆ ಹೋದವರೇ ಅಲ್ಲ. ಇಡೀ ನಮ್ಮ ಚರಿತ್ರೆಯಲ್ಲೇ ನಿರ್ಣಯಿಸಿರುವ ಅಂಶ ಅದು. ಇದ್ದಲ್ಲೇ ಕೂತಿರೋದು. ಬೇರೆ ದೇಶದವರೆಲ್ಲ ಇಲ್ಲಿ ಬಂದು ಕೊಳ್ಳೆ ಹೊಡೆದರೆ ಹೊರತಾಗಿ ಇಂಡಿಯಾ ದೇಶದ ಜನ ಇದನ್ನು ದಾಟಿ ಆ ಕಡೆ ಬೇರೆ ಬೇರೆ ದೇಶಗಳನ್ನು ಗೆಲ್ಲಬೇಕು ಅನ್ನುವ ಮಹತ್ತ್ವಾಕಾಂಕ್ಷೆ ನಮ್ಮವರಿಗೆ ಬರಲೇ ಇಲ್ಲ. ಅದಕ್ಕೂ ಬಹುಶಃ ಈ ಮನೋಭಾವವೇ ಕಾರಣ ಅಂತ ಕಾಣುತ್ತದೆ. ಹೀಗೆ ಪ್ರವಾಸ ವಿಚಾರದಲ್ಲಿ ಒಂದು ರೀತಿಯಲ್ಲಿ ಪುಣ್ಯ ಸಂಪಾದನೆ, ಆಧ್ಯಾತ್ಮಿಕವಾದ ಧಾರ್ಮಿಕವಾದ ಭಾವನೆಗಳಿದ್ದುವೇ ಹೊರತಾಗಿ ಪ್ರವಾಸ ಮಾಡುವುದರಿಂದ ಲಾಭ ಉಂಟು; ಅನುಭವದ ವಿಸ್ತರಣೆ ಉಂಟು; ಪ್ರಯೋಜನ ಉಂಟು ಅನ್ನುವ ಕಲ್ಪನೆ ಬಹುಶಃ ನಮ್ಮಲ್ಲಿ ಬೆಳೆದದ್ದು ಇತ್ತೀಚೆಗೆ."

ಅವರೆ ಇನ್ನೊಂದು ಕಡೆ ಭಾರತೀಯರ ಮನೋಧರ್ಮವನ್ನು ಹೀಗೆ ಗುರುತಿಸುತ್ತಾರೆ. "ನಮ್ಮ ಹಿಂದಿನವರದು ತೀರ್ಥಯಾತ್ರೆಯ ಒಂದು ಮನೋಧರ್ಮ ಎಂದರು– ಈಗ 'ತೀರ್ಥಯಾತ್ರೆ' ಎಂಬುದಕ್ಕೂ ಬೇರೆ ಅರ್ಥ ಬಂದು ಬಿಟ್ಟಿದೆ! ಈ ಅರ್ಥವನ್ನು ಬಿಟ್ಟು ನೋಡಿದರೆ ನಮ್ಮ ಹಿಂದಿನವರದು ತೀರ್ಥಯಾತ್ರೆಯ ಮನೋಧರ್ಮ, ಪ್ರವಾಸದ ಮನೋಧರ್ಮ ಅಲ್ಲ. ಅವರಿಗೆ ಪ್ರವಾಸದ ಪ್ರವೃತ್ತಿ ಇರಲೇ ಇಲ್ಲ ಎಂದು ಹೇಳುವ ಹಾಗಿಲ್ಲ. ಅದು ಆನುಷಂಗಿಕವಾಗಿತ್ತು ; ಗೌಣವಾಗಿತ್ತು ಅಷ್ಟೆ. ಅವರ ಪಾಲಿಗೆ ಅದೊಂದು ಧಾರ್ಮಿಕ ಕರ್ತವ್ಯವಾಗಿತ್ತು. ಜೊತೆಗೆ ಅವರ ಸೌಂದರ್ಯಪ್ರಜ್ಞೆಯೂ ಅವರಿಗರಿವಿಲ್ಲದೆ ಕೆಲಸ ಮಾಡುತ್ತಿತ್ತು.

ನಮ್ಮ ತೀರ್ಥಕ್ಷೇತ್ರಗಳೆಲ್ಲ ಇರುವುದು ಪ್ರಕೃತಿ ಸೌಂದರ್ಯದ ಮಡಿಲಲ್ಲಿ, ರಮಣೀಯವಾದ ಪರಿಸರದಲ್ಲಿ ಎಂಬುದನ್ನು ನಾವು ಮರೆಯಬಾರದು. ಸೌಂದರ್ಯಾಸ್ವಾದನೆಗೆಂದೇ ಅವರು ಪ್ರವಾಸ ಮಾಡದಿದ್ದರೂ ಪ್ರಕೃತಿ ಸೌಂದರ್ಯವನ್ನು ನೋಡಿ ಅವರು ಸಂತೋಷಪಡುತ್ತಿದ್ದರು. ಯಾತ್ರೆಯ ಆನಂದ ಪಡೆಯುತ್ತಿದ್ದರು. ಜೊತೆಗೆ ತೀರ್ಥಯಾತ್ರೆಯಿಂದ ಪುಣ್ಯ ಸಿಗುತ್ತದೆ, ಮೋಕ್ಷ ಸಿಗುತ್ತದೆ ಎಂಬ ನಂಬಿಕೆಯೂ ಇತ್ತು."[20] ರಾಷ್ಟ್ರಕವಿ ಡಾ||ಜಿ.ಎಸ್. ಶಿವರುದ್ರಪ್ಪನವರ ಹೇಳಿಕೆ ಸರ್ವಸಮ್ಮತವಾಗಬಹುದು. ಕಾರಣ, ಭಾರತೀಯರ ಪ್ರವಾಸದ ಅಗತ್ಯ ಹಾಗೂ ಪ್ರವಾಸ ಕೈಗೊಳ್ಳುವವರ ಭಿನ್ನ ಅಭಿರುಚಿಗಳ ಕಾರಣಗಳನ್ನು, ತೀರ್ಥಯಾತ್ರೆಯ ಬಗ್ಗೆ ಭಾರತೀಯರು ತಾಳಿದ್ದ ನಿಲುವುಗಳನ್ನು ಕಥೆಯ ಮೂಲಕ ಸರಳವಾಗಿ ಅರ್ಥೈಸಿದ್ದಾರೆ.

ಡಾ. ಸೀತಾ ಹನಸೋಗೆಯವರು ಪ್ರಾಚೀನ ಭಾರತೀಯರ ಪ್ರವಾಸದ ಪರಿಕಲ್ಪನೆಯ ಬಗ್ಗೆ ಹೀಗೆ ಹೇಳುತ್ತಾರೆ: "ಪ್ರಾಚೀನ ಭಾರತದಲ್ಲಿ ಜನ ಪ್ರವಾಸ ಕೈಗೊಳ್ಳುತ್ತಿದ್ದುದೇ ಅಪರೂಪ. ಒಂದು ವೇಳೆ ಪ್ರವಾಸ ಕೈಗೊಳ್ಳುತ್ತಿದ್ದರೂ ತಮ್ಮ ಜೀವನಸಂಧ್ಯೆಯಲ್ಲಿ, ಉತ್ಸಾಹದ ತಾರುಣ್ಯ ಕಳೆದ ಅನಂತರವೇ. ಹಾಗಾಗಿ ತೀರ್ಥಯತ್ರೆಯ ರೂಪದಲ್ಲಿ ಪ್ರವಾಸ ಆ ಕಾಲದಲ್ಲಿ ಪ್ರಚಲಿತವಾಗಿತ್ತು. ಇಂಥ ತೀರ್ಥಯಾತ್ರೆ ಕೂಡ ಕಾಶಿ, ರಾಮೇಶ್ವರ, ಹರಿದ್ವಾರವೇ ಮುಂತಾದ ದೈವಕ್ಷೇತ್ರಗಳ ಸಂದರ್ಶನಕ್ಕೆ ಮೀಸಲಾಗಿತ್ತು. ಎಂದರೆ ಭಾರತೀಯರ ಪ್ರವಾಸ ಹೆಚ್ಚು ಕಡಿಮೆ ಭಾರತೀಯ ನೆಲದಲ್ಲೇ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗುವ ಮಟ್ಟಿಗೆ ಸೀಮಿತವಾಗಿತ್ತು. ಇದಕ್ಕೆ ಕಾರಣ ಸಮುದ್ರಯಾನ ಮಾಡಿ ಸೀಮೆ ದಾಟುವುದನ್ನು ಆ ಕಾಲದ ಜನ ಹಾಗೂ ಧರ್ಮಗ್ರಂಥಗಳು ಒಪ್ಪಿರಲಿಲ್ಲ. ಒಂದು ವೇಳೆ ಹೀಗೆ ಮಾಡಿದರೆ ಇದ್ದದ್ದು ಮೆಚ್ಚುಗೆ ಪುರಸ್ಕಾರವಲ್ಲ; ಬಹಿಷ್ಕಾರದ ದಂಡನೆ! ಹೀಗಾಗಿ ದೇಶ ದಾಟುವ ಕಲ್ಪನೆ, ಪ್ರಯತ್ನಗಳು ನಮ್ಮಲ್ಲಿ ಇರಲೇ ಇಲ್ಲವೆನ್ನಬಹುದು. ಅದೂ ಹೋಗಲಿ ನಮ್ಮ ಭಾರತದಲ್ಲಿ ಸಾವಿರಾರು ಮೈಲು ದೂರವಿರುವ ರಾಜ್ಯಗಳನ್ನು ಕ್ರಮಿಸಿ ಸಂದರ್ಶಿಸಿದ ಪ್ರಾಚೀನ ಅನುಭವ ಕಥನಗಳನ್ನು ನಮ್ಮವರು ಬರೆದಿಟ್ಟಿಲ್ಲ. ಹೀಗಾಗಿ ಪ್ರವಾಸ ಸಾಹಿತ್ಯವೆಂಬ ಪ್ರಕಾರವೊಂದನ್ನು ಕಾಣಲು ಹೆಚ್ಚು ಕಡಿಮೆ ನಾವು ಆಧುನಿಕ ಯುಗಕ್ಕೆ ಬರಬೇಕಾಗುತ್ತದೆ"[21] ಎಂದಿದ್ದಾರೆ. ಇವರು ಸಹ ಪ್ರಾಚೀನ ಭಾರತೀಯರ ಪ್ರವಾಸದ ಅವಶ್ಯಕತೆಯ ಕಾಲ ಪ್ರವಾಸದ ಸ್ಥಿತಿಗತಿಯನ್ನು, ಪ್ರವಾಸಕ್ಕೆ ದೊರೆತ ಮನ್ನಣೆಯನ್ನು ಸಂಕ್ಷಿಪ್ತವಾಗಿ ಸೂಚಿಸಿದ್ದಾರೆ.

ಶ್ರೀ. ಬಾಲಗಂಗಾಧರನಾಥ ಸ್ವಾಮೀಜಿ:– ಈ ಅಮೇರಿಕವನ್ನು ನೋಡಿದಾಗ ಅಥವಾ ಬೇರೆ ದೇಶಗಳನ್ನು ನೋಡಿದಾಗ ಕೆಲವು ಹಿರಿಯರು "ಅಮೇರಿಕಾ ದೇಶ ಪೌರಾಣಿಕ ರೂಪದಲ್ಲಿ ಅದು ಪಾತಾಳ ಲೋಕ. ಪಾತಾಳ ಲೋಕದಲ್ಲಿ ಲಕ್ಷ್ಮಿ ವಾಸಿಸುತ್ತಾಳೆ ಎಂಬ ಕಲ್ಪನೆ."[22] ಭಾರತೀಯರಲ್ಲಿತ್ತು ಎಂದಿದ್ದಾರೆ. ಇವರು ಸ್ವಷ್ಟ ವಿವರಣೆ ನೀಡಿಲ್ಲ. ಬಹುಶಃ ಹಿಂದಿನ ಭಾರತೀಯರ ಕೆಲವು ಮೂಢನಂಬಿಕೆಗಳಾದ ಸಮುದ್ರ ದಾಟಬಾರದು ಎಂಬುವುದಕ್ಕೆ ಪೂರಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎನಿಸುತ್ತದೆ.

ಪ್ರವಾಸ ಸಾಹಿತ್ಯ ಕುರಿತು ಆಳವಾದ ಅಧ್ಯಯನ ಮಾಡಿರುವ ಡಾ. ಕೆ. ಅನಂತರಾಮು ಅವರು ಹೇಳಿರುವ ಮಾತುಗಳು ಹೀಗಿವೆ: "ಬದುಕಿನ ಮುಸ್ಸಂಜೆಯಲ್ಲಿ ಅವರು ಯಾತ್ರೆ ಕೈಗೊಳ್ಳುತ್ತಿದ್ದುದರಿಂದ 'ಮತ್ತೆ ಊರಿಗೆ ಮರಳಿದರೆ ಮರಳಿಯೇವು, ಇಲ್ಲದಿದ್ದರೆ ಇಲ್ಲ' ಎಂಬ ವೈರಾಗ್ಯದಲ್ಲಿಯೇ ಮನೆಯಿಂದ ಹೊರಬೀಳುತ್ತಿದ್ದರು. ಕಾಶಿಯಂತಹ ಪವಿತ್ರ ತೀರ್ಥದಲ್ಲಿ ದೇಹತ್ಯಾಗ ಮಾಡಿದರೆ ಮೋಕ್ಷಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯೂ ಅಂತಹ ಯಾತ್ರೆಗಳಿಗೆ ಬೆಂಬಲವಾಗಿತ್ತು. ಸಮಸ್ತ ಭರತಖಂಡವೂ ನಮ್ಮದು ಎಂಬ ವಿಶಾಲವಾದ ದೇಶಪ್ರೇಮವಿದ್ದ ಅವರು ಕಾಶಿಯಲ್ಲಿ ತುಂಬಿ ತಂದ ಪವಿತ್ರ ಗಂಗಾಜಲವನ್ನು ದಕ್ಷಿಣ ತುದಿಯ ರಾಮೇಶ್ವರಲಿಂಗಕ್ಕೆ ಅಭಿಷೇಕ ಮಾಡಿಸಿದಾಗಲೇ ತಮಗೆ ತೀರ್ಥಯಾತ್ರೆಯ ಪೂರ್ಣಫಲ ಲಭಿಸುವುದು ಎಂದೂ ಹೇಳುತ್ತಿದ್ದರು. ತೀರ್ಥಯಾತ್ರೆಯೇ ಅಂದಿನ ಭಾರತೀಯರನ್ನು ಸ್ನೇಹಸೂತ್ರವೊಂದರಲ್ಲಿ ಬಂಧಿಸಿತ್ತು.[23] ಇಲ್ಲಿಯೂ ಸಹ ಭಾರತೀಯರ ಯಾತ್ರೆಯ ಸಂದರ್ಭ, ನಂಬಿಕೆ ಮತ್ತು ಅವರ ಸೌಹಾರ್ದತೆಗೆ ಪೂರಕವಾದ ಸಂಚಾರವನ್ನು ತಿಳಿಸಿದ್ದಾರೆ.

ಹೀಗೆ ಪ್ರವಾಸದ ಬಗೆಗೆ ಭಾರತೀಯರ ದೃಷ್ಟಿಕೋನ ವಿಸಿಷ್ಟವಾಗಿದೆ. ಪ್ರವಾಸ ಎನ್ನುವುದು ಭಾರತೀಯರ ಮನೋಧರ್ಮಕ್ಕೆ ಹೊಂದುವಂತಹುದಲ್ಲ. ಬ್ರಿಟಿಷ್ ವಸಾಹತುಶಾಹಿ ಆಡಳಿತವು ಭಾರತಕ್ಕೆ ಬಂದ ಮೇಲೆ, ಆಧುನಿಕ ವಿದ್ಯಾಭ್ಯಾಸದ ಫಲವು ನಮ್ಮ ಸಮಾಜದ ಮೇಲೆ ಪ್ರಭಾವ ಬೀರಿದ ಮೇಲೆ ಯಾತ್ರೆ, ತೀರ್ಥಯಾತ್ರೆಗಳು ಹಿಂದೆ ಸರಿದು 'ಪ್ರವಾಸ' ಎಂಬುದಕ್ಕೆ ಬೇರೆ ಅರ್ಥಗಳು ಬಂದುವು. ಆಧುನಕತೆಯು ಪ್ರಭಾವ ಬೀರಿದಂತೆಲ್ಲ ಶೈಕ್ಷಣಿಕ ಪ್ರವಾಸ, ಹೊರದೇಶಗಳ ಸಮಾಜಗಳನ್ನು ನೋಡಬೇಕು, ತಿಳಿಯಬೇಕು ಎಂಬ ಭಾರತೀಯರ ಹಂಬಲಗಳು ಪ್ರವಾಸಕ್ಕೆ ಮೂಲದೃಷ್ಟಿಕೋನಗಳಾದವು.

[illegible]

ಪ್ರವಾಸ ಎಂಬುದು ಹತ್ತೊಂಬತ್ತು ಹಾಗೂ ಇಪ್ಪತ್ತನೆಯ ಶತಮಾನದಲ್ಲಿ ಜ್ಞಾನದಾಹಕ್ಕಾಗಿ ನಡೆಸಿದ ಯಾನವಾಗಿತ್ತು. ಇದು ಪರ್ಯಾಯವಾಗಿ ಯಾತ್ರೆ, ತೀರ್ಥಯಾತ್ರೆಗಳಿಂದ ದೂರವಾದುದಕ್ಕೆ ಮುಖ್ಯವಾದ ನೆಲೆಯಾಗಿತ್ತು. ಭಾರತೀಯರ ದೃಷ್ಟಿಕೋನವು ಕಳೆದ ನೂರುವರ್ಷಗಳಲ್ಲಿ ಆಗಿರುವ ಪರಿವರ್ತನೆಯನ್ನು ಇದು ಸೂಚಿಸುತ್ತದೆ.

**ಪಾಶ್ಚಾತ್ಯರ ದೃಷ್ಟಿಕೋನ ಅಥವಾ ಅಭಿಪ್ರಾಯಗಳು :**

"ಸೈರ್ ಕರ್ ದುನಿಯಾ ಕೇ ಗಾಫಿಲ್

ಜಿಂದಗಾನೀ ಫಿರ್ ಕಹಾಂ,

ಜಿಂದಗಿ ಗರ್ ಕುಚ್ ರಹೀ ತೊ

ನೌಜವಾನೀ ಫಿರ್ ಕಹಾಂ"

ಅಯ್ಯೋ ಬುದ್ಧಿಗೇಡಿ ಸೋಮಾರಿಯೆ, ಹೋಗು ಪ್ರಪಂಚವನ್ನು ಸುತ್ತು. ಇದಕ್ಕಾಗಿ ನಿನಗೆ ಮತ್ತೊಂದು ಬದುಕು ಬರುವುದಿಲ್ಲ. ಒಂದು ಪಕ್ಷ ಹೆಚ್ಚು ದಿನ ಬದುಕುವಿ ಅನ್ನುವುದಾದರೂ, ಈ ಯೌವನ ಮತ್ತೆ ಎಲ್ಲಿಂದ ಬಂದೀತು?. (ನವಜಿಂದಾ ಬಜಿಂದಾ)" ನವರ ಉಕ್ತಿ ಬಹಳ ಸಮಂಜಸವಾಗಿ ಸಾರ್ವಕಾಲಿಕ ಪ್ರವಾಸೋಕ್ತಿಯಂತಿದೆ. ಹಾಗೂ ತೀ.ನಂ.ಶ್ರೀ. ನೆರೆ ಕೆನ್ನೆಗೆ ತೆರೆ ಗಲ್ಲಕೆ ಬಂದಡಸದ ಮುನ್ನ, ಕೀಲುಣಿಸಿನ, ಏದುಸಿರಿನ ಚಳಿ ಸೆಕೆಗಳ ಚಿಂತೆ

ಮನವನಲ್ಲಾಡಿಸದ ಮುನ್ನ,

ತಗುಣೆ ಸೊಳ್ಳೆ ಗುಂಪು ಗದ್ದಲಗಳ ಭೀತಿ

ರಕ್ತವನಾವರಿಸದ ಮುನ್ನ,

ಮೈಯ ಕೆಚ್ಚು, ಕಾಲ ಕಸುವು, ಬಗೆಯ ಹುಮ್ಮಸ್ಸು,

ಒಪ್ಪಳಿಯದ ಮುನ್ನ,

ಮುಪ್ಪಿನ ಭಾರ ಹೆಗಲೇರುವ ಮುನ್ನ,

ಕಿವಿಗೊಡು ಓ ಪ್ರೇಕ್ಷಣರಸಿಕನೆ ಪ್ರವಾಸದ ಕರೆಗೆ। ಎಂದಿರುವುದಕ್ಕೂ ಇದಕ್ಕೂ ಹೆಚ್ಚಿನ ಸಾಮ್ಯತೆ ಇದೆ.

ಪಾಶ್ಚಾತ್ಯರ ಪ್ರವಾಸ ರಾಜಕೀಯ ದೃಷ್ಟಿಕೋನವಾಗಿತ್ತು. ಇಲ್ಲಿಯ ಭೂಮಿ, ಚಿನ್ನ, ಬೆಳ್ಳಿ, ಸಂಪತ್ತುಗಳ ಆಕರ್ಷಣೆ ಒಂದೆಡೆಯಾದರೆ, ಇನ್ನೊಂದೆಡೆ ಜ್ಞಾನದ ಶೋಧಕ್ಕಾಗಿ ಮತ್ತು ಜ್ಞಾನದಾಹಕ್ಕಾಗಿ ಪ್ರವಾಸ ಮಾಡುತ್ತಿದುದ್ದು ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಬಹುತೇಕ ಮಂದಿ ಸಮುದ್ರಯಾನಗಳನ್ನು ಕೈಗೊಂಡು ಹೊಸ, ಹೊಸ ಭೂ ಪ್ರದೇಶಗಳ ದರ್ಶನಗಳನ್ನು ಪಡೆದು ಅಲ್ಲಿ ತಮ್ಮ ಅಸ್ತಿತ್ವವನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿದರು. ಇದರಿಂದ ಹೊಸ ವಾಣಿಜ್ಯ ಮಾರ್ಗಗಳು ತೆರೆದುಕೊಂಡವು. ವಾಣಿಜ್ಯಾಭಿವೃದ್ಧಿಗೆ ಪ್ರವಾಸವು ದೊಡ್ಡ ವರದಾನವಾಯಿತು. ಹೀಗಾಗಿ ಇದು ವ್ಯವಹಾರಿಕ ಪ್ರವಾಸವಾದರೆ ಇನ್ನೂ ಕೆಲವರು ಬೌದ್ಧಿಕ ಬೆಳವಣಿಗೆಗಾಗಿ ಇಲ್ಲಿನ ಕಲೆ, ಸಂಸ್ಕೃತಿಗಳ ವ್ಯಾಪಕ ಅಧ್ಯಯನಕ್ಕಾಗಿ ಭಾರತಕ್ಕೆ ಬಂದಿರುವ ನದರ್ಶನಗಳಿವೆ.

"ರೋಜರ್ ಬೇಕನ್" ಎಂಬ ಇಂಗ್ಲಿಷ್ ಪ್ರಬಂಧಕಾರ:– The art of using one's leisure intelligently is a supreme sign of civilization. ಅಂದರೆ "ಪ್ರವಾಸ ಅನ್ನುವುದು ಚಿಕ್ಕಂದಿನಲ್ಲಿ ಶಿಕ್ಷಣದ ಒಂದು ಭಾಗ: ದೊಡ್ಡವರಲ್ಲಿ ಅನುಭವದ ಒಂದು ಭಾಗ" ಚಿಕ್ಕ ಮಕ್ಕಳಿಗೆ ಪ್ರವಾಸ ಮಾಡುವ ಒಂದು ಅನುಕೂಲವನ್ನು ಇವತ್ತು ನಮ್ಮ ಶಿಕ್ಷಣ ಕ್ರಮದಲ್ಲೇ ಅಳವಡಿಸಿದ್ದೇವೆ. ಹೀಗೆ ಪ್ರವಾಸ ಅನ್ನುವುದು ಶಿಕ್ಷಣದ ಒಂದು ಭಾಗವಾಗಿದೆ ಎಳೆಯಂದಿನಲ್ಲಿ; ಬೆಳೆದ ಮೇಲೆ ಅನುಭವದ ಒಂದು ಭಾಗವಾಗುತ್ತದೆ."[24] ಅನುಭವಗಳು ಹೇಗೆ ಸಂದರ್ಭಾನುಸಾರ ಜೀವನ ವಿಧಾನಗಳಾಗುತ್ತವೆ ಎಂಬ ಅರಿವು ಇದರಿಂದಾಗುತ್ತದೆ.

"ಫ್ರಾನ್ಸಿಸ್ ಬೇಕನ್ನನ" ಪ್ರಸಿದ್ಧ ಹೇಳಿಕೆ:– Travel in the younger sort, is a part of education in the elder, a part of experience. ಇದನ್ನೇ ಕನ್ನಡದಲ್ಲಿ "ಚಿಕ್ಕವರಿಗೆ ಪ್ರವಾಸ ಒಂದು ಶಿಕ್ಷಣ ; ದೊಡ್ಡವರಿಗೆ ಒಂದು ಅನುಭವ." ರೋಜರ್ ಬೇಕನ್‌ನ ವಿವರಣೆಯಂತೆ "ಫ್ರಾನ್ಸಿಸ್ ಬೇಕನ್ನನ ವಿವರಣೆ ಇದ್ದರೂ, ಸರಳವಾಗಿ, ಸುಂದರವಾಗಿ ಮತ್ತು ಚಿಕ್ಕದಾಗಿ ಚೊಕ್ಕವಾಗಿ ಮಾರ್ಪಡಿಸಿದಂತಿದೆ. ಆದ್ದರಿಂದ ಪ್ರೊ. ಎಂ.ಎಚ್. ಕೃಷ್ಣಯ್ಯನವರು 'ಈ ಅನುಭವದ ಕಲ್ಪನೆ ಒಬ್ಬೊಬ್ಬರಲ್ಲಿ ಒಂದೊಂದು ಬಗೆಯದಾಗಿದೆ ಎಂದಿದ್ದಾರೆ.

'ಲೊವೆಲ್':-"ಪ್ರವಾಸಿರು ಮನುಷ್ಯರನ್ನು ಅಭ್ಯಸಿಸುವುದಕ್ಕಿಂತ ವಸ್ತು ಸಂಗತಿಗಳನ್ನು ಅಭ್ಯಾಸ ಮಾಡುವ ಅಪೇಕ್ಷೆ ಹೊಂದಿರಬೇಕು ಎಂದು ಅಭಿಪ್ರಾಯಪಟ್ಟರೆ"[25] ಎಲ್ಲಿದ್ದರೂ ಮನುಷ್ಯರೆಲ್ಲಾ ಒಂದೇ ಅಗಿರುವುದರಿಂದ ಮನುಷ್ಯರ ಪರಿಸ್ಥಿತಿ ವಸ್ತು ಸಂಗತಿಗಳನುಸಾರವಾಗುವುದರಿಂದ ವಸ್ತುಸಂಗತಿಗಳ ಅಭ್ಯಾಸಕ್ಕೆ ಅಧಿಕ ಒತ್ತು ಕೊಟ್ಟಂತಿದೆ.

'ವಾಲ್ಟರ್ ಮುರ್ಡಾಕ್' ಅದಕ್ಕೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. "ವಸ್ತು ಸಂಗತಿ ನೋಡಲು, ತಿಳಿಯಲು ಪ್ರವಾಸ ಮಾಡಿದರೆ, ಹಿಂದುರುಗಿದಾಗ ಗೆಳೆಯರಿಗೆ ತಲೆ ಕೊರೆಯುತ್ತೀರಿ; ಜನ ನೋಡಲು ಪ್ರವಾಸ ಮಾಡಿದರೆ, ಹಿಂದಿರುಗಿದಾಗ ಜೀವನಾನುಭವ ತರುತ್ತೀರಿ"-ಎನ್ನುತ್ತಾನೆ ಆತ. ಇದು ಲೊವೆಲ್‌ನ ಹೇಳಿಕೆಯ ಮುಂದುವರಿದ ರೂಪವಾಗಿದೆ.

"ಆರ್.ಎಲ್. ಸ್ಟೀವನ್‌ಸನ್ :- "ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲಿಗಾದರೂ ಹೋಗಬೇಕೆಂದು ಪ್ರವಾಸ ಮಾಡುವುದಿಲ್ಲ, 'ಹೋಗುವುದು' ನನಗೆ ಮುಖ್ಯ. ಪ್ರವಾಸಕ್ಕಾಗಿ ಪ್ರವಾಸ ಮಾಡುತ್ತೇನೆ. ಚಲಿಸುವುದು, ಹೋಗುವುದು ಮಹತ್ವದ್ದಾಗಿದೆ". ದಿ ಗ್ರೇಟ್ ಅಫೇರ್ ಈಸ್ ಟು ಮೂವ್ ಎಂಬಲ್ಲಿ 'ಪ್ರವಾಸಿಯ ಮೂಲ ತುಡಿತ ವ್ಯಕ್ತವಾಗುತ್ತದೆ.' ಪ್ರೊ॥ಎಂ.ಎಚ್. ಕೃಷ್ಣಯ್ಯನವರು ಲೊವೆಲ್, ವಾಲ್ಟರ್ ಮುರ್ಡಾಕ್ ಮತ್ತು ಆರ್. ಎಲ್. ಸ್ಟೀವನ್‌ಸನ್‌ರುಗಳ ಮಾತುಗಳಲ್ಲಿ ಆರ್.ಎಲ್. ಸ್ಟೀವನ್‌ಸನ್‌ನ ಮಾತು ಅಂತಿಮ ಎಂಬಂತೆ ತೋರುತ್ತದೆ ಎಂದಿದ್ದಾರೆ. ಹೀಗಾಗಿ ಆರ್.ಎಲ್. ಸ್ಟೀವನ್ ಸನ್ನನ ಅಭಿಪ್ರಾಯದಲ್ಲಿ 'ಕ್ರಿಯೆ'ಯ ಪ್ರಧಾನ್ಯತೆ ಕಂಡುಬರುತ್ತದೆ.

"ಗ್ರೇಸ್ಲಿ ಹೇಳುವಂತೆ "Our object in traveling should be not to gratify curiosity and seek mere temporary ausement, but to learn and to venerate to improve the understanding and the heart. ಇದ್ದ ಕಡೆಯೇ ಇದ್ದು, ಮಾಡಿದ ಕೆಲಸವನ್ನೇ ಮಾಡಿ, ನೋಡಿದ ನೋಟವನ್ನೇ ನೋಡಿ, ಆಡಿದ ಮಾತನ್ನೇ ಅಡುತ್ತಾ ಬದುಕು ಸಾಗಿಸುವಿಕೆ ಜೀವನವನ್ನು ನೀರಸಗೊಳಿಸುತ್ತದೆ. ಬದುಕು ರಸಪೂರ್ಣವಾಗಬೇಕಾದರೆ ಹೊಸತು ಅದಕ್ಕೆ ಬೇಕು. ಪ್ರವಾಸ ನಿತ್ಯದ ಏಕತಾನದಿಂದ ಬಿಡುಗಡೆಗೊಳಿಸಿ ನವೀನತೆಯನ್ನು ಒದಗಿಸುತ್ತದೆ."[26] ಹೌದು ಗ್ರೇಸ್ಲಿ ಮಾತಿನಂತೆ ಪ್ರವಾಸದಿಂದ ನವ ಚೈತನ್ಯ ಮೂಡುತ್ತದೆ.

ಪ್ರವಾಸವನ್ನು ಕುರಿತ ಪಾಶ್ಚಾತ್ಯರ ದೃಷ್ಟಿಕೋನ ಮೂಲಭೂತವಾಗಿ ಭೌತಿಕವಾದುದು ಹಾಗೂ ಸೌಂದರ್ಯಾತ್ಮಕವಾದುದು. ಭೌತಿಕ ಸಂಪನ್ಮೂಲಗಳ ಗಳಿಕೆಯೇ ಪ್ರವಾಸದ ಹಿಂದಿರುವ ಗುರಿ. ಆರ್ಥಿಕತೆ, ಸಾಮಾಜಿಕತೆ ಪ್ರವಾಸದ ಭೌತಿಕ ಕ್ರಮಗಳು. ಅದನ್ನು ಪಾಶ್ಚಾತ್ಯರ ಪ್ರವಾಸಿಗರಲ್ಲಿ ನಾವು ಸ್ಪಷ್ಟವಾಗಿ ಕಾಣುತ್ತೇವೆ.

## ಕನ್ನಡ ವಿದ್ವಾಂಸರ ದೃಷ್ಟಿಕೋನ ಅಥವಾ ಅಭಿಪ್ರಾಯಗಳು :

ಪ್ರವಾಸ ಆಧುನಿಕ ಪರಿಕಲ್ಪನೆ ಎಂಬುದು ಕನ್ನಡ ವಿದ್ವಾಂಸರ ಅಭಿಪ್ರಾಯ. ಭಾರತೀಯರು ಪ್ರಾಚೀನ ಕಾಲದಲ್ಲಿ ತೀರ್ಥಯಾತ್ರೆ ರೂಪದಲ್ಲಿ ಸಂಚಾರ ಮಾಡುತ್ತಿದ್ದರು. ಆದರೆ ಪ್ರಸ್ತುತದಲ್ಲಿ ತೀರ್ಥಯಾತ್ರೆ ಎಂಬ ಪದವಾಗಲಿ ಮತ್ತು ತೀರ್ಥಯಾತ್ರೆ ಕೈಗೊಳ್ಳುವವರ ಪ್ರಮಾಣವಾಗಲಿ ಕ್ಷೀಣಿಸುತ್ತಿದೆ ಎನ್ನಬಹುದು. ತೀರ್ಥಯಾತ್ರೆ ಎಂಬುದಕ್ಕೆ ಬದಲಾಗಿ 'ಪ್ರವಾಸ' ಎಂಬ ರೂಪತಾಳಿ ಪ್ರಚಲಿತವಾಗುತ್ತಿದೆ. ಈಗೀನ ಆಧುನಿಕ ಕಾಲದಲ್ಲಿ ಕೆಲವರಿಗೆ ವಿದೇಶಗಳಿಗೆ ಹೋಗಲು ಸಾಧ್ಯವಿಲ್ಲದಿರಬಹುದು. ಆದರೆ ತಮ್ಮತ್ಮ ದೇಶದೊಳಗಿರುವ ಪ್ರಸಿದ್ಧ ಪರಸ್ಥಳಗಳಿಗೆ ಅವರವರ ಆರ್ಥಿಕತೆಗನುಗುಣವಾಗಿ ಪ್ರವಾಸ ಮಾಡುತ್ತಲೇ ಇದ್ದಾರೆ. ಅದರಲ್ಲೂ ಬುದ್ಧಿವಂತರು, ವಿದ್ವಾಂಸರು, ಪ್ರವಾಸ ಪ್ರೇಮಿಗಳೂ, ಆರ್ಥಿಕ ಸ್ಥಿತಿವಂತರೆಲ್ಲಾ ವಿದೇಶ ಪ್ರವಾಸ ಮಾಡುವುದು ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಇವರೆಲ್ಲ ಕಾರಣಾಂತರಗಳಿಂದ ವಿದೇಶ ಪ್ರವಾಸಗಳಿಗೆ ಹೋಗುತ್ತಿದ್ದಾರೆ. ಕೆಲವರು ಉದ್ಯೋಗಕ್ಕಾಗಿ ಹೋದರೆ, ಮತ್ತೇ ಕೆಲವರು ಉನ್ನತ ಶಿಕ್ಷಣಕ್ಕಾಗಿ, ಇನ್ನೂ ಕೆಲವರು ಗೋಷ್ಠಿ–ಸಮ್ಮೇಳನಗಳ ಅಂಗವಾಗಿ ಅಥವಾ ಭಾಗವಹಿಸುವುದಕ್ಕಾಗಿ, ಇನ್ನೂ ಮುಂತಾದ ಕಾರಣಗಳಿಗಾಗಿ ಇಂದು ವಿದೇಶ ಪ್ರವಾಸ ಮಾಡುವವರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದಾರೆ. ಬಹಳ ಹಿಂದಿನಿಂದ ಸಮುದ್ರ ದಾಟಬಾರದು ಎನ್ನುವ ನಂಬಿಕೆ ಇತ್ತು. ನಮ್ಮ ದೇಶವನ್ನುಳಿದು ಅನ್ಯ ದೇಶಗಳನ್ನು ನೋಡಬಾರದು ಎಂಬ ಮೂಢತೆಯನ್ನು ಅನೇಕ ಬುದ್ಧಿಜೀವಿಗಳು, ಪ್ರಜ್ಞಾವಂತರು ಈಗೀಗ ತೊಲಗಿಸಿದ್ದಾರೆ. ಅಷ್ಟೆ ಅಲ್ಲದೆ ಪ್ರವಾಸದ ಪ್ರಸಿದ್ಧತೆಗೆ ಕಾರಣರಾಗಿದ್ದಾರೆ. ಅಂತಹವರಲ್ಲಿ ಕನ್ನಡ ವಿದ್ವಾಂಸರ ಪಾತ್ರ ಬಹು ಮುಖ್ಯವಾಗಿದೆ. ಕನ್ನಡ ವಿದ್ವಾಂಸರಗಳಲ್ಲಿ ಕೆಲವರ ಅಭಿಪ್ರಾಯಗಳನ್ನು ಇಲ್ಲಿ ತಿಳಿಯೋಣ.

ಡಾ॥ಕೆ. ಅನಂತರಾಮು "ಯಾವನು ದೇಶದೇಶಗಳನ್ನು ಸಂಚರಿಸುವನೋ, ಪಂಡಿತರ ಸಂಪರ್ಕವನ್ನಿಟ್ಟುಕೊಳ್ಳುವನೋ ಅವನ ಬುದ್ಧಿಯು ನೀರಿನಲ್ಲಿ ಬಿದ್ದ ಎಣ್ಣೆಯಂತೆ ಪ್ರಸರಣ ಹೊಂದುತ್ತ

ಬಲಿಯುತ್ತಾ ಹೋಗುತ್ತದೆ" ಎಂಬ ಮಹಾಭಾರತ ವಾಕ್ಯವಿದೆ ಎಂಬಲ್ಲಿ ಪ್ರವಾಸದಿಂದ ಜ್ಞಾನ ವಿಕಾಸವಾಗುವ ಬಗೆಯನ್ನು ತಿಳಿಸಿದ್ದಾರೆ.

ಹಿಂದು ಧರ್ಮದ ಮಹಾಕಾವ್ಯಗಳಲ್ಲಿ ಒಂದಾದ ಮಹಾಭಾರತದಲ್ಲೆ ಸಂಚಾರ ಮತ್ತು ಸಂಪರ್ಕಗಳಿದಾಗುವ ಪ್ರಯೋಜನಗಳನ್ನು ಡಾ॥ಕೆ. ಅನಂತರಾಮುರವರು ಗುರುತಿಸಿ ಉಲ್ಲೇಖಿಸುವುದರೊಂದಿಗೆ ವಿಶ್ವಪರ್ಯಟನೆ ಮೂಲಕ ಅನುಭವ ಎಂಬುದು ಶ್ರೀಮಂತವಾಗುತ್ತದೆ.

ಜ್ಞಾನ-ವಿಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳಬಹುದು. ಪ್ರವಾಸ ಆತ್ಮಸಾಧನೆಗಷ್ಟೇ ಅಲ್ಲದೆ ಪ್ರವಾಸದಿಂದೊದಗುವ ಲೋಕಾನುಭವ ಮತ್ತು ಲೋಕಜ್ಞಾನಗಳು ಹಲವು ಕಥನಗಳ ರಚನೆಗೆ ದಾರಿಮಾಡಿಕೊಡುತ್ತದೆಂದು ಸೂಚಿಸಿದ್ದಾರೆ. ಪ್ರವಾಸವನ್ನು ಕುರಿತು ತೀ.ನಂ.ಶ್ರೀ ಅವರ ಅಭಿಪ್ರಾಯವನ್ನು ಅವರದೇ ಪದ್ಯದಲ್ಲಿ ನೋಡಬಹುದು:

"ನೆರೆ ಕೆನ್ನೆಗೆ ತೆರೆ ಗಲ್ಲಕೆ ಬಂದಡಸದ ಮುನ್ನ,
ಕೀಲುಣಿಸಿನ, ಏದುಸಿರಿನ ಚಳಿ ಸೆಕೆಗಳ ಚಿಂತೆ
ಮನವನಲ್ಲಾಡಿಸದ ಮುನ್ನ,
ತಿಗುಣೆ ಸೊಳ್ಳೆ ಗುಂಪು ಗದ್ದಲಗಳ ಭೀತಿ
ರಕ್ತವನಾವರಿಸದ ಮುನ್ನ,
ಮೈಯ ಕೆಚ್ಚು, ಕಾಲ ಕಸುವು, ಬಗೆಯ ಹುಮ್ಮಸ್ಸು ಒಪ್ಪವಳಿಯದ ಮುನ್ನ,
ಮುಪ್ಪಿನ ಭಾರ ಹೆಗಲೇರದ ಮುನ್ನ,
ಕಿವಿಗೊಡು ಓ ಪ್ರೇಕ್ಷಣರಸಿಕನೆ ಪ್ರವಾಸದ ಕರೆಗೆ !(ತೀ. ನಂ. ಶ್ರೀ)"

ಎಂಬಲ್ಲಿ ಮನುಷ್ಯ ಪ್ರವಾಸ ಕೈಗೊಳ್ಳುವ ಸೂಕ್ತ ಸಂದರ್ಭವನ್ನು ಸೂಚಿಸುವುದರ ಜೊತೆಗೆ ಪ್ರವಾಸಿಗನಿಗೆ ಸ್ಫೂರ್ತಿ ನೀಡುವಂತಿದೆ. ಇದಕ್ಕೆ ಪೂರಕವಾಗಿ ಹಿಂದಿಯಲ್ಲಿ "ಸೈರ್ ಕರ್ ದುನಿಯಾ ಕೇ ಗಾಫಿಲ್ ಜಿಂದಗಾನೀ ಫಿರ್ ಕಹಾಂ, ಜಿಂದಗಿ ಗರ್ ಕುಚ್ ರಹೀ ತೊ ನೌಜವಾನೀ ಫಿರ್ ಕಹಾಂ ಎಂದು ನವಜಿಂದಾ ಬಜಿಂದಾರವರ ಹೇಳಿಕೆಯನ್ನು ನಾವು ಗುರುತಿಸಬಹುದು.

ಡಾ॥ಸಾ.ಶಿ. ಮರುಳಯ್ಯ, ವರದರಾಜ ಹುಯಿಲಗೋಳ, ಬಿ.ಎ. ವಿವೇಕ ರೈ, ಡಾ॥ಎಸ್. ವಿದ್ಯಾಶಂಕರ್ ಮತ್ತು ಎನ್.ಎಸ್. ತಾರಾನಾಥ ಪ್ರವಾಸದ ಬಗ್ಗೆ ಹೀಗೆ ಚರ್ಚಿಸಿದ್ದಾರೆ: "ಮೊದ ಮೊದಲು 'ಪ್ರವಾಸ'ವೆಂದರೆ "ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸ ಹೋಗುವುದು" ಎನ್ನುವಷ್ಟರ ಮಟ್ಟಿಗೆ ಸೀಮಿತವಾಗಿತ್ತು. ನಂತರ ಆ ಭಾವ ತೊಲಗಿದೆ. "ಪ್ರವಾಸ ನಮ್ಮ ಅನುಭವದ ಕೋಶವನ್ನು ಹಿಗ್ಗಿಸಲು ಬಹು ಮುಖ್ಯವಾದ ಸಾಧನವಾಗಿದೆ. ನಾವು ಮಾಡುವ ಸಂಚಾರ ನಮ್ಮ ಅನುಭವಕ್ಕೊಂದು ವ್ಯಾಪ್ತಿಯನ್ನೂ ಅರ್ಥವಂತಿಕೆಯನ್ನೂ ಭಾವಗಮ್ಯವಾದ ಸುಖವನ್ನೂ ನೀಡುತ್ತದೆ. ದೇಹ ಮತ್ತು ಮನಸ್ಸು ನಾನಾ ದೇಶಗಳ ಜನಗಳ, ಮನಗಳ, ನದಿ–ಕಾನನಗಳ, ನೆಲ–ಬಾನುಗಳ, ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿಗಳ ಜೊತೆಗೆ ಅರ್ಥಪೂರ್ಣವಾದ ಸಂಬಂಧ ಬೆಳೆಸಿದಾಗಲೇ ಅವುಗಳಿಗೆ ಒಂದು ಬಗೆಯ ಕಳೆ ತೃಪ್ತಿ, ಗೆಲುವು, ಲವಲವಿಕೆ ಪ್ರಾಪ್ತವಾಗುವುದು" ಪ್ರವಾಸದ ವ್ಯಾಪ್ತಿ ಮತ್ತು ಪ್ರವಾಸದಿಂದಾಗುವ ಅತ್ಯಾನಂದ, ಕ್ರಿಯಾಶೀಲ ಗುಣಗಳು ಅಗೋಚರವಾಗಿಯೇ ಒಳಗೊಳ್ಳುವುದನ್ನು, ವಿಸ್ತಾರಗೊಳ್ಳುವುದನ್ನು ವ್ಯಕ್ತಪಡಿಸುತ್ತದೆ.

ಪ್ರವಾಸ ಮತ್ತು "ಪ್ರವಾಸ ಸಾಹಿತ್ಯ ಬಗ್ಗೆ ಎನ್.ಎಸ್. ತಾರಾನಾಥರ ಮಾತಿನಲ್ಲಿ ಹೇಳುವುದಾದರೆ "ಒಬ್ಬ ವ್ಯಕ್ತಿ ತನ್ನದಾದಂತಹ ಊರು ಅಥವಾ ಜಾಗವನ್ನು ಬಿಟ್ಟು ತನ್ನದಲ್ಲದಂತಹ ಇನ್ನೊಂದು ಊರು ಅಥವಾ ಜಾಗಕ್ಕೆ ಹೋಗಿ ಆ ಪ್ರದೇಶವನ್ನು ಸುತ್ತಿ ಬಂದು, ಆ ಹೊಸ ಜಾಗದಲ್ಲಿ ಆದಂತಹ ಅನುಭವಗಳನ್ನು ಬಣ್ಣಿಸಿದ, ಅಲ್ಲಿ ನೋಡಿದಂತಹ ಪ್ರೇಕ್ಷಣೀಯ ಸ್ಥಳಗಳನ್ನು ವರ್ಣಿಸಿದ, ಅಲ್ಲಿನ ಜನರ ರೀತಿ–ನೀತಿ ಜೀವನ ವಿಧಾನಗಳನ್ನು ವಿವರಿಸಿದ, ಸಾಹಿತ್ಯವನ್ನು ಸ್ಥೂಲವಾಗಿ ಪ್ರವಾಸ ಸಾಹಿತ್ಯವೆಂದು ಕರೆಯಬಹುದು"[27] ಪರಸ್ಥಳಗಳನ್ನು ಭೇಟಿ ಮಾಡುವುದು ಪ್ರವಾಸವಾದರೆ, ಅಲ್ಲಿ ಆದಂತಹ ಹೊಸ ಅನುಭವಗಳನ್ನು ಹಾಗೂ ಪರಕೀಯ ಆಚಾರ–ವಿಚಾರಗಳನ್ನು ವಿವರಿಸುವುದು ಪ್ರವಾಸ ಸಾಹಿತ್ಯ ಎನ್ನುವಂತಿದೆ.

"ಪ್ರೊ. ಎಂ. ಎಚ್. ಕೃಷ್ಣಯ್ಯನವರು: ಪ್ರವಾಸ ಮಾಡುವ ಚಪಲ ಮನುಷ್ಯನಿಗೆ ಒಂದು ಮೂಲ ಮನೋವೃತ್ತಿ ಇರಬಹುದೆ, ಎನಿಸುತ್ತದೆ. ಸೊಂಪಾದ ಆಹಾರ ಹುಡುಕಿಕೊಂಡು ಹೋಗುವ; ಋತುಚಕ್ರ ಬದಲಾಗುತ್ತಿದ್ದಂತೆ ನೀರು ಆಹಾರಕ್ಕಾಗಿ ಅಲೆಯುವ ಜೀವನ ಮನುಷ್ಯನಿಗೆ ಪ್ರಾಣಿ ಸಂಸ್ಕಾರದ ಪಳೆಯುಳಿಕೆ ಅಥವಾ ಪೂರ್ವವಾಸನೆ ಇರಬಹುದೆ? ಏಕೆಂದರೆ ಸಕಲ ಸುಖ ಭೋಗಗಳೂ ಸೌಕರ್ಯ ಸವಲತ್ತುಗಳು ಇದ್ದರೂ ದೇಹಕ್ಕೆ ನಿರ್ಬಂಧ ಹಾಕಿದಾಗ ಮನಸ್ಸಾದರೂ ಅಲೆಮಾರಿಯಾಗುತ್ತದೆ.

ಹೊಸದನ್ನು ಕಾಣುವ, ತಿಳಿಯುವ ಕುತೂಹಲವೂ ಈ ನೆಲಸಿಗ ಮನುಷ್ಯ ಪ್ರವಾಸ ಮಾಡಲು ಮತ್ತೊಂದು ಕಾರಣ ಇರಬಹುದು. ಅವನಲ್ಲಿ ಅದಮ್ಯವಾದ ಆ 'ತುಡಿತ' ಇದೆ, ಅಡಿಗರು ಹೇಳುವಂತೆ. "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?" ಎನ್ನುವಂತೆ ಆಸಕ್ತಿ ಮತ್ತು ಕುತೂಹಲಗಳು ಪ್ರತಿಯೊಬ್ಬ ಮಾನವನ ಹೃದಯ ಮಿಡಿತವಿದ್ದಂತೆ ಪ್ರತಿ ಕ್ಷಣವೂ ಹೊಸತನಕ್ಕೆ, ನಾವಿನ್ಯಕ್ಕೆ ಹಾತೊರೆಯುತ್ತಾನೆ.

ನಾಣ್ನುಡಿ, ಗಾದೆಯಂತೆ: "ಕೋಶ ಓದುವುದಕ್ಕಿಂತ ದೇಶ ನೋಡುವುದು ಮೇಲು" ಎಂಬ ಗಾದೆಯಲ್ಲಿ ಸ್ವಾನುಭವದ ಮಹತ್ವಕ್ಕೆ ಒತ್ತು ಕೊಟ್ಟಿದೆ." ಎಂಬುದರಲ್ಲಿ ಪುಸ್ತಕದ ಬದನೆಕಾಯಿಗಿಂತ ಸ್ವಾಭಾವಿಕವಾಗಿ ಸಹಜವಾಗಿ ದೊರೆಯುವ ಜ್ಞಾನ ದೊಡ್ಡದೆಂಬ ವಾಸ್ತವತೆ ಅರ್ಥಗರ್ಭಿತವಾಗಿದೆ.

"ಡಾ॥ ಅನುಪಮಾ ನಿರಂಜನರವರ ಹೇಳಿಕೆಯಂತೆ: ಪ್ರವಾಸದಿಂದ ಮನುಷ್ಯ ತನ್ನ ಅರಿವಿನ ದಿಗಂತವನ್ನು ವಿಸ್ತರಿಸಿಕೊಳ್ಳುತ್ತಾನೆ." ಎಂದಿರುವುದು ಬೌದ್ಧಿಕ ಬೆಳವಣಿಗೆಗೆ ಸಾಕ್ಷೀಭರಿತವಾಗಿದೆ.

ವಿನಾಯಕ ಕೃಷ್ಣ ಗೋಕಾಕರು ಹೇಳುವಂತೆ: "ಪಯಣವೆಂದರೆ ನನಗೆ ಪ್ರೀತಿಯ ವಿಷಯ. ನಾನು ಪಯಣಿಸಿದಂತೆ ನನ್ನ ಕನಸುಗಳೂ ವೃದ್ಧಿಂಗತವಾಗುತ್ತವೆ. ದೈನಂದಿನ ಜೀವನದಲ್ಲಿ ಕಳೆದುಕೊಂಡ ಸ್ವಾತಂತ್ರ್ಯ ಅಲ್ಲಿ ತಾನೇ ತಾನಾಗಿ ಮೆರೆಯುತ್ತದೆ." ಪ್ರತಿ ಮನುಷ್ಯನಲ್ಲಿ ಅಮೂರ್ತವಾದ ಆಸೆಗಳಿರುತ್ತವೆ. ಆ ಅಮೂರ್ತ ಆಸೆಗಳು ಯಾವಾಗ ಮೂರ್ತ ಸ್ವರೂಪ ಪಡೆಯುತ್ತವೆ ಎಂಬುದನ್ನು ಸೊಗಸಾಗಿ ಅಭಿವ್ಯಕ್ತಿಸಿದ್ದಾರೆ.

ಡಾ॥ಎಸ್. ವಿದ್ಯಾಶಂಕರ್‌ರವರು ನಿರೂಪಿಸುವಂತೆ: "ಪ್ರವಾಸವು ಬಹಳ ಮಂದಿ ಗ್ರಹಿಸಿರುವಂತೆ ಖುಷಿಗಾಗಿ, ಮನರಂಜನೆಗಾಗಿ, ಯಾಂತ್ರಿಕ ಬದುಕಿನ ಜಡತ್ವದ ನಿವಾರಣೆಗಾಗಿ. ಈ ಲೌಕಿಕ ವಲಯವನ್ನು ನಮ್ಮ ಉದ್ದೇಶ ಮೀರಿ ನಿಲ್ಲಬೇಕು. ನಮ್ಮ ಪ್ರವಾಸ ಕೇವಲ ಖುಷಿಗಾಗಿಯಲ್ಲ, ತತ್ಕಾಲದ ಮನರಂಜನೆಗಾಗಿಯಲ್ಲ, ದುಡಿತದಿಂದಾದ ಜಡತ್ವದ ನಿವಾರಣೆಗಾಗಿಯಲ್ಲ. ಅದು ಅನುಭವ ಶೋಧನೆಯತ್ತ ನಡೆಸುವ ರಸಯಾತ್ರೆ. ಹೃದಯ ವಿಕಸನಕ್ಕೆ, ಹೃದಯ ಹೃದಯಗಳ ಗ್ರಹಿಕೆಗೆ– ಸಾಮೀಪ್ಯಕ್ಕೆ, ಸಂವಾದಕ್ಕೆ ಅಣಿಗೊಳಿಸುವ 'ವಿಹಾರ' ಹೃದಯ ವಿಹಾರ." ಡಾ॥ಎಸ್. ವಿದ್ಯಾಶಂಕರ್‌ರವರ ಅಭಿಪ್ರಾಯ ಇತರರ ಅಭಿಪ್ರಾಯಗಳಿಗಿಂತ ಭಿನ್ನವಾಗಿದೆ. ಅಷ್ಟೆ ಅಲ್ಲದೆ ವಿಶಿಷ್ಟವಾಗಿದೆ. ಕಾರಣ ಸಂತೋಷ, ಮನೋರಂಜನೆ ಹಾಗೂ ಚೈತನ್ಯಗಳು ತಾತ್ಕಾಲಿಕವಾದವು. ಆದ್ದರಿಂದ ಈ ಲೌಕಿಕ ಮತ್ತು ಕ್ಷಣಿಕತೆಗೆ ಒತ್ತು ನೀಡದೆ,

ಪ್ರವಾಸ ಅನುಭವಶೋಧನೆಯಗಾಗಿ ನಡೆಸುವ ರಸಯಾತ್ರೆ ಎಂಬುದು ನವನವೀನ ಹೇಳಿಕೆಯಷ್ಟೆ ಅಲ್ಲದೆ ಅರ್ಥಪೂರ್ಣವಾಗಿದೆ. ಸರ್ವತೋಮುಖ ಮನೋವಿಕಾಸಕ್ಕೆ ನೆರವಾಗುವ ಹೃದಯ ವಿಹಾರವೆಂದು ಮನದಟ್ಟು ಮಾಡಿರುವುದು ವಿಶೇಷವಾದ, ಸೂಕ್ತವಾದ ಅಭಿಪ್ರಾಯವಾಗಿದೆ.

ಹೈಮಾಚಲಯಾತ್ರೆಯ ಸಂದರ್ಭದಲ್ಲಿ ಡಾ॥ಜಿ.ಎಸ್. ಶಿವರುದ್ರಪ್ಪನವರು "ಮನುಷ್ಯ ಮತ್ತು ನಿಸರ್ಗ ಸಂಬಂಧ ನಾಗರಿಕತೆಯಿಂದ ಬಿರುಕು ಬಿಟ್ಟಿದೆ, ಕಂದಕ ಏರ್ಪಟ್ಟಿದೆ. ತೀರ್ಥಯಾತ್ರೆ ನೆವದಿಂದ ಸ್ವಲ್ಪ ಕಾಲ ಆ ಸಂಬಂಧ ಸ್ಥಾಪನೆ ಪ್ರಯತ್ನವೆ?" ಎಂದು ಕೇಳಿಕೊಳ್ಳುತ್ತಾರೆ. ನಾಗರಿಕತೆಯ ಭರದಲ್ಲಿ ಅನೇಕ ರೀತಿಯ ಒತ್ತಡಗಳಿಗೆ ಸಿಲುಕಿರುವ ಮನುಷ್ಯನಿಗೆ ನಿಸರ್ಗದ ಅವಿನಭಾವ ಸಂಬಂಧಕ್ಕೆ ಕುಂದುಂಟಾಗಿದೆ. ತೀರ್ಥಯಾತ್ರೆ ಹಾಗೂ ಇನ್ನಿತರ ಪ್ರಯಾಣಗಳಲ್ಲಿ ಪ್ರಕೃತಿಯ ಸೊಬಗು ಮನುಷ್ಯನ್ನು ರಂಜಿಸುತ್ತದೆ. ಆ ರೀತಿಯ ಅನುಭವವಾಗುವವರೆಗೂ, ಅದು ಅವನಿಗೆ ತಿಳಿಯದ ರೀತಿಯಲ್ಲಿ ಅವ್ಯಕ್ತವಾಗಿರುತ್ತದೆ.

ಕುವೆಂಪು ಅವರು "ಮನುಷ್ಯನ ಆತ್ಮದಲ್ಲಿಯೆ ಯಾತ್ರೆಯ ಆವಶ್ಯಕತೆಗೆ ಒಂದು ಆಧಾರವಿರಬಹುದೆ? ಮನುಷ್ಯ ವಾಸ್ತವವಾಗಿಯೂ ಈ ಪ್ರಪಂಚದಲ್ಲಿ ಒಬ್ಬ ಪ್ರವಾಸಿ. ಅವನ ಜೀವನ ಸಮಸ್ತವೂ ಒಂದು ಪ್ರವಾಸ." ಕುವೆಂಪುರವರು ಮೂಲತಃ ಯಾವ ದೂರದ ಪ್ರವಾಸಗಳನ್ನು ಕೈಗೊಂಡವರಲ್ಲ. ಆದರೆ ಪ್ರೇಕ್ಷಣೀಯ ಸ್ಥಳಗಳನ್ನು ಕುರಿತ ಮಾಹಿತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಪ್ರತಿಯೊಂದು ಪ್ರಸಿದ್ಧ ಸ್ಥಳಗಳ ವಿಷಯಗಳನ್ನು ಗ್ರಹಿಸಿದ್ದರು. ಆದ್ದರಿಂದ ಅವರ ಅದ್ಭುತ ಕಲ್ಪನಾಶಕ್ತಿಯಿಂದ ಅವೆಲ್ಲವುಗಳನ್ನು ಕಾಣುತ್ತಿದ್ದರು. ಹಾಗಾಗಿ ಅನಾಯಾಸವಾಗಿ ಪ್ರವಾಸ ಮಾಡುತ್ತಿದ್ದರಲ್ಲದೆ, ಜೀವನದ ಸರ್ವವನ್ನು ಪ್ರವಾಸವಾಗಿ ನೋಡಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಡಾ॥ಸಿ.ಪಿ. ಕೃಷ್ಣಕುಮಾರ್ ಮತ್ತು ಕುವೆಂಪು ನಡುವಿನ ಒಂದು ಘಟನೆಯಿಂದ ಸ್ಪಷ್ಟವಾಗುತ್ತದೆ. ಡಾ॥ಸಿ.ಪಿ. ಕೃಷ್ಣಕುಮಾರ್ ಅವರೆ ಹೇಳುವಂತೆ "ಕುವೆಂಪು ಎಲ್ಲಿಯೂ ಪ್ರವಾಸಕ್ಕೆ ಹೋದವರಲ್ಲ. ಅವರದು ನಿಜವಾಗಿಯೂ ನಿವಾಸಸಾಹಿತ್ಯ, ವಲ್ಮೀಕ ಸಾಹಿತ್ಯ, ಡಾ॥ಜಿ.ಎಸ್. ಶಿವರುದ್ರಪ್ಪನವರ 'ಗಂಗೆಯ ಶಿಖರಗಳಲ್ಲಿ' ಪುಸ್ತಕ ಬಂದಾಗ ಕುವೆಂಪು ಅದನ್ನಿಟ್ಟುಕೊಂಡು ಕುಳಿತಿದ್ದರು. ಆಗಲೇ ನಾನು ಅವರಲ್ಲಿಗೆ ಹೋದೆ, ಮಾತಿಗೆ ಮಾತು ಬಂದು ಅವರು ಹೇಳಿದರು "ನೋಡಿ, ನಾನು ದೆಹಲಿಗೆ ಹೋದದ್ದು ಒಂದೇ ಸಲ, ಜ್ಞಾನಪೀಠ ಪ್ರಶಸ್ತಿ ಬಂದಾಗ. ಆಗ ಅವರೆಲ್ಲ 'ನೀವು ತಾಜ್‌ಮಹಲ್ ನೋಡುವುದಿಲ್ಲವೇ? ಅದು ನೋಡುವುದಿಲ್ಲವೇ?

ಇದು ನೋಡುವುದಿಲ್ಲವೇ? ಬಹಳ ಸಮೀಪ ನಾವು ಕರೆದುಕೊಂಡು ಹೋಗುತ್ತೇವೆ' ಇತ್ಯಾದಿ. ಎಂದು "ನಾನು ತಾಜ್ ಮಹಲ್ ನನಗೆ ಚಿರಪರಿಚಿತ ನಾನು ಅಲ್ಲಿಗೆ ಹೋಗದಿದ್ದರೂ ಅದನ್ನು ಅನುಭವಿಸಿದ್ದೇನೆ" ಎಂದೆ, "ಅದನ್ನು ನೋಡುವ ಅಗತ್ಯವಿಲ್ಲ ದಯವಿಟ್ಟು ಕೂಡಲೇ ನನ್ನನ್ನು ನೇರವಾಗಿ ಮೈಸೂರಿಗೆ ರವಾನಿಸಿಬಿಡಿ' ಎಂದೆ." ಆಮೇಲೆ ಕುವೆಂಪು 'ಗಂಗೆಯ ಶಿಖರಗಳಲ್ಲಿ' ಪುಸ್ತಕವನ್ನು ಕುರಿತೂ ಹೇಳಿದರು. "ಶಿವರುದ್ರಪ್ಪನವರು ಚೆನ್ನಾಗಿ ಬರೆದಿದ್ದಾರೆ. ಅದನ್ನು ಓದಿದ ಮೇಲೆ ನಾನು ಅವರಿಗಿಂತಲೂ ಚೆನ್ನಾಗಿ ಅದನ್ನೆಲ್ಲ ಕಾಣಬಲ್ಲೆ" – ಎಂದರು ಕುವೆಂಪು."[28]

ಭಾರತೀಯ ದೃಷ್ಟಿಕೋನದ ಮೇಲಿನ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಿದರೆ ಕೆಲವು ಸಂಗತಿಗಳು ಸ್ಪಷ್ಟವಾಗುತ್ತವೆ. ಪ್ರವಾಸವು ಮುಖ್ಯವಾಗಿ ಆತ್ಮದ ವಿಕಾಸಯಾತ್ರೆ. ಇದು ಭೌತಿಕತೆಗಿಂತ ಆಧ್ಯಾತ್ಮಿಕತೆಗೆ ಹೆಚ್ಚು ಆದ್ಯತೆಯನ್ನು ಕೊಡುತ್ತದೆ. ಪ್ರವಾಸವು ವ್ಯಕ್ತಿಯ ವ್ಯಕ್ತಿತ್ವದ ಅಂತರಂಗವನ್ನೂ ಆತನ ಭವಿಷ್ಯತ್ ದೃಷ್ಟಿಕೋನವನ್ನೂ ಬೆಳಗಿಸುತ್ತದೆ.

ಭಾರತೀಯ ದೃಷ್ಟಿಕೋನವು ಕನ್ನಡ ವಿದ್ವಾಂಸರ ದೃಷ್ಟಿಕೋನದಲ್ಲೂ ಪ್ರತಿಫಲಿತವಾಗಿದೆ. ಪ್ರವಾಸ ಎನ್ನುವುದು ಕನ್ನಡ ಸಂಸ್ಕೃತಿಗೆ ಒಂದು ವಿಶಿಷ್ಟ ಯಾತ್ರೆ. ಅದೊಂದು ಜೀವನಾನುಭವ. ಪ್ರವಾಸದ ಅನುಭವವು ಬದುಕಿಗೆ ಪೂರಕವಾಗಿತ್ತು. 'ಯಾತ್ರೆ' ಅಂತಿಮವಾಗಿ 'ಪ್ರವಾಸ'ವಾಗಿ ಪರಿಣಮಿಸಿತು. ಕನ್ನಡ ವಿದ್ವಾಂಸರು ಚರ್ಚಿಸಿರುವ ಮಾತುಗಳನ್ನು ಗಮನಿಸಿದರೆ ಇದು ಸತ್ಯವೆಂದು ತಿಳಿಯುತ್ತದೆ. 'ಪ್ರವಾಸ ಸಾಹಿತ್ಯ'ದ ಪರಿಕಲ್ಪನೆಯನ್ನು ತುಂಬ ಆಳವಾಗಿ ವ್ಯಾಖ್ಯಾನಿಸಿದವರು ಕನ್ನಡ ವಿದ್ವಾಂಸರೆಂಬುದು ಒಂದು ವಿಶಿಷ್ಟ ಅಂಶ. ಈ ಹಿನ್ನೆಲೆಯಲ್ಲಿ ಕನ್ನಡ ವಿದ್ವಾಂಸರ ದೃಷ್ಟಿಕೋನ ವಿಚಾರಾರ್ಹವಾಗಿದೆ.

## 5. ಅಮೇರಿಕಾ ಪ್ರವಾಸ ಕಥನಗಳ ಸಮೀಕ್ಷೆ

ವಿದೇಶಿ ಪ್ರವಾಸಗಳಲೆಲ್ಲಾ ಅತ್ಯಂತ ಆಕರ್ಷಣೆಗೆ ಒಳಗಾಗಿರುವ ದೇಶ ಅಮೇರಿಕಾ. ಅಮೇರಿಕಾವನ್ನು ಶಿಕ್ಷಣಕ್ಕಾಗಿ, ಸಭೆ–ಸಮಾರಂಭಗಳಲ್ಲಿ ಭಾಗವಹಿಸುವುದಕ್ಕಾಗಿ, ವ್ಯಾಪಾರಕ್ಕಾಗಿ, ಬಂಧು–ಬಳಗಗಳ ವೀಕ್ಷಣೆಗಾಗಿ, ಉದ್ಯೋಗಕ್ಕಾಗಿ, ಐಟಿ–ಬಿಟಿ ಕಾರ್ಯನಿಮಿತ್ತವಾಗಿ ಅಥವಾ ಅಮೇರಿಕನ್ನರ ಜೀವನ ವಿಧಾನ, ಸಾಮಾಜಿಕ ಸಮಸ್ಯೆ, ಭೋಗ ಜೀವನ, ಯಾಂತ್ರೀಕರಣ ಮುಂತಾದ ಹಲವು ಕಾರಣಗಳಿಗಾಗಿ ಪ್ರತಿನಿತ್ಯವೂ

ಅಮೇರಿಕಾ ಪ್ರವಾಸ ಕೈಗೊಳ್ಳುವವರ ಸಂಖ್ಯೆ ಅಧಿಕವಾಗಿದೆ. ಅಮೇರಿಕಕ್ಕೆ ಪ್ರವಾಸ ಮಾಡಿದವರೆಲ್ಲಾ ಪ್ರವಾಸ ಕೃತಿಗಳನ್ನು ಬರೆಯಲು ಸಾಧ್ಯವಿಲ್ಲ. ಕೆಲವರಿಗೆ ಸಾಹಿತ್ಯಕ ಸ್ವರೂಪ ನೀಡಲು ಸಾಧ್ಯವಿಲ್ಲವಾದರೆ ಇನ್ನೂ ಕೆಲವರಿಗೆ ಸಮಯದ ಅಭಾವದಿಂದಲೂ, ಮತ್ತೆ ಕೆಲವರಿಗೆ ಸೋಮಾರಿತನದಿಂದಲೂ ವಿದೇಶಕ್ಕೆ ಹೋಗಿ ಬಂದವರೆಲ್ಲ ಬರೆಯದಿದ್ದರೂ, ಲಭ್ಯವಿರುವ ಪ್ರವಾಸ ಕಥನಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವುವು ಅಮೇರಿಕಾ ಪ್ರವಾಸ ಕಥನಗಳೆಂಬುದು ನಿರ್ವಿವಾದ.

"ಅಮೆರಿಕ ಪ್ರವಾಸ ಕಥನಗಳಲ್ಲಿ ಸಾಕಷ್ಟು ವೈವಿಧ್ಯವನ್ನು ನಾವು ಕಾಣಬಹುದು. ಅಮೇರಿಕಾದಂಥ ವಿಶಾಲ ರಾಷ್ಟ್ರವನ್ನು ಮೂಲಭೂತವಾಗಿ ಭೇಟಿ ನೀಡಿದವರೆಲ್ಲರೂ ಎಲ್ಲವನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಒಬ್ಬೊಬ್ಬರು ಒಂದೊಂದು ಮುಖವನ್ನು ಅವರವರ ಮನೋಧರ್ಮದ ಮೂಲಕ; ವ್ಯಕ್ತಿತ್ವಗಳ ಮೂಲಕ ಸೊಗಸಾಗಿ ನೋಡಿ ವರ್ಣಿಸಿರುವುದರಿಂದ ವಾಚಕರಿಗೆ ಹೊಸದೆನಿಸುತ್ತದೆ. ಡಾ॥ಸಿ.ಪಿ. ಕೃಷ್ಣಮೂರ್ತಿ ಅವರು ಸಾಹಿತ್ಯವೇ 'ಲೈಫ್ ಸೀನ್ ಥ್ರೊ ಎ ಟೆಂಪರಮೆಂಟ್' ಸಾಹಿತ್ಯವೆಂದರೆ ಮನೋಧರ್ಮದ ಮೂಲಕ ಕಂಡಂಥ ಬದುಕು. ಈ ಮಾತು ಪ್ರವಾಸ ಸಾಹಿತ್ಯಕ್ಕೂ ಅನ್ವಯಿಸುತ್ತದೆ"[29] ಎಂದಿದ್ದಾರೆ.

ಅಮೆರಿಕನ್ನರ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಹಲವು ಮಜಲುಗಳನ್ನು ಡಾ॥ಬಿ.ಜಿ.ಎಲ್. ಸ್ವಾಮಿಯವರಿಂದ ಪ್ರಾರಂಭವಾಗಿ, ಕೃಷ್ಣಾನಂದ ಕಾಮತ್, ಪ್ರಭುಶಂಕರ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎ.ಎನ್. ಮೂರ್ತಿರಾವ್, ವ್ಯಾಸರಾಯ ಬಲ್ಲಾಳ, ಶಿವರಾಮ ಕಾರಾಂತ, ವಿ.ಕೃ.ಗೋಕಾಕ್, ಡಾ॥ಜಿ.ಎಸ್. ಶಿವರುದ್ರಪ್ಪ, ದೇಜಗೌ ಮೊದಲಾದ ಹಿರಿಯ ಸಾಹಿತಿಗಳು ಅಮೇರಿಕಾಕ್ಕೆ ಭೇಟಿ ನೀಡಿ ರಚಿಸಿದ ಪ್ರವಾಸ ಕಥನಗಳಿವೆ. ಆದರೆ ಅಮೆರಿಕಾ ಮೂಲನಿವಾಸಿಗಳನ್ನು ಕುರಿತು ಇಂದಿನವರೆಗೂ ಅತ್ಯುತ್ತಮ ಪ್ರವಾಸ ಕಥನ ಬಂದಿಲ್ಲ.

ಪ್ರವಾಸದ ಅನುಭವಗಳನ್ನು ಕುರಿತಂತೆ ಪ್ರಸ್ತುತ ಕನ್ನಡದಲ್ಲಿ ಪ್ರವಾಸ ಕಥನಗಳು ವಿಪರೀತವಾಗಿವೆ. ಇದರಲ್ಲಿ ಮಹಿಳೆಯರ ಅಮೇರಿಕಾ ಪ್ರವಾಸ ಕಥನಗಳು ಸಾಕಷ್ಟಿವೆ. ಮಹಿಳೆಯರ ಪ್ರವಾಸ ಕಥನಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ರಚನೆಯಾಗಿದ್ದರೂ, ಲಭ್ಯವಾಗಿರುವುದು ಸ್ವಾತಂತ್ರ್ಯೋತ್ತರದಲ್ಲಿಯೇ. ಕಾರಣವೆಂದರೆ: ಸೌಲಭ್ಯ, ಪ್ರೋತ್ಸಾಹಗಳು ಸಾಕಷ್ಟಿಲ್ಲದ ಕಾಲದಲ್ಲಿ ಮಹಿಳೆಯರು ಏಕಾಂಗಿಯಾಗಿ ಪ್ರವಾಸ ಮಾಡುವುದು ವಿರಳವಾಗಿತ್ತು. ಆದರೆ ಕಾಲ ಬದಲಾದಂತೆ ಶೈಕ್ಷಣಿಕ ಪ್ರಭಾವ ಮತ್ತು ಆರ್ಥಿಕ

ಚೈತನ್ಯದ ಪರಿಣಾಮದಿಂದಾಗಿ ಮಹಿಳೆಯರೂ ಪ್ರವಾಸ ಮಾಡಿ ತಮ್ಮ ಅನುಭವಗಳನ್ನು ಕೃತಿ ರೂಪದಲ್ಲಿ ಹೊರ ತರುವುದರ ಮೂಲಕ ಪ್ರವಾಸ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನಿತ್ತಿದ್ದಾರೆ.

**ಸಾಹಿತ್ಯಕ ಪ್ರವಾಸ ಕಥನಗಳ ಲಕ್ಷಣ :**

ಕಾವ್ಯ, ನಾಟಕ, ಕಥೆ, ಕಾದಂಬರಿ ಮುಂತಾದವುಗಳನ್ನು ರಚಿಸಿರುವ ಸೃಜನಾತ್ಮಕ ಬರವಣಿಗೆಗಾರರು ಅಮೇರಿಕಾ ದೇಶದ ಪ್ರವಾಸ ಕೈಗೊಂಡು ರಚಿಸಿದಂಥ ಕಥನಗಳನ್ನು ಸಾಹಿತ್ಯಕ ಪ್ರವಾಸ ಕಥನಗಳು ಎಂಬುದು ವಿಚಾರವಂತರ ಸ್ಥೂಲವಾದ ಅಭಿಪ್ರಾಯ. ಪ್ರಸ್ತುತ ಅಮೇರಿಕಾ ಪ್ರವಾಸ ಕೃತಿಗಳಲ್ಲಿ ಸಾಹಿತ್ಯಕ ಪ್ರವಾಸ ಕಥನಗಳೇ ಅತ್ಯಧಿಕವಾಗಿವೆ. ಕಾರಣ ಸಾಹಿತಿಗಳಿಗೆ ಬರವಣಿಗೆ ಶೈಲಿ ಸಿದ್ಧಿಸಿರುವುದರಿಂದ ಅವರ ಅನುಭವಗಳನ್ನು ಅಭಿವ್ಯಕ್ತಪಡಿಸುವುದರಲ್ಲಿ ಯಾವುದೇ ಸೊಡುಕುಗಳಿರುವುದಿಲ್ಲ. ಹಾಗಾಗಿ ಪ್ರತಿದಿನ ಲಕ್ಷಾಂತರ ಜನ ಅಮೇರಿಕಾ ಪ್ರವಾಸ ಮಾಡಿದರೂ ಅವರೆಲ್ಲರೂ ಕೃತಿ ರಚಿಸಲು ಅನೇಕ ಸಮಸ್ಯೆಗಳೆದುರಾಗುವುದರಿಂದ  ಬಹುಜನರಿಗೆ ಬರೆಯಲು ಸಾಧ್ಯವಾಗುವುದಿಲ್ಲ. ಆದರೆ ಸಾಹಿತಿಗಳಿಗೆ ಸರಾಗವಾದ ನಿರೂಪಣಾ ಶೈಲಿ ಕರಗತವಾಗಿರುವುದರಿಂದ ಸಾಮಾನ್ಯವಾಗಿ ವಿದೇಶಗಳಿಗೆ ಹೋಗಿ ಬಂದಂಥ ಸಾಹಿತಿಗಳೆಲ್ಲರೂ ಕೃತಿಗಳನ್ನು ರಚಿಸಿರುವುದರಿಂದ ಪ್ರವಾಸ ಕೃತಿಗಳನ್ನು 'ಸಾಹಿತ್ಯಕ ಪ್ರವಾಸ ಕಥನಗಳು', ಹವ್ಯಾಸಿ ಪ್ರವಾಸ ಕಥನಗಳು', 'ನಿಯೋಗಿ ಪ್ರವಾಸ ಕಥನಗಳು' ಎಂದು ವಿಭಾಗಿಸಿದಾಗ ಸಾಹಿತ್ಯಕ ಪ್ರವಾಸ ಕಥನಗಳೇ ಗಣನೀಯವಾಗಿವೆ.

**ಸಾಹಿತ್ಯಕ ಪ್ರವಾಸ ಕಥನಗಳು :**

ನಾಡಿಗ ಕೃಷ್ಣಮೂರ್ತಿ ಅವರ ಕ್ರಿ.ಶ. 1952ರ **'ಸಾಗರದಾಚೆ'** ಶೈಕ್ಷಣಿಕ ಪ್ರವಾಸ ಕೃತಿಯಾಗಿದೆ. ಈ ಕೃತಿಯನ್ನು ಸಾಕಷ್ಟು ವೈಭವೀಕರಿಸಿ, ತಾವು ಅಮೇರಿಕಾ ವ್ಯಾಸಂಗಕ್ಕೆ ತೆರಳಿದ ಪ್ರಯಾಸಗಳ ಸಾಧನೆ ಮತ್ತು ಕೆಲವೊಮ್ಮೆ ಅಲ್ಲಿಂದ ಹಿಂದಿರುಗಿಬಿಡಬೇಕೆಂಬ ಮನಃಸ್ಥಿತಿ ಇತ್ಯಾದಿಗಳಿದ್ದರೂ, ಅನೇಕ ಶೈಕ್ಷಣಿಕ ಮಾಹಿತಿಗಳಾದ ವಿಶ್ವವಿದ್ಯಾನಿಲಯ ಹಾಗೂ ಪ್ರತಿಕೋದ್ಯಮಕ್ಕೆ ಸಂಬಂಧಿಸಿದಂತೆ ಅನೇಕ ಮಾಹಿತಿಗಳನ್ನು ಈ ಪುಸ್ತಕದ ಮೂಲಕ ಪ್ರಸ್ತುತಪಡಿಸಿದ್ದಾರೆ[30].

ಬಿ.ಜಿ.ಎಲ್.ಸ್ವಾಮಿಯವರ ಕ್ರಿ.ಶ 1962ರ **'ಅಮೇರಿಕದಲ್ಲಿ ನಾನು'** ಎಂಬ ಕೃತಿ ಹಾಸ್ಯ ರಸಧಾರೆಯ ಅತ್ಯುತ್ತಮ ಶೈಕ್ಷಣಿಕ ಪ್ರವಾಸ ಕೃತಿಯಾಗಿದೆ. ಕ್ರಿ.ಶ 1945-1951 ರವರೆಗಿನ ಸುಮಾರು ಆರು ವರ್ಷಗಳ

ಬಾಸ್ಕನ್ ಹಾರ್ವಾರ್ಡ್ ವಿಶ್ವವಿದ್ಯಾನಲಯದಲ್ಲಿನ ಉನ್ನತ ವ್ಯಾಸಂಗದೊಂದಿಗೆ ಅಲ್ಲಿನ ಜನ-ನೆಲಗಳ ಸ್ವಾರಸ್ಯಪೂರ್ಣ ನರೂಪಣೆಯನ್ನು ಮಾಡುತ್ತಾರೆ. ಮನುಷ್ಯನ ದೇಶ, ಭಾಷೆ, ವೇಷ, ವರ್ಗ, ಮತ ಮೊದಲಾದವುಗಳಲ್ಲಿ ಭಿನ್ನತೆ ಹೊಂದಿದ್ದರೂ ಆಕರದಲ್ಲಿನ ಸಾಮ್ಯತೆ ಮತ್ತು ಮನುಷ್ಯನ ಸ್ವಭಾವದ ಸಾದೃಶ್ಯಗಳ ಮೇಲೆ ಬೆಳಕನ್ನು ಅವರು ಚೆಲ್ಲುತ್ತಾರೆ.

**'ಗೆಜ್ಜೆಯ ಹೆಜ್ಜೆನುಡಿ'** 1971 : ಚಂದ್ರಭಾಗಾದೇವಿಯವರ ಈ ಪ್ರವಾಸ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಎರಡನೇ ಬಹುಮಾನ ಲಭಿಸಿದೆ. ಇದು ದಂಪತಿಗಳಿಬ್ಬರ ಕಲಾಯಾತ್ರೆಯನ್ನು ಕುರಿತದ್ದು. ಕೌಟುಂಬಿಕ ಪತ್ರಗಳ ಸಂಕಲನದಂತಿದೆ. ಲೇಖಕಿ ತಮ್ಮ ಪ್ರವಾಸ ಸಮಯದಲ್ಲಿ ನೀಡಿದ ಉಪನ್ಯಾಸ ಮತ್ತು ನೃತ್ಯ ಪ್ರದರ್ಶನಗಳಿಗೆ ಸಂದ ಮೆಚ್ಚಿಗೆ ಪುರಸ್ಕಾರಗಳ ಕುರಿತು ಹಾಗೂ ಪೂರಕವಾದ ಅಭ್ಯಾಸ, ಪಾತ್ರವರ್ಗದ ತರಬೇತು ಮುಂತಾದ ವಿವರಗಳಿವೆ[31].

**'ಪಾತಾಳಕ್ಕೆ ಪಯಣ–1973'** ಶಿವರಾಮ ಕಾರಂತರು ಒಂದು ತಿಂಗಳ ಕಾಲ ಅಮೆರಿಕದ ಪ್ರವಾಸ ಮಾಡಿ ಅತ್ಯಲ್ಪ ಅವಧಿಯಲ್ಲೆ ಹೆಚ್ಚು ಹೆಚ್ಚು ನೋಡಿ, ತಿಳಿದು, ಸಂತೋಷಪಡುವ ಕೃತಿಯೇ 'ಪಾತಾಳಕ್ಕೆ ಪಯಣ' ಅತ್ಯಲ್ಪ ಅವಧಿಯಲ್ಲಿ ಆ ದೇಶವನ್ನು ಸಮಗ್ರವಾಗಿ ಅರಿಯಲಾಗದು ಎಂಬ ಅರಿವು ಅವರಿಗಿದ್ದು ಅದನ್ನು ಸ್ವತಃ ಅವರೇ ಸೂಚಿಸಿದ್ದಾರೆ. ಪುತ್ತೂರಿನಿಂದ-ಅಮೇರಿಕಾಗೆ ತಲುಪುವವರೆಗಿನ ಪ್ರಯಾಣದ ವಿವರಗಳೆಲ್ಲಾ ಹಸಿಹಸಿಯಾಗಿ ಮೂಡಿವೆ. ಅದರಲ್ಲೂ ಕಾರಂತರ ಮನಸ್ಸೆಳೆದ ಆರ್ಟ ಮ್ಯೂಸಿಯಮ್‌ಗಳು, ಪ್ರಾಣಿ, ವಸ್ತುಸಂಗ್ರಹಾಲಯ, ಮ್ಯೂಸಿಯಮ್ ಇತ್ಯಾದಿಗಳೆಲ್ಲವನ್ನು ಮಕ್ಕಳಂತೆ ಕುತೂಹಲ ಆಸಕ್ತಿಗಳಿಂದ ವೀಕ್ಷಿಸುತ್ತಾ 'ನಾನು ಕಲಿಯಲು ಹೋದವ; ಕಲಿಸಲು ಅಲ್ಲ' ಎಂಬ ಪ್ರವಾಸಿ ನಿಲುವನ್ನು ತಾಳುತ್ತಾರೆ. ಕಾರಂತರ 'ಅಬುವಿನಂದ ಬರಾಮಕ್ಕೆ, ಅಪೂರ್ವ ಪಶ್ಚಿಮ'ದ ನಿರೂಪಣೆಯ ವ್ಯಂಗ್ಯ, ಮುಳ್ಳು ಇಲ್ಲಿ ಇಲ್ಲ. ಯಾವುದೇ ಪೂರ್ವಾಪರ ಪ್ರತಿನಿಧಿಯಾಗದೆ ಕೇವಲ ಕಾರಂತರಾಗಿ ಪಾತಾಳವನ್ನು ಗಮನಿಸಿದ್ದಾರೆ[32].

ಡಾ. ಪ್ರಭುಶಂಕರ ಅವರ ಕ್ರಿ.ಶ.1978ರ **'ಅಮೇರಿಕದಲ್ಲಿ ನಾನು, ಶಾಂತಿ'** ಪ್ರವಾಸ ಕಥನದ ಹಿಂದಿರುವ ಪ್ರಾಮಾಣಿಕ ದೃಷ್ಟಿ ಸುಸಂಸ್ಕೃತ ಮನಸ್ಸು ಹಾಗೂ ಆತ್ಮೀಯ ಶೈಲಿಗಳಿಂದಾಗಿ ಇದೊಂದು ಅಪರೂಪದ ಕೃತಿಯೇ ಆಗಿದೆ. 'ಅಮೇರಿಕಾ ಇಂದ್ರ ಲೋಕವೆಂದು ನಮ್ಮ ದೇಶ ನರಕವೆಂದು ನಾ

ಭಾವಿಸಿಲ್ಲ ಎಂದು ವಿವರಿಸುತ್ತಾ "ನಾನು ಅಮೇರಿಕಾವನ್ನು ನೋಡಿದ ಹಾಗೂ ಅರ್ಥೈಸುವ ರೀತಿಗಳು ಇತರರಿಗಿಂತ ಭಿನ್ನ ಎನ್ನುತ್ತಾ 'ನಾಲ್ಕಾರು ಅತ್ಯಲ್ಪ ದಿನಗಳಲ್ಲೆ ಅಲ್ಲಿನದನ್ನು ನಾವು ಮನಸ್ಸಿನಲ್ಲೆ ಅಳೆದು ತೂಗಿನೋಡುವ ನಿರಂತರ ಕ್ರಿಯೆಗೆ ಸಹಜವಾಗಿಯೇ ಅಭಿವ್ಯಕ್ತವಾಗುವ ಪ್ರತಿಕ್ರಿಯೆಗಳನ್ನು ಹೇಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ" ಎಂಬ ತಮ್ಮ ಇತಿಮಿತಿಗಳ ಅರಿವವನ್ನು ಸ್ಪಷ್ಟಪಡಿಸುತ್ತಾ, ಕ್ರಿಯಾಶೀಲ ಬರವಣಿಯೊಂದಿಗೆ ಒಂದು ದೇಶದ ಪ್ರತ್ಯಕ್ಷ ದರ್ಶನವನ್ನೀತ್ತಿರುವುದು ಪ್ರಶಂಸಾದಾಯಕವಾಗಿದೆ[33].

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕ್ರಿ.ಶ. 1979ರ **'ಅಮೆರಿಕಾದಲ್ಲಿ ಗೊರೂರು'** ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ ಪ್ರಪ್ರಥಮ ಪ್ರವಾಸ ಕಥನವಾಗಿದೆ. ನೇರ ನಡೆ-ನುಡಿಯ ನಿರೂಪಣಾ ತಂತ್ರದೊಂದಿಗೆ ಕಾವ್ಯದ ಮೆರುಗನ್ನು ಅಳವಡಿಸಿ ಓದುಗರನ್ನು ಇವರು ಆಕರ್ಷಿಸುತ್ತಾರೆ. ಅಮೇರಿಕಾದ ಪ್ರೇಕ್ಷಣೀಯ ಸ್ಥಳಗಳ ವರ್ಣನೆ ಮತ್ತು ಅಲ್ಲಿಯ ಕನ್ನಡ-ಕನ್ನಡಿಗರ ಪರಿಸ್ಥಿತಿಗಳು ಸರಣಿಯಾಗಿಯೇ ಬರುತ್ತವೆ. ಕೃತಿಯ ಆದ್ಯಂತಗಳಲ್ಲೂ ಲೇಖಕರೆ ವಿಶಿಷ್ಟ ಪಾತ್ರವಾಗಿ ಮೇಳೈಸಿದ್ದಾರೆ. ಸ್ಮರಣೆಯಲ್ಲಿ ನಿಲ್ಲುವ ಅಮೇರಿಕಾದ ನಯ-ನಾಜೂಕುಗಳೊಂದಿಗೆ ಲೇಖಕರ ಅನುಭವವೂ ಸೇರಿ ಪರಿಪಕ್ವವಾಗುವುದಕ್ಕಿಂತ ಸ್ವತಃ ತಾವೇ ವಿಶಿಷ್ಟವಾದ ಅನುಭವವನ್ನುಣ್ಣಿಸುವ ಪ್ರಸಂಗಗಳಿವೆ[34].

ಎ.ಎನ್.ಮೂರ್ತಿರಾವ್ ಅವರ ಕ್ರಿ.ಶ. 1979ರ **'ಅಪರ ವಯಸ್ಕನ ಅಮೆರಕಾ ಯಾತ್ರೆ'**ಯೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ ಅನನ್ಯ ಕೃತಿಯಾಗಿದೆ. ಹಿತವಾದ ಶೈಲಿಯಿಂದ ಕೂಡಿ ಅಧಿಕ ತೃಪ್ತಿ ನೀಡುವ ಪ್ರವಾಸ ಕಥನವಿದು. ಶ್ರೀಯುತರಿಗೆ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಜ್ಞಾನ ಈ ಕೃತಿಯ ಸತ್ವಯುತ ಅಂಶವಾಗಿದೆ. ತೌಲನಿಕ ನಿಲುವಿನೊಂದಿಗೆ ಪೌರಾತ್ಯ ಸಂಸ್ಕೃತಿಯ ಪ್ರಾಚೀನತೆ, ಶ್ರೇಷ್ಠತೆಯ ತಿಳುವಳಿಕೆ ಆಂತರಿಕವಾಗಿ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಅಮೇರಿಕಾದ ಪ್ರೇಕ್ಷಣೀಯ ಸ್ಥಳಗಳೊಂದಿಗೆ ನಯಾಗರ ವರ್ಣನೆ ಕಾವ್ಯಮಯವಾಗಿ ಹೃದ್ಯವಾಗಿರುವುದು, ರಾಕಿಪರ್ವತ ಪ್ರಾಂತ್ಯದ ಪರಿಚಯದೊಂದಿಗೆ ಆ ದೇಶದ ಮತ್ತೊಂದು ಮುಖವಾದ 'ಕೊಂದು ಕೂಗುವ ಹಿಂಸಕರು', 'ನನ್ನ ಅಮೇರಿಕನ್ ಬೀಗರು (1)', 'ನನ್ನ ಯೆಹೂದ್ಯ ಮಿತ್ರರು', ಕಾರೆಲ ಯಾನ್ಸೆನ, ಶ್ರೀಮತಿ ಸುಭಾಷಿಣಿ & ಗುಂಡೂರಾಯರು' ಎಂಬ ಭಾಗಗಳ ಜೊತೆ 'ಶಾಖಾಹಾರಿಗಳಿಗೆ ಸಂದೇಶ' ನೀಡುವುದನ್ನು ಮರೆತಿಲ್ಲ[35].

[illegible]

[illegible]

[illegible]

[illegible]

**'ನಾವು ಕಂಡ ಅಮೇರಿಕಾ'** 1981 : ಸೀತಮ್ಮ ನಂಜೇಗೌಡ ದಂಪತಿಗಳೀರ್ವರೂ ಅಮೇರಿಕಾ ದೇಶಕ್ಕೆ ಪ್ರವಾಸ ಬೆಳೆಸಿ ಅಲ್ಲಿ ಕಂಡ ಅನುಭವಗಳನ್ನು ಚಿತ್ರಿಸಿದ್ದಾರೆ. ಅಮೇರಿಕಾ ದೇಶದ ಜನರು, ಅಲ್ಲಿರುವ ವಿಶೇಷವಾದ ಪ್ರೇಕ್ಷಣೀಯ ಸ್ಥಳಗಳು ಇತ್ಯಾದಿಗಳೆಲ್ಲವನ್ನು ಚಿತ್ರಿಸಿರುವುದರೊಂದಿಗೆ ಸೀತಮ್ಮನವರ ಇನ್ನೊಂದು ವಿಶೇಷತೆ ಎಂದರೆ ಲೋಯರ್ ಸೆಕೆಂಡರಿಯವರೆಗೆ ವಿದ್ಯಾಭ್ಯಾಸ ನಡೆಸಿ ಕತೆ, ಕಾದಂಬರಿ, ಹಳ್ಳಿಯ ಜೀವನ ಹಾಗೂ ಕೃಷಿ ಸಂಬಂಧಿತ ಕೃತಿಗಳು ಹಾಗೂ ಪ್ರವಾಸ ಕೃತಿ ಸೇರಿದಂತೆ ಒಟ್ಟು ಏಳು ಕೃತಿಗಳನ್ನು ಕನ್ನಡದಲ್ಲಿ ಹೊರತಂದಿದ್ದಾರೆ[36].

ಶ್ರೀಮತಿ ಸುಧಾಮೂರ್ತಿಯವರ **'ಅಟ್ಲಾಂಟಿಕ್‌ದಾಚೆಗೆ-1981'** ಇದರ ಅಂತ್ಯದ ಇಪ್ಪತ್ಮೂರು ಪುಟಗಳನ್ನು ಹೊರತುಪಡಿಸಿ ಉಳಿದೆಲ್ಲಾ ಅಮೇರಿಕಾ ಕುರಿತ ಪ್ರವಾಸ ಕಥನವಾಗಿದೆ. ಈ ಕೃತಿ ವೈಶಿಷ್ಯವೆಂದರೆ ಲೇಖಕಿಯೊಂದಿಗೆ ಕುಟುಂಬದವರಾಗಲಿ, ಸ್ನೇಹಿತರಾಗಲಿ ಪ್ರವಾಸ ಮಾಡದೆ ಏಕಾಂಗಿಯಾಗಿ ವಿದೇಶ ಪ್ರವಾಸ ಮಾಡಿರುವುದೇ ಆಶ್ಚರ್ಯಕಾರಿ ಹಾಗೂ ರೋಮಾಂಚಕಾರಿಯೂ ಆಗಿದೆ. ಭಾರತೀಯ ಮಹಿಳೆಯೊಬ್ಬರು ಒಬ್ಬರೇ ವಿದೇಶ ಪ್ರವಾಸ ಮಾಡುವುದು ಆಗಿನ ಕಾಲದಲ್ಲಿ ಸುಲಭದ ಮಾತಲ್ಲ. ಇದು ಒಂದು ಸಾಧನೆ ಎನ್ನಬಹುದು. ಗ್ಯಾಂಡ್ ಕ್ಯಾನಿಯನ್, ಡಿಸ್ನಿಲ್ಯಾಂಡ್, ಹಾಲಿವುಡ್, ಲೂವ್ರ ವಸ್ತು ಸಂಗ್ರಹಾಲಯ, ವರ್ಸಾಯ್ ಅರಮನೆ ಇತ್ಯಾದಿಗಳನ್ನೊಳಗೊಂಡಂತೆ ನುರಿತ ಸ್ವಾಭಾವಿಕ ನರೂಪಣಾ ತಂತ್ರದಂತಿದೆ[37].

ರಂಜನ ಭಟ್ಟ ಅವರ 1983ರ **'ಕುಬೇರ ರಾಜ್ಯದ ಚಿತ್ರ-ವಿಚಿತ್ರ'**ದಲ್ಲಿ ಅಮೇರಿಕಾವನ್ನು ಎರಡು ಬಾರಿ ಪ್ರವಾಸ ಮಾಡಿ ಅಲ್ಲಿನ ವಾಸ-ಪ್ರವಾಸಗಳಲ್ಲಿ ತಮ್ಮನ್ನು ತಟ್ಟಿದ ತಡವಿದ ಅನುಭವಗಳನ್ನು ನಿರೂಪಿಸಿದ್ದಾರೆ. ಸ್ವತಃ ಲೇಖಕರ ಅಭಿಪ್ರಾಯದಂತೆ ಅಮೇರಿಕಾ ಅಥವಾ ಇತರ ದೇಶಗಳ ಇತಿಹಾಸ ಭೂಗೋಳಗಳಾಗಲಿ, ಅಂಕಿ ಸಂಖ್ಯೆಗಳ ಕೋಷ್ಟಕಗಳಾಗಲಿ ಇಲ್ಲಿ ಇಲ್ಲ. ಹೊಸ ಜಗತ್ತಿನ ಹೊಂಬಿಸಿಲಲ್ಲಿ ಹಳೆಯ ಜಗತ್ತಿನಿಂದ ಹೋದ ಮುಕ್ತ ಹೃದಯದ ಆಗಂತುಕನಿಗೆ ಅನಿಸಿದ ಭಾವನೆಗಳ, ಮೂಡಿದ ಅನುಭವಗಳ ಸಂಕಲನ ಇಲ್ಲಿದೆ. ತೋರಿದ ಅನುಭವಗಳಿಗೆ ಮೂಡಿದ ಅನುಭವಗಳ ಸಂಕಲನ ಮತ್ತು ಮಾತಿನ ಪರಿವೇಷ ತೊಡಿಸುವ ಸಾಹಸ ಇಲ್ಲಿದೆ ಎಂದಿದ್ದಾರೆ.

ಕುಬೇರನ ರಾಜ್ಯದಲ್ಲಿ ಪ್ರತಿಯೊಂದು ಸರಿಯಾಗಿಲ್ಲ, ನೆಮ್ಮದಿಯಿಂದಿಲ್ಲ. ಶ್ರೀಮಂತ ದೇಶದ ಜನರ ವಿಲಾಸೀ ಬುದುಕು, ಮಿ. ಗೋಲ್ಡವಿಕ್‌ರಂತಹ ವೃದ್ಧರ ಹತಾಶೆಯ ಬುದುಕು, ಶ್ರಮಪಟ್ಟು

ದುಡಿದರೂ ಪಾವೆಲ್ಲರಂತಹ ಶ್ರೀಮಂತ ರೈತರ ನೆಮ್ಮದಿಯಿಲ್ಲದ ಬದುಕು ಅವರ ನೋವಿನ ಚಿತ್ರಣವನ್ನು ಕಾಣಬಹುದು. ಕುಬೇರ ರಾಜ್ಯದ ಜಾಹಿರಾತು ಪ್ರಪಂಚದ ಚಿತ್ರ-ವಿಚಿತ್ರ ಆಕರ್ಷಣೆಗಳು ನಮ್ಮನ್ನು ಆತಂಕಗೊಳಿಸುತ್ತವೆ. ಮೃತ್ಯುವಿನ ಸಮ್ಮುಖ ಎಂಬ ಅಧ್ಯಾಯದಲ್ಲಿ ಸಾವು ಜೀವಂತವಾಗಿರುವವರ ಪಾಲಿಗೆ ಎಷ್ಟು ದುಬಾರಿ ಎಂಬ ಕಟು ವಾಸ್ತವ ಸತ್ಯವನ್ನು ಮನವರಿಕೆ ಮಾಡಿಸುತ್ತದೆ[38].

**'ನಾ ಕಂಡ-ಆ ಖಂಡ'** 1985 : ನೀಳಾದೇವಿರವರು ಸುಪ್ರಸಿದ್ದ ಕಥೆ ಹಾಗೂ ಕಾದಂಬರಿಗಾರ್ತಿ ಹತ್ತು ಹಲವು ಕಾದಂಬರಿ, ಕತೆಗಳನ್ನು ರಚಿಸಿರುವ ನೀಳಾದೇವಿಯವರು ಎರಡು ವಿದೇಶಿ ಪ್ರವಾಸ ಕೃತಿಗಳನ್ನು ರಚಿಸಿದ್ದಾರೆ. ಸಬಲನ ವಿದೇಶ ಪ್ರವಾಸ ಕೃತಿಯೊಂದಿಗೆ ನಾ ಕಂಡ-ಆ ಖಂಡ ಕೃತಿಯು ಅಮೇರಿಕಾ ಪ್ರವಾಸವೊಂದರ ದಿನಚರಿ ರೂಪದ ಕೃತಿ. ಲೇಖಕಿ ಅಮೇರಿಕಾ ಜನರ ಸ್ಥಿತಿ-ಗತಿ, ಬಫಲೋ, ಟೊರೊಂಟೋ, ಟವರ್, ನಯಾಗರಾ, ಫ್ಲಾರಿಡಾ ಸೈಪ್ರಸ್ ಗಾರ್ಡನ್ ಇವೇ ಮೊದಲಾದ ಪ್ರೇಕ್ಷಣೀಯ ಸ್ಥಳಗಳೊಂದಿಗೆ ಅಮೇರಿಕಾ ಪ್ರವಾಸ ಕೈಗೊಂಡಾಗಿನಿಂದ ಹಿಂದಿರುಗುವವರೆಗಿನ ಅನುಭವವನ್ನು ಚಿತ್ರಿಸಿದ್ದಾರೆ[39].

ಡಾ॥ ರಾ.ಯ.ಧಾರವಾಡಕರವರ **'ನಾನು ಕಂಡ ಅಮೆರಿಕ'**: ಲೇಖಕರು ಕ್ರಿ.ಶ. 1964, 1983 ಮತ್ತು 1987ರಲ್ಲಿ ಸುಮಾರು ಹನ್ನೊಂದು ತಿಂಗಳು ಅಮೇರಿಕಾದಲ್ಲಿ ವಾಸವಿದ್ದು ಮೂರು ಬಾರಿ ಅಮೇರಿಕವನ್ನು ಭೇಟಿ ಮಾಡಿದರು ಲೇಖಕರಿಗೆ ಅಮೇರಿಕಾ ಕುತೂಹಲಕಾರಿ ನಾಡಾಗಿದೆ. ಅಮೇರಿಕನ್ ಮಿತ್ರರ ಸಂಪರ್ಕದಿಂದ ಅಮೇರಿಕನ್ನರ ಜೀವನ ವಿಧಾನವನ್ನು ತಿಳಿದು; ತಿಳಿಸುವುದರ ಜೊತೆಗೆ ಅಮೇರಿಕಾದಲ್ಲಿನ ಅನಿವಾಸಿ ಭಾರತೀಯರ 'ಭಾರತೀಯತೆ'ಯ ಪರಿಶ್ರಮಗಳನ್ನು ವಿವರಿಸುತ್ತಾರೆ. ಇದರೊಂದಿಗೆ ನಯಾಗರ ಜಲಪಾತ, ಡಿಸ್ನಿಲ್ಯಾಂಡ್, ಬಂಗಾರದ ಅರಮನೆಯಲ್ಲಿನ ಕೀರ್ತನೆಗಳ ಆಲಿಕೆ, ಅಲ್ಲಿನ ಸಂಸ್ಕೃತಿಯ ವೈಚಿತ್ರ್ಯ, ಹಬ್ಬಗಳು ಮೊದಲಾದವುಗಳನ್ನೆಲ್ಲಾ ರಸಿಕತೆಯ ಮೆರುಗಿನೊಂದಿಗೆ ಸೊಗಸಾಗಿ, ವಿನೋದವಾಗಿ ಸೆರೆಹಿಡಿದಿದ್ದಾರೆ[40].

ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರಾದ ವ್ಯಾಸರಾಯ ಬಲ್ಲಾಳರ **'ನಾನೊಬ್ಬ ಭಾರತೀಯ ಪ್ರವಾಸಿ-1987'**: ಅಮೆರಿಕಾದಲ್ಲಿ ಐದು ತಿಂಗಳ ಸಮಯ ಮಗಳ ಮತ್ತು ಸಹೋದರನ ಮನೆಯಲ್ಲಿ ವಾಸ್ತವ್ಯ ಮಾಡಿ; ಭಾರತದಿಂದ ಅಮೇರಿಕೆಗೆ ಹೋಗಿ ನೆಲೆಸಿರುವ ಭಾರತೀಯರ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ಎರಡು ಸಂಸ್ಕೃತಿಗಳ ಸಂಘರ್ಷವನ್ನು ಪ್ರಧಾನವಾಗುಳ್ಳ ವೈಶಿಷ್ಟಪೂರ್ಣ ಕೃತಿಯಾಗಿದೆ.

ಲೇಖಕರು ಅಮೇರಿಕೆಯನ್ನು ಪ್ರವಾಸಿಯಾಗಿ ನೋಡುವುದಕ್ಕಿಂತ 'ಭಾರತೀಯನಾಗಿ ದೀರ್ಘಕಾಲ ಅಮೇರಿಕದಲ್ಲಿ ನೆಲೆನಿಲ್ಲುವ ಭಾರತೀಯರ ಭಾರತೀಯತ್ವ ಪೂರ್ವ ಪಶ್ಚಿಮಗಳ ಸಾಂಸ್ಕೃತಿಕ ಸಂಘರ್ಷದಲ್ಲಿ ಹೇಗೆ ಉಳಿದೀತು?' ಎಂಬ ಚಿಂತನೆಯ ಹಿನ್ನೆಲೆಯಲ್ಲಿ ತಾವು ಸಂಪರ್ಕಿಸಿರುವ ಅರಿಜೋನಾ ವಿಶ್ವವಿದ್ಯಾಲಯದ ವಾಕ್‌ಶ್ರವಣ ವಿಜ್ಞಾನದ ಪ್ರಾಧ್ಯಾಪಕ ಡಾ॥ದೀಕ್ಷಿತ್ ಮತ್ತು ಡಾ॥ಲಲಿತಾ ಕುಮಾರಶೇಖರ ಮುಂತಾದವರ ಜೊತೆ ಮುಕ್ತವಾಗಿ ಚರ್ಚಿಸಿ; ಸೂಕ್ಷ್ಮವಾದ ಗ್ರಹಿಕೆಯ ಮೂಲಕ ಅಮೂರ್ತತೆಯಿಂದ ಮೂರ್ತತೆಗೆ ತಮ್ಮ ಅಲೋಚನೆಗಳನ್ನು ಪ್ರೌಢಭಾಷೆಯೊಂದಿಗೆ ರಚಿಸಿದ್ದಾರೆ[41].



**ರಾಜಾಮಣಿ ಸಿ.ಕೆ. ನಾಗರಾಜರಾಯ : ಸುವರ್ಣ ಮಧುಚಂದ್ರ–1988**

ಸಂಗೀತ ಶಿಕ್ಷಕಿಯಾಗಿ ತಮ್ಮದೇ ಆದ ಸಂಯುಕ್ತ ಲಲಿತ ಕಲಾಶಾಲೆಯನ್ನು ನಡೆಸುತ್ತಿದ್ದರು. ರಾಜಾಮಣಿ ಸಿ.ಕೆ. ನಾಗರಾಜರಾಯರವರು ಕೆನಡ ಅಮೆರಿಕಗಳಲ್ಲಿ ಸುಮಾರು ಎರಡು ತಿಂಗಳು ಪ್ರವಾಸ ಕೈಗೊಂಡು. ತಮ್ಮ ಅಮೇರಿಕಾ ಪ್ರವಾಸದ ಅನುಭವವನ್ನು 1988ರ ಸುವರ್ಣ ಮಧುಚಂದ್ರದಲ್ಲಿ ತಾವು ಕಂಡದ್ದನ್ನೂ, ತಮಗಾದ ಅನುಭವಗಳನ್ನು ಸರಳವಾಗಿ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶವನ್ನು ಹೀಗಲೇಯುವುದಿಲ್ಲ. ಪದೇ ಪದೇ ಸಂದರ್ಭಗಳನ್ನು ಹೋಲಿಸಿ ನಿರಾಶೆಯ ನಿಟ್ಟುಸಿರು ಬಿಡುವುದಿಲ್ಲ. ಪುಸ್ತಕದ ಕೊನೆಯ ಭಾಗದಲ್ಲಿ ಒಂದೇ ಒಂದು ಸಲ ಅವರಲ್ಲಿ ಹೋಲಿಕೆಯ ಮಾತು ಬರುತ್ತದೆ[42].

ಡಾ.ಜಿ.ಎಸ್.ಶಿವರುದ್ರಪ್ಪನವರ **'ಅಮೆರಿಕಾದಲ್ಲಿ ಕನ್ನಡಿಗ–1988'**:– ಇದು ಇವರ ಮೂರನೆ ಪ್ರವಾಸ ಕಥನವಾಗಿದೆ. ಲೇಖಕರು ತಮ್ಮ ಸ್ವಂತ ಖರ್ಚಿನಿಂದ ಎರಡು ತಿಂಗಳ ಏಕಾಕಿ ಪ್ರವಾಸ ಕೈಗೊಂಡ ಅನುಭವಗಳ ಸಂಕಲನವೇ ಈ ಕೃತಿ. ಲೇಖಕರಿಗೆ ತಮ್ಮ ಸೀಮಿತ ಅವಧಿಯಲ್ಲಿ ಸಾಧ್ಯವಾದಷ್ಟು ಪ್ರವಾಸಿ ತಾಣಗಳಿಗೇ ಭೇಟಿ ನೀಡಿದ್ದಾರೆ. ಎಲ್ಲೋ ಸ್ಟೋನ್ ಪಾರ್ಕ್, ಸ್ಯಾನ್ ಫ್ರಾನ್ಸಿಸ್ಕೋದ ಬಿಗ್ ಬೇಸಿನ್ ರೆಡ್ ವುಡ್ ಫಾರೆಸ್ಟ್, ಲಾಸ್ ಏಂಜಲೀಸ್, ಯೂನಿವರ್ಸಲ್ ಸ್ಟುಡಿಯೋ, ಜಗತ್ತಿನ ಏಳು ಮಹಾದ್ಭುತಗಳಲ್ಲಿ ಒಂದಾದ ಗ್ರ್ಯಾಂಡ್ ಕ್ಯಾನಿಯನ್ ಆರ್ಲೆಂಡೋದ ಡಿಸ್ನಿ ಜಗತ್ತು, ನಯಾಗರ ಜಲಪಾತ ಮುಂತಾದ ಅನುಭವಗಳ ರಮಣೀಯ ನಿರೂಪಣೆಯನ್ನು ಕಾಣಬಹುದು. ಲೇಖಕರೇ ಹೇಳುವಂತೆ ಇಲ್ಲಿನ ಕನ್ನಡಿಗರ ಕನ್ನಡ ಪ್ರೇಮ, ಕನ್ನಡಿಗರನ್ನೆಲ್ಲಾ ಸಂಪರ್ಕಿಸಿದ್ದು, ಚರ್ಚಿಸಿದ್ದೆಲ್ಲಾ ಕನ್ನಡ ಸಂಘಗಳ ಮೂಲಕವಾದ್ದರಿಂದ ಇದರ ಶೀರ್ಷಿಕೆ ಔಚಿತ್ಯಪೂರ್ಣವಾಗಿದೆ. ಅಮೆರಿಕನ್ ಮಕ್ಕಳ ಸಾಮಾನ್ಯ ಪ್ರಜ್ಞೆ, ಯುವಕರ ಮುಕ್ತ ಒಡನಾಟ ಇತ್ಯಾದಿ ಕುರಿತ ಸಾಮಾಜಿಕ ಪ್ರತಿಬಿಂಬವನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ[43].

ಶ್ರೀಮತಿ.ಸುಶೀಲಾ ಕೊಪ್ಪರವರ **'ಪಡುವಣದ ಪತ್ರಮಾಲೆ–1990'** ಶೀರ್ಷಿಕೆಗುಚಿತವಾದ ಪತ್ರರೂಪದ ಪ್ರವಾಸ ಕಥನ ಲೇಖಕಿ ಚಾತುರ್ಯಯುತವಾಗಿ ಕೇವಲ ಪ್ರೇಕ್ಷಣೀಯ ಸ್ಥಳಗಳ ಮಾಹಿತಿಗಳನ್ನಷ್ಟೆ ಅಲ್ಲದೆ; ಅಲ್ಲಿನ ಸಾಮಾಜಿಕ, ರಾಜಕೀಯ ವಿಷಯಗಳನ್ನು ಪರಿಗ್ರಹಿಸುವ, ವಿಶ್ಲೇಷಿಸುವ ರೀತಿ ಪ್ರಭಾವಪೂರ್ಣವಾಗಿದೆ. ಪತ್ರಕರ್ತೆಯಾಗಿರುವ ಲೇಖಕಿಯ ಲೇಖನಿಯ ವೈಖರಿ ಪ್ರಶಂಸದಾಯಕವಾಗಿದೆ[44].

**'ಅಮೇರಿಕಾ ವಾಸ–ಪ್ರವಾಸ' 1993** : ಪದ್ಮಾಶಣೈರವರು ಎಸ್.ಎಸ್.ಎಲ್.ಸಿ.ವರೆಗೆ ಮಾತ್ರ ಓದಿದ್ದರೂ; 'ಸುಧ', 'ರಸ–ವಿರಸ', 'ಸಂಧಿಕಾಲ', ನರನಾರಾಯಣ', 'ನಾನಿನ್ನ ಧ್ಯಾನದೊಳಿರಲು', 'ಹರಿದ ಗಾಳಿಪಟ', 'ಜಯಶ್ರೀ' ಮುಂತಾದ ಕಾದಂಬರಿಗಳನ್ನು 'ದೂರದ ಆಶೆ' ಕಥಾಸಂಕಲನವನ್ನು, 'ಭಾರತೀಯ ಸ್ತ್ರೀ', 'ಸಮಾಜ ಮತ್ತು ಸಂಸ್ಕೃತಿ' ಎಂಬ ವೈಚಾರಿಕ ಕೃತಿಯನ್ನಲ್ಲದೆ 'ಅಮೇರಿಕಾ ವಾಸ–ಪ್ರವಾಸ' ಎಂಬ ಕೃತಿಯನ್ನು ರಚಿಸಿದ್ದಾರೆ. ಇವರ ರಸ–ವಿರಸ ಕಾದಂಬರಿಗೆ 1962ರ ಮೈಸೂರು ರಾಜ್ಯ ಪ್ರಶಸ್ತಿ ಲಭಿಸಿದೆ. ಲೇಖಕಿ ಎಂಟು ವರ್ಷಗಳ ಕಾಲ ಅಮೇರಿಕಾದಲ್ಲಿ ವಾಸವಾಗಿದ್ದು, ಅಲ್ಲಿ ಉಳಿದಷ್ಟು ದಿನ ಅಮೇರಿಕಾದಲ್ಲಿ ಕಂಡುಂಡಂತಹ ಅನುಭವ ಮತ್ತು ಅಲ್ಲಿನ ಜನರ ಸಂಸ್ಕೃತಿ ಹಾಗೂ ಶ್ರಮ ದುಡಿತ ಇತ್ಯಾದಿಗಳೆಲ್ಲವನ್ನು ಅಮೇರಿಕಾ ವಾಸ–ಪ್ರವಾಸದಲ್ಲಿ ಚಿತ್ರಿಸಿದ್ದಾರೆ. ಈ ಕೃತಿಯ ಶೀರ್ಷಿಕೆ ತುಂಬಾ ಔಚಿತ್ಯಪೂರ್ಣವಾಗಿದೆ[45].

**'ಯುರೋ ಅಮೆರಿಕಾದ ಇಣಕು ನೋಟ'** 1994 : ವನಿತಾ ಕಾದಂಬರಿ ಸ್ಪರ್ಧಾ ವಿಜೇತೆಯಾದ ದೇವಕಿ ಮೂರ್ತಿಯವರು ಯುರೋ ಅಮೆರಿಕಾದ ಇಣುಕು ನೋಟ ಎಂಬ ಪ್ರವಾಸ ಕೃತಿಯೊಂದಿಗೆ ಇನ್ನೂ ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ. ಪಾಶ್ಚಿಮಾತ್ಯ ದೇಶಗಳ ಸ್ವಾನುಭವಗಳನ್ನು; ಅದರಲ್ಲೂ ಅಮೇರಿಕಾದ ನಯಾಗರ, ಪ್ಲಾರಿಡಾ, ಸೈಪ್ರಸ್‌ಗಾರ್ಡನ್, ಸೀವರ್ಲ್ಡ್ ಮೊದಲಾದ ಪ್ರಮುಖ ಪ್ರೇಕ್ಷಣೀಯ ಸ್ಥಳ ವಿಶೇಷತೆಗಳನ್ನು ನವಿರಾಗಿ, ಸೂಕ್ಷ್ಮವಾಗಿ ಬಣ್ಣಿಸಿದ್ದಾರೆ[46].

**'ವಿದೇಶ ಪ್ರವಾಸ 1997'** : ಸುಪ್ರಸಿದ್ದ ಲೇಖಕಿಯಾದ ಆರ್ಯಾಂಭಪಟ್ಟಾಭಿಯವರಯ ಮೂರು ಬಾರಿ ಅಮೇರಿಕಾ ಪ್ರವಾಸ ಮಾಡಿ ಸುಮಾರು ಎರಡೂವರೆ ವರ್ಷಗಳ ಕಾಲ ಅಲ್ಲಿ ನೆಲೆಸಿ ತಮಗಾದ ಅನುಭವ ಸಂಪತ್ತನ್ನು ಈ ಕಥನದಲ್ಲಿ ಹಂಚಿಕೊಂಡಿದ್ದಾರೆ. ಈ ಕೃತಿಯ ವಿಶೇಷತೆ ಎಂದರೆ ಅಮೇರಿಕಾದ ಪ್ರೇಕ್ಷಣೀಯ ಸ್ಥಳ ಜೊತೆಗೆ ಅಲ್ಲಿನ ಶಿಕ್ಷಣ ಸಂಸ್ಥೆಗಳ ಪದ್ಧತಿ, ಪಠ್ಯಕ್ರಮ, ಸಂಶೋಧನೆಯ ಮಾದರಿ, ನಾಗರಿಕರ ಪ್ರಾಮಾಣಿಕತೆ, ಶಿಸ್ತು, ಜನರ ಜೀವನೋತ್ಸಾಹ, ಮಹಿಳೆಯರ ಸಬಲೀಕರಣ, ಕೌಟುಂಬಿಕ

ಸಂಬಂಧ, ಮಾದಕ ಸೇವನೆ, ಪ್ರಾಪಂಚಿಕ ಸುಖದ ಬೆಡಗು ಮೊದಲಾದ ವಿಷಯಗಳ ಕಡೆ ಗಮನ ಸೆಳೆಯುತ್ತಾರೆ. ಈ ವಿದೇಶಿ ಪ್ರವಾಸಕ್ಕೆ 1997ರಲ್ಲಿ ಪ್ರಕಟವಾದ ವರ್ಷದಲ್ಲಿಯೇ ನಾಲ್ಕು ರಾಜ್ಯ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅವು 'ಲಿಂಗರಾಜ ಸಾಹಿತ್ಯ ಪ್ರಶಸ್ತಿ' ರಾಜ್ಯದ ವರ್ಷದ ಅತ್ಯುತ್ತಮ ಕೃತಿ, 'ಸರ್.ಎಂ. ವಿಶ್ವೇಶ್ವರಯ್ಯ ನವರತ್ನ ಪ್ರಶಸ್ತಿ', ಬೆಂಗಳೂರು ಕನ್ನಡ ಲೇಖಕಿಯರ ಪ್ರಶಸ್ತಿ' ಹಾಗೂ 'ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ'ವೂ ದೊರೆತಿದೆ$_{47}$.

**'ಬೊಗಸೆ ಬುತ್ತಿ 1997'** : ಹೆಸರಾಂತ ಲೇಖಕಿಯಾದ ಕುಲಶೇಖರಿರವರು ಕ್ಷಿತಿಜ, ಸಂಕಲ್ಪ, ಬಿಕ್ಕುಗಳು ಎಂಬ ಕವನ ಸಂಕಲನಗಳನ್ನು, 'ನಮ್ಮ ಲೇಖಕಿಯರು', 'ಪಾಕ ವೈವಿಧ್ಯ' ಇತರ ಕೃತಿಗಳನ್ನು ಸಂಪಾದಿಸಿದ್ದಾರೆ. ಇವುಗಳೊಂದಿಗೆ 'ಬೊಗಸೆ ಬುತ್ತಿ' ಎಂಬ ಪ್ರವಾಸ ಸಾಹಿತ್ಯವನ್ನು ಸಹ ರಚಿಸಿದ್ದಾರೆ. ಪ್ರವಾಸ ಮಾಡುವುದು ಲೇಖಕಿಗೆ ಚಿಕ್ಕಂದಿನಿಂದ ಇದ್ದ ಗೀಳಾಗಿದ್ದರೂ ಅಮೇರಿಕಾಗೆ ಹೋಗಿದ್ದು ವಿಹಾರಾರ್ಥ, ವಿನೋದಕ್ಕಿಂತ; ಕರ್ತವ್ಯ ಪಾಲನೆಗಾಗಿ ಎಂದು ಸ್ಪಷ್ಟಪಡಿಸಿದ್ದಾರೆ. ಅಮೇರಿಕದ ಗುಣಾವಗುಣಗಳನ್ನು ಪ್ರಾಮಾಣಿಕವಾಗಿ ನೇರ ನುಡಿಯಲ್ಲಿ ತಿಳಿಸುತ್ತಾ ಕೆಲವೊಂದು ಅಂಶಗಳಲ್ಲಿ ಅಮೇರಿಕಾ ಮತ್ತು ಭಾರತ ಪದ್ಧತಿಗಳನ್ನು ಅಳೆದು ಓರೆಕೋರೆಗಳ ಸ್ವದರ್ಶನ ಮಾಡಿಸುತ್ತಾರೆ. ಭಾರತದ ಧಾರ್ಮಿಕ ನಂಬಿಕೆ, ವಿಶ್ವಾಸಗಳ ಕುರಿತು ಅಮೇರಿಕನ್ನರ ಅಭಿಪ್ರಾಯಗಳೇನು? ಎಂಬುದರ ಪರಿಗ್ರಹಿಕೆಗಳ ಸಾಧನೆ ಮಾಡಿದ್ದಾರೆ. ಅಮೇರಿಗನ್ನಡಿಗಳ ದೇಶಾಭಿಮಾನ ತುಡಿತ–ಮಿಡಿತಗಳೊಂದಿಗೆ ಭಾರತೀಯರ ಬಗ್ಗೆ ಗೌರವ ಹುಟ್ಟಿಸುವ ಕಾರ್ಯ ಮಾಡಿದ್ದಾರೆಂಬುದು ನಿಸ್ಸಂಶಯವಾಗಿದೆ$_{48}$.

ಸುಪ್ರಸಿದ್ಧ ಲೇಕಖರಾದ ನಾಗತಿಹಳ್ಳಿ ಚಂದ್ರಶೇಖರ್ ಅವರ **'ಅಮೆರಿಕಾ ಅಮೆರಿಕಾ–1997'** ಪ್ರವಾಸ ಕಥನವು ಕಥೆ–ಕಾದಂಬರಿಕೆಯಂತೆ ವಾಚಕರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಕಾರಣ ಇಲ್ಲಿಯ ಯಾವುದೇ ಅಭಿಪ್ರಾಯಗಳು ಮನುಷ್ಯ ಬಹುತೇಕ ಅರಿಷಡ್ವರ್ಗಗಳೆಲ್ಲಾ ಹಾಸ್ಯ ಲೇಪನದೊಂದಿಗೆ ಸಮ್ಮಿಶ್ರಗೊಂಡು ಓದುಗರ ಮನವನ್ನು ರಂಜಿಸುತ್ತದೆ. ಸಾಮಾನ್ಯವಾಗಿ ಪ್ರವಾಸ ಕಥನಗಳಲ್ಲೆಲ್ಲಾ ಪ್ರವಾಸಿಗೆ ಸಿದ್ಧತೆ ಮಾಹಿತಿ, ವೀಸಾ ಪಡೆಯುವಿಕೆ, ಅಮೇರಿಕಾ ತಲುಪುವರೆಗಿನ ನಿರೂಪಣೆಯಲ್ಲಾ ನಿರಸವಾಗಿದ್ದರೆ, ಈ ಕೃತಿಯ ಪ್ರಾರಂಭದಿಂದ ಅಂದರೆ ತಡವಾಗಿ ಬಂದ ವಿಮಾನ, ಪ್ರಯಾಣಿಕೆಯ ಚೆಲುವು–ನೆಗಡಿ–ಅಬೌದ್ಧಿಕತೆ, ವಿದೇಶಿಗರಿಗೆ ಪರಿಚಯಿಸಿದ ಕೊಟ್ರೇಶಿಯ ಕನಸು, ಪ್ರಕೃತಿ ವಿಕೋಪ ಪರಿಸ್ಥಿತಿಗಳಲ್ಲಿ ಅಮೇರಿಕಾ ಸರ್ಕಾರ ಮಾಧ್ಯಮ–ಪ್ರಜೆಗಳ ಪ್ರಜ್ಞಾವಂತಿಕೆ, ಲೇಖಕರ ಅರೆ–ಬರೆ ಇಂಗ್ಲಿಷ್, ಅಲ್ಲಿನ

ಶಿಕ್ಷಣ ಕ್ರಮ, ವಿಶ್ವವಿದ್ಯಾನಿಲಯಗಳು, ಅನಿವಾಸಿ ಭಾರತೀಯ–ಕನ್ನಡಿಗರ–ಕನ್ನಡ ಸಂಘಗಳ ಪರಿಚಯ, ಲೇಖಕರು ಸಂಪರ್ಕಿಸಿದ ಬಂಧು–ಮಿತ್ರ ಅತಿಥ್ಯ, **'ಶೀರ್ಷಿಕೆ'** ಚಿತ್ರದ ಚಿತ್ರೀಕರಣ, ಹಾಲಿವುಡ್ ಆಸ್ಕರ್ ಪ್ರಶಸ್ತಿ, ಡಿಸ್ನಿಲ್ಯಾಂಡ್, ವಾರ್ನರ್‌ಬ್ರದರ್ ಸ್ಟುಡಿಯೋ ಇತ್ಯಾದಿಗಳೆಲ್ಲವನ್ನು ಸವಿರಸವಾಗಿ ನಿರೂಪಿಸಿದ್ದಾರೆ[49].

**'ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ 1998'** : ಲೇಖಕಿ ವನಜರಾಜನ್‌ರವರು ಅಮೇರಿಕ, ಭೂತಾನ್ ಮತ್ತು ಸಿಂಗಪೂರ್ ದೇಶಗಳಲ್ಲಿ ಪ್ರಯಾಣ ಮಾಡಿ ಪ್ರಸ್ತುತ ಅಂತರ್ಜಾಲಕ್ಕೆ ಪೂರಕವಾಗಿ ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮವೆಂದು ಶೀರ್ಷಿಕೆಯನ್ನಿಟ್ಟಿರಬಹುದು. ಈ ಪ್ರವಾಸ ಕಥನದಲ್ಲಿ ಅಮೇರಿಕಾದ ವಾಸ ಆರು ತಿಂಗಳೆಂದು ಯೋಜಿಸಿ ಮೂರು ತಿಂಗಳಲ್ಲಿ ಭಾರತಕ್ಕೆ ಹಿಂದಿರುಗಿದ ಮತ್ತು ಅಮೇರಿಕಾ ಸಂಪದ್ಭರಿತ ಸೌಲಭ್ಯಗಳನ್ನು, ಪೌರಪ್ರಜ್ಞೆಯನ್ನು ತಿಳಿಸುತ್ತಾರೆ. ಭಾರತೀಯರ ಅಮೇರಿಕಾದ ಆಕರ್ಷಣೆಗೆ ಭಾರತದ ಅವ್ಯವಸ್ಥೆಗಳೇ ಕಾರಣವಿರಬಹುದೆಂದಿದ್ದಾರೆ. ಇದರೊಂದಿಗೆ ಸಿಂಗಪೂರ್ ಮತ್ತು ಭೂತಾನ್‌ಗಳ ಕೆಲವು ವಿಲಕ್ಷಣ ಆಚರಣೆಗಳನ್ನು ಸಾಂಪ್ರದಾಯಿಕ ಪದ್ಧತಿಗಳೆಡೆಗೆ ಗಮನ ಸೆಳೆಯುತ್ತಾರೆ[50].

**ಭೋಗ ಭೂಮಿಯ ಮಡಿಲಲ್ಲಿ 'ಭಾಗ ಒಂದು ಮತ್ತು ಎರಡು' 1999** : ವಸಂತೀಚಂದ್ರರವರು ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ. ವಿಶ್ವದಲ್ಲಿ ಭೋಗ ಭೂಮಿ ಎಂದೇ ಹೆಸರಾದ ಅಮೇರಿಕಾದ ಕುತೂಹಲಕರ, ವಿಸ್ಮಯಾದ್ಭುತ, ರೋಮಾಂಚಕಾರಿ ಹಲವಾರು ಸಂಗತಿಗಳ ಆಳವಾದ ಅಧ್ಯಯನದ ಮೂಲಕ ಅಲ್ಲಿನವುಗಳನ್ನು ಸಾಮಾಜಿಕ, ಬೌದ್ಧಿಕ, ತಾತ್ವಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳ ದಾರಿಯಲ್ಲಿ ಚಕಿತಗೊಳಿಸುತ್ತಾ ಸಾಗುವ ಅಪೂರ್ವಾನುಭವದ ಕೃತಿಯದಾಗಿದೆ. ಜಗತ್ತಿನಲ್ಲಿ ಅಮೇರಿಕಾ ವಿಶಿಷ್ಟ ರಾಷ್ಟ್ರವಾಗಲು, ವಿಜ್ಞಾನ ಮತ್ತು ಕಲಾ ಸಂಯೋಜನೆಗಳಲ್ಲಿ ಅಪ್ರತಿಮ ಸ್ಥಾನ ಪಡೆಯಲು, ಬೌದ್ಧಿಕತೆಯ ಮುಂಚೂಣಿಯಲ್ಲಿರಲು, ಪ್ರಪಂಚದ ಮಹಾಪ್ರತಿಷ್ಠೆಯ ಕೀರ್ತಿಗೆ ಪಾತ್ರವಾಗಲು ಇತ್ಯಾದಿ ಕಾರಣಗಳನ್ನು ಕುರಿತು ಸೂಕ್ಷ್ಮಾವಲೋಕಿಸಿದ್ದಾರೆ[51].

ಸುಪರಿಚಿತ ವಿದ್ವಾಂಸರಲ್ಲೊಬ್ಬರಾದ ಬಿ.ಎಸ್.ಸಣ್ಣಯ್ಯರವರು ಕೌಟುಂಬಿಕ ಸೆಳೆತದ ಹಿನ್ನೆಲೆಯಲ್ಲಿ ಕೈಗೊಂಡ ಪ್ರವಾಸಾನುಭವಗಳ ಮೊತ್ತವೇ **'ನಾನು ಹೋಗಿದ್ದೆ ಅಮೇರಿಕೆಗೆ–2001'** ಈ ಕೃತಿಯಲ್ಲಿ ಅಮೇರಿಕಾದ ವ್ಯವಸ್ಥೆ, ಅಲ್ಲಿಯ ಜನಜೀವನದೊಂದಿಗೆ ಲಾಸ್ ಏಂಜಲೀಸ್, ಸೀವರ್ಲ್ಡ್, ಡಿಸ್ನಿಲ್ಯಾಂಡ್, ಗ್ರ್ಯಾಂಡ್‌ಕ್ಯಾನನ್, ನಯಾಗರ, ನ್ಯೂಯರ್ಕ್ ಸೇರಿದಂತೆ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ತಮ್ಮ ಇಳಿವಯಸ್ಸಿನಲ್ಲಿ ಜೀವನೋತ್ಸಾಹದಿಂದ ಸವಿಯುವುದರೊಂದಿಗೆ ಅಷ್ಟೆ ಸೊಗಸಾಗಿ ಸರಳವಾಗಿ

ಪರಿಚಯಿಸುತ್ತಾರೆ. ಭಾರತದ ಭ್ರಷ್ಟಾಚಾರ ನಿರ್ಮೂಲನೆಯಾಗಬೇಕೆಂಬ ಲೇಖಕರ ಆಶಯವು ಅವರೇ ರಚಿಸಿದ (Silver Kris) ಸಿಂಗಪೂರ್‌ನ ಮಾಪ್ ವೈ-ಎನ್ ಕವಿತೆಗಳಲ್ಲಿ ಕಂಡು ಬರುತ್ತದೆ$_{52}$.

ಗುರುಮೂರ್ತಿ ಪೆಂಡಕೂರು ಅವರ **'ಅವಕಾಶಗಳ ಅಮರಾವತಿ-2004'** ಆರು ತಿಂಗಳ ಅಮೇರಿಕಾ ವಾಸ್ತವ್ಯದ ಕೃತಿ ಇದರಲ್ಲಿ ಅಮೇರಿಕಾದ ಸಂಪೂರ್ಣ ವೀಕ್ಷಣೆಯಾಗಲಿ; ವಿವರಣೆಯಾಗಲಿ ಆಗಿರದೇ ನಿಗಧಿತ ಭಾಗಗಳ ವೈಶಿಷ್ಟಪೂರ್ಣ ಮಾಹಿತಿಗಳಷ್ಟೆ ಅಲ್ಲದೆ ಮಾನವ ಸಂಬಂಧಗಳು ತನ್ನ ಸುತ್ತ ಮುತ್ತಲಿನ ಪರಿಸರದೊಂದಿಗೆ ಭಾಗಿಯಾಗಿ ಆನಂದಿಸುವ ಪರಿಗಳು, ವಿದೇಶದಲ್ಲಿ ಸ್ವದೇಶಿಗರನ್ನು ಕಂಡಾಗ ಆಗುವ ಸಂತೋಷ ಸಂಭ್ರಮ, ಊರುಗಳೇ ಮಾರಾಟಕ್ಕಿರುವ ಅಮೇರಿಕದ ವೈಪರೀತ್ಯ, ಅಮೇರಿಕಾದ ಹಸುಗಳು ಸೇರಿದಂತೆ ವಿವಿಧ ಕತೂಹಲಕಾರಿ ಸಂಗತಿಗಳು, ಅಮೇರಿಕಾ-ಭಾರತಗಳ ತೌಲನಿಕ ಚಿಂತನೆ, ಜಾಗತೀಕರಣ, ಉದಾರೀಕರಣಗಳ ಫಲವಾಗಿ ಸಾಮಾಜಿಕ-ಸಾಂಸ್ಕೃತಿಕ ಕ್ಷೇತ್ರಗಳ ಕ್ಷಿಪ್ರಪ್ರಗತಿ ಮುಂತಾದವುಗಳನ್ನು ಸ್ವಾರಸ್ಯಕರವಾಗಿ ಪ್ರಸ್ತಾಪಿಸಿದ್ದಾರೆ$_{53}$.

ಶ್ರೀಮತಿ.ಜಯಾ ರಾಜಶೇಖರ್‌ರವರ **'ಮರಳಿ ಬಂದ ಮಧುಮಾಸ'** ಈ ಕೃತಿಯ ಬಹುತೇಕ ಭಾಗ ಅಮೇರಿಕಾದ ಕುರಿತದ್ದಕ್ಕಿಂತ ಸ್ವಕುಂಟುಂಬಾಭಿಮಾನವನ್ನು ಕುರಿತದ್ದಾಗಿದೆ. ಗಂಡ-ಮಗನ ಬಗ್ಗೆ ಲೇಖಕಿಗೆ ಸಂತೃಪ್ತಿ ಇರುವುದು ಕಂಡುಬರುತ್ತದೆ. ಕೆಲ ವಿಷಯಗಳಲ್ಲಿ ವಸ್ತುನಿಷ್ಠ ವೈಚಾರಿಕತೆಯನ್ನು ಕಾಣಬಹುದು. ಲಿಂಗ ಸಮಾನತೆ ಎಂಬುದು ಕೃತಿರೂಪದಲ್ಲಿದ್ದು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರದಿರುವುದು, ಭಾರತ ವಾಸಿ ಮಕ್ಕಳಿಗಿಂತ ಅನಿವಾಸಿ ಭಾರತೀಯ ಮಕ್ಕಳಿಗಿರುವ ಜವಾಬ್ದಾರಿ, ಸ್ವಾವಲಂಬನೆ, ಅನಿವಾಸಿ ಭಾರತೀಯರ ತ್ರಿಶಂಕು ಸ್ಥಿತಿಗಳ ಚಿಂತನೆಯಲ್ಲಿ ಲೇಖಕಿಯ ಗಂಭೀರ ಪ್ರಬುದ್ಧ ಚೇತನ ಪ್ರಕಟಣೆಗೊಳ್ಳುತ್ತದೆ$_{54}$.

ಸುಪ್ರಸಿದ್ಧ ಕವಿಗಳಾದ ದೊಡ್ಡರಂಗೇಗೌಡರು ಅಮೇರಿಕಾ ಸೇರಿದಂತೆ ಜರ್ಮನಿ, ಫ್ರಾನ್ಸ್, ಸಿಂಗಪುರ ಇತ್ಯಾದಿ ಪ್ರವಾಸಿ ಆಕರ್ಷಣಾ ಸ್ಥಳ ಪರಿಚಯ ಮತ್ತು ಅನುಭವಗಳನ್ನು ಕಾವ್ಯಾತ್ಮಕ ನಿರೂಪಣೆಯ ತಂತ್ರದೊಂದಿಗೆ ರಚಿಸಿರುವ ಕೃತಿಯೇ **'ಲೋಕಾಯಣ'** ಆಗಿದೆ$_{55}$.

### ಹವ್ಯಾಸಿ ಪ್ರವಾಸ ಕಥನಗಳ ಲಕ್ಷಣ :

"ಪ್ರವಾಸವು ಮಾನಸಿಕ ಹಾಗೂ ಬೌದ್ಧಿಕ ವಿಕಾಸದ ಸಾಧನವೆಂದು ಬಗೆದು ತನ್ನ ಬದುಕಿನಲ್ಲಿ ಪ್ರವಾಸವನ್ನು ಒಂದು ಅವಿಭಾಜ್ಯ ಘಟಕವಾಗಿಸಿ, ಕಾಲ ಅವಕಾಶಗಳು ದೊರೆತಾಗ ಏಕಾಂಗಿಯಾಗಿಯೊ

ಇಲ್ಲವೆ ಗುಂಪು ಗೂಡಿಯೊ ಸಂಚರಿಸುವವರು ಹವ್ಯಾಸಿ ಪ್ರವಾಸಿಗರು" ಎಂದು ಡಾ॥ಎಸ್. ವಿದ್ಯಾಶಂಕರ ಅವರು ತಮ್ಮ ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಕೃತಿಯ ನೂರ ನಲವತ್ನಾಲ್ಕನೆ ಪುಟದಲ್ಲಿ ಸೂಚಿಸಿದ್ದಾರೆ. ಹೀಗೆ ಆಂತರಿಕ ಮತ್ತು ಅರಿವಿನ ದಿಗಂತದ ವಿಸ್ತರಣೆಗಾಗಿ ಪ್ರವಾಸದ ಅಭಿರುಚಿಯುಳ್ಳವರು ಅಮೇರಿಕಾವನ್ನು ವೀಕ್ಷಿಸಿ ರಚಿಸಿದಂತ ಕೃತಿಗಳೇ ಹವ್ಯಾಸಿ ಪ್ರವಾಸ ಕಥನಗಳು.

**ಹವ್ಯಾಸಿ ಪ್ರವಾಸ ಕಥನಗಳು :**

ಶ್ರೀ.ಬಿ.ವಿ.ರಾಮನ್‌ರವರ: **'ಅಮೆರಿಕದಲ್ಲಿ ಓರ್ವ ಹಿಂದು-1973'** ಕೃತಿ ಮೂಲತಃ ಆಂಗ್ಲ ಭಾಷೆಯಲ್ಲಿ ರಚಿತವಾಗಿದೆ. ಇದನ್ನು ಎನ್.ಎಸ್. ಸೀತಾರಾಮಶಾಸ್ತ್ರಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಲೇಖಕರು ಅಖಿಲ ಭಾರತ ಖ್ಯಾತಿಯ ಜ್ಯೋತಿರ್ ವಿಜ್ಞಾನದ ಪ್ರತಿಪಾದಕರಾಗಿ ಅಮೇರಿಕಾ ಸೇರಿದಂತೆ ಹಲವಾರು ದೇಶಗಳ ಪ್ರವಾಸ ಕೈಗೊಂಡಿದ್ದರಿಂದ ಸಹಜವಾಗಿ ಈ ಕೃತಿ 'ಜೋತಿಷ್ಯ'ವೇ ಮಹತ್ವವಾಗಿ ಒಳಗೊಂಡಿದೆ. ಹಾಗಾಗಿ ಜೋತಿಷ್ಯ ಸಮ್ಮೇಳನಗಳು, ಭೇಟಿಯಾದ ಮಹಾಮಹಿಮರು ಮತ್ತು ಅವರೊಂದಿಗಿನ ಸಂವಾದ, ಮೊದಲಾದವುಗಳನ್ನು ಒಳಗೊಂಡಿದ್ದೂ, ಜೋತಿಷ್ಯ ಮಾಹಿತಿ ಪ್ರಿಯರಿಗೆ ತುಂಬಾ ಉಪಯುಕ್ತವಾಗಿದೆ[56].

**'ಸ್ವಪ್ನಲೋಕ-1978':**- ಬಿ. ಶ್ರೀಧರ ದಂಪತಿಗಳ ಅಮೇರಿಕ ಪ್ರವಾಸದ ಕೃತಿ. ಇದರ ಮೊದಲ ಭಾಗದಲ್ಲಿ ಎದುರಾದ ತೊಂದರೆ ಸಮಸ್ಯೆಗಳ ವಿವರಣೆಯಾದರೆ, ನಂತರದಲ್ಲಿ ಅಮೇರಿಕಾದ ಸಾಮಾಜಿಕ, ಭೌಗೋಳಿಕ ಮುಂತಾದ ಅತಿರೇಕಗಳನ್ನು ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ. ಲಾಸ್ ವೇಗಾಸ್ ಲೇಖಕರ ಅತ್ಯಂತ ಮನಃ ಸೂರೆಗೊಂಡ ಸ್ಥಳ ಮಾತ್ರವಲ್ಲದೆ ದೇವರ ದಯೆಯಿಂದ ಇನ್ನೊಮ್ಮೆ ಲಾಸ್‌ವೇಗಾಸ್‌ಗೆ ಬರಬೇಕೆಂದುಕೊಳ್ಳುತ್ತಾರೆ. ಯುನಿವರ್ಸಲ್ ಸ್ಟುಡಿಯೋ, ಡಿಸ್ನಿಲ್ಯಾಂಡ್, ಗ್ರಾಂಡ್ ಕೆನ್ಯಾನ್, ಓಕ್ಲಹಾಮಾ, ಆರ್ಲಿಲ್ಯಾಂಡ್, ಲಿಂಕನ್ ಸ್ಮಾರಕ, ಶ್ವೇತಭವನ ಮೊದಲಾದವುಗಳ ಹಲವಾರು ಮಾಹಿತಿಗಳನ್ನೊಳಗೊಂಡಿದೆ[57].

ಪ್ರೊ॥ವಿ. ಪುಟ್ಟಮಾದಪ್ಪನವರು ಅಮೇರಿಕಾಕ್ಕೆ ಎರಡು ಬಾರಿ ಪ್ರವಾಸ ಕೈಗೊಂಡು; 1981ರಲ್ಲಿ ಬೇಸಿಗೆ ಕಾಲದಲ್ಲಿ ಭೇಟಿ ಇತ್ತು ತಮಗಾದ ಅನುಭವಗಳನ್ನು **'ನೆಮ್ಮಗೆಯ ನಾಡು'**ನಲ್ಲಿ ವಿವರಿಸಿದರೆ, ಮತ್ತೊಮ್ಮೆ 1983 ಚಳಿಗಾಲದಲ್ಲಿ ಪ್ರವಾಸ ಮಾಡಿ "ಮಂಜಿನ ಮಡಿಲಲ್ಲಿ" ಎಂಬ ಒಟ್ಟು ಎರಡು ಅಮೇರಿಕಾ ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಲೇಖಕರು ಆಂಗ್ಲ ಪ್ರಾಧ್ಯಾಪಕರು; ಪ್ರಾಂಶುಪಾಲರು ಆಗಿದ್ದ ಕಾರಣ ಸ್ವಭಾವಕ್ಕನುಗುಣವಾಗಿ ಅಮೇರಿಕಾದ ಪ್ರೇಕ್ಷಣೀಯ ಸ್ಥಳಗಳ ಜೊತೆ ಅನೇಕ, ಶಾಲೆ,

ವಿಶ್ವವಿದ್ಯಾನಿಲಯಗಳು, ಗ್ರಂಥಾಲಯಗಳಿಗೆ ಭೇಟಿ ನೀಡಿರುವರು. ಅಮೇರಿಕಾದ ಜನ-ಸಮಾಜ, ಲಿಂಗ ಸಮಾನತೆಯಿಂದುಂಟಾಗುವ ಪರೋಕ್ಷ ಸಮಸ್ಯೆ; ವರ್ಣದ್ವೇಷ, ಐಭೋಗದ ನಡುವಿನ ದರೋಡೆ ಮುಂತಾದವುಗಳ ಮೇಲೆ ಬೆಳಕು ಚೆಲ್ಲಿದ್ದಾರೆ[58].

ಪ್ರೊ॥ಎನ್. ನಂಜುಂಡಶಾಸ್ತ್ರಿಗಳು ಕೌಟುಂಬಿಕ ಕಾರಣದಿಂದಾಗಿ ಪ್ರವಾಸ ಕೈಗೊಂಡು ಸುಮಾರು ಏಳೆಂಟು ತಿಂಗಳ ಕಾಲ ವಾಸ್ತವ್ಯ ಮಾಡಿ ಬರೆದ ಪ್ರವಾಸ ಕಥನವೇ **'ಅಮೆರಿಕಾ-ಭಾರತೀಯನ ದೃಷ್ಟಿಯಲ್ಲಿ-1987'**; ಲೇಖಕರು ಆಂಗ್ಲ ಭಾಷೆಯ ಪ್ರಬುದ್ಧ ಅಧ್ಯಯನ; ಆಧ್ಯಾತ್ಮಿಕ ತಿಳುವಳಿಕೆಯೊಂದಿಗೆ ಹಿರಿತನಗಳೆಲ್ಲವು ಸಮ್ಮಿಶ್ರಗೊಂಡ ಸಮರ್ಪಕ ಭಾಷಾಜ್ಞಾನದಿಂದ ವಿಶ್ಲೇಷಿಸಿದ್ದಾರೆ. ಒಮ್ಮೆ ಡಾ॥ನಾರಾಯಣ್‌ರವರು ಇವರನ್ನು ಖಾಯಂ ಆಗಿ ಅಮೇರಿಕಾದಲ್ಲಿ ನೆಲೆಸುವಿರಾ? ಎಂಬ ಪ್ರಶ್ನೆಗೆ ಲೇಖಕರು ಭಾವುಕ ಮತ್ತು ತೀವ್ರ ಆವೇಶಭರಿತವಾದ ಉತ್ತರದಲ್ಲಿ ದೇಶಾಭಿಮಾನವನ್ನು ಕಾಣಬಹುದು. ಹಲವಾರು ಕನ್ನಡ ನುಡಿಗಟ್ಟುಗಳ ಪ್ರಯೋಗದೊಂದಿಗೆ ಪ್ರತಿಭಾ ಪಲಾಯನವಾಗಿರುವ ಭಾರತೀಯ ಯುವಜನತೆಗೆ ಸಲಹೆ ಸೂಚನೆಯ ಸಂದೇಶವನ್ನು ನೀಡಿದ್ದಾರೆ[59].

ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ.ಕೆ.ಎನ್.ಕೃಷ್ಣಮೂರ್ತಿರಾಯರ **'ಅಮೆರಿಕಾ ಪ್ರವಾಸದ ಅನುಭವಗಳು-1988'** ಪ್ರವಾಸ ಕಥನದಲ್ಲಿ ವೀಸಾ ಪಡೆಯಲು ಪಟ್ಟ ಪರಿಪಾಟಲಿನಲ್ಲಿ ಸುಳ್ಳಿನ ಮಹತ್ವದಿಂದ ಪ್ರಾರಂಭವಾಗಿ ಅಮೇರಿಕನ್ನರ ಪ್ರಾಮಾಣಿಕತೆ, ಪೌರಜ್ಞಾನ, ಸ್ವಾತಂತ್ರಪ್ರಿಯತೆ, ಶುಚಿತ್ವತೆ, ನ್ಯಾಯಪದ್ಧತಿ, ಅನುಪಯುಕ್ತ ವಸ್ತುಗಳನ್ನು ಉಪಯುಕ್ತ ವಸ್ತುಗಳನ್ನಾಗಿ ಮಾರ್ಪಡಿಸುವ ಚತುರತೆ ಮುಂತಾದವುಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಲೆ ಭಾನುವಾರ ಪತ್ರಿಕೆಗಳ ಸಂಪೂರ್ಣ ಮಾಹಿತಿ, ಪ್ರೇಕ್ಷಣೀಯ ಸ್ಥಳಗಳಾದ ಡಿಸ್ನಿಲ್ಯಾಂಡ್, ಲಾಸ್‌ವೇಗಾಸ್, ಗ್ರಾಂಡ್ಯ್ ಕ್ಯಾನನ್, ನ್ಯಾಷನಲ್ ಪಾರ್ಕ್, ಸಾನ್ ಡಿಯಾಗೋನ ಸಾಗರ ಪ್ರಪಂಚ, ಹಂಟಿಂಗ್‌ಟನ್‌ನ ಬಟಾನಿಕಲ್ ಗಾರ್ಡನ್, ಸ್ಯಾನ್‌ಪ್ರಾನ್ಸಿಸ್ಕೊ ಇತ್ಯಾದಿಗಳ ವರ್ಣನೆಯೊಂದಿಗೆ ಕೌಟುಂಬಿಕ ಸದಸ್ಯರ ಗುಣಗಾನ ದಟ್ಟೈಸಿದೆ[60].

ಡಾ॥ಹೊ. ಶ್ರೀನಿವಾಸಯ್ಯನವರ **'ಜಯಶ್ರೀ ಕಂಡ ಆ ಅಮೆರಿಕ-1989'** ಪ್ರವಾಸ ಕಥನ ಶೀರ್ಷಿಕೆಯೇ ಸ್ಪಷ್ಟ ಪಡಿಸುವಂತೆ ದಂಪತಿ ಸಮೇತ ವಿದೇಶ ಸಂಚಾರ ಕೈಗೊಂಡ ಕೃತಿ ಅಮೇರಿಕಾದ ಬಂಧು-ಮಿತ್ರರಲ್ಲಿನ ವಾಸ್ತವ್ಯದಿಂದ ಅಮೇರಿಕಾದ ಸಾಮಾಜಿಕ ಅರಿವು ವಿರಳವಾಗಿದ್ದರೂ, ಅನ್ಯ ವಿಷಯಗಳಲ್ಲಿ

ಈ ಕೃತಿ ಗಮನ ಸೆಳೆಯುತ್ತದೆ. ಪ್ರತಿಭೆಗೆ ತಕ್ಕ ಸ್ಥಾನಮಾನದ ಅಲಭ್ಯತೆಯ ಕುರಿತು, ಅಮೇರಿಕಾದಲ್ಲಿ ನೆಲೆಸಿರುವ ಭಾರತೀಯ ಕೌಟುಂಬಿಕ ಆಚಾರ-ವಿಚಾರಗಳನ್ನು ಕಲಿಯಲು ವಿರೋಧಿಸುವ ಮಕ್ಕಳ ಬಗ್ಗೆ, ಅಮೇರಿಕಾದಲ್ಲೂ ಅನಕ್ಷರತೆ, ಭಿಕ್ಷಾಟನೆ, ಉಳಿದಿರುವ ವಿಷಯಗಳೊಂದಿಗೆ, ನಯಾಗರಾ ಜಲಪಾತ, ಡಿಸ್ನಿಲ್ಯಾಂಡ್, ಯೂನಿವರ್ಸಲ್ ಸ್ಟುಡಿಯೋ ಮುಂತಾದವುಗಳಲ್ಲಿನ ನಿರೂಪಣೆಯಲ್ಲಿ ಔಚಿತ್ಯ ಪ್ರಜ್ಞೆಯನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು$_{61}$.

**'ಪ್ರವಾಸ 1995'** : ಲೀಲಾಮಿರ್ಲೆರವರು ಅಮೇರಿಕಾ ಸೇರಿದಂತೆ ಹಲವಾರು ದೇಶಗಳ ಪ್ರವಾಸ ಮಾಡಿ ತಮಗಾದ ಅನುಭವಗಳನ್ನು ಈ ಕಥನದಲ್ಲಿ ಹಂಚಿಕೊಳ್ಳುವುದಲ್ಲದೆ, ಪ್ರಮಾಣದ ಸಿದ್ಧತೆ, ವ್ಯವಸ್ಥಿತ ಪ್ರವಾಸ ಇತ್ಯಾದಿ ವಿಷಯಗಳ ಕುರಿತು ಹಲವಾರು ಸಲಹೆ ಸೂಚನೆಗಳನ್ನು ನೀಡುತ್ತಾರೆ. ಪರದೇಶಗಳ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಿನ್ನೆಲೆಯಲ್ಲಿನ ರಸ ನಿಮಿಷಗಳು, ಭಾಷಾ ಫಜೀತಿಗಳು, ಕೆಲವು ವಿಸ್ಮಯಗಳನ್ನು ಬಿತ್ತರಿಸಿದ್ದಾರೆ$_{62}$.

ಪಿ.ಎಂ.ಹೆಗಡೆರವರ **'ಆಲ್ಮನೆಯಿಂದ ಆ್ಯನ್ ಆರ್ಬರ್‌ಗೆ-1999'** ಪ್ರವಾಸ ಕಥನವು ದಂಪತಿ ಸಮೇತರಾಗಿ ಅಮೇರಿಕಾಕ್ಕೆ ಹೋಗಿ ಆರು ತಿಂಗಳು ಕಾಲ ನೆಲೆಸಿದರ ಸ್ಮರಣೆಯ ಸಂಕೇತವಾಗಿದೆ. ಲೇಖಕರು ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಪ್ರಭಾವ ಮತ್ತು ಅಮೇರಿಕಾದಲ್ಲಿ ಮಗಳು ನೆಲೆಸಿದ್ದ ಸ್ಥಳದ ಪ್ರಭಾವ ಬೌದ್ಧಿಕವಾಗಿ ಶೀರ್ಷಿಕೆಯಲ್ಲಿ ಕಾಣಬಹುದು. ಭೌದ್ಧಿಕವಾಗಿ ಬೆಳೆದಿದ್ದಷ್ಟೇ ಆಧ್ಯಾತ್ಮಿಕವಾಗಿಯೂ ಬೆಳೆದಿದ್ದರು ಎಂಬ ಅನೇಕ ಕುರುಹುಗಳು ಈ ಕೃತಿಯಲ್ಲಿವೆ. ಲೇಖಕರು ಅಮೇರಿಕಾದ ಬಾಹ್ಯಕ್ಕೆ ಮಾರುಹೋಗದೆ ಆಂತರಿಕವಾಗಿ ನೋಡಿರುವುದು ವಿಶೇಷವಾಗಿದೆ. ಅಮೇರಿಕಾದ ಕಾಲಹರಣದಲ್ಲಿ ಮಾಧ್ಯಮದ ಪಾತ್ರ ಬಹಳವಿರುವುದು ಗೊತ್ತಾಗುತ್ತದೆ. ಅಮೇರಿಕಾದಲ್ಲಿ ಹಲವಾರು ಪುಸ್ತಕಗಳ ಅಧ್ಯಯನದೊಂದಿಗೆ ಅಮೇರಿಕಾ ಹಿರಿಯ ಚೇತನಗಳ ಪ್ರಶಂಸೆಯೂ ಕಂಡುಬರುತ್ತದೆ. ಲೇಖಕರು ವೈಚಾರಿಕ ವ್ಯಕ್ತಿ ಎನಿಸಿದರೂ; ಅವರ ಆಂತರಿಕ ಚಿಂತನೆ ಕೋರಿಕೆಗಳಿಂದ ಧಾರ್ಮಿಕ ಮತ್ತು ಸಾಂಪ್ರದಾಯಿಕ ಮುಖ ಕಾಣಿಸುತ್ತದೆ$_{63}$.

ಲೋಕಸೇವಾ ಆಯೋಗದ ಸದಸ್ಯರಾಗಿದ್ದ 'ವೆಂಕಟಸ್ವಾಮಿ'ರವರು ಹವ್ಯಾಸಿ ಪ್ರವಾಸಿಗನಾಗಿ ಅಮೇರಿಕಾವನ್ನು ಭೇಟಿ ಮಾಡಿ ಬರೆದ ಪ್ರವಾಸ ಕಥನವೇ **'ಅಮೇರಿಕಾದಲ್ಲಿ ನನ್ನ ಅನುಭವಗಳು-2004'** ಲೇಖಕರು ಅಮೇರಿಕಾದ ವೀಕ್ಷಣೆಯಾಗಲಿ, ವಾಸ್ತವ್ಯವಾಗಲಿ ಅತ್ಯಲ್ಪವಾದರೂ; ಆ ದೇಶದ

ಸಮಗ್ರ ಚಿತ್ರದ ಅನುಭವವಾದಂತೆ ಭಾಸವಾಗುತಿತ್ತು ಎಂದು ಸ್ವತ: ಒಪ್ಪಿಕೊಂಡಿದ್ದಾರೆ. ಮಾನವನಿಗೆ ಆಯಾಯ ಪರಿಸರದ ಪ್ರಭಾವ ಇದ್ದೆ ಇರುತ್ತದೆಂಬುದು, ಅಮೇರಿಕಾದ ರಸ್ತೆ ಸಾರಿಗೆ ವ್ಯವಸ್ಥೆಯನ್ನು ನೋಡಿ ಭಾರತದಲ್ಲಿ ಭ್ರಷ್ಟಾಚಾರರಹಿತವಾಗಿ ಹಣದ ಸದ್ವಿನಿಯೋಗವಾದರೆ ಅಮೇರಿಕಾದಂತೆ ಭಾರತದಲ್ಲೂ ನಿರ್ಮಾಣವಾಗಬಹುದೆಂಬ ಚಿಂತನೆಯಲ್ಲಿ ಅವರ ವೃತ್ತಿ ಧ್ಯೇಯಗಳ ಛಾಪನ್ನು ಕಾಣಬಹುದು[64].

**ಅಮೆರಿಕಾದೊಳಗೊಂದು ಇಣುಕು–2004:** ವಸಂತರಾಜ ಎನ್.ಕೆ. ಅವರು ಜಗತ್ತಿನ ಆಕರ್ಷಕ ಮತ್ತು ನವವಸಾಹತುಶಾಹಿಯ ಶಕ್ತಿಯ ಕೇಂದ್ರವಾಗಿರುವ ಅಮೇರಿಕಾವನ್ನು ಸಕಾಲಿಕವಾಗಿ ಹಾಗೂ ಅರ್ಥಪೂರ್ಣವಾಗಿ ವಿವರಿಸಿರುವ ಪ್ರವಾಸ ಕಥನವಾಗಿದೆ. ಅಮೇರಿಕದ ತಂತ್ರಜ್ಞಾನದ ಪ್ರಗತಿಯ ಕುರಿತು ಬೆರಗು–ಮೆಚ್ಚಿಗೆ ಇರುವಂತೆ ಈ ಅಂತಶ್ಯಕ್ತಿ ಯಾವುದು; ಇಲ್ಲಿಯ ಕುಟುಂಬ ಜೀವನದ ಮತ್ತು ನಿತ್ಯಜೀವನದ ಬೆರಗಿನ ಹಿಂದಿರುವ ಜೀವನ ಸೆಲೆ ಯಾವುದು; ಎಂದು ಶೋಧಿಸುವ ವಸ್ತುನಿಷ್ಠ ವಿಶ್ಲೇಷಣೆಯ ಕೃತಿಯಾಗಿದೆ. ಪೂರ್ವಗ್ರಹವಿಲ್ಲದ ಕುತೂಹಲಕಾರಿ ಗ್ರಂಥದರ್ಶನ ಇದರ ಶಕ್ತಿಯಾಗಿದೆ[65].

ಶ್ರೀ.ದೇವೇಂದ್ರಪ್ಪ ಬಸವಂತಪ್ಪ ಪಾಟೀಲರ **'ಸಪ್ತಸಾಗರದಾಚೆ–2005'** ಕೃತಿಯು ಮಗನ ಆಹ್ವಾನದ ಮೇರೆಗೆ ಕೆನ್ನೆ ಸಾವನ್ನು ಕೇಂದ್ರ ಮಾಡಿಕೊಂಡು ಅಮೇರಿಕಾದ ಮುಖ್ಯ ಸ್ಥಳಗಳಲ್ಲಿ ಸಂಚಾರ ಮಾಡಿ ಆದ ಸ್ವಾನುಭವಗಳನ್ನು ವೈಭವೀಕರಿಸದೇ ನೈಜವಾಗಿ ಮೂಡಿರುವ ಪ್ರವಾಸ ಕಥನವಾಗಿದೆ. ಲೇಖಕರು ಅಮೇರಿಕಾದ ವೈದ್ಯಕೀಯ ಕ್ಷೇತ್ರದ ಕಡೆ ಗಮನ ಸೆಳೆಯುತ್ತಾರೆ. ಭಾರತೀಯ ವೈದ್ಯ ತಜ್ಞರ ಆಚರಣೆ; ವೈದ್ಯಕೀಯ ವಿಮೆಯ ಅತ್ಯಾವಶ್ಯಕತೆಯೊಂದಿಗೆ ನಯಾಗರ ಜಲಪಾತ, ಪ್ಲೋರಿಡಾ ರಾಜ್ಯದ ಬರ್ಲ್ಯಾಂಡೋ, ವಾಷಿಂಗ್ಟನ್ ಡಿ.ಸಿ., ಇತ್ಯಾದಿ ಮಾಹಿತಿಗಳಲ್ಲಿ ಲೇಖಕರ ಕುತೂಹಲಕರ ದೃಷ್ಟಿಯನ್ನು ಕಾಣಬಹುದು. ಲೇಖಕರು ಅತಿರೇಕದ ಭಾಷಾ ವ್ಯಾಮೋಹಕ್ಕೆ ಒಳಗಾಗದೆ ನಿಯಮ ಬದ್ಧವಾಗಿ ಚಿಕ್ಕದಾಗಿ ಚೊಕ್ಕವಾಗಿ ಮನಸ್ಸಿಗೆ ನಾಟುವಂತೆ ಬಿತ್ತರಿಸಿದ್ದಾರೆ[66].

## ನಿಯೋಗಿ ಪ್ರವಾಸ ಕಥನಗಳ ಲಕ್ಷಣ :

ಸರಕಾರದ ಪ್ರತಿನಿಧಿಗಳಾಗಿಯೋ, ಆಮಂತ್ರಿತ ಅತಿಥಿಗಳಾಗಿಯೋ, ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಾಗಿಯೋ ಸ್ವದೇಶೀ ಇಲ್ಲವೆ ವಿದೇಶಿ ನೆರವಿನಿಂದ ಹೊರದೇಶಗಳಿಗೆ ಹೋಗುವವರು

ನಿಯೋಗಿ ಪ್ರವಾಸಿಗರು ಎಂದು ಡಾ. ವಿದ್ಯಾಶಂಕರ ಅವರು ತಮ್ಮ ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಕೃತಿಯ ನೂರ ನಲವತ್ನಾಲ್ಕನೆ ಪುಟದಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ಸ್ವ ಧನ ವಿನಿಯೋಗವಿಲ್ಲದೆ ಅನ್ಯ ಕೃಪೆಯಿಂದ ಪ್ರವಾಸ ಮಾಡಿ ಬರೆದಂಥ ಕೃತಿಗಳೇ ನಿಯೋಗಿ ಪ್ರವಾಸ ಕಥನಗಳು.

**ನಿಯೋಗಿ ಪ್ರವಾಸ ಕಥನಗಳು :**

ಅಮೇರಿಕಾದ ಮೊದಲ ನಿಯೋಗಿ ಪ್ರವಾಸ ಕಥನ ವೈ.ಎಸ್.ಲೂಯಿಸ್ ಅವರ **'ಕೋಲಂಬಿಯಾ ಯಾತ್ರೆ'**. ಕೃತಿಯ ಶೀರ್ಷಿಕೆ ಅರ್ಥಪೂರ್ಣ ವಿಶೇಷತೆಯನ್ನು ಒಳಗೊಂಡಿದೆ. ಅಮೇರಿಕಾದ ಮೂಲ ಹೆಸರು ಕೊಲಂಬಿಯಾ. ಅಲ್ಲಿಗೆ ಕೈಗೊಂಡಿದ್ದ ಪಯಣವೆ 'ಕೋಲಂಬಿಯಾ ಯಾತ್ರೆ'. ಈ ಕೃತಿಯ ಮೂಲಕ ಲೇಖಕರ ಅನೇಕ ಪ್ರಭಾವಕಾರಿ ಅಂಶಗಳು ಪ್ರಕಟಗೊಳ್ಳುತ್ತವೆ. ಕ್ರಿ.ಶ 1948 ರಿಂದ 1950 ರವರೆಗೆ ಸುಮಾರು ಎರಡು ವರ್ಷಗಳಿಗಿಂತ ಅಧಿಕವಾಗಿ ಅಮೇರಿಕಾದಲ್ಲಿ ವಾಸಿಸಿ ಅಲ್ಲಿನ ಸಾಂಸ್ಕೃತಿಕ ಪರಿಚಯವನ್ನು ಸೊಗಸಾಗಿ ಮಾಡಿಕೊಡುತ್ತಾರೆ. ಇದು ಪತ್ರರೂಪದ ಪ್ರವಾಸ ಸಾಹಿತ್ಯವೂ ಹೌದು. ಶೈಕ್ಷಣಿಕ ಪ್ರವಾಸ ಸಾಹಿತ್ಯವೂ ಹೌದು. ಏಕೆಂದರೆ ಲೇಖಕರು ತಮ್ಮ ಆತ್ಮೀಯರಿಗೆ ಬರೆದ ಒಟ್ಟು 'ಹತ್ತೊಂಬತ್ತು' ಪತ್ರಗಳನ್ನೊಳಗೊಂಡ ಕೃತಿ ಇದಾಗಿರುವುದರಿಂದ ಅಷ್ಟೆ ಅಲ್ಲದೆ ಲೇಖಕರು ಹೆಚ್ಚಿನ ವಿದ್ಯಾಭ್ಯಾಸದ ಸಲುವಾಗಿ ಭಾರತ ಸರ್ಕಾರದ ವಿದ್ಯಾರ್ಥಿ ವೇತನದ ಮೂಲಕ ಸಂಚಾರ ಮಾಡಿರುವುದರಿಂದ ಪತ್ರರೂಪ ಮತ್ತು ಶೈಕ್ಷಣಿಕ ಸ್ವರೂಪದ ಪ್ರವಾಸ ಕಥನವಾಗಿದೆ. ಲೇಖಕರು ಕ್ರೈಸ್ತರಾಗಿದ್ದರೂ, ರಾಮಕೃಷ್ಣ ಪರಮಹಂಸರ ಬಗ್ಗೆ ಹೊಂದಿದ್ದ ಗೌರವಾಭಿಮಾನ ಮತ್ತು ಲೇಖಕರ ಅಮೇರಿಕಾ, ಭಾರತ ಮಿತ್ರರುಗಳೊಡನೆ ನಡೆದುಕೊಂಡ ನಡವಳಿಕೆಯಿಂದ ಕ್ರೈಸ್ತ ಮತ್ತು ಹಿಂದೂ ಧರ್ಮಗಳ ಸಮನ್ವಯವನ್ನು ಕಾಣಬಹುದು. ಲೇಖಕರು ಸ್ವತಃ ಕವಿಗಳಾಗಿದ್ದು 'ಗಾನಲಹರಿ' ಎಂಬ ಕವನ ಸಂಕಲನವನ್ನು ಹೊರತಂದಿರುವುದರಿಂದ ಕೊಲಂಬಿಯಾ ಯಾತ್ರೆಯ ಅನುಭವ ಪೂರ್ಣ ನಿರೂಪಣಾ ಶೈಲಿ ಅತ್ಯುತ್ತಮವಾಗಿದೆ[67].

ಡಾ॥ಕೃಷ್ಣಾನಂದ ಕಾಮತ್ ಅವರು ಕ್ರಿ.ಶ. 1969ರಲ್ಲಿ **'ನಾನು ಅಮೇರಿಕೆಗೆ ಹೋಗಿದ್ದೆ'** ಎಂಬುದಷ್ಟೆ ಅಲ್ಲದೆ ವಂಗದರ್ಶನವೆಂಬ ಪ್ರವಾಸ ಕೃತಿಗಳನ್ನು ರಚಿಸಿದ್ದಾರೆ. ಅಮೇರಿಕಾ ಸಂಸ್ಥೆಯ ಸಹಾಯದಿಂದ ಕೀಟಶಾಸ್ತ್ರ ಸಂಶೋಧನೆಗಾಗಿ ಅಮೇರಿಕಾದಲ್ಲಿ ಸುಮಾರು ನಾಲ್ಕು ವರ್ಷ ತಂಗಿದ್ದು ಅಲ್ಲಾದ ಅನುಭವಗಳನ್ನು ಕೃತಿಯೊಂದಿಗೆ ಹಂಚಿಕೊಂಡಿದ್ದಾರೆ. ನಿರಾಶ್ರಿತರ ಬಗ್ಗೆ ಭಾರತ ಸರ್ಕಾರ ಹಾಕಿದ ಕಣ್ಣೀರಿನಲ್ಲಿ ಒಂದು ಅಂಶವಾದರೂ ತನ್ನವರ ಪರವಾಗಿ ಮಿಡಿದಿದ್ದರೆ ಅವರಿಗೆ ಅದೆಷ್ಟೋ ನೆಮ್ಮದಿ, ಸಾಂತ್ವಾನ ದೊರೆಯುತ್ತಿತ್ತು

[illegible]

ಎಂದಿದ್ದಾರೆ. ಈ ರೀತಿಯ ವೈಚಾರಿಕ ಮಾತನ್ನು ಭಾರತ–ಪಾಕಿಸ್ಥಾನ ಸಮರದ ಸಂದರ್ಭದಲ್ಲಿ, ಪಾಕಿಸ್ಥಾನಕ್ಕೆ ನೆರವಾಗಿ ನಿಂತ ಅಮೇರಿಕಾ ದೇಶವೂ ಅರ್ಥಮಾಡಿಸಲಿಲ್ಲ ಎಂಬುದನ್ನು ಲೇಖಕರು ಈ ಕೃತಿಯಲ್ಲಿ ವ್ಯಕ್ತಪಡಿಸಿರುವುದು ಕುತೂಹಲಕಾರಿಯಾಗಿದೆ[68].

ಶ್ರೀ.ಕೆ.ಗಣೇಶ ಮಲ್ಯರವರ **'ಅಮೆರಿಕದಲ್ಲಿ ಅರುವತ್ತು ದಿನಗಳು–1972'** ಶೀರ್ಷಿಕೆಯಲ್ಲಿ ಸ್ಪಷ್ಟವಾಗುವಂತೆ ಲೇಖಕರು ಸುಮಾರು ಎರಡು ಮಾಸಗಳು ಅಮೇರಿಕಾ ಮತ್ತು ಕೆನಡಾ ದೇಶಗಳ ಪ್ರವಾಸ ಕೈಗೊಂಡರೂ ಈ ಕೃತಿಯಲ್ಲಿ ಅಮೇರಿಕಾದ ಮಾಹಿತಿ ಮತ್ತು ಒಲವಿರುವುದು ಇದನ್ನು ಓದಿದವರಿಗೆ ತಿಳಿಯುತ್ತದೆ. ಇವರ ಮನಸ್ಸು ಪ್ರವಾಸ ಸಮಯದಲ್ಲಿ ಸಂಪೂರ್ಣವಾಗಿ ಆಶ್ಚರ್ಯ ಆಸಕ್ತಿಗಳಿಂದ ಕೂಡಿದ್ದು ಸ್ವಾರಸ್ಯಪೂರ್ಣವಾದ ವಿವರವನ್ನೊದಗಿಸಿದ್ದಾರೆ. ಅಮೇರಿಕನ್ನರ ಐಶಾರಾಮಿ ಜೀವನ, ಅವರ ಶೀಘ್ರ ಅಭಿವೃದ್ಧಿ, ಆರೋಗ್ಯ, ಶುಚಿತ್ವಗಳ ಗಮನ, ಪ್ರಾಮಾಣಿಕ ಶ್ರಮ ಮುಂತಾದವುಗಳನ್ನು ಶ್ಲಾಘಿಸಿದರೂ, ಅವರ ಕೌಟಂಬಿಕ ಅಸಾಮರಸ್ಯದ ವಿಷಯದ ಬಗ್ಗೆ ಖೇದವನ್ನು ವ್ಯಕ್ತಪಡಿಸುತ್ತಾರೆ. ಇದೊಂದು ನಿಯೋಗಿ ಪ್ರವಾಸ ಕಥನವಾಗಿದೆ[69].

ಮ. ನಾಗರಾಜರಾವ್ ಅವರ ಕ್ರಿ.ಶ. 1979ರ **'ನಾರಿ ನಿನಗೆ ನಮೋ ನಮೋ'**ದ ಪ್ರಸ್ತಾವನೆಯಲ್ಲಿ ಸ್ತ್ರೀ ಸಾಮಾನ್ಯನ ದೃಷ್ಟಿಯಿಂದ ನಾನು ಅಮೇರಿಕೆಯ ಜನಜೀವನವನ್ನು ನೋಡಿ ನನ್ನ ಅನುಭವಗಳನ್ನು ವಿವರಿಸಿದ್ದೇನೆ ಎಂದಿದ್ದಾರೆ. ಕೃತಿಯ ಶೀರ್ಷಿಕೆ **'ಸ್ತ್ರೀ'** ಪ್ರಧಾನ್ಯವಾಗಿದ್ದರೂ ವಸ್ತುಸ್ಥಿತಿ ಭಿನ್ನವಾಗಿದೆ. ಅಮೇರಿಕಾದಲ್ಲಿನ ಗುಣಾವಗುಣಗಳ ವ್ಯವಸ್ಥೆ ಮತ್ತು ವಸ್ತುಗಳ ಮಾರಾಟ ಬೆಲೆ ಇತ್ಯಾದಿಗಳ ವಿವರಗಳಲ್ಲಿ ಭಾರತದ ಸ್ಥಿತಿಗತಿಗಳನ್ನು ಗಮನದಲ್ಲಿ ಇಟ್ಟುಕೊಂಡಿರುವುದರಿಂದ ತೌಲನಿಕ ಚಿಂತನೆ ನಡೆದಿರುವುದನ್ನು ನೋಡಬಹುದು. ಕೃತಿಯ ಅಂತ್ಯದಲ್ಲಿ ಪ್ರಯಾಣದಲ್ಲಾದ ಸುಖ–ದುಃಖ, ತೆರಿಗೆ ಆಧಿಕಾರಿಗಳ ನಯ–ನಾಜೂಕುಗಳನ್ನು ಇಲ್ಲಿನವರ ವರ್ತನೆ ತುಲನೆ ಮುಂತಾದವುಗಳನ್ನೊಳಗೊಂಡ ದಿನಚರಿ ಸ್ವರೂಪದ ಪ್ರವಾಸ ಕಥನವಾಗಿದೆ[70].

ಮಾನವಶಾಸ್ತ್ರದ ಪ್ರಾಧ್ಯಾಪಕರಾದ ಡಾ॥ಕೆ.ಜಿ. ಗುರುಮೂರ್ತಿಯವರು ನಿಯೋಗಿ ಪ್ರವಾಸಿಗರಾಗಿ ಅಮೆರಿಕಾದ ವರ್ಜಿನೀಯಾ ರಾಜ್ಯದ ವಿಲಿಯಮ್ಸ್ ಬರ್ಗ್‌ನಲ್ಲಿ ಸೇರಲಿದ್ದ ಒಂದು ಅಂತಾರರಾಷ್ಟ್ರೀಯ ಸಮಾವೇಶದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ವತಿಯಿಂದ ಪ್ರತಿನಿಧಿಯಾಗಿ ಭಾಗವಹಿಸಿ ಬರೆದ ಪ್ರವಾಸ ಕಥನವೇ **'ಅಮೆರಿಕೆಯಲ್ಲಿ ಪ್ರವಾಸ–2000'**. ಕೃತಿಯ ಪ್ರಾರಂಭದಲ್ಲಿ ಲೇಖಕರ ಸ್ವಾಸ್ಥ್ಯರಸಿಕತೆಯ

ಪರಿಚಯವನ್ನು ಲೇಖಕರ–ಗಗನ ಸಖಿಯ ಸಂಭಾಷಣೆಯಲ್ಲಿ ಪರಿಚಯವಾಗುತ್ತದೆ. ಅಮೆರಿಕಾವನ್ನು ಲೇಖಕರು ಪ್ರವಾಸಿಯಾಗಿ ನೋಡುವುದಕ್ಕಿಂತ ವೃತ್ತಿಗನುಗುಣವಾಗಿ ನೋಡುವುದರಿಂದ ಎರಡು ಸಂಸ್ಕೃತಿಗಳ ನಡುವಿನ ಸಂಘರ್ಷ ಮತ್ತು ಸಾಮರಸ್ಯದ ಕಥನವೇ ಪ್ರಧಾನವಾಗಿದೆ. ಇವರ ನಿರೂಪಣಾ ಶೈಲಿ ಹಾಗೂ ಕುತೂಹಲಾಸಕ್ತಿಗಳೆಲ್ಲವೂ ವ್ಯಕ್ತಿ ಕೇಂದ್ರೀಕೃತವಾಗಿದೆ. ಅಮೇರಿಕಾ–ಭಾರತಗಳ ಸಾಮಾಜಿಕ ಸಮಸ್ಯೆ ಮೂಲ ನೆಲೆಗಳ ತೌಲನಿಕ ಪರಾಮರ್ಶೆಯೊಂದಿಗೆ ಅಮೇರಿಕನ್ನರ ಸಾಂಸ್ಕೃತಿಕ ಮುಖದ ಪರಿಚಯವನ್ನು ಸಾಕಷ್ಟು ಉತ್ಸಾಹದಿಂದ ಪರಿಚಯಿಸಿದ್ದಾರೆ[71].

**'ಜೀವಿ ಕಂಡ ಅಮೇರಿಕಾ':**– ಪ್ರಸಿದ್ಧ ಸಾಹಿತಿಯಾದ ಡಾ. ಜೀವಿ ಕುಲಕರ್ಣಿಯವರು ಅಮೇರಿಕಾದ ಟೆಕ್ಸಾಸ್ ರಾಜ್ಯದ ಹ್ಯೂಸ್ಟನ್ ನಗರದಲ್ಲಿ ಸೆಪ್ಟಂಬರ್ 1,2,3 (2002) ರಂದು ಜರುಗಿದ ಸಹಸ್ತ್ರಮಾನ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ; ಬಂದು–ಬಳಗ, ಮಗ–ಸೊಸೆ–ಮೊಮ್ಮಕ್ಕಳೊಂದಿಗೆ ಅಮೇರಿಕಾದಲ್ಲಿ ಕಳೆದ ಸುಂದರ ಕ್ಷಣಗಳನ್ನು ಮುಂಬಯಿಯ 'ಕನ್ನಡ ಮಲ್ಲಿ' ಪತ್ರಿಕೆಯಲ್ಲಿ ನಲವತ್ತೆಂಟು ಪ್ರವಾಸ ಲೇಖನಗಳಾಗಿ ಪ್ರಕಟಗೊಂಡಿದ್ದ ಪ್ರವಾಸ ಕಥನ. ಸಮ್ಮೇಳನದಲ್ಲಿ ಸಂಗೀತಾ ಕಟ್ಟಿ, ಪಂ. ಮಧವ ಗುಡಿ, ಡಾ॥ಯು.ಆರ್. ಅನಂತ ಮೂರ್ತಿ, ಗಿರೀಶ್ ಕಾರ್ನಾಡ್ ಮೊದಲಾದವರ ಮಾಹಿತಿಗಳನ್ನು ರಸವತ್ತಾಗಿ ನೀಡಿದ್ದಾರೆ. ವಿಶ್ವಸಮ್ಮೇಳನದ ಪ್ರತ್ಯಕ್ಷ ವರದಿ ಈ ಪ್ರವಾಸ ಕಥನದ ಮಹತ್ವದ ಭಾಗವಾಗಿ ಬಂದಿದೆ. ಡಾ॥ ವಸಂತ ಪ್ರಭು, ಡಲ್ಲಾಸ್‌ನಲ್ಲಿರುವ ಬೆಂಗಳೂರಿನ ನೃತ್ಯ ವಿಶಾರದೆ ಡಾ॥. ರೇವತಿ ಸತ್ಯಂ ಮುಂತಾದವರ ಭೇಟಿಯ ಸವಿ ನೆನಪುಗಳನ್ನು ಸ್ಮರಿಸಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಅಮೇರಿಕಾದ ಪ್ರವಾಸ ಮತ್ತು ಅಲ್ಲಿನ ಕನ್ನಡ ಹೃದಯಗಳನ್ನು ಇವರೊಂದಿಗೆ ಬೆಸದಿದೆ. ಕೃತಿಯುದ್ದಕ್ಕೂ ಓದುಗರನ್ನು 'ಅಮೇರಿಕನ್ನಡ ಲೋಕದಲ್ಲಿ ತಮ್ಮೊಡನೆ ವಿವರಿಸುವಂತೆ ಮಾಡುವ, ಮುದ ಮನಸ್ಸಿನ ಲವಲವಿಕೆಯ ಬರವಣಿಗೆ ಇದರ ಜೀವಾಳವಾಗಿದೆ[72].

## ಕೊನೆ ಟಿಪ್ಪಣಿ :


1. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 31.
2. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 33.
3. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 34.
4. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 35.
5. ಕನ್ನಡ–ಇಂಗ್ಲೀಷ್ ನಿಘಂಟು–1970, ಕಿಟ್ಟೆಲ್, 3ನೇ ಸಂಚಿಕೆ, ಮದ್ರಸ್ ವಿಶ್ವವಿದ್ಯಾಲಯ, ಪುಟ 1108.
6. ಸಂಕ್ಷಿಪ್ತ ಕನ್ನಡ ನಿಘಂತು (ಪರಿಷ್ಕೃತ)–2001, ಕನ್ನಡ ಸಾಹಿತ್ಯ ಪರಿಷತ್ತು, ಪುಟ 833.
7. ಸಿರಿಗನ್ನಡ ಅರ್ಥಕೋಶ–1990, ಡಾ॥ ಶಿವರಾಮ ಕಾರಂತ, ಪುಟ–360.
8. Websters new 20th Century Dictonary of English Language-1979, Noa Websters of Subpervised by Jean L. Mckechinic, Page No. 1942.
9. The Concise Oxford Dictionary of current English-1964, Edited by H.W. Fowler & F.G. Fowler, Page No. 1382.
10. ಸುಭಾಷ್ ಕನ್ನಡ–ಕನ್ನಡ–ಇಂಗ್ಲಿಷ್–ಇಂಗ್ಲಿಷ್–ಕನ್ನಡ ನಘಂಟು 1998 Publisher ಸುಭಾಷ್ ಸ್ಟೋರ್ಸ್, ಸಂ. ಪ್ರೊ. ಎಲ್.ಎಸ್. ಶೇಷಗಿರಿರಾವ್ ಪುಟ 330
11. ಕನ್ನಡ–ಇಂಗ್ಲೀಷ್ ನಿಘಂಟು 2007, ಅಭಿನವ, 71/18–2, 1ನೇ ಮುಖ್ಯರಸ್ತೆ, ಮಾರೇನಹಳ್ಳಿ ವಿಜಯನಗರ, ಬೆಂ–40, ಸಂ. ಡಾ॥ ಪ್ರಭುಶಂಕರ ಮತ್ತು ಬಾ.ವೇ. ಶ್ರೀಧರ ಪುಟ 318.
12. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 142–144
13. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 1–10.
14. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 145–146.
15. ಪ್ರವಾಸ ಸಾಹಿತ್ಯ, ಡಾ॥ಕೆ. ಅನಂತರಾಮು, ಧವಳಶ್ರೀ, ಸಂ: ಮಲೇಪುರಂ ಜಿ. ವೆಂಕಟೇಶ್, ಪುಟ 12.
16. ಪ್ರವಾಸ ಸಾಹಿತ್ಯ, ಡಾ॥ಕೆ. ಅನಂತರಾಮು, ಧವಳಶ್ರೀ, ಸಂ: ಮಲೇಪುರಂ ಜಿ. ವೆಂಕಟೇಶ್, ಪುಟ 13–14.
17. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್.ವಿದ್ಯಾಶಂಕರ, ಪುಟ–149.
18. ಪ್ರವಾಸ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನ, ಸಂಶೋಧಕಿ : ಅನುರಾಧ, ಬೆಂ.ವಿ.ವಿ.
19. ಪ್ರವಾಸ ಸಾಹಿತ್ಯ (Travelogue), ಕನ್ನಡ ನುಡಿ, ಡಿಸೆಂಬರ್ 1963, ಲೇ: ಶ್ರೀ. ಸಾ.ಶಿ. ಮರುಳಯ್ಯ,
20. ಪ್ರವಾಸ ಸಾಹಿತ್ಯದ ನೆಲೆ–ಬೆಲೆಗಳು, ಮೇಲಿನದೇ ಪುಟ:118.
21. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ, 2004, ಸಂ: ಶ್ರೀಮತಿ ಆರ್ಯಾಂಭ ಪಟ್ಟಾಭಿ, 341.
22. ಪ್ರವಾಸಾನುಭವದ ವಿಶಿಷ್ಟತೆ, ಪ್ರವಾಸ ಸಾಹಿತ್ಯ. : ಒಂದು ಅಧ್ಯಯನ, 1992, ಸಂ: ಶ್ರೀ. ಮಲ್ಲೇಪುರಂ ಜಿ. ವೆಂಕಟೇಶ ಪುಟ:19
23. ಕನ್ನಡದಲ್ಲಿ ಪ್ರವಾಸ ಸಾಹಿತ್ಯ:ಭಾರತ, ಮೇಲಿನದೇ ಪುಟ 74.

24. ಪ್ರವಾಸ ಕಥನಗಳ ನಿಲುವು, ಪ್ರವಾಸ ಸಾಹಿತ್ಯ, ಪುಟ:12.
25. ಕನ್ನಡದಲ್ಲಿ ಪ್ರವಾಸ ಸಾಹಿತ್ಯ:ಅಮೆರಿಕೆ, ಪುಟ:50.
26. ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ., 1991, ಲೇ: ಶ್ರೀ.ಡಾ.ಎಸ್. ವಿದ್ಯಾಶಂಕರ, ಪುಟ:132,
27. ಪ್ರಸ್ತಾವನೆ, ಪ್ರವಾಸ ಸಾಹಿತ್ಯ. : ಒಂದು ಅಧ್ಯಯನ, 1992, ಸಂ: ಶ್ರೀ. ಮಲ್ಲೇಪುರಂ ಜಿ. ವೆಂಕಟೇಶ, ಪುಟ: xii.
28. ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಅಮೆರಿಕೆ, ಪ್ರವಾಸ ಸಾಹಿತ್ಯ : ಒಂದು ಅಧ್ಯಯನ, 1992, ಸಂ : ಶ್ರೀ ಮಲ್ಲೇಪುರಂ ಜಿ. ವೆಂಕಟೇಶ, ಪುಟ:49.
29. ಪ್ರವಾಸ ಸಾಹಿತ್ಯದ ನೆಲೆ–ಬೆಲೆಗಳು, ಡಾ. ಸಿ.ಪಿ. ಕೃಷ್ಣಕುಮಾರ್, ಪ್ರವಾಸ ಸಾಹಿತ್ಯ : ಒಂದು ಅಧ್ಯಯನ ಸಂ: ಪ್ರೊ. ಮಲೇಪುರಂ ಜಿ. ವೆಂಕಟೇಶ್–1992, ಪುಟ: 121.
30. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 272.
31. ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ–1971, ಪುಟ 172.
32. ಪ್ರವಾಸ ಕಥನ, ಚಂದ್ರಶೇಖರ ಕಂಬಾರ, ಸಾಹಿತ್ಯ ವಾರ್ಷಿಕ–1973, ಪುಟ 131.
33. ಪ್ರವಾಸ ಸಾಹಿತ್ಯ ಮತ್ತು ನಗೆ ಬರಹಗಳು, ಸಾಹಿತ್ಯ ವಾರ್ಷಿಕ–1978, ಪುಟ 222.
34. ಪ್ರವಾಸ ಸಾಹಿತ್ಯ, ನಗೆ ಬರಹ ಮತ್ತು ಶಾಸ್ತ್ರ ಗ್ರಂಥಗಳು, ಸಾಹಿತ್ಯ ವಾರ್ಷಿಕ–1979, ಪುಟ 189.
35. ಪ್ರವಾಸ ಸಾಹಿತ್ಯ, ನಗೆ ಬರಹ ಮತ್ತು ಶಾಸ್ತ್ರ ಗ್ರಂಥಗಳು, ಸಾಹಿತ್ಯ ವಾರ್ಷಿಕ–1979, ಪುಟ 189.
36. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 347.
37. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 324.
38. ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ–1982, ಪುಟ 164.
39. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 347.
40. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 327
41. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 330.
42. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 352.
43. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 334.
44. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ 348.
45. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 352.
46. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 352.
47. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 354.
48. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004, ಡಾ॥ಸೀತಾ ಹನಸೋಗೆ, ಪುಟ 355.

49. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 353.
50. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ-2004, ಡಾ॥ಸೀತಾ ಹನಸೋಗೆ, ಪುಟ 358.
51. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ-2004, ಡಾ॥ಸೀತಾ ಹನಸೋಗೆ, ಪುಟ 362.
52. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 362.
53. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 343.
54. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 348.
55. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 361.
56. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 285.
57. ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ-1978, ಪುಟ 220.
58. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 336.
59. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 337.
60. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 340.
61. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 342.
62. ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ-2004, ಡಾ॥ಸೀತಾ ಹನಸೋಗೆ, ಪುಟ 354.
63. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 364.
65. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 359
66. ಹೊಸತು ವಿಶೇಷ ಸಂಚಿಕೆ, ಡಾ॥ಆರ್.ವಿ. ಭಂಡಾರಿ, ಜನವರಿ-2004, ಪುಟ 184-185.
67. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 271.
68. ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ -1972, ಪುಟ 288.
69. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 282.
70. ಪ್ರವಾಸ ಸಾಹಿತ್ಯ, ನಗೆ ಬರಹ ಮತ್ತು ಶಾಸ್ತ್ರ ಗ್ರಂಥಗಳು, ಸಾಹಿತ್ಯ ವಾರ್ಷಿಕ-1979, ಪುಟ 190.
71. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ-1991, ಡಾ॥ಎಸ್. ವಿದ್ಯಾಶಂಕರ, ಪುಟ 357.
72. ಹೊಸತು, ಡಿಸೆಂಬರ್ 2003, ಡಾ॥ ಮಂದಾಕಿನಿ ಪುರೋಹಿತ, ಪುಟ 32-33.

* * *

# ಅಧ್ಯಾಯ – 2

## ಅಮೇರಿಕಾ ಹವ್ಯಾಸಿ ಪ್ರವಾಸ ಕಥನಗಳ
## ತಾತ್ವಿಕ ವಿಶ್ಲೇಷಣೆ

# ಅಮೇರಿಕಾ ಹವ್ಯಾಸಿ ಪ್ರವಾಸ ಕಥನಗಳ ತಾತ್ವಿಕ ವಿಶ್ಲೇಷಣೆ

ನಮ್ಮ ಬುದುಕು ಸುಂದರಗೊಳಿಸುವ ನಮ್ಮ ವಿರಾಮ ಕಾಲವನ್ನು ಸದುಪಯೋಗಗೊಳಿಸಲು ನೆರವಾಗುವ ಹಾಗೂ ನಮ್ಮ ನೆರೆ–ಹೊರೆಯವರಿಗೂ ಉಪಯುಕ್ತವಾಗುವ ನಿರಂತರ ಚಟುವಟಿಕೆಗಳನ್ನು ಹವ್ಯಾಸಗಳು ಎಂದು ಹೇಳಬಹುದು.

ಒಬ್ಬ ವ್ಯಕ್ತಿ ತನ್ನ ಬಿಡುವಿನ ವೇಳೆಯನ್ನು ಹೇಗೆ ಕಳೆಯುತ್ತಾನೆ ಎಂಬುದರ ಮೇಲೆ ಆತ ಎಂತಹ ಮನುಷ್ಯ ಎಂದು ಹೇಳಬಹುದು. ವ್ಯಕ್ತಿ ತನ್ನ ಬಿಡುವಿನ ವೇಳೆಯನ್ನು ರಚನಾತ್ಮಕ; ಸೃಜನಾತ್ಮಕ ಉದ್ದೇಶಗಳಿಗಾಗಿ ಉಪಯುಕ್ತವಾಗಿ ಉಪಯೋಗಿಸಿಕೊಂಡಾಗ ಅವೇ ಹವ್ಯಾಸಗಳಾಗುತ್ತವೆ. ಒಳ್ಳೆಯ ಹವ್ಯಾಸಗಳು ಜೀವನದ ಅಮೂಲ್ಯ ಆಸ್ತಿಗಳು, ವ್ಯಕ್ತಿಯ ಉತ್ಕರ್ಷಕ್ಕೆ ನೆರವಾಗುವಂಥವು, ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸುಪ್ತ ಚೇತನಗಳಿವೆ. ಅವು ಅರಳಬೇಕು, ವಿಕಾಸಗೊಳ್ಳಬೇಕು. ಇದರಿಂದ ಸಮಾಜಕ್ಕೆ ಅನುಕೂಲವಾಗಬೇಕು ಅದಕ್ಕೆ ಉತ್ತಮ ಹವ್ಯಾಸಗಳು ಅಗತ್ಯ. ಹವ್ಯಾಸಗಳು ಹೊಸ ಪ್ರಪಂಚಕ್ಕೆ ತೆರೆದ ಬಾಗಿಲುಗಳಿದ್ದಂತೆ. ವ್ಯಕ್ತಿಯಲ್ಲಿ ಶಿಸ್ತನ್ನು ಬೆಳೆಸುತ್ತವೆ. ಇಂತಹ ಹವ್ಯಾಸಗಳಲ್ಲಿ ಪ್ರವಾಸ ಬಹುಮುಖ್ಯವಾಗಿದೆ.

ಪ್ರವಾಸ ಮಾಡುವುದು ವೆಚ್ಚದಾಯಕ ಹವ್ಯಾಸವಾದರೂ ಬದುಕಿನಲ್ಲಿ ಬದಲಾವಣೆಯನ್ನು ತರುತ್ತದೆ, ತಿಳುವಳಿಕೆಯ ಕ್ಷಿತಿಜ ವಿಸ್ತಾರವಾಗುತ್ತದೆ. ಇದರಿಂದಾಗಿ "ಬದುಕಿನಲ್ಲಿ ಪ್ರವಾಸವನ್ನು ಒಂದು ಅವಿಭಾಜ್ಯ ಘಟಕವಾಗಿಸಿ ಕಾಲ ಅವಕಾಶಗಳು ದೊರೆತಾಗ ಏಕಾಂಗಿಯಾಗಿಯೋ ಇಲ್ಲವೆ ಗುಂಪು ಗೂಡಿಯೋ ಸಂಚರಿಸುವವರು ಹವ್ಯಾಸಿ ಪ್ರವಾಸಿಗರು ಸ್ವಂತ ಖರ್ಚಿನಲ್ಲಿ, ಸ್ವತಂತ್ರವಾಗಿ, ಕಾಲದ ಮಿತಿಯಿಲ್ಲದೆ ಪ್ರವಾಸ ಮಾಡುವ ಅವಕಾಶವನ್ನು ಹವ್ಯಾಸಿ ಪ್ರವಾಸಿಗರು ಹೊಂದಿರುತ್ತಾರೆ. ಹವ್ಯಾಸಿ ಪ್ರವಾಸಿ ಎಲ್ಲ ವಿಷಯದಲ್ಲಿಯೂ ಸರ್ವಸ್ವತಂತ್ರ. ಇವರ ವೀಕ್ಷಣೆಗಳಿಗೆ ಯಾವುದೇ ರೀತಿಯ ಅಡೆತಡೆ, ಪರಿಮಿತಿ ಅಥವಾ ನಿರ್ಬಂಧಗಳಿರುವುದಿಲ್ಲ. ಹವ್ಯಾಸಿ ಪ್ರವಾಸಿಗೆ ಪ್ರವಾಸ ಕಾಲದಲ್ಲಿ ಸ್ವಾತಂತ್ರ್ಯ, ಆನಂದ ಮತ್ತು ಜ್ಞಾನಾನುಭವಗಳ ಗಳಿಕೆಯು ಹೆಚ್ಚು.

ಇಂದಿನ ಯಾಂತ್ರಿಕ ಜೀವನದ ನಿತ್ಯ ತೊಳಲಾಟದ ಮಧ್ಯ ಹಲವಾರು ಸಮಸ್ಯೆಗಳ ಜಂಜಡದಲ್ಲಿ ವ್ಯಕ್ತಿಯು ದೈನಂದಿನ ಬುದುಕು ಸಾಗುತ್ತಿರುವಾಗ ಮನಸ್ಸು ಹಗುರವಾಗಿರಬೇಕಾದರೆ ಪ್ರವಾಸವು ಒಂದು ಹವ್ಯಾಸವಾಗಬೇಕು. ಈ ಹಿನ್ನೆಲೆಯಾಗಿ ಹಲವು ಲೇಖಕರು ಪ್ರವಾಸ ಸಾಹಿತ್ಯದಲ್ಲಿ ತಮ್ಮದೊಂದು

ಕೊಡುಗೆ ಇರಲೆಂದು ಪ್ರವಾಸ ಮಾಡಿದ ಸ್ಫೂರ್ತಿಯ ಬಲದಿಂದ ಅಭಿರುಚಿ ಮೂಡಿ ಪ್ರವಾಸ ಕಥನಗಳನ್ನು ರಚನೆ ಮಾಡಿದ್ದಾರೆ. ಪ್ರವಾಸ ಸಾಹಿತ್ಯದ ಸೃಷ್ಟಿಗೆ ಪ್ರವಾಸಿಗಳೆಲ್ಲರೂ ತೊಡಗಬಹುದಾದರೂ ಬರೆದುದೆಲ್ಲವೂ ಸಾಹಿತ್ಯವಾಗಲಾರದು. ಬರವಣಿಗೆಯನ್ನು, ಹದವರಿತು ಬಳಸುವ ಕಲೆ ಉಚಿತಾನುಚಿತಗಳನ್ನು ಬೇರ್ಪಡಿಸಿ, ಬರಹಕ್ಕಿಳಿಸುವ ಪ್ರಜ್ಞೆ ಇರಬೇಕು. ಅಲ್ಲದೇ, ಹೇಗೆ ಬರೆಯಬೇಕು ಹಾಗೂ ವಿಷಯದ ಬಗೆಗೆ ಆಸಕ್ತಿ ಹಾಳಾಗದಂತೆ ಎಷ್ಟು ಹೇಳಬೇಕೆಂಬುದು ತಿಳಿದು, ಬರೆದಾಗ ಕೃತಿ ರಸಾನುಭವಕ್ಕೆ ಯೋಗ್ಯವಾಗುತ್ತದೆ. ಬರೆಯುವಾಗ ನುರಿತ ಲೇಖಕನಾಗಿರಬೇಕಾದ ಅವಶ್ಯಕತೆಯಿಲ್ಲವಾದರೂ ಅವನ ಭಾಷೆ ಕೃತ್ರಿಮವಾಗಿರಬಾರದು. ತನ್ನ ಅನುಭವಗಳನ್ನು ಸ್ವಾರಸ್ಯಕರವಾಗುವಂತೆ ಸರಳ, ನೇರವಾಗಿ ನಿರೂಪಿಸುವ ಕಲೆ ಸಿದ್ಧಿಸಿರಬೇಕಾಗುತ್ತದೆ. ಈ ದೃಷ್ಟಿಕೋನದಲ್ಲಿ ರಚಿತವಾದ ಅನೇಕ ಹವ್ಯಾಸಿ ಪ್ರವಾಸಿಗರ ಪ್ರವಾಸ ಕಥನಗಳು ಸ್ವಾರಸ್ಯಕರವಾಗಿ, ಅತ್ಯಂತ ಚೇತೋಹಾರಿಯಾಗಿವೆ. ಅವುಗಳನ್ನು ಈ ಮುಂದಿನಂತೆ ನೋಡಬಹುದು.

## ನಾ ಕಂಡ ಅಮೇರಿಕಾ – ಪ್ರೊ.ಬಿ.ವಿರೂಪಾಕ್ಷಪ್ಪ :

ಇಂದ್ರಿಯಗಮ್ಯವಾದ ಅನುಭವಗಳನ್ನು ಮೂಲದ್ರವ್ಯಗಳಾಗಿ ಸ್ವೀಕರಿಸಿ, ಪ್ರತಿಭೆಯ ಸಂಸ್ಪರ್ಶದಿಂದ ಅವುಗಳಿಗೆ ಗ್ರಾಹ್ಯ ಆಯಾಮವನ್ನು ನೀಡುವ ಸೃಷ್ಟಿ ಕಾರ್ಯದಲ್ಲಿ ತನ್ಮಯವಾಗಿ ಸಾಹಿತಿಯೊಬ್ಬ ಭಿನ್ನ ಭಿನ್ನ ಸಾಹಿತ್ಯ ಪ್ರಕಾರಗಳನ್ನು ಅಭಿವ್ಯಕ್ತಿಗಾಗಿ ಬಳಸಿಕೊಳ್ಳುತ್ತಾನೆ. ತನ್ನ ಪರಿಸರಕ್ಕೆ ಬದ್ಧನಾಗಿರುತ್ತಾ ಆತ ಆ ಅನುಭವಗಳನ್ನು ಪುನ: ಸೃಷ್ಟಿಸುತ್ತಾನೆ; ಸಹೃದಯರ ದೃಷ್ಟಿಯನ್ನು ವಿಸ್ತಾರಗೊಳಿಸುತ್ತಾನೆ. ಈ ಎರಡು ಅಂಶಗಳ ಅಂದರೆ ಸಾಹಿತಿಯ ವೈಯಕ್ತಿಕ ಅನುಭವಗಳು ಮತ್ತು ಅವುಗಳನ್ನು ಸ್ವೀಕರಿಸುವ ಸಾಹಿತ್ಯಕ ಪರಿಸರಗಳ ನಡುವೆ ಸಾಮರಸ್ಯವಿದ್ದಾಗಷ್ಟೇ ಸಾಹಿತ್ಯ ಪ್ರಬುದ್ಧವೂ ಸಮರ್ಥವೂ ಆಗುವುದರೊಂದಿಗೆ ಸಂವಹನಶೀಲತೆಯನ್ನು ಸಾಧಿಸಿಕೊಳ್ಳುತ್ತದೆ. ಈ ಮಾತಿಗೆ ಸಮರ್ಥನೆಯನ್ನು ನಾವು ರಸಾಯನಶಾಸ್ತ್ರದ ಪ್ರಾಧ್ಯಾಪಕರಾದರೂ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಪ್ರೊ.ಬಿ.ವಿರೂಪಾಕ್ಷಪ್ಪ ಅವರ ಕೃತಿಗಳಲ್ಲಿ ಕಾಣಬಹುದು. ಇವರ ಕೃತಿಗಳಲ್ಲಿ 'ನಾ ಕಂಡ ಅಮೇರಿಕಾ' ಪ್ರವಾಸ ಕಥನ ಒಂದಾಗಿದ್ದು, ಮಹತ್ವದ್ದಾಗಿದೆ.

ಮಗ ಮತ್ತು ಮಗಳ ಕರೆಯ ಮೇರೆಗೆ ನಾಲ್ಕು ತಿಂಗಳ ಕಾಲ ಅಮೇರಿಕಾದಲ್ಲಿ ನೆಲೆಸಲು ಅಮೇರಿಕಾ ಪ್ರವಾಸ ಕೈಗೊಂಡ ಪ್ರೊ.ಬಿ.ವಿರೂಪಾಕ್ಷಪ್ಪನವರು ಒಬ್ಬ ಹವ್ಯಾಸಿ ಪ್ರವಾಸಿಯಾಗಿದ್ದಾರೆ. ಬಸವತತ್ವ ಮತ್ತು ಶರಣ ತತ್ವಗಳಲ್ಲಿ ಅತ್ಯಂತ ನಿಷ್ಠೆ ಹಾಗೂ ಶ್ರದ್ಧೆಯುಳ್ಳ ಇವರು ತಮ್ಮ ಪ್ರವಾಸ

ಕಥನವನ್ನು ವಿಶಾಲ ಹಾಗೂ ವೈಚಾರಿಕ ತತ್ವಗಳ ಹಿನ್ನೆಲೆಯಲ್ಲಿ ಅವಲೋಕಿಸುತ್ತಾ ಪ್ರತಿಯೊಂದನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇವರ ಅವಲೋಕನದ ಅಂಶಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ಸ್ಥೂಲವಾಗಿ ನೋಡಬಹುದು.

1) ನೈಸರ್ಗಿಕ ಕೇಂದ್ರಗಳು

2) ಧಾರ್ಮಿಕ ಕೇಂದ್ರಗಳು

3) ಸಾಂಸ್ಕೃತಿಕ ಕೇಂದ್ರಗಳು

4) ಔದ್ಯಮಿಕ ಕೇಂದ್ರಗಳು

**ನೈಸರ್ಗಿಕ ಕೇಂದ್ರಗಳು** : ಕಣ್ಣು ಮತ್ತು ಮನಸ್ಸು ತಣಿಸುವಷ್ಟು ವಿಮಾನದ ಕಿಟಕಿಯ ಮೂಲಕ ಅದ್ಭುತ ಮನಮೋಹಕ ದೃಶ್ಯಗಳನ್ನು ಲೇಖಕರು ಸವಿದಿದ್ದಾರೆ. ಚಿತ್ರ–ವಿಚಿತ್ರವಾಗಿ ಕಾಣುವ ಕಾಡು, ಹಾವಿನ ಹಾಗೆ ಹದಿದಾಡುವ ನದಿಗಳು, ಬೆಟ್ಟ–ಗುಡ್ಡ ಮೊದಲಾದವುಗಳನ್ನು ಕಂಡು ಬೆರಗಾಗಿದ್ದಾರೆ. ನಿಸರ್ಗದ ಚೆಲುವು ಅದರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಅರಿಯುವ ಉದ್ದೇಶವನ್ನು ಲೇಖಕರಲ್ಲಿ ನಾವು ಕಾಣಬಹುದು.

'ಮೇಡ್ ಆಫ್ ದಿ ಮಿಸ್ಟ್' ಅಂದರೆ 'ಮಂಜಿನ ಕನ್ಯೆ'ಯೆಂದು ಕರೆಯಲ್ಪಡುವ ನಯಾಗ್ರರ ಫಾಲ್ಸನ್ನು ಲೇಖಕರು ಜೋಗಜಲಪಾತಕ್ಕೆ ಹೋಲಿಸಿ, ಓದುಗನ ಕಣ್ಮನಗಳಲ್ಲಿ ನಯಾಗರ ಜಲಪಾತ ಸರಳ ಸುಲಭವಾಗಿ ಮೂಡುವಂತೆ ಮಾಡಿದ್ದಾರೆ. “ಇದರ ಕೆಳ ಭಾಗದಿಂದ ಕಣ್ಣೆತ್ತಿ ಮೇಲೆ ನೋಡಿದಾಗ ನೀರಾಕಾಶವನ್ನು ಸೇರಿದಂತೆಯೂ (ಅದರಿಂದಲೇ) ಇದು ಪ್ರವಾಹಾಕಾರದಲ್ಲಿ ಹೊರಸೂಸುವಂತೆಯೂ ನಮಗೆ ಭಾಸವಾಗುತ್ತದೆ. ಇದನ್ನು ನೋಡಿದಾಗ ಕನ್ನಡದ ವರ ಕವಿ ಬೇಂದ್ರೆಯವರ 'ಇಳಿದು ಬಾ ತಾಯೆ ಇಳಿದು ಬಾ' ಎಂಬ ಗಂಗಾವತರಣದ ಪದ್ಯ ನೆನಪಾಗಿ ಆಕಾಶದಿಂದ–ಗಂಗೆ ಇಳಿದು ಬರುತ್ತದೆಯೆಂಬ ಭ್ರಮೆಗೊಳಗಾಗುತ್ತೇವೆ”.[1] ಹೀಗೆ, ಜಲಪಾತದಿಂದ ಉಂಟಾಗುವ ನೀರಿನ ಹನಿಗಳು ಆಕಾಶದಲ್ಲಿ ಮಂಜನ್ನು ಉಂಟುಮಾಡುವ ದೃಶ್ಯ ಲೇಖಕರಿಗೆ ಮನಮೋಹಕವಾಗಿ ಕಂಡು ಬೇರೊಂದು ಲೋಕದಲ್ಲಿದ್ದಂತೆ ಭಾಸವನ್ನುಂಟು ಮಾಡಿದೆ.

ಹಾರ್ಸ್ ಫಾಲ್ಸ ವೀಕ್ಷಣೆ, ನಯಾಗರ ಜಲಪಾತದ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಪುಟ 132 ರಿಂದ 133 ವರೆಗೆ ವಿವರವಾಗಿ ಉಲ್ಲೇಖಿಸುತ್ತಾ; ನಯಾಗರ ನದಿಯಲ್ಲಿ ಹಡಗಿನ ಪ್ರಯಾಣದ ಅನುಭವ, ಜಲ ವಿದ್ಯುತ್ ಪರಿಯೋಜನೆ (Hydro Electric Project) ಕೆನಡಾ ಭಾಗದಲ್ಲಿರುವ ಎತ್ತರವಾದ ಪ್ರದೇಶಗಳಲ್ಲಿ ಜೋಡಿಸಲಾಗಿರುವ ಬೃಹತ್ ವಿದ್ಯುದ್ವೀಪಗಳ ಅಪೂರ್ವ ದೃಶ್ಯವನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಬೆಟ್ಟ-ಗುಡ್ಡಗಳ ಅರಣ್ಯ ಪ್ರದೇಶಗಳಿಂದ ಸುತ್ತುವರೆದಿರುವ ರಮ್ಯ ಪರಿಸರದಲ್ಲಿರುವ (ಹೋಟೆ) ಗುಹೆಗಳ (Hove Cavern) ಬಗ್ಗೆ ಅಮೇರಿಕಾದ ಜಾನಪದ ಮತ್ತು ದಂಥ ಕಥೆಯನ್ನು ಸಂಕ್ಷಿಪ್ತವಾಗಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ.

**ಧಾರ್ಮಿಕ ಕೇಂದ್ರಗಳು** : ಲೇಖಕರು, ಜುಲೈ 95ರ ಒಂದು ಹಾಗೂ ಎರಡನೇಯ ತಾರೀಖಿಗೆ ವೀರಶೈವ ಸಮಾಜದ 18ನೇ ಅಧಿವೇಶನ ಮೇರಿಲ್ಯಾಂಡ್ ರಾಜ್ಯದ ಬಾಲ್ಟಿಮೋರ್ ಪಟ್ಟಣದ ಹೊರವಲಯದಲ್ಲಿ ನಡೆದ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಅಮೇರಿಕಾದಂಥ ದೂರದೇಶದಲ್ಲಿ ನೆಲೆಸಿದ ವೀರಶೈವರು ಇಂಥ ಸಂಸ್ಥೆಯನ್ನು ಕಟ್ಟಿಕೊಂಡು ತಮ್ಮ ಧರ್ಮ, ಸಂಸ್ಕೃತಿ, ಸಾಹಿತ್ಯ ಹಾಗೂ ಭಾಷೆಯನ್ನುಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ತುಂಬಾ ಶ್ಲಾಘನೀಯ. ಅಮೇರಿಕಾದಲ್ಲಿನ ವೀರಶೈವರು ಸಾವಿರಾರು ಮೈಲುಗಳನ್ನು ಕ್ರಮಿಸಿ ಇಂಥ ಸಮಾವೇಶಕ್ಕೆ ಪ್ರತಿವರ್ಷ ಗೊತ್ತಾದ ಸ್ಥಳದಲ್ಲಿ ಸೇರುತ್ತಿರುವುದು ತಮ್ಮ ಸಂಸ್ಕೃತಿಯ ಉಳಿವಿಗಾಗಿ ಅವರಲ್ಲಿರುವ ಕೆಚ್ಚನ್ನು ಕುರಿತು ಲೇಖಕರು ಪ್ರೀತಿ, ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಈ ಸಮಾವೇಶಕ್ಕೆ ಅತಿಥಿಗಳಾಗಿ ಆಗಮಿಸಿದ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರು ಶ್ರೀ. ರಾಜಯೋಗೀಂದ್ರ ಮಹಾಸ್ವಾಮಿಗಳು ಹಾಗೂ ವಿಜಾಪುರದ ಶ್ರೀ. ಸಿದ್ದೇಶ್ವರ ಸ್ವಾಮಿಗಳ ಅನುಭಾವ ಗೋಷ್ಠಿ, ವೀರಶೈವ ಸಿದ್ಧಾಂತ, ವಿವಿಧ ಕಾರ್ಯಕ್ರಮಗಳ ಕುರಿತು ಲೇಖಕರು ಪುಟ-20 ಮತ್ತು ಪುಟ-26ರಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದಾರೆ. ಭಾರತೀಯರು ತಮ್ಮ ದೇಶದಿಂದ ಇಷ್ಟು ದೂರವಿದ್ದರೂ ತಮ್ಮ ಧರ್ಮ-ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬರುವುದರಲ್ಲಿ ಹಿಂದೆ ಬಿದ್ದಿಲ್ಲ ಎನ್ನುವುದನ್ನು ಲೇಖಕರು ಅಮೇರಿಕಾದ ಅನೇಕ ಪಟ್ಟಣಗಳಲ್ಲಿ ಹಿಂದೂ ದೇವಾಲಯಗಳನ್ನು ಸಮೀಕ್ಷಿಸುವುದರ ಮುಖಾಂತರ ತಿಳಿಸುತ್ತಾರೆ. ಉದಾಹರಣೆಯಾಗಿ ನ್ಯೂಯಾರ್ಕಿನ ಕ್ವೀನ್ಸ್ ಐಲ್ಯಾಂಡ್ ವಿಭಾಗದಲ್ಲಿರುವ ಗಣೇಶ ದೇವಾಲಯ, ಪಿಟ್ಸ್‌ಬರ್ಗ್‌ನಲ್ಲಿರುವ ವೆಂಕಟೇಶ್ವರ ದೇವಾಲಯ, ಮೇರಿಲ್ಯಾಂಡ್ ರಾಜ್ಯದಲ್ಲಿ

ಎರಡು ಈಶ್ವರ ದೇವಾಲಯಗಳು, ರಾಘವೇಂದ್ರ ಸ್ವಾಮಿ ದೇವಾಲಯ ಮೊದಲಾದವುಗಳಿಗೆ ಪ್ರತಿನಿತ್ಯ ಅಲ್ಲಿ ನೆಲೆಸಿದ ಹಿಂದೂಗಳು ಸಾಕಷ್ಟು ಸಂಖ್ಯೆಯಲ್ಲಿ ಬರುವುದಲ್ಲದೆ, ಹಿಂದೂ ಧರ್ಮದ ಪ್ರತಿಯೊಂದು ಹಬ್ಬವನ್ನು ಆಚರಿಸುವುದರಲ್ಲಿ ಕಾಣಬಹುದು ಎಂದಿದ್ದಾರೆ.

**ಸಾಂಸ್ಕೃತಿಕ ಕೇಂದ್ರಗಳು** : ವಿದೇಶಗಳಲ್ಲಿ ನೆಲೆಸಿರುವ ಭಾರತೀಯರು ತಮ್ಮ ಧರ್ಮ, ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬಂದಿರುವುದನ್ನು ಲೇಖಕರು ಹಲವಾರು ನಿದರ್ಶನಗಳ ಮೂಲಕ ತಿಳಿಸಿದ್ದಾರೆ. ಅಮೇರಿಕಾದ ಅನೇಕ ಪಟ್ಟಣಗಳಲ್ಲಿರುವ ಹಿಂದೂ ದೇವಾಲಯಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ದೇಶೀಯರಂತೆ ಅನಿವಾಸಿ ಭಾರತೀಯರು ಸತ್ಯನಾರಾಯಣ ಪೂಜೆ, ಬಸವ ಜಯಂತಿ ಮೊದಲಾದ ಹಿಂದೂ ಹಬ್ಬಗಳನ್ನು ಆಚರಿಸುವುದಲ್ಲದೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಂಡು ಖ್ಯಾತಿವೆತ್ತ ಭಾರತೀಯ ಚಲನಚಿತ್ರ ಕಲಾವಿದರು, ಸಂಗೀತಜ್ಞರು, ನೃತ್ಯಪಟುಗಳು ಅಮೇರಿಕಾಕ್ಕೆ ಆಹ್ವಾನಿಸುತ್ತಾರೆಂದಿದ್ದಾರೆ. ಪ್ರತಿ ತಿಂಗಳು ಕಾರ್ಯಕ್ರಮಗಳನ್ನು ನಡೆಯುತ್ತಿರುವ ಭಾರತೀಯ ಕಲಾವಿದರು ಪ್ರತ್ಯಕ್ಷವಾದ ಸಂಸ್ಕೃತಿಯ ರಾಯಭಾರಿಗಳಾಗಿ ಲೇಖಕರಿಗೆ ಕಾಣಿಸಿಕೊಂಡಿದ್ದಾರೆ. ಕೇವಲ ಧಾರ್ಮಿಕ ಹಬ್ಬಗಳನ್ನು ಆಚರಿಸದೇ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುತ್ತಾರೆ. "ನೀವು ನನ್ನನ್ನು ಭಾರತದಿಂದ ಹೊರಗೆ ಕಳಿಸಬಹುದೇ ಹೊರತು ನನ್ನಲ್ಲಿರುವ ಭಾರತೀಯತೆಯನ್ನು ನನ್ನಿಂದ ಹೊರ ತೆಗೆಯುವುದು ಸಾಧ್ಯವಿಲ್ಲ"[2] ಎಂದು ಅಮೇರಿಕಾದಲ್ಲಿ ನೆಲೆಸಿರುವ ಭಾರತೀಯ ಯುವತಿಯೊಬ್ಬಳು ಹೇಳಿದ್ದನ್ನು ಸ್ಮರಿಸಿಕೊಂಡು, ಆಗಿನ ರಾಯಭಾರಿ ಸಿದ್ಧಾರ್ಥ ಶಂಕರರೇ ಅವರ ಮಾತಿನಿಂದ ತಿಳಿದು, ಆ ಯುವತಿಯಲ್ಲಿನ ರಾಷ್ಟ್ರಪ್ರೇಮವನ್ನು ಎಲ್ಲರೂ ಮೆಚ್ಚುವಂತದ್ದು, ಹೆಮ್ಮೆ ಪಡುವ ವಿಷಯವಾಗಿದೆ ಎಂದಿದ್ದಾರೆ.

ಇಂದಿನ ಜಗತ್ತು ಅಜ್ಞಾನ, ದ್ವೇಷ ಮತ್ತು ಕಲಹಗಳಿಂದ ಬಿರುಕು ಬಿಟ್ಟಿದೆ. ಎಲ್ಲದರಲ್ಲೂ ಸಂಶಯ, ಅಭದ್ರತೆ ಹೆಚ್ಚಾಗಿದೆ. ಹೆಚ್ಚುತ್ತಿರುವ ಮಾನಸಿಕ ವೇದನೆ ಹಣದ ಅಭಾವ, ವ್ಯಾಪಕವಾದ ಯುದ್ಧಗಳು ಈ ಮೊದಲಾದವುಗಳ ಕೊರತೆಯಿಂದ ಆಯಾ ದೇಶದ ಸಂಸ್ಕೃತಿಗಳು ಶಕ್ತಿಗುಂದುತ್ತಿವೆ. ಇಂತಹ ಸನ್ನಿವೇಶದಲ್ಲಿ ಕೂಡಾ ಅನಿವಾಸಿ ಭಾರತೀಯರು ತಮ್ಮ ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯ ಎನ್ನುತ್ತಾರೆ.

**ಔದ್ಯೋಗಿಕ ಕೇಂದ್ರಗಳು** : ಅಮೇರಿಕಾದಲ್ಲಿನ ಭವ್ಯ ಕಟ್ಟಡಗಳು ಲೇಖಕರ ಗಮನ ಸೆಳೆದಿವೆ. ಸರ್ಕಾರಿ ಭವನ (Government House) ಕ್ಯಾಪಿಟಲ್ ಹಿಲ್ (Capital Hill), ಕಾಂಗ್ರೆಸ್

ಅಂದರೆ ಜನತಾ ಪ್ರತಿನಿಧಿಗಳ ಸಭೆ, ಶಾಸನಾಧಿಕಾರದ ಸಾರ್ವಭೌಮ ಸಂಸ್ಥೆ, ಪೆಂಟೆಗಾನ್ ಕಟ್ಟಡ ಇದು ರಕ್ಷಣಾ ಇಲಾಖೆಗೆ ಸಂಬಂಧಿಸಿದ್ದು, ಬಾಹ್ಯಾಕಾಶ ರಾಷ್ಟ್ರೀಯ ವಸ್ತು ಪ್ರದರ್ಶನಾಲಯ, ಮೀನಿನ ಸಂಗ್ರಹಾಲಯ ಅಕ್ವೇರಿಯಮ್, ಐನ್‌ಸ್ಟೀನ್ ತಾರಾಲಯ, ಅಂತರರಾಷ್ಟ್ರೀಯ ನ್ಯಾಯಾಲಯದ ಕಛೇರಿ, ಜಾರ್ಜ್ ವಾಷಿಂಗ್ಟನ್ ಸ್ಮಾರಕ, ಬೃಹದಾಕಾರದ ಮಾಲ್‌ಗಳು ಮೊದಲಾದ ಕಟ್ಟಡಗಳು ಮತ್ತು ಅವುಗಳಲ್ಲಿನ ಸ್ವಚ್ಛತೆ ಅವರನ್ನು ಬೆರಗುಗೊಳಿಸಿದೆ. No waste no wants ಎಂಬ ರಸಾಯನಶಾಸ್ತ್ರದ ಮೂಲ ಸೂತ್ರವನ್ನು ಅಮೇರಿಕನ್ನರು ಅಳವಡಿಸಿಕೊಂಡಿರುವಂತೆ ನಮ್ಮ ದೇಶದಲ್ಲಿಯೂ ಜಾರಿಗೆ ಬರಬೇಕೆಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**ಇತರ ಅಂಶಗಳು** : ಮಾನವನ ವಾಸ್ತವಿಕ ಜೀವನದಲ್ಲಿ ಸರ್ವಸಮಾನತೆ ಬೇಕು ವಿವಾಹದ ವಿಚಾರದಲ್ಲಿ ಎಲ್ಲರಿಗೂ ಸಮಾನವಾದ ಕಾನೂನುಗಳಿರುವುದು ನಿಜ. ಆದರೆ ಒಂದಲ್ಲ ಒಂದರ ಸ್ವಲ್ಪ ಅಸಮತೆಯನ್ನಾದರೂ, ಸಹಿಸಬೇಕಾಗುತ್ತದೆ. ನೈಜ ಪ್ರೇಮ, ಪರಿಸರದ ಅರಿವು ಹಾಗು ಸಹಕಾರಗಳಿಂದ ವಿವಾಹ ಫಲಕಾರಿಯಾಗುತ್ತದೆ. ಆದರೆ ಇದಕ್ಕೆ ವಿರುದ್ಧವಾದಾಗ ಕೌಟುಂಬಿಕ ಜೀವನ ಶಿಥಿಲವಾಗುತ್ತದೆ ಎನ್ನುವ ಲೇಖಕರು ಪುಟ 75 ರಿಂದ 77ರವರೆಗೆ ತಿಳಿಸಿರುವಂತೆ ವಿವಾಹ ವಿಚ್ಛೇದನ ಪ್ರಕರಣಗಳೇ ಹೆಚ್ಚಾಗಿರುವುದನ್ನು, ವೃದ್ಧರಿಗೆ ವೃದ್ಧಾಶ್ರಮಗಳು, ವರ್ಣವ್ಯವಸ್ಥೆಗಳನ್ನು ಕಾಣುತ್ತೇವೆ.

ಅಮೇರಿಕಾದ ಯಂತ್ರಧಾರಿತ ವೈಜ್ಞಾನಿಕ ಕೃಷಿ ಪದ್ಧತಿಗಳ, ಪ್ರಗತಿಯಿಂದ ಬೆಳೆದ ಹಲವಾರು ಉದ್ದಿಮೆ ಅಥವಾ ಕೈಗಾರಿಕೆಗಳನ್ನು ನೋಡಬಹುದು. ಅಮೇರಿಕಾದ ರಮ್ಯ ಪರಿಸರ ಮತ್ತು ಅದರ ಸಂರಕ್ಷಣೆ ಮೆಚ್ಚುವಂತದ್ದು ನಯಾಗರ ಜಲಪಾತ, ಪೋವೆ ಗುಹೆ, ಲೆಸ್ಟರ್ ಗುಹೆ ಅವುಗಳ ಚರಿತ್ರೆಯನ್ನು ಅಡಕಗೊಳಿಸಿ ಎಲ್ಲವನ್ನು ವಿವರವಾಗಿ ವಿವರಿಸಿದ್ದಾರೆ.

ಹವ್ಯಾಸಕ್ಕಾಗಿ ಪ್ರವಾಸ ಕೈಗೊಂಡಿದ್ದರೂ ಸೂಕ್ಷ್ಮವಾಗಿ ಗಮನಿಸಿರುವ ಲೇಖಕರು ಅವರೇ ಹೇಳಿರುವಂತೆ, ನಮ್ಮ ದೇಶ ಹಾಗೂ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಮೇರಿಕಾವನ್ನು ತುಲನಾತ್ಮಕವಾಗಿ ತಿಳಿದುಕೊಂಡು, ತಿಳಿಸಲು ಪ್ರಯತ್ನಿಸಿರುವುದು ಕಂಡು ಬರುತ್ತದೆ.

**ಅಮೇರಿಕಾದಲ್ಲಿ ಕಂಡಿದ್ದು ಕೇಳಿದ್ದು – ಮಂಡಗದ್ದೆ ಶ್ರೀನಿವಾಸಯ್ಯ** : "ದೇಶ ನೋಡು ಕೋಶ ಓದು" ಎಂಬ ಗಾದೆಯ ಮಾತೊಂದು ನಮ್ಮಲ್ಲಿ ಬಳಕೆಯಲ್ಲಿದೆ. ಸುತ್ತಾಡಿ ದೇಶ ನೋಡುವುದರಿಂದ,

ನಮ್ಮ ಜ್ಞಾನ ಹೆಚ್ಚುತ್ತದೆಂಬುದು ಅದರ ಅರ್ಥವಲ್ಲ. ಸುತ್ತಾಟದ ಅವಧಿಯಲ್ಲಿ ನಮ್ಮ ಇಂದ್ರಿಯಗಳು, ಭಾವಗಳು, ಸುತ್ತಣ ಪ್ರಪಂಚಕ್ಕೆ ಸ್ಪಂದಿಸಬೇಕು. ಕಣ್ಣು ಹರಿಬಿಟ್ಟ ಕಡೆ ಇಂದ್ರಿಯಗಳಷ್ಟೇ ಅಲ್ಲ ಭಾವನೆಗಳ ದಳಗಳು ಅರಳಬೇಕು ಆಗ ಪ್ರಕೃತಿ ತನಗೆ ತಾನೇ ನಮ್ಮ ಇಂದ್ರಿಯ ಭಾವಗಳಿಗೆ ಸಮಾರಾಧನೆಯನ್ನು ಒದಗಿಸುತ್ತದೆ. ಈ ಸಮಾರಾಧನೆಯಲ್ಲಿ ಸಿಂಹಪಾಲು ಕಣ್ಣು ಮತ್ತು ಮನಗಳದ್ದು ಅದಕ್ಕಾಗಿಯೇ ಹವ್ಯಾಸಕ್ಕಾಗಿ ಪ್ರವಾಸ ಕೈಗೊಂಡರೂ ಕೂಡಾ ತಾತ್ಕಾಲಿಕ ಮನರಂಜನೆಯಾಗದೆ, ಅನುಭವ; ಶೋಧನೆಯತ್ತ ಸಾಗುವ ಪ್ರಕ್ರಿಯೆಯಾಗಿದೆ. ಇಂತಹ ಅನುಭವದ ರಸವನ್ನು ಶ್ರೀ. ಮಂಡಗದ್ದೆ ಶ್ರೀನಿವಾಸಯ್ಯ ತಮ್ಮ ಪ್ರವಾಸ ಕಥನ ಮೂಲಕ ಸಹೃದಯರಿಗೆ ಸರಳವಾಗಿ, ವಿಶಿಷ್ಟ ಶೈಲಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಮಗ ಮತ್ತು ಸೊಸೆಯ ಮೇರೆಗೆ ಲೇಖಕರು ಮಾರ್ಚ್ 3, 2004 ರಿಂದ ಜೂನ್ 9, 2004ರ ಅವಧಿಯವರೆಗೆ ಪತ್ನಿಯ ಜೊತೆ ಅಮೇರಿಕಾ ಪ್ರವಾಸ ಕೈಗೊಂಡಿದ್ದಾರೆ. ಹವ್ಯಾಸಕ್ಕಾಗಿ ಪ್ರವಾಸ ಕೈಗೊಂಡರೂ ಕೂಡಾ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಪ್ರವಾಸ ಕಥನದ ಪ್ರಾರಂಭದಲ್ಲಿ ತಮ್ಮ ಶಾಲಾ ದಿನಗಳ ಭೂಗೋಳದಲ್ಲಿ ಓದಿದ ಅಮೇರಿಕಾವನ್ನು ನೆನಪು ಮಾಡಿಕೊಂಡು ಅದರ ಪೂರ್ವೇತಿಹಾಸವನ್ನು ಕೊಟ್ಟಿದ್ದಾರೆ. ಅಲ್ಲದೆ ಅಮೇರಿಕನ್ನರ ಶುಚಿತ್ವ, ಶಿಸ್ತು, ಪರಿಸರ ಪ್ರಜ್ಞೆಯನ್ನು ಲೇಖಕರು ಅಪಾರವಾಗಿ ಮೆಚ್ಚಿಕೊಂಡಿದ್ದಾರೆ.

ಲೇಖಕರ ಪ್ರವಾಸ ಕಥನವನ್ನು ಈ ಕೆಳಗಿನ ದೃಷ್ಟಿಯಿಂದ ನೋಡಬಹುದು :

1) ಅನಿವಾಸಿ ಭಾರತೀಯರು ತಮ್ಮ ಸಂಸ್ಕೃತಿ ಉಳಿಸಿ ಬೆಳೆಸುವುದು

2) ಪ್ರೇಕ್ಷಣೀಯ ಸ್ಥಳಗಳು

3) ಸಾಮಾಜಿಕ ಜೀವನ

'ಸಂಸ್ಕೃತಿ, ಪರಂಪರೆ ಬೆಳೆಸಿದ ಭಾರತೀಯ' ಎನ್ನುವ ಶೀರ್ಷಿಕೆಯಡಿಯಲ್ಲಿ ಲೇಖಕರು, ಅಮೇರಿಕಾದಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ ಹೇಗೆ ಉಳಿದು ಬೆಳೆದಿದೆ ಎನ್ನುವುದನ್ನು ತಿಳಿಸಿದ್ದಾರೆ. ಸಾಮಾಜಿಕ ಬದ್ಧತೆಯುಳ್ಳ ಸಾಂಸ್ಕೃತಿಕ ಸಂಘಟನೆಗಳು ಸಾವಿರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡು

[illegible]

ಭಾರತೀಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ಕ್ರಿಯಾಶೀಲವಾಗಿವೆ ಎನ್ನುವುದಕ್ಕೆ ಸಾಕ್ಷಿಯಾಗಿ, ಕ್ಯಾಲಿಪೋರ್ನಿಯಾದಲ್ಲಿ ಆಯೋಜಿಸಲಾಗುವ ಕಾರ್ಯಕ್ರಮಗಳ ಪಟ್ಟಿಯನ್ನು ಪುಟ 31–45ರವರೆಗೆ ಕೊಟ್ಟಿದ್ದಾರೆ. ಅಮೇರಿಕಾದಲ್ಲಿ ನೆಲೆಸಿರುವ ಭಾರತೀಯನೂ ಸಹ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡು, ಸಾಂಸ್ಕೃತಿಕ ಸಂಘಟನೆಗಳನ್ನು ಕಟ್ಟಿಕೊಂಡು ಕೇವಲ ತೋರಿಕೆಗಾಗಿ ಮಾಡದೆ ಆಂತರಿಕವಾಗಿ ನಿಜವಾದ ಅಭಿಮಾನ ಹೊಂದುವುದು ಅವಶ್ಯವಾಗಿದೆ "ಕಾಳಿದಾಸನ ಹೆಸರಿನ ಜಪ ಮಾಡಿದಾಕ್ಷಣ ಅವನ ಕಾವ್ಯದ ಸೊಗೆ ಹೇಗೆ ಕಾಣಿಸದೋ ಹಾಗೆ 'ಸಂಸ್ಕೃತಿ, ಸಂಸ್ಕೃತಿ' ಎಂದು ಒದರಿದುದರಿಂದ ನಾವು ಸುಸಂಸ್ಕೃತರಾಗಲಾರೆವು ಅದನ್ನರಿತು ಅದಕ್ಕೆ ತಕ್ಕದಾಗಿ ನಡೆದು, ನಮ್ಮ ಜೀವನದ ದಾರಿಗಳಲ್ಲಿ ಅದನ್ನು ನಡೆದು ತೋರಿಸಿದರೆ ಮಾತ್ರವೇ ಸಂಸ್ಕೃತಿಯ ಸೊಬಗು, ಸಿದ್ಧಿ, ಸಾಫಲ್ಯ" ಎನ್ನುವ ಶಿವರಾಮ ಕಾರಂತರ ನಿಲುವು ಸಾರ್ಥಕವಾಗುತ್ತದೆ ಆಗ ಮಾತ್ರ ಪರಂಪರೆಯಿಂದ ಬಂದ ಮೆರುಗು ಸುಸಂಸ್ಕೃತ ಜೀವನವನ್ನಾಗಿಸುತ್ತದೆ ಎನ್ನುತ್ತಾರೆ.

ಅಮೇರಿಕಾದಲ್ಲಿ ನೋಡಿದ ಪ್ರೇಕ್ಷಣೀಯ ಸ್ಥಳಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವುಗಳ ಚರಿತ್ರೆಯ ಮಾಹಿತಿಯನ್ನು ಪುಟ 65–88ರವರೆಗೆ ರಾಷ್ಟ್ರೀಯ ಉದ್ಯಾನವನ, ಸ್ಯಾನ್ ಫ್ರಾನ್ಸಿಸ್ಕೋನ 'ಗೋಲ್ಡನ್ ಗೇಟ್ ಬ್ರಿಡ್ಜ್' ಮತ್ತು ಅದರ ಸುತ್ತಮುತ್ತಲಿನ ಸ್ಥಳ, ಚೀನಾ ಟೌನ್, ಜಪಾನೀಸ್ ಟೀ ಗಾರ್ಡನ್ ಮತ್ತು ಪರಿಸರದ ಪ್ರಭಾವ, ಅಮೇರಿಕೆಯ ಅಂಡಮಾನ ಎಂದು ಕರೆಯುವ ಅಲ್‌ಕಟ್ರಾಟ್ ಬಿಗ್ ಬೇಸಿನ್ ರೆಡ್‌ವುಡ್ ಹೀಗೆ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ನೋಡುವಾಗ ತಮಗಾದ ಅನುಭವನ್ನು ಸಚಿತ್ರವಾಗಿ ನಿರೂಪಿಸಿದ್ದಾರೆ. "15/20 ವರ್ಷಗಳ ಹಿಂದಿನ ಖುರ್ಚಿ, ಮೇಜು, ಬೀಸಣಿಗೆ, ಗತಿಸಿ ಹೋದವರು ಹಿಡಿದಿದ್ದ ದೊಣ್ಣೆಗಳಿನೇರಬಹುದು ಅದನ್ನೆಲ್ಲಾ ನಮಗೆ ಕೇವಲ ವಸ್ತುಗಳಾಗಿಯೋ, ಪ್ರೇಕ್ಷಣೀಯ, ಮನರಂಜನಾ ಸ್ಥಳಗಳಾಗಿಯೋ ಕಾಣಬಹುದು, ಆದರೆ ಅವೆಲ್ಲವೂ ಅಮೇರಿಕಾದಲ್ಲಿ ಚರಿತ್ರೆಯನ್ನೇ ಸೃಷ್ಟಿಸಿವೆ. ಅವುಗಳನ್ನು ವೈಭವೀಕರಿಸಿದ್ದಾರೆ, ಪ್ರಚಾರ ಕೊಟ್ಟಿದ್ದಾರೆ, ಕಡ್ಡಿಯನ್ನು ಗುಡ್ಡ ಮಾಡಿದ್ದಾರೆ. ಮೇಲಾಗಿ ಅವುಗಳನ್ನು ಪ್ರೀತಿಸುತ್ತಾರೆ, ಸಂರಕ್ಷಣೆ ಮಾಡುತ್ತಾರೆ. ಆ ಸ್ಥಳಕ್ಕೆ ಹೋದಾಗ ಮಾರ್ಗದರ್ಶನ ಮಾಡುತ್ತಾರೆ"[3] ಎನ್ನುವ ಲೇಖಕರ ಮಾತಿನಲ್ಲಿ ಅಮೇರಿಕನ್ನರ ಪ್ರವಾಸೋದ್ಯಮ ಪ್ರಿಯತೆ, ಪರಿಸರ ಕಾಳಜಿಯನ್ನು ಕಾಣಬಹುದು. ಅಮೇರಿಕನ್ನರ ಈ ಗುಣ ನಿಜಕ್ಕೂ ಪ್ರಶಂಸನೀಯ.

[illegible]

ಶತಮಾನಗಳಷ್ಟು ಇತಿಹಾಸವನ್ನು ಹೊಂದಿರುವ ಭಾರತದ ಐತಿಹಾಸಿಕ ಕಟ್ಟಡಗಳು, ಸ್ಥಳಗಳು, ದೇವಾಲಯಗಳ ರಮ್ಯ ಪರಿಸರ ಮುಂತಾದವು ಪ್ರಸ್ತುತ ಸನ್ನಿವೇಶದಲ್ಲಿ ಅಳಿವಿನ ಅಂಚಿಗೆ ಬಂದು ತಲುಪಿವೆ. ಅಮೇರಿಕನ್ನರಂತೆ ಸಂರಕ್ಷಿಸಿಕೊಂಡರೆ ಮುಂದಿನ ಜನಾಂಗಕ್ಕೆ ಭಾರತದ ಭವ್ಯ ಪರಂಪರೆಯ ಪರಿಕಲ್ಪನೆಯನ್ನು ನೀಡಬಹುದು ಎಂಬ ಅಭಿಲಾಶೆಯನ್ನು ವ್ಯಕ್ತಪಡಿಸುತ್ತಾರೆ.

"ಅಮೇರಿಕದ ಮನೆಗಳಲ್ಲಿ, ಹೋಟೆಲ್‌ಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮೆರೆಯುವ ಟಿಶ್ಯೂ ಪೇಪರ್‌ನ ಸಂಸ್ಕೃತಿಯ ಬಗ್ಗೆ ಒಂದು ಕವನವನ್ನೇ ರಚಿಸಿದ್ದಾರೆ. ಏನೇ ಒರೆಸಬೇಕಾದರೂ ಚಿಂದಿ ಬಟ್ಟೆ ಬಳಸುವ ನಮಗೆ ಒರೆಸಿ ಎಸೆಯುವ ಯೂಸ್ ಅಂಡ್ ಥ್ರೋ ಸಂಸ್ಕೃತಿ ಇಲ್ಲಿ ಬೇಕಾಗಿಲ್ಲ ಕೂಡ"[4] ಆದರೂ ಅಲ್ಲಿ ನೆಲೆಸಿರುವವರಿಗೆ ಅನಿವಾರ್ಯವೇ ಆಗಿದೆ ಎಂದಿದ್ದಾರೆ.

ಲೇಖಕರು ಅಮೇರಿಕನ್ನರ ವೈಜ್ಞಾನಿಕ ಕೃಷಿ ಮತ್ತು ಅದರ ಪ್ರಗತಿಯನ್ನು ಕುರಿತು ಪುಟ 55–57ರವರೆಗೆ ತಿಳಿಸುತ್ತಾ, ವಿಶಾಲವಾದ ಭೂ ಪ್ರದೇಶ ಹೊಂದಿದ್ದರೂ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ. ಅಲ್ಲಿನ ಸರ್ಕಾರ ರೈತರ ಹಿತರಕ್ಷಣೆ ಶ್ರಮಿಸುತ್ತದೆ. ಇದರಿಂದಾಗಿ ರೈತರು ಸಾವಿರಾರು ಎಕರೆ ಜಮೀನಿನಲ್ಲಿ ಆಧುನಿಕ ಸಲಕರಣೆಗಳನ್ನು ಉಪಯೋಗಿಸಿ ಸಾಕಷ್ಟು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ರೈತರಿಗೆ ಮಾರುಕಟ್ಟೆ ವ್ಯವಸ್ಥೆ ಸುಲಭವಾಗಿ ತಲುಪುತ್ತದೆ. ಕೃಷಿಯ ಪ್ರಗತಿಯಿಂದಾಗಿ ಹಲವು ಕೈಗಾರಿಕೆಗಳು ಸ್ಥಾಪನೆಗೊಂಡು ಲಾಭ ಗಳಿಸುತ್ತವೆ ಇದರಿಂದ ಆ ದೇಶ ಮುಂದುವರೆಯಲು ಸಾಧ್ಯ. ಆದರೆ ಭಾರತದಲ್ಲಿ ಇದು ವ್ಯತಿರಿಕ್ತವಾಗಿದೆ. ಸರ್ಕಾರವು ರೈತರ ಹಿತಕ್ಕೆ ಶ್ರಮಿಸುತ್ತಿದ್ದರೂ ಎಲ್ಲ ರೈತರಿಗೂ ತಲುಪದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಅಮೇರಿಕನ್ ಸರ್ಕಾರದಂತೆ ಭಾರತ ಸರ್ಕಾರವು ಕೂಡಾ ರೈತರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕಾಗಿದೆ ಎನ್ನುತ್ತಾರೆ.

ಅಮೇರಿಕನ್ನರು ಉದ್ಯಮ, ಕಲೆ, ವಾಣಿಜ್ಯ, ಫ್ಯಾಷನ್, ಮನರಂಜನೆ, ಸೃಜನಶೀಲತೆ ಮೊದಲಾದ ವಿಷಯಗಳಲ್ಲಿ ಪ್ರಗತಿ ಸಾಧಿಸಿದ್ದಾರೆ. ಇಂತಹ ಪ್ರಗತಿಯಲ್ಲಿ ಕೇವಲ ಅಮೇರಿಕನ್ನರು ಮಾತ್ರವಲ್ಲದೆ ಇತರ ದೇಶಗಳ ವಲಸೆಗಾರರ ಕೊಡುಗೆಯೂ ಗಮನಾರ್ಹವಾಗಿದೆ ಎನ್ನುತ್ತಾ, ಎಲ್ಲವನ್ನು ಬೆರಗುಗಣ್ಣುಗಳಿಂದ ನೋಡಿ ತಮಗಾದ ಅನುಭವವನ್ನು ಆತ್ಮೀಯವಾಗಿ ಹಂಚಿಕೊಂಡಿದ್ದಾರೆ.

**ಅಮೇರಿಕಾ – ಅಮೇರಿಕಾ, ತಂದೆ – ತಾಯಿ – ಮಕ್ಕಳು ಹೊಳಲ್ಕೆರೆ ಶ್ರೀಪಾಲಶ್ರೇಷ್ಠಿ ವಸಂತಕುಮಾರ** : 'ಅಮೇರಿಕಾ–ಅಮೇರಿಕಾ, ತಂದೆ–ತಾಯಿ–ಮಕ್ಕಳು ಈ ಪ್ರವಾಸ ಕಥನದ ಶೀರ್ಷಿಕೆಯೇ ಸ್ಪಷ್ಟಪಡಿಸುವಂತೆ ಕೌಟುಂಬಿಕ ದೃಷ್ಟಿಕೋನದ ಹವ್ಯಾಸಿ ಪ್ರವಾಸ ಕಥನವಾಗಿದೆ. ಈ ಪ್ರವಾಸ ಕಥನದ ಮುಖಾಂತರ ಲೇಖಕರು ತಿಳಿಸುವಂತದ್ದು– ಅಮೇರಿಕ ಭೋಗ ಜೀವನಕ್ಕೆ ಮಾರುಹೋಗಿ ಅನಿವಾಸಿ ಭಾರತೀಯ ನೆಲದ ನಂಟನ್ನು ನಿರಾಕರಿಸುವುದರ ಮೂಲಕ ಅಪರಿಚಿತ ನಾಡಿನ, ಸಂಸ್ಕೃತಿ, ಧರ್ಮ, ಮನೋವೃತ್ತಿಗಳಿಗೆ ಸಂದಿಸುತ್ತಾ ಹೊಸ ರೂಪಾಂತರ ಹೊಂದುತ್ತಿದ್ದಾರೆ. ಈ ರೂಪಾಂತರದಲ್ಲೂ ನೆಮ್ಮದಿ ಇಲ್ಲದೆ ಅದಮ್ಯ ಒತ್ತಡದಲ್ಲು ಸಿಲುಕಿ, ತ್ರಿಶಂಕು ಸ್ಥಿತಿ ಅನಿವಾಸಿ ಭಾರತಿಯರದ್ದಾಗಿದೆ ಎನ್ನುವುದನ್ನು ಹಲವಾರು ನಿದರ್ಶನಗಳ ಮೂಲಕ ನಿರೂಪಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪೋಷಕರು ಮಕ್ಕಳಿಗೆ ಸೂಕ್ತ ತಿಳುವಳಿಕೆ ಮೂಡಿಸಬೇಕೆಂದು ಹಾಗೂ ಅವರಲ್ಲಿ ಸ್ವದೇಶದ ನಾಡು, ನುಡಿ, ಜಲ, ಸಂಸ್ಕೃತಿಗಳ ಮಹತ್ವ ತಿಳಿಸಿ ಸ್ವದೇಶ ಪ್ರೇಮ ಹೆಚ್ಚಿಸಬೇಕು. ಇಂತಹ ಸ್ಥಿತಿಯಲ್ಲಿ ಪೋಷಕರು ಹೇಗೆ ನಡೆದುಕೊಳ್ಳಬೇಕು, ಅವರ ಜವಾಬ್ದಾರಿಗಳು ಮಕ್ಕಳ ಕರ್ತವ್ಯಗಳು ಈ ಎಲ್ಲೆವುದರ ಕುರಿತು ಕೃತಿಯುದ್ದಕ್ಕೂ ಉಪದೇಶಿಸಿದ್ದಾರೆ.

ಅಮೇರಿಕಾದ ಅಭದ್ರ ವೈವಾಹಿಕತೆಗೆ ಗಂಡು–ಹೆಣ್ಣು ಸಮಾನ ಎಂಬ ಅಹಂಕಾರವೇ ಕಾರಣ ಎಂದು ಹೇಳುವ ಲೇಖಕರು ಹೆಣ್ಣಿನ ಅಹಂಕಾರದಿಂದಲೇ ಕುಟುಂಬದ ವಿಘಟನೆಯಾಗುತ್ತದೆ ಎಂದು ಭಾರತೀಯ ಸ್ತ್ರೀಯರಿಗೆ ಎಚ್ಚರಿಕೆ ನೀಡುವುದನ್ನು ನಾವು ಸಂಪೂರ್ಣ ಅಲ್ಲಗಳೆಯಬಹುದು. ಕೌಟುಂಬಿಕ ವಿಘಟನೆಗೆ ಕೇವಲ ಹೆಣ್ಣು ಮಾತ್ರ ಕಾರಣವಾಗಲಾರಳು ಗಂಡಿನ ನಿರಂಕುಶ, ದಬ್ಬಾಳಿಕೆ ಅತ್ಯಾಚಾರವು ಹೊಂದಾಣಿಕೆಯ ಕಾರಣವಾಗಿರಬಹುದೆಂದು ಲೇಖಕರು ಯೋಚಿಸಬಹುದಾಗಿತ್ತು. ವಿವಾಹ ವಿಚ್ಛೇದನಕ್ಕೆ ಹಲವು ಕಾರಣಗಳಿರಬಹುದು, ಗಂಡು–ಹೆಣ್ಣು ಸಮಾನರಾಗಿದ್ದುಕೊಂಡು ಸೌಖ್ಯದಿಂದ ತಮ್ಮ ವೈವಾಹಿಕ ಜೀವನವನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಎಷ್ಟೋ ಕುಟುಂಬಗಳನ್ನು ನಾವು ನೋಡಬಹುದು.

ಅಮೇರಿಕಾದ ಪ್ರತ್ಯಕ್ಷ ಸಂದರ್ಶನದ ಅಂಕಿ ಅಂಶಗಳಿಂದ ಅನಿವಾಸಿ ಭಾರತೀಯರಲ್ಲಿ ಬಹುಪಾಲು ಅತಂತ್ರ ಸ್ಥಿತಿಯಲ್ಲಿರುವುದು, ಕೆಲವರು ಮಾತ್ರ ಸುಸ್ಥಿತಿಯಲ್ಲಿರುವುದನ್ನು ತಿಳಿಸುತ್ತಾರೆ. ವಿದೇಶದ ಅತಿಯಾದ ವ್ಯಾಮೋಹದಿಂದ ಗಾಳಿ ಗೋಪುರಗಳನ್ನು ಕಟ್ಟಬಾರದೆಂದು ತಿಳಿಸುತ್ತಾರೆ. ಅಮೇರಿಕಾದ

ಆರ್ಥಿಕ ಸೌಧ ಕುಸಿಯುತ್ತಿದ್ದು ಹಲವು ಭಾರತೀಯರು ಉದ್ಯೋಗವನ್ನು ಕಳೆದುಕೊಂಡು ಹಿಂದಿರುಗಿ ಬರುವ ಪರಿಸ್ಥಿತಿ ಉಂಟಾಗಿದೆ ಎನ್ನುವುದನ್ನು ಇತ್ತೀಚಿನ ದಿನಗಳಲ್ಲಿ ನಾವು ಕಾಣಬಹುದು.

ಕೌಟುಂಬಿಕ ಪರಿಸರದಲ್ಲಿನ ಪರಸ್ಪರ ಸಂಬಂಧ, ಹೊಣೆಗಾರಿಕೆ, ಕರ್ತವ್ಯಗಳನ್ನು ತಮ್ಮ ಸ್ವಾನುಭಾವದಿಂದ ಮುಕ್ತವಾಗಿ ಚರ್ಚಿಸಿದ್ದಾರೆ. ಕುಟುಂಬದ ವ್ಯಕ್ತಿಗಳು ಯಾರೇ ಆಗಲಿ ಉಪದೇಶ ಮಾಡುವುದಕ್ಕಿಂತ ತಾವು ಒಳ್ಳೆಯ ಜೀವನವನ್ನು ಜೀವಿಸಿಯೇ ತೋರಿಸುವುದು ಒಳ್ಳೆಯದು ಇದರಿಂದ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಬಹುದು. ಇದರ ಫಲವಾಗಿ ಒಳ್ಳೆಯ ಜೀವನ ಪಾಠವನ್ನು ಕಲಿತು ಸಮಾಜದ ಉತ್ತಮ ಘಟಕಗಳಾಗಬಹುದು. ಹೀಗಾದಾಗ ಮನೆ ಅಥವಾ ಸಮಾಜ ಜೀವನ ಸುಖಕರವಾಗುವುದರಲ್ಲಿ ಯಾವುದೇ ಅನುಮಾನವಿರುವುದಿಲ್ಲ ಎಂದು ಲೇಖಕರು ತಮ್ಮ ಪ್ರವಾಸ ಕಥನದುದ್ದಕ್ಕೂ ಗಾದೆ ಮಾತುಗಳನ್ನು, ಸರ್ವಜ್ಞ ತ್ರಿಪದಿಗಳನ್ನು ಉಪಯೋಗಿಸಿಕೊಂಡು ಜೀವನದ ಎಲ್ಲ ಮುಖಗಳನ್ನು ಪರಿಚಯಿಸಿದ್ದಾರೆ.

ಅಮೇರಿಕಾದ ರಾಜಧಾನಿ ವಾಷಿಂಗ್‌ಟನ್ ಡಿ.ಸಿ. ಮ್ಯೂಸಿಯಂ, ಸೆನೆಟ್ ಗೌಸ, ವೈಟ್ ಹೌಸ್, ಲಿಂಕನ್ ಪ್ರತಿಮೆ, ಸೆಂಟ್ರಲ್ ಪಾರ್ಕ್, ಲಿಬರ್ಟಿ ಪ್ರತಿಮೆ, ಯು.ಎನ್.ಓ., ಮನಮೋಹಕ ಗ್ರೇಟ್ ಫಾಲ್ಸ್ ನಯಾಗರ ಜಲಪಾತ ಈ ಮೊದಲಾದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಮತ್ತೊಮ್ಮೆ ನೋಡಬೇಕೆನ್ನುವ ಹಂಬಲವನ್ನು ಅವರಿಗಾದ ರೋಮಾಂಚನಕಾರಿ ಅನುಭವವನ್ನು ತಿಳಿಯಬಹುದು.

ಒಟ್ಟಾರೆಯಾಗಿ ಲೇಖಕರು ತಮ್ಮ ಪ್ರವಾಸ ಕಥನದಲ್ಲಿ ವಾಸ್ತವಿಕ ಬದುಕಿನ ಕಟು ಸತ್ಯವನ್ನು ಬಿತ್ತರಿಸಿದ್ದಾರೆ. ವಿದೇಶೀಯ ಅತಿಯಾದ ಮೋಹದಿಂದ ಆಗುವ ದುರಂತವನ್ನು ತಿಳಿಸುತ್ತಾ, ಅಮೇರಿಕಾದ ಯಾಂತ್ರಿಕ ಯುಗದಲ್ಲಿ ಸಾಮಾಜಿಕ ಮೌಲ್ಯಗಳು ಕುಸಿದು ಸರ್ವಕ್ಷೇತ್ರಗಳಲ್ಲಿ ಅನೀತಿ, ಅನ್ಯಾಯ ತುಂಬಿದೆ. ಇದನ್ನು ಭಾರತೀಯರು ಅನುಸರಿಸಬಾರದು ಎಂದು ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ. "ಮೌಲ್ಯಗಳಿಲ್ಲದ ಜೀವನ ಪರಿಮಳವಿಲ್ಲದ ಪುಷ್ಪದಂತೆ" ಎನ್ನುವ ಮಾತನ್ನು ಮನಗಂಡ ಲೇಖಕರು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಮನ್ನಣೆ ಕೊಟ್ಟು ನೀತಿಯನ್ನು ಅಗತ್ಯಕ್ಕಿಂತ ಹೆಚ್ಚಾಗಿ ಬೋಧಿಸಿದ್ದಾರೆ.

**ಅಮೇರಿಕಾಯಣ – ಎನ್.ಆರ್. ಕೃಷ್ಣಮೂರ್ತಿ :** ಲೇಖಕರು ಪತ್ನಿ ಸಮೇತ ಅಮೇರಿಕಾದ ಲಾಸ್ ಏಂಜಲೀಸ್ ನಗರದಲ್ಲಿರುವ ಮಗನ ಗೃಹಪ್ರವೇಶದ ನಿಮಿತ್ತ ಅಮೇರಿಕಕ್ಕಾಗೆ ಭೇಟಿ ನೀಡಿ ಅಲ್ಲಿ ನಾಲ್ಕು ತಿಂಗಳುಗಳ ಕಾಲ ತಂಗಿದ್ದು ಈ ಸಮಯದಲ್ಲಿ ಸೆಳೆದ ಕೆಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ

ಮೂವತ್ತೆರಡು ಉಪಶೀರ್ಷಿಕೆಯನ್ನು ಒಳಗೊಂಡ ಈ ಪ್ರವಾಸಕಥನ ಸರಳವಾಗಿ ಓದಿಸಿಕೊಂಡು ಹೋಗುತ್ತದೆ. ಜೀವ–ಜೀವನ, ಮಾತೇ ಮುತ್ತು, ಸಮಯವೇ ಸಂಪತ್ತು, ಸುರಕ್ಷತೆಯ ಶ್ರೀರಕ್ಷೆ, ರಸ್ತೆಗಳು, ವಿಶ್ರಾಂತಿ ಕೋಣೆಗಳು, ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ? ಈ ಶೀರ್ಷಿಕೆಗಳಡಿಯಲ್ಲಿ ಸಂಬಂಧಪಟ್ಟ ವಿಷಯವನ್ನು ನಿದರ್ಶನಗಳೊಂದಿಗೆ ವಿಸ್ತರಿಸಿದ್ದು, ಅಮೇರಿಕನ್ನರ ನಡೆ–ನುಡಿ, ಸಾಮಾಜಿಕ ಸಭ್ಯತೆ, ಜೀವನ ಶೈಲಿಯನ್ನು ಬಹುವಾಗಿ ಒಪ್ಪಿಕೊಂಡಿದ್ದಾರೆ.

ದೇಶದ ಜೀವನಾಡಿಗಳೇ ರಸ್ತೆಗಳು. ಅಮೇರಿಕ ವಿಶ್ವದಲ್ಲಿಯೇ ಬಲಿಷ್ಠ ರಾಷ್ಟ್ರವಾಗಿ ಬೆಳೆಯಲು ರಸ್ತೆಗಳೇ ಕಾರಣವೆನ್ನುತ್ತಾರೆ. ಚಿಕ್ಕ ರಸ್ತೆಯಾಗಲಿ, ಹೆದ್ದಾರಿಯೇ ಆಗಿರಲಿ ಉತ್ತಮ ಗುಣಮಟ್ಟದ್ದಾಗಿರುತ್ತವೆ ಎಂದು ಹೊಗಳುತ್ತಾ, ಭಾರತದ ರಸ್ತೆಗಳು ಈ ಮಟ್ಟದಲ್ಲಿದ್ದರೆ ಚೆನ್ನಾಗಿರುತ್ತಿತ್ತು ಎನ್ನುವಲ್ಲಿ ಲೇಖಕರ ಆಶಾಭಾವನೆ ವ್ಯಕ್ತವಾಗುತ್ತದೆ.

ಅಮೇರಿಕದಲ್ಲಿ ಅಷ್ಟೊಂದು ಎಚ್ಚರಿಕೆಯಿಂದ ವಾಹನಗಳನ್ನು ನಡೆಸುವ ನಮ್ಮವರು, ಭಾರತಕ್ಕೆ ಬರುತ್ತಲೇ ರಸ್ತೆ ನಿಯಮಗಳಿಗೆ ತಿಲಾಂಜಲಿ ನೀಡಿ ಅವರೂ ಸಹ ನಮ್ಮವರಲ್ಲೊಬ್ಬರಾಗುವುದು ವಿಪರ್ಯಾಸವೆಂದು ಬೇಸರವನ್ನು ವ್ಯಕ್ತಪಡಿಸಿದ್ದಾರೆ.

'ಶೌಚಾಲಯ' ಎನ್ನುವುದಕ್ಕೆ ಬದಲಾಗಿ 'ವಿರಾಮದ ಕೋಣೆ'ಗಳು ಎಂದು ಅಮೇರಿಕದಲ್ಲಿ ಕರೆಯವುದು ಅನ್ವರ್ಥನಾಮವೆನಿಸುತ್ತದೆ ಎನ್ನುತ್ತಾ, ಅಮೇರಿಕಾದ ಶೌಚಾಲಯಗಳು ವಿಶಾಲ ಹಾಗೂ ಸ್ವಚ್ಛವಾಗಿರುತ್ತವೆ. ಈ ವಿರಾಮ ಕೋಣೆಗಳಲ್ಲಿ ಅಂಗವಿಕಲರಿಗೆಂದು ವಿಶೇಷ ಅನುಕೂಲಗಳನ್ನು ಕಲ್ಪಿಸಿದ್ದು, ಮಹಿಳೆಯರಿಗೆ, ಅದರಲ್ಲಿಯೂ ಗರ್ಭಿಣಿಯರು ಮತ್ತು ಚಿಕ್ಕ ಚಿಕ್ಕ ಕಂದಮ್ಮಗಳನ್ನು ತಮ್ಮೊಂದಿಗೆ ಕರೆತರುವ ತಾಯಂದಿರಿಗೆ ಇವು ಆತಂಕ ನಿವಾರಣಾ ಕೇಂದ್ರಗಳಾಗಿವೆ ಎನ್ನುತ್ತಾರೆ. ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿಯೂ ಇಂತಹ ವ್ಯವಸ್ಥೆ ಇದ್ದು ವಿರಾಮದ ಕೋಣೆಗಳಿಲ್ಲದೆ ಯಾವುದೇ ಅಂಗಡಿ ಮುಂಗಟ್ಟುಗಳು,

ಮಳಿಗೆಗಳು, ಕಛೇರಿಗಳನ್ನು ತೆರೆಯಲು ಅಮೇರಿಕ ಸರಕಾರ ಪರವಾನಗಿಯನ್ನೇ ನೀಡುವುದಿಲ್ಲವೇನೋ ಎಂದೆನಿಸುತ್ತದೆ. ಜೊತೆಗೆ ಜನರ ಪ್ರಜ್ಞೆ ಕೂಡಾ ಕಾರಣವೆನಿಸುತ್ತದೆ. ವಿರಾಮದ ಕೋಣೆಗಳು ಅತ್ಯಾವಶ್ಯಕ ಹಾಗೂ ಜೀವನದ ಅವಿಭಾಜ್ಯ ಅಂಗ ಎಂಬುದನ್ನು ಮನಗಂಡಿರುವ ಅಮೇರಿಕದ ನಾಗರಿಕ ಸಮಾಜ ಎಲ್ಲೆಡೆ ಇರುವುದು ಒಳ್ಳೆಯದೆನಿಸುತ್ತದೆ.

ಅಮೇರಿಕ, ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರವಾಗಿದ್ದರು, ಅಲ್ಲಿಯವರು ಆಹಾರದಲ್ಲಿ ತೋರುವ ಗೌರವಾದರಗಳಿಗೇ ತಲೆ ಬಾಗಲೇಬೇಕು ಎನ್ನುತ್ತಾರೆ. ಅನ್ನದ ಆಹಾರದ ಬಗ್ಗೆ ಅವರಿಗಿದ್ದ ಶ್ರದ್ಧೆ ಅರ್ಥಪೂರ್ಣವಾಗಿದೆ. ಅಲ್ಲಿನ ಹೋಟೆಲ್‌ಗಳಲ್ಲಿ ತಾವು ತಿನ್ನಲು ತೆಗೆದುಕೊಂಡ ತಿಂಡಿ ಅಥವಾ ಊಟ ಒಂದು ವೇಳೆ, ಹೆಚ್ಚಾದಾಗ ಅದನ್ನು ಪೋಲುಮಾಡುವುದಿಲ್ಲ ಬದಲಾಗಿ ತಟ್ಟೆಗಳಲ್ಲಿ ಉಳಿದುದನ್ನು ಪೊಟ್ಟಣಗಳಲ್ಲಿ ಕಟ್ಟಿಕೊಂಡು ಮನೆಗೆ ತೆಗೆದುಕೊಂಡು ಹೋಗಿ ತಿನ್ನುತ್ತಾರೆ. ಈ ಕ್ರಿಯೆ ಅಲ್ಲಿ ಬಹು ಸಾಮಾನ್ಯ. ಇದರಲ್ಲಿ ಸಂಕೋಚದ ಅಥವಾ ಕೀಳರಿಮೆಯ ಪ್ರಶ್ನೆಯೇ ಏಳುವುದಿಲ್ಲ. ಆಹಾರ ಪದಾರ್ಥಗಳನ್ನು ಚೆಲ್ಲಬಾರದು ಎಂಬುದೇ ಇದರ ಉದ್ದೇಶ, ಆದರೆ ನಾವು ಬಾಯಿಯಲ್ಲಿ ಹೇಳುವ ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ ಎಂಬುದನ್ನು ಅಲ್ಲಿ ನೇರ ಆಚರಣೆಗೆ ತರಲಾಗಿದೆ ಎನ್ನುವ ಲೇಖಕರ ಮಾತು ಚಿಂತನೆಗೆ ಎಡೆಮಾಡಿಕೊಟ್ಟಿದೆ. ಭಾರತದಲ್ಲಿ ಇದರ ಅಗತ್ಯತೆಯನ್ನು ಪ್ರತಿಬಿಂಬಿಸಬೇಕು ಎನ್ನುತ್ತಾರೆ.

ಅಮೇರಿಕಾ ರಾಷ್ಟ್ರದ ದಿಕ್ಕುಗಳು ಒಂದೇ ಕಾಲಕ್ಕೆ ಬೇರೆ ಬೇರೆ ಕಾಲಮಾನಗಳನ್ನು ಅನುಸರಿಸುತ್ತದೆಂದು ಹೇಳುತ್ತಾರೆ. ಅಮೇರಿಕಾದ ಪೂರ್ವಭಾಗ ರಾಷ್ಟ್ರದ ರಾಜಧಾನಿನಗರ, ವಾಷಿಂಗ್‌ಟನ್ ಡಿ.ಸಿ.ಯ ಶ್ವೇತಭವನ ಅಲ್ಲಿ ಅದಾಗಲೆ ಬೆಳಗಿನ ಹತ್ತು ಗಂಟೆಯಾಯಿತಲ್ಲ ಎಂದುಕೊಳ್ಳುತ್ತ, ಜಾಗತಿಕ ಸಮಸ್ಯೆ, ಭಯೋತ್ಪಾದನೆ ನಿಗ್ರಹದ ವಿಚಾರದಲ್ಲಿ ಉಭಯ ದೇಶಗಳು ಅನುಸರಿಸಬಹುದಾದ ಕಾರ್ಯತಂತ್ರಗಳ ಬಗ್ಗೆ ತಾನು ಕಳಿಸಿದ ಪ್ರಸ್ತಾವನೆಗಳಿಗೆ ಇಂಗ್ಲೆಂಡ್ ನಿಂದ ಬಂದಿರಬಹುದಾದ ಇ-ಮೇಯಿಲ್ ತಡುಕುವ ತವಕದಿಂದ ತನ್ನ ಆತ್ಯಾಧುನಿಕ ಲ್ಯಾಪ್ ಟಾಪನ್ನು ಲಾಗ್‌ಇನ್ ಮಾಡಲು ಯತ್ನಿಸುತ್ತಿರುತ್ತದೆ ಹಾಗೂ ದೇಶದ ಮಧ್ಯಭಾಗ ಹೊಸ್ಟನ್ ನಗರ, ಫಿನಿಕ್ಸ್ ಪರ್ವತ ಶ್ರೇಣಿ, ಪಶ್ಚಿಮದ ಹಾಲಿವುಡ್ ನಗರಿ ಲಾಸ್ ಏಂಜಲೀಸ್ ಕ್ರಮವಾಗಿ ಒಂಬತ್ತು, ಎಂಟು, ಏಳು ಗಂಟೆಗಳೆಂದು ತಿಳಿದು ಕಾರ್ಯಗಳಿಗೆ ತೊಡಗುತ್ತವೆ

ಎನ್ನುತ್ತಾ, ಪೂರ್ವದ ಸಮಯ (ಇ.ಟಿ), ಪಶ್ಚಿಮ/ಪೆಸಿಫಿಕ್ ಸಮಯ (ಪಿ.ಟಿ), ಮಧ್ಯಭಾಗದ ವೇಳೆ (ಸಿ.ಟಿ), ಪರ್ವತ ಪ್ರದೇಶದ ಸಮಯ (ಎಂ.ಟಿ) ಅಮೇರಿಕದ ವೇಳೆಯನ್ನು ಲೇಖಕರು ನಾಲ್ಕು ರೀತಿಯಲ್ಲಿ ಗುರುತಿಸಿ ತಿಳಿಸಿದ್ದಾರೆ.

ಒಂದು ರಾಷ್ಟ್ರದ ವಿವಿಧ ಭಾಗಗಳಲ್ಲಿ ಒಂದೇ ಕಾಲಕ್ಕೆ ನಾಲ್ಕು ಬೇರೆ ಬೇರೆ ಕಾಲಮಾನಗಳನ್ನು ಅನುಸರಿಸುತ್ತಾರೆಂದರೆ ಅದು ಆ ದೇಶದ ವಿಶಾಲತೆಯನ್ನು ತಿಳಿಸುತ್ತದೆ. ಈ ಭಿನ್ನ ಕಾಲಮಾನದಲ್ಲೂ ತನ್ನತನವನ್ನು ಕಾಯ್ದುಕೊಂಡು ಸಮಗ್ರ ಮತ್ತು ಸರ್ವಾಂಗ ಪ್ರಗತಿ ಸಾಧಿಸಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ.

ಸಮಯಕ್ಕೆ ಸಿಕ್ಕವರೆ ಗಂಡ/ಹೆಂಡತಿ; ವಿಚಿತ್ರ ಆದರೂ ಸತ್ಯ ಈ ಶೀರ್ಷಿಕೆಗಳಡಿ ಲೇಖಕರು ಅಮೇರಿಕ ಸಮಾಜದ ಲೋಪಗಳು ಅರಾಜಕತೆ, ಭೋಗಲಾಲಸೆಗಳನ್ನು ಚರ್ಚಿಸಿದ್ದಾರೆ. ಲಾಸ್ ವೇಗಾಸ್‌ನಲ್ಲಿ ನಡೆಯುವ ಅಲ್ಲಿನ ವಿವಾಹಗಳು ಕಾನೂನಿಗೆ ವ್ಯತಿರಿಕ್ತವಾಗಿವೆ ಎನ್ನುತ್ತಾರೆ. ಲಾಸ್‌ವೇಗಾಸ್‌ನಲ್ಲಿ ಯಾರನ್ನು ಯಾರು ಬೇಕಾದರೂ ಯಾವಾಗ ಬೇಕಾದರೂ ವಿವಾಹವಾಗಬಹುದು. ಕಾರಣ ಅಲ್ಲಿ ನಡೆಯುವ ವಿವಾಹ ಬಂಧನಕ್ಕಾಗಲೀ ಅಥವಾ ದಾಖಲಿಸಿದ ಮದುವೆಯ ನೋಂದಣಿಗಾಗಲೀ ಕವಡೆ ಕಾಸಿನ ಕಿಮ್ಮತ್ತು ಇಲ್ಲದಿರುವುದು ಯಾವ ನ್ಯಾಯಲಯದಲ್ಲಿಯೂ ಈ ಮದುವೆಗಳು ಊರ್ಜಿತಗೊಳ್ಳುವುದಿಲ್ಲ ಅಲ್ಲಿ ನಡೆಯುವ ಮದುವೆ ನೋಂದಣಿಗಳು ಸಮಯಕ್ಕೊಬ್ಬ ಗಂಡ–ಹೆಂಡತಿ ಎನ್ನುವ ಹಾಗೆ, ಕಾಮನೆಗಳನ್ನು ತೀರಿಸಿಕೊಳ್ಳುವ ಕಾಯಕಕ್ಕಷ್ಟೆ ಲಾಸ್ ವೇಗಾಸ್‌ನ ಮದುವೆ ಸಂಭ್ರಮಗಳು, ಇಂತಹ ವಿವಾಹ ವ್ಯವಸ್ಥೆ ಇರುವುದು ದುರದೃಷ್ಟಕರ ಎಂಬ ಲೇಖಕರ ಅಸಮಾಧಾನವನ್ನು ನೋಡಿದರೆ ಅನೈತಿಕ ಜೀವನ ಮಿತಿಮೀರಿರಬೇಕೆನ್ನಿಸುತ್ತದೆ.

ಅಲ್ಲಿಯ ಬಹುತೇಕ ಮಕ್ಕಳು ತಮ್ಮ ಅತಿ ಚಿಕ್ಕ ವಯಸ್ಸಿನಲ್ಲಿಯೇ ತಮಗೆ ಒಪ್ಪಿಗೆಯಾದ ಒಡನಾಡಿಗಳನ್ನು ಆರಿಸಿಕೊಳ್ಳುವ ಸಂಪ್ರದಾಯವಿರುದು ಆಶ್ಚರ್ಯವೆನಿಸುತ್ತದೆ. ಗೆಳೆಯ/ಗೆಳತಿಯನ್ನು ಹೊಂದಿಲ್ಲದಿರುವುದು ಅಪಮಾನಕರ ಸಂಗತಿಯೆಂದು ಭಾವಿಸುವುದು, ತಮ್ಮ ಕಾಮನೆಗಳನ್ನು ತೀರಿಸಿಕೊಳ್ಳಲು ಸಂಗಾತಿಯ ಆಯ್ಕೆ ಅನಿವಾರ್ಯ ಎಂದು ಅಲ್ಲಿನ ವ್ಯವಸ್ಥೆಯನ್ನು ಲೇಖಕರು ಹೇಳುತ್ತಾರೆ. ಇದರಿಂದಾಗಿ

ಪಾಲಕರು ಅಥವಾ ತಂದೆ–ತಾಯಿಗಳು ಹದಿನಾರನೇ ವರ್ಷದ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸುವುದು ಏಕೆಂದರೆ ಅವರ ವಿವಾಹ ನೆರವೇರಿಸುವ ಅವಕಾಶ ತಮಗೆ ದೊರೆಯದು ಎಂಬ ದುಃಖದಿಂದ ಇಲ್ಲವೇ ಅವರನ್ನು ಸಾಕುವ ಹೊಣೆ ತಪ್ಪುತ್ತದಲ್ಲ ಎಂಬ ಸಂಸತಸದಿಂದಲೋ ವೈಭವವಾಗಿ ನಡೆಸುತ್ತಾರೆಂಬ ಲೇಖಕರ ಅಭಿಪ್ರಾಯದಲ್ಲಿ ಅಮೇರಿಕನ್ನರ ರೂಢಿಗತ ಮತ್ತು ಪ್ರತಿಷ್ಠಿತ ನಿಲುವುಗಳನ್ನು, ವಿಚಾರಗಳನ್ನು ವಿರೋಧಿಸುತ್ತಾರೆ. ಭಾರತೀಯ ಹಾಗೂ ಕನ್ನಡದ ಸಂದರ್ಭದಲ್ಲಿನ ವಿವಾಹ ಪದ್ಧತಿಗಳು ಲೇಖಕರು ಸೇರಿದಂತೆ ಬಹುತೇಕರ ಮೆಚ್ಚುಗೆಗೆ ಪಾತ್ರವಾಗಿರುವುದನ್ನು ನೋಡಬಹುದು.

"ಮೆಕ್ಸಿಕೋದ ವಿಶೇಷ ತಿನಿಸು ಚಲೂಪ. ಲೇಖಕರು ಸಸ್ಯಾಹಾರಿ ಚಲೂಪ ಕೇಳಿದಾಗ, ತಪ್ಪಿ, ಕೋಳಿಮಾಂಸದ ಚಲೂಪ ಕೊಟ್ಟ ಪ್ರಮಾದಕ್ಕಾಗಿ ಹೋಟೆಲ್ ಮಾಲೀಕ, ಕ್ಷಮೆ ಕೇಳಿದ್ದಲ್ಲದೆ ಸಸ್ಯಹಾರಿ ಚಲೂಪದೊಂದಿಗೆ ಮತ್ತೊಂದು ಸಸ್ಯಹಾರಿ ತಿನಿಸನ್ನು ಉಚಿತವಾಗಿ ನೀಡಿದ ಘಟನೆ ಖಂಡಿತ ನಮ್ಮೂರ ರಾಮಭಟ್ಟರ ಹೋಟೆಲನ್ನು ನೆನಪಿಸದೆ ಇರುತ್ತದೆಯೇ! ಕಾಫಿ ಲೋಟದಲ್ಲಿದ್ದ ಜಿರಳೆಯನ್ನು ತೆಗೆದು ಬಿಸಾಕಿ, ಅದೇ ಕಾಫಿಯನ್ನು ಬಿಸಿ ಮಾಡಿ ಬೇರೆ ಕಾಫಿ ಎಂದು ತಂದಿಟ್ಟ ರಾಮಭಟ್ಟರ ಹೋಟೆಲ್ ಮಾಣಿ ಅಮೇರಿಕದಲ್ಲಿ ಲೇಖಕರಿಗೆ ಖಂಡಿತ ನೆನಪಾಗುತ್ತಾನೆ ಹೀಗೆಯೇ ಅಮೇರಿಕನ್ನರ ಜೀವನಕ್ರಮದ ನಾನಾ ಉತ್ತಮ ಅಂಶಗಳನ್ನು ಲೇಖಕರು ಉದಾಹರಣೆ ಸಹಿತ ವಿವರಿಸುತ್ತಾರೆ, ಮೆಚ್ಚುತ್ತಾರೆ ಹಾಗೆಯೇ ಕೆಲವು ವಿಷಯಗಳ ಬಗ್ಗೆ ಟೀಕೆಯನ್ನು ಮಾಡುತ್ತಾರೆ"[7] ಎಂದು ಮುನ್ನುಡಿಕಾರರು ತಮ್ಮ ಒಂದೆರಡು ಮಾತಿನಲ್ಲಿ ಹೇಳಿರುವುದು ಸಮರ್ಪಕವಾಗಿದೆ. ಭಾರತ ಮತ್ತು ಅಮೇರಿಕನ್ನರ ನಡತೆಯಲ್ಲಿನ ಅಂತರವನ್ನು ಸಹ ಗುರುತಿಸಬಹುದು.

ಅಮೇರಿಕಾಗಿಂತ ಭಾರತದ ಬಗ್ಗೆಯೇ ಹೆಚ್ಚು ಬರೆದಿರುವಂತೆ ಕಾಣುತ್ತದೆ. ಅಲ್ಲಿನ ಕೆಲವು ವ್ಯಕ್ತಿಗಳು ಮತ್ತು ಇನ್ನಿತರರ ಬಗ್ಗೆ ಹೆಚ್ಚು ಬರೆಯಲು ಸಾಧ್ಯವಾಗಿದ್ದರೆ ಈ ಕಿರು ಹೊತ್ತಿಗೆ ಮತ್ತಷ್ಟು ಆಕರ್ಷಕವಾಗಲು ಅವಕಾಶವಿತ್ತು ಎನ್ನುವ ಹೇಮಲತಾ ಮಹಿಷಿಯವರ ಅಭಿಪ್ರಾಯ ಆಂಶಿಕವಾಗಿ ಸತ್ಯವೆನಿಸುತ್ತದೆ.

**ವೆಂಕಿ ಬರ್ಗರ್ – ನ್ಯೂಯಾರ್ಕ್ ನೆನಪುಗಳು – ವೆಂಕಟೇಶ ರಾಘವೇಂದ್ರ :** ಹೆಸರೇ ಸೂಚಿಸುವಂತೆ ಅಮೇರಿಕಾದ ನ್ಯೂಯಾರ್ಕ್ ಮಹಾನಗರಿಯಲ್ಲಿ ಲೇಖಕರು ನಡೆಸಿರುವ ಬದುಕು ಹಾಗೂ ಅವರೇ

ಹೇಳಿರುವಂತೆ ನೂರೆಂಟು ಮಾತು, ಹಂಚಿಕೊಂಡ ಭಾವನೆಗಳ ಒಂದು ಚಿತ್ತಾರವೇ ಈ ಪ್ರವಾಸ ಕಥನ

"ನ್ಯೂಯಾರ್ಕ್ ಎಂಬ ನಗರಿಗೆ ಎಷ್ಟೊಂದು ವ್ಯಕ್ತಿತ್ವ, ನ್ಯೂಯಾರ್ಕ್ ಎಂಬುದು ಒಬ್ಬೊಬ್ಬರಿಗೂ ಒಂದೊಂದು ರೀತಿಯ ನಗರ. ಅವರವರ ಭಾವಕ್ಕೆ ಮೂಡಿನಿಲ್ಲುವ ಮಹಾನಗರಿ"[8] ಎಂಬ ಲೇಖಕರ ಮಾತಿನಂತೆ ಅವರು ಕೂಡಾ ನ್ಯೂಯಾರ್ಕ್ ನಗರವನ್ನು ವಿಶಿಷ್ಟ ರೀತಿಯಲ್ಲಿ ಗ್ರಹಿಸಿದ್ದಾರೆ.

"ಜಗತ್ತಿನ ಎರಡು ಪ್ರಬಲ ರಾಷ್ಟ್ರಗಳ ನಡುವೆ ಸೌಹಾರ್ದತೆಯ ಭಾವವಿದ್ದರೂ ಅವುಗಳ ಅತಿದೊಡ್ಡ ನಗರಗಳ ನಡುವೆ ಹೇಳಿಕೊಳ್ಳಲಾಗದ ವೈರತ್ವವಿದೆ. ಕುಸ್ತಿ ಅಂಕಣದಲ್ಲಿ ಜಿದ್ದಿಗೆ ಬಿದ್ದವರಂತೆ ಎರಡು ನಗರಗಳು ಮುಷ್ಟಿ ಬಿಗಿ ಮಾಡಿ ಗುದ್ದಲು ತಯಾರಾಗಿ ನಿಂತಿವೆ. ಇಬ್ಬರಿಗೂ ಇನ್ನೊಬ್ಬರ ಬಳಿ ಏನು ಒಳ್ಳೆಯದಿದೆಯೋ ಅದನ್ನು ಬಾಚಿಕೊಳ್ಳುವ ಹಂಬಲ. ಯಾರಾದರೊಬ್ಬರು ಮಕಾಡೆ ಬಿದ್ದರೆ ಈ ರೀತಿ ನಡೆಯುವುದು ಹೆಚ್ಚು. ನ್ಯೂಯಾರ್ಕ್ ಆರ್ಥಿಕ ಬಿಕ್ಕಟ್ಟು ಹಾಗೂ ಆತ್ಮವಿಶ್ವಾಸದ ಕೊರತೆಯಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಅದು ಆರ್ಥಿಕವಾಗಿ ಮೇಲೆಳೆದೆ ಬಿದ್ದಲ್ಲೇ ಬಿದ್ದಿರುವಂತೆ ಮಾಡಲು ಲಂಡನ್ ಪ್ರಯತ್ನಿಸಿದೆ"[9] ಎನ್ನುವ ಲೇಖಕರ ಮಾತಿನಲ್ಲಿ ಜಾಗತೀಕರಣದ ಪರಿಣಾಮದಿಂದ ಸಾಮಾನ್ಯ ಜನ ಅರಿವಿಲ್ಲದೆ ಅನುಭವಿಸುತ್ತಿರುವ ಸಂಕಷ್ಟದ ಬದುಕನ್ನು ಅರಿಯಬಹುದಲ್ಲದೆ ಜ್ವಲಂತ ಸಮಸ್ಯೆಗಳನ್ನು ಕಣ್ಣಿಗೆ ರಾಚುವಂತೆ ತಿಳಿಯಾದ ಪರಿಭಾಷೆಯಲ್ಲಿ ತೋರಿಸಲಾಗಿದೆ.

ಟೈಮ್ಸ್‌ಸ್ಕ್ವೇರ್‌ನಲ್ಲಿ ಒಂದಿಷ್ಟು ಕಾಲ ನಿಂತರೆ ಜಗತ್ತಿನ ಪ್ರತಿಯೊಂದು ದೇಶದ ಪ್ರಜೆಯನ್ನು ಭೇಟಿ ಮಾಡಬಹುದು ಎನ್ನುತ್ತಾರೆ. ನ್ಯೂಯಾರ್ಕ್‌ನ ಭೀಕರ ಘಟನೆಯಾದ ಸೆಪ್ಟಂಬರ್ ಹನ್ನೊಂದರ ದಾಳಿಯವರೆಗೆ ಎಲ್ಲವೂ ಇವರ ಬರಹಗಳಲ್ಲಿ ಹಾಸುಹೊಕ್ಕಾಗಿದೆ.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮಾಡಿದ ದೀರ್ಘ ಪಯಣದ ಅಪರೂಪದ ಸ್ಥಳಗಳ ಬಗ್ಗೆ ಹಾಗೂ ವರ್ತಮಾನದ ಸಂಗತಿಗಳೊಂದಿಗೆ ಬೆಸೆದ ಬರಹವಾಗಿದೆ. ಬಿಡಿಬಿಡಿಯಾದ ಬದುಕಿನ ವರ್ತಮಾನದ ಘಟನೆ ಸಂದರ್ಭ, ಸನ್ನಿವೇಶಗಳನ್ನು ದಾರದಲ್ಲಿ ಮುತ್ತುಗಳನ್ನು ಪೋಣಿಸಿ ಹಾರ ಮಾಡಿದಂತಿದೆ.

[illegible]

[illegible]

[illegible]

[illegible]

[illegible]

**ಅಮೇರಿಕ ಪ್ರವಾಸದ ಅನುಭವಗಳು – ಕೆ.ಎನ್. ಕೃಷ್ಣಮೂರ್ತಿರಾವ್** : ಲೇಖಕರು ಅಮೇರಿಕ ಪ್ರವಾಸ ಕೈಗೊಂಡಿದ್ದು, ಮಗಳು–ಅಳಿಯ–ಮೊಮ್ಮಕ್ಕಳನ್ನು ನೋಡಲು ಈ ಪ್ರವಾಸಕ್ಕೆ ಹೊರಡುವ "ಪ್ರಾರಂಭದಲ್ಲಿ ಮದ್ರಾಸಿನ ಕಾನ್ಸುಲೇಟ್ ಕಛೇರಿಯಲ್ಲಾದ ಕಹಿ ಅನುಭವ ಬಂದಿದೆ ವೀಸಾ ಕೊಡುವುದಕ್ಕೆ ಸಂದರ್ಶನದ ನಾಟಕ ನಡೆಸುವುದು, ಅದರಲ್ಲೂ ವಯಸ್ಸಾದವರಿಗೆ, ಕೌರ್ಯ ಎನಿಸುತ್ತದೆ. ಲೇಖಕರಿಗೆ ಒಮ್ಮೆ ಅವರ ಪತ್ನಿ ವೀಸಾಕ್ಕೆ ಅರ್ಜಿ ಹಾಕಿದರು; ಸಂದರ್ಶನ ಬಂದಿತು. ಅಧಿಕಾರಿ "ಏತಕ್ಕೆ ಹೋಗಬೇಕು?" ಎಂದು ಪ್ರಶ್ನಿಸಿದ. 'ಮಗಳ ಹೆರಿಗೆಗಾಗಿ' ಎಂದು ನಿಜವನ್ನೇ ನುಡಿದರು. "ಅಲ್ಲಿ ಆಸ್ಪತ್ರೆಯಿದೆ, ವೈದ್ಯರಿದ್ದಾರೆ, ನೀನು ಹೋಗುವ ಅವಶ್ಯಕತೆಯಿಲ್ಲ" ಎಂದು ಅಧಿಕಾರಿ ನಿರಾಕರಿಸಿಬಿಟ್ಟ. "ಭಾವನೆಗಳೇ ಇಲ್ಲದ ಈ ಮರದ ಕೊರಡನ್ನು ಯಾವ ತಾಯಿ ಹೆತ್ತಳೋ? ಎಂದುಕೊಂಡರು ಲೇಖಕರ ಪತ್ನಿ. ಇದಾದ ಎರಡು ತಿಂಗಳ ಮೇಲೆ ಅವರು ಪುನಃ ಅರ್ಜಿ ಹಾಕಿಕೊಂಡರು. ಈ ಸಾರಿ ಸತ್ಯ ಹೇಳಲಿಲ್ಲ. ಕೂತ ಕಡೆಯ ಮನೆಗೆ ಬಂತು ವೀಸಾ. ಸುಳ್ಳಿಗೆ ಎಷ್ಟು ಬೆಲೆ![10] ಎಂದು ಲೇಖಕರು ವ್ಯಂಗವಾಡುವಲ್ಲಿನ ಮಾತಿನಿಂದ 'ಸತ್ಯಕ್ಕೆ ಯಾವತ್ತು ಬೆಲೆ'? ಎಂಬುದು ಪ್ರಶ್ನಾರ್ಹವಾಗುತ್ತದೆ.

"ಬೆಂಗಳೂರಿನಿಂದ ಹೋದ ನನಗೆ ತುಂಬಾ ಅಚ್ಚರಿಯ ಮೊದಲ ವಿಷಯವೆಂದರೆ ನೀರು ಮತ್ತು ವಿದ್ಯುಚ್ಛಕ್ತಿ ನಿರಂತರ ಸರಬರಾಜಾಗುತ್ತದೆ ಎನ್ನುವುದು"[11] ಬೆಂಗಳೂರಿನಲ್ಲಿ ಯಾವಾಗಲೂ ತಡರಾತ್ರಿ ಎದ್ದು ನೀರು ತುಂಬುತ್ತಿದ್ದ ಲೇಖಕರಿಗೆ ಅದು ಆಶ್ಚರ್ಯವೆನಿಸಿದೆಯಲ್ಲದೆ ನಮ್ಮಲ್ಲಿನ ನೀರು ಮತ್ತು ವಿದ್ಯುಚ್ಛಕ್ತಿಯ ಕೊರತೆಯನ್ನು ಪರೋಕ್ಷವಾಗಿ ಟೀಕಿಸಿದ್ದಾರೆ.

ಅಲ್ಲಿಯ ದಿನಪತ್ರಿಕೆಗಳು ಐವತ್ತನಾಲ್ಕು ಪುಟಗಳಾಗಿದ್ದು, ಭಾನುವಾರದ ಪತ್ರಿಕೆಗಳು ಆರುನೂರ ಎಂಬತ್ನಾಲ್ಕು ಪುಟಗಳಿರುವತ್ತವೆ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಭಾನುವಾರದ ಲಾಸ್ ಏಂಜಲಿಸ್ ಪತ್ರಿಕೆಯನ್ನು ತೆಗೆದುಕೊಂಡು ವಿಷಯಕ್ಕನುಗುಣವಾಗಿ ಎಷ್ಟೆಷ್ಟು ಪುಟಗಳನ್ನು ಒಳಗೊಂಡಿವೆ ಎನ್ನುವುದನ್ನು ಅಂಕಿಅಂಶಗಳೊಂದಿಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಒಂದೊಂದು ವಿಷಯ ಮತ್ತು ವಿಭಾಗವೂ ಬೇರೆ ಬೇರೆ ಹಿತಾಸಕ್ತಿಗಳಿಗೆ ಸೇರಿದವು. ಅವರವರ ಇಷ್ಟದಂತೆ ಆಯಾ ವಿಭಾಗವನ್ನು ಓದಿ ಕಸದ ತೊಟ್ಟಿಗೆ ಎಸೆಯಬಹುದು ಎನ್ನುತ್ತಾರೆ.

[illegible]

ಇಲ್ಲಿಯ ವೈದ್ಯಕೀಯ ಸೌಲಭ್ಯ ಅತ್ಯುತ್ತಮವಾದದ್ದು ಎನ್ನುವ ಲೇಖಕರು ಅದಕ್ಕೆ ತಗಲುವ ವೆಚ್ಚ ಕೂಡಾ ದುಬಾರಿ ಎನ್ನುತ್ತಾರೆ. ಇಲ್ಲಿಯ ವೈದ್ಯಕೀಯ ಸೇವೆಯ ವೆಚ್ಚ ವಿಶ್ವದಲ್ಲೇ ಅತ್ಯಂತ ಹೆಚ್ಚು ಅದಕ್ಕೆ ಮೆಡಿಕಲ್ ಇನ್‌ಷ್ಯೂರೆನ್ಸ್ ತೆಗೆದುಕೊಳ್ಳುವುದು ಅನಿವಾರ್ಯವೆನ್ನುತ್ತಾರೆ.

ಅಮೇರಿಕನ್ನರ ಪೌರಜ್ಞಾನ, ಪೌರಜವಾಬ್ದಾರಿಯನ್ನು ಮೆಚ್ಚಿಕೊಳ್ಳುತ್ತಾ ಒಂದು ನಿದರ್ಶನವನ್ನು ಸಹ ಕೊಡುತ್ತಾರೆ. "ಒಂದು ದಿನ ನಾನು ಮನೆಯ ಮುಂದೆ ನಿಂತಿದ್ದೆ. ಏಳೆಂಟು ವರ್ಷದ ಯುವಕ ಮೋಟಾರ್ ಸೈಕಲ್ ಮೇಲೆ ಬಹು ವೇಗವಾಗಿ ನಾಲ್ಕಾರು ಸುತ್ತು ಹೊಡೆದ. ಆ ಚಿಕ್ಕ ಮಕ್ಕಳು ಪೋಲಿಸಿನವರಿಗೆ ಮತ್ತು ಅಸೋಸಿಯೇಷನ್ನಿನವರಿಗೆ ಪೋನ್ ಮಾಡಿದರು. ಐದು ನಿಮಿಷದಲ್ಲಿ ಪೋಲಿಸಿನವರೂ, ಅಸೋಸಿಯೇಷನ್ನೀನವರು ಬೇರೆ ಬೇರೆ ಜೀಪುಗಳಲ್ಲಿ ಬಂದರು. ಮಕ್ಕಳು ಅವರನ್ನು ಒಂದು ಕಡೆ ಮರೆಗೆ ನಿಲ್ಲುವಂತೆ ಮಾಡಿ, ಇನ್ನೊಮ್ಮೆ ಆ ಯುವಕ ವೇಗವಾಗಿ ಬಂದಾಗ ಹಿಡಿದುಕೊಟ್ಟರು"[12] ಎಂಬುದನ್ನು ಉದಾಹರಿಸುವ ಲೇಖಕರು ಎರಡು ವಿಷಯಗಳನ್ನು ಮೆಚ್ಚಿಕೊಳ್ಳುತ್ತಾರೆ. ಮಕ್ಕಳ ಜ್ಞಾನ ಒಂದಾದರೆ, ಎರಡನೆಯದು ಮಕ್ಕಳೆಂದು ಉದಾಸೀನ ಮಾಡದೆ ಪೋಲಿಸಿನವರು ಮತ್ತು ಅಸೋಸಿಯೇಷನ್ನವರು ಪೋನ್ ಮಾಡಿದ ತಕ್ಷಣ ವಿಚಾರಿಸಿ ಧಾವಿಸಿಬಂದದ್ದು. ಅಮೇರಿಕದಲ್ಲಿ ಪೋಲಿಸರು, ಸಾರ್ವಜನಿಕರ ಮಿತ್ರರಂತೆ ಅವರ ಕಷ್ಟದಲ್ಲಿ ಸಹಾಯ ಮಾಡುವುದರೊಂದಿಗೆ ತಪ್ಪಿತಸ್ಥರನ್ನು ನಿರ್ದಾಕ್ಷಣ್ಯವಾಗಿ ಶಿಕ್ಷಿಸುತ್ತಾರೆ. ಈ ವ್ಯವಸ್ಥೆ ಭಾರತದಲ್ಲಿದ್ದರೆ ಚೆನ್ನಾಗಿರುತ್ತಿತೆಂದು ಲೇಖಕರಿಗೆ ಅನಿಸುತ್ತದೆ. ಭಾರತದಲ್ಲಿ ಕಾಕಿಬಟ್ಟೆ ಕಂಡ ತಕ್ಷಣ ಜನಕ್ಕೆ ಹೆದರಿಕೆ ಎನ್ನುವ ಲೇಖಕರ ಮಾತಿನಲ್ಲಿ ಭಾರತದ ಪೋಲಿಸ್ ವ್ಯವಸ್ಥೆಯನ್ನು ವಿಡಂಬಿಸಿರುವುದು ಕಾಣಬಹುದು.

ಈ ಮಹಾನಗರಿಯಲ್ಲಿ ಕಳ್ಳತನದ ಹೆದರಿಕೆ ಇಲ್ಲ ಎನ್ನುವುದನ್ನು ಪುರಾವೆಗಳ ಮೂಲಕ ತಿಳಿಸಿದ್ದಾರೆ. "ಇದು ರಾಮರಾಜ್ಯ ಎಂದು ಅವರ ಸಂಬಂಧಿಕರ ನಿಲುವನ್ನು ಇವರು ತಾಳಿದ್ದಾರೆ. ಇಲ್ಲಿಯ ಶುಚಿತ್ವ, ಕಸವನ್ನು ರಸವನ್ನಾಗಿ ಪರಿವರ್ತಿಸುವ ವಿಧಾನ ಅಂದರೆ ಕಸವನ್ನು ಹವೆಯಾಗಿ ಪರಿವರ್ತಿಸಿ ಅದರಿಂದ ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸುವುದು ಇಷ್ಟವಾಗಿದೆ.

ಅಮೇರಿಕಾದ ಶಿಕ್ಷಣ ವ್ಯವಸ್ಥೆಯಲ್ಲಿ ಕೂಡಾ ಸರ್ಕಾರಿ ಹಾಗೂ ಖಾಸಗೀತನ ಇದ್ದು ಇದರಲ್ಲಿ ಖಾಸಗಿ ಶಾಲೆಗಳು ಗುಣಮಟ್ಟದಲ್ಲಿ ಹೆಸರು ಮಾಡಿವೆ ಎನ್ನುತ್ತಾರೆ. ಖಾಸಗಿ ಶಾಲೆಗಳ ವೆಚ್ಚ ಕೂಡ

ದುಬಾರಿ ಆದರೆ ಒಂದು ತರಗತಿಯಲ್ಲಿ ಹದಿನೈದು ಜನ ಮಾತ್ರ ವಿದ್ಯಾರ್ಥಿಗಳಿರುತ್ತಾರೆ. ಇದರಿಂದ ಉಪಾಧ್ಯಾಯರಿಗೆ ವಿದ್ಯಾರ್ಥಿಗಳ ಜೊತೆ ನಿಕಟ ಸಂಪರ್ಕವಿರುತ್ತದೆ. ಇದರಿಂದಾಗಿ ಮಕ್ಕಳ ಶಕ್ತಿ ಸಾಮರ್ಥ್ಯಗಳನ್ನು ಗಮನಿಸಿ ಅವುಗಳ ಬೆಳವಣಿಗೆಗೆ ಸಮರ್ಥವಾದ ವಾತಾವರಣ ಕಲ್ಪಿಸಲು ನೆರವಾಗುತ್ತದೆ. ಇದರಿಂದಾಗಿ ಬಹುತೇಕರು ಖಾಸಗಿ ಶಾಲೆಗಳಿಗೆ ಮನ್ನಣೆ ಕೊಡುತ್ತಾರೆ ಎನ್ನುವಲ್ಲಿ ಲೇಖಕರು ಸರ್ಕಾರಿ ಶಾಲೆಗಳಲ್ಲಿ ಎಲ್ಲ ತದ್ವಿರುದ್ಧವಾಗಿದೆ ಅಮೇರಿಕದಲ್ಲೂ ಭಾರತದ ಕತೆಯೇ ಇದೆ ಎಂದು ತಿಳಿಸುತ್ತಾರೆ. ಇದು ಎಲ್ಲಾ ಸ್ಥಳಗಳ ಸರ್ಕಾರಿ ಸಾಮ್ಯಗಳ ಅದಕ್ಷತೆಯನ್ನು ಸೂಚಿಸುವುದರೊಂದಿಗೆ ಎಷ್ಟೇ ಮುಂದುವರೆದ ರಾಷ್ಟ್ರವಾದರೂ ಯಾವ ಸಾಮಾಜಿಕ ಪದ್ಧತಿಯೂ ದೋಷ ಮುಕ್ತವಾಗಿಲ್ಲ ಎಂಬುದನ್ನರಿಯಬಹುದು.

ವಿವಾಹ ವಿಚ್ಛೇದನಗಳ ಪರಿಣಾಮವಾಗಿ ಮಕ್ಕಳ ಮೇಲೆ ಆರ್ಥಿಕ, ಸಾಮಾಜಿಕ, ಮಾನಸಿಕ ಒತ್ತಡಗಳಿಗೆ ಗುರಿಯಾಗುತ್ತಿರುವುದು ಹಾಗೂ ಮಕ್ಕಳು ಲೈಂಗಿಕತೆಯನ್ನು ದುರುಪಯೋಗಿಸಿಕೊಂಡಿರುವುದು ಇತ್ಯಾದಿ ಅಂಶಗಳನ್ನು ಅಲ್ಲಗಳಿದಿದ್ದಾರೆ. ಸಲಿಂಗ ಕಾಮಿಗಳ ನ್ಯೂಯಾರ್ಕಿನ ಶಾಲೆ, ಬಾಡಿಗೆ ಗರ್ಭ, ಕರುಣೆಯ ಕೊಲೆ ಮೊದಲಾದ ವೈವಿಧ್ಯಪೂರ್ಣ ವಿಷಯಗಳ ಕುರಿತು ವಿವರವಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಮೌಲ್ಯಗಳ ಕುಸಿತವನ್ನು ನಾವು ಕಾಣಬಹುದು.

ಡಿಸ್ನಿಲ್ಯಾಂಡ್, ಲಾಸ್‌ವೇಗಾಸ್, ಗ್ರ್ಯಾಂಡ್ ಕ್ಯಾನ್ಯನ್, ಬ್ರೈಸ್‌ಕ್ಯಾನ್ಯನ್, ನ್ಯಾಷನಲ್ ಪಾರ್ಕ್, ಬಟಾನಿಕಲ್ ಗಾರ್ಡನ್, ಸ್ಯಾನ್ ಫ್ರಾನ್ಸಿಸ್ಕೊ, ಸಾನ್ ಡಿಯೋಗೋನ್ ಸಾಗರ ಪ್ರಪಂಚ ಮುಂತಾದ ಪ್ರೇಕ್ಷಣೀಯ ಸ್ಥಳಗಳ ಭೇಟಿಯ ವಿವರಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಅವರ ಗ್ರಹಿಕೆ ತುಂಬಾ ಸೂಕ್ಷ್ಮವಾದುದೆನಿಸುತ್ತದೆ.

"ಪ್ರವಾಸ ಕಥನದಲ್ಲಿ ಕೌಟುಂಬಿಕ ವಿವರಗಳನ್ನು ಆದಷ್ಟು ಕಡಿಮೆ ಮಾಡಬೇಕು. ತಮ್ಮ ಹೆಣ್ಣು ಮಕ್ಕಳ ವಾದ ನಿಪುಣತೆಯನ್ನು ಪುಟ 1–4ರಲ್ಲಿ, ಮೊಮ್ಮಗ ನಿಖಿಯ ಜಾಣತನವನ್ನು ಪುಟ 72ರಲ್ಲಿ, ಅಳಿಯ ಎಚ್.ಎನ್. ನರಸಿಂಹಮೂರ್ತಿಯ ವಿದ್ವತ್ತು, ಪ್ರತಿಭೆ, ವೈವಿಧ್ಯಮಯ ಆಸಕ್ತಿ, ಸ್ನೇಹಪರ ಮನೋಭಾವಗಳನ್ನು ಪುಟ 150–153ರಲ್ಲಿ, ಷಡ್ಡಕ 'ಕುಕ್ಕೆ ಸೀತಾರಾಮಾಶಾಸ್ತ್ರಿ'ಗಳ ವಿರಕ್ತ ಜೀವನ, ಪಾಂಡಿತ್ಯ, ನಟನಾ ಕೌಶಲ್ಯ, ಅಸಾಧಾರಣ ದೈವಭಕ್ತಿಯನ್ನು ಪುಟ 184–186ರಲ್ಲಿ, ಷಡ್ಡಕನ ಮಗ–ಸೊಸೆ ಅದಂರೆ ಗೋಪಿ–ನಳಿನಿಯರ ಪ್ರಶಂಸೆಯನ್ನು ಪುಟ 186ರಲ್ಲಿ"[13] ಎಂಬ ವಿಷಯಗಳನ್ನು ಈ

ಪ್ರವಾಸಕಥನದಲ್ಲಿ ಅನವಶ್ಯಕವಾಗಿ ತಮಗೆ ಪ್ರಿಯರಾದವರ ಪ್ರಶಂಸೆ ಕಾಣಿಸಿಕೊಳ್ಳುತ್ತದೆ. ಇದೇ ಅಭಿಪ್ರಾಯವನ್ನು ಡಾ. ವಿದ್ಯಾಶಂಕರ್ ಸಹ ಹೇಳಿದ್ದಾರೆ.

ಸ್ವಭಾವವೇ ಬದುಕಿನ ಕೈಗನ್ನಡಿಯಾಗುವಂತೆ ಬರಹವೂ ಕೂಡಾ ಸ್ವಭಾವದ ಕೈಗನ್ನಡಿಯೇ ಆಗಿದೆ. ಅವರದ್ದೇ ಆದ ನಿರೂಪಣೆಯಲ್ಲಿ ಮತ್ತು ಸರಳ ಶೈಲಿಯಲ್ಲಿ ಪ್ರವಾಸಕಥನದುದ್ದಕ್ಕೂ ಆಸಕ್ತಿಯನ್ನು ಉಳಿಸಿಕೊಂಡು ಸರಾಗವಾಗಿ ಅಭಿವ್ಯಕಿಸಿದ್ದಾರೆ.

**ಅಮೇರಿಕಾದೊಳಗೊಂದು ಇಣುಕು – ವಸಂತರಾಜ ಎನ್.ಕೆ :** 'ಪ್ರತ್ಯಕ್ಷವಾದರೂ ಪರಾಂಬರಿಸಿ ನೋಡು' ಎಂಬುದು ಒಂದು ಅರ್ಥಪೂರ್ಣವಾದ ಗಾದೆ ಮಾತು. ಈ ಮಾತು ಅಮೇರಿಕದ ಕುರಿತು ಹೇಳುವಾಗ ಇನ್ನೂ ಹೆಚ್ಚು ಅರ್ಥಪೂರ್ಣವಾಗುತ್ತದೆ. ಯಾಕೆಂದರೆ ಇಂದು ಅದು ಜಗತ್ತಿನ ಮನಸ್ಸಿನ ಆಕರ್ಷಕ ಕೇಂದ್ರವಾಗಿದೆ. ಹಾಗೆಯೇ ನವವಸಾಹತುಶಾಹಿಯ ಶಕ್ತಿಕೇಂದ್ರ ಕೂಡಾ ಹೌದು. ಇಂಥ ಸಂದರ್ಭದಲ್ಲಿ ಹೊರಬಂದ 'ಅಮೇರಿಕಾದೊಳಗೊಂದು ಇಣುಕುನೋಟ' ಒಂದು ಅರ್ಥಪೂರ್ಣವಾದ ಮತ್ತು ಸಕಾಲಿಕವಾದ ಪ್ರವಾಸ ಕಥನವಾಗಿದೆ.

ಈ ಕೃತಿಯ ವಸ್ತುನಿಷ್ಠ ವಿಶ್ಲೇಷಣೆಯ ವಿವರಣೆ ಮೆಚ್ಚುವಂತಿದೆ. ಅಮೇರಿಕದ ತಂತ್ರಜ್ಞಾನದ ಪ್ರಗತಿಯ ಕುರಿತು ಬೆರಗು, ಮೆಚ್ಚಿಗೆ ಇರುವಂತೆ ಈ ಅಂತಶ್ಶಕ್ತಿ ಯಾವುದು; ಇಲ್ಲಿಯ ಕುಟುಂಬ ಜೀವನದ ಮತ್ತು ನಿತ್ಯ ಜೀವನದ ಬೆರಗಿನ ಹಿಂದಿರುವ ಜೀವನ ಸೆಲೆ ಯಾವುದು; ಇಲ್ಲಿಯ ವಿಲಾಸ ಮತ್ತು ಶ್ರೀಮಂತಿಕೆಯ ಹಿಂದೆ ಇರುವ ಚಾರಿತ್ರಿಕ ಗುಣ ಯಾವುದು ಎಂದು ಕೆದಕಿ ನೋಡುವ ಲೇಖಕರ ಕುತೂಹಲ ಮತ್ತು ಪೂರ್ವಗ್ರಹವಿಲ್ಲದ ದರ್ಶನ ಈ ಕಥನದ ಶಕ್ತಿಯಾಗಿದೆ.

ಅಮೇರಿಕದ ಶ್ರೀಮಂತಿಕೆಯ ಕುರಿತು ಒಂದು ಉದಾಹರಣೆಯನ್ನು ಕೊಟ್ಟರೆ ಅಗಳು ಅನ್ನವನ್ನು ಹಿಚುಕಿ ಇಡೀ ಮಡಕೆ ಅನ್ನದ ಗುಣ ತಿಳಿಯಬಹುದು. 'ನಮ್ಮ ಕಾಲೋನಿಯಲ್ಲೂ ಹೀಗೆ ಪ್ರತಿ ಮನೆಗೆ ಒಂದು ಪಾರ್ಕಿಂಗ್ ಜಾಗ ರಿಸರ್ವ್ ಮಾಡಲಾಗುತ್ತದೆ. ಇದಲ್ಲದೆ ಹೆಚ್ಚುವರಿ ಕಾರುಗಳಿಗೆ ಹಾಗೂ ಸಂದರ್ಶಕರ ಕಾರುಗಳಿಗೆ ಜಾಗ ಮಾಡಲಾಗಿದೆ. ನಮ್ಮ ಕಾಲೋನಿಯಲ್ಲಿ ನಾನು ಗಮನಿಸಿದಂತೆ, ಗಂಡನಿಗೆ ಬೇರೆ ಕಾರು, ಹೆಂಡತಿಗೆ ಬೇರೆ ಕಾರು ಸಾಮಾನ್ಯ. ಸಾಮಾನ್ಯವಾಗಿ ಇಬ್ಬರೂ ಕೆಲಸ ಮಾಡುವುದರಿಂದ ಮತ್ತು ಗೃಹಿಣಿಯಾದರೂ ಎಲ್ಲಾ ಅವಶ್ಯಕ ಸಾಮಾನುಗಳನ್ನು ತರಲು ಕಾರಿನಲ್ಲೇ

ಹೋಗಬೇಕಾದ್ದರಿಂದ ಇದು ಒಂದು ರೀತಿಯಲ್ಲಿ ಇಲ್ಲಿನ ಜೀವನದ ಅವಶ್ಯಕತೆ ಎನ್ನಬಹುದು. ಆದರೂ ಮನೆಗಳು, ಆಫೀಸುಗಳು, ಅಂಗಡಿಗಳು ಕೊನೆಗೆ ಇಡೀ ನಗರವೇ ಕಾರುಗಳಿಗಾಗಿ ವಿನ್ಯಾಸ ಮಾಡಿದ್ದಾರೋ ಎನ್ನಿಸುವುದಂತೂ ಸಾಮಾನ್ಯ". ಇದರಿಂದ ತಂತ್ರಜ್ಞಾನದ ಸಾರ್ವತ್ರಿಕತೆಯನ್ನು ಗಮನಿಸಬಹುದು.

"ಕಾರಿನ ಒಳಗಡೆ ಬಳಸಲಾಗುತ್ತಿರುವ ತಂತ್ರಜ್ಞಾನ ಬೆರಗುಗೊಳಿಸುವಂತಹುದು. ಹೆಚ್ಚು-ಕಡಿಮೆ ಎಲ್ಲಾ ಕಾರುಗಳೂ ಏರ್‌ಕಂಡೀಶನ್, ಪವರ ವಿಂಡೊ, ಎಲ್ಲಾ ಬಾಗಿಲು ಸರಿಯಾಗಿ ಮುಚ್ಚದಿದ್ದರೆ ಎಚ್ಚರಿಕೆ ಕೊಡುವ ಸಾಧನ ರಿಮೋಟ್ ಕಂಟ್ರೋಲ್‌ದಿಂದ ತೆಗೆಯುವ ಬಾಗಿಲು, ಧ್ವನಿ ಚಲನೆ ಎಚ್ಚರಿಕೆ, ಅಪಘಾತ ಆದಾಗ ಸ್ವಯಂಚಾಲಿತವಾಗಿ ತೆರೆದುಕೊಂಡು ಡ್ರೈವರನ್ನು ರಕ್ಷಿಸುವ ಏರ್‌ಬ್ಯಾಗುಗಳು, ಪಾರ್ಕ್ ಮಾಡಿದಲ್ಲಿ ಯಾರಾದರೂ ಬಿಡಿ ಭಾಗವನ್ನು ಕಳುವು ಮಾಡಲು ಪ್ರಯತ್ನಿಸಿದರೆ ಹೊಡೆದುಕೊಳ್ಳುವ ಆಲಾರಾಂ ಹೀಗೆ ಕಾರಿನಲ್ಲಿ ಬಳಸುವ ತಂತ್ರಜ್ಞಾನಗಳಿಗೆ ಮಿತಿಯಿಲ್ಲ ಎನ್ನುವ ಲೇಖಕರು ಅಮೇರಿಕದ ಯಂತ್ರಾವಲಂಬಿ ನಾಗರೀಕತೆಯನ್ನು ತಿಳಿಸಿದ್ದಾರೆ.

ಅಮೇರಿಕನ್ನರು ಹುಟ್ಟಿನಿಂದ ಸಾವಿನವರೆಗೆ ಯಂತ್ರಗಳು, ಹೊಸ ತಂತ್ರಜ್ಞಾನದ ಬಳಕೆಗೆ ಎಷ್ಟು ಒಗ್ಗಿಹೋಗಿದ್ದಾರೆಂದರೆ ಅವರಿಗೆ ಯಂತ್ರಗಳ ಬಗ್ಗೆ ವಿಶ್ವಾಸ ಇದೆ ಹೊರತು ಮನುಷ್ಯರ ಮೇಲೆ ವಿಶ್ವಾಸವೇ ಇಲ್ಲ. ಅಮೇರಿಕನ್ನರ ನಡಾವಳಿಗಳನ್ನು ಒಳಹೊಕ್ಕಿ ನೋಡಿದಾಗ ತಿಳಿಯುತ್ತದೆ. "ಅಮೇರಿಕನ್ನರಲ್ಲಿ ಹೊಸ ತಂತ್ರಜ್ಞಾನವನ್ನು ಸೃಷ್ಟಿಸುವ ಅದನ್ನು ಪಟಾರನೆ ಬಳಕೆಗೆ ತರುವ, ಅದನ್ನು ಬಳಕೆಯಲ್ಲಿ ಅರಗಿಸಿಕೊಳ್ಳುವ ಆಗಾಧ ಸಾಮರ್ಥ್ಯ ಇದೆ. ಬಹುಶಃ ಇದು ಅಮೇರಿಕದ ಪ್ರಮುಖ ಸತ್ವಗಳಲ್ಲಿ ಒಂದು ಅಮೇರಿಕದ ಇನ್ನೊಂದು ಮುಖ್ಯ ವಿಶಿಷ್ಟತೆಯೆಂದರೆ ಉದ್ಯಮಶೀಲತೆ" ಎನ್ನುತ್ತಾರೆ ಲೇಖಕರು.

'ಲೇಬರ್ ಡೇ'ಗಾಗಿ ಲೇಖಕರು ಮಿತ್ರರೊಡಗೂಡಿ ಅವರಿರುವ ಡಲ್ಲಾಸ್ ನಗರದ ಕೇಂದ್ರ ಸ್ಥಳಕ್ಕೆ ಬರುತ್ತಾರೆ. ಅಲ್ಲಿ ಅವರಿಗೆ ಅಮೇರಿಕಾದ ವೈಭವದ ಒಳಗಡೆಯದೊಂದು ಚಿತ್ರ ಸಿಕ್ಕುತ್ತದೆ. "ನಾವು ಡಲ್ಲಾಸ್ ಕೇಂದ್ರ ಭಾಗದ ಹತ್ತಿರಕ್ಕೆ ಬರುತ್ತಿದ್ದಂತೆ ನಾವು ಈವರೆಗೆ ನೋಡದ ದೃಶ್ಯಗಳು ಕಂಡುಬಂದವು. ಹಳೆಯ ಮುರುಕು ಮನೆಗಳು ಕಣ್ಣು ಕೋರೈಸುವ ಅಂಗಡಿಗಳು ಇಲ್ಲದ ಹರಕು-ಮುರುಕು ಮನೆಗಳು, ರಸ್ತೆಯಲ್ಲಿ ಹರಿದ ಬಟ್ಟೆ ತೊಟ್ಟುಕೊಂಡು ಓಡಾಡುವ ಕರಿಯರು ಇದೇನು ಬೇರೆ ಜಗತ್ತು? ಅಮೇರಿಕಾದಲ್ಲೂ ಹೀಗಿರುವುಂಟೆ? ಎಂದುಕೊಂಡೆ. ಭಾರಿ ದೊಡ್ಡ ನಗರಗಳ ಡೌನ್‌ಟೌನ್ ಪ್ರದೇಶದ ಹತ್ತಿರ ಬಡವರು-

[illegible]

[illegible]

[illegible]

[illegible]

[illegible]

ಕರಿಯರು ಇರುವುದು ಅಮೇರಿಕಾದಲ್ಲೆಲ್ಲಾ ಸಾಮಾನ್ಯವಂತೆ" ಎನ್ನುವರು ಲೇಖಕರು. ಇದು ಕೇವಲ ಡಲ್ಲಾಸ್ ನಗರದ ಕೇಂದ್ರ ಮಾತ್ರವಲ್ಲ, ಇದು ಅಮೇರಿಕದ ವೈಭವದ ಅಂತರಾಳದಲ್ಲಿದ್ದ ಪಾಪದ ಕೇಂದ್ರವೂ ಆಗಿರುವುದನ್ನು ಸಂಕೇತಿಸುತ್ತದೆ.

ರೆಡ್ ಇಂಡಿಯನ್ನರು ಅಮೇರಿಕದ ಮೂಲನಿವಾಸಿಗಳು. ಮೊದಲು ಬಿಳಿಯರು ಅಲ್ಲಿ ಬಂದಿಳಿದಾಗ ರೆಡ್ ಇಂಡಿಯನ್ನರು ಸ್ವಾಗತಿಸಿದರಂತೆ ಅವರಿಗೆ ಕೃಷಿಗೆ ಸಹಾಯ ಮಾಡಿದರು. ಅವರಿಂದ ಲಾಭ ಪಡೆದ ನಂತರ ಬಿಳಿಯರು ತಮ್ಮ ಸುಧಾರಿತ ಶಸ್ತ್ರಾಸ್ತ್ರಗಳಿಂದ ಆ ಮೂಲನಿವಾಸಿಗಳನ್ನು ನಾಶ ಮಾಡಿದರೂ ನೂರು ವರ್ಷಗಳಲ್ಲಿ ಮೆಕ್ಸಿಕೋದಿಂದ ಉತ್ತರಕ್ಕಿರುವ ಒಟ್ಟು ರೆಡ್ ಇಂಡಿಯನ್‌ರ ಜನಸಂಖ್ಯೆ ಒಂದು ಕೋಟಿಯಿಂದ ಹತ್ತು ಲಕ್ಷಕ್ಕೆ ಇಳಿಯಿತಂತೆ.

ಹಿರೋಶಿಮಾದ ಮೇಲೆ ಅಮೇರಿಕಾ ಬಾಂಬ್ ಹಾಕಿದ ದಿನದ 'ವಿಜಯೀ ದಿನ'ದ ಒಂದು ಆಚರಣೆಯ ಕುರಿತು ಟಿ.ವಿ.ಯಲ್ಲಿ ಒಂದು ಚರ್ಚೆ ಇತ್ತಂತೆ. ಅದರಲ್ಲಿ ಅದೇ ಯುದ್ಧದಲ್ಲಿ ಭಾಗವಹಿಸಿದ ಒಬ್ಬ ಮಾಜಿ ಸೈನಿಕನ ಸಂದರ್ಶನ ನಡೆಸಲಾಯಿತಂತೆ. ಲೇಖಕರು ಹೀಗೆ ಹೇಳುತ್ತಾರೆ. "ಅದರಲ್ಲಿ ಒಂದು ಪ್ರಶ್ನೆ ಒಬ್ಬ ಮಾಜಿ ಯೋಧ ಉತ್ತರಿಸಿದ್ದು ಕೇಳಿ ನಾನು ದಂಗಾಗಿ ಹೋದೆ. ಹಿರೋಶಿಮಾ, ನಾಗಸಾಕಿ ಮೇಲೆ ಅಣುಬಾಂಬು ಹಾಕಿದ್ದು ಸರಿಯೇ ಅಂತ ಕೇಳಿದ್ದಕ್ಕೆ 'ಹೌದು' ಎರಡು ನಗರಗಳು ನಿರ್ನಾಮವಾಗಿ ನಾಲ್ಕು ಲಕ್ಷ ಜನರ ಸಾಮೂಹಿಕ ಹತ್ಯೆಗೆ ಕಾರಣವಾದರೂ ಅದು ಸರಿ' ಅಣುಬಾಂಬು ಹಾಕಿಲ್ಲದಿದ್ದರೆ ನಾನು ಖಂಡಿತವಾಗಿ ಸಾಯುತ್ತಿದ್ದೆ. ನನ್ನಂತೆ ಎಷ್ಟೋ ಅಮೇರಿಕನ್ನರು ಸಾಯುತ್ತಿದ್ದರು. ನಾವು ಬದುಕುಳಿಯಲು ಅಣುಬಾಂಬು ಹಾಕುವುದು ಅವಶ್ಯವಾಗಿತ್ತು.

ಇದು ಒಬ್ಬ ಯೋಧನ ಮಾತು ಎಂದಲ್ಲ. ನಿಜವಾಗಿ ಇಂದಿಗೂ ಅಮೇರಿಕ ಬದುಕುವುದು ಬೇರೆಯವರನ್ನು ಕೊಂದೆ ಎಂದು ಹೇಳಬಹುದು.

ಅಮೇರಿಕ ಅತ್ಯಂತ ಮುಂದುವರಿದ ರಾಷ್ಟ್ರ. ಆದರೆ ಅಲ್ಲಿಯ ಮಹಿಳೆಯರು ಇಂದಿಗೂ ಪುರುಷರ ಭೋಗದ ವಸ್ತುಗಳೇ ಒಬ್ಬ ಮಹಿಳೆ ಮೂರ್ನಾಲ್ಕು ಮಕ್ಕಳನ್ನು ಹಡೆದು ಎರಡು-ಮೂರು ಸಲ ವಿವಾಹ ವಿಚ್ಛೇದನ ಹೊಂದಿ ಸುಸ್ತು ಎಂಬ ಲೇಖಕರ ಅಭಿಪ್ರಾಯದಲ್ಲಿ ಅಮೇರಿಕಾದಲ್ಲೂ ಹೆಣ್ಣನ್ನು ನೋಡುವ, ಬಳಸಿಕೊಳ್ಳುವ ರೀತಿ-ನೀತಿಗಳೊಂದಿಗೆ ಅಮೇರಿಕಾದ ಮಗಳಾ ಪರಿಸ್ಥಿತಿಯನ್ನು ವಿವೇಚಿಸಿಕೊಳ್ಳಬಹುದಾಗಿದೆ.

## ಕೊನೆ ಟಿಪ್ಪಣಿ :

1. ನಾ ಕಂಡ ಅಮೇರಿಕಾ–1996, ಪ್ರೊ.ಬಿ.ವಿರೂಪಾಕ್ಷಪ್ಪ, ಪುಟ–131.

2. ನಾ ಕಂಡ ಅಮೇರಿಕಾ–1996, ಪ್ರೊ.ಬಿ.ವಿರೂಪಾಕ್ಷಪ್ಪ,ಪುಟ–121.

3. ನಾ ಕಂಡ ಅಮೇರಿಕಾ–1996, ಪ್ರೊ.ಬಿ.ವಿರೂಪಾಕ್ಷಪ್ಪ,ಪುಟ–64.

4. ನಾ ಕಂಡ ಅಮೇರಿಕಾ–1996, ಪ್ರೊ.ಬಿ.ವಿರೂಪಾಕ್ಷಪ್ಪ, ಮುನ್ನುಡಿ ಪುಟ–8.

5. ಅಮೇರಿಕಾಯಣ–2007, ಎನ್.ಆರ್. ಕೃಷ್ಣಮೂರ್ತಿ, ಪುಟ–55.

6. ಅಮೇರಿಕಾಯಣ–2007, ಎನ್.ಆರ್. ಕೃಷ್ಣಮೂರ್ತಿ, ಪುಟ–69.

7. ಮೇಲಿನದೆ, ಒಂದೆರಡು ಮಾತು–ಮುನ್ನುಡಿ.

8. ವೆಂಕಿ ಬರ್ಗರ್–ನ್ಯೂಯಾರ್ಕ್ ನೆನಪುಗಳು–2009, ವೆಂಕಟೇಶ ರಾಘವೇಂದ್ರ, ಪುಟ–23.

9. ವೆಂಕಿ ಬರ್ಗರ್–ನ್ಯೂಯಾರ್ಕ್ ನೆನಪುಗಳು–2009, ವೆಂಕಟೇಶ ರಾಘವೇಂದ್ರ, ಪುಟ–48.

10. ಅಮೇರಿಕ ಪ್ರವಾಸದ ಅನುಭವಗಳು–1988, ಕೆ.ಎನ್. ಕೃಷ್ಣಮೂರ್ತಿರಾವ್, ಪುಟ–8.

11. ಅಮೇರಿಕ ಪ್ರವಾಸದ ಅನುಭವಗಳು–1988, ಕೆ.ಎನ್. ಕೃಷ್ಣಮೂರ್ತಿರಾವ್, ಪುಟ–23.

12. ಅಮೇರಿಕ ಪ್ರವಾಸದ ಅನುಭವಗಳು–1988, ಕೆ.ಎನ್. ಕೃಷ್ಣಮೂರ್ತಿರಾವ್, ಪುಟ–34,35.

13. ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ., 1991, ಲೇ॥ ಶ್ರೀ ಡಾ॥ ಎಸ್. ವಿದ್ಯಾಶಂಕರ, ಪುಟ:341–342.

* * *

# ಅಧ್ಯಾಯ – 3

## ಅಮೇರಿಕಾ ನಿಯೋಗಿ ಪ್ರವಾಸ ಕಥನಗಳ ತಾತ್ವಿಕ ವಿಶ್ಲೇಷಣೆ

# ಅಮೇರಿಕಾ ನಿಯೋಗಿ ಪ್ರವಾಸ ಕಥನಗಳ ತಾತ್ವಿಕ ವಿಶ್ಲೇಷಣೆ

ಸರಕಾರದ ಪ್ರತಿನಿಧಿಗಳಾಗಿಯೋ, ಆಮಂತ್ರಿತ ಅತಿಥಿಗಳಾಗಿಯೋ, ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಾಗಿಯೋ, ಸ್ವದೇಶೀ ಇಲ್ಲವೆ ವಿದೇಶಿ ನೆರವಿನಿಂದಲೂ ಒಟ್ಟಿನಲ್ಲಿ ಸ್ವ ಧನ ವಿನಿಯೋಗವಿಲ್ಲದೆ ಅನ್ಯ ಕೃಪೆಯಿಂದ ನಿಯೋಗಿ ಪ್ರವಾಸಿಯಾಗಿ ಅಮೇರಿಕಾಕ್ಕೆ ಪ್ರಯಾಣ ಮಾಡಿ, ನಿಶ್ಚಿತ ಕಾಲಾವಧಿಯಲ್ಲಿ, ಪೂರ್ವನಿಯೋಜಿತ ಕಾರ್ಯಕ್ರಮದಂತೆ ಸುತ್ತಾಡಿ ಪಡೆದ ಅನುಭವಗಳನ್ನು ಪ್ರವಾಸಕಥನಗಳ ಮೂಲಕ ಹಂಚಿಕೊಂಡಿದ್ದಾರೆ.

**ನಾರಿ ನಿನಗೆ ನಮೋ ನಮೋ – ಮ. ನಾಗರಾಜರಾವ್ :**

ಅಮೇರಿಕನ್ ಸರಕಾರದ ಅತಿಥಿಯಾಗಿ ಎರಡು ತಿಂಗಳ ಅಮೇರಿಕ ಪ್ರವಾಸ ಕೈಗೊಂಡ ಫಲವೇ ಈ ಪ್ರವಾಸಕಥನ ಆಗಿದೆ. ಈ ಕೃತಿಯಲ್ಲಿ ಲೇಖಕರು ಅಮೇರಿಕಾದ ಒಂದು ಮುಖವನ್ನು ಅಂದರೆ ಅಮೇರಿಕ, ಅಮೇರಿನ್ನರ ಸದ್ಗುಣಗಳನ್ನು ಮಾತ್ರ ನಿರೂಪಿಸಿತ್ತಾ ಈ ಅಭಿಪ್ರಾಯಪಡುತ್ತಾರೆ. "ನಮ್ಮದು ಹಿಂದುಳಿದ ದೇಶ, ಇತರರಲ್ಲಿಯ ಒಳ್ಳೆ ಗುಣಗಳನ್ನು ಅಳವಡಿಸಿಕೊಂಡು ನಾವು ನಮ್ಮ ದೇಶವನ್ನು ಮುಂದೆ ತರಬೇಕಾಗಿದೆ. ದೇಶದ ಅಭಿವೃದ್ಧಿಗಾಗಿ ಎಷ್ಟು ಶ್ರಮಿಸಿದರು ಸಾಲದು" ಎನ್ನುವ ಲೇಖಕರು ಅಮೇರಿಕದ ಇನ್ನೊಂದು ಮುಖವನ್ನು ವರ್ಣಿಸುವ ಗೋಜಿಗೆ ಹೋಗಿಲ್ಲವೆನಿಸಿದರೂ, ಅವಶ್ಯಕತೆಗೆ ಮತ್ತು ಅಗತ್ಯವಾಗಿರುವುದಕ್ಕೆ ಪ್ರಾಮುಖ್ಯತೆ ನೀಡುವುದೂ ಸಹ ಸೂಕ್ತವೆ ಆದ್ದರಿಂದ ಲೇಖಕರ ನಿಲುವು ಸಹ ಸರಿಯೆನಿಸುತ್ತದೆ.

ಈ ಪ್ರವಾಸಕಥನವನ್ನು ಲೇಖಕರು ಹತ್ತು ಅಧ್ಯಾಯಗಳನ್ನಾಗಿ ಮಾಡಿಕೊಂಡು ಅವುಗಳ ಮೂಲಕ ತಮ್ಮ ಅನುಭವಗಳನ್ನು ಪ್ರಸ್ತಾಪಿಸಿದ್ದಾರೆ. ಈ ಎಲ್ಲವನ್ನು ಒಳಗೊಂಡ ಪ್ರಮುಖ ವಿವೇಚನೆಯನ್ನು ಹೀಗೆ ನೋಡಬಹುದು

1. ಸಾಮಾಜಿಕ ಅಥವಾ ಜನಜೀವನ
2. ಶಿಕ್ಷಣ
3. ಆರೋಗ್ಯ
4. ಮನರಂಜನೆ

**ಸಾಮಾಜಿಕ ವ್ಯವಸ್ಥೆ :** ಅಮೇರಿಕಾದ ಸಾಮಾಜಿಕ ವ್ಯವಸ್ಥೆಯ ಹಲವಾರು ವಿಚಾರಗಳನ್ನು ನಿರೂಪಿಸುವ ಬಹುತೇಕ ಪ್ರವಾಸಕಥನಗಳನ್ನು ಈಗಾಗಲೇ ನೋಡಲಾಗಿದೆ. ಮ.ನಾಗರಾಜರಾವ್ ಈ ಪ್ರವಾಸಕಥನದಲ್ಲಿ ಅಮೇರಿಕನ್ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಗೌರವ, ವೈವಾಹಿಕ ಜೀವನದ ಸಿಹಿ-ಕಹಿ, ಕುಟುಂಬ ಯೋಜನೆ, ಗಂಡು-ಹೆಣ್ಣಿನ ಸ್ವೇಚ್ಛಾಚಾರ, ಆರೋಗ್ಯ ವಿಮೆ, ಪರಿಶ್ರಮ, ರಕ್ಷಣೆ ಈ ಮೊದಲಾದ ಅಂಶಗಳ ಕುರಿತು ಸ್ವಾರಸ್ಯಯುತವಾಗಿ ನಿರೂಪಿಸಿದ್ದಾರೆ. ಸಂದರ್ಭಕ್ಕೆ ಪೂರಕವಾದ ರೇಖಾಚಿತ್ರಗಳನ್ನು ಕೊಟ್ಟಿರುವುದರಿಂದ ಅದರ ಸೊಬಗು ಹೆಚ್ಚಿದೆ. 'ಮಹಿಳೆಗೆ ಸಿಗುವ ಸ್ಥಾನಮಾನಗಳು, ಅಮೇರಿಕನ್ನರ ಯೋಜನಾಬದ್ಧ ಜೀವನ' ಇವೆಲ್ಲವನ್ನು ಲೇಖಕರು ಅನುಕರಣಿಯವೆಂದು ಸೂಚಿಸುತ್ತಾರೆ. ಅಲ್ಲಿನ ಡೇಟಿಂಗ್ ಪದ್ಧತಿ, ದಾಂಪತ್ಯ ಜೀವನ ಅಲ್ಪಾವಧಿ, ಆರ್ಥಿಕ ಅನುಕೂಲಕ್ಕಾಗಿ ಮದುವೆ ಮಾಡಿಕೊಳ್ಳುವುದು ಇದಲ್ಲವೆನ್ನುವ ಲೇಖಕರು ಅನೀತಿಯುತವಾದ ಸಾಮಾಜಿಕ ಪದ್ಧತಿಯೆಂದು ಕರೆದು ಇದರಿಂದ ದೂರವಿರುವುದೇ ವಾಸಿ ಎನ್ನುವುದನ್ನು ಮರೆಯುವುದಿಲ್ಲ.

ಅಮೇರಿಕಾದ ಜನಜೀವನದ ಕುರಿತು ವಿವರವಾಗಿ ತಿಳಿಸಿತ್ತಾ, "ದಾರಿಯಲ್ಲಿ ಯಾರಾದರೂ ಕಂಡರೆ "ಆಫೀಸಿಗೆ ಬನ್ನಿರಿ ಮಾತಾಡುವಾ" ಎಂದು ಹೇಳುವುದು ನಮ್ಮಲ್ಲಿ ಅನೇಕರ ರೂಢಿ. ಆಫೀಸು ಇರುವುದು ಪರಿಚಯಸ್ಥರೊಡನೆ ಮಾತಾಡುವುದಕ್ಕಾಗಿ ಎಂದು ನಮ್ಮವರು ತಿಳಿದುಕೊಂಡಂತಿದೆ ಆದರೆ ಅಮೇರಿಕಾದಲ್ಲಿ ಹಾಗಲ್ಲ. ಮಾತನಾಡಲು ಆಫೀಸಿಗೆ ಬನ್ನಿರೆಂದು ಯಾರು ಹೇಳುವುದಿಲ್ಲ ಒಂದು ವೇಳೆ ನೀವು ಆಫೀಸಿಗೆ ಮಾತನಾಡಿಸಲು ಹೋದರೂ ಆಫೀಸಿಗೆ ಸಂಬಂಧಿಸಿದ ವಿಷಯವನ್ನಷ್ಟೇ ಮಾತನಾಡಿಸಿ ನಿಮ್ಮನ್ನು ಕಳಿಸಿ ಬಿಡುತ್ತಾರೆ. ಆಫೀಸಿನಲ್ಲಿ ಖಾಸಗಿ ಮಾತುಕತೆಗಳಿಗೆ ಅವಕಾಶ ಕೊಡುವುದಿಲ್ಲ"[1] ಇದರಿಂದ ಅಮೇರಿಕನ್ನರ ಕಾಯಕ ನಿಷ್ಠೆ ಸಮಯಪ್ರಜ್ಞೆ, ಶಿಸ್ತು ಮೊದಲಾದವನ್ನು ಕಾಣಬಹುದು. ಆದರೆ ಆತ್ಮಾವಲೋಕಿಸುತ್ತಾ ಅಭಿಪ್ರಾಯಪಡುತ್ತಾರೆ. ಭಾರತದಲ್ಲಿ ಸಮಯ, ಶಿಸ್ತು ಯಾವುದಕ್ಕೂ ಬೆಲೆ ಕೊಡುತ್ತಿಲ್ಲ ಎನ್ನುವುದನ್ನು ಇಲ್ಲಿ ನಡೆಯುವ ಸಮಾರಂಭಗಳ ಕುರಿತು ಚರ್ಚಿಸಿದ್ದಾರೆ. ಅಲ್ಲಿನ ಅಂಚೆ ಕಛೇರಿಗಳು, ಬ್ಯಾಂಕು ಇತ್ಯಾದಿ ವ್ಯವಸ್ಥೆಗಳನ್ನು ಲೇಖಕರು ಶ್ಲಾಘೀಸಿದ್ದಾರೆ. ಅಮೇರಿಕಾದಲ್ಲಿ ಎಷ್ಟೇ ದೊಡ್ಡ ಶ್ರೀಮಂತರಾಗಿರಲಿ ಸೇವಕನನ್ನು ಇಟ್ಟುಕೊಳ್ಳುವುದಿಲ್ಲವಂತೆ. ಅವರು ಸ್ವಾವಲಂಬಿಗಳು ಇದು ಅವರ ರಕ್ತದಲ್ಲಿ ಹರಿದು ಬಂದಿದೆ ಎನ್ನುತ್ತಾರೆ. "ನಮ್ಮ ಸಮಾಜದಲ್ಲಿ ಸೇವಕರನ್ನು ಇಟ್ಟುಕೊಳ್ಳುವುದು ದೊಡ್ಡಸ್ತಿಕೆಯ ಲಕ್ಷಣವೆನಿಸುತ್ತದೆ. ಸ್ವಂತ ಕೆಲಸಗಳನ್ನು ಯಾರು ಮಾಡಿಕೊಳ್ಳುತ್ತಾರೋ ಅವರನ್ನು ಸಮಾಜ ಕೀಳು ದೃಷ್ಟಿಯಿಂದ ನೋಡುವುದಲ್ಲದೆ ಅವನನ್ನು 'ಜೀನುಗೊಟ್ಟು' ಎಂದು ಕರೆಯುತ್ತದೆ"[2]

ಎಂದು ಉಲ್ಲೇಖಿಸುತ್ತಾ ಲೇಖಕರು ನಮ್ಮ ಸಮಾಜದಲ್ಲಿರುವ ಪರಾವಲಂಬನಾ ಪದ್ಧತಿಯನ್ನು ವಿಡಂಬಿಸುತ್ತಾರೆ. 'ಅಲ್ಲಿ ಉಚ್ಚ ಮಟ್ಟದ ಜೀವನವನ್ನು ನಡೆಸುತ್ತ ಸಕಲ ಸೌಭಾಗ್ಯಗಳನ್ನು ಅನುಭವಿಸುತ್ತಿರುವ ಅಮೇರಿಕನ್ನರು ಆಳುಗಳೂ ಹೌದು, ಅರಸರೂ ಹೌದು! ಅವರಿಗೆ ಕಷ್ಟ ಪಡುವುದೂ ಗೊತ್ತಿದೆ, ಸುಖ ಪಡೆಯುವುದೂ ಗೊತ್ತಿದೆ' ಎಂದು ಲೇಖಕರು ಅಮೇರಿಕದ ಜೀವನ ವಿಧಾನಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ಶಿಕ್ಷಣ :** ಕಾಲೇಜು ಶಿಕ್ಷಣದಲ್ಲಿಯಂತೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದಲ್ಲಿಯು ಭಾರತ ಹಾಗೂ ಅಮೇರಿಕೆಯ ಪರಿಸ್ಥಿತಿ ಬಹಳ ಭಿನ್ನವಾಗಿದೆ ಎಂದು ಲೇಖಕರು ವಿವರವಾಗಿ ತಿಳಿಸಿದ್ದಾರೆ. "ನಮ್ಮಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಬೇಕಾದರೆ ಹತ್ತು ವರ್ಷ ಶಾಲೆಯನ್ನು ಕಲಿಯಬೇಕು. ಈ ಹತ್ತು ವರ್ಷಗಳಲ್ಲಿ ಐದು ವರ್ಷ ಪ್ರಾಥಮಿಕ ಮತ್ತು ಐದು ವರ್ಷ ಮಾಧ್ಯಮಿಕ ಶಿಕ್ಷಣ ಪಡೆಯಬೇಕಾಗುತ್ತದೆ. ಆದರೆ ಅಲ್ಲಿ ಹಾಗಲ್ಲ ಮಾಧ್ಯಮಿಕ ಶಿಕ್ಷಣ ಮುಗಿಸುವವರು ಒಟ್ಟು ಹನ್ನೆರಡು ವರ್ಷ ಶಾಲೆಯನ್ನು ಕಲಿಯಬೇಕು ಇದರಲ್ಲಿ ಆ ವರ್ಷ ಪ್ರಾಥಮಿಕ ಮೂರು ವರ್ಷ, ಸೀನಿಯರ್ ಸೆಕೆಂಡರಿ ಹೀಗೆ ಪ್ರತ್ಯೇಕ ಘಟ್ಟಗಳಿರುತ್ತವೆ"[3] ಎಂಬಲ್ಲಿ ಲೇಖಕರು ನಮ್ಮಲ್ಲಿನ ಶಿಕ್ಷಣ ವ್ಯವಸ್ಥೆಯ ಬದಲಾವಣೆಯನ್ನಪೇಕ್ಷಿಸುತ್ತಾ ಅಮೇರಿಕಾದ ಶಿಕ್ಷಣ ಪದ್ಧತಿಯನ್ನು ಒಪ್ಪಿಕೊಂಡಿದ್ದಾರೆ. ಲೇಖಕರು ಹೇಳಿರುವಂತೆ ನಮ್ಮ ಮಾಧ್ಯಮಿಕ ಶಿಕ್ಷಣ ನಮ್ಮನ್ನು ಎಲ್ಲಿಗೂ ಮುಟ್ಟಿಸುವುದಿಲ್ಲ ವಿಶ್ಲೇಷಿಸುತ್ತಾ; ಹತ್ತು ವರ್ಷ ಶಾಲೆಯಲ್ಲಿ ಕಳೆದು ನಾವು ಸರ್ಟಿಫ್ಲಿಕೇಟ್ ಪಡೆದರೂ ಅದು ನಿಷ್ಪ್ರಯೋಜಕ. ಇದಾದ ನಂತರ ಮೂರು ಇಲ್ಲವೆ ಐದು ವರ್ಷಗಳವರೆಗೆ ಶಿಕ್ಷಣವನ್ನು ನಾವು ಮುಂದುವರಿಸಬೇಕಾಗುತ್ತದೆ.

ಅಮೇರಿಕೆಯ ಮಾಧ್ಯಮಿಕ ಶಿಕ್ಷಣ ಮಾತ್ರ ಹಾಗಲ್ಲ. ಹನ್ನೆರಡು ವರ್ಷಗಳನ್ನು ಮಾಧ್ಯಮಿಕ ಶಾಲೆಯಲ್ಲಿ ಕಳೆಯುವುದರೊಳಗಾಗಿ ಒಂದು ಗುರಿಯನ್ನು ಸಾಧಿಸಿರುತ್ತಾರೆ. ಅವರ ಶಿಕ್ಷಣ ವ್ಯವಸ್ಥೆ ತನ್ನ ಕಾಲ ಮೇಲೆ ತಾನು ನಿಲ್ಲಲು ಅಣಿಗೊಳಿಸುತ್ತದೆ. ತರುಣರು ಯಾರನ್ನು ಗೋಗರೆಯುವ ಅವಶ್ಯಕತೆ ಇಲ್ಲದಂತೆ ಬೆಳೆಸುತ್ತಾರೆ ಎಂದು ತಿಳಿಸುವ ಲೇಖಕರು ನಮ್ಮಲ್ಲಿ ಇಂತಹ ಪರಿಸ್ಥಿತಿ ಇಲ್ಲದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಅಮೇರಿಕೆಯ ಶಿಕ್ಷಣವು ವ್ಯಕ್ತಿಯ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಉತ್ತಮ ಸಾಧನವಾಗಿದೆ ಎಂದು ಉದಾಹರಿಸುತ್ತಾ, ಪರಮಾವಧಿ ಶಿಕ್ಷಣವನ್ನು ಪ್ರತಿಯೊಬ್ಬರಿಗೂ ಸಿಗುವಂತೆ ಪ್ರೋತ್ಸಾಹ ನೀಡಬೇಕು.

ಎಲ್ಲ ಬಗೆಯ ಉಪಕರಣ ಸಾಧನಗಳನ್ನು ಒದಗಿಸಬೇಕು; ಪ್ರತಿಯೊಬ್ಬ ನಾಗರಿಕನು ಉತ್ತಮ ಶಿಕ್ಷಣ ಪಡೆಯುವುದರಿಂದ ಅವನ ಸ್ವಂತಕ್ಕೂ ಲಾಭವಿದೆ. ರಾಷ್ಟ್ರಕ್ಕೂ ಲಾಭವಿದೆ ಎಂಬುದು ಅಮೇರಿಕನ್ ಸರಕಾರದ ಸಿದ್ಧಾಂತವಾಗಿದ್ದು ಅದು ಆ ದಿಸೆಯಲ್ಲಿ ಮುಂದುವರಿಯುತ್ತಿದೆ. ಒಕ್ಕಲುತನದಿಂದ ಹಿಡಿದು ವಿಮಾನ ನಡೆಸುವವರವರೆಗೆ ಎಲ್ಲ ತರಬೇತಿಯನ್ನು ಅಲ್ಲಿಯ ಯುವಜನಾಂಗ ಪಡೆಯುತ್ತದೆ". ಇಂಥ ಸಹಾಯ ಸೌಲಭ್ಯಗಳ ಪಲಾನುಭವಿಗಳಾದ ಅಲ್ಲಿಯ ತರುಣರೇ ಧನ್ಯರು ಎಂಬುದನ್ನು ಅನುಮೋದಿಸಬಹುದು.

**ಆರೋಗ್ಯ :** ಅಮೇರಿಕೆಯ ಜನ ಎಂಥ ಸಾಮಾನ್ಯ ರೋಗವಾದರೂ ಅದಕ್ಕೆ ಎದೆಗುಂದುತ್ತಾರೆಂದು ಲೇಖಕರು ತಿಳಿಸುತ್ತಾ, ಯಾವುದೇ ಒಂದು ಸಾಮಾನ್ಯ ಶೀತ, ಜ್ವರ, ನೆಗಡಿ ಮುಂತಾದವುಗಳಿಗೂ ಅವರು ಬಹಳ ಅಂಜುತ್ತಾರೆನ್ನುತ್ತಾರೆ. ಮನೆಯಲ್ಲಿ ಯಾರಿಗಾದರೂ ಬೇನೆಯಾದರೆ ಎಲ್ಲರೂ ಆ ಬೇನೆ ತಮಗೆ ತಗಲಿದಂತೆ ಮೊದಲು ಮುಂಜಾಗ್ರತೆ ವಹಿಸುತ್ತಾರೆ. ಆ ಬೇನೆಯ ನಿರೋಧಕ ಔಷಧಗಳನ್ನು ಮನೆಯ ಮಂದಿಯಲ್ಲ ಸೇವಿಸುತ್ತಾರೆಂದು ತಿಳಿಸುವಲ್ಲಿ ಇದಕ್ಕೆ ಕಾರಣವನ್ನು ಲೇಖಕರು ಬಹು ವಿಸ್ತಾರವಾಗಿ ಕೊಡುತ್ತಾ, ಅಲ್ಲಿ ಔಷಧೋಪಚಾರ ಬೆಲೆ ಬಹಳ ದುಬಾರಿಯಾಗಿರುವುದೇ ಕಾರಣವೆಂದು ತಿಳಿಸುತ್ತಾರೆ.

ಆಸ್ಪತ್ರೆಗಳಲ್ಲಿ ಒಂದು ಕೋಣೆಗೆ ದಿನಕ್ಕೆ ಕನಿಷ್ಟ ಐವತ್ತು ಡಾಲರುಗಳನ್ನಾದರೂ ಕೊಡಲೇಬೇಕು. ಹತ್ತು ದಿನ ಒಬ್ಬನು ಆಸ್ಪತ್ರೆಯಲ್ಲಿದ್ದನೆಂದರೆ ಅವನು ಐದು ನೂರು ಡಾಲರುಗಳನ್ನು ಕೋಣೆಯ ಬಾಡಿಗೆಗಾಗಿ ಕೊಡಬೇಕಾಗುವುದು. ಇದರಲ್ಲಿ ಔಷಧದ ವೆಚ್ಚ ಸೇರಿರುವುದಿಲ್ಲ. ಅದನ್ನು ಪ್ರತ್ಯೇಕವಾಗಿ ವಸೂಲು ಮಾಡಲಾಗುತ್ತದೆ. ಇಂತಹ ಔಷಧೋಪಚಾರದ ವೆಚ್ಚವನ್ನು ಭರಿಸುವಲ್ಲಿ ಅಮೇರಿಕನ್ನರು ಬುದ್ಧಿವಂತರು ಹೆಚ್ಚಿನ ಭಾರ ಬೀಳದಿರಲೆಂದು ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುತ್ತಾರೆ. ಆರೋಗ್ಯ ವಿಮೆಯನ್ನು ಸಾಮಾನ್ಯವಾಗಿ ಎಲ್ಲರೂ ಮಾಡಿಸಿಕೊಳ್ಳುತ್ತಾರೆ. ವಿಮಾ ಕಂಪನಿಯವರು ವೆಚ್ಚದ ಅರ್ಧಭಾಗವನ್ನು ಮಾತ್ರ ಭರಿಸುತ್ತಾರೆ. ಉಳಿದರ್ಧವನ್ನು ಉಪಚಾರ ಹೊಂದಿದವರು ನೀಡಬೇಕಾಗುತ್ತದೆ ಅದಕ್ಕಾಗಿ ರೋಗ ಬರದಂತೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ಹೇಳುವುದರೊಂದಿಗೆ ಆಹಾರದಲ್ಲಿನ ಸಮತೋಲನ ಕ್ರಮದ ಕುರಿತು ಲೇಖಕರು ತಾವು ಕೈಗೊಂಡ ಸಂಶೋಧನೆಯ ಮೂಲಕ ಖಚಿತಪಡಿಸಿದ್ದಾರೆ. ಭಾರತೀಯರು ಮತ್ತು ಅಮೇರಿಕನ್ನರ ಆರೋಗ್ಯ

ಸ್ಥಿತಿಯನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿ ನಮಗಿಂತಲೂ ಅಮೇರಿಕನ್ನರು ಆರೋಗ್ಯವಂತರು ಎಂದು ದೃಢಪಡಿಸಿದ್ದಾರೆ.

**ಮನರಂಜನೆ :** ಅಮೇರಿಕನ್ನರ ಮನರಂಜನೆಯ ಕುರಿತು ಲೇಖಕರು ನಡೆಸಿದ ಮಹತ್ವದ ಸಂಶೋಧನೆ ಇದಾಗಿದ್ದು ಇದರ ಕುರಿತು ಸಾಕಷ್ಟು ಅಂಶಗಳನ್ನು ಕಲೆಹಾಕಿದ್ದಾರೆ.

ನಮ್ಮ ದೇಶದಲ್ಲಿ 'ದುಡಿತ' ಮತ್ತು 'ಮನರಂಜನೆ' ಕೂಡಿ ನಡೆಯುವುದಿಲ್ಲ. ದುಡಿಯುವವನು ದುಡಿದೇ ದುಡಿಯುತ್ತಾನೆ. ಚೈನಿ ಹೊಡೆಯುವವನು ಹೊಡೆದೇ ಹೊಡೆಯುತ್ತಾನೆ ಎನ್ನುವ ಲೇಖಕರು ಅಮೇರಿಕನ್ನರು ಮೈಮುರಿದು ಕೆಲಸ ಮಾಡುವುದರ ಜೊತೆಗೆ ಹೆಂಡತಿ ಮಕ್ಕಳೊಡನೆ ಕೂಡ ಮನರಂಜನೆಯನ್ನು ಒದಗಿಸಿಕೊಳ್ಳುತ್ತಾರೆ. 'ಅಮೇರಿಕನ್ನರಿಗೆ ಕಷ್ಟಪಟ್ಟು ದುಡಿಯುವ ಮತ್ತು ಅನುಭವಿಸಿ ಸುಖ ಪಡುವ ಎರಡೂ ಕಲೆಯೂ ಸಿದ್ಧಿಸಿರುವುದರಿಂದ, ನಿಜವಾಗಿ ಸುದೈವಿಗಳು ಅವರು ಎನ್ನುವ ಲೇಖಕರ ಮಾತು ಆನುಶಂಗಿಕವಾಗಿದೆ.

ಒಟ್ಟಾರೆಯಾಗಿ ಲೇಖಕರ ನಿರೂಪಣಾ ಶೈಲಿ ವಿಶಿಷ್ಟವಾಗಿದ್ದು, ಚಿಂತನಾತ್ಮಕವಾಗಿರುವುದರೊಂದಿಗೆ ವಿಡಂಬನೆಯೂ ಸೇರಿದ್ದು ಓದುಗರಿಗೆ ಒಂದು ರೀತಿಯ ಮುದವನ್ನುಂಟುಮಾಡುತ್ತದೆ.

## ನಾನು ಅಮೇರಿಕೆಗೆ ಹೋಗಿದ್ದೆ – ಕೃಷ್ಣಾನಂದ ಕಾಮತ್ :

ಲೇಖಕರಿಗೆ ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದ ಶಿಷ್ಯವೇತನ ಲಭಿಸಿದ್ದರಿಂದ ಕೀಟಶಾಸ್ತ್ರದಲ್ಲಿ (Entomalogy) ಪಿಎಚ್.ಡಿ., ಮಾಡುವ ಅವಕಾಶ ದೊರೆತಿರುವುದರಿಂದ ಅದನ್ನು ಪೂರೈಸಲು ಅಮೇರಿಕಾಕ್ಕೆ ತೆರಳಿ, ಅಲ್ಲಿ ನಾಲ್ಕು ವರ್ಷಗಳ ಕಾಲ ಕಳೆದಿದ್ದಾರೆ. ಈ ಅವಧಿಯಲ್ಲಿ ಲೇಖಕರು ಅಮೇರಿಕನ್ ಸ್ನೇಹಿತರೊಂದಿಗೆ, ಅಮೇರಿಕನ್ ಕುಟುಂಬಗಳೊಡನೆ ವಾಸಿಸಿ ಅವರನ್ನು ಅರಿಯುವ ಪ್ರಯತ್ನಪಟ್ಟು ಆ ಮೂಲಕ ಅಮೇರಿಕನ್ನರ ವೈವಿಧ್ಯಪೂರ್ಣ ಜೀವನವನ್ನು ಚಿತ್ರಿಸಿದಾರೆ.

ಲೇಖಕರು, ಅಮೇರಿಕಾಕ್ಕೆ ಹೊಗುವ ಮುನ್ನ ಓದಿ ತಿಳಿದುಕೊಂಡ ಜನಜೀವನಕ್ಕೂ, ತಾವೇ ಪ್ರತ್ಯಕ್ಷ ಕಂಡ ಅಮೇರಿಕನ್ ಜನಜೀವನಕ್ಕೂ ಅಜಗಜಾಂತರ ವ್ಯತ್ಯಾಸ ಕಂಡಿದ್ದಾರೆ. ಈ ವ್ಯತ್ಯಾಸದೊಂದಿಗೆ ತಮಗಾದ ಅನುಭವವನ್ನು ಮೂರು ಭಾಗಗಳನ್ನಾಗಿ ಮಾಡಿ ತನ್ಮೂಲಕ ಅವುಗಳನ್ನು ಹಂಚಿಕೊಂಡಿದ್ದಾರೆ.

ಮೊದಲ ಭಾಗದಲ್ಲಿ ಲೇಖಕರಿಗೆ ಅಮೇರಿಕನ್ನರ ನಡವಳಿಕೆಗಳು, ಶಿಕ್ಷಣಕ್ರಮ, ವಿದ್ಯಾರ್ಥಿಗಳ ಅಶಿಸ್ತು, ಸ್ತ್ರೀ–ಪುರುಷರ ಸಮಾನತೆ ಮೊದಲಾದ ಅಂಶಗಳ ಬಗ್ಗೆ ಹೆಚ್ಚಿನ ಗಮನಹರಿಸಿ ಪರೀಕ್ಷಿಸಿದ ಪರಿಣಾಮವಾಗಿ ತಮ್ಮ ಅನುಭವವನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಅಲ್ಲಿಯ ಕುಮಾರಿಯರ ವಿಚಿತ್ರ ವೇಷಭೂಷಣ, ಉಡಿಗೆ–ತೊಡುಗೆ, ಕೇಶರಚನೆ, ಕಿರಿಸೊಂಟ ಎಲ್ಲವೂ ನಿಚ್ಚಳವಾಗಿ ಕಾಣತೊಡಗುತ್ತವೆ ಎನ್ನುವ ಲೇಖಕರಿಗೆ ಆ ಕುಮಾರಿಯರ 'ಹಾಯ್' ಎನ್ನುವ ಪರಿಪಾಠ ಮೊದಮೊದಲು ಗೊಂದಲವನ್ನುಂಟು ಮಾಡಿದ್ದರೂ ಆ ನಂತರ ಇಂಥ 'ಹಾಯ್'ಗಳಿಗೆ ವಿಶೇಷ ಅರ್ಥವಿಲ್ಲವೆಂದೂ ತಿಳಿದು ಅದನ್ನು ತಾವು ಅನುಸರಿಸಿದ್ದಾರೆ.

ಶಿಕ್ಷಣ ಕ್ರಮದಲ್ಲಿನ ವಿದ್ಯಾರ್ಥಿಗಳ ಅಶಿಸ್ತಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತಾ, ಇದಕ್ಕೆ ಸಾಕಷ್ಟು ನಿದರ್ಶನಗಳನ್ನು ನೀಡಿದ್ದಾರೆ. ಉದಾಹರಣೆಗೆ "ವಿದ್ಯಾರ್ಥಿಯೋರ್ವನು ಶಿಕ್ಷಕನಿಗೆ ಪ್ರಶ್ನೆ ಕೇಳಿದ ಸಂದರ್ಭ; ಹೊಲಸಾದೊಂದು ಪ್ಯಾಂಟು, ಮಿಲಿಟರಿಯವರು ಧರಿಸುವಂತಹ ಒರಟು ಬೂಟು ಧರಿಸಿರುವ ಅವನು ಆರಾಮವಾಗಿ ಖುರ್ಚಿಯಲ್ಲಿ ಆಸೀನನಾಗಿ, ಹಲ್ಲುಗಳಲ್ಲಿ ಕಚ್ಚಿ ಹಿಡಿದ ಪೈಪಿನಿಂದ ಹೊಗೆಯನ್ನು ಬಿಡುತ್ತ ಮೊದಲೇ ತಿಳಿಯದ ಇಂಗ್ಲೀಷಿನಲ್ಲಿ ಇನ್ನಷ್ಟು ತಿಳಿಯದಂತೆ ಪ್ರಶ್ನೆ ಕೇಳಿದ. ಆತನ ಹಾವಭಾವದಿಂದ ಅವನಿಗೆ ಹೇಳಬೇಕಾಗಿದ್ದನ್ನು ಮಾತಿನಲ್ಲಿ ವ್ಯಕ್ತಮಾಡಲು ಬಾರದೆಂದು ತಿಳಕೊಂಡ ಮತ್ತೊಬ್ಬ ವಿದ್ಯಾರ್ಥಿ ಅವನು ಹೇಳಬೇಕಾದುದನ್ನು ಕರೆ ಹಲಗೆಯ ಮೇಲೆ ಬರೆದು ವಿವರಿಸಲು ಹೇಳಿದ. ಆತನು ಎದ್ದು ಬಲಗೈ; ಪಾಯಿಪಿಗೆ ಬೇಕಾದ್ದರಿಂದ, ಎಡಗೈಯಿಂದ ಇನ್ನೂ ಅ,ಆ. ಬರೆಯಲು ಕಲಿಯುವ ವಿದ್ಯಾರ್ಥಿಯಂತೆ ಕರಿಹಲಗೆಯ ತುಂಬ ಅಡ್ಡಡ್ಡವಾಗಿ ದೊಡ್ಡ, ಸಣ್ಣ (capitals & italic) ಬಳಕೆಯಲ್ಲಿರುವ ಯಾವತ್ತೂ ಇಂಗ್ಲೀಷ್ ಕಾಗುಣಿತಾಕ್ಷರಗಳನ್ನು ಹೇಗೇಗೊ ಜೋಡಿಸಿ ಬರೆಯಲಾರಂಭಿಸಿದ".[4] ಹೀಗೆ ವಿದ್ಯಾರ್ಥಿಗಳಲ್ಲಿನ ಅಶಿಸ್ತು, ಅರಾಜಕತೆ ಇತ್ಯಾದಿಗಳನ್ನು ಕಂಡ ಲೇಖಕ ಮುಜುಗರಪಟ್ಟಿದ್ದಾರೆ. ಆದರೆ ಹೆಚ್ಚಿನ ವಿದ್ಯಾರ್ಥಿಗಳು ಈ ಗುಂಪಿಗೆ ಸೇರಿಲ್ಲವೆಂದು ಸಂತೋಷವನ್ನು ಪಡುತ್ತಾ; ಅಲ್ಲಿನ ಯುವಪೀಳಿಗೆಯ ಅನಿಷ್ಟ ನಡವಳಿಕೆ ತಿದ್ದುಪಡಿಯಾಗದೆ ಮುಂದುವರೆದರೆ ಅಮೇರಿಕ ಆಂತರಿಕ ಕಾರಣಗಳಿಂದಲೇ ಬಲಿಯಾಗತ್ತದೆ ಹೊರತು ಬಾಹ್ಯ ಶತ್ರುಗಳಿಂದಲ್ಲ ಎಂದು ಎಚ್ಚರಿಸಿದ್ದಾರೆ.

ಅಮೇರಿಕನ್ 'ಸ್ತ್ರೀ' 'ಪುರುಷ'ರ ಬಗೆಗಿನ ಕೆಲವು ಅಂಶಗಳನ್ನು ಪುಟ 24–28ವರೆಗೆ ಕುತೂಹಲಕಾರಿ ಮನೋಭಾವದಿಂದ ವೀಕ್ಷಿಸಿ ಬರೆದಿದ್ದಾರೆ. ಅಮೇರಿಕನ್ ಸಮಾಜ ತಮ್ಮ ಯುವಕ–ಯುವತಿಯರಿಗೆ ಕೊಡ ಮಾಡಿದ ಸ್ವಾತಂತ್ರ್ಯ ವಿಪರೀತವೆನಿಸುತ್ತದೆ ಎಂದು ಟೀಕಿಸುತ್ತಾ ಅಮೇರಿಕನ್ನರ ಈ ನಿಯಮಗಳು ಪ್ರಗತಿದಾಯಕವಲ್ಲ ಎಂದು ಲೇಖಕರ ಗ್ರಹಿಕೆಯಾಗಿದೆ.

ಎರಡನೇ ಭಾಗದಲ್ಲಿ "ಅಮೇರಿಕನ್ ಕುಟುಂಬಗಳೊಡನೆ ಸ್ನೇಹ ಸಂಬಂಧ ಬೆಳಸಿ ಭಾರತೀಯರ ಬಗೆಗೆ ಅವರಲ್ಲಿ ಮೂಡಿದ್ದ ತಪ್ಪು ತಿಳುವಳಿಕೆಯನ್ನು ನಿವಾರಿಸಿದುದು, ಭಾರತ ಹಾಗೂ ಭಾರತೀಯರ ಜೀವನ ವಿಧಾನಗಳ ಬಗೆಗೆ ಗೌರವ ಭಾವನೆ ಅವರಲ್ಲಿ ಮೂಡುವಂತೆ ಮಾಡಲು ಸಮರ್ಪಕ ರೀತಿಯಲ್ಲಿ ಅವರ ಸಂದೇಹಗಳಿಗೆ ಉತ್ತರ ನೀಡಿ ಅವರ ಮನದ ಕಿಲ್ಬಿಷ ಪರಿಹರಿಸಿದುದು ಪ್ರಧಾನವಾಗಿ ಬಂದಿದೆ. ಅಮೇರಿಕನ್ ಮಿತ್ರತೊಡನೆ ಸಂಭಾಷಿಸುವಾಗಲೂ ಅವರಿಂದ ಅಪ್ರಿಯವಾದ ಹಾಗೂ ಭಾರತೀಯರ ಜೀವನ ವಿಧಾನ, ಆಚಾರ, ವಿಚಾರ, ನಡಾವಳಿಗಳ ಬಗೆಗೆ ಮಾತು ಕೇಳಬೇಕಾಗಿ ಬಂದಾಗ; ಅವರ ಮಾತಿನ ದಾಳಿಗೆ ಲೇಖಕರು ಹೆದರದೆ, ಸೋಲದೆ, ಧೈರ್ಯವಾಗಿ ಉತ್ತರಿಸಿದ್ದು ಹಾಗೂ ಅಮೇರಿಕನ್ನರಲ್ಲಿ ಭಾರತೀಯರ ಬಗ್ಗೆ ಸದ್ಭಾವನೆ ಮೂಡಿಸಿದ್ದು ಮುಖ್ಯವಾಗಿ ಬಂದಿದೆ. ತಾವು ನಡೆಸಿದ ಚರ್ಚೆಯ ವಿವರಗಳನ್ನು ಸ್ವಾರಸ್ಯ ಪೂರ್ಣವಾಗಿ ಲೇಖಕರು ಇಲ್ಲಿ ನೀಡಿರುವರು"[5] ಎಂಬ ಡಾ॥ ವಿದ್ಯಾಶಂಕರ ಅವರ ಅಭಿಪ್ರಾಯ ಸೂಕ್ತವಾಗಿದೆ.

ಮೂರನೇ ಭಾಗದಲ್ಲಿ ಲೇಖಕರು ಮಧ್ಯಮ ವರ್ಗದ ಅಮೇರಿಕನ್ನರ ಇಡೀ ಜೀವನ ಹಣಕ್ಕಾಗಿ ಹೋರಾಟದಲ್ಲಿ ಕಳೆಯುವುದನ್ನು ನಿದರ್ಶನಗಳ ಮೂಲಕ ಚರ್ಚಿಸುತ್ತಾ, ಅಮೇರಿಕದಲ್ಲಿ ಮಧ್ಯಮವರ್ಗದವರೇ ಸಮಾಜದ ಬೆನ್ನೆಲುಬಾಗಿದ್ದಾರೆನ್ನುತ್ತಾರೆ. ಅವರು ಅತ್ಯಾಧುನಿಕ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದರೂ ಭಾರತೀಯ ಮಧ್ಯಮ ವರ್ಗದವರಿಗಿಂತ ಅಮೇರಿಕನ್ನರ ಸಮಸ್ಯೆಗಳು ಹೆಚ್ಚು ಬಿಗಿಯಾಗಿವೆ. ಇವರಿಗೆ ಬಡವರಂತೆ ಆಧುನಿಕ ಸಾಮಾಗ್ರಿಗಳಿಲ್ಲದೇ ಜೀವಿಸುವ ಮನಸ್ಸಿಲ್ಲ. ಮೇಲಿನ ವರ್ಗದವರಂತೆ ಜೀವನ ನಡೆಸುವ ತ್ರಾಣವಿಲ್ಲ. ಅಂತೆಯೆ ಅವರ ಜೀವನ ಮಟ್ಟವನ್ನು ಎದುರಿಸಲು ಹೋರಾಟದಿಂದಲೇ ಜೀವನ ಪ್ರಾರಂಭವಾಗುತ್ತದೆ. ಅಮೇರಿಕನ್ನರು ಅನುಭವಿಸುವ ಮಾನಸಿಕ ತೊಳಲಾಟವನ್ನು, ಅಸಹಾಯಕ ಸ್ಥಿತಿಯನ್ನು ಅನಿವಾರ್ಯವಾಗಿ ಎದುರಿಸಬೇಕಾಗುತ್ತೆನ್ನುವುದು ಲೇಖಕರ ಅಭಿಪ್ರಾಯವಾಗಿದೆ.

ಎಷ್ಟೋ ಜನ ಸ್ಮಶಾನಯಾತ್ರೆಯ ವ್ಯಾಪಾರದಲ್ಲಿ ತೊಡಗಿದ್ದು, ಯಾರಾದರೂ ಮರಣವನ್ನಪ್ಪಿದರೆ ಆತನ ಮನೆಯವರು ಚಿಂತಿಸುವ ಅಗತ್ಯವಿಲ್ಲ. ಆ ವ್ಯಾಪಾರಿಗಳಿಗೆ ಪೋನ್ ಮಾಡಿದರೆ ಅವರೇ ಸಂಪೂರ್ಣ ಜವಾಬ್ದಾರಿ ಹೊರುತ್ತಾರೆ. ಶವಕ್ಕೆ ಅತ್ಯುತ್ತಮ ಬಟ್ಟೆ, ಉತ್ತಮ ಅಲಂಕಾರ, ಹೂವಿನ ತುರಾಯಿಗಳು, ಸುಂದರ ಮಂಟಪ, ಹೀಗೆ ಎಲ್ಲದ್ದಕ್ಕೂ ಭಾರೀ ವೆಚ್ಚದ ಬಿಲ್ಲುಗಳು, ಈ ಸಾಲವನ್ನು

ತೀರಿಸಲು ಆತನ ಸಂಬಂಧಿ ಅಥವಾ ಹೆಂಡತಿ ಜೀವನದುದ್ದಕ್ಕೂ ಹೆಣಗಬೇಕಾಗುತ್ತದೆ ಎಂದು ತಿಳಿಸುತ್ತಾರೆ. ಇಲ್ಲಿ ಅಮೇರಿಕನ್ನರ ಬದುಕು ಕೃತಕ, ಅಸಹಜವಾಗಿದೆಂಬುದನ್ನು ಕಾಣುವುದರೊಂದಿಗೆ ನಾಗರಿಕತೆಯ ಸೂಕ್ಷ್ಮ ವಿಡಂಬನೆಯನ್ನು ಸಹ ಅರಿಯಬಹುದಾಗಿದೆ. ಹೇಗೆ 'ಪ್ರತಿಷ್ಠೆಗಳು ಮತ್ತು ಆಧುನಿಕತೆಗಳು' ಸಹಜ ಸಂತೋಷವನ್ನು ನಾಶಮಾಡುತ್ತದೆಂಬ ಸತ್ಯವನ್ನು ನಾವಿಲ್ಲಿ ನೋಡುತ್ತೇವೆ.

ತಲೆಮಾರುಗಳಿಂದ ಕಲಿಸಿದ್ದನ್ನೇ ಕಲಿಸುವ ರೂಢಿ ಇಟ್ಟುಕೊಂಡು ದೇಶದಿಂದ ವಿದ್ಯಾಭ್ಯಾಸ ಮುಗಿಸಿ ಅಮೇರಿಕೆಗೆ ಹೋದಾಗ ಎದುರಿಸಬೇಕಾದ ಸಮಸ್ಯೆಗಳಿಗೆ ಲೆಕ್ಕವಿಲ್ಲವೆನ್ನುತ್ತಾರೆ. ಇಲ್ಲಿಯ ಶಿಕ್ಷಣಪದ್ಧತಿಗೂ ಅಲ್ಲಿಯ ಶಿಕ್ಷಣ ಪದ್ಧತಿಗೂ ಅಜಗಜಾಂತರವಿರುವುದು ಕಂಡುಬರುತ್ತದೆ. "ಅಮೇರಿಕೆಯಲ್ಲಿ ಉಚ್ಚ ಶಿಕ್ಷಣ ಪಡೆದ ಪ್ರತಿಭಾವಂಥ ಭಾರತೀಯರಿಗೆ ತಮ್ಮ ನಾಡಿನಲ್ಲಿಯೇ ಯೋಗ್ಯ ಉದ್ಯೋಗ, ಪ್ರೋತ್ಸಾಹ ದೊರೆಯದೆ ದಟ್ಟ ನಿರಾಶೆಗೆ ಒಳಗಾಗಿ, ಉತ್ಸಾಹಭಂಗಿತರಾದ ಅನೇಕರು ಪಡುವಣ ದೇಶಗಳಿಗೆ ತೆರಳುವುರ ಹಾಗೂ ಮತ್ತೆ ಹಿಂತಿರುಗಲು ಕಾರಣವಾಗಿರುವ 'ವಾತಾವರಣ'ದ ಬಗೆಗೆ ಗಂಭೀರವಾಗಿ ನಾವು ಚಿಂತಿಸುವಂತೆ ಮಾಡಿರುವರು". 'ಪ್ರತಿಭಾ ಪಲಾಯನ'ಕ್ಕೆ ಕಾರಣವಾಗುವ 'ಪರಿಸ್ಥಿತಿ'ಗೆ ಲೇಖಕರು ಕೊಟ್ಟಿರುವ ನಿದರ್ಶನ ವಾಸ್ತವಾಗಿಯೂ ಸತ್ಯ.

ಅಮೇರಿಕದಲ್ಲಿ ನೆಲೆಸಿರುವ ಭಾರತೀಯ ವಿಜ್ಞಾನಿಗಳ ಮನವೊಲಿಸಿ ಅವರನ್ನು ಭಾರತಕ್ಕೆ ಮರಳಿ ಕರೆಯಿಸಿಕೊಳ್ಳುವ ಪ್ರಯತ್ನವನ್ನು ಭಾರತ ಸರ್ಕಾರ ಮಾಡಿತು. ಅದಕ್ಕಾಗಿಯೇ ಬಂದ ಅಧಿಕಾರಿಯೋರ್ವರು ವಿದೇಶದಲ್ಲಿ ನೆಲೆಸಿರುವ ಭಾರತೀಯರನ್ನು ಸಂದರ್ಶನಕ್ಕೆ ಕರೆದರು. ತಮ್ಮ ದೇಶದ ಸೇವೆ ಮಾಡಲು ಆಸೆ ಹಾಗೂ ಉತ್ಸಾಹಗಳಿಂದ ಸಾವಿರಾರು ಮೈಲಿ ಪ್ರಯಣದ ಆಯಾಸವನ್ನು ಲೆಕ್ಕಿಸದೆ ಬಂದ ಅಭ್ಯರ್ಥಿಗಳನ್ನು ಐದು ನಿಮಿಷಗಳಲ್ಲಿ ಆ ಅಧಿಕಾರಿ ಸಂದರ್ಶನ ಮುಗಿಸಿ ಹೊರಗೆ ಕಳುಹಿಸಿದರು. ಈ ಕಟು ಅನುಭವ ನಿರಾಶೆಯನ್ನಷ್ಟೇ ಅಲ್ಲ, ಬೇಸರವನ್ನೂ ತರಿಸಿತು. ಭಾರತೀಯ ವಿಜ್ಞಾನಗಳ ಮನವೊಲಿಸಲು ಅಮೇರಿಕಾಕ್ಕೆ ಬಂದ ಈ ಅಧಿಕಾರಿ ಮಾಡಿದ್ದಾದರೂ ಏನನ್ನು ತನ್ನ ವೈಯಕ್ತಿಕ ಕೆಲಸಗಳನ್ನು, ಇಂತಹ ನಾಚಿಕೆಗೇಡಿನ ಪ್ರಸಂಗವನ್ನು ತಮಗಾದ ಕಟು ಅನುಭವದ ಹಿನ್ನೆಲೆಯಲ್ಲಿ ಲೇಖಕರು ಸ್ಮರಿಸಿಕೊಳ್ಳುವರು. ಜನ್ಮಕೊಟ್ಟ ನಾಡಿನ ಸೇವೆ ಮಾಡಬೇಕೆಂಬ ಕನಸು ತುಂಬಿಕೊಂಡು ಭಾರತಕ್ಕೆ ಬಂದು ಅಲ್ಲಿನ ರಾಜಕೀಯವನ್ನೂ, ಜಾತಿ, ವಶೀಲಿ ಲಂಚಗಳ ತಾಂಡವ ನೃತ್ಯವನ್ನು ನೋಡಿ ತಮ್ಮ ಸಂಶೋಧನೆ–ಅಧ್ಯಯನಗಳಿಗೆ ಅಲ್ಲಿ ಒಳ್ಳೆಯ ವಾತಾವರಣ, ಪ್ರೋತ್ಸಾಹಗಳಿಲ್ಲದ್ದನ್ನು ಕಂಡು ಅಮೇರಿಕ್ಕಾಕ್ಕೆ ಹಿಂತಿರುಗಿ

ಬಂದ ಭಾರತೀಯರ ಹಲವು ಉದಾಹರಣೆಗಳನ್ನು ಕೊಟ್ಟು"[6] ಲೇಖಕರು ನೈಜ ಸ್ಥಿತಿಯ ಪರಿಚಯ ನಮಗಾಗುವಂತೆ ಮಾಡಿರುವುದು ಸಮಂಜಸವಾಗಿದೆ.

ಲೇಖಕರ ವೈಯಕ್ತಿಕ ಅನುಭವದಲ್ಲಿ ನೋವು ಕಾಣುವುದಲ್ಲದೆ ಸಮಷ್ಟಿ ಬದುಕು ಮತ್ತು ಪ್ರತಿಭಾ ಪಲಾಯನದ ಕುರಿತು ಗಾಢಾಲೋಚಿಸಿರುವುದು ಕಂಡುಬರುತ್ತದೆ. ವಿದೇಶಗಳಿಗೆ ಹೋಗಿ ಕಷ್ಟಪಟ್ಟು ಗಳಿಸಿದ ವೈಜ್ಞಾನಿಕ ಲಾಭವನ್ನು ತನಗಾಗಿ, ತನ್ನ ಜನರಿಗಾಗಿ ಮಾಡಿಕೊಳ್ಳುವ ಯೋಗ್ಯತೆಯ ಬಗ್ಗೆ ಸರಕಾರ ಮತ್ತು ಸಂಸ್ಥೆಗಳು ಸ್ವಲ್ಪ ಹೆಚ್ಚು ಪ್ರೋತ್ಸಾಹಿಸಿದರೆ ಭಾರತೀಯ ಬುದ್ಧಿಮತ್ತೆ ಭಾರತದಲ್ಲೇ ಉಳಿಯುತ್ತದೆ ಎನ್ನುವ ಲೇಖಕರ ವಿಚಾರಗಳು ನಮ್ಮಲ್ಲಿಯ ಸಮಸ್ಯೆಗಳನ್ನು ಅರ್ಥೈಸುವ ಪ್ರಯತ್ನವನ್ನು ಮಾಡಿ, ಹೊಣೆಗಾರಿಕೆಯಿಂದ ವರ್ತಿಸುವುದು ಎಷ್ಟು ಅಗತ್ಯವೆಂದು ಸೂಚಿಸುತ್ತಾರೆ.

ಅಮೇರಿಕದಲ್ಲಿ ನೆಲೆಸಿದ ಭಾರತೀಯ ಮನಸ್ಸು ಅಮೇರಿಕನ್ ಸಂಸ್ಕೃತಿಯನ್ನು ಸ್ವಿಕರಿಸುವುದಿಲ್ಲ. ಆದರೆ ಪ್ರತಿಯೊಂದು ಹಂತದಲ್ಲೂ ಭಿನ್ನವಾದ ವಾತಾವರಣದಲ್ಲಿ ಯಾವಾಗಲೂ ಭಾರತೀಯನಾಗಿ ಉಳಿಯುವುದು ಸಾಧ್ಯವಿಲ್ಲವೇನ್ನುವಲ್ಲಿ[7] ಎಂಬಲ್ಲಿ ಭಾರತೀಯ ದ್ವಂದ್ವ ಪರಿಸ್ಥಿತಿ ಕಂಡುಬರುತ್ತದೆ. ಈ ವಾತಾವರಣದಲ್ಲಿ ಬೆಳೆಯುತ್ತಿರುವ ಮಕ್ಕಳು ಸ್ವಾಭಾವಿಕವಾಗಿಯೇ ಅಮೇರಿಕನ್ ಸಂಸ್ಕೃತಿಯನ್ನು ಸ್ವೀಕರಿಸುತ್ತಾರೆಂದು, ಅಮೇರಿಕನ್ ವಿದ್ಯಾರ್ಥಿಗಳ ಸ್ನೇಹ ಬೆಳೆಸುತ್ತಾರೆಂದು, 'ಡೇಟಿಂಗ್' ಪಾರ್ಟಿಗಳಲ್ಲಿ ಭಾಗವಹಿಸುತ್ತಾರೆಂದು, ಅವರ ತಂದೆ-ತಾಯಿಗಳೇನೋ ಇದನ್ನು ವಿರೋಧಿಸಬಹುದೆಂಬುದನ್ನು, ಆಗ ಜೊತೆಯ ಸಂಗಡಿಗರಿಲ್ಲದೇ ಮಕ್ಕಳು ಚಡಪಡಿಸಬಹುದೆಂಬುದನ್ನು, ಮಕ್ಕಳು ಬೆಳೆದಂತೆ ಸಮಸ್ಯೆಗಳೂ ಬೆಳೆಯುವುದನ್ನ, ಹಾಗಾಗಿ ಅತ್ತ ಅಮೇರಿಕನ್ನರೂ ಆಗುವುದಿಲ್ಲ. ಇತ್ತ ಭಾರತೀಯರಂತೆ ಬಾಳುವ ಅವಕಾಶವು ಇಲ್ಲವೆನ್ನುವುದನ್ನೇಲ್ಲ ಪುಟ-122ರಲ್ಲಿ ತಿಳಿಸುತ್ತಾ, ಮಕ್ಕಳೊಂದಿಗೆ ತಂದೆ-ತಾಯಿಯಂದಿರೂ ಬದುಕಿನೂದ್ದಕ್ಕೂ ಈ ಸಂಕೋಲೆಯಲ್ಲಿಯೇ ಇರಬೇಕಾಗುತ್ತದೆಂಬುದನ್ನು ಅನೇಕ ಭಾರತೀಯರನ್ನು ಭೇಟಿಯಗಿ ಚರ್ಚಿಸಿ ಕಂಡುಕೊಂಡ ಸತ್ಯಾಂಶಗಳನ್ನು ಸಹಜವಾಗಿ ತೆರೆದಿಟ್ಟಿದ್ದಾರೆ.

ಶ್ವೇತಭವನ, ಪೆಂಟೋರ್, ವಾಶಿಂಗ್‌ಟನ್, ಲಿಂಕನ್, ಜಾಫರ್ಸನ್ನರ ಸ್ಮಾರಕಗಳು, ಕಲಾಕೇಂದ್ರಗಳು, ವಸ್ತುಸಂಗ್ರಾಹಲಯಗಳು, ಕ್ಯಾಪಿಟಾಲ್ ಭವನ ಈ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ, ಸವಿದಿರುವುದಲ್ಲದೆ ಅಮೇರಿಕನ್ ಸರಕಾರದಿಂದ ದೊರೆತ ಒಳ್ಳೆಯ ಅತಿಥ್ಯದ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

[illegible]

ಈ ಪ್ರವಾಸಕಥನದ ಮೂಲಕ ಲೇಖಕರು ಉತ್ತಮ ವಾಗ್ಮಿಗಳೆಂದು ಕಂಡುಬರುತ್ತದೆ. ಅಮೇರಿಕನ್ನರ ವೇದನೆ, ಸಂವೇದನೆಗಳನ್ನು ವಿನೂತನವಾಗಿ ಚಿತ್ರಿಸಿದ್ದಾರೆ. ತಮ್ಮ ಪಾಕಶಾಸ್ತ್ರವನ್ನು ಬಿಟ್ಟು ಯಾವುದೇ ಸಂದರ್ಭದ ಅನುಭವವನ್ನು ವೈಭವೀಕರಿಸದೆ ಸಹಜವಾಗಿ, ಯಥಾರ್ಥವಾಗಿ ನಿರೂಪಿಸಿದ್ದಾರೆ.

**ಮತ್ತೊಮ್ಮೆ ಅಮೇರಿಕಾ ಪ್ರವಾಸ – ಡಾ. ಜೀವಿ ಕುಲಕರ್ಣಿ :** 'ಮತ್ತೋಮ್ಮೆ ಅಮೇರಿಕಾ ಪ್ರವಾಸ' ಇದು ಲೇಖಕರ ಎರಡನೇಯ ಪ್ರವಾಸಕಥನ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಲು ಆಮಂತ್ರಣ ಬಂದಿದ್ದರಿಂದ 2000 ಆಗಸ್ಟ ತಿಂಗಳಲ್ಲಿ ಅಮೇರಿಕಾ ಪ್ರವಾಸ ಕೈಗೊಂಡಿದ್ದರು. ಆ ಅನುಭವಗಳನ್ನು ಹಂಚಿಕೊಂಡ ಪ್ರವಾಸಕಥನವೇ 'ಜೀವಿ ಕಂಡ ಅಮೇರಿಕ'. ಈ ಪುಸ್ತದಕ ಬಿಡುಗಡೆ ಎರಡನೆ ವಿಶ್ವ ಸಮ್ಮೇಳನದಲ್ಲಿ ನಡೆಯುವ ಪ್ರಯುಕ್ತ ಸಮ್ಮೇಳನದ ಸಂಘಟಕರಿಂದ ಆಮಂತ್ರಣ ಬಂದಿದ್ದರಿಂದ ನಿಯೋಗಿಯಾಗಿ ಪ್ರವಾಸ ಕೈಗೊಂಡಿದ್ದಾರೆ. ಮೊದಲನೇ ಸಮ್ಮೇಳನದಲ್ಲಿ ಅತಿಥಿಯಾದರೆ ಎರಡನೇ ಸಮೇಳದಲ್ಲಿ ಪ್ರೇಕ್ಷಕರಾಗಿದ್ದಾರೆ.

ಇವರ ಎರಡನೇ ಪ್ರವಾಸದ ಉದ್ದೇಶ 'ಅಮೇರಿಕಕ್ಕಾಗೆ ಕರೆಯಿಸಿಕೊಳ್ಳುವ ಮಗನ ಆಸೆ - ಈಡೇರಿಸುವುದರ ಜೊತೆಗೆ ಎರಡನೇಯ ವಿಶ್ವ ಕನ್ನಡ ಸಮ್ಮೇಳನವನ್ನು ವೀಕ್ಷಿಸುವುದು. ಇನ್ನೊಂದು; ಪ್ರಥಮ ಪ್ರವಾಸದಲ್ಲಿ ಬಿಟ್ಟು ಹೋದ ಎರಡು ಸ್ಥಳಗಳಿಗೆ ಭೇಟಿ ಕೊಡುವುದು. ಆ ಸ್ಥಳಗಳೆಂದರೆ: 1. ನ್ಯೂಯಾರ್ಕ್‌ನ ಆಕರ್ಷಣೆಯಾದ 'ಟವರ್ ಆಫ್ ಲಿಬರ್ಟಿ' ಮತ್ತು 'ಎಂಪಾಯರ್ ಸ್ಟೇಟ್ ಬಿಲ್ಡಿಂಗ್'. 2. ಲಾಸ್ ಎಂಜಲಿಸ್‌ನ ಯುನಿವಸಲ್ ಸ್ಟುಡಿಯೊ/ಹಾಲಿವುಡ್ ಮತ್ತು ಡಿಸ್ನಿಲ್ಯಾಂಡ್ ಇವುಗಳನ್ನು ನೋಡುವುದು.

ಇದೊಂದು ದಿನಚರಿ ರೂಪದ ಪ್ರವಾಸಕಥನವಾಗಿದೆ. ಅಮೇರಿಕೆಯಲ್ಲಿದ್ದ ತಮ್ಮ ಪ್ರತಿದಿನದ ಆಗು–ಹೋಗುಗಳನ್ನು ಸಂದರ್ಭೋಚಿತವಾಗಿ ಭಾರತ ಮತ್ತು ಅಮೇರಿಕಾದ ಸ್ಥಿತಿಗತಿಗಳನ್ನು ತುಲನಾತ್ಮಕವಾಗಿ ವಿವರಿಸಿದ್ದಾರೆ.

ಡೆಟ್ರಾಯಿಟ್‌ನಲ್ಲಿ ನಡೆದ ಎರಡನೇ ವಿಶ್ವ ಕನ್ನಡ ಸಮ್ಮೇಳನವನ್ನು ಮೊದಲನೇ ವಿಶ್ವ ಕನ್ನಡ ಸಮ್ಮೇಳನದೊಂದಿಗೆ ಹೋಲಿಸುತ್ತಾ ಬರೆದಿದ್ದಾರೆ. ಎರಡನೇ ವಿಶ್ವ ಕನ್ನಡ ಸಮ್ಮೇಳನಕ್ಕೆ 'ಅಕ್ಕ' ಸಂಸ್ಥೆಯೊಂದಿಗೆ ಇತರ ಕನ್ನಡ ಸಂಘ ಸಂಸ್ಥೆಗಳು, ಸಮ್ಮೇಳನ ಯಶಸ್ವಿಯಾಗಲು ಸಾಕಷ್ಟು ದುಡಿದಿವೆ ಎಂದು ತಿಳಿಸುತ್ತಾ

ಕನ್ನಡಿಗರ ಸರ್ವತೋಮುಖ ಬೆಳವಣಿಗೆಗಾಗಿ ಅಕ್ಕ ಸಂಸ್ಥೆ ಹಾಕಿಕೊಂಡ ಧ್ಯೇಯೋದ್ದೇಶಗಳನ್ನು ಕಾರ್ಯಕ್ರಮಗಳನ್ನು ಸಹ ತಿಳಿಸಿದ್ದಾರೆ. ಈ ಸಮ್ಮೇಳನ್ನಕ್ಕೆ ಪಾಲ್ಗೊಂಡಿದ್ದ ಸಚಿವೆ ರಾಣಿ ಸತೀಶ್, ಖ್ಯಾತಕವಿ ನಿಸಾರ್ ಅಹಮದ್‌ರ ಭಾಷಣವನ್ನು ಪ್ರಸ್ತಾಪಿಸಿರುದರೊಂದಿಗೆ ಇದೇ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಪಾಲ್ಗೊಳ್ಳದಿದ್ದರೂ ಅವರ ಭಾಷನ ಸ್ಕ್ರೀನಿನಲ್ಲಿ ಕಾಣಿಸಿಕೊಂಡದ್ದನ್ನು ತಿಳಿಸಿದ್ದಾರೆ. ಅಲ್ಲಿನ ಮನರಂಜನಾ ಕಾರ್ಯಕ್ರಮಗಳನ್ನು ವಿವರಣೆಯನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಹೊರತರಲಾದ ಸ್ಮರಣ ಸಂಚಿಕೆ 'ಸ್ಪಂದನ'ದ ಕೆಲವು ಲೇಖನಗಳನ್ನು ಮೆಚ್ಚಿಕೊಂಡಿರುವುದಲ್ಲದೆ ಅಲ್ಲಿನ ಕೆಲವು ಗುಣ ದೋಷಗಳನ್ನು ಎತ್ತಿತೋರಿಸಿವ ಮೂಲಕ ಈ ಸಂಚಿಕೆಗೆ ಕನ್ನಡಿ ಹಿಡಿದಂತಾಗಿದೆ.

ಫಿಲೆಡೆಲ್ಫಿಯಾ ಮತ್ತು ಮಿನಿಯಾ ಪೊಲೀಸಿಯಾ ಮೊದಲಾದೆಡೆಗಳಲ್ಲಿ ಲೇಖಕರು ಯೋಗ ಶಿಬಿರಳನ್ನು ನಡೆಸಿಕೊಡುವಾಗ ಪರಿಚಿತರಾದ ಅಂತರಾಷ್ಟ್ರೀಯ ಖ್ಯಾತಿಯ ಯೋಗ ಶಿಕ್ಷಕಿ ವಾಸಂತಿ ಭಟ್ಟರನ್ನು ಭೇಟಿಯಾಗಿದ್ದ ಸಂದರ್ಭಗಳನ್ನು ನೋಡಿದಾಗ ಲೇಖಕರಿಗೆ ಯೋಗದ ಬಗ್ಗೆ ಇದ್ದ ಜ್ಞಾನದಾಹ, ಪ್ರಧಾನ ಕಾಳಜಿಯು ಅರಿವಾಗುವುದರೊಂದಿಗೆ ಲೇಖಕರ ಪ್ರವಾಸಾನುಭವದಲ್ಲಿ ಎಲ್ಲೆಡೆ ಯೋಗವನ್ನು ಕಲಿಸುತ್ತಾ, ಸಾಧ್ಯವಾದೆಡೆಗಳಲ್ಲಿ ಕಲಿಯುತ್ತಾ; ಒಟ್ಟಾರೆ ಪ್ರವಾಸದ ತುಂಬಾ ಯೋಗಾಭ್ಯಾಸ ಹಾಸುಹೊಕ್ಕಾಗಿರುದನ್ನು ಕಾಣಬಹುದು.

ಅಮೇರಿಕದಲ್ಲಿ ನೆಲೆಸಿರುವ ಕನ್ನಡಿಗರು ಭಾರತೀಯ ಸಂಸ್ಕೃತಿಯ ರಾಯಭಾರಿಗಳು ಅವರು ತಮ್ಮ ಸ್ವಂತಿಕೆಯನ್ನು, ಕನ್ನಡತನವನ್ನು ಕಾಪಾಡಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿಸುತ್ತಾ, ಅಮೇರಿಕಾದಲ್ಲಿನ ಕನ್ನಡದ ವಿಕಾಸದ ಹೆಜ್ಜೆಗಳನ್ನು ಗುರುತಿಸಿದ್ದಾರೆ. ಕನ್ನಡ ಕೂಟಗಳ ಉಗಮ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೂ; ಕನ್ನಡ ಸಮ್ಮೇಳನಗಳು, ಸಂಘಟನೆಗಳು ತನ್ಮೂಲಕ ಕನ್ನಡತನವನ್ನು ಕಾಪಾಡಿಕೊಳ್ಳಲು ಹಂಬಲಿಸುತ್ತಿದ್ದಾರೆಂಬುದನ್ನು ಸೂಚಿಸುತ್ತಾರೆ. ಅಮೇರಿಕನ್ನಡಿಗರ ಈ ಶ್ರಮ ಶ್ರದ್ಧೆಯನ್ನು ನೆನೆಸಿಕೊಂಡಾಗ ಸ್ವಭಾವಿಕವಾಗಿಯೇ ಅವರ ಬಗ್ಗೆ ಕೃತಜ್ಞತೆ ಗೌರವಗಳುಂಟಾಗುತ್ತವೆನ್ನುತ್ತಾರೆ.

ಲೇಖಕರು ಅಮೇರಿಕದ ಪ್ರೇಕ್ಷಣೀಯ ಸ್ಥಳಗಳಿಗಿಂತಲೂ ಹೆಚ್ಚಾಗಿ ವ್ಯಕ್ತಿಗಳ ಭೇಟಿಗೆ ಮಹತ್ವವನ್ನು ಕೊಟ್ಟಿದ್ದಾರೆ. ಪ್ರವಾಸದುದ್ದಕ್ಕೂ ಹೀಗೆ ಮೂಖಾಮುಖಿಯಾದ ಅನುಭವಗಳನ್ನು ಚಿತ್ರಿಸಿದ್ದಾರೆ. ಇದರಿಂದ ಲೇಖಕರು ವ್ಯಕ್ತಿ-ಸಮಾಜದೊಂದಿಗೆ ಹೊಂದಿದ್ದ ಸಂಬಂಧದ ಸ್ವರೂಪವನ್ನು ತಿಳಿಯಬಹುದು.

## ಗಗನ ಸಖಿಯರ ಸೆರಗ ಹಿಡಿದು – ನಾಗೇಶ ಹೆಗಡೆ :

ಲೇಖಕರ ಪತ್ನಿ ಗಗನಸಖಿಯಾಗಿದ್ದು, ಅವರ ಉಚಿತ ಟಿಕೆಟ್‌ನಲ್ಲಿ ಯೂರೋಪ್ ಅಮೇರಿಕಾ ಪ್ರವಾಸ ಕೈಗೊಂಡು ಪರಿಸರ ಶಿಕ್ಷಾರ್ಥಿಯಾಗಿ ಎಲ್ಲ ವಿದ್ಯಮಾನಗಳನ್ನು ಕಂಡು ಅಲ್ಲಿ ತಮಗಾದ ಅನುಭವವನ್ನು ವಿನೋದ ಮಿಶ್ರಿತ ಶೈಲಿಯಲ್ಲಿ ಚಿತ್ರಿಸಿದ್ದಾರೆ.

ಈ ಪ್ರವಾಸಕಥನದಲ್ಲಿ ಯೆಲ್ಲೋಸ್ಟೋನ್ ಪಾರ್ಕ, ಓಹ್! ಕ್ಯಾಲಿಪೋರ್ನಿಯಾ, ಅಮರ ಮರಗಳ ನೆರಳಿನಲ್ಲಿ, ಕೊಳ್ಳೆಗಾಲ್ ಮೆಮೋರಿಯಲ್, ಅಮೇರಿಕಾದಲ್ಲಿ ಭೂತಾರಾಧನೆ, ಗಗನ ಸಖಿಯರ ಸೆರಗ ಹಿಡಿದು ಈ ಉಪಶೀರ್ಷಿಕೆಗಳ ಅಧ್ಯಾಯಗಳಲ್ಲಿ ಅಮೇರಿಕಾ ಪ್ರವಾಸದ ಅನುಭವಗಳನ್ನು ನೋಡಬಹುದು.

ಲೇಖಕರು ಯೆಲ್ಲೋಸ್ಟೋನ್ ಪಾರ್ಕನ ಬಗ್ಗೆ ಮೆಚ್ಚಿಕೊಂಡು ಜಗತ್ತಿನಲ್ಲಿ ಇಂಥ ಸ್ಥಳ ಬೇರೊಂದಿಲ್ಲ ಎನ್ನುತ್ತಾರೆ. ಅಮೇರಿಕದ ವಯೋಮಿಂಗ್, ಇಡಾಹೊ ಹಾಗೂ ಮೊಂಟಾನಾ ಈ ಮೂರು ರಾಜ್ಯಗಳಲ್ಲಿ ಈ ಉದ್ಯಾನ ಪಸರಿಸಿದೆ. ಇದು ಬಿಸಿ ಬುಗ್ಗೆಗಳ ತಾಣಗಳಲ್ಲಿ ಅತಿಥಿ ಸೇವಾ ಕೇಂದ್ರಗಳು ಇರುತ್ತವೆ. ಅವು ಸರಕಾರದ ನೆರವಿನಿಂದ ಪ್ರತಿವರ್ಷವೂ ಅನೇಕ ವಿದೇಶಿ ತಂಡಗಳನ್ನು ಆಮಂತ್ರಿಸಿ ಸ್ವಯಂಪ್ರೇರಿತರಾಗಿ ತಮ್ಮ ರಾಷ್ಟ್ರದ ಪರಿಚಯ ಮಾಡಿಸುವ ಪದ್ಧತಿ ಇದೆ ಎಂದು ತಿಳಿಸುವಲ್ಲಿ ಅವರ ರಾಷ್ಟ್ರಾಭಿಮಾನದ ಬಗ್ಗೆ ಲೇಖಕರಿಗೆ ಪ್ರೀತಿ ವಿಶ್ವಾಸ ಇದ್ದು ನಮ್ಮಲ್ಲಿ ಇದರ ಕೊರತೆಯಿರುವುದರಿಂದ ಬೇಸರವಿರುವುದು ಕಂಡುಬರುತ್ತದೆ. ಮೋಡಿನಾಡು ಗ್ರಾಂಡ್ ಕಾನ್ಯನ್, ಮ್ಯಾಮಲ್ ಬಿಸಿ ಬುಗ್ಗೆಯ ಉದ್ಯಾನ, ಫೌಂಟನ್ ಪೇಂಟ್ ಪಾಟ್ಸ್ ಅಥವಾ ಬಣ್ಣದ ಕುಡಿಕೆಗಳ ಕಾರಂಜಿ ಲೋಕ ಈ ಮೊದಲಾದ ಪ್ರೇಕ್ಷಣೀಯ ಸ್ಥಳಗಳ ಕುರಿತ ವಿವರಣೆ ಅರ್ಥಪೂರ್ಣವಾಗಿದೆ.

"ಒಂದರ ಪಕ್ಕ ಒಂದರಂತೆ ಹತ್ತೋ, ಹನ್ನೆರಡೋ ಚಿಕ್ಕ ದೊಡ್ಡ ಕೆರೆಗಳಿದ್ದವು. ನೀಲಿ, ಹಳದಿ, ನಸುಗೆಂಪು, ಹಸಿರು, ಗುಲಾಬಿ– ಒಂದೊಂದು ಕೆರೆಗೆ ಒಂದೊಂದು ಬಣ್ಣದ ನೀರು ತುಂಬಿತ್ತು. ಮಧ್ಯೆ ಕೆಲವಕ್ಕೆ ಕಾರಂಜಿ, ಕೆಲವಕ್ಕೆ ಲಾಳಿಕೆಯ ಹಾಗೆ ಹೊಕ್ಕಳಲ್ಲಿ ತೂತು, ಕೆಲವು ಕೆರೆಗಳಿಗೆ ಎರಡು ಮೂರು ಬಣ್ಣ, ಮಧ್ಯೆ ತಿಳಿನೀಲಿ, ಸುತ್ತ ಹಸಿರು, ಅಂಚಿನಲ್ಲಿ ಚಿನ್ನದ ಬಣ್ಣ", ಎಂದು ಪ್ರಕೃತಿಯೇ ಇಲ್ಲಿ ಕಲಾವಿದನ ಕುಂಚವಾಗಿದಂತೆ ಇದೆ ಏನೋ ಎಂಬ ಪ್ರಶ್ನಾರ್ಥಕ ಭಾವನೆ ಲೇಖಕರಲ್ಲುಂಟಾಗಿದೆ. ಲೇಖಕರ ಪ್ರಕೃತಿಯ ವರ್ಣನೆ ವಿಸ್ಮಯದೊಂದಿಗೆ ಬೆಚ್ಚನೆಯ ಅನುಭವವನ್ನು ನೀಡುತ್ತದೆ.

ಅಮೇರಿಕದ 'ಚಿನ್ನದ ರಾಜ್ಯ' ಎಂದೇ ಹೆಸರಾದ ಕ್ಯಾಲಿಪೋರ್ನಿಯಾದ ದಂತಕಥೆ. ಈ ಹೆಸರಿಗೆ ಕಾರಣಗಳನ್ನು ತಿಳಿಸುತ್ತಾರೆ. "ಗುಡ್ಡ ಕಣಿವೆಗಳ ಮಧ್ಯೆ ಮುಂಜಾನೆಯ ಸೂರ್ಯನ ಬೆಳಕಿನಲ್ಲಿ ನದಿ ನೀರು, ಚಿನ್ನದ ಬಣ್ಣದಲ್ಲಿ ಮಿರುಗುತ್ತಿತ್ತು. ಒಂದೂವರೆ ಶತಮಾನದ ಹಿಂದೆ ಇಲ್ಲಿನ ನದಿ ತೀರಗಳಲ್ಲಿ ಅಪ್ಪಟ ಚಿನ್ನದ ಪುಡಿ ಸಿಗುತ್ತದೆಂದು" ಪ್ರತೀತಿ ಇದೆ ಎಂದು ತಿಳಿಸುತ್ತಾರೆ. ಕ್ಯಾಲಿಪೋರ್ನಿಯದಲ್ಲಿ ಚಿನ್ನಕ್ಕಾಗಿ ಮತ್ತು ಚಿನ್ನದಷ್ಟೇ ಬೆಲೆಬಾಳುವ ನಾಟಾಗಳಿಗೆ ನಡೆದ ನುಗ್ಗಾಟದಲ್ಲಿ ಬಹಳಷ್ಟು ಅರಣ್ಯ ನೆಲಸಮವಾಯಿತು ಇದಕ್ಕೆ ಅಲ್ಲಿನ ಪರಿಸರ ಪ್ರೇಮಿಗಳ ಸಂಘ ಸಂಸ್ಥೆಗಳು ಉಗ್ರ ಹೋರಾಟವನ್ನು ಮಾಡಿವೆ. ಕಾಡಿಗೆ ನುಗ್ಗಿದ ಕ್ರೇನ್‌ಗಳ ವಿರುದ್ಧ ಕುರುಕ್ಷೇತ್ರ ಕೈಗೊಂಡುದಿದ್ದಾರೆ. "ವಿಜ್ಞಾನಿಗಳೂ ಒಣಮರಗಳ ಸಾಗಣೆಯತ್ತ ವಾಲುತ್ತಿದ್ದಾಗ, ಪರಿಸರ ಸಂಸ್ಥೆಗಳಲ್ಲಿ 'ಬಿಗ್ ಗ್ರೀನ್' ಎಂಬ ಒಕ್ಕೂಟ ಮಾಡಿಕೊಂಡು 'ರೆಡ್‌ವುಡ್' ಅರಣ್ಯಗಳ ಭವಿಷ್ಯದ ನಿರ್ಧಾರ ಮಾಡಲು ಮತದಾನ ನಡಸಬೇಕೆಂದು ಸರಕಾರವನ್ನು ಒತ್ತಾಯಿಸಿವೆ" ಎಂದು ತಿಳಿಸುತ್ತಾರೆ. ಇಲ್ಲಿ ಅಮೇರಿಕನ್ನರು ಪ್ರಾಕೃತಿಕ ಪ್ರಜ್ಞೆ ಇಟ್ಟುಕೊಂಡು ಮುಂದುವರೆಯುತ್ತಿರುವ ಅವರ ಚಿಂತನಾಕ್ರಮವನ್ನು ಗ್ರಹಿಸಬಹುದು.

ಕ್ಯಾಲಿಪೋರ್ನಿಯಾ ರಾಜ್ಯದ ಲಾಸ್ ಏಂಜಲೀಸ್ ಬಿಟ್ಟರೆ ಅತ್ಯಂತ ದೊಡ್ಡ ನಗರ 'ಸ್ಯಾನ್ ಫ್ರಾನ್‌ಸಿಸ್ಕೊ', ಸ್ಯಾನ್ ಫ್ರಾನ್‌ಸಿಸ್ಕೊ ಭೂಕಂಪನಗಳ ಕೇಂದ್ರಬಿಂದು ಎಂಬ ಖ್ಯಾತಿಯ ಜೊತೆಗೆ ಸಲಿಂಗ ಕಾಮಿಗಳ ರಾಜಧಾನಿ ಎಂಬ ಖ್ಯಾತಿಯೂ ಇದೆ ಎಂದು ತಿಳಿಸುತ್ತಾರೆ. ಇದಕ್ಕೆ ಏಡ್ಸ್ ರೋಗದ ಕೇಂದ್ರ ಸ್ಥಳ ಎಂಬ ಅಪಖ್ಯಾತಿಯೂ ಇದೆ ಎನ್ನುತ್ತಾರೆ. ಇಲ್ಲಿ ಪ್ರತಿವರ್ಷ 'ಗೇ ಪ್ರೈಡ್ ವೀಕ್' ಎಂಬ ಹೆಸರಿನಲ್ಲಿ ಒಂದಿಡೀ ವಾರ ಕುಂಭಮೇಳ ನಡೆಯುತ್ತಿದ್ದು ಈ ಮೇಳಕ್ಕೆ ಲಕ್ಷಾಂತರ ಪ್ರತಿನಿಧಿಗಳು ಬರುತ್ತಾರೆ. ಇಲ್ಲಿ ಏಡ್ಸ್ ರೋಗದ ಕುರಿತು ಎಷ್ಟೇ ಎಚ್ಚರಿಕೆಯ ಘೋಷಣೆ, ಮೆರವಣಿಗೆ ಮಾಡಿದ್ದರೂ ಲಾಭವಿಲ್ಲ ಸಾವಿರಾರು ಜನರು ಈ ರೋಗಕ್ಕೆ ಬಲಿಯಾಗಿದ್ದರೂ ಅಲ್ಲಿನ ಸರ್ಕಾರ, ವಿಜ್ಞಾನಿಗಳಾಗಲೀ ಏನೂ ಮಾಡುತ್ತಿಲ್ಲವೆಂದು, ಜನರೇ ಹೋರಾಟಕ್ಕೆ ಮುಂದಾಗಿದ್ದಾರೆಂದು ಲೇಖಕರು ತಿಳಿಸುತ್ತಲೇ ಈ ರೋಗಪೀಡಿತ ಸಾಮಾಜಿಕ ವ್ಯವಸ್ಥೆಯೊಂದು ಬದಲಾಗಲಿ ಎಂಬ ಕಳವಳ ವ್ಯಕ್ತವಾಗುತ್ತದೆ. ಈ ರೋಗಕ್ಕೆ ಬಲಿಯಾದವರ ಅಂಕಿ–ಅಂಶದ ವಿವರಗಳನ್ನು ನೀಡುವ ಮೂಲಕ ನಮ್ಮನ್ನು ಬೆಚ್ಚಿಬೀಳಿಸುತ್ತಾರೆ.

"ಬಂಡವಾಳಶಾಹಿ ಜಗತ್ತಿನ ರಕ್ಷಣೆಯ ಹೊಣೆ ಹೊತ್ತ ಅಮೇರಿಕ ತನ್ನ ಶಸ್ತ್ರಾಸ್ತ್ರಗಳ ಖಜಾನೆಯನ್ನು ವೀಕ್ಷಕರಿಗೆ ತೋರಿಸುತ್ತಿತ್ತು. ಏಕಕಾಲಕ್ಕೆ ಹದಿನೈದು ದಿಕ್ಕುಗಳಲ್ಲಿ ಪರಮಾಣು ಬಾಂಬ್ ಚಿಮ್ಮಿಸಬಲ್ಲ

'ಟ್ರೈಡೆಂಟ್' ಸಿಡಿತಲೆ ಕ್ಷಿಪಣಿಗಳ ಹಾಗೂ ಪೇಟ್ರಿಯಾಟ್‌ನಂಥ ವಿರಾಟ್ ಶಸ್ತ್ರಗಳ ಪ್ರದರ್ಶನ ನಡೆಸುತ್ತಿತ್ತು". ಪುಟ 49. ಎಂದು ಲೇಖಕರು ವಿನಾಶಕಾರಿ ಶಸ್ತ್ರಾಸ್ತ್ರಗಳ ಆವಿಷ್ಕಾರದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ 'ಈ ಟ್ರೈಡೆಂಟ್‌ಗಳನ್ನು ನೋಡಿದಾಗ ಮಾನವ ಮಿದುಳಿನ ವಿರಾಟ್ ಶಕ್ತಿಯ ಅರಿವಾಗುತ್ತದೆ; ಅಂಥ ಪ್ರಚಂಡ ಬುದ್ಧಿಶಕ್ತಿಯನ್ನು ಟ್ರೈಡೆಂಟ್‌ನಂಥ ವಿನಾಶಕಾರಿ ಶಸ್ತ್ರ ನಿರ್ಮಾಣಕ್ಕೆ ಬಳಸುವ ಈ ಮೂರ್ಖ ಪ್ರಾಣಿಯ ಬಗ್ಗೆ ಅನುಕಂಪ ಮೂಡುತ್ತದೆ ಎಂದು ಟರ್ನರ್ ಹೇಳಿದ ಮಾತು ನೆನಪಿಗೆ ಬರುತ್ತಿತ್ತು"[9] ಎಂದು ಲೇಖಕರು ಟರ್ನರ್‌ನ ಮಾತುಗಳು ನೆನಪಿಸಿಕೊಳ್ಳುತ್ತಾ ಮಾನವೀಯತೆಯ ಕೊರತೆಯನ್ನು ಎತ್ತಿ ತೋರಿಸಿದ್ದಾರೆ.

ಅಮರ ಮರಗಳ ನೆರಳಿನಲ್ಲಿ ಎನ್ನುವ ಉಪಶೀರ್ಷಿಕಾಧ್ಯಾದಲ್ಲಿ ವಿವಿಧ ಬಗೆಯ ಸಸ್ಯ ಸಂಪನ್ಮೂಲಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಕ್ಯಾಲಿಫೋರ್ನಿಯಾದಲ್ಲಿ ರೆಡ್‌ವುಡ್ ಕಾಡು, ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಗೋಲ್ಡನ್ ಗೇಟ್ ಉದ್ಯಾನವನ ದಾಟಿದರೆ 'ಮುಯಿರ್ ವುಡ್' ಎಂಬ ದೈತ್ಯ ವೃಕ್ಷಗಳ ಅರಣ್ಯ, ಗಿನ್ನಿಸ್ ದಾಖಲೆಯಾದ ಚಿರಸ್ಥಾಯಿ ವೃಕ್ಷ 'ಜನರಲ್ ಶರ್ಮನ್' ಇದು ಮೂವತ್ತೇಳು ಅಡಿ ವ್ಯಾಸ ಗಾತ್ರದ, 79.8 ಅಡಿ ಸುತ್ತಳತೆ ಇದೆ ಎಂದಿದ್ದಾರೆ. 'ಆನರಲ್ ಗ್ರಾಂಡ್ ಟ್ರೀ' ಅಂದರೆ ಅಮೇರಿಕಾದ ರಾಷ್ಟ್ರೀಯ 'ಕ್ರಿಸ್‌ಮಸ್ ಟ್ರೀ' 'ಜನರಲ್ ಲೀ' ವೃಕ್ಷಗಳು, ಹೀಗೆ ಮೊದಲಾದ ವೃಕ್ಷಗಳ ವಿಶೇಷತೆ, ಅವುಗಳ ಆಯುಷ್ಯ, ಸಸ್ಯತಜ್ಞರ ಸಂಶೋಧನೆಯನ್ನು ಲೇಖಕರು ಸೊಗಸಾಗಿ ತಿಳಿಸಿಕೊಡುತ್ತಾರೆ.

ಅಮೇರಿಕೆಯ ಜನ ತಲೆ ತಗ್ಗಿಸಿ ಹೇಳುವ ಸ್ಮಾರಕ 'ವಿಯೆಟ್ನಾಂ ಮೆಮೋರಿಯಲ್', ಅದರ ಕರಾಳ ಚರಿತ್ರೆಯ ವಿವರವನ್ನು ಲೇಖಕರು ಚಿತ್ರಿಸಿದ್ದಾರೆ. ವಿಯಟ್ನಾಂನಲ್ಲಿ 1955 ರಿಂದ 1975ರವರೆಗೆ ಸತತ ಇಪ್ಪತ್ತು ವರ್ಷಗಳ ಕಾಲ ಹೋರಾಟ ನಡೆಸಿ ಅಮೇರಿಕ ಕೊನೆಗೂ ಯಶ ಗಳಿಸಲಾಗದೇ ಸೋತು ಹಿಮ್ಮೆಟ್ಟಿದ್ದು ಈ ಮಹಾನ್ ದೇಶಕ್ಕೆ ಎಂದೂ ಮರೆಯಲಾಗದ ಮುಖಭಂಗ. ಆ ಸತತ ಯುದ್ಧದಲ್ಲಿ ಅಂದಾಜು 200,000,000,000 ಡಾಲರ್ ವೆಚ್ಚವಾಯಿತು. ಅಮೇರಿಕದ ಸುಮಾರು ಅರವತ್ತು ಸಾವಿರ ಯೋಧರು ಮಡಿದರು. ಚುರುಕು ಬುದ್ಧಿಯ ಅನುಕೂಲಸ್ಥ ಕುಟುಂಬದ ಹುಡುಗರು ಕಾಲೇಜಿನಲ್ಲಿ ಓದಲು ಹೋದರೆ, ದಡ್ಡರನ್ನೂ, ದನಿ ಇಲ್ಲದವರನ್ನೂ, ಹುಂಬರನ್ನೂ ಹುರಿದುಂಬಿಸಿ ವಿಯೆಟ್ನಾಂ ರಣಭೂಮಿಗೆ ಕಳಿಸಲಾಯಿತು. ಯುದ್ಧ ಕೊನೆಗೂ ಕೊನೆಗೊಂಡಾಗ ಅಮೇರಿಕದ ಪ್ರಜೆಗಳ ಪಾಲಿಗೆ ಕಹಿ ನೆನಪು ಮಾತ್ರ ಉಳಿಯಿತು"[10] ಎಂದು ಲೇಖಕರು ಯುದ್ಧದ ದುಷ್ಪರಿಣಾಮದ

ಬಗ್ಗೆ ತಿಳಿಸುತ್ತಾ ಈ ಕರಾಳ ಚರಿತ್ರೆಯ ಸ್ಮಾರಕ ನಿರ್ಮಿಸಲು ಅಮೇರಿಕ ಸರ್ಕಾರ ಮುಂದಾಗದ ಸಂದರ್ಭದಲ್ಲಿ ಬದುಕಿ ಬಂದ ಮಾಜಿ ಯೋಧರು ಒತ್ತಾಯ ಪಡಿಸಿದಾಗ ಒಪ್ಪಿಕೊಂಡ ಸರ್ಕಾರ ಸ್ಮಾರಕ ನಿರ್ಮಾಣಕ್ಕೆ ಗ್ರಾನೈಟ್ ಕಲ್ಲುಗಳನ್ನು ಕರ್ನಾಟಕದ ಕೊಳ್ಳೇಗಾಲದ ಕಾಡಿನಿಂದ ತಂದಿದ್ದು ಎಂಬ ಐತಿಹಾಸಿಕ ವಿವರವನ್ನು ಉಲ್ಲೇಖಿಸಿದ್ದಾರೆ. ಯುದ್ಧದಿಂದ ಕೇವಲ ಅಮೇರಿಕಾ ವಿಯೆಟ್ನಾಂ ಮಾತ್ರವಲ್ಲದೆ ಕೊಳ್ಳೇಗಾಲ ಕೂಡಾ ಬಲಿಯಾಗಿದೆ ಎಂದು, ಒಬ್ಬ ಪರಿಸರ ಪ್ರೇಮಿ, ಪರಿಸರ ವಾದಿಯ ಆತಂಕವನ್ನು ವ್ಯಕ್ತಪಡಿಸುತ್ತಾರೆ.

ಈ ಪ್ರದೇಶದಲ್ಲಿ "ಗ್ರಾನೈಟ್ಗಾಗಿ ಕಾಡನ್ನು ಧ್ವಂಸ ಮಾಡಿ, ಡೈನ್‌ಮೆಟ್ ಸಿಡಿಸಿ, ವನ್ಯಜೀವಿಗಳನ್ನು ಓಡಿಸಿ, ನೀರಿನ ಸೆಲೆಯನ್ನು ಬತ್ತಿಸಿ, ಕಲ್ಲಿನ ಚಕ್ಕೆ ಚೂರುಗಳನ್ನು ಅಲ್ಲೇ ಚಲ್ಲಾಪಿಲ್ಲಿ ಮಾಡಿ ಇಲ್ಲಿ ತಂದು ಪಾಲಿಶ್ ಮಾಡಿದ್ದಾರೆ. ಅಲ್ಲಿ ನಮ್ಮೂರಿನಲ್ಲಿ ಬಂಡೆಯಡಿ ಸಿಕ್ಕಿ ಸತ್ತ ಕೂಲಿನಾಲಿಗಳ ಲೆಕ್ಕ ಯಾರೂ ಇಟ್ಟಿಲ್ಲ. ದೂಳು, ಕೆಮ್ಮು, ದಮ್ಮು, ಕ್ಷಯರೋಗಕ್ಕೆ ಬಲಿಯಾದವರ ಲೆಕ್ಕ ಇಟ್ಟಿಲ್ಲ. ಬಾಂಬ್ ದಾಳಿಗೆ ತುತ್ತಾದ ವಿಯಟ್ನಾಮಿನ ಅರಣ್ಯಗಳ ಹಾಗೆ ನಮ್ಮ ಊರಿನ ಅರಣ್ಯಗಳೂ ಈ ಸ್ಮಾರಕಗಳಿಗಾಗಿ ಭಗ್ನಗೊಂಡಿವೆ. ಅಸಂಖ್ಯ ಜೀವಜಂತುಗಳ ಬಲಿದಾನ ಆಗಿದೆ. ಅವುಗಳ ಸ್ಮರಣೆಗೆ ಒಂದು ಪುಟ್ಟ ಕಲ್ಲನ್ನು ಇಲ್ಲೇ ನೆಡಬೇಕಿತ್ತು"[11] ಎಂಬ ಲೇಖಕರ ಪ್ರಶ್ನಾರ್ಹತೆಯಲ್ಲಿ ಹೇಗೆ ಅಮೇರಿಕಾ, ಭಾರತ ಮತ್ತು ವಿಯೆಟ್ನಾಂಗಳ ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳು ಕೆಲವೇ ಕೆಲವರ ಪ್ರತಿಷ್ಠೆಗೆ ಆಹುತಿಯಾಗಿವೆ ಎಂಬ ತಮ್ಮ ಅಭಿಪ್ರಾಯವನ್ನು ವಸ್ತುನಿಷ್ಠ ವೈಚಾರಿಕತೆಯಿಂದ ನಿರೂಪಿಸಿದ್ದಾರೆಂಬುದನ್ನು ನೋಡಬಹುದು. ಅಲ್ಲದೆ ಕರ್ನಾಟಕದ ಸಮೃದ್ಧ ವನ್ಯ ಸಂಪತ್ತಿದ್ದ ಈ ಪ್ರದೇಶ ಬರಡಾಗಿರುವುದಕ್ಕೆ ಗಣಿಗಾರಿಕೆಯೊಂದಿಗೆ ವೀರಪ್ಪನ್ ನಂತಹವರಿಗೆ ಬಲಿಯಾಗಿದೆ ಎಂದು ಆಲೋಚಿಸುತ್ತಲೇ, ಪ್ರಸ್ತುತ ವ್ಯಾಪಕವಾಗಿ ಚರ್ಚೆಯಾಗುತ್ತಿರುವ ಗಣಿಗಾರಿಕೆ, ಪರಿಸರದ ವಿನಾಶ ಈ ಮೊದಲಾದವುಗಳ ಕುರಿತು ಪ್ರತಿಯೊಬ್ಬರೂ ಮನನ ಮಾಡಿಕೊಳ್ಳಬೇಕಾದ ಅಗತ್ಯಗಳ ಬಗ್ಗೆ ಗಮನ ಸೆಳೆಯುತ್ತಾರೆ.

ಅಮೇರಿಕಾದಲ್ಲಿ ಬೂತಾರಾಧನೆಯನ್ನು ಪ್ರತಿವರ್ಷ ಅಕ್ಟೋಬರ್ 31ರ ರಾತ್ರಿ ಮುಖವಾಡ ಧರಿಸಿ ಅವರು 'ಹಲ್ಲೋವಿನ್ ಡೇ' ಅಂದರೆ ಪ್ರೇತಗಳ ಹಬ್ಬ ಆಚರಿಸುತ್ತಾರೆ. ಇದಕ್ಕೆಂದು ವಿಶೇಷ ಸಿದ್ಧತೆ ಮಾಡಿಕೊಳ್ಳುತ್ತಾರೆ. ಆಧುನಿಕತೆಗೆ ತಕ್ಕಂತೆ ಈ ಆರಾಧನೆಯಲ್ಲಿರುವ ವಿಚಾರಗಳನ್ನು ಅದರ ಹಿಂದಿರುವ ಸಂಪ್ರದಾಯಿಕ ಕಟ್ಟುನಿಟ್ಟುಗಳು ಸುಧಾರಣೆಯಾಗಿವೆ ಎಂದು ತಿಳಿಸುತ್ತಾ, ಅದರಲ್ಲಿ ಇರುವ ಕಲೆಯನ್ನು ಬೆಳೆಸಬೇಕೆನ್ನುವ ವಿಚಾರವನ್ನು ಮುಂದಿಟ್ಟಿದ್ದಾರೆ.

ಒಟ್ಟಾರೆಯಾಗಿ ಲೇಖಕರು ಈ ಪ್ರವಾಸ ಕಥನದಲ್ಲಿ ಪ್ರಾಕೃತಿಕ ಪರಿಸರವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡಿರುವುದನ್ನು ಕಾಣಬಹುದು. ಅಮೇರಿಕವು ಸೇರಿದಂತೆ ಮನುಷ್ಯ ಹೇಗೆ ತನ್ನ ಎಲ್ಲೆ ಮೀರಿದ ಸ್ವಾರ್ಥ-ಲಾಲಸೆ, ಕುರುಡುತನ ಮೊದಲಾದವುಗಳಿಂದ ಆಗಾಧವಾದ ಪ್ರಕೃತಿ ಮೇಲೆ ಒಡೆತನ ಸ್ಥಾಪಿಸುವ ದುರಾಶೆಯಿಂದ ಅರಣ್ಯನಾಶ, ಜೀವಸಂತತಿಯ ನಾಶಗಳನ್ನು ಮಾಡುತ್ತಿದ್ದಾನೆ. ಪಂಚಭೂತಗಳ ದುರಾಕ್ರಮಣಗಳಿಂದ ಸಮತೋಲನವನ್ನು ಕೆಡಿಸುವುದಷ್ಟೇ ಅಲ್ಲದೆ ಮನುಷ್ಯ ಸಂಬಂಧಗಳು ಕ್ಷೀಣವಾಗುತ್ತಿರುವುದನ್ನು ವಿಚಾರ ಮಾಡಿದ್ದಾರ. ಮನುಷ್ಯ ನೆಮ್ಮದಿ ಮತ್ತು ಶಾಂತಿಯ ಬದುಕು ಕಳೆದುಕೊಳ್ಳುವುದಕ್ಕಿಂತ ಮುಂಚೆ, ಪ್ರಕೃತಿ ಎಂಬ ದೊಡ್ಡ ಸೃಷ್ಟಿಯ ಒಂದು ಸಣ್ಣ ಅಂಶವೇ 'ಮನುಷ್ಯ' ನೆಂದು ಅರಿತು, ಪರಿಸರವನ್ನು ಬದುಕಗೊಟ್ಟಾಗ ಮಾತ್ರ ತಾನೂ ಬದುಕಬಹುದೆಂಬುದನ್ನು ಜರೂರಾಗಿ ಮನಗಾಣಬೇಕು ಎನ್ನುವಂಥ ಪ್ರಕೃತಿ ಮತ್ತು ಮಾನವರ ಗುಣಸ್ವಭಾವಗಳನ್ನು ಚರ್ಚಿಸಿದ್ದಾರೆ.

**ಪರದೇಶಿಯಾದಾಗ – ಡಾ॥ಎಚ್.ಕೆ. ರಂಗನಾಥ್ :**

ಡಾ॥ಎಚ್.ಕೆ. ರಂಗನಾಥ್ ರಂಗಭೂಮಿ ಹಾಗೂ ಸಂಶೋಧನಾ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದವರು ಬಾನುಲಿ ಮಾಧ್ಯಮ ಮತ್ತು ರಂಗಮಾಧ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದವರು.

ಕಲಾಪ್ರಕಾರಗಳಲ್ಲಿ ಕೆಲವನ್ನು ಆಧರಿಸಿ ಆಧುನಿಕ ಪ್ರಚಾರ ಮಾಧ್ಯಮವನ್ನಾಗಿ ಬಳಸಬಹುದಾದ ಬಗ್ಗೆ ಅಧ್ಯಯನ ನಡೆಸಲು ಯುನೆಸ್ಕೋ ವತಿಯಿಂದ ಹೊರಟ ಲೇಖಕರು ಅಮೇರಿಕಾ, ಈಜಿಪ್ಟ್, ಇರಾನ್, ನೈಜೀರಿಯಾ, ಘಾನಾ, ರುಮೇನಿಯ, ಇಂಡೋನೇಶಿಯ, ಫಿಲಿಫೈನ್ಸ್ ದೇಶಗಳಿಗೆ ಭೇಟಿಯಿತ್ತಿದ್ದಾರೆ. ಪುಟ 73 ರಿಂದ 117ರವರೆಗೆ ಅಮೇರಿಕಾ ಪ್ರವಾಸದ ಅನುಭವಗಳನ್ನು ಈ ಪ್ರವಾಸಕಥನ ಒಳಗೊಂಡಿದೆ.

ಲಾಸ್ ಏಂಜಲೀಸ್‌ನಲ್ಲಿ ವಿದ್ಯಾರ್ಥಿಗಳಿಂದ ನಡೆದ ನಾಟಕ ಪ್ರದರ್ಶನದ ಬಗ್ಗೆ ಹೇಳುತ್ತಾ ಇಲ್ಲಿನ ರಂಗ ಕಲೆಗಳಲ್ಲಿ ಯಂತ್ರಗಳ ಪ್ರಾಬಲ್ಯವನ್ನು ಕುರಿತು ವಿವರಿಸುತ್ತಾರೆ. "ನೆರಳು-ಬಳಕುಗಳ ತಂತ್ರ, ಧ್ವನಿ ಸಂಯೋಜನೆ, ಸೂಕ್ತ ಶಬ್ದ ವಿಶೇಷಗಳ ಅಳವಡನೆ, ಆಶ್ಚರ್ಯವೆನಿಸುವಷ್ಟು ನಿಚ್ಚಳವಾಗಿ ಪ್ರದರ್ಶನದಲ್ಲಿ ಹಾಸುಹೊಕ್ಕಾಗಿದೆ. ಈ ಎಲ್ಲ ತಾಂತ್ರಿಕ ಸಾಧನೆ, ಸಿದ್ಧಿಗಳನ್ನು ಬಲು ಎಚ್ಚರದಿಂದ ಭಾವಿಸಿ, ನಿರ್ಮಿಸಿ, ನಿಯೋಜಿಸಿ, ಕಂಪ್ಯೂಟರ್ ವ್ಯವಸ್ಥೆಯ ಮೂಲಕ ಎಳೆಯಷ್ಟೂ ಅತ್ತಿತ್ತ ಆಗದಂತೆ ನಿಷ್ಕರ್ಷೆಯಾಗಿ

ನಿಗಧಿ ಮಾಡಿಟ್ಟುಬಿಟ್ಟಿದ್ದಾರೆ"[12] ನಟನೆಗಿಂತ ನಾಟಕದಲ್ಲಿ ರಂಗತಂತ್ರಕ್ಕೆ ಹೆಚ್ಚಿನ ಮಹತ್ವ ದೊರೆಯುತ್ತದೆ ಎನ್ನುತ್ತಾರೆ. ಕಲಾತಂತ್ರವನ್ನು ಅನುಸರಿಸಿ ನಟ, ನಟಿಯರು ಚಾಚೂ ತಪ್ಪದೆ, ಪೂರ್ವನಿಯೋಜಿತವಾದ ರೀತಿಯಲ್ಲಿ, ಭಂಗಿಯಲ್ಲಿ ಮತ್ತು ನಿಲುವಿನಲ್ಲಿ ಅಭಿನಯಿಸಬೇಕಾಗುತ್ತದೆ ಎಂದು ಹೇಳುತ್ತಾ "ಯಂತ್ರಜಾಲದಲ್ಲಿ ಸಿಕ್ಕಿದ ಕಲಾವಿದ, ತಾನೂ ಮತ್ತೊಂದು ಯಂತ್ರವೇ ಆಗಿ ಬಿಡುತ್ತಾನೆ" ಎಂದು ಪಾಶ್ಚಿಮಾತ್ಯರ ಯಾಂತ್ರಿಕ ಜೀವನದ ತೆಕ್ಕೆಗೆ, ರಂಗಭೂಮಿಯೂ ಒಳಗಾಗಿರುವುದನ್ನು ಹೇಳುತ್ತಾರೆ. ಯಂತ್ರದ ತಂತ್ರಕ್ಕೆ ಸಿಕ್ಕಿದ ನಟನಟಿಯರ ಬಗೆಗೆ ಅನುಕಂಪ, ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆ. ಕಥೆಯ ಚೌಕಟ್ಟಿನಲ್ಲಿಯೇ ನಿಂತ, ನಿಟ್ಟಿನ ಮೇಲೆ ಮಾತುಗಳನ್ನು ಹುಟ್ಟಿಸಿ ಆಡುವ ನಮ್ಮ ಜಾನಪದ ರಂಗಪ್ರಕಾರಗಳಿಗೂ ಅಮೇರಿಕಾದ ಈ ಯಂತ್ರ-ನಿಯಂತ್ರಿತ ರಂಗಭೂಮಿಗೂ ತುಂಬಾ ವ್ಯತ್ಯಾಸವಿದೆ ಎಂಬುದನ್ನು ಗುರುತಿಸುತ್ತಾರೆ.

ಒಂದು ಲೆಕ್ಕವನ್ನು ಬಿಡಿಸಲು ಅಲ್ಲಿಯ ವಿದ್ಯಾರ್ಥಿಗೆ ಹೇಳಿದರೆ, ಆ ವಿದ್ಯಾರ್ಥಿ ಕೂಡಲೇ ಜೇಬಿನಿಂದ ಕ್ಯಾಲ್ಕ್ಯುಲೇಟರ್ ತೆಗೆದು ಬೆರಳೊತ್ತಿ ಕ್ಷಣದಲ್ಲಿ ಹೇಳುತ್ತದೆ. ಅದಕ್ಕೆ ಲೇಖಕರು "ಏಕೆ ಮನಸ್ಸಿನಲ್ಲಿಯೇ ಗುಣಿಸಿ ಹೇಳಲು ಸಾಧ್ಯವಿಲ್ಲವೆ? ಎಂದರೆ "ಕಷ್ಟವಾದರು, ಸುಲಭವಾದರೂ, ಏತಕ್ಕೆಂದು ಇದಕ್ಕಾಗಿ ಬುದ್ಧಿಯನ್ನು ದುಡಿಸಬೇಕು? ನಮಗಾಗಿ ದುಡಿಯಲು ಈ ಯಂತ್ರಗಳನ್ನು ರೂಪಿಸಿಲ್ಲವೆ? ಮನುಷ್ಯ ತನ್ನ ಬುದ್ಧಿಯನ್ನು ಇನ್ನೂ ಹೆಚ್ಚಿನ ಸಮಸ್ಯೆ ಬಿಡಿಸಲು ಉಪಯೋಗಿಸಬೇಕಲ್ಲವೆ? ಎನ್ನುತ್ತದೆ ಅಲ್ಲಿನ ಮಗು"[13] ಇದು ಅಲ್ಲಿನ ಜನರ ಪ್ರಶ್ನೆಯೂ ಹೌದು ಎನ್ನುತ್ತಾರೆ. ಮಾನವ ಪ್ರಜ್ಞೆಯನ್ನೆಲ್ಲ ಯಂತ್ರ ಸಲಕರಣೆಗಳಿಗೆ ಮೈಯಯುಣಿಸುವ ಪಾಶ್ಚಾತ್ಯರ ಸಾಧನೆ ಲೇಖಕರಲ್ಲಿ ಆಶ್ಚರ್ಯವನ್ನುಂಟು ಮಾಡಿರುವುದನ್ನು ಗಮನಿಸಬಹುದು.

"ನೀವು ಅಮೇರಿಕನ್ನರು ಅದ್ಭುತ ಜನ ಅಯ್ಯ. ಯಂತ್ರಗಳನ್ನು ಮಾನವರನ್ನಾಗಿಸುತ್ತೀರಿ. ಮಾನವರನ್ನು ಯಂತ್ರಗಳನ್ನಾಗಿಸುತ್ತೀರಿ!" ಎಂದು ಲೇಖಕರು ಅಮೇರಿಕನ್ನರ ಯಾಂತ್ರಿಕ ಜೀವನದ ಬಗ್ಗೆ, ಲಾಸ್ ಏಂಜಲೀಸ್ ವಿಶ್ವವಿದ್ಯಾಲಯದ ಒಂದು ಸಭೆಯಲ್ಲಿ ಮಾತನಾಡುತ್ತಾ ಈ ಮೇಲಿನಂತೆ ಹೇಳಿದ್ದಾರೆ.

ಆರೋಗ್ಯ ಮತ್ತು ಸೌಂದರ್ಯವರ್ಧನೆಗೆ ಅಮೇರಿಕೆಯ ಜನ ಎಷ್ಟು ಕಾಳಜಿ, ಎಚ್ಚರ ವಹಿಸುತ್ತಾರೆ ಎನ್ನುವುದನ್ನು ತಿಳಿಸುತ್ತಾ, ಅವರು ತಮ್ಮ ದೈಹಿಕ ಗುಣವನ್ನು ಅನುಸರಿಸಿ ಪ್ರತಿಯೊಬ್ಬನೂ ವೈದ್ಯರ

ಸಲಹೆ ಪಡೆದು, ಏನನ್ನು ಯಾವ ಪ್ರಯಾಣದಲ್ಲಿ, ಯಾವ ಯಾವ ಸಮಯದಲ್ಲಿ ತಿನ್ನಬೇಕು, ಕುಡಿಯಬೇಕು ಎಂಬುದನ್ನು ಖಚಿತಪಡಿಸಿಕೊಂಡಿರುತ್ತಾರೆ. ಅಮೇರಿಕನ್ನರ ಸಂದರ್ಭೋಚಿತ ಸೌಜನ್ಯದ ಬಗ್ಗೆ ಉಲ್ಲೇಖಿಸುತ್ತಾ; ಧೂಮಪಾನದ ಚಟವಿದ್ದವರು, ಸತ್ಕಾರ ಕೂಟಗಳಲ್ಲಿದ್ದಾಗ ಬಹಿರಂಗವಾಗಿ ಸೇದಲು ಅಳಕುತ್ತಾರೆ. ಅಕ್ಕಪಕ್ಕದಲ್ಲಿದ್ದವರನ್ನು ಕುರಿತು, "ಸೇದಬಹುದೇ? ನಿಮಗೆ ತೊಂದರೆಯಾದೀತೆ?" ಎಂದು ಕೇಳುತ್ತಾರೆ. ಅವರು ಮೌನ ತಳೆದರೆ ಅರ್ಥ ತಿಳಿದುಕೊಂಡು ಅಲ್ಲಿಂದ ನಿರ್ಗಮಿಸಿ ಅನಂತರ ಬಂದು ಕೂಡಿಕೊಳ್ಳುತ್ತಾರೆ ಎಂದು ಮೆಚ್ಚುವ ಲೇಖಕರು ನಮ್ಮಲ್ಲಿನ ರೈಲು-ಬಸ್ಸುಗಳಲ್ಲಿನ ಅಸಹನೀಯ ಪರಿಸ್ಥಿತಿಯ ಬಗ್ಗೆ ತೆಗಳುತ್ತಾರೆ.

ನಮ್ಮಲ್ಲಿನ ಆಸ್ಪತ್ರೆಗಳಿಗೂ ಹಾಗೂ ಅಲ್ಲಿನವುಗಳಿಗೂ ಎಲ್ಲ ಹಂತಗಳಲ್ಲಿ, ರೀತಿನೀತಿಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ ಎನ್ನುತ್ತಾರೆ. ಆಸ್ಪತ್ರೆಯಲ್ಲಿನ ಅಚ್ಚು-ಕಟ್ಟು, ಶುಚಿ-ರುಚಿ, ಉಪಚಾರದ ವ್ಯವಸ್ಥೆ, ಆಡಳಿತ ನಿರ್ವಹಣೆಗಳ ಕುರಿತು ಸಂತೋಷ ಪಡುತ್ತಾ, ಅಸ್ವಸ್ಥರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುವ ವಿಧಾನ ಅನುಕರಣೀಯವಾದದ್ದು ಎನ್ನುತ್ತಾರೆ. "ತೀಕ್ಷ್ಣವಾದ ಬೆಳಕನ್ನು ಹಾಯಿಸುವಂಥ, ಕಣ್ಣುಗಳನ್ನು, ಸೀಳು ನಾಲಿಗೆಯನ್ನು ಹೊಂದಿ, ಕೇರೆ ಹಾವಿನಂತೆ ತೆಳ್ಳಗಿನ ಅದರ ನಳಿಕೆಯನ್ನು ತನ್ನ ದೇಹದೊಳಗಿನ ಅಂಗಾಂಗಗಳಿಗೆ ತೂರಿಸಿ, ಅಲ್ಲಿ ನಿರಂತರವಾಗಿ ನಡೆಯುತ್ತಿರುವ ಅತ್ಯದ್ಭುತವಾದ ವ್ಯಾಪಾರವನ್ನು ರೋಗಿಯೇ ತನ್ನೆದುರು, ತೂಗಿ ಹಾಕಿದ ದೊಡ್ಡ ಪರದೆಯ ಮೇಲೆ ವರ್ಣರಂಜಿತ ಚಲನಚಿತ್ರವಾಗಿ ನೋಡಬಹುದು".[14] ಎಂದು ಲೇಖಕರು ಆತ್ಯಾಧುನಿಕ ಯಂತ್ರೋಪಕರಣಗಳ, ಸಲಕರಣೆಯ ಕಾರ್ಯ ನೋಡಿ ಬೆರಗಾಗಿರುವುದು ಕಾಣಬಹುದು.

ಹಲವು ಮನರಂಜನಾ ಸ್ಥಳಗಳಿಗೆ ಭೇಟಿಯಿತ್ತಿದ್ದಾರೆ. ಡಿಸ್ನಿ ಜಗತ್ತನ್ನು ನೋಡಿ "ಇಂಥ ಅದ್ಭುತ ಬೇರೆ ಇಲ್ಲ" ಎಂದು ಉದ್ಗಾರ ತೆಗೆದಿದ್ದಾರೆ. 'ಗಾಲಿಯ ಮೇಲಿನ ಮನೆ' ನೋಡಿ ಶ್ರೀನಗರದ ವೈಭವದ ಹೌಸ್ ಬೋಟುಗಳ ನೆನಪು ಮಾಡಿಕೊಂಡಿದ್ದಾರೆ. 'ಗಾಲಿ ಮನೆ' ಎಂದರೆ ಅಲ್ಲಿನ 'ಮೊಬೈಲ್ ಹೋಂ' ಮನೆಯಲ್ಲಿರುವಂತೆ ಮೋಟಾರು ಮನೆಯಲ್ಲಿ ಸಕಲ ಸೌಕರ್ಯಗಳೂ ಇದ್ದು ಮಲಗುವ ಕೋಣೆಯಲ್ಲಿ ಐದು ಮಂಚಗಳು, ಅಡಿಗೆ ಕೋಣೆ ಹೀಗೆ ಮನೆಯ ಎಲ್ಲ ವ್ಯವಸ್ಥೆಯನ್ನು ಅಳವಡಿಸಿದ್ದು, ಹಲವು ಸೊಗಸು ಸೌಲಭ್ಯವನ್ನು ಒಳಗೊಂಡಿರುತ್ತವೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ. ದೆವ್ವದ ದುರ್ಗ ಸ್ಪೇಸ್ ಮೌಂಟನ್, ಗಾಲಿ ತೊಟ್ಟಿಲುಗಳ ಮನರಂಜನೆಯಲ್ಲಿ ತೊಡಗಿ ರಾಕ್ಷಸಾನುಭವ ಪಡೆದ ಬಗ್ಗೆಯೂ ತಿಳಿಸುತ್ತಾ, ಒಟ್ಟಾರೆ ಅಮೇರಿಕನ್ನರ ರಂಜಕ ಪ್ರಪಂಚವನ್ನು ಮುಕ್ತ ಕಂಠದಿಂದ ಶ್ಲಾಘೀಸಿದ್ದಾರೆ.

[illegible]

[illegible]

[illegible]

ಲೇಖಕರು ಎರಡು ದೇಶಗಳ ಕಲಾ ಪ್ರಕಾರಗಳಲ್ಲಿನ ವ್ಯತ್ಯಾಸವನ್ನು ಗುರುತಿಸಿ, ವೈವಿಧ್ಯಗಳ ಮಧ್ಯದಲ್ಲಿಯೂ ಮಾನವ ಜೀವನದ ಭಾವನೆಗಳನ್ನು, ಪ್ರತಿಭೆಯ ಸಾದೃಶ್ಯತೆಯನ್ನು ತೋರಿಸಿದ್ದಾರೆ. ಕಲಾತ್ಮಕತೆಯಲ್ಲಿ ಭಾರತೀಯರಾಗಲಿ ಅಥವಾ ಕರ್ನಾಟಕದವರಾಗಲಿ ಇನ್ನೂ ಸಂಪ್ರದಾಯವಾದಿಗಳಾಗಿದ್ದಾರೆ. ಪಾಶ್ಚಾತ್ಯ ಕಲಾವೃತ್ತಿಯಲ್ಲಿನ ಸಾಧನೆಯನ್ನು ಅರಿಯುವ ಅವಶ್ಯಕತೆ ಇದೆ ಎಂಬ ಪ್ರಜ್ಞಾವಂತಿಕೆಯನ್ನು ನಾವು ಮನಗಾಣಬಹುದಾರೂ ಅಮೇರಿಕದಲ್ಲಿ ಜನ ರಂಜನೆಗೆ, ಹಣಗಳಿಕೆಗೆ ಆಕರ್ಷಣೆಗೈಯುವ ಸಲುವಾಗಿ ಏನೇನೋ ಕಲಬೆರಕೆ ಸೇರಿಕೊಳ್ಳುತ್ತೇವೆ ಎನ್ನುವ ವಿಷಾದವು ಮುಖ್ಯವಾದದ್ದು ಎಂಬ ನಿಲುವನ್ನು ತಳೆದಿದ್ದಾರೆ.

**ಅಮೇರಿಕದಲ್ಲಿ ಅರವತ್ತು ದಿನಗಳು – ಕೆ. ಗಣೇಶ ಮಲ್ಯ :**

ಲೇಖಕರು 'ರೋಟರಿ ಗ್ರೂಪ್ ಸ್ಟಡಿ ಎಕ್ಸ್ ಛೇಂಜ್' ಪ್ರೋಗ್ರಾಂನ ಅಂಗವಾಗಿ ಎರಡು ತಿಂಗಳ ಕಾಲ ಅಮೇರಿಕಾ ಮತ್ತು ಕೆನಡಾ ದೇಶಗಳಲ್ಲಿ ಸಾಂಸ್ಕೃತಿಕ ರಾಯಭಾರಿಗಳಾಗಿ ಪ್ರವಾಸಮಾಡಿ ಆ, ಈ ಸಂದರ್ಭದಲ್ಲಿ ತಮಗಾದ ಅನುಭವವನ್ನು ಈ ಪ್ರವಾಸಕಥನದಲ್ಲಿ ನಿರೂಪಿಸಿದ್ದಾರೆ.

ರೋಟರಿಯ ಕ್ಯಾರ್ಯಕ್ರಮದ ಅವಧಿಯಲ್ಲಿ ಆರು ಜನರನ್ನೊಳಗೊಂಡ ತಂಡ; ಅಭ್ಯಸಿಸಿ ವಿನಿಮಯಗೊಳಿಸುವ ವಿಷಯಗಳನ್ನು ಈ ಕೆಳಗಿನಂತೆ ತಿಳಿಸುತ್ತಾರೆ. ಆ ದೇಶದ ಕುರಿತು, "ಎಲ್ಲಾ ಹಂತಗಳಲ್ಲಿ ಸರಕಾರ, ನ್ಯಾಯದಾನ, ವಿದ್ಯಾದಾನ, ಆರೋಗ್ಯ, ಸಮಾಜ ಸೇವೆ, ವ್ಯವಸಾಯ, ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಶೋಧನಾ ಕಾರ್ಯಕ್ರಮಗಳು, ಧರ್ಮ ಮತ್ತು ಸಂಸ್ಕೃತಿ, ಆಟ ಪದ್ಯಾಂಟ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ವಿನೋದದ ಕಾರ್ಯಕ್ರಮಗಳು"[15] ಇವಿಷ್ಟು ವಿಷಯಗಳನ್ನು ಅರವತ್ತು ದಿನಗಳಲ್ಲಿ ನೋಡಿ ಅಭ್ಯಸಿಸುವುದು ಮಾತ್ರವಲ್ಲದೆ "ಪ್ರತಿಯೊಂದು ಊರಿನಲ್ಲಿಯೂ ಮೂರು ಮೂರು ದಿನಗಳಷ್ಟಿದ್ದು ಮುಂದಿನ ಊರಿಗೆ ಪಯಣ ಬೆಳೆಸುವುದು–ಪ್ರತೀ ಊರಲ್ಲಿ ಆರು ಜನರು ಆರು ಕುಟುಂಗಳೊಂದಿಗಿದ್ದು ಅವರ ಜೀವನ ಕ್ರಮವನ್ನು ಅಭ್ಯಸಿಸಬೇಕಿತ್ತು. ಈ ಎರಡು ತಿಂಗಳುಗಳಲ್ಲಿ ನಮ್ಮ ಎಲ್ಲಾ ವೆಚ್ಚವನ್ನು ಆ ಪ್ರದೇಶದವರೇ ನೋಡಿಕೊಳ್ಳುವುದು ಬಳಿಕ ನಮ್ಮ ಈ ಕಾರ್ಯಕ್ರಮದ ಪ್ರತ್ಯುತ್ತರವಾಗಿ ಆ ದೇಶದಿಂದ ಆರು ಜನ ಸಾಂಸ್ಕೃತಿಕ ರಾಯಭಾರಿಗಳು. ನಮ್ಮ ದೇಶಕ್ಕೆ ಎರಡು ತಿಂಗಳಿಗಾಗಿ ಬರುವುದು ಇದು ರೋಟರಿ ಗ್ರೂಪ್ ಸ್ಟಡಿ ಎಕ್ಸ್‌ಛೇಂಜ್ ಕಾರ್ಯಕ್ರಮ"[16] ಎಂದು ಲೇಖಕರು ಆ ಕಾರ್ಯಕ್ರಮದ ಉದ್ಧೇಶವನ್ನು ತಿಳಿಸುತ್ತಾರೆ. ಇಲ್ಲಿ ನಾವು ಗ್ರಹಿಸಬೇಕಾದ ವಿಚಾರವೆಂದರೆ

ತನ್ನ ದೇಶ ಮತ್ತು ಅನ್ಯ ದೇಶದ ಅಂಶಗಳನ್ನು ತೌಲನಿಕವಾಗಿ ವಿವೇಚಿಸಬಹುದಾದ ಅಂಶಗಳನ್ನು ಕಾಣಬಹುದು.

ಮೂರು ದಿನಗಳಿಗೊಮ್ಮೆ ಲೇಖಕರು ಅಲ್ಲಿನ ಕುಟುಂಬಗಳ ಜೊತೆ ಇದ್ದು ವಿಚಾರ ವಿನಿಮಯ ಮಾಡಿದ್ದಾರೆ. ಜನಜೀವನದಲ್ಲಿಯ ಎಲ್ಲ ರಂಗಗಳ ಒಳಹೊರಗನ್ನು ವೀಕ್ಷಿಸುತ್ತಾ ವಿಮರ್ಶಿಸಿದ್ದಾರೆ. ಅಮೇರಿಕಕ್ಕೆ ಸಂಸ್ಕೃತಿ ಇಲ್ಲ ಎಂದು ಹೇಳಿ ಅದಕ್ಕೆ ಕಾರಣವನ್ನು ತಿಳಿಸುತ್ತಾರೆ. ಮಕ್ಕಳು ಪ್ರಾಯ ಬಂದೊಡನೆ ದೂರ ಸಾಗಿ ತಮ್ಮದೇ ಆದ ಸ್ವತಂತ್ರವಾದ ಸಂಸಾರ ಸಾಗಿಸುವರು. ಬಾಲ್ಯದಿಂದ ಹೆತ್ತು-ಹೊತ್ತು ಸಾಕಿ ಸಲಹಿ ವಿದ್ಯಾಭ್ಯಾಸವಿತ್ತು, ದೊಡ್ಡವರನ್ನಾಗಿ ಮಾಡಿದಕ್ಕೆ ಇಳಿವಯಸ್ಸಿನಲ್ಲಿ ತಂದೆ ತಾಯಿಗಳನ್ನು ಒಂಟಿಯಾಗಿ ಮಾಡುವ ಪರಿಣಾಮದಿಂದ ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ಸಂಸ್ಕೃತಿಯು ದೊರೆಯುವುದಿಲ್ಲ. ಇದರಿಂದಾಗಿಯೇ ಹಿಂದಿನ ತಲೆಮಾರಿನ ಜನರಿಗೆ, ಯುವಜನಾಂಗದ ಜೀವನಕ್ರಮ ಒಗ್ಗುವುದಿಲ್ಲವೆಂದು ಪುರಸ್ಕರಿಸುತ್ತಾ ಭಾರತೀಯ ಜೀವನ ಪದ್ಧತಿಯ ಶ್ರೇಷ್ಠತೆಯಿರುವುದು ಇಲ್ಲಿನ ಕೌಟುಂಬಿಕ ಸಂಸ್ಕೃತಿಯಲ್ಲಿ ಮತ್ತು ಅದರ ಬದ್ಧತೆಯಲ್ಲಿ ಎಂದು ಮನವರಿಕೆ ಮಾಡಿಕೊಡುತ್ತಾರೆ.

ಅಮೇರಿಕಾದಲ್ಲಿ ವಿವಾಹ ವಿಚ್ಛೇದನಗೊಳ್ಳುತ್ತಿರುವ ವಿದ್ಯಮಾನವನ್ನು ವಿಷಾದಕರ ಎಂದು ಹೇಳುತ್ತಾ ಭಾರತದ ವೈವಾಹಿಕ ಸಂಬಂಧದ ಕುರಿತು ತಿಳಿಸಿಕೊಡುತ್ತಾರೆ. ಜೀವನದಲ್ಲಿ ಸುಖ-ದುಃಖ, ಸರಸ-ವಿರಸ, ಏರು-ಪೇರು, ಕಷ್ಟ-ನಷ್ಟ ಬಂದೇ ಬರುತ್ತವೆ. ಅಭಿಪ್ರಾಯ ವೈರುಧ್ಯದ ವಿಷಮತೆಯೂ ತಲೆದೋರುವುದಿರುತ್ತದೆ. ಈ ಎಲ್ಲಕ್ಕೂ ಸಮಾನವಾಗಿ ಮೈಯೊಡ್ಡುವುದು ಸಾಮರಸ್ಯ. ಒಂದು ಗಂಡು ಒಂದು ಹೆಣ್ಣು ವಿವಾಹದ ಮೂಲಕ ಕೈ ಜೋಡಿಸಿ ದಂಪತಿಗಳೆನಿಸಿ ಪರಸ್ಪರರು ಕೂಡು ಬಾಳ್ವೆಗೆ ಬದ್ಧರಾಗಿ ಗಟ್ಟಿಯಾಗಿ ಬಾಳುವುದೇ ನೀತಿ, ಧರ್ಮ ಮತ್ತು ದಿವ್ಯ ಪರಂಪರೆ ಎಂದು ಭಾರತೀಯ ಸಂಸ್ಕೃತಿಯನ್ನು ಬಾಯ್ತುಂಬ ಹೊಗಳಿದ್ದಾರೆ. ಭಾರತೀಯ ಧರ್ಮ ಹಾಗೂ ವೇದಾಂತಗಳಲ್ಲಿರುವ ಉತ್ತಮ ಮೌಲ್ಯಗಳ ಬಗೆಗೆ ಲೇಖಕರಲ್ಲಿ ತೀವ್ರವಾದ ಆಸಕ್ತಿ ಇರುವುದನ್ನು ಕಾಣಬಹುದು.

ಅಮೇರಿಕದಲ್ಲಿ ಶವಸಂಸ್ಕಾರಕ್ಕೆ ಕನಿಷ್ಠವೆಂದರೆ ಒಂದು ಸಾವಿರ ಡಾಲರನ್ನು ವೆಚ್ಚಮಾಡುತ್ತಾರೆ. ಅಲ್ಲದೆ ಇದು ಉದ್ಯಮ ರೂಪದಲ್ಲಿ ಬಳಕೆಯಲ್ಲಿರುವುದು ಲೇಖಕರಿಗೆ ಅತೃಪ್ತಿ ತಂದಿದೆ. ಕಾರಣ ಸಾವನ್ನು ಸಹ ಸ್ವಾರ್ಥಪರತೆಗೆ ಬಳಸಿಕೊಂಡರೆ ಮಾನವೀಯತೆಗೆ ಅವಕಾಶವಿಲ್ಲ ಎಂದು ಯೋಚಿಸುತ್ತಾರೆ.

“ಅಮೇರಿಕದ ರಾಜ್ಯ ಸರ್ಕಾರಾಧೀನ ಕೋರ್ಟಗಳ ನ್ಯಾಯಾಧೀಶರುಗಳು ಜನರಿಂದ ಚುನಯಿಸಲ್ಪಡುವವರು. ಹಾಗಾಗಿ ಅವರು ಜನರೊಡನೆ ನೇರವಾಗಿ ಸಂಪರ್ಕ ಇಟ್ಟುಕೊಳ್ಳಬೇಕು. ಈ ಕಾರಣದಿಂದಾಗಿ ಅಲ್ಲಿನ ಎರಡೂ ಕೋರ್ಟುಗಳ ಜಡ್ಜ್‌ಗಳು ರೋಟೇರಿಯನ್ನರಾಗಿದ್ದರು”[17] ಲೇಖಕರು ಕೋರ್ಟುಗಳಿಂದ ಹಿಡಿದು ಉಳಿದ ಸರ್ಕಾರಿ ಕಛೇರಿಗಳಿಗೆ ಭೇಟಿಯಿತ್ತಿದ್ದಾರೆ. ಅಲ್ಲಿನ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡಿದ್ದಾರೆ. ನ್ಯಾಯಾಧೀಶರ ಅಭಿಪ್ರಾಯದಂತೆ ಅಮೇರಿಕದಲ್ಲಿ ಅಪರಾಧಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ ಸರ್ಕಾರ, ಆತ್ಮರಕ್ಷಣೆಗೆಂದು ಕೋರ್ಟುಗಳ ಲೈಸೆನ್ಸ್ ಇತ್ತರೆ ಜನರು ಕೊಲೆ, ಸುಲಿಗೆಗಳಿಗಾಗಿ ಉಪಯೋಗಿಸಿದ್ದು ಉಂಟು ಎಂದು ಅಮೇರಿಕದ ಸಮಸ್ಯೆಗಳ ಬಗ್ಗೆ ತಿಳಿಸಿರುವುದು ಕಂಡುಬರುತ್ತದೆ.

ಅಮೇರಿಕದಲ್ಲಿ ಜನಸಾಮಾನ್ಯರ ಕನಿಷ್ಠ ಅವಶ್ಯಕತೆ ಎಂದರೆ ಒಂದು ಕಾರು, ವಾಸಿಸಲು ಒಂದು ಮನೆ, ಫರ್ನಿಚರು, ಟೆಲಿವಿಷನ್ ಅವಶ್ಯಕ ವಸ್ತುಗಳು ಇಲ್ಲಿ ಬ್ಯಾಂಕುಗಳ ಪಾತ್ರ ದೊಡ್ಡದು ಎನ್ನುತ್ತಾರೆ. ಏಕೆಂದರೆ ಮೊದಲು ತಮಗೆ ಬೇಕಾದುದನ್ನು ಖರೀದಿ ಗೈದು ಬಳಿಕ ಬ್ಯಾಂಕುಗಳಿಗೆ ಸಾಲದ ಮರುಪಾವತಿ ಇದರಿಂದಾಗಿ ಅಲ್ಲಿನ ಬ್ಯಾಂಕುಗಳು ಕೂಡಾ ಆರ್ಥಿಕ ಪ್ರಗತಿಯಾಗಲು ಕಾರಣವಾಗಿರಬೇಕು ಎಂದು ಅಮೇರಿಕದ ವಾಣಿಜ್ಯ ಕ್ರಮದ ಕುರಿತು ತಿಳಿಸುತ್ತಾ, ನಮ್ಮಲ್ಲಿ ಇದಕ್ಕೆ ವ್ಯತಿರಿಕ್ತ ಪರಿಸ್ಥಿತಿ ಎನ್ನುತ್ತಾರೆ. ಮೊದಲು ಉಳಿತಾಯ ನಂತರ ಖರೀದಿ.

“ಭಾರತದ ಬಗೆಗೆ ಅಮೇರಿಕನ್ ಜನತೆಗಿರುವ ಪ್ರೀತಿ ವಿಶ್ವಾಸಗಳನ್ನು ತಾವು ಸಂಚರಿಸಿದ ಕಡೆಗಳಲ್ಲೆಲ್ಲಾ ಕಂಡು ಅನುಭವಿಸಿದ ಲೇಖಕರು ಅದನ್ನು ಬಾಯ್ತುಂಬ ಹೊಗಳಿರುವರು. ಅವರ ಅದ್ಭುತ ಪ್ರಗತಿ, ಶುಚಿತ್ವದ ಬಗೆಗೆ ಅವರಿಗಿರುವ ಕಾಳಜಿಯನ್ನು ಮನಸಾರೆ ಹೊಗಳುವ ಲೇಖಕರು ಅವರ ಗೃಹಸೌಖ್ಯದಲ್ಲಿನ ಅಸಾಮರಸ್ಯವನ್ನು ಕುರಿತು ತಮ್ಮ ಬೇಸರವನ್ನು ವ್ಯಕ್ತಪಡಿಸಿರುವರು. ಪ್ರವಾಸದಲ್ಲಿ ಅಮೇರಿಕಾ ಹೆಚ್ಚಿನ ದಿನಗಳನ್ನು ಆಕ್ರಮಿಸಿಕೊಂಡದ್ದರಿಂದ ಕೆನಡಾದ ಪ್ರವಾಸ ಕಥನ ಕೊನೆಯಲ್ಲಿ ಬರುತ್ತದೆ. ಲೇಖಕರಿಗೆ ಅಮೇರಿಕದ ಮೇಲಿರುವಷ್ಟು ಅಭಿಮಾನ ಏಕೋ ಏನೋ ಕೆನಡಾದ ಮೇಲೆ ಇದ್ದಂತೆ ತೋರುವುದಿಲ್ಲ. ಕೆನಡಾ ಪ್ರವಾಸದಲ್ಲಿ ನಯಾಗರ ಜನಲಪಾತದ ವರ್ಣನೆಯೇ ಹೆಚ್ಚು ಬಂದಿದ್ದು, ಹರಕು ಮುರುಕು ವಿವರಗಳು ಉಳಿದ ಇತರ ಪ್ರೇಕ್ಷಣೀಯ ಸ್ಥಳಗಳ ಬಗೆಗೆ ಬಂದಿದೆ. ಇಲ್ಲಿಯ ವರ್ಣನೆಗಳೆಲ್ಲವೂ ಬರಿಯ ವಿಷಯದ ಮಟ್ಟದಲ್ಲಿ ನಿಲ್ಲುತ್ತವೆ ವರ್ಣನೆಯಲ್ಲಿ ಬರುವ

ಊರಾಗಲಿ, ವ್ಯಕ್ತಿಯಾಗಲೀ, ದೃಶ್ಯವಾಗಲೀ ಜೀವತುಂಬಿ ಕಣ್ಣ ಮುಂದೆ ನಿಲ್ಲುವುದೇ ಇಲ್ಲ"[18] ಎಂದು ಡಾ॥ಎಸ್. ವಿದ್ಯಾಶಂಕರ್ ಅವರು ಪರಿಗಣಿಸಿರುವುದು ಸ್ತುತ್ಯಾರ್ಹವಾಗಿದೆ.

**ವಿದೇಶ ಪ್ರವಾಸದ ಅನುಭವಗಳು – ಎನ್.ಡಿ. ಬಗರಿ :**

ಜುಮೈಕಾದಲ್ಲಿ ನಡೆದ ಕಾಮನ್ವೆಲ್ತ್ ಗ್ರಂಥಾಲಯಾಧಿಕಾರಿಗಳ ಸಮ್ಮೇಳನದಲ್ಲಿ ಭಾರತದ ಏಕೈಕ ಪ್ರತಿನಿಧಿಯಾಗಿ ಆಯ್ಕೆಯಾಗಿ, ಭಾಗವಹಿಸಿವ ಮೂಲಕ ಲೇಖಕರು ಲಂಡನ್, ಪ್ಯಾರಿಸ್, ವಾಷಿಂಗ್ಟನ್, ನ್ಯೂಯಾರ್ಕ್, ಜುಮೈಕಾ, ಜರ್ಮನಿ ರೋಮ್ ಹೀಗೆ ವಿಶ್ವದ ಅತಿ ಮಹತ್ವಪೂರ್ಣ ಸ್ಥಳಗಳನ್ನು ಸಂದರ್ಶಿಸಿದ್ದಾರೆ.

ಪ್ರವಾಸಕಥನದ ನಾಲ್ಕನೇ ಅಧ್ಯಾಯದಿಂದ ಬಹುಪಾಲು ಅಧ್ಯಾಯಗಳಲ್ಲಿ ಅಮೇರಿಕಾ ಪ್ರವಾಸದ ಅನುಭವವನ್ನು ನೋಡಬಹುದು.

ಜುಮೈಕಾದಿಂದ ಫ್ಲಾರಿಡಾಗೆ ಸೇರಿದಾಗ ವಿಶ್ವವಿಖ್ಯಾತವಾಗಿರುವ ಮಿಯಾಮಿ ಬೀಚಿನ ಬದಿಗೆ ಭವ್ಯವಾಗಿ, ಆಕಾಶದೆತ್ತರ ಹಬ್ಬಿ ನಿಂತಿರುವ 'ಹೋಟೆಲ್ ಡಿ ಲಿಡೋ' ಒಂದು ಪುಟ್ಟ ಸ್ವರ್ಗದಂತೆ ಕಾಣುತ್ತದೆ. ಮಿಯಾಮಿ ಬೀಚಿನ ಅದ್ಭುತ ಸೌಂದರ್ಯ ಕಾಲಡಿಯಲ್ಲಿ ತೇಲಾಡುತ್ತಿದೆ ನಿಜಕ್ಕೂ ಇದೊಂದು ಆಶ್ಚರ್ಯ ಎನ್ನುತ್ತಾರೆ. "ಮಿಯಾಮಿ ಬೀಚಿನ ಪ್ರಶಂಸನೀಯ ವೈಖರಿಯ ಬಗ್ಗೆ ಜನ ಅಷ್ಟೊಂದು ಹೇಳುವುದು ಏಕೆ ಎಂದು ನನಗೆ ಈಗ ಅರಿವಾಯಿತು" ಎಂದು ಅದನ್ನು ನೋಡಿಯೇ ತಿಳಿದುಕೊಂಡಿದ್ದಾರೆ. ಅಲ್ಲಿ ಯುವಕ, ವೃದ್ಧ, ರಾಜಕಾರಣಿ, ಪ್ರೇಮಿಗಳು, ವೇದಾಂತಿಗಳು, ಕಲಾವಿದರು ಎಲ್ಲರೂ ಸಹಸ್ರಾರು ಮೈಲಿಯಿರುವ ಅಮೇರಿಕಾದಿಂದ ವಿಮಾನಗಳ ಮೂಲಕ ಮಿಯಾಮಿ ಬೀಚಿಗೆ ಬಂದು ಆ ಸಮುದ್ರ ತೀರದಲ್ಲಿ ಗಂಟೆಗಟ್ಟಲೆ ನಿಸರ್ಗ ಸಂಪತ್ತಿಗೆ ಮೈಯೊಡ್ಡಿ ಪ್ರಪಂಚವನ್ನು ತೊರೆದ ವೀರರಂತೆ ಅಥವಾ ವಿರಕ್ತರಂತೆ ಮಲಗಿರುವ ಪರಿ ನೋಡಿಯೇ ತಿಳಿಯಬೇಕು ಅಥವಾ ಅನುಭವಿಸಬೇಕು ಎನ್ನುತ್ತಾರೆ ಇದು ಜಗತ್ತಿನ ಅತ್ಯಂತ ದುಬಾರಿ ನಗರ ಶ್ರೀಮಂತರ ವಿಶ್ರಾಂತಿಧಾಮವಾಗಿದೆ ಎಂದು ಹೇಳುತ್ತಾರೆ.

ಪ್ರಪಂಚದ ರಾಜಧಾನಿ ಎಂದು ಹೆಸರಾಗಿರುವ ಡಿಸ್ನಿಲ್ಯಾಂಡ್ ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲೂ ಓಮ್ಮೆಯಾದರೂ ಸಂದರ್ಶಿಸಲೇಬೇಕೆನಿಸುವಷ್ಟು ಕುತೂಹಲ ಕೆರಳಿಸುವಂತಹ ಜಾಗ ಎಂದು ತಿಳಿಸಿ

ಅದಕ್ಕೆ ಭೇಟಿಕೊಡುತ್ತಾರೆ. ಕುತೂಹಲದಿಂದಾಗಿ ಎಲ್ಲವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಡಿಸ್ನಿಲ್ಯಾಂಡ್‌ನಲ್ಲಿ ಆರು ವಿಭಾಗಗಳಿವೆ ಎನ್ನುತ್ತಾರೆ. ಮೈನ್ ಸ್ಟ್ರೀಟ್, ಯು.ಎಸ್.ಎ ಅಡ್ವೆಂಚರ್ ಲ್ಯಾಂಡ್, ಲಿಬರ್ಟಿಸ್ಕ್ವೇರ್, ಫ್ಯಾಂಟಸಿ ಲ್ಯಾಂಡ್ ಮತ್ತು ಟುಮಾರೋ ಲ್ಯಾಂಡ್ ಎಂದು ಹೆಸರಾಗಿರುವ ಒಂದೊಂದು ವೈಶಿಷ್ಟ್ಯಪೂರ್ಣ ಈ ಪ್ರದೇಶಗಳು ಲೇಖಕರ ನೆನಪಿನಿಂದ ಮಾಸದ ಅದ್ಭುತ ರಮ್ಯ ಅನುಭವಗಳಾಗಿವೆ.

ಡಿಸ್ನಿಲ್ಯಾಂಡ್, ವಾಲ್ಟ್‌ಡಿಸ್ನಿ ಸೃಷ್ಟಿಸಿದ ಒಂದು ಅದ್ಭುತ ಮಾಯಾಲೋಕ ವಿಶ್ವದ ಇನ್ನೆಲ್ಲಿಯೂ ಇಂತಹದನ್ನು ಕಾಣಲು ಅಸಾಧ್ಯ ಎನ್ನುತ್ತಾ, ಇದು ವಿಶ್ವದ ಎಂಟನೆಯ ಅದ್ಭುತ ಎಂದೆನಿಸಿದೆ ಎಂದಿದ್ದಾರೆ. "ಈ ಮಹಾನ್‌ಲೋಕ ಇನ್ನೂರ ಮುವತ್ತು ಎಕರೆ ಪ್ರದೇಶದ ವಿಸ್ತಾರದಲ್ಲಿ ಹರಡಿದೆ. ಈಗ ಮತ್ತಷ್ಟು ಪ್ರದೇಶಗಳು ಇದರತ್ತ ಸೆಳೆಯಲಾಗುತ್ತಿದೆ. ಈಗಾಗಲೆ ಈ ವಿಶ್ವವಿಖ್ಯಾತ ವಿಚಿತ್ರ ಸಾಧನೆಗೆ ಇಪ್ಪತ್ತು ಮಿಲಿಯನ್ ಡಾಲರಿಗೂ ಹೆಚ್ಚು ಹಣ ಖರ್ಚಾಗಿದೆಯಂತೆ 'ಡಿಸ್ನಿಲ್ಯಾಂಡ್‌ನ ನಿರ್ಮಾಣ ಎಂದಿಗೂ ಪೂರ್ಣಗೊಳ್ಳುವುದೇ ಇಲ್ಲ' ಎಂದು ಇದರ ನಿರ್ಮಾಪಕ ವಾಲ್ಟ್‌ಡಿಸ್ನಿ ಹೇಳಿರುವ ಹಾಗೆ, ಅನೇಕ ಅಚ್ಚರಿಯ ಕಟ್ಟಡ, ಪ್ರದೇಶ, ಸರೋವರಗಳ ನಿರ್ಮಾಣ ಇನ್ನೂ ಸಾಗಿತ್ತು. 1955ರಲ್ಲಿ ಸ್ಥಾಪಿತವಾದ ಇದರ ಬೆಳವಣಿಗೆ ಅಪಾರವಾಗಿ ನಡೆದಿದ್ದು, ಅದು ಇನ್ನೂ ಅವಿರತವಾಗಿ ನಡೆಯುತ್ತಲೇ ಇದೆ ಡಿಸ್ನಿಲ್ಯಾಂಡ್ ಕಾಣುತ್ತಲೇ, ಎತ್ತರದಲ್ಲಿ ಡಿಸ್ನಿಲ್ಯಾಂಡ್ ಆವೃತ್ತವನ್ನು ಸುತ್ತುವ ಮೊನೋರೈಲು ಇರುತ್ತದೆ. ಮುಂಭಾಗದ ಬಯಲಲ್ಲಿ ಬಹಳಷ್ಟು ಬಸ್ಸುಗಳು ನಿಂತಿರುತ್ತವೆ"[19] ಲೇಖಕರು ಡಿಸ್ನಿಲ್ಯಾಂಡಿನ ಅದ್ಭುತ ಪವಾಡ, ತಮಾಷೆ, ಸಾಹಸ, ಶೌರ್ಯ, ವೈಶಿಷ್ಟ್ಯಗಳನ್ನು ಮೆಚ್ಚಿಕೊಳ್ಳುತ್ತಾ ಸಚಿತ್ರವಾಗಿ ನಿರೂಪಿಸಿದ್ದಾರೆ.

"ಟುಮಾರೋ ಲ್ಯಾಂಡ್' ಇದು ಲೆಖಕರಿಗೆ ನಾಳಿನ ಪ್ರಪಂಚದ ಭವ್ಯ ಜೀವಿತವ್ಯ ಕಂಡುಬರುವ ಸ್ಥಳವಾಗಿದೆ. ವಿಜ್ಞಾನ ಕೈಗಾರಿಕೆಗಳು ಮುಂದೆ ಸಾಧಿಸಬಹುದಾದ ಅಸಾಧಾರಣ ಪ್ರಗತಿಯ ಬಗ್ಗೆ, ಅಷ್ಟೇ ಅಸಾಧಾರಣ ಎನಿಸಬಹುದಾದ ಆಗಾಧ ಕಲ್ಪನೆಗಳ ಜಾಲವೇ ಕಂಡು ಬಂದಿದೆ. ಜಲಾಂತರ್ಗಾಮಿ 'ನಾಟಲಿಸ್' ನೋಡಲು ಆಕರ್ಷಕವಾಗಿ ಕಂಡಿದ್ದರಿಂದ ಲೇಖಕರು ಅದರಲ್ಲಿ ಜಲಪ್ರಯಾಣ ಮಾಡಿದ್ದಾರೆ. ಉತ್ತರ ಧ್ರುವದ ಹಿಮರಾಶಿಯ ಅಡಿಯಲ್ಲಿರುವ 'ಜಲಾಕಾಶದಲ್ಲಿ ಯಾನ ಮಾಡಿದ್ದಾರೆ. ಕ್ಷಿಪಣಿಯನ್ನು ಭೂಮಿಯಿಂದ ಬಹುದೂರ ಹೋಗುವುದು, ಹಿಮಾಚ್ಛಾದಿತವಾದ ಮೆಟರು ಹಾರ್ನ್ ಪರ್ವತ ಶ್ರೇಣಿಯಲ್ಲಿನ ಓಡಾಟ ಇವೆಲ್ಲವೂ ಲೇಖಕರಿಗೆ ಸಾಹಸಮಯವೆನಿಸಿವೆ. 'ಅಡ್ವೆಂಚರ್ ಲ್ಯಾಂಡ್'ನಲ್ಲಿಯೂ ಲೇಖಕರು ಇಂತಹದೇ ಅನುಭವ ಪಡೆದಿದ್ದಾರೆ. ಇವೆಲ್ಲವೂ ಅಪೂರ್ವ ವಿಸ್ಮಯವನ್ನುಂಟು ಮಾಡಿವೆ. ಅಲ್ಲದೆ ನಮ್ಮ ದೇಶದಲ್ಲೂ ಇಂತಹ ಯೋಜನೆಗಳ ಅವಶ್ಯಕತೆಯಿರುವುದನ್ನು ನೆನೆಪಿಸುತ್ತದೆ.

ವಾಷಿಂಗ್ಟನ್ನಿನ ನಗರದ ಮಧ್ಯಭಾಗದಲ್ಲಿ ಬೃಹದಾಕಾರವಾಗಿ ಭವ್ಯವಾಗಿ ಕಣ್ಣಿಗೆ ಕಂಡ ಬಿಳಿಯ ಪ್ರಶಾಂತ ಬಣ್ಣದ 'ಕ್ಯಾಪಿಟಲ್' ಕಟ್ಟಡ ನೋಡುತ್ತಿದ್ದಂತೆಯೇ ಲೇಖಕರಿಗೆ ವಿಧಾನಸೌಧ ನೆನಪಿಗೆ ಬಂದಿದೆ. ಬಿಳಿಯ ಅಮೃತಶಿಲೆಗಳ ಹಾಸು ಕಲ್ಲಿನಂದಲೇ ಸಂಪೂರ್ಣವಾಗಿ ನಿರ್ಮಾಣವಾಗಿರುವ ಈ ಕಟ್ಟಡದ ನೋಟ ಬಹುರಮ್ಯವಾಗಿ ಕಂಡಿದೆ. ಈ ಕಟ್ಟಡದ ಒಂದರ್ಧ ಮೈಲಿಯೊಳಗೆ ವಿಶ್ವವಿಖ್ಯಾತ ವೈಟ್‌ಹೌಸ್, ಮುಂದಕ್ಕೆ ಪೆನ್‌ಸಿಲ್‌ವೇನಿಯಾ ಅವೆನ್ಯೂ, ಪೆರೇಡ್ ಗ್ರೌಂಡ್, ಸುಪ್ರೀಂಕೋರ್ಟ್, ಪೋರ್ಡ್ ಥಿಯೇಟರ್, ಎಫ್.ಬಿ.ಐ. ಬಂಗಲೆಗಳು, ಡಿಪಾರ್ಟ್‌ಮೆಂಟ್ ಆಫ್ ಜಸ್ಟೀಸ್‌ನ ಕಟ್ಟಡಗಳು, ನ್ಯಾಷನಲ್ ಗ್ಯಾಲರಿ ಆಫ್ ಆರ್ಟ್, ಆಧುನಿಕವಾದ ಹಿರ್ಪಾರ್ನ್ ಮ್ಯೂಸಿಯಂ ಮುಂತಾದ ಕಲಾತ್ಮಕ ಸಂಸ್ಥೆಗಳನ್ನು ಸಂದರ್ಶಿಸಿದ್ದಾರೆ.

ಲೇಖಕರು "ನ್ಯಾಷನಲ್ ಗ್ಯಾಲರಿ ಆಫೋ ಆರ್ಟ್"ಗೆ ಭೇಟಿ ನೀಡಿದಾಗ ಅಲ್ಲಿ "ದಿ ಯೂರೋಪಿಯನ್ ವಿಷನ್ ಆಫ್ ಅಮೇರಿಕಾ" ಎಂಬ ಪ್ರದರ್ಶನಕ್ಕೆ ಅಭೂತಪೂರ್ವ ಸಿದ್ಧತೆಗಳು ನಡೆಯುತ್ತಿದ್ದು, ಇದರ ಕುರಿತು ಕೆಲ ಮಾಹಿತಿಯನ್ನು ಲೇಖಕರು ಕೊಡುತ್ತಾರೆ. ಈ 'ಆರ್ಟ್ ಗ್ಯಾಲರಿ' ಆಂಡ್ರೋ ಮೆಲ್ಲಾನ್ ಎಂಬಾತನ ಮಹಾಕೊಡುಗೆ. 1937ರಲ್ಲಿ ತನ್ನಲ್ಲಿದ್ದ ಅತಿ ಭವ್ಯ ಕಲಾಸಂಗ್ರಹವನ್ನೂ, ಒಂದು ಬೃಹತ್ ಭವನವನ್ನು ಮತ್ತು ಅದರ ನಿರ್ವಹಣೆಗಾಗಿ ಅಪಾರ ನಿಧಿಯನ್ನು, ಎಲ್ಲಕ್ಕೂ ಹೆಚ್ಚಾಗಿ ಮುಂದೆ ನಿರಂತರವಾಗಿ ಕಲಾಸಂಪತ್ತನ್ನು ಕೊಳ್ಳಲೋಸ್ಕರ ಅಪಾರ ಹಣವನ್ನು ಕೊಟ್ಟು ಈ ರೀತಿಯ ಮಹಾನ್ ಕಾರ್ಯಸಾಧನೆಯಲ್ಲಿ ಭಾಗಿಯಾದ ಆಂಡ್ರೋ ಮೆಲ್ಲಾನನ ಕಲಾಪ್ರಪಂಚದ ಈ ಕೊಡುಗೆ ಅಮೇರಿಕನ್ ಜನಪದದಲ್ಲಿ ಬಹಳಷ್ಟು ಪರಿಣಾಮಗಳನ್ನುಂಟು ಮಾಡಿದೆ. ಈ ಗ್ಯಾಲರಿಯಲ್ಲಿ ಮೆಲ್ಲಾನನ ಸಂಗ್ರಹವಷ್ಟೇ ಅಲ್ಲದೆ ಸ್ಯಾಮ್ಯುಯಲ್ ಎಚ್. ಕ್ರೇಸ್, ಜೋಸೆಫ್ ಇ. ವೈಡನರ್, ಚೆಸ್ಟರ್ ಡೇಲ್, ಲೆಸ್ಸಿಂಗ್ ರೋಸನ್ ವಾಲ್ಟ್, ವಿಲಿಯಂ ಗಾರ್ಬಿಷ್ ಮತ್ತೆ ಇತರ ಕಲಾವಿದರ ಅಪೂರ್ವ ಸಂಗ್ರಹಗಳೂ ಇವೆ. ಫ್ರಾ ಅಂಜಿಲಿಕೋಯಿಂದ ಸಿಸಾನ್ ಹಾಗೂ ಮಾಟಿಸೆಯವರೆಗೆ, ಶಿಲ್ಪದಲ್ಲಿ, ಕಂಚಿನಲ್ಲಿ ಉಪಕರಣದಲ್ಲಿ, ಪೋರ್ಸಲೀನ್ ಪಾತ್ರೆಗಳಲ್ಲಿ ಕೆತ್ತಿರುವ ನೂರಾರು ಕಲಾಕೃತಿಗಳು ಇಲ್ಲಿವೆ.[20] ಎಂದು ಲೇಖಕರು ಹತ್ತು ಹಲವು ಬಗೆಯ ಜಗತ್ತಿನ ವಿಶಿಷ್ಟ ಕಲಾ ವೈಭವವನ್ನು ಹೊತ್ತು ಮೆರೆಯುತ್ತಿರುವ ಈ ಮ್ಯೂಸಿಯಂನಲ್ಲಿ ಹೆಜ್ಜೆಯಿಟ್ಟಲ್ಲೆಲ್ಲಾ ಕಲಾ ದೇವತೆಯ ಪರಿಪೂರ್ಣ ಲಾಸ್ಯ ತಾಂಡವವನ್ನು ಕಾಣಬಹುದು ಎನ್ನುತ್ತಾ ಲೇಖಕರು ಬೆರಗುಗೊಂಡಿರುವುದನ್ನು ನಾವು ಕಾಣಬಹುದು.

ಸ್ಮಿತ್ ಸೋನಿಯನ್ ಸಂಸ್ಥೆಯ ಭವ್ಯತೆಯನ್ನು ಹಾಗೂ ಕಲಾತ್ಮಕತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಸಂಸ್ಥೆಯ ಬೃಹದಂಗಳದಲ್ಲಿ ಹಾಗೂ ಆಶ್ರಯದಲ್ಲಿ ಇರುವ ಅನೇಕ ಕಲಾಸಂಸ್ಥೆಗಳ ಸೂಕ್ಷ್ಮ ಪರಿಚಯವಾದರೂ ನಮಗಾಗಬೇಕೆಂದು ಅವುಗಳಲ್ಲಿ ಮುಖ್ಯವಾದವುಗಳನ್ನು ಹೀಗೆ ಕೊಟ್ಟಿದ್ದಾರೆ.

1. ಆರ್ಕಿವ್ಸ್ ಆಫ್ ಅಮೇರಿಕನ್ ಆರ್ಟ್.

2. ಸೆಂಟರ್ ಫಾರ್ ದಿ ಸ್ಟಡಿ ಆಫ್ ಮ್ಯಾನ್.

3. ಸೆಂಟರ್ ಫಾರ್ ಎನ್‌ವೈರ್‌ನಮೆಂಟಲ್ ಸ್ಟಡೀಸ್.

4. ಪ್ಲೋರಿಡಾ ಬ್ಯೂರೋ.

5. ಫ್ರೀಯರ್ ಗ್ಯಾಲರಿ ಆಫ್ ಆರ್ಟ್.

6. ಇಂಟರ್‌ನ್ಯಾಷನಲ್ ಎಕ್ಸಛೇಂಜ್ ಸರ್ವೀಸ್.

7. ಜಾನ್ ಎಫ್. ಕೆನಡಿ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್.

8. ಹರ್ಷ್‌ಹಾರ್ನ್ ಮ್ಯೂಸಿಯಂ ಅಂಡ್ ಸ್ಕಲ್‌ಪ್ಚರ್ ಗಾರ್ಡನ್.

9. ನ್ಯಾಷನಲ್ ಏರ್ ಆಂಡ್ ಸ್ಪೇಸ್ ಮ್ಯೂಸಿಯಂ.

10. ನ್ಯಾಷನಲ್ ಕಲೆಕ್ಷನ್ ಆಫ್ ಫೈನ್ ಆರ್ಟ್ಸ್.[21] ಹೀಗೆ ಇನ್ನೂ ಹಲವಾರು ಕಲಾಸಂಸ್ಥೆಗಳ ಬಗ್ಗೆ ತಿಳಿಸುವುದಲ್ಲದೆ, ಇಲ್ಲಿ ಎಲ್ಲ ದೇಶದ ಎಲ್ಲ ವರ್ಗದ ಜನರೂ ಈ ಬೃಹತ್ ಸಂಸ್ಥೆಯ ಸದಸ್ಯರಾಗಲು ಅವಕಾಶವಿದೆ ಎನ್ನುತ್ತಾ, ಇಚ್ಛೆಯಿರುವವರಿಗೆ ಅಲ್ಲಿನ ವಿಳಾಸವನ್ನು ಸಹ ತಿಳಿಸುತ್ತಾರೆ.

'ದಿ ವರ್ಲ್ಡ್ಸ್ ಆರ್ಟಸ್ಟ್ ಅಂಡ್ ಅಮೇರಿಕಾ, ಇಮ್ಮಿಗ್ರೆಂಟ್ಸ್ ಅಂಡ್ ರೆಫ್ಯುಜೀಸ್'ನ್ನು ಕುರಿತು ವಿಶ್ವದ ಅತ್ಯಂತ ಪ್ರತಿಷ್ಠಿತ ಕಲಾಸೌಧವೆನಿಸುವ ಈ ಕಲಾಮಂದಿರದಲ್ಲಿ ಕಳೆದ ಪ್ರತಿಕ್ಷಣವೂ ಬದುಕಿನ ಸಾರ್ಥಕ ಘಳಿಗೆ ಎನ್ನುವ ಲೇಖಕರು, 'ಸ್ಮಿತ್ ಸೋನಿಯನ್ ಮ್ಯೂಸಿಯಂ' ನನಗೆ ಎಂದೆಂದೂ ಮಾಸದ ಕಲಾವೈಭವದ ಕಲಾಶ್ರೀಮಂತಿಕೆಯ ಅಮೃತ ನೆನಪನ್ನು ತಂದಿತ್ತಿತು ಎಂದು ಉದ್ಗಾರ ತೆಗೆದಿದ್ದಾರೆ.

ವಾಷಿಂಗ್ಟನ್ನಿನ ಲೈಬ್ರರಿ ಆಫ್ ಕಾಂಗ್ರೆಸ್ ಇಡೀ ವಿಶ್ವಕ್ಕೆ ಒಂದು ಮಾದರಿ ಎನ್ನುತ್ತಾ, ಈ ಗ್ರಂಥಾಲಯ ಮುಖ್ಯವಾಗಿ ಸದಸ್ಯರ ಸಂಶೋಧನಾತ್ಮಕ ಕಾರ್ಯಕ್ರಮಗಳಿಗೆ ಹಾಗೂ ಕಮಿಟಿ ಆಫ್ ಕಾಂಗ್ರೆಸ್‌ನ ಅಗತ್ಯಗಳನ್ನು ಪೂರೈಸಲು ಸಹಕಾರಿಯಾಗುತ್ತದೆ. ಈಗ ಈ ಗ್ರಂಥಾಲಯ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ಗ್ರಂಥಾಲಯವಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಯ ವಯಸ್ಸು ಮೀರಿದ ಯಾರಾದರೂ ಇಲ್ಲಿನ ಹದಿನಾರು ವಿಭಾಗಗಳಲ್ಲಿ ಓದಿ ಅದರ ಪ್ರಯೋಜನ ಪಡೆಯಬಹುದೆಂದು ತಿಳಿಸುತ್ತಾರೆ. ಸರ್ಕಾರಕ್ಕೆ ಹಾಗೂ ಇತರೆ ಗ್ರಂಥಾಲಯಗಳಿಗೆ ಇಲ್ಲಿಂದ ಎರವಲು ಆಧಾರದ ಮೇಲೆ ಗ್ರಂಥ ಸೌಲಭ್ಯ ಇದ್ದು, ಕಂಪ್ಯೂಟರ್ ಬಳಕೆಯಿರುವ ಗ್ರಂಥಾಲಯಗಳಿಗಾಗಿ ವಿಷಯ ಸೂಚಿಯನ್ನು ಧ್ವನಿಮುದ್ರಿಸಿದ 'ಮ್ಯಾಗ್ನಟೆಕ್ ಟೇಪು'ಗಳನ್ನು ಈ ಗ್ರಂಥಾಲಯದ ಮೂಲಕ ಒದಲಾಗಿಸುತ್ತದೆಂಬ ಎಂಬ ಮೊದಲಾದ ವಿವರಗಳನ್ನು ತಮ್ಮ ವೃತ್ತಿ ಪ್ರವೃತಿಗಳಿಗನುಗುಣವಾಗಿ ಗ್ರಂಥಾಲಯಗಳ ಬಗ್ಗೆ ವಿಶೇಷವಾಗಿ ಪರಿಶೀಲಿಸಿದ್ದಾರೆ.

ಅಂಧರಿಗಾಗಿ ಬ್ರೈಲ್ ಲಿಪಿಯ ಗ್ರಂಥ ವಿಭಾಗ, ಅಂಗವಿಕಲರಿಗಾಗಿ ಐವತ್ತೂರು ಸಹಕಾರಿ ಪ್ರಾದೇಶಿಕ ಗ್ರಂಥಾಲಯಗಳು, ಮಾತನಾಡುವ ಗ್ರಂಥಗಳು ಹಾಗೂ ಕ್ಯಾಪಿರೈಟ್ ವ್ಯವಸ್ಥೆಗಳ ಮೂಲಕ ಮಹತ್ತರ ಸೇವೆ ಒದಗಿಸುತ್ತವೆ. ಅಲ್ಲದೆ ನಿರಂತರವಾಗಿ ಪ್ರದರ್ಶನಗಳು, ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉಚಿತವಾಗಿ ಸಾರ್ವಜನಿಕರಿಗೆ ಒದಗಿಸುತ್ತವೆ ಎನ್ನುತ್ತಾ ಈ ಗ್ರಂಥಾಲಯದ ಸೇವಾ ವಿಶೇಷತೆಯನ್ನು ತಿಳಿಸುತ್ತಾರೆ.

ಈ ಗ್ರಂಥಾಲಯದ ಸಂಗ್ರಹದ ಬಗ್ಗೆ ಲೇಖಕರು ಕೆಲವು ಅಂಕಿ ಅಂಶಗಳು ಕೊಡುತ್ತಾರೆ. 1974ರ ಜೂನ್ 30ರಂದು ಸಿಕ್ಕ ಲೆಕ್ಕಾಚಾರದಂತೆ ಇಲ್ಲಿ ಲಭ್ಯವಾಗುವ ಒಟ್ಟು ಸಂಗ್ರಹಳ ಸಂಖ್ಯೆ 740 ಲಕ್ಷ. ಇದನ್ನು ಇಟ್ಟಿರುವ ಬುಕ್‌ಷೆಲ್ಫ್‌ಗಳನ್ನೆಲ್ಲಾ ಒಂದರ ಪಕ್ಕ ಒಂದು ಜೋಡಿಸಿದರೆ ಒಟ್ಟು 320 ಮೈಲಿ ಉದ್ದವಾಗುತ್ತದೆ. ಇದರಲ್ಲಿ 160 ಲಕ್ಷ ಗ್ರಂಥಗಳು, ಒಂದು ಲಕ್ಷ ಆರು ಸಾವಿರ ಪತ್ರಿಕಾ ಸಂಪುಟಗಳು, ಮುನ್ನೂರ ಹತ್ತು ಲಕ್ಷ ಅಮೂಲ್ಯ ಹಸ್ತ ಪ್ರತಿಗಳು, ಮೂವತ್ತೈದು ಲಕ್ಷ ಭೂಪಟ ಹಾಗೂ ದರ್ಶಕಗಳು, ನಾಲ್ಕು ಲಕ್ಷ ಇಪ್ಪತ್ತೆಂಟು ಸಾವಿರ ರಿಕಾರ್ಡುಗಳು, ಟೇಪುಗಳು, ಮೂವತ್ನಾಲ್ಕು ಲಕ್ಷ ಸಂಗೀತ ಉಪಕರಣಗಳು, ಒಂದು ಲಕ್ಷ ಎಪ್ಪತ್ನಾಲ್ಕು ಸಾವಿರ ರೇಖಾ ಕೃತಿಗಳು, 84 ಲಕ್ಷ ಛಾಯಾಚಿತ್ರದ ನೆಗೆಟಿವ್‌ಗಳು ಹಾಗೂ ಸ್ಲೈಡುಗಳು, ಎರಡು ಲಕ್ಷ ಎರಡು ಸಾವಿರ ಚಲನಚಿತ್ರ

ಮುದ್ರಿಕೆಗಳು, 212 ಲಕ್ಷ ಮೈಕ್ರೋಪಾರಂ ಪ್ರತಿಗಳು, 12 ಲಕ್ಷ ಬ್ರೈಲ್ ಲಿಪಿಯ ಗ್ರಂಥಗಳು, ಮೂವತ್ತೊಂದು ಲಕ್ಷ ಮಾತಾಡುವ ಗ್ರಂಥಗಳು, ಎರಡು ಲಕ್ಷ ಎಂಬತ್ತಾನ್ಲಲ್ಕು ಸಾವಿರ ಮ್ಯಾಗ್ನಾಟೇಕ್ ಟೇಪಿನ ಸಂಗ್ರಹಗಳು ಇವೆ. ಹೀಗೆ ಕಲ್ಪಿಸಲೂ ಅಸಾಧ್ಯವಾದಂತಹ ಬೃಹತ್ ಗ್ರಂಥ ಭಂಡಾರದ ನಡುವೆ ಓಡಾಡುವಾಗ ಆದ ಅನುಭವ, ಗ್ರಂಥಗಳ, ಹಸ್ತಪ್ರತಿಗಳ ಅಪೂರ್ವ ಸಂಗ್ರಹಗಳನ್ನು ಕಾಣುವ ಅದೃಷ್ಟ; ನಿಜಕ್ಕೂ ನನಗೆ ಅದೊಂದು ಅಮೃತ ಘಳಿಗೆಯೆನಸುವಂತಿತ್ತು"[22] ಎಂದು ಲೇಖಕರು ಆಶ್ಚರ್ಯಾದ್ಭುತಗಳನ್ನು ವ್ಯಕ್ತಪಡಿಸಿದ್ದಾರೆ.

ನಿಜಕ್ಕೂ ಎಲ್ಲರನ್ನು ಆಶ್ಚರ್ಯಗೊಳಿಸುವಂತದ್ದುದೆಂದರೆ ಓದುಗರಿಗೆ ಬೇಕಾದಾಗ ಅವರ ಮನೆ ಬಾಗಿಲಿಗೆ ತಲುಪುವ ವ್ಯವಸ್ಥೆ ನಿಜಕ್ಕೂ ಶ್ಲಾಘನೀಯ. ನಮ್ಮಲ್ಲಿ ಅಸಾಧ್ಯವಾಗಿದ್ದು ಮನಸ್ಸಿಗೆ ಖೇದವೆನಸುತ್ತದೆ. ಅಲ್ಲಿ ಸಾಧ್ಯವಾಗಿರುವುದು ಮೆಚ್ಚುವಂತಹದು ಎಂದು ಗ್ರಂಥಾಲಯಾಧಿಕಾರಿಯಾದ ಲೇಖಕರು ಕೂಲಂಕಷವಾಗಿ ಎಲ್ಲ ಮಾಹಿತಿಗಳನ್ನು ತಿಳಿದುಕೊಂಡಿದ್ದಾರೆ. ಅಲ್ಲಿನ ಸಂಘಟನೆ, ಸಂಯೋಜನೆ, ಕಾರ್ಯನಿರ್ವಹಣೆ ಬಗ್ಗೆ ಅಧ್ಯಯನ ನೆಡೆಸಬೇಕೆಂದಿದ್ದ ಲೇಖಕರಿಗೆ ಸಮಯದ ಅಭಾವವುಟಾಂಗಿದೆ. ಇದ್ದ ಅಲ್ಪ ಸಮಯದಲ್ಲಿಯೇ ಅಲ್ಲಿನ ಕಾರ್ಯನಿರ್ವಹಣಾ ವಿಧಾವನ್ನು ಸಂಕ್ಷಿಪ್ತವಾಗಿ ಅರಿಯಲು ಪ್ರಯತ್ನಿಸಿದ್ದಾರೆ. ಅತ್ಯಾಧುನಿಕ ರೀತಿಯಲ್ಲಿ ಸುಸಜ್ಜಿತವಾಗಿರುವ ಲೈಬ್ರರಿ ಆಫ್ ಕಾಂಗ್ರೆಸ್ ವಿಶ್ವದ ಎಲ್ಲ ಗ್ರಂಥಾಲಯಗಳಿಗೂ ಹಾಗೂ ಗ್ರಂಥಾಲಯ ಇಲಾಖೆಗಳಿಗೂ ಮಾದರಿ ಎಂದು ಹೇಳುತ್ತಾ, ಅಮೇರಿಕಾ ತನ್ನ ಬೌದ್ಧಿಕ ಪ್ರಗತಿಯಿಂದ ಆರ್ಥಿಕ ಹಾಗೂ ಸಾಮಾಜಿಕ ಯಶಸ್ಸು ಗಳಿಸಿರುವ ಜಗತ್ತಿನ ಅತ್ಯುನ್ನುತ ಶಿಖರದಲ್ಲಿರುವ ಒಂದು ರಾಷ್ಟ್ರ, ಪುಸ್ತಕಗಳ ಪ್ರಪಂಚವೆಂದು ನಂಬಿ ವಿಶ್ವಾಸವನ್ನಿಟ್ಟಿರುವುದು ಉಳಿದೆಲ್ಲಾ ರಾಷ್ಟ್ರಗಳಿಗೂ ಒಂದು ದಾರಿ ದೀಪದಂತೆ ಎಂದಿರುವುದು ಸಮಂಜಸವಾಗಿದೆ.

ಸಂಪ್ರದಾಯದ ಕಟ್ಟುಕಟ್ಟಳೆಗಳನ್ನು, ಧಾರ್ಮಿಕ ಮನೋಭಾವನೆಯನ್ನು ಕಡೆಗಣಿಸುತ್ತಾ, ದೇವರ ಅಸ್ತಿತ್ವದ ಬಗ್ಗೆಯೇ ಸಂದೇಹ ವ್ಯಕ್ತಪಡಿಸುತ್ತಾ ನಾಸ್ತಿಕರಾಗಿ ಬೆಳೆಯುತ್ತಿರುವ ಜನ ಭಾರತದಲ್ಲಿ ಕಾಣಬೇಕಾದರೆ ಬರಿಯ 'ಮೆಟೇರಿಯಲಿಸ್ಟಿಕ್, ವಾತಾವರಣದ, ಪ್ಲಾಸ್ಟಿಕ್ ಯುಗದ ಅಮೇರಿಕನ್ ಜನತೆಯ ಭಕ್ತಿಯನ್ನು ಕಾಣುವ ಅವಕಾಶ ಒದಗಿ ಬಂದ ಸಂದರ್ಭವನ್ನು ಉಪಯೋಗಿಸಿಕೊಂಡಿದ್ದಾರೆ. ಅದು 'ಥ್ಯಾಂಕ್ಸ್ ಗೀವಿಂಗ್ ಡೇ' ಅಮೇರಿಕಾದಲ್ಲೆಲ್ಲಾ ಅತಿ ಪ್ರಸಿದ್ದವಾಗಿ ಆಚರಿಸುವ ಹಬ್ಬದ ಮುಖಾಂತರ ಪ್ರತಿವರ್ಷ ನವೆಂಬರ್ 27ರಂದು ನಡೆಯುವ ಸಡಗರದ ಈ ಹಬ್ಬವನ್ನು ಮೊಟ್ಟ ಮೊದಲು ಇಂಗ್ಲೆಂಡ್‌ನಿಂದ

'ಮೈ ಫ್ಲವರ್' ಎಂಬ ಹಡಗಿನಿಂದ ಅಮೇರಿಕಾಕ್ಕೆ ಬಂದು ನೆಲೆಸಿದ ವಲಸೆಗಾರರು ಆರಂಭಿಸಿರುವುದು. ಅಂದಿನಿಂದ ಇದು ಅಲ್ಲಿ ರಾಷ್ಟ್ರೀಯ ಸಂಪ್ರದಾಯವಾಗಿದೆ ಎನ್ನುತ್ತಾರೆ.

ಇನ್ನೊಂದು ಸಡಗರದ ಹಬ್ಬ ಎಂದರೆ 'ಚೆರ್ರಿ ಬ್ಲಾಸಂ' ಹಬ್ಬ. ಅಮೇರಿಕಾದ ನವಯುವತಿಯರು ಮನಮೋಹಕ ಉಡುಪುಗಳಲ್ಲಿ ಕಣ್ಮನ ತಣಿಸುವ ಬೆಳಕಿನ ಸೂಕ್ಷ್ಮ ವ್ಯವಸ್ಥೆಯಲ್ಲಿ ಒಬ್ಬರಾದ ಮೇಲೆ ಒಬ್ಬರು, ಒಬ್ಬೊಬ್ಬರಾಗಿ ತೇಲಿ ಬರುತ್ತಾರೆ. ಜಾಯ್ ಗಾಯನದ ಸೂಕ್ಷ್ಮ ಹಿನ್ನೆಲೆಯಲ್ಲಿ ಮೂರು–ನಾಲ್ಕು ಘಂಟೆಗಳ ಕಾಲ ಈ ಪೆರೇಡ್ ನಡೆಯುತ್ತದೆ. ಇಂಥ ಈ ಸಮಾರಂಭಕ್ಕೆ ಎಲ್ಲ ಗಣ್ಯ ವ್ಯಕ್ತಿಗಳೂ ಆಮಂತ್ರಿಸಲ್ಪಡುತ್ತಾರೆ. ಹೀಗೆ ಪ್ರತಿ ವರ್ಷ ಆಯಾ ವರ್ಷದ ಚೆರ್ರಿ ಬ್ಲಾಸಂ ಹಬ್ಬದ ರಾಣಿಯನ್ನು ಆಯ್ಕೆ ಮಾಡಿ ಗಣ್ಯರಿಂದ ಕಿರೀಟಧಾರಣೆ ಮಾಡಿಸುತ್ತಾರೆ ಎಂದು ಲೇಖಕರು ಸಂಕ್ಷಿಪ್ತವಾಗಿ ಹಬ್ಬಗಳ ಬಗ್ಗೆ ತಿಳಿಸುತ್ತಲೇ ಅಮೇರಿಕನ್ ಸಂಸ್ಕೃತಿಯನ್ನು ಪರಿಚಯಿಸುತ್ತಾರೆ.

'ಅಮೇರಿಕಾದಲ್ಲಿ ನಾನಿದ್ದಷ್ಟು ದಿನವೂ ಹೊಸ ಹೊಸ ಅನುಭವ ಪಡೆಯುತ್ತಿದ್ದೆ' ಎನ್ನುವ ಲೇಖಕರು ತಾವು ಪಡೆದ ಹೊಸ ಅನುಭವಗಳನ್ನು ಸ್ಪಷ್ಟವಾಗಿ, ಸರಳವಾಗಿ ನಿರೂಪಿಸಿತ್ತಾ, ಅಮೇರಿಕದಲ್ಲಿ ಸಾಮಾನ್ಯವಾಗಿ ಮುಗಳು ನಗೆ ಧರಿಸಿಯೇ ಇರಬೇಕು ಎನ್ನುತ್ತಾರೆ. ಕಾರಣ ಅಲ್ಲಿರುವವರೆಲ್ಲ ಹಸನ್ಮುಖಿಗಳು. ಅಲ್ಲಿನವರು ಸದಾ ದುಡಿಮೆಯ ಮಿತ್ರತಾಗಿರುತ್ತಾರೆ, ಪ್ರವಾಸಿಗಳಿಗೆ ಮಾರ್ಗದರ್ಶಕರಾಗಿರುತ್ತಾರೆ. ಆಕರ್ಷಣೆಗಾಗಿ ಏನು ಮಾಡಲೂ ಸಿದ್ಧರಾಗಿರುತ್ತಾರೆ ಎಂದು ಅಮೇರಿಕನ್ನರ ಕ್ರಿಯಾಶೀಲತೆಯನ್ನು ತಿಳಿಸುತ್ತಾರೆ.

ಅಮೇರಿಕಾದ ವಿಶೇಷವೆಂದರೆ 'ಸಂಖ್ಯಾ ಸಮಸ್ಯೆ'. ಅಲ್ಲಿ ಪ್ರತಿಯೊಬ್ಬ ನೌಕರನಿಗೂ ಒಂದೊಂದು ಸಂಖ್ಯೆ, ಪ್ರತಿ ವೃದ್ದರಿಗೂ ಒಂದು ಸಂಖ್ಯೆ, ಪ್ರತಿ ವಾಹನ, ಪ್ರತಿ ವ್ಯವಹಾರಗಳಿಗೂ ಸಂಖ್ಯೆಯನ್ನು ಉಪಯೋಗಿಸುವುದು. ಎಲ್ಲ ವ್ಯವಹಾರಗಳನ್ನು ಸಂಕ್ಷಿಪ್ತವಾಗಿ ಅಂಕಿಗಳನ್ನು ನಮೂದಿಸಿ ಮುಗಿಸಿ ಬಿಡುತ್ತಾರೆ ಎಂದು ಲೇಖಕರು ಅಲ್ಲಿನ ವ್ಯಾವಹಾರಿಕ ಜೀವನ ವ್ಯವಸ್ಥೆಯನ್ನು ತಿಳಿಸಿದ್ದಾರೆ.

ಅಮೇರಿಕಾದಲ್ಲಿ ಅದ್ಭುತವಾಗಿ ಬೆಳೆದಿರುವ ಬೃಹತ್ ಸಮಸ್ಯೆಯೆಂದರೆ 'ನಿಗ್ರೋ ಸಮಸ್ಯೆ'. ಅಮೇರಿಕಾದಲ್ಲಿ "ವಾಷಿಂಗ್ಟನ್‌ನ ಡಿ.ಸಿ., ನ್ಯೂಯಾರ್ಕ್, ಸ್ಯಾನ್‌ಫ್ರಾನ್ಸಿಸ್ಕೋ ಮುಂತಾದ ನಗರಗಳ ಕಡೆ ರಾತ್ರಿ ಹೊತ್ತು ಜನ ಒಬ್ಬಂಟಿಯಾಗಿ ಓಡಾಡಲು ಎದರುತ್ತಾರೆ. ಏಕೆಂದರೆ ಈ ನಿಗ್ರೋ ಜನ ಕೈಮಾಡಿ

ಇದ್ದುದನ್ನು ದೋಚಿ ಹೋಗುವ ವಿಷಯದಲ್ಲಿ ಬಹಳ ಹೆಸರುವಾಸಿ. ಕೆಲವು ಸಾರಿ ಕಿಟಕಿ ಬಾಗಿಲುಗಳ ಷೋ ರೂಮ್‌ಗಳ, ಕಾರುಗಳ ಗಾಜು ಒಡೆದು ಕಳ್ಳತನ ಮಾಡುವ ಪ್ರವೃತ್ತಿಯೂ ಇವರಲ್ಲುಂಟು. ಅಮೇರಿಕಾದ ನೀಗ್ರೋ ಈಚೆಗೆ ಸಾಮಾನ್ಯವಾಗಿ ದೇಶದ ಎಲ್ಲ ಸೌಲಭ್ಯ, ಸವಲತ್ತುಗಳನ್ನು ಹೊಂದಿದ್ದಾನೆ. ಹೀಗಿದ್ದೂ ತನಗೆ ಅನ್ಯಾಯವಾಗಿದೆ ಎನ್ನುವಂತೆ ಸೌಜನ್ಯರಹಿತವಾಗಿ, ಅಸಭ್ಯವಾಗಿ, ವಿಪರೀತವಾಗಿ ವರ್ತಿಸುವ ಇವರ ಬಗ್ಗೆ ಮುಂಚಿನಷ್ಟು ಸಹಾನುಭೂತಿ ಈಗ ಯಾರಿಗೂ ಇಲ್ಲ. ವಾಷಿಂಗ್ಟನ್, ಚಿಕಾಗೋಗಳಂತೂ ನೀಗ್ರೋಗಳ ದೇಶದಂತೆಯೇ ಆಗಿದೆ. ವಾಷಿಂಗ್ಟನ್ನಿನ ಮುಖಂಡರೂ ಸೂಕ್ಷ್ಮ ನೀಗ್ರೋ ಬುಡಕಟ್ಟಿಗೆ ಸೇರಿದವರು"[23] ಎಂದು ಲೇಖಕರು ಕೆಲವು ನೀಗ್ರೋಗಳ ದುರ್ವರ್ತನೆಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ.

ಅಮೇರಿಕಾದ ಬಸ್ ಸೇವಾ ಸೌಲಭ್ಯದ ಬಗ್ಗೆ ಮೆಚ್ಚಿಕೊಳ್ಳುತ್ತಾ ಬಸ್‌ಗಳ ಅತ್ಯುತ್ತಮ ಸೇವೆಗೆ ಒಂದು ನಿದರ್ಶನ ಕೊಡುತ್ತಾರೆ. ಅದು 'ಗ್ರೇ ಹೌಂಡ್' ಸಂಸ್ಥೆಯ ಬಸ್‌ಗಳೆಲ್ಲಾ ವಿಮಾನದ ಆಸನಗಳಂತೆ ಸುಖಾಸೀನವಾಗಿದ್ದ ಇಡೀ ಬಸ್ ಉತ್ತಮ ವ್ಯವಸ್ಥೆಯಿಂದೊಡಗೂಡಿರುತ್ತದೆ. ನೀಲಿ ಹಾಗೂ ಬೂದು ಮಿಶ್ರಿತ ಬಣ್ಣದ ಯೂನಿಫಾರಂ ಧರಿಸಿದ ಪ್ರತಿ ಡ್ರೈವರ್ ಮುಖದಲ್ಲೂ ಸ್ವಾಗತದ ಆಕಾಂಕ್ಷೆಯಿರುತ್ತದೆ. ತಾಳ್ಮೆ, ಸೌಜನ್ಯಗಳಿಗೆ ಹೆಸರಾದ ಈ ಜನ, ಪ್ರಯಾಣಿಕರಿಗೆ; ವೇಗದಲ್ಲಿ, ಸೌಖ್ಯದಲ್ಲಿ, ಸೇವೆಯಲ್ಲಿ ಮರೆಯಲಾರದ ಅನುಭವ ಒದಗಿಸಿ ಕೊಡುತ್ತಾರೆ."[24] ಎಂದು ಲೇಖಕರು ಮನದುಂಬಿ ಪ್ರಶಂಸಿಸುವುದು ಸೂಕ್ತವಾಗಿದೆ.

ಅಮೇರಿಕಾದಲ್ಲಿ ಹೆಚ್ಚು ಕಡಿಮೆ ಎಲ್ಲ ಆಫೀಸಿನಲ್ಲಿಯೂ ಮಹಿಳೆಯರೇ ಅತ್ಯಧಿಕವಾಗಿ ದುಡಿಯುತ್ತಿದ್ದಾರೆ ಎಂದು ದಾಖಲಿಸುತ್ತಾ, ಇವರುಗಳು ಹಸನ್ಮುಖರಾಗಿದ್ದು, ತಮ್ಮ ಕಾರ್ಯವನ್ನು ಸುಗಮವಾಗಿ, ಸ್ವಚ್ಛವಾಗಿ ಮತ್ತು ಸಂಪೂರ್ಣವಾಗಿ ಮಾಡುವುದಕ್ಕೆ ಹೆಣ್ಣಿನ ಸಹನೆ ಮತ್ತು ಅಸ್ಥೆ ಅಮೇರಿಕನ್ ಮಹಿಳೆಯರನ್ನು ಉತ್ತಮ ಮಟ್ಟದ ವೃತ್ತಿಪರ ಕೆಲಸಗಾರ್ತಿಯರನ್ನಾಗಿಸಿದೆ ಎಂದು ಹೆಣ್ಣಿನ ಕಾರ್ಯಶೀಲತೆಯನ್ನು ವಿಶೇಷವಾಗಿ ಗುರುತಿಸುವಲ್ಲಿ ಲೇಖಕರಿಗೆ ಮಹಿಳೆಯರ ಬಗೆಗಿರುವ ಗೌರವಾದರಗಳು ಕಂಡುಬರುತ್ತದೆ.

ಅಮೇರಿಕಾದಲ್ಲಿನ ಎಲ್ಲ ವಿದ್ಯಾ ಕೇಂದ್ರಗಳು ಸುವ್ಯವಸ್ಥೆಯ ತಾಣ ಎನ್ನುತ್ತಾರೆ. ಕಾರಣ ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದ ಅಧ್ಯಯನ ವಿವರಗಳು, ಅಧ್ಯಾಪಕ ವರ್ಗ, ಫೀಸು ಮುಂತಾದುವುಗಳ

ಬಗ್ಗೆ ಮಾಹಿತಿ ಕೊಡುತ್ತಾ, ಪ್ರತಿ ವಿದ್ಯಾ ಕೇಂದ್ರವೂ ತನ್ನದೇ ಆದ ಒಂದು ಹಾಸ್ಟಲ್‌ನ್ನು ಹೊಂದಿರುತ್ತದೆ. ವಿದ್ಯಾರ್ಥಿಗಳಿಗೆ ಅಗತ್ಯ ಸಹಾಯ ಒದಗಿಸಲು ಕ್ಷೇಮಾಭಿವೃದ್ಧಿ ಸಹಾಯಕ ಕೇಂದ್ರಗಳಿರುತ್ತವೆ. ಅಧ್ಯಾಪಕ ವರ್ಗದವರನ್ನು ಪ್ರತಿ ವಿದ್ಯಾರ್ಥಿಗೊಬ್ಬರಂತೆ ಸಹಾಯಕರನ್ನಾಗಿ ಅಥವಾ ಮಾರ್ಗದರ್ಶಕರನ್ನಾಗಿ ನಿಯಮಿಸಿರಲಾಗುತ್ತದೆ. ಎಲ್ಲ ವಿದ್ಯಾರ್ಥಿಗಳನ್ನು ಮನಃಶಾಸ್ತ್ರದ ತಜ್ಞರಿಂದ ಪರೀಕ್ಷೆಗೊಳಪಡಿಸಲಾಗುತ್ತದೆ. ಒಂದು ವರ್ಷಕ್ಕೆ ಮೂರು ಅಥವಾ ನಾಲ್ಕು ಟರ್ಮ್‌ಗಳಿರುವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ಎಲ್ಲ ಸೇವೆಯನ್ನು ಒದಗಿಸಲಾಗುತ್ತದೆ. ಪ್ರತಿ ಕಾಲೇಜು ಅಥವಾ ವಿಶ್ವವಿದ್ಯಾನಿಲಯದಲ್ಲಿಯೂ ವಿದ್ಯಾರ್ಥಿ ಸಂಘದ ಕಟ್ಟಡಗಳಿರುತ್ತವೆ. ಅಲ್ಲಿ ವಿದ್ಯಾರ್ಥಿಗಳು ವಿಶ್ರಾಂತಿ ತೆಗೆದುಕೊಳ್ಳಲು ಸೌಕರ್ಯಗಳಿರುವುದರೊಂದಿಗೆ, ವಿವಿಧ ಬಗೆಯ ಸಾಹಿತ್ಯದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸಲು ಅನುಕೂಲಕರವಾದ ಸಭಾ ಭವನಗಳು ಈ ಕಾಲೇಜುಗಳಲ್ಲಿರುತ್ತವೆ. ಅನೇಕ ಕಾಲೇಜುಗಳಲ್ಲಿನ ರೆಸ್ಟೋರೆಂಟ್‌ಗಳು ಉತ್ತಮ ಬೆಲೆಯ ಉತ್ತಮ ತರಹದ ತಿನಿಸನ್ನೊದಗಿಸುತ್ತವೆ. ಅನೇಕ ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರು ನೃತ್ಯಗಾರರು ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ತಣಿಸುವಂತಹ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ. ಇಲ್ಲಿನ ವಿದ್ಯಾರ್ಥಿಗಳಿಗೆ ಪ್ರವಾಸ ಅತ್ಯುತ್ತಮ ಮನರಂಜನೆ, ಪ್ರತಿ ವಿಶ್ವವಿದ್ಯಾಲಯವೂ ತನ್ನ ವಿದ್ಯಾರ್ಥಿಗಳ ಆರೋಗ್ಯ ನಿರ್ವಹಣೆಗಾಗಿ ಒಂದು ಆಸ್ಪತ್ರೆಯನ್ನು ಹೊಂದಿರುತ್ತದೆ. ಪ್ರತಿ ವಿದ್ಯಾರ್ಥಿ ನಿಲಯದ ಕೊಠಡಿಯಲ್ಲೂ; ಫೋನುಗಳು, ಟೆಲಿವಿಷನ್ನುಗಳು ಮುಂತಾದ ಆಧುನಿಕ ಸೌಲಭ್ಯಗಳೂ ಲಭ್ಯವಿರುತ್ತವೆ.[25] ಎಂದು ಲೇಖಕರು ಅಮೇರಿಕಾದ ಶಿಕ್ಷಣ ವ್ಯವಸ್ಥೆಯ ಸರ್ವತೋಮುಖ ಸೌಕರ್ಯ ನೀಡುವುದನ್ನು ಗಮನಿಸಿದರೆ ಈ ವ್ಯವಸ್ಥೆ ನಮ್ಮಲ್ಲೂ ಇದ್ದರೆ ಚೆನ್ನಾಗಿರುತ್ತಿತ್ತೆಂದು ಎಂಬ ಲೇಖಕರ ಮನೋಭಾವ ನಮ್ಮಲ್ಲೂ ಉಂಟಾಗುತ್ತದೆ.

ಒಟ್ಟಾರೆಯಾಗಿ ಲೇಖಕರು ತಮ್ಮ ದೊರೆತ ಕಡಿಮೆ ಕಾಲಾವಧಿಯಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳು, ಕಲಾಕೇಂದ್ರಗಳಿಗೆ, ಗ್ರಂಥಾಲಯಗಳಿಗೆ ಭೇಟಿ ಕೊಟ್ಟು ಹಲವು ಮಾಹಿತಿಯನ್ನು ಗ್ರಹಿಸಿಸುತ್ತಲೇ ಅದನ್ನು ಓದುಗರ ಗ್ರಹಿಕೆಗನುಕೂಲವಾಗುವಂತೆ ಸರಳವಾಗಿ ಅರ್ಥೈಸಿದ್ದಾರೆ ಮತ್ತು ಅಮೆರಿಕನ್ನರ ಸಾಮಾನ್ಯ ಜೀವನ ರೀತಿಯ ವಿಧಾನವನ್ನು ತಿಳಿಸಿರುವುದರಿಂದ ಈ ಪ್ರವಾಸ ಕಥನ ಸರಾಗವಾಗಿ ಓದಿಸಿಕೊಂಡು ಸಾಗುತ್ತದೆ.

**ಕೊನೆ ಟಿಪ್ಪಣಿ :**


1. ನಾರಿ ನಿನಗೆ ನಮೋ ನಮೋ–1979, ಮ. ನಾಗರಾಜರಾವ್, ಪುಟ 29–30.
2. ನಾರಿ ನಿನಗೆ ನಮೋ ನಮೋ–1979, ಮ. ನಾಗರಾಜರಾವ್, ಪುಟ 44.
3. ನಾರಿ ನಿನಗೆ ನಮೋ ನಮೋ–1979, ಮ. ನಾಗರಾಜರಾವ್, ಪುಟ 108.
4. ನಾನು ಅಮೇರಿಕೆಗೆ ಹೋಗಿದ್ದೆ–1969, ಕೃಷ್ಣಾನಂದ ಕಾಮತ್, ಪುಟ 10.
5. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ: 280.
6. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ: 241.
7. ನಾನು ಅಮೇರಿಕೆಗೆ ಹೋಗಿದ್ದೆ–1969,ಕೃಷ್ಣಾನಂದ ಕಾಮತ್, ಪುಟ 121.
8. ಗಗನ ಸಖಿಯರ ಸೆರಗ ಹಿಡಿದು–1995, ನಾಗೇಶ ಹೆಗಡೆ, ಪುಟ 35.
9. ಗಗನ ಸಖಿಯರ ಸೆರಗ ಹಿಡಿದು–1995, ನಾಗೇಶ ಹೆಗಡೆ, ಪುಟ–49.
10. ಗಗನ ಸಖಿಯರ ಸೆರಗ ಹಿಡಿದು–1995, ನಾಗೇಶ ಹೆಗಡೆ, ಪುಟ 65.
11. ಗಗನ ಸಖಿಯರ ಸೆರಗ ಹಿಡಿದು–1995, ನಾಗೇಶ ಹೆಗಡೆ, ಪುಟ 65.
12. ಗಗನ ಸಖಿಯರ ಸೆರಗ ಹಿಡಿದು–1995, ನಾಗೇಶ ಹೆಗಡೆ, ಪುಟ 76–77.
13. ಪರದೇಶಿಯಾದಾಗ–1983, ಡಾ॥ಎಚ್.ಕೆ. ರಂಗನಾಥ್, ಪುಟ 29.
14. ಪರದೇಶಿಯಾದಾಗ–1983, ಡಾ॥ಎಚ್.ಕೆ. ರಂಗನಾಥ್, ಪುಟ 83.
15. ಅಮೇರಿಕದಲ್ಲಿ ಅರವತ್ತು ದಿನಗಳು–1972, ಕೆ. ಗಣೇಶ ಮಲ್ಯ, ಪುಟ 15.
16. ಅಮೇರಿಕದಲ್ಲಿ ಅರವತ್ತು ದಿನಗಳು–1972, ಕೆ. ಗಣೇಶ ಮಲ್ಯ, ಪುಟ 15.
17. ಅಮೇರಿಕದಲ್ಲಿ ಅರವತ್ತು ದಿನಗಳು–1972, ಕೆ. ಗಣೇಶ ಮಲ್ಯ, ಪುಟ 151.
18. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ, ಪುಟ: 285.
19. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 156–157.
20. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 175.
21. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 170.
22. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 183.
23. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 198.
24. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 198.
25. ವಿದೇಶ ಪ್ರವಾಸದ ಅನುಭವಗಳು–1976, ಎನ್.ಡಿ. ಬಗರಿ, ಪುಟ 200.


* * *

# ಅಧ್ಯಾಯ – 4

## ಅಮೇರಿಕ ಸಾಹಿತ್ಯಿಕ ಪ್ರವಾಸ ಕಥನಗಳ
## ತಾತ್ವಿಕ ವಿಶ್ಲೇಷಣೆ

# ಅಮೇರಿಕ ಸಾಹಿತ್ಯಿಕ ಪ್ರವಾಸ ಕಥನಗಳ ತಾತ್ವಿಕ ವಿಶ್ಲೇಷಣೆ

ಸೃಜನಶೀಲ ಸಾಹಿತಿಯು ತನ್ನ ಪರಿಸರದ ಶಿಶುವೂ ಹೌದು, ಅದರ ಓರೆಕೋರೆಗಳನ್ನು ತಿದ್ದಿ, ಕಲಾತ್ಮಕವಾಗಿ ರೂಪಿಸಿ ರಸಪುಷ್ಟಿಗೊಳಿಸುವ ವಾಸ್ತುಶಿಲ್ಪಿಯೂ ಹೌದು. ತನ್ನ ಸುತ್ತಲಿನ ಸೌಂದರ್ಯವನ್ನು ಗ್ರಹಿಸುತ್ತಲೆ ಅದಕ್ಕೆ ನಿತ್ಯತ್ವವನ್ನು ನೀಡುವ ಹೊಸ ದೃಷ್ಟಿಯನ್ನು ಕಲ್ಪಿಸುವ, ಪ್ರವಾಸ ಗುಣದಲ್ಲಿಯೇ ಸಾಹಿತ್ಯದ ಅನನ್ಯತೆಯಿರುತ್ತದೆ ಹಾಗಿದ್ದಾಗ ಮಾತ್ರವೇ ಸಾಹಿತ್ಯವು ನಿಜವಾದ ಅರ್ಥದಲ್ಲಿ ಸೃಷ್ಟಿಶೀಲವಾಗುತ್ತದೆ. ಸಾಂಸ್ಕೃತಿಕ ಪರಂಪರೆಯೊಂದಕ್ಕೆ ತನ್ನ ಯೋಗದಾನವನ್ನು ನೀಡುತ್ತಾ ಅದನ್ನು ಸಂಪದ್ಭರಿತವನ್ನಾಗಿ ಮಾಡುತ್ತದೆ ಇದು ಒಂದು ಅವ್ಯಾಹತವಾದ ಪ್ರಕ್ರಿಯೆಯೇ ಆಗಿದೆ. ಎಂದರೆ, ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವ ಜ್ಞಾನವಾಹಿನಿಯಿಂದ ತನ್ನ ಅಳವಿಗೆ ಬರುವಷ್ಟನ್ನು ಮೊಗೆದುಕೊಳ್ಳುವ ಸಾಹಿತಿಯು ಅದಕ್ಕೆ ಪ್ರತಿಯಾಗಿ ತಾನು ಸಂಪಾದಿಸಿದ ಜ್ಞಾನಸಂಪತ್ತನ್ನು ಅಲ್ಲಿಗೆ ಸೇರಿಸುತ್ತಲೆ ಹೋಗುವುದರಿಂದ ಆ ಸೆಲೆಯು ಬತ್ತುವುದಿಲ್ಲ".[1] ಬಾಹ್ಯಾನುಭವಗಳನ್ನು ಸ್ವೀಕರಿಸುತ್ತಾ, ಅವುಗಳನ್ನು ಬಳಸಿಕೊಳ್ಳುವ ಪ್ರಕ್ರಿಯೆಯಲ್ಲಿ ತನ್ನದೇನನ್ನಾದರೂ ಅವುಗಳಿಗೆ ಸೇರಿಸುತ್ತ ಸಾಹಿತಿಯು ಅಭಿವ್ಯಕ್ತಿ ಮೂಲಕ ಅವುಗಳನ್ನು ಲೋಕಕ್ಕೆ ಪ್ರಸ್ತುತಪಡಿಸುತ್ತಾನೆ. ಹೀಗಿರುವುದರಿಂದಲೇ ಸಾಹಿತ್ಯವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ ಮತ್ತು ಅನನ್ಯ ಗುಣವನ್ನು ಪಡೆದುಕೊಳ್ಳುತ್ತದೆ. ಈ ಅನನ್ಯತೆಯಲ್ಲಿ ಪ್ರವಾಸ ಸಾಹಿತ್ಯವು ಒಂದು. ಜನರ ಬದುಕಿನ ರೀತಿ-ನೀತಿ, ದೃಷ್ಟಿ-ಧೋರಣೆ, ಮೌಲ್ಯ-ಆಧಾರಗಳನ್ನು ಬದುಕಿನ ಮನೋಧರ್ಮವನ್ನು ಸಾಹಿತಿಯು ತನ್ನ ಕೃತಿಯ ಮೂಲಕ ಹಿಡಿದಿಡುತ್ತಾನೆ. ಕನ್ನಡದ ಬಹುತೇಕ ಸಾಹಿತಿಗಳು ಅಮೇರಿಕಾ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ಸಾಹಿತಿಗಳ ವಸ್ತು ಒಂದೇ ಆಗಿದ್ದರೂ ಕೂಡಾ ಅಮೇರಿಕಾದ ಜನರ ಬದುಕಿನ ವಿಧಿ-ವಿಧಾನಗಳನ್ನು ಗ್ರಹಿಸುವಲ್ಲಿ ಮಾತ್ರ ವಿಭಿನ್ನವಾಗಿದೆ. ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಕಾರಣಗಳು, ಪ್ರೇರಣೆಗಳು, ಅಲ್ಲಿನ ಮನೋಧರ್ಮವನ್ನು ಕುರಿತು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಚಿತ್ರಿಸಿದ್ದಾರೆ. ಮತ್ತೆ ಕೆಲವು ಅಂಶಗಳನ್ನು ತುಲನಾತ್ಮಕವಾಗಿ ವಿವೇಚಿಸಿದ್ದಾರೆ.

ಈ ಕೆಳಗಿನ ಎಲ್ಲಾ ಸಾಹಿತಿಗಳ ಚೇತೋಹಾರಿಯಾದ ಗದ್ಯ, ಆಕರ್ಷಕ ಬರವಣಿಗೆ, ಸುಂದರವಾದ ಅಭಿವ್ಯಕ್ತಿಗಳೆಲ್ಲಾ ವಿಶಿಷ್ಟವಾಗಿದೆ.

1. ವ್ಯಾಸರಾಯ ಬಲ್ಲಾಳ – ನಾನೊಬ್ಬ ಭಾರತೀಯ ಪ್ರವಾಸಿ
2. ಪ್ರೊ. ನಂಜುಂಡಶಾಸ್ತ್ರೀ – ಅಮೇರಿಕಾ ಭಾರತೀಯನ ದೃಷ್ಟಿಯಲ್ಲಿ

3. ಗುರುಮೂರ್ತಿ ಪೆಂಡಕೂರ – ಅವಕಾಶಗಳ ಅಮರಾವತಿ

4. ಚಂದ್ರಶೇಖರ ಆಲೂರ – ಅಮೇರಿಕಾದಲ್ಲಿ ಆಲೂರ

**ನಾನೊಬ್ಬ ಭಾರತೀಯ ಪ್ರವಾಸಿ – ವ್ಯಾಸರಾಯ ಬಲ್ಲಾಳ :**

ಒಬ್ಬ ಭಾರತೀಯ ಪ್ರವಾಸಿಯಾಗಿ ವ್ಯಾಸರಾಯ ಬಲ್ಲಾಳರು ಭೇಟಿ ನೀಡಿದ ಕೆಲವು ಐರೊಪ್ಯ ದೇಶಗಳು ಮತ್ತು ಅಮೇರಿಕಾದ ಅನುಭವಗಳ ಜಿಜ್ಞಾಸೆಯ ಫಲವೇ ಈ ಕೃತಿಯಾಗಿದೆ. "ಭಾರತೀಯನಾಗಿ ದೀರ್ಘಕಾಲ ಅಮೇರಿಕಾದಲ್ಲಿ ನೆಲಸಬಯಸುವ ಭಾರತೀಯ ನಾಗರಿಕನ ಭಾರತೀಯತ್ವ ಪೂರ್ವ ಪಶ್ಚಿಮಗಳ ಸಾಂಸ್ಕ್ರತಿಕ ಸಂಘರ್ಷದಲ್ಲಿ ಹೇಗೆ ಉಳಿದೀತು ಎಂಬ ಚಿಂತನೆಯನ್ನು ಬೆನ್ನಟ್ಟಿ ಹೋಗಿರುವ ಒಬ್ಬ ಲೇಖಕನ ಪ್ರವಾಸ ಪ್ರಬಂಧ ಇದೆಂದರು ಸರಿಯೆ" ಎಂದು ಬಲ್ಲಾಳರೇ ಹೇಳಿಕೊಂಡಿದ್ದಾರೆ. ಇದೊಂದು ಗಂಭೀರ ಚಿಂತನೆಯನ್ನು ಒಳಗೊಂಡ ಪ್ರಬುದ್ಧ ಪ್ರವಾಸ ಕಥನವಾಗಿದೆ.

ಈ ಪ್ರವಾಸ ಕಥನವನ್ನು ನಾವು ಎರಡು ನೆಲೆಗಳಲ್ಲಿ ನೋಡಬಹುದು

1. ಪ್ರವಾಸ ಕಾಲದ ಹೊರನೋಟಗಳ ವಿವರಣೆ

2. ಎರಡು ದೇಶಗಳ ಅಥವಾ ಪೌರ್ವಾತ್ಯ, ಪಾಶ್ಚಿಮಾತ್ಯ ಸಂಸ್ಕೃತಿಗಳ ಸಂಘರ್ಷದ ಚಿಂತನೆ.

ಇವುಗಳ ವಿವರಣೆಯ ಜೊತೆಗೆ ಅದರಲ್ಲಿ ಅಡಗಿರುವ ಪ್ರೌಢ ಚಿಂತನೆಗಳನ್ನು ಈ ಮುಂದಿನಂತೆ ವಿವೇಚಿಸಲಾಗಿದೆ.

**ಪ್ರವಾಸಕಾಲದ ಹೊರನೋಟಗಳ ವಿವರಣೆ :** ಕೆನಡಿಯ ಅಂತ್ಯ ಸಂಸ್ಕಾರ ಮಾಡಿದ ಜಾಗದಲ್ಲಿ ಬೆಳಗುತ್ತಿದ್ದ ಜ್ಯೋತಿ ಅಮೇರಿಕದ ರಾಜಕೀಯ ಚಟುವಟಿಕೆಗಳ ಕೇಂದ್ರವೆನಿಸಿರುವ ಕ್ಯಾಪಿಟಲ್ ಹಿಲ್, ಲಿಂಕನ್ ಸ್ಮಾರಕ ಕಟ್ಟಡ, ಹೊರಗಿನಿಂದಲೆ ಸ್ಮಿತ್ಸೋನಿಯನ್ ಇನ್ಸ್ಟಿಟ್ಯೂಟ್, ಲೈಬ್ರರಿ ಆಫ್ ಕಾಂಗ್ರೆಸ್, ವೈಟ್ ಹೌಸ್ ಇವೆಲ್ಲವನ್ನು ವಾಷಿಂಗ್‌ಟನ್‌ನಲ್ಲಿ ಒಂದೆರಡು ಘಂಟೆಗಳ ಅವಕಾಶದಲ್ಲಿ ಎಷ್ಟು ನೋಡಲು ಸಾಧ್ಯವೋ ಅಷ್ಟನ್ನು ನೋಡಿ ಈ ಸುತ್ತಾಟದ ವಿವರಗಳೆಲ್ಲ ತೀರ ಸಾಮಾನ್ಯವೆಂದು ತಾವೇ ಹೇಳಿದ್ದಾರೆ.

ಪ್ಲೋರಿಡಾ ರಾಜ್ಯದ ಒರ್ಲಾಂಡೊ ಪಟ್ಟಣದ ಡಿಸ್ನಿಲೋಕ ನಾಳಿನ ಸಮಾಜದ ಚಿತ್ರ ಕೊಡುವಂಥ ವರ್ಡ್‌ಟ್ರೇಡ್ ಸೆಂಟರ್, ಸಾಗರ ವೈಚಿತ್ರ್ಯಗಳನ್ನು ನೆನಪಿಸುವಂಥ ಸೀ ವರ್ಲ್ಡ್, ಹಾಂಟೆಡ್ ಹೌಸ್,

ಪೈರೆಟ್ಸ್ ಆಫ್ ದಿ ಕೆರ್ರಿಬಿಯನ್ ಮೊದಲಾದ ಆಕರ್ಷಣಿಯ ಸ್ಥಳಗಳನ್ನು ನೋಡಿ ಅವುಗಳ ವೈಶಿಷ್ಟ್ಯವನ್ನು ನಿರೂಪಿಸಿದ್ದಾರೆ. ಲೇಖಕರಿಗೆ ಅವುಗಳ ಅನುಭವವನ್ನು ಪುನಃ ಸೃಷ್ಟಿಸುವುದಕ್ಕಿಂತಲೂ ಹೆಚ್ಚಾಗಿ ಅವುಗಳ ಹಿನ್ನೆಲೆಗಳನ್ನು ವರ್ತಮಾನದ ಸಂದರ್ಭಕ್ಕೆ ಹೊಂದಿಸಿಕೊಂಡು ಸೂಕ್ಷ್ಮವಾಗಿ ಪರಿವೀಕ್ಷಿಸಿದ್ದಾರೆ. ಈ ಬಗೆಯ ಚಿಂತನೆಯಲ್ಲಿಯೇ ಪ್ರಬುದ್ಧ ಅಂಶಗಳನ್ನು ಕಾಣಬಹುದು. ತಾವು ಕಂಡ ಸ್ಥಳಗಳ ಪರಿಚಯಾತ್ಮಕ, ವರ್ಣನಾತ್ಮಕ ವಿವರಗಳನ್ನು ಸರಳವಾಗಿ ನಿರೂಪಿಸಿದ್ದಾರೆ. ಕೆಲವು ಕಡೆ ಪ್ರವಾಸಿ ಆಕರ್ಷಣೆಗಳನ್ನು ತೌಲನಿಕ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಇದಕ್ಕೊಂದು ನಿದರ್ಶನವೆಂದರೆ "ಅಮೇರಿಕಾದ ಯುನಿವರ್ಸಲ್ ಸ್ಟುಡಿಯೋದೊಂದಿಗೆ ಭಾರತದ ಚಲನಚಿತ್ರೋದ್ಯಮದ ಕೇಂದ್ರ ಮುಂಬಯಿ ಇವೆರಡರ ಕಾರ್ಯವೈಖರಿಯ ಬಗ್ಗೆ ವಿಶ್ಲೇಷಿಸಿದ್ದಾರೆ. ಪ್ರವಾಸಿಗಳ ಆಕರ್ಷಣೆ ತಿಳುವಳಿಕೆ, ಮನರಂಜನೆ ಆದಾಯ ಹೆಚ್ಚಿಸುವ ಕುಶಲತೆ ಅಮೇರಿಕನ್ನರದು. ಅಮೇರಿಕನ್ನರಂತೆ ಭಾರತೀಯರಿಗೆ ಯೋಗ್ಯತೆ ಇದ್ದರೂ ಕೂಡಾ ಅದು ಸಾಧ್ಯವಾಗಿಲ್ಲವೆಂದು ಟೀಕಿಸಿದ್ದಾರೆ. ಅಮೇರಿಕನ್ನರು ಪ್ರವಾಸಿ ತಾಣಗಳನ್ನು ಯಶಸ್ವಿ ಉದ್ಯಮವಾಗಿ ಪರಿವರ್ತಿಸಿದ ಬಗೆಯನ್ನು ನೋಡಿ, ನಮ್ಮ ಭಾರತದ ಪ್ರವಾಸಿ ಪರಿಸರ ಯಾವ ರೀತಿ ಇದೆಯೆಂಬ ಲೇಖಕರ ಯೋಚನೆಯಲ್ಲಿ ಭಾರತದಲ್ಲಿರುವ ಅದಕ್ಷತೆ, ಅಭಿಮಾನಶೂನ್ಯತೆಯನ್ನು ಪ್ರಸ್ತಾಪಿಸಿ ವಿಷಾದಿಸಿದ್ದಾರೆ.

ಲೇಖಕರು ಅಮೇರಿಕದ ಶಿಕ್ಷಣ ವ್ಯವಸ್ಥೆಯ ಜೊತೆಗೆ ಭಾರತೀಯ ಶಿಕ್ಷಣ ವ್ಯವಸ್ಥೆಯ ಸ್ಥಿತಿಗತಿಗಳನ್ನು ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಪ್ರತಿಭೆ, ಪುರಸ್ಕಾರವಿಲ್ಲವೆನ್ನುವ ಒಂದೇ ಕಾರಣದಿಂದ ನಮ್ಮಲ್ಲಿಂದ ಪ್ರತಿಭಾಪಲಾಯನವಾಗುತ್ತಿಲ್ಲ. ಪ್ರತಿಭೆ ಅರಳಲು ಅಮೇರಿಕಾದಲ್ಲಿರುವಂಥ ಅವಕಾಶಗಳು ಭಾರತೀಯ ಶಿಕ್ಷಣ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ದೊರಕುತ್ತಿಲ್ಲವೆನ್ನುತ್ತಾರೆ. ಈ ರೀತಿಯ ಬೆಳವಣಿಗೆಗೆ ಭಾರತೀಯ ಶಿಕ್ಷಣ ಸಂಸ್ಥೆಗಳ ಆಡಳಿತ ವೈಖರಿ, ನಿಯಮಾವಳಿಗಳು, ವ್ಯವಸ್ಥೆಯಲ್ಲಿನ ಅಕ್ರಮ ಭ್ರಷ್ಟಾಚಾರ, ರಾಜಕೀಯ ನೀತಿ ಇವೆಲ್ಲವು ಕಾರಣವೆಂದು ಅಭಿಪ್ರಾಯಪಡುತ್ತಾರೆ. "ಅಮೆರಿಕದಲ್ಲಿ ಪಾರಾಮೂಸ್ ಬೋರ್ಡ್ ಆಫ್ ರಿಕ್ರಿಯೇಶನ್ ಕಮಿಷನರ್ಸ್ ಎಂಬ ಸಂಸ್ಥೆ ಆ ಭಾಗದ ವಿದ್ಯಾರ್ಥಿನಿಯರಿಂದ ಏರ್ಪಡಿಸಿದ ನೃತ್ಯ ಕಾರ್ಯಕ್ರಮವೊಂದನ್ನು ನೋಡುವ ಅವಕಾಶ ಲೇಖಕರಿಗೆ ಲಭಿಸಿದಾಗ, ಆ ನೃತ್ಯ ಕಾರ್ಯಕ್ರಮವನ್ನು ನಮ್ಮ ನಾಡಿನ ನೃತ್ಯಕಾರ್ಯಕ್ರಮದೊಂದಿಗೆ ತೂಗಿ ನೋಡುತ್ತಾರೆ. "ಎಷ್ಟೆಲ್ಲ ಜಾನಪದ ನೃತ್ಯಶೈಲಿಗಳನ್ನು ಸಂಪ್ರದಾಯಗಳನ್ನು ಕಲಿಯಲು ಆಸ್ಪದವಿರುವಂಥ ಪರಂಪರೆ ನಮಗಿದೆಯೆಂಬ ವಿಚಾರ ಚಿಂತಿಸುತ್ತಿದ್ದೆ. ಅಮೇರಿಕದಲ್ಲಿ ಎಲ್ಲ ಸಾಂಸ್ಕೃತಿಕ ಬೇರುಗಳನ್ನು ರೂಢಿಸಿಕೊಳ್ಳಲು ತಡಕಾಡುತ್ತಿದ್ದಾರೆಂದು ನನಗನಿಸಿತ್ತು ನಮ್ಮಲ್ಲೂ ನಮ್ಮ ಪರಂಪರೆಯ ಬೇರುಗಳನ್ನು ಅರ್ಥಮಾಡಿಕೊಳ್ಳುವ ಪ್ರಜ್ಞೆ ಮಾತ್ರ ಕಡಿಮೆ. ಪ್ರಾಯಶಃ

'ಪರಾಮೂಸ್ ಬೋರ್ಡ್ ಆಫ ರಿಕ್ರಿಮೇಶನ್ ಕಮಿಷನರ್ಸ್‌ಗೆ ದೊರಕುವಂಥ ಆರ್ಥಿಕ ಅನುಕೂಲತೆಗಳು ನಮಗೆ ಸಿಗುವಂಥ ವ್ಯವಸ್ಥೆ ರೂಪುಗೊಂಡರೆ, ಭಾರತದ ವಿದ್ಯಾರ್ಥಿ ಜಗತ್ತಿನ ಸ್ವರೂಪವೇ ಬೇರೆಯಾಗಬಹುದು".

ಹೀಗೆ ಲೇಖಕರು ಸಮೃದ್ಧ ಸಾಂಸ್ಕೃತಿಕ ಸಂಪತ್ತಿನ ಭಾರತದಲ್ಲಿ ಆರ್ಥಿಕ ಅನಾನುಕೂಲತೆಗಳ ನೆಪದಲ್ಲಿ ಅಳಿದುಹೋಗುತ್ತಿರುವ ಬಗ್ಗೆ ತಮ್ಮ ಅನಿಸಿಕೆಯನ್ನು ತೋಡಿಕೊಂಡಿದ್ದಾರೆ. ಸಾಂಸ್ಕೃತಿಕ ಸತ್ವವನ್ನು ಸಂಪೂರ್ಣವಾಗಿ ಕಡೆಗಣಿಸಿ ವ್ಯಾವಹಾರಿಕತೆಗೆ ಒತ್ತುಕೊಡುತ್ತಿರುವ ಪ್ರಸ್ತುತ ಶೈಕ್ಷಣಿಕ ಸಂದರ್ಭದಲ್ಲಿ ಲೇಖಕರ ಈ ಅನಿಸಿಕೆ ಅನಿಸಿಕೆಯಾಗಿ ಉಳಿಯವ ಸಾಧ್ಯತೆಯೇ ಹೆಚ್ಚಿನದು. ಅಮೆರಿಕದಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಅತ್ಯಂತ ಪ್ರತಿಭಾವಂತರೆಂದು ಕರೆಸಿಕೊಳ್ಳುತ್ತಿರುವುದಕ್ಕೆ ಅಭಿಮಾನಪಡುವ ಲೇಖಕರು, ಭಾರತದಲ್ಲಿಯೂ ಅಂತಹ ವ್ಯವಸ್ಥೆಯನ್ನು ಬಯಸುವುದು ಶಿಕ್ಷಣದ ಮೇಲಣ ಆಸ್ಥೆಯಿಂದಾಗಿ ಶಿಕ್ಷಣ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಅರ್ಥಮಾಡಿಕೊಳ್ಳಲು, ಬದುಕಿನ ನೈತಿಕ ಮೌಲ್ಯವನ್ನು ಹೆಚ್ಚಿಸಲು ಸಹಾಯಕವಾಗಬೇಕೆಂಬ ಅವರ ಈ ಆಶಯ, ಆರೋಗ್ಯಕರ ಸಮಾಜ ನಿರ್ಮಾಣದ ದೃಷ್ಟಿಯಿಂದ ಪ್ರೇರಣೆಗೊಂಡಿದೆ".[2] ಎಂಬ ಡಾ॥ ಡಿ. ವಿಜಯಲಕ್ಷ್ಮಿಯವರ ಅಭಿಪ್ರಾಯ ಸಮರ್ಪಕವಾಗಿದೆ.

**ಎರಡು ದೇಶಗಳ ಸಾಂಸ್ಕೃತಿಕ ಸಂಘರ್ಷದ ಚಿಂತನೆ :** "ಯಹೂದಿಯರು, ಇತಾಲಿಯನ್ನರು, ಆಂಗ್ಲರು, ಡಚ್ಚರು, ಫ್ರೆಂಚ್ ಜರ್ಮನ್ ಮೂಲದವರು, ಸ್ಪೈನ್ ಪೋರ್ಚುಗಲ್, ರಷ್ಯಾ, ಐರ್ಲ್ಯಾಂಡ್ ಮುಂತಾದ ಬೇರೆ ಬೇರೆ ದೇಶಗಳಿಂದ ಬೇರೆ ಬೇರೆ ಪರಂಪರೆಗಳಿಂದ ಪ್ರಭಾವಿತರಾಗಿ ಬಂದಂಥ ಜನ ಎರಡು ಶತಮಾನಗಳ ಅವಧಿಯಲ್ಲಿ ಅಸೂಯೆಯಿಂದ ನೋಡಬಹುದಾದಂಥ ಒಂದು ರಾಷ್ಟ್ರೀಯ ಅನ್ಯನತೆಯನ್ನು ಸಾಧಿಸಿಕೊಂಡಿದ್ದಾರೆ. ಆದರೆ ಒಂದೇ ನಾಗರೀಕತೆ, ಭಿನ್ನವೆನಿಸಬಹುದಾದ ಉಪಜನಾಂಗಿಕ ಸಂಸ್ಕಾರಗಳಿರಬಹುದಾದರು ಏಕಸೂತ್ರತೆಯನ್ನು ಗುರುತಿಸಬಹುದಾದ ಒಂದೇ ಸಂಸ್ಕೃತಿಯಿಂದ ಪ್ರಭಾವಿತರಾದ ಭಾರತೀಯರಿಗೆ ಭಾರತೀಯ ಅನನ್ಯತೆಯನ್ನು ನೆನೆಸಿಕೊಳ್ಳುವುದೂ ಕಷ್ಟವಾಗುತ್ತಿದೆ ಏಕೆ?" ಎಂದು ಪ್ರಶ್ನಿಸಿದ್ದಾರೆ ಎಂಬ ಲೇಖಕರ ಈ ಮಾತುಗಳು ಗಾಢಾಲೋಚನೆಗೆ ಎಡೆಮಾಡಿಕೊಡುತ್ತವೆ.

ಅಮೇರಿಕನ್ ಸಾಮಾಜಿಕ ಜೀವನದೊಂದಿಗೆ ಅಮೇರಿಕದಲ್ಲಿ ನೆಲೆಸಿರುವ ಭಾರತೀಯರು ಬೆರೆಯಬೇಕಾದುದು ಅನಿವಾರ್ಯವಾಗಿದೆ. ಕೌಟುಂಬಿಕ ಸಂಸ್ಕಾರಗಳಿಂದ ಪ್ರಭಾವಿತವಾದ ಒಂದು ಪರಂಪರೆಯನ್ನು ಬಿಟ್ಟು ಹೊಸ ಸಾಂಸ್ಕೃತಿಕ ಪರಿಸರಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವ ಪ್ರಯತ್ನ ಅಷ್ಟು

ಸುಲಭವಾದದ್ದಲ್ಲ ಎನ್ನುವುದನ್ನು ಲೇಖಕರು ಅಮೇರಿಕಾದಲ್ಲಿ ನೆಲೆಸಿರುವ ಇತರ ಅಲ್ಪಸಂಖ್ಯಾತ ಪಂಗಡಗಳನ್ನು ನೋಡುವಾಗ ಉಂಟಾಗಿದೆ.

"ಅಮೇರಿಕದ ಶಿಥಿಲ ವಿವಾಹಜೀವನದಿಂದ ಏರ್ಪಡುವ ಶಿಥಿಲ ಕುಟುಂಬ ಜೀವನವು ಅಲ್ಲಿಯ ಮಕ್ಕಳ ಮೇಲೆ ಬೀರುವ ಪರಿಣಾಮದ ಹತ್ತು ಹಲವು ಬಗೆಗಳನ್ನು ತೆರೆದಿಡುತ್ತಾರೆ. ಅಮೇರಿಕನ್ನರ ವ್ಯಾವಹಾರಿಕ ಪ್ರವೃತ್ತಿ ಸಾಮಾಜಿಕ ಜೀವನವನ್ನು ಹಾಳುಗೆಡದಿರುವುದನ್ನು ಸೂಚಿಸುತ್ತಲೇ ಅಲ್ಲಿಯ ಅನನ್ಯತೆ ಸಾಧ್ಯವಾಗಿರುವುದು ಆರ್ಥಿಕ ಕಾರಣಗಳಿಂದಲೇ ಹೊರತು ಸಾಂಸ್ಕೃತಿಕ ಸಂಬಂಧದಿಂದಾಗಿ ಅಲ್ಲವೆಂಬ ಅಭಿಪ್ರಾಯಕ್ಕೆ ಅವರು ಬರುತ್ತಾರೆ. ಅಮೇರಿಕದಲ್ಲಿರುವ ವರ್ಗ ವೈಷಮ್ಯದ ಸ್ವರೂಪವನ್ನು ಗುರುತಿಸುವ ಪ್ರಯತ್ನವು ಇಲ್ಲಿ ನಡೆದಿದೆ ಹಾಗೂ ಅಮೆರಿಕನ್ ಸಮಾಜದಲ್ಲಿ ಹುದುಗಿರುವ ವಿಪರ್ಯಾಸಗಳನ್ನು ಸಹ ಗುರುತಿಸಲಾಗಿದೆ.

ಅಮೇರಿಕಾದ ಜೀವನದಲ್ಲಿ ಬೆರೆತುಹೋಗಿರುವ ಅವರ ಸಂಸ್ಕೃತಿಯ ಮುಖವೇ ಆಗಿರುವ ಸ್ವಚ್ಛಂದ ಲೈಂಗಿಕತೆ, ಶಿಥಿಲ ಕುಟುಂಬ ವ್ಯವಸ್ಥೆ, ಮಾದಕದ್ರವ್ಯ ಸೇವನೆ ಮತ್ತು ವ್ಯಾಪಾರಿ ಮನೋವೃತ್ತಿಗಳು ಅಲ್ಲಿನ ಭಾರತೀಯ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಈ ಪ್ರಭಾವಗಳಿಂದ ತಮ್ಮನ್ನು ಮತ್ತು ತಮ್ಮ ಮಕ್ಕಳನ್ನು ದೂರವಿರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಸಾಂಸ್ಕೃತಿಕ ಸಂಘಟನೆಗಳು, ಧಾರ್ಮಿಕ ಆಚರಣೆಗಳ ಮೂಲಕ ತಮ್ಮ ಭಾರತೀಯತೆಯನ್ನು ರಕ್ಷಿಸಿಕೊಳ್ಳಬೇಕೆಂಬ ಹಂಬಲ ಅವರದು. ಅಮೇರಿಕಕಾದ ಪ್ರಭಾವದಿಂದ ಪಾರಾಗಬೇಕೆಂಬ ಮನೋಭಾವದಿಂದ ಅಲ್ಲಿನ ಭಾರತೀಯರು ನೆಚ್ಚಿಕೊಂಡಿರುವ ಸಾಂಸ್ಕೃತಿಕ, ಧಾರ್ಮಿಕ ಮಾರ್ಗಗಳು ಎಷ್ಟರಮಟ್ಟಿಗೆ ಅಮೇರಿಕದಲ್ಲಿ ಭಾರತೀಯ ಸಾಂಸ್ಕೃತಿಕ ಅನನ್ಯತೆಯ್ನು ಬಿಂಬಿಸುತ್ತವೆ ಮತ್ತು ಅದರ ಗಟ್ಟಿತನವೇನು? ಎಂಬ ವಿವೇಚನೆಯೂ ಇಲ್ಲಿ ನಡೆದಿದೆ. ಅಲ್ಲಿನ ಭಾರತೀಯರ ಸಾಂಸ್ಕೃತಿಕ ಧಾರ್ಮಿಕ ಕಾಳಜಿಗಳು ಒಂದು ರೀತಿಯ ಪಲಾಯನವಾದವೆಂದೇ ಲೇಖಕರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಅಮೇರಿಕನ್ ಸಮಾಜದ ಪ್ರಭಾವದಿಂದಾಗಿಯು ತಮ್ಮ ಮೂಲ ಸಂಸ್ಕಾರಗಳನ್ನು ಕುರಿತ ತಿಳುವಳಿಕೆಯ ಅಭಾವದಿಂದಾಗಿಯು, ಎರಡನೇಯ ಪೀಳಿಗೆಯ ಮಕ್ಕಳು ಸುಲಭವಾಗಿ ಅಮೇರಿಕದ ಸಮಾಜದೊಂದಿಗೆ ಬೆರೆತು, ಆ ಮೂಲಕ ತಮ್ಮ ತಾಯ್ನಾಡಿನಿಂದ, ತಾಯ್ನಾಡಿನ ಸಾಂಸ್ಕೃತಿಕ ಹಿನ್ನೆಲೆಯಿಂದ ದೂರವಾಗುತ್ತಿರುವ ಸಾಧ್ಯತೆಗಳನ್ನು ಲೇಖಕರು ಹಲವು ಹದಿ-ಹರೆಯದ ಯುವತಿಯರ ಸಂದರ್ಶನಗಳಿಂದ ಸಾಬಿತು ಪಡಿಸಿದ್ದಾರೆ".[3] ಎಂಬುದನ್ನು ಪುರಸ್ಕರಿಸಬಹುದಾಗಿದೆ.

ಭಾರತೀಯ ಸಾಂಸ್ಕೃತಿಕ ಜೀವನದೊಂದಿಗೆ ಅಮೇರಿಕಾದ ಸಂಸ್ಕೃತಿ ಜನಜೀವನಗಳ ತೌಲನಿಕ ಪರಿಶೀಲನೆ ನಡೆದಿದೆ. "ಭಾರತದ ಬಡತನವನ್ನೂ, ನಾಗರಿಕ ಪ್ರಜ್ಞೆಯನ್ನು, ನಿಸರ್ಗವನ್ನೂ ಗಮನದಲ್ಲಿರಿಸಿಕೊಂಡು ಅಮೇರಿಕಾದ ಸಮೃದ್ಧಿಯ ಕುರಿತು ಬರೆಯುವುದು ಉಚಿತವಲ್ಲವೆಂದು ನನಗೆ ತಿಳಿದಿದೆ" ಎನ್ನುವಂಥ ಔಚಿತ್ಯ ಪ್ರಜ್ಞೆಯನ್ನಿರಿಸಿಕೊಂಡು ಯಾವ ಕೀಳರಿಮೆಯನ್ನು ಪ್ರಕಟಿಸದೆ, ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ತಮ್ಮ ಅರಿವಿನ ಮೂಲಕ ಆರೋಗ್ಯಕರ ತಿಳುವಳಿಕೆಯ ಮೂಲಕ ಸಾಧಿಸಬಹುದಾದ ಕಾರ್ಯಗಳ ಮಹತ್ವವನ್ನು ಒತ್ತಿ ಹೇಳುವಂತಹ ಪ್ರಸಂಗಗಳು ಈ ಪ್ರವಾಸ ಕಥನದಲ್ಲಿ ಬಂದಿವೆ.

'ಈವರೆಗೆ ಬಂದಿರುವ ಪ್ರವಾಸಕಥನಗಳಲ್ಲೆಲ್ಲ ಗಂಭೀರವಾದ ವಸ್ತು ವಿವೇಚನೆಯನ್ನು ಒಳಗೊಂಡಿರುವ ಕೃತಿ 'ನಾನೊಬ್ಬ ಭಾರತೀಯ ಪ್ರವಾಸಿ'. ಸಂಸ್ಕೃತಿ, ಧರ್ಮ, ಭಾಷೆ, ಸಮಾಜ, ಶಿಕ್ಷಣ ಇಂತಹ ಸಂಕೀರ್ಣ ವಿಷಯಗಳಲ್ಲಿ ತನ್ನ ಸ್ವರೂಪವನ್ನು ಸ್ಥಾಪಿಸಿಕೊಂಡಿರುವುದು ಈ ಕೃತಿಯ ವೈಶಿಷ್ಟ್ಯ. ತೆಗೆದುಕೊಂಡಿರುವ ವಿಷಯವನ್ನು ವಿವಿಧ ಕೋನಗಳಿಂದ ವೀಕ್ಷಿಸಿ, ಅದರ ಒಳಹೊರಗುಗಳನ್ನು ಭೇದಿಸಿರುವ, ಒಟ್ಟು ನೋಟವನ್ನು ಸಮಗ್ರವಾಗಿ ಸೆರೆಹಿಡಿದಿರುವ ರೀತಿಯಿಂದಲೂ, ಪ್ರೌಢ ಚಿಂತನೆಗಳಿಂದಲೂ ಇದು ಗಮನಸೆಳೆಯುತ್ತದೆ. ಈ ಕೃತಿಯಲ್ಲಿನ ಸೂಕ್ಷ್ಮ ವಿಚಕ್ಷಣೆ, ಸನ್ನಿವೇಶಗಳನ್ನು ಅನುಭವಗಳನ್ನು ಸಾಂದರ್ಭಿಕವಾಗಿ ತೆರೆದಿಟ್ಟು ಮಾನವ ಮನಸ್ಸನ್ನು ಪರಿಭಾವಿಸುವ ಕ್ರಿಯೆ, ಅದಕ್ಕೆ ತಕ್ಕ ವಿಶ್ಲೇಷಣೆ ಮತ್ತು ಬಳಸಿಕೊಂಡಿರುವ ಭಾಷೆ ಕೃತಿಗೆ ಸಂಕೀರ್ಣ ಸ್ವರೂಪವನ್ನು ತಂದಿರುವುದರೊಂದಿಗೆ ಕೃತಿಯ ಮಹತ್ವವನ್ನು ಹೆಚ್ಚಿಸಿದೆ" ಎನ್ನುವ ಡಿ ವಿಜಯಲಕ್ಷ್ಮಿಯವರ ಅನಿಸಿಕೆಗಳು ಸತ್ವಪೂರ್ಣವಾಗಿವೆ.

### ಅಮೇರಿಕ ಭಾರತೀಯನ ದೃಷ್ಟಿಯಲ್ಲಿ – ಪ್ರೊ. ಎನ್. ನಂಜುಂಡಶಾಸ್ತ್ರಿ :

ಕೃತಿಯ ಹೆಸರೆ ಸೂಚಿಸುವಂತೆ ಭಾರತೀಯರಾಗಿ ಅಮೇರಿಕವನ್ನು ನೋಡುವುದು. ಮನುಷ್ಯನ ವಯೋಮಾನ ಗುಣವಾದ ಪ್ರವೃತ್ತಿ, ಅಭಿರುಚಿಗಳಿಗನುಗುಣವಾಗಿ ನೊಡುವ ದೃಷ್ಟಿ ಬದಲಾಗುತ್ತದೆ ಅದಕ್ಕನುಗುಣವಾಗಿ ಅವರ ಅನುಭವಗಳು ರೂಪುಗೊಳ್ಳುತ್ತವೆ. ಹೀಗಾಗಿ ಪಕ್ವವಾದ ವಯಸ್ಸಿನಲ್ಲಿ ದಂಪತಿ ಸಮೇತ ಕೈಗೊಂಡ ಪ್ರವಾಸ ಹಲವು ದೃಷ್ಟಿಯಿಂದ ವೈಶಿಷ್ಟ್ಯಯುತವಾಗಿವೆ.

ಮೊಮ್ಮಗಳ ದೆಸೆಯಿಂದ ಅಮೇರಿಕ ಪ್ರವಾಸವನ್ನು ಕೈಗೊಂಡ ನಂಜುಂಡ ಶಾಸ್ತ್ರಿಗಳು ಅಮೆರಿಕೆಯ ಜನಜೀವನ, ನಾಗರಿಕತೆ, ಸಂಸ್ಕೃತಿಗಳನ್ನು ತೌಲನಿಕವಾಗಿ ವಿಮರ್ಶಿಸುತ್ತಾ ತಮ್ಮ ಅನುಭವಗಳನ್ನು ಅನಾವರಣಗೊಳಿಸಿದ್ದಾರೆ. ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಕುರಿತು ಲಘುವಾಗಿ ವಿವೇಚಿಸಿದ್ದಾರೆ.

"ಎಲ್ಲ ಪ್ರವಾಸಿಗಳು ನೋಡಿದ್ದನ್ನೇ ನಾವು ನೋಡಿದರು ನಮ್ಮ ದೃಷ್ಟಿ ಯಾತ್ರಿಕರ ದೃಷ್ಟಿಯಾಗಿ ಇತರರ ಕಣ್ಣಿಗೆ ಕಾಣದ, ದೃಷ್ಟಿಗೆ ಗೋಚರಿಸದ ಕೆಲವು ಅಂಶಗಳು ನಮ್ಮ ಮನಸ್ಸಿಗೆ ನಾಟಿದವೆಂದು ನನ್ನ ಅನಿಸಿಕೆ" ಎಂದು ಪ್ರಾರಂಭದ ಲೇಖಕನ ಅರಿಕೆಯಲ್ಲಿ ನಿವೇದಿಸಿದ್ದಾರೆ.

'ಅಮೆರಿಕದಲ್ಲಿ ನಿತ್ಯಜೀವನ' ಎಂಬ ಶೀರ್ಷಿಕೆಯಲ್ಲಿ ಬಂದಿರುವ ವಿವರಗಳು ಈಗಾಗಲೇ ನಾವು ಕೇಳಿರುವವುಗಳೇ ಆಗಿವೆ. ಹೊಸದಾಗಿ ಅಮೆರಿಕನ್ನರ ಜೀವನ ವಿಧಾನವನ್ನು ತಿಳಿಯ ಬಯುಸುವವರಿಗೆ ಇಲ್ಲಿಯ ವಿವರಗಳು ಕುತೂಹಲಕಾರಿಯಾಗಿವೆ. ಈ ಪ್ರವಾಸಕಥನದ ಆಕರ್ಷಣೆ ಅದರ ನಿರೂಪಣೆಯಲ್ಲಿದೆ. ಲೇಖಕರು ಹೇಳುವುದನ್ನು ಅರ್ಥಪೂರ್ಣವಾಗಿ ಮನಮುಟ್ಟುವ ರೀತಿಯಲ್ಲಿ ಹೇಳುವರು. ಅವರ ಭಾಷೆಗೆ ತನ್ನದೆ ಆದ ಓಜಸ್ಸಿದೆ. ಅರೆನೀರ್ ಮನೆ, ಮುಂಗವಚ, ಸಾಗಣೆತೊಟ್ಟಿ, ತೊಟ್ಟಿಸ್ನಾನ, ವೃಷ್ಟಿ ಸ್ನಾನ ಶೀತಕ, ನಿಸ್ತಂತು, ಧ್ವನಿಗ್ರಾಹಕ, ನಿರ್ವಾಯ, ಚೋಷಕ, ಸರ್ವಸಾಮಗ್ರಿ ಮಳಿಗೆ, ಇಳಿಕು ಕಿಂಡಿ, ಒಳಕುಂದುವಿಕೆ ಹೀಗೆ ಕನ್ನಡ ನುಡಿಗಟ್ಟುಗಳು ಅವರ ವಿಚಾರ ಮೂಸೆಯಲ್ಲಿ ಕಮ್ಮಟಗೊಂಡು ಬಳಕೆಯಾಗಿವೆ".[4] ಎಂಬುವೆಲ್ಲಾ ಸೂಕ್ತವಾಗಿವೆ. ಅಮೇರಿಕಾದ ಬಹುತೇಕ ಎಲ್ಲಾ ಅಂಶಗಳ ಬಗ್ಗೆ ಲೇಖಕರು ಗಮನಗಹರಿಸಿದ್ದಾರೆ.

ಈ ಪ್ರವಾಸಕಥನದಲ್ಲಿ ಲೇಖಕರ ಮನೋಧರ್ಮವನ್ನು ಈ ಅಂಶಗಳ ಮೂಲಕ ತಿಳಿಯಬಹುದಾಗಿದೆ.

1. ಪ್ರಗತಿಶೀಲ ಮನೋಭಾವ
2. ರಾಜಕೀಯ
3. ಕೌಟಂಬಿಕ
4. ಶಿಕ್ಷಣ
5. ನೈಸರ್ಗಿಕ
6. ಆರ್ಥಿಕತೆ

**ಪ್ರಗತಿಶೀಲ ಮನೋಭಾವ** : ದೇಶಾಭಿಮಾನ, ದುಡಿದು ತಿನ್ನಬೇಕೆಂಬ ಛಲ, ಸ್ವಾವಲಂಬನೆ ಮತ್ತು ಸ್ವಾತಂತ್ರ್ಯಾಭಿಲಾಶೆ ಅಮೇರಿಕಾದ ಬಹುತೇಕ ಜನರಲ್ಲಿ ಲೇಖಕರು ಕಂಡಿದ್ದಾರೆ. ಆ ದೇಶದಲ್ಲಿರುವ

ಸ್ವಾತಂತ್ರ್ಯದ ಜೊತೆಗೆ ವಾಣಿಜ್ಯ ಕ್ಷೇತ್ರದಲ್ಲಿರುವ ಸ್ಪರ್ಧಾ ಮನೋಭಾವವನ್ನು ಲೇಖಕರು ಮೆಚ್ಚಿಕೊಂಡಿದ್ದಾರೆ. ಇದಕ್ಕೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಾತಾವರಣ ಕಾರಣವೆನ್ನುತ್ತಾರೆ.

**ರಾಜಕೀಯ:–** ನಿಜವಾದ ಪ್ರಜಾಪ್ರಭುತ್ವವನ್ನು ಬೆಳೆಸಿ, ದಕ್ಷತೆ ಮತ್ತು ಅರ್ಹತೆಗೆ ಮನ್ನಣೆ, ದೇಶದ ಅಖಂಡ ಅಭ್ಯುದಯಕ್ಕೆ ಹೇಗೆ ಮನಸಾರೆ ಶ್ರಮಿಸಬೇಕು ಎಂಬುದನ್ನು ನಾವು ಅಮೇರಿಕದಲ್ಲಿ ಪ್ರತ್ಯಕ್ಷವಾಗಿ ಕಾಣಬಹುದು ಎಂಬುದನ್ನು ಲೇಖಕರ ಅಭಿಪ್ರಾಯದಲ್ಲಿ ತಿಳಿಯುವುದಲ್ಲದೆ ಈ ದಿಸೆಯಲ್ಲಿ ನಾವು ಕೂಡಾ ಮುನ್ನಡೆಯಬೇಕು ಎಂಬ ಆಶಾಭಾವನೆಯನ್ನು ಕಾಣುತ್ತೇವೆ.

"ರಾಜಕೀಯವಾಗಿ ಅವರು ಪ್ರಜಾಪ್ರಭುತ್ವದ ತತ್ವಗಳನ್ನು ನಿಷ್ಠೆಯಿಂದ ಪರಿಪಾಲಿಸುವರು. ಈ ತತ್ವದ ಆಧಾರ ಸ್ತಂಭಗಳಾದ ಪ್ರಜಾಭಿಪ್ರಾಯ, ಪತ್ರಿಕಾ ಸ್ವಾತಂತ್ರ್ಯ, ಕಾನೂನುಗಳ ಕಟ್ಟುನಿಟ್ಟಾದ ಪರಿಪಾಲನೆ ಮತ್ತು ಸ್ವಾಭಿಮಾನಗಳನ್ನು ರಕ್ಷಿಸಿ, ಬಲಪಡಿಸಿದ್ದಾರೆ. ಆರ್ಥಿಕವಾಗಿ ಅಲ್ಲಿ ಅನುಸರಿಸುವ ತತ್ವ, ಕ್ಯಾಪಿಟೆಲಿಸಮ್ ಅಥವಾ ಬಂಡವಾಳಶಾಹಿ ರಾಜ್ಯ ಅದರಿಂದಾಗಿ ಅಲ್ಲಿ ಉದ್ಯಮಗಳೂ ಖಾಸಗೀ ಕ್ಷೇತ್ರಕ್ಕೆ ಒಳಪಟ್ಟಿವೆ ಹಣದ ಉತ್ಪಾದನೆ, ಲಾಭ–ಸಂಪಾದನೆ ಇವೇ ಅಲ್ಲಿಯ ಜನರ ಮುಖ್ಯ ಉದ್ದೇಶ. ದೇಶದ ಆರ್ಥಿಕಾಭಿವೃದ್ಧಿಗೆ ನೆರವಾಗುವ ಎಲ್ಲಾ ಯೋಜನೆಗಳಿಗೂ ಸರ್ಕಾರದ ಸಹಾಯ ಮತ್ತು ಉತ್ತೇಜನ ದೊರೆಯುತ್ತದೆ."[5] ಲೇಖಕರು ಅಲ್ಲಿನ ರಾಜಕೀಯ ಸುವ್ಯವಸ್ಥೆ ಮೆಚ್ಚಿಕೊಳ್ಳುವುದರ ಜೊತೆಗೆ ಭಾರತ ಸರ್ಕಾರದ ಮತ್ತು ಇಲ್ಲಿನ ರಾಜಕೀಯದ ದುಸ್ಥಿತಿಯನ್ನು ಹೋಲಿಸಿ ನೋಡಿದ್ದಾರೆ. ನಮ್ಮ ರಾಜಕೀಯ ದುಸ್ಥಿತಿಗೆ ನಮ್ಮ ನಾಯಕರಲ್ಲಿ, ಆಡಲಿತಗಾರರಲ್ಲಿ ಜನರಲ್ಲಿರುವ ಅಪ್ರಾಮಾಣಿಕತೆ, ಸ್ವಾರ್ಥಪರತೆ, ಆಸೆಬುರುಕತನ, ಲೋಲುಪತೆ, ದ್ವೇಷಾಸೂಯೆ, ಅಧಿಕಾರ ಹಾಗೂ ಹಣದ ವ್ಯಾಮೋಹಗಳು ಮತ್ತು ಸಂಕುಚಿತ ಮನೋಭಾವಗಳು ಕಾರಣವೆಂದು ದೂಷಿಸಿದ್ದಾರೆ.

**ಕೌಟುಂಬಿಕ :** ವೃತ್ತಿಜೀವನದಲ್ಲಿವಂತೆ ವೈಯಕ್ತಿಕ ಜೀವನದಲ್ಲೂ ಸ್ವತಂತ್ರಾಭಿಲಾಶೆ ಎನ್ನುವುದನ್ನು ಲೇಖಕರು ಯುವಜನಾಂಗದ ಸ್ವೇಚ್ಛಾಚಾರ ಪ್ರವೃತ್ತಿಗಳ ನಿದರ್ಶನದ ಮೂಲಕ ತಿಳಿಸುತ್ತಾರೆ. ಹದಿನಾರು ವಯಸ್ಸಿನವರಾಗುವ ಹೊತ್ತಿಗೆ ಮಕ್ಕಳಿಗೆ ಸ್ವತಂತ್ರ ಮತ್ತು ಸ್ವಚ್ಛಂದ ಜೀವನದ ಉತ್ಕಟಾಕಾಂಕ್ಷೆ ಪ್ರಬಲವಾಗುವುದಕ್ಕೆ ಅಲ್ಲಿಯ ಸಮಾಜರಚನೆ ಜೀವನ ಮೌಲ್ಯಗಳು ಕಾರಣವೆನ್ನುತ್ತಾರೆ. "ರೆಕ್ಕೆ ಬಲಿತ ಹಕ್ಕಿಗೆ ತನ್ನದೇ ಆದ ಹಾರಾ..., ಗೂಡುಗಳಲ್ಲಿ ನಿರತವಾಗಿ ಅನಾಥರಾಗುವವರು ವೃದ್ಧ ಮಾತಾಪಿತೃಗಳು ಆ ದೇಶದಲ್ಲಿ ಬಹಳ ಮಂದಿ ವೃದ್ಧರ ಬಾಳು ನಿಜವಾಗಿಯೂ ಗೋಳು. ದೇಹಬಲ ಕುಗ್ಗಿ ಇಂದ್ರಿಯಗಳು

ಕ್ಷೀಣಿಸಿ, ಊರುಗೋಲಾಗಲಿ, ಪ್ರೀತಿ–ವಾತ್ಸಲ್ಯಗಳಾಗಲಿ, ಇಲ್ಲದೆ (ಆ ದೇಶದಲ್ಲಿ ಮನೆಕೆಲಸದವರು, ಮಾಲಿಗಳು, ಅಡಿಗೆಯವರು ಸಿಕ್ಕುವುದಿಲ್ಲ) ಸಾವನ್ನು ಎದುರುನೋಡುತ್ತಿರುವ ಮುಪ್ಪಡರಿದ ಮನುಜರ ಬಾಳು ಹೃದಯವಿದ್ರಾವಕ"[6] ಎಂದು ವೃದ್ಧಾಶ್ರಮಗಳು ಅನಾಥಾಲಯಗಳ ಹೆಚ್ಚಳಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

**ಶಿಕ್ಷಣ :** ಲೇಖಕರು ಆನ್ ಆರ್ಬರ್‌ನಲ್ಲಿರುವ ಮಿಚಿಗನ್ ವಿಶ್ವವಿದ್ಯಾಲಯಕ್ಕೆ ಎರಡು ಮೂರು ಸಲ ಭೇಟಿಕೊಟ್ಟು ಅಲ್ಲಿನ ವಿದ್ಯಾರ್ಜನೆಗಾಗಿ ಒದಗಿಸುವ ಎಲ್ಲ ಸುವ್ಯವಸ್ಥೆ ಸವಲತ್ತುಗಳು, ಲೇಖಕರ ಮನಸೆಳೆದಿದೆ. 'ಉತ್ಕೃಷ್ಟ ವಿದ್ಯಾಮಂದಿರಗಳ ಕೆಲವು ಉತ್ತಮ ವಿಶ್ವವಿದ್ಯಾನಿಲಯ ಮತ್ತು ಧರ್ಮಕೇಂದ್ರಗಳ ವಿದ್ಯಾಭ್ಯಾಸಕ್ರಮದಲ್ಲಿ ಉನ್ನತ ಆಹಾರಗಳ ಮತ್ತು ಪರಿಶುದ್ಧ ಜೀವನದ ಶ್ರೇಷ್ಠತೆಯನ್ನು ಬೋಧಿಸುತ್ತಾವೆಂಬಂತೆ ಆ ದೇಶದ ವಿದ್ಯಾಭ್ಯಾಸಕ್ರಮ ನಿಜವಾಗಿಯೂ ಅನುಕರಣೀಯ ಎನ್ನುತ್ತಾರೆ. ಲೇಖಕರು ಅನುಕರಣೀಯ ಎನ್ನುವುದಕ್ಕೆ ಸಮರ್ಥ ಕಾರಣವನ್ನು ಕೊಟ್ಟಿದ್ದಾರೆ. ಅದೇಂದರೆ– ವಿದ್ಯಾರ್ಥಿಗೆ ತನ್ನ ಇಷ್ಟ ಬಂದ ವಿಷಯಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಒಂದೆರಡು ವರ್ಷವಾದ ಮೇಲೆ ಅವನಿಗೆ ಅದರಲ್ಲಿ ಅಭಿರುಚಿ ಇಲ್ಲದಿದ್ದರೆ ಆ ಪಾಠಕ್ರಮವನ್ನು ತ್ಯಜಿಸಿ ಬೇರೆ ವಿಷಯಗಳನ್ನು ಅಭ್ಯಸಿಸಬಹುದು. ಎಲ್ಲಾ ಮಟ್ಟದಲ್ಲೂ ಅರ್ಹತೆ ಮತ್ತು ನೈಜ ಯೋಗ್ಯತೆಗೆ ಪ್ರಾಧಾನ್ಯ: ಬೇಕಾದಷ್ಟು ಸೌಕರ್ಯಗಳಿದ್ದರೂ ಶುಲ್ಕ ವಿಪರೀತ ವಿದ್ಯಾರ್ಜನೆಗೆ ನಿಜವಾದ ಆಕಾಂಕ್ಷೆಯುಳ್ಳವರು ಮತ್ತು ಆ ವಿಷಯಗಳಲ್ಲಿ ಆಸಕ್ತಿ ಇದ್ದು, ಪ್ರತಿಭೆವುಳ್ಳವರಿಗೆ ಅನೇಕ ಸೌಲಭ್ಯಗಳು ದೊರೆಯುತ್ತವೆ ಹಣ ಸಾಕಾಗದೆ ಇದ್ದರೆ, ಅಲ್ಲಿ ಇಲ್ಲಿ ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಸಂಪಾದನೆ ಮಾಡುವ ವಿದ್ಯಾರ್ಥಿಗಳೂ ಇದ್ದಾರೆ. ದುಡಿತದಲ್ಲಿ ಮೇಲು–ಕೀಳು ಎಂಬ ಭಾವನೆಯಿಲ್ಲ. ಕಾಯಕಗೌರವ ಅಲ್ಲಿ ಪ್ರತ್ಯಕ್ಷವಾಗಿ ಕಾಣಿಸುತ್ತದೆ. 'ಲೇಖಕರ ಅಭಿಪ್ರಾಯದಂತೆ ಅವರವರ ಆಸಕ್ತಿಗೆ ತಕ್ಕ ವಿಷಯಗಳನ್ನು ಆಯ್ದುಕೊಂಡು ಶ್ರದ್ಧೆಯಿಂದ ಕಲಿತಾಗ ಉತ್ತಮ ಪರಿಣಾಮವೇ ಸಂಭವಿಸುತ್ತದೆ. ಒತ್ತಾಯದಿಂದ ಹೇರಲ್ಪಡುವ ವಿಷಯಗಳಲ್ಲಿ ನಿರಾಸಕ್ತಿಯೇ ಹೆಚ್ಚಾಗಿ ಇರುವುದರಿಂದ ಉತ್ತಮ ಪರಿಣಾಮ ನಿರೀಕ್ಷಿಸಲು ಸಾಧ್ಯವಿಲ್ಲ. ಆಸಕ್ತಿಯ ವಿಷಯವಿದ್ದಾಗ ಸಂಶೋಧನೆ, ಸೃಜನಶೀಲತೆಯು ಮೂಡುತ್ತದೆ.

ಆ ಮುಂದುವರೆದ ದೇಶದಲ್ಲಿ ಕಲಿಯಬೇಕಾದುದು ಬೇಕಾದಷ್ಟಿದೆ ಎಂದು ಯುವ ಪೀಳಿಗೆಗೆ ಕಿವಿಮಾತನ್ನು ಹೇಳುತ್ತಾರೆ. ಯೌವನಾವಸ್ಥೆಯಲ್ಲಿಯೇ ಅಲ್ಲಿಗೆ ಹೋಗಿ ಇಂಜಿನೀಯರಿಂಗ್, ಗಣಕಯಂತ್ರ,

ವಿಜ್ಞಾನ, ಬಾಹ್ಯಾಕಾಶ ಸಂಶೋಧನೆ, ವೈದ್ಯಕೀಯ ಕ್ಷೇತ್ರದ ಹಲವು ವಿಭಾಗಗಳು, ಆಡಳಿತ ಪದ್ಧತಿಯ ವಿಧಾನಗಳು, ಮುದ್ರಣ ಕಲೆ ಹೀಗೆ ಅನೇಕ ರೀತಿಯಲ್ಲಿ ಜ್ಞಾನವನ್ನು ವೃದ್ಧಿಸಿಕೊಂಡು ಜನ ಜೀವನಕ್ಕೆ ಅದರ ಸಂಪೂರ್ಣ ಸದುಪಯೋಗವನ್ನುಂಟುಮಾಡಬಹುದೆಂದು ತಿಳಿಸುತ್ತಾರೆ.

**ಆರ್ಥಿಕತೆ :** ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೆ ಆದ ಅರ್ಥವ್ಯವಸ್ಥೆ ಇರುತ್ತದೆ. ಆರ್ಥಿಕವಾಗಿ ಪ್ರಬಲವುಳ್ಳ ಕೆಲವೊಂದು ರಾಷ್ಟ್ರಗಳು ಇನ್ನಿತರ ದುರ್ಬಲ ರಾಷ್ಟ್ರಗಳ ಮೇಲೆ ಪ್ರಭಾವ ಬೀರುತ್ತವೆ. ಇಂದು ಬಂಡವಾಳ ಸಾಮಗ್ರಿ ಮತ್ತು ತಾಂತ್ರಿಕ ಜ್ಞಾನದಿಂದಾಗಿ ಮುಂದುವರೆದ ದೇಶಗಳನ್ನು ಇನ್ನುಳಿದ ರಾಷ್ಟ್ರಗಳು ಅವಲಂಬಿಸಿವೆ ಎನ್ನುವುದು ಈ ದೇಶದಲ್ಲಿ ನೋಡಬಹುದು. ಅಮೇರಿಕಾದಲ್ಲಿ ಹಳ್ಳಿಗಳು ಸಹ ಪಟ್ಟಣದ ಸೌಲಭ್ಯವನ್ನು ಹೊಂದಿವೆಯಂತೆ ಪ್ರತಿಯೊಬ್ಬ ರೈತನು ಐನೂರು ಎಕರೆಗೆ ಕಡಿಮೆ ಇಲ್ಲದಂತೆ ಜಮೀನು ಹೊಂದಿದ್ದು, ಯಂತ್ರಗಳ ಸಹಾಯದಿಂದ ವ್ಯವಸಾಯವನ್ನು ಕೈಗಾರಿಕೆಯಂತೆ ನಿರ್ವಹಿಸುವುದಕ್ಕೆ, ಅತ್ಯಾಧುನಿಕ ಸಲಕರಣೆಗಳು ತಂತ್ರಜ್ಞಾನದ ಬಲಕೆಯಾಗಿರುವುದು ಕಂಡುಬರುತ್ತದೆ. ದಳ್ಳಾಳಿಗಳ ಕಾಟವಿಲ್ಲದೆ ಮಾರಾಟದ ತೊಂದರೆ ಇಲ್ಲದೆ ಮಳೆಯನ್ನೇ ಸಂಪೂರ್ಣವಾಗಿ ಆಶ್ರಯಿಸದೆ ಅಮೇರಿಕಾದ ರೈತಾಪಿ ಜನ ಬಹುಮಟ್ಟಿಗೆ ಸುಖವಾಗಿ ಸ್ವತಂತ್ರವಾಗಿ ಜೀವನ ನಡೆಸುತ್ತಾರೆ ಎನ್ನುವುದು ಲೇಖಕರು ಫ್ಲೀಮತ್‌ನಂದ ಗ್ರ್ಯಾಂಡ್‌ರ್‍ಯಾಪಿಡ್ಸ್‌ಗೆ ಹೋಗುವಾಗ ದಾರಿಯಲ್ಲಿ ನೋಡಿ ವಿಚಾರಿಸಿದ ವ್ಯವಸಾಯ ಕ್ಷೇತ್ರಗಳಿಂದ ಈ ವಿಷಯಗಳನ್ನು ತಿಳಿದುಕೊಂಡಿದ್ದಾರೆ.

ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆಯ ಈ ದಿನಗಳಲ್ಲೂ ಪ್ರಪಂಚದ ಯಾವ ದೇಶವೂ ಸಂಪೂರ್ಣ ಸ್ವಪರಿಪೂರ್ಣತೆಯನ್ನು ಗಳಿಸಲು ಸಾಧ್ಯವಿಲ್ಲ ಪರಸ್ಪರ ಆರ್ಥಿಕಾವಲಂಬನೆ ಒಂದಿಲ್ಲೊಂದು ರೂಪದಲ್ಲಿ ಕಂಡುಬರುವುದು. ವಿವಿಧ ಸರಕುಗಳನ್ನು ಉತ್ಪಾದಿಸುವ ಸ್ಥಿತಿಗಳು ಪ್ರಪಂಚದ ಎಲ್ಲ ಭಾಗಗಳಲ್ಲೂ ಒಂದೇ ಬಗೆಯಾಗಿಲ್ಲ. ಉತ್ಪಾದನೆ ವಿಶಿಷ್ಟ ಬಗೆಯಾಗಿರುವುದು ನಿಶ್ಚಿತವಾಗಿದೆ.

**ನೈಸರ್ಗಿಕತೆ :** ತಮ್ಮ ಪ್ರವಾಸದ ಅವಧಿಯಲ್ಲಿ ಲೇಖಕರು ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದಾರೆ. ಇವರಿಗೆ ಹೆಚ್ಚಾಗಿ ಉದ್ಯಾನಗಳ ಸೊಬಗು ತುಂಬಾ ಇಷ್ಟವಾಗಿದೆ. ಇದನ್ನು 'ಫಿಲಡಲ್ಫಿಯಾದ ಲಾಲ್‌ಬಾಗ್' ಶೀರ್ಷಿಕೆಯಡಿ ಪುಟ 120–127ರವರೆಗೆ ನೋಡಬಹುದು.

ಮನುಷ್ಯನಿಗೆ ನಿಸರ್ಗವನ್ನು ಪೂರ್ತಿಯಾಗಿ ತನ್ನ ಹಿಡಿತಕ್ಕೆ ಒಳಪಡಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಆದರೆ ಅವನ ಜಾಣ್ಮೆ, ಶ್ರಮ, ಸಾಂಸ್ಕೃತಿಕ ಬೆಳವಣಿಗೆ ಮತ್ತು ತಾಂತ್ರಿಕ ಜ್ಞಾನಗಳ ಸಹಾಯದಿಂದ

ಕೆಲಮಟ್ಟಿಗೆ ಅದನ್ನು ಮಾರ್ಪಡಿಸಿದ್ದಾನೆ ಮತ್ತು ಅದರೊಂದಿಗೆ ಹೊಂದಿಕೊಂಡಿದ್ದಾನೆ ಎನ್ನುವುದು ಅಮೇರಿಕಾದ ಕೆಲವು ನೈಸರ್ಗಿಕ ತಾಣಗಳಿಂದ ತಿಳಿಯಬಹುದು.

ಲೇಖಕರು ಏಳೆಂಟು ತಿಂಗಳು ಅಮೇರಿಕದಲ್ಲಿದ್ದರೂ ಆ ದೇಶದ ವಾತಾವರಣ, ಆಹಾರ, ಜೀವನಕ್ರಮ ಇವರಿಗೆ ಒಗ್ಗದೆ, ಇದ್ದುದರಿಂದ ಭಾರತಕ್ಕೆ ಹಿಂದಿರುಗಲು ತೀವ್ರ ಕಾತುರರಾಗಿದ್ದುದು ಕಂಡುಬರುತ್ತದೆ. ತಮ್ಮ ಪ್ರವಾಸಕಥನದ ಕೊನೆಯಲ್ಲಿ ಪ್ರವಾಸದ ಸಮೀಕ್ಷೆಯಲ್ಲಿ ಅಮೇರಿಕನ್ನರ ಜೀವನದಲ್ಲಿನ ಒಳಿತು–ಕೆಡಕುಗಳನ್ನು ವಿವೇಚಿಸಿದ್ದಾರೆ. ಇದೊಂದು ವಿಮರ್ಶಾತ್ಮಕ ಪ್ರವಾಸಕಥನವಾಗಿದೆ.

**ಅವಕಾಶಗಳ ಅಮರಾವತಿ ಅಮೇರಿಕಾ – ಗುರುಮೂರ್ತಿ ಪೆಂಡಕೂರು :**

ಆರು ತಿಂಗಳು ಅಮೇರಿಕೆಯಲ್ಲಿದ್ದಾಗ ತಮಗಾದ ಅನುಭವಗಳನ್ನು ಉತ್ಸಾಹಭರಿತರಾಗಿ ನಿರೂಪಿಸಿದ್ದಾರೆ. "ನಾನಾ ಕಾರಣಗಳಿಗಾಗಿ ಅಲ್ಲಿಗೆ ಭೇಟಿ ಕೊಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜಾಗತೀಕರಣ, ಉದಾರೀಕರಣಗಳ ನೆಪದಲ್ಲಿ ಈಗ ಜಗತ್ತು ಹತ್ತಿರ ಹತ್ತಿರ ಬರುತ್ತಿವೆ; ಸಾಮಾಜಿಕ ಸಾಂಸ್ಕೃತಿಕ ಬದುಕಿನಲ್ಲಿ ಕ್ಷಿಪ್ರ ಪ್ರಗತಿ ಕಾಣಿಸಿಕೊಳ್ಳುತ್ತಿದೆ; ಕೊಳ್ಳುಬಾಕ ಸಂಸ್ಕೃತಿಯ ಫಲವಾಗಿ ವಿದೇಶದಲ್ಲಿನ ವಸ್ತುಗಳು ಈಗ ಮುಕ್ತ ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುತ್ತಿವೆ. ನಗರ, ಪಟ್ಟಣಗಳಲ್ಲಿ ನಾಗರಿಕ ಸೌಲಭ್ಯಗಳು ಭೋಗಜೀವನಕ್ಕೆ ಬಹುಬೇಗ ತೆರೆದುಕೊಳ್ಳುತ್ತಿವೆ. ಸಾಫ್ಟ್‌ವೇರ್ ಕಂಪನಿಗಳು ತಳವೂರಿ ಸ್ಪರ್ಧೆಯಲ್ಲಿ ಒಂದು ಮತ್ತೊಂದನ್ನು ಮೀರುವ ಹಂತದಲ್ಲಿ ಸಾಮಾಜಿಕ ಬದುಕಿನಲ್ಲಿ ಆರ್ಥಿಕ ಸಮೃದ್ಧಿಯನ್ನು ತಂದುಕೊಡುವುದರ ಜೊತೆಗೆ ಕೌಟಂಬಿಕ ಬದುಕಿನಲ್ಲಿ ಕೆಲವು ಸಮಸ್ಯೆಗಳನ್ನು ತಲ್ಲಣಗಳನ್ನು ಹುಟ್ಟುಹಾಕುತ್ತಾ, ನಿದ್ರೆಗೆಡಿಸುತ್ತಿವೆ. ಅಮೇರಿಕಾ ಭೋಗಸಂಸ್ಕೃತಿಯಲ್ಲಿ ಓಲಾಡುತ್ತಿರುವುದನ್ನು ಒಂದು ರೂಪಕವಾಗಿ ಬಳಸಿಕೊಳ್ಳುವ ಗುರುಮೂರ್ತಿಯವರು ಅದಕ್ಕೆ ಪರ್ಯಾಯವಾಗಿ ಭಾರತೀಯ ಸಂಸ್ಕೃತಿಯಲ್ಲಿನ ಕರ್ಮಭೂಮಿಯನ್ನು ಕೊಡುವರು. ಈ ರೂಪಕದ ಸ್ವಾರಸ್ಯವನ್ನು ಎಚ್.ಎಸ್. ವೆಂಕಟೇಶಮೂರ್ತಿ ತಮ್ಮ 'ಮುನ್ನುಡಿಯಲ್ಲಿ ಚೆನ್ನಾಗಿ ವಿವರಿಸಿರುವರು. ಗುರುಮೂರ್ತಿಯವರು ಹಲವಾರು ಬಾರಿ ದೇಶ ಸಂಚಾರ ಮಾಡಿರುವುದರಿಂದ ಆಶ್ಚರ್ಯದ ಕಣ್ಣುಗಳಿಂದ ತಾವು ನೋಡಿದ ದೇಶದ ಇಂದ್ರನಗರಿಯ ವೈಭವವನ್ನು ವರ್ಣಿಸುವುದಿಲ್ಲ. ಮುಕ್ತಮನಸ್ಸಿನ ಅವರು ಅಮೇರಿಕಾವನ್ನು ನೋಡಿದ್ದು ನಿಬ್ಬೆರಗಿನಿಂದಲ್ಲ ಸಮದೃಷ್ಟಿಯ ಹಿನ್ನೆಲೆಯಲ್ಲಿ. "ಅಲ್ಲಿಯದೆಲ್ಲಾ ಶ್ರೇಷ್ಠವಲ್ಲ, ಪರಮಪವಿತ್ರವಲ್ಲ ಮತ್ತು ಅನುಕರಣೀಯವೂ ಅಲ್ಲ. ಈ ಸಮದೃಷ್ಟಿಯ ಹಿನ್ನೆಲೆಯಲ್ಲಿ ನಾನು ನನ್ನ

ಪ್ರವಾಸದ ಅನುಭವವನ್ನು ಸವಿದಿದ್ದೇನೆ... ಯಾವುದೇ ಪೂರ್ವಾಗ್ರಹವಿಲ್ಲದೆ, ಮುಕ್ತಮನಸ್ಸಿನಿಂದ ಆ ನಾಡಿನಲ್ಲಿ ತಿರುಗಾಡಿ ಸಂತೋಷ ಪಟ್ಟಿದ್ದೇನೆ... ಅತ್ಯಂತ ವೇಗದಿಂದ ಅಮೇರಿಕನ್ ಅಥವಾ ಪಾಶ್ಚಿಮಾತ್ಯ ಅರ್ಥವ್ಯವಸ್ಥೆ ಜೀವನಶೈಲಿಗೆ ಧಾವಿಸುತ್ತಿರುವ ನಮ್ಮ ದೇಶಿಗರು ಅಮೇರಿಕವನ್ನು ನೋಡುವ ದೃಷ್ಟಿ ಬದಲಾಗಬೇಕು ಎನಿಸುತ್ತದೆ" ಎಂಬುದನ್ನು ಸ್ವತಃ ಲೇಖಕರು, ತಮ್ಮ ಲೇಖಕರ ಮಾತಿನಲ್ಲಿ ಹೇಳಿರುವುದು ಕೃತಿಯುದ್ದಕ್ಕೂ ಕಾಣುತ್ತೇವೆ.

"ಮಗ ರಮೇಶ ಸುಪ್ರಸಿದ್ಧ 'Intel' ಕಂಪನಿಯಲ್ಲಿ ಇಂಜಿನಿಯರ್, ಸೊಸೆ ರೆಬೆಕಾ ವಿದೇಶಿಯಳು. ಪ್ರೀತಿಸಿ ಮದುವೆಯಾದ ಅವರನ್ನು ಮುಕ್ತಮನಸ್ಸಿನಿಂದ ಗುರುಮೂರ್ತಿ ದಂಪತಿಗಳು ಸ್ವೀಕರಿಸಿದರು ಈ ಹೃದಯವೈಶಾಲ್ಯಕ್ಕೆ ಜಾತಿ, ದೇಶ, ಭಾಷೆ, ಸಂಸ್ಕೃತಿಗಳು ಅಡ್ಡಿಬರಲಿಲ್ಲ. ಇರುವಷ್ಟು ದಿನಗಳನ್ನು 'ಮಧುರ' ಸ್ಮೃತಿಯಾಗಿಸಿಕೊಳ್ಳುವ ಹವಣಿಕೆಯಲ್ಲಿ ಪೂರ್ವ–ಪಶ್ಚಿಮಗಳು ಒಂದಾದವು. ಗುರುಮೂರ್ತಿಯವರೇ ಹೇಳುವಂತೆ, ಅಮೇರಿಕಾದಲ್ಲಿನ ನಮ್ಮ ಆರು ತಿಂಗಳು ನಮ್ಮ ಜೀವನದ 'ಮಧುರ ಸಮಯ' ಎನಿಸುವ ಹಾಗೆ ಆಯಿತು. ಮಗ ರಮೇಶ, ಸೊಸೆ ರೆಬೆಕಾ ತುಂಬಾ ಪ್ರೀತಿಯಿಂದ, ಎಚ್ಚರಿಕೆಯಿಂದ ನಮ್ಮ ಅನುಕ್ಷಣ ಮಧುರವಾಗಿರಲು ಹೆಣಗಿದರು. ನೀರಿನಂತೆ ಹಣ ಮತ್ತು ಅವರ ಸಮಯವನ್ನು ನಮಗಾಗಿ ನೀಡಿದರು. ನಾವು ಅವರಿಗೆ ಭಾರವಾಗದಂತೆ ನಮ್ಮ ಪ್ರವಾಸವನ್ನು ಹೂವಿನಂತೆ ಹಗುರವಾಗುವಂತೆ ವರ್ತಿಸಿ ನಡೆದವು "ಮಕ್ಕಳು ನಮ್ಮನ್ನು, ನಾವು ಮಕ್ಕಳನ್ನು ಅರ್ಥಮಾಡಿಕೊಳ್ಳುವುದರಲ್ಲಿದೆ ಪ್ರೀತಿಯ ಬೆಲೆ. ದೂರದ ಅಮೇರಿಕಾದಲ್ಲಿ ಹುಟ್ಟುಹಬ್ಬ, ಹಬ್ಬಗಳ ಆಚರಣೆಯ ನೆಪದಲ್ಲಿ ಮನಸ್ಸುಗಳು ಇನ್ನೂ ಹತ್ತಿರ ಬರುತ್ತವೆ; ಸಂತೋಷವನ್ನು ಕೊಟ್ಟು ಪಡೆಯುತ್ತವೆ. ಬದುಕಿನ ಅರ್ಥ ಇದಕ್ಕಿಂತ ಬೇರೆ ಏನಿದೆ?" ಎಂಬಲ್ಲಿ ಲೇಖಕರ ಪ್ರವಾಸದ ಸಂತೃಪ್ತಿಯನ್ನು ಕಾಣಬಹುದು.

ಅಮೇರಿಕಾ, ಇತರ ಅಥವಾ ಅನ್ಯದೇಶಿಗರನ್ನು ತನ್ನಡೆಗೆ ಸೆಳೆಯುವಲ್ಲಿ ಅಲ್ಲಿನ ಅವಕಾಶಗಳು, ಅನುಕೂಲಗಳು ಪ್ರಮುಖವಾಗಿವೆ ಎನ್ನುತ್ತಾರೆ ಲೇಖಕರು. 'ಉತ್ಸಾಹಿಗಳಿಗೆ ಅಮೇರಿಕ ವಿಪರೀತ ಪ್ರೋತ್ಸಾಹ ಕೊಡುತ್ತದೆ. ಓದು, ಪರಿಣತಿ ಮತ್ತು ಅನುಭವಕ್ಕೆ ಸರಿಸಮನಾದ ಕೆಲಸ ಸಿಗುವ ಅಮೇರಿಕಾದಲ್ಲಿ ಕೆಲಸ ಮಾಡುವವನಿಗೆ ಅನುಕೂಲ ವಾತಾವರಣ ಇರುತ್ತದೆಂದು ಹೇಳುತ್ತಾರೆ. ಕೆಲಸದ ಸ್ಥಳ, ಗೃಹಸೌಕರ್ಯ, ಎಲ್ಲವೂ ಸಂತೃಪ್ತಿ ನೀಡುತ್ತವೆ ಅಲ್ಲದೆ ಯಾವುದೇ ಸಂಪ್ರದಾಯದ ಸಂಕೋಲೆಗಳು ಇಲ್ಲ. ಇದರಿಂದಾಗಿ ಯುವಜನಾಂಗ ಅಮೇರಿಕಾಕ್ಕೆ ಹೋಗಲು ಬಯಸುತ್ತಾರೆ. ಇದರಿಂದ ಲೇಖಕರು ಅವಕಾಶಗಳ ಅಮರಾವತಿಯಾದ ಅಮೇರಿಕಾ ಆಕರ್ಷಣೆ ಬಿಡಿಸಲಾರದ ಮಾಯೆ ಎನ್ನುತ್ತಾರೆ.

[illegible]

[illegible]

[illegible]

ಅಮೇರಿಕದಲ್ಲಿ ತಮ್ಮದೇ ಆದ ಒಂದು ನಾಗರಿಕತೆಯನ್ನು ಹೊಂದಿದ್ದ ಅಲ್ಲಿನ ಮೂಲನಿವಾಸಿಗಳು ಸಂಪೂರ್ಣ ನಾಶವಾಗಿ ಹೋಗಿದ್ದಾರೆ. ಇದಕ್ಕೆ ಯೂರೋಪಿನಿಂದ ಬಂದ ವಲಸೆಗಾರರ ಅಮಾನುಷ ಕೃತ್ಯವೇ ಕಾರಣವೆನ್ನುತ್ತಾರೆ. ಆದರೆ ಕಾಲಾನುಕಾಲಕ್ಕೆ ಅವರ ತಪ್ಪಿನ ಅರಿವಾಗಿ ಮೂಲನಿವಾಸಿಗಳನ್ನು ಅವರವರ ಪ್ರಾಂತ್ಯಗಳಲ್ಲಿ ನೆಲೆಸಲು ಅವಕಾಶ ಕಲ್ಪಿಸಿಕೊಟ್ಟು ಅವರ ಕಲೆ, ಸಂಸ್ಕೃತಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಸರ್ಕಾರ ಅವರಿಗೆ ಸ್ನೇಹದ ಹಸ್ತ ನೀಡಿ ಆಧುನಿಕತೆಯತ್ತ ಸಾಗಲು ಸಹಾಯ ಮಾಡಿತೆಂದು ಲೇಖಕರು ತಿಳಿಸುತ್ತಾರೆ"[7] ಎಂಬ ಲೇಖಕರ ಈ ಹೇಳಿಕೆಗಳು ಸಾಕಷ್ಟು ಆಲೋಚನೆಗೆಡೆಮಾಡಿಕೊಡುವುದಲ್ಲದೆ ಭಾರತದಲ್ಲೂ ಕೆಲವು ಬುಡಕಟ್ಟು ಜನಾಂಗದವರು ಮುಖ್ಯವಾಹಿನಿಗಳಿಗೆ ಬಂದಿಲ್ಲ. ಬುಡಕಟ್ಟು ಜನರ ಬದುಕಿನ ಸಮಸ್ಯೆಯೇ ಇಂದು ನಕ್ಸಲ್ ವಾದಿಗಳ ಚಟುವಟಿಕೆಗಳಿಗೆ ಆಧಾರವಾಗಿರಬಹುದೆಂಬುದು ಮನವರಿಕೆಯಾಗುತ್ತದೆ.

ಅಮೇರಿಕಾದ ಸಾಂಸ್ಕೃತಿಕ ಕ್ರೀಡೆ, ಉತ್ಸವಗಳೊಂದಿಗೆ ಭಾರತದಲ್ಲಿನ ಅಂದರೆ ತಮ್ಮೂರಲ್ಲಿ ನಡೆಯುವ ಕಾರಿಹುಣ್ಣಿಮೆ, ನಾಗರಪಂಚಮಿ ದಿನಗಳಲ್ಲಿ ನಡೆಯುವ; ದನಗಳ ಬಗ್ಗೆ, ಬಂಡಿ ಓಡಿಸುವ ಬಗ್ಗೆ, ಗರಡಿ-ಕುಸ್ತಿಗಳೊಂದಿಗೆ ಹೋಲಿಸುತ್ತಾ, ತುಲನೆ ಮಾಡುತ್ತಾ ಎಲ್ಲವೂ ಅರ್ಥವಾತ್ತಾದವು ಎನ್ನುತ್ತಾರೆ. ಅಲ್ಲಿನ ರೈತನ ಸುಖಜೀವನವನ್ನು ಮೆಚ್ಚುತ್ತಾರೆ. ಭಾರತೀಯ ರೈತನ ಜೀವನ ಚಿಂತಾಜನಕವಾಗುವುದಕ್ಕೆ ಇಲ್ಲಿಯ ವ್ಯವಸ್ಥೆಯೇ ಕಾರಣವೆಂಬ ದುಗುಡವು ಗೋಚರಿಸುತ್ತದೆ.

"ಅಮೇರಿಕದ ರಾಷ್ಟ್ರೀಯ 'ಸಸ್ಯ ಅಭಿವೃದ್ಧಿ ಮತ್ತು ಅಧ್ಯಯನ ಸಂಸ್ಥೆ'ಯನ್ನು ಸ್ಥಾಪಿಸಿ, ಆ ಮೂಲಕ ಸಸ್ಯಾಭಿವೃದ್ಧಿ ಪಡಿಸುತ್ತಿರುವ ಸಸ್ಯೋದ್ಯಾನದ ಕಾರ್ಯಚಟುವಟಿಕೆಗಳು ಶ್ಲಾಘನೀಯ. ಇದು ಅಮೇರಿಕಾ ಕೇಂದ್ರ ಸರಕಾರದ 'ವ್ಯವಸಾಯ ಸಂಶೋಧನ ಮತ್ತು ಅಧ್ಯಯನ ಕೇಂದ್ರ ಮತ್ತು ಸಸ್ಯಗಳ ಜೀವಂತ ಸಂಗ್ರಹಾಲಯ' ಪರಿಸರವನ್ನು ಸುಧಾರಿಸಲು, ಉತ್ತಮ ಹೂವಿನ ಮರಗಳ ಮತ್ತು ಸುಂದರ ಪರಿಸರ ನಿರ್ಮಾಣವಾಗಲು ಸಹಾಯಕವಾಗುವ ಮರಗಳ ಅಭಿವೃದ್ಧಿಗೆ, ತಳಿಗಳ ಶೋಧನೆಗೆ ಮುಡಿಪಾದ ಸಂಸ್ಥೆ. ಹೊಸ ತಂತ್ರಜ್ಞಾನದ ಮೂಲಕ, ವೈಜ್ಞಾನಿಕ ಅನುಸಂಧಾನದ ಮುಖಾಂತರ ಮತ್ತು ಸದ್ಯದ ಬೀಜಗಳ ಮೊಳಕೆ ಶಕ್ತಿಯನ್ನು ಉಳಿಸಿಕೊಳ್ಳುವ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಈ ಸಂಸ್ಥೆಯು ಹೆಣಗುತ್ತದೆ. ಕೃಷಿಗೆ ಸಂಬಂಧಿಸಿದ ಹೊಸ ವಿಧಾನಗಳನ್ನು ಸಂಶೋಧನೆ ಮಾಡಿ ಅದನ್ನು ರೈತ, ತನ್ನ ಉಪಯೋಗಕ್ಕೆ ಅಳವಡಿಸಿಕೊಳ್ಳಲು ತಿಳಿಸಿಕೊಡುವ ಸಂಸ್ಥೆ. ನಾಗರಿಕರ ಪೌಷ್ಟಿಕ ಅವಶ್ಯಕತೆಗಳನ್ನು

[illegible]

ಪೂರೈಸಬಲ್ಲ ಹೊಸ ಕೃಷಿ ಉತ್ಪನ್ನಗಳನ್ನು ನೀಡುವ ತಳಿಗಳನ್ನು ಇಲ್ಲಿ ಸಂಶೋಧಿಸಲಾಗುತ್ತದೆ. ಸುರಕ್ಷಿತ ಆಹಾರವನ್ನು ಒದಗಿಸಬಲ್ಲ ಆಹಾರಧಾನ್ಯ ಮತ್ತು ಬೀಜಗಳ ಅಭಿವೃದ್ಧಿಗೆ ಹಾಗೂ ಸಮತೂಕದ ಪರಿಸರವನ್ನು ನೆಲೆಗೊಳಿಸಲೂ, ಪ್ರಾಕೃತಿಕ ಮೂಲಾಧಾರಗಳನ್ನು ಅಭಿವೃದ್ಧಿಪಡಿಸಲೂ ಇಲ್ಲಿಯ ತಜ್ಞರು ಶ್ರಮಿಸುತ್ತಾರೆ". ಲೇಖಕರು ಕೊಡುವ ಈ ವಿವರವನ್ನು ಗಮನಿಸಿದರೆ, ಅಮೇರಿಕನ್ನರು ಪರಿಸರ ಮತ್ತು ಕೃಷಿಗೆ ಕೊಡುವ ಪ್ರಾಮುಖ್ಯತೆ ಹಾಗೂ ಭವಿಷ್ಯದ ಬಗೆಗಿನ ಅವರ ದೂರಾಲೋಚನೆ ಎಷ್ಟು ವ್ಯಾಪಕವಾದುದೆಂದು ತಿಳಿದುಬರುತ್ತದೆ.

ಆ ದೇಶದ ಬುದ್ಧಿವಂತಿಕೆಯ ಮನಸ್ಸು, ನೋಡುವ ಪ್ರೇಕ್ಷಣೀಯ ಸ್ಥಳಗಳನ್ನು ತನ್ನ ಆರ್ಥಿಕ ಪ್ರಗತಿಗೆ ಹೇಗೆ ಪೂರಕವಾಗಿ ಬಳಸಿಕೊಳ್ಳುತ್ತದೆಂಬುದನ್ನು ಗುರುಮೂರ್ತಿಯವರು ಸೂಕ್ಷ್ಮವಾಗಿ ಗಮನಿಸುವರು. "ಗುರುಮೂರ್ತಿಯವರದು ಕುತೂಹಲದ ಮನಸ್ಸು. ಅವರು ಅಮೇರಿಕದ ಬದುಕನ್ನು ಗ್ರಹಿಸಲು ಅಲ್ಲಿನ ಭಾರತೀಯ ಮತ್ತು ಅಮೇರಿಕನ್ ಕುಟುಂಬಗಳ ಜೊತೆ ಸಖ್ಯ ಬೆಳೆಸುವರು. ಉಟೋಪಚಾರಗಳಲ್ಲಿ ಭಾಗವಹಿಸುವರು. ವಿಚಾರ ವಿನಿಮಯ ನಡೆಸುವರು, ರೈತರ ಫಾರಂಗಳಿಗೆ ಭೇಟಿ ಕೊಡುವರು"[8] ಅಲ್ಲದೆ ಅವನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿ, ಕೇಳಿ ತಿಳಿದುಕೊಂಡಿದ್ದಾರೆ.

ಲೇಖಕರು ಅಮೇರಿಕಾದಲ್ಲಿ ಇದ್ದಷ್ಟು ದಿನವೂ ಗ್ರಂಥಾಲಯಗಳಿಗೆ ಭೇಟಿಕೊಟ್ಟು ಇಷ್ಟವಾದ ಸಿನಿಮಾಗಳನ್ನು ನೋಡುವ ಮೂಲಕ ತಮ್ಮ ಸಮಯವನ್ನು ಸದುಪಯೋಗಪಡಿಸಿಕೊಂಡಿದ್ದಾರೆ.

ಗುರುಮೂರ್ತಿಯವರು ಯಾವುದೇ ಪ್ರತಿರೋಧವಿಲ್ಲದೆ ಪ್ರಸನ್ನ ಮನಃಸ್ಥಿತಿಯಲ್ಲಿ ಅಮೇರಿಕಾವನ್ನು ಪ್ರವೇಶ ಮಾಡುತ್ತಾರೆ ಅಮೇರಿಕೆಯ ರಾಜಕೀಯ ಮುಖವನ್ನು ಅಲಕ್ಷಿಸಿ ಅದರ ಸಾಂಸ್ಕೃತಿಕ, ಜಾನಪದ ಮತ್ತು ಪ್ರಾಕೃತಿಕವಾದ ಪ್ರಸನ್ನತೆಯೂ, ಮಾನವೀಯವೂ ಆದ ಮುಖದೊಂದಿಗೆ ಲೇಖಕರೂ ಪ್ರವಾಸದ ಉದ್ದಕ್ಕೂ ನಿಕಟವಾದ ಸಂಬಂಧವನ್ನು ಬೆಳೆಸುತ್ತಾ ಹೋಗುತ್ತಾರೆ. ಒಂದು ರಾಷ್ಟ್ರದ ಆತ್ಮದ ಅಭಿವ್ಯಕ್ತಿ ಈ ಮುಖಗಳ ಅನಾವರಣದಿಂದ ಮಾತ್ರ ಸಾಧ್ಯ ಎಂಬುದನ್ನು ಅವರ ಅನುಭವ ಮತ್ತು ವಯಸ್ಸಿನಿಂದ ಪಕ್ವಗೊಂಡ ಭಾರತೀಯ ಮನಸ್ಸು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಂದು ಎಚ್.ಎಸ್.ವೆಂಕಟೇಶಮೂರ್ತಿ ಯವರು ತಮ್ಮ ಮುನ್ನುಡಿಯಲ್ಲಿ ಅಭಿಪ್ರಾಯ ಪಟ್ಟಿರುವುದು ಸುಸಮಂಜಸವಾಗಿದೆ.

## ಅಮೇರಿಕಾದಲ್ಲಿ ಆಲೂರು – ಚಂದ್ರಶೇಖರ ಆಲೂರು :

ಚಂದ್ರಶೇಖರ ಆಲೂರು ಐದು ವಾರಗಳ ಕಾಲ ಪಶ್ಚಿಮ ಅಮೇರಿಕೆಯನ್ನು ಕಂಡು, ಅವರಿಗಾದ ಅನುಭವವನ್ನು ಕೃತಿರೂಪಕ್ಕೆ ಇಳಿಸಿದ್ದಾರೆ. ಮಧ್ಯಮ ವರ್ಗಕ್ಕೆ ಸೇರಿದ ಆಲೂರರು ಸಾಮಾನ್ಯವಾಗಿ ಎಲ್ಲಾ ಮಧ್ಯಮ ವರ್ಗದವರಂತೆ ಹಲವು ಕನಸುಗಳನ್ನು ಕಂಡವರು ತಾವೆ ಹೇಳುವಂತೆ 'ಗಗನದಲ್ಲಿ ಹಕ್ಕಿಯಂತೆ ಹಾರುವ ಬಯಕೆ ನನ್ನ ಬಾಲ್ಯ ಕಾಲದ ಕನಸು. ಬಾಲ್ಯವಿರಲಿ, ಎಳೆಯ ಯೌವನದಲ್ಲಿ ಕೂಡಾ ನಾನು ನೆಲದ ಮೇಲೆ ನಡೆಯುತ್ತಾ, ನಡೆಯುತ್ತಾ ಹಾಗೆ ಆಕಾಶದಲ್ಲಿ ತೇಲುತ್ತಾ ನಡೆದುಕೊಂಡು ಹೋದ ಕನಸು ಕಂಡಿದ್ದೇನೆ. ಇವರ ಕನಸು ಇವರ ಪತ್ನಿ ಉದ್ಯೋಗದ ನಿಮಿತ್ತ "ಅಮೆರಿಕಾದ ಸ್ಯಾನ್‌ಹೊಸೆಯಲ್ಲಿ ಇದ್ದುದರಿಂದ 'ಹೂವಿನೊಂದಿಗೆ ನಾರು ಸ್ವರ್ಗ ಸೇರಿತು' ಎಂಬಂತೆ ಲೇಖಕರ ಕನಸು ನನಸಾಗಿದೆ. ಅಮೇರಿಕಾವನ್ನು ಕಾಣುವ ಬಯಕೆಯೂ ಈಡೇರಿದೆ.

'ನಾನು ನನಗನ್ನಿಸಿದ್ದನ್ನು, ನಾನು ಸ್ಪರ್ಶಿಸಿದ್ದನ್ನು ನಿಮಗೆ ಹೇಳಲೆ ಬೇಕೆನಿಸಿದ್ದನ್ನು ಮಾತ್ರ ಹೇಳುತ್ತೇನೆ ಎಂದು ಲೇಖಕರು ತಾವು ಕಂಡದ್ದನ್ನು, ತಮ್ಮ ಮೇಲೆ ಪ್ರಭಾವ ಬೀರಿದ್ದನ್ನು ಮಾತ್ರ ಹೇಳುತ್ತಾರೆ ಹೊರತು ಅನಾವಶ್ಯಕವಾಗಿ ಏನನ್ನು ಹೇಳುವುದಿಲ್ಲ "ಆಲೂರರು ಕೇವಲ ಅಮೇರಿಕಾವನ್ನಲ್ಲ; ಅದರ ಮನಸ್ಸನ್ನು ಮುಟ್ಟಿಬಂದವರು" ಎಂಬ ರವಿಬೆಳೆಗರೆಯವರ ಮಾತು ಸರಿ ಎನಸುತ್ತದೆ.

ತಮ್ಮ ಪ್ರವಾಸಕಥನದಲ್ಲಿ ಇಪ್ಪತ್ತಾರು ಉಪಶೀರ್ಷಿಕೆಗಳನ್ನು ಮಾಡಿಕೊಂಡು ಅವುಗಳಡಿಯಲ್ಲಿ ಅಮೇರಿಕನ್ನರ ಜೀವನ ಶೈಲಿ, ಆಕರ್ಷಿಣೀಯ ಸ್ಥಳಗಳ ವರ್ಣನೆ ಅಮೇರಿಕನ್ ಸಂಸ್ಕೃತಿ ಈ ಮೊದಲಾದ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಕೆಲವೊಂದು ವಿಚಾರದಲ್ಲಿ ಭಾರತ–ಅಮೇರಿಕಾಗೆ ಹೋಲುತ್ತದೆ ಎಂದು ಹೇಳುತ್ತಾರೆ. ಇದನ್ನು ಈ ಮುಂದೆ ವಿಸ್ತಾರವಾಗಿ ನೋಡಬಹುದು.

**ಪ್ರವಾಸಿ ಸ್ಥಳಗಳ ಕುರಿತು :** ಕಡಲ ಮೇಲೆ ಅರಳಿನಿಂತ ಕಾಮನಬಿಲ್ಲು ಫೆಸಿಫಿಕ್ ಸಾಗರದ ಮೇಲೆ ನಿರ್ಮಿತವಾದ ಗೋಲ್ಡನ್ ಗೇಟ್. ಇದರ ವಿಶೀಷವೆಂದರೆ ಇಡೀ ಕ್ಯಾಲಿಪೋರ್ನಿಯಾ ಭೂಕಂಪದಿಂದ ಅಲ್ಲೋಲ–ಕಲ್ಲೋಲವಾದರೂ ಈ ಸೇತುವೆಯು ಒಂದಿಷ್ಟು ಹಾನಿಗೊಳಗಾಗುವುದಿಲ್ಲವಂತೆ. ಜೋಸೆಫ್ ಸ್ಟ್ರಾಸ್‌ನ ನಾಲ್ಕುವರೆ ವರ್ಷಗಳ ಪರಿಶ್ರಮದಿಂದ ನಿರ್ಮಾಣವಾದ ಈ ಬ್ರಿಡ್ಜ್ ವಿಶ್ವದಲ್ಲಿಯೇ ಉಕ್ಕಿನಲ್ಲಿ ನಿರ್ಮಿತವಾದ ಅತ್ಯಂತ ಉದ್ದ ಹಾಗೂ ಎತ್ತರದ ಸೇತುವೆ ಎಂಬ ಖ್ಯಾತಿಗೆ ಪಾತ್ರವಾಗಿದೆ. ಆಲೂರರು ಉಕ್ಕಿನಲ್ಲಿ ಅರಳಿದ ಮಹಾಕಾವ್ಯ 'ಗೋಲ್ಡನ್ ಗೇಟ್' ಎನ್ನುತ್ತಾರೆ.

ವಾಲ್ಟ್‌ಡಿಸ್ನಿಯ ಡಿಸ್ನಿಲ್ಯಾಂಡನ್ನು ಲೇಖಕರು ಗಂಧರ್ವಲೋಕ, ಸಾಹಸ ಮತ್ತು ಉಲ್ಲಾಸಭರಿತ ರೈಡ್‌ಗಳ ಚೈತನ್ಯಮಯ ಜಗತ್ತು ಎನ್ನುತ್ತಾ ಇದು ಎಲ್ಲಾ ವಯಸ್ಸಿನವರನ್ನೂ ಆಕರ್ಷಿಸುತ್ತದೆ ಮತ್ತು ಹಾಲಿವುಡ್, ಜುರಾಸಿಕ್ ಪಾರ್ಕ್, ಡಾರ್ಕ್ ರೂಂ, ವೈಲ್ ವೈಲ್ಡ್, ವೆಸ್ಟ್ ಶೋಗಳು ಬೆರಗುಗೊಳಿಸುತ್ತವೆ. ಎನ್ನುತ್ತಾರೆ.

'ಅಮೇರಿಕಾದ ನಯಾಗರ ಜಲಪಾತವನ್ನು ಒಬ್ಬೊಬ್ಬ ಪ್ರವಾಸಿಯು ಒಂದೊಂದು ತೆರನಾಗಿ ವರ್ಣಿಸಿದ್ದಾರೆ. ಆಲೂರರು ಈ ಜಲಪಾತ 176 ಅಡಿ ಎತ್ತರವಾದುದು, 1060 ಅಡಿ ಉದ್ದ ಹಾಗೂ ಕೆನಡಾ ಜಲಪಾತವೂ ಸೇರಿ ಸುಮಾರು 4000 ಅಡಿಗಳಷ್ಟು ವಿಸ್ತಾರವಾಗಿದೆ ಎಂದು ಇಷ್ಟು ವಿಶಾಲವಾದ ಜಲಪಾತದಲ್ಲಿ ವರ್ಷಪೂರ್ತಿ ಜಲವೃಷ್ಟಿಯಾಗುತ್ತದೆ ಎನ್ನುತ್ತಾ, ಮತ್ತೊಂದು ಆಶ್ಚರ್ಯವನ್ನು ನಮ್ಮ ಮುಂದೆ ಇಡುತ್ತಾರೆ. ನಮ್ಮ 'ಕೆರೆಗೆ ಹಾರ'ದಂತಹ ಜಾನಪದ ಕಾವ್ಯದ ದುರಂತ ಕಥೆ ನಯಾಗರ ಜಲಪಾತದ ಬಗ್ಗೆ ಅಮೇರಿಕಾ ಮೂಲ ನಿವಾಸಿಗಳಲ್ಲಿ ಪ್ರಚಲಿತವಾಗಿದೆ ಎನ್ನುತ್ತಾರೆ.

**ಸಾಮಾಜಿಕ ಜೀವನ** : ಅಮೇರಿಕನ್ ಸಮಾಜದ ಅಮಾನುಷ ಕೃತ್ಯಗಳ ಕುರಿತು 'ಹೋಂ ಲೇಸ್', 'ಕಾಣದ ಕಪ್ಪು ಅಮೇರಿಕಾ', 'ಇನ್ನೂರು ಜನರನ್ನು ಫೈರು ಮಾಡಿದರು' ಈ ಶೀರ್ಷಿಕೆಯಡಿಯಲ್ಲಿ ಬರುವ ವಿವರದ ಮೂಲಕ ತಿಳಿಯಬಹುದು.

'ಹೋಂ ಲೇಸ್' ಎಂದರೆ ಸ್ವಂತ ಮನೆ ಇಲ್ಲದವರು ಎಂದಲ್ಲ, ಯಾರಿಗೆ ರಾತ್ರಿ ಮಲಗಲು ಜಾಗವಿಲ್ಲವೋ ಬೀದಿಯಲ್ಲೇ ಕಾಲ ಕಳೆಯುತ್ತಾರೋ ಅಂಥವರನ್ನು ಹೋಂ ಲೇಸ್ ಎನ್ನುತ್ತಾರಂತೆ. 'ಒಬ್ಬ ವ್ಯಕ್ತಿ ಒಮ್ಮೆ ಮನೆ ಕಳೆದುಕೊಂಡು ಬೀದಿಗೆ ಬಿದ್ದನೆಂದರೆ ಆತನ ಜೀವನ ಮುಗಿದಂತೆ ಇಲ್ಲಿ ಮನೆ (ಬಾಡಿಗೆಯೋ, ಸ್ವಂತವೋ)ಕಳೆದುಕೊಳ್ಳುವುದೆಂದರೆ ಆತನ ಅಸ್ಥಿತ್ವ ಕಳೆದುಕೊಂಡಂತೆಯೇ' ಎನ್ನುವ ಲೇಖಕರು ಅಡ್ರೆಸ್ಸೇ ಇಲ್ಲದ ಹೋಂ ಲೇಸ್‌ಗಳಿಗೆ ಕೆಲಸ ಸಿಕ್ಕುವ ಸಾಧ್ಯತೆಯೇ ಇಲ್ಲವೆಂದು ಹೇಳುತ್ತಾರೆ. ಅಮೇರಿಕಾದ ಹೋಂ ಲೇಸ್‌ಗಳ ಸ್ಥಿತಿ ಕರುಣಾಜನಕವೆನ್ನುತ್ತಾರೆ. ಭಾರತದಲ್ಲಿನ ಹೋಂ ಲೇಸ್‌ಗಳಿಗೆ ಅಲ್ಲಿಯ ಹೋಂ ಲೇಸ್‌ಗಳನ್ನು ಹೋಲಿಸಿ ನೋಡುತ್ತಾರೆ. ಈ ವಿಷಯದಲ್ಲಿ ಭಾರತದಲ್ಲಿನ ಹೋಂಲೇಸ್‌ಗಳ ಸ್ಥಿತಿ ಸ್ವಲ್ಪ ಸುಧಾರಿತವೆನ್ನಬಹುದೆನ್ನುತ್ತಾ, 'ಕಾಣದ ಕಪ್ಪು ಅಮೇರಿಕಾ' ಅಧ್ಯಾಯದಲ್ಲಿ ಅಮೇರಿಕನ್ನರ ಭೀಕರ ನ್ಯೂಕ್ಲಿಯರ್ ಸ್ಫೋಟದ ದುಷ್ಪರಿಣಾಮದ ಚಿತ್ರವನ್ನು ತೆರೆದಿಡುತ್ತಾ ವಿಷಾದನೀಯವನ್ನು ವ್ಯಕ್ತಪಡಿಸಿದ್ದಾರೆ.

## ಜಿ.ಎಸ್. ಶಿವರುದ್ರಪ್ಪ – ಅಮೇರಿಕಾದಲ್ಲಿ ಕನ್ನಡಿಗ :

ಶ್ರೇಷ್ಠ ವಿಮರ್ಶಕರು, ಸೂಕ್ಷ್ಮ ವೀಕ್ಷಣಾ ಸಮರ್ಥರೂ ಆದ ಜಿ.ಎಸ್. ಶಿವರುದ್ರಪ್ಪನವರ 'ಅಮೇರಿಕಾದಲ್ಲಿ ಕನ್ನಡಿಗ'ದಲ್ಲಿ ಏನಾದರೂ ಹೊಸತನವಿದ್ದೇ ಇರುತ್ತದೆ ಎಂಬ ವಿಶ್ವಾಸಕ್ಕೆ ದಿನಚರಿ ರೂಪದ ಈ ಪ್ರವಾಸ ಕಥನ ಸಾಕಷ್ಟು ಪುಷ್ಟಿಯನ್ನೊದಗಿಸುತ್ತದೆ.

ತಮಗಾದ ವಿಶಿಷ್ಟ ಅನುಭವಗಳನ್ನು ವ್ಯಕ್ತಪಡಿಸುವ ವರ್ಣನಾವೈಖರಿಯಲ್ಲಿ ಕವಿ ಹೃದಯವನ್ನು ಕಾಣುತ್ತೇವೆ. 'ಸಂಜೆಯ ಸೂರ್ಯನ ಬೆಳಕಿನಲ್ಲಿ ಬಂಗಾರದ ಹಾಸಿಗೆಯಾಗಿತ್ತು, ಲಕಲಕಿಸುವ ಬಿಸಿಲಿನಲ್ಲಿ ನಿಶ್ಚಲವಾದ ಬಣ್ಣದ ಜ್ವಾಲೆಗಳಂತೆ ಹರಹಿಕೊಂಡ ಮರಗಳ ದಾರಿ, ಇಂತಹ ಹಲವಾರು ನಿದರ್ಶನಗಳನ್ನು ಗ್ರಂಥದುದ್ದಕ್ಕೂ ಕಾಣುತ್ತೇವೆ.

ಅಮೇರಿಕನ್ನರು ಸಾಧಾರಣವಾದ ಕಡಲ ತೀರವನ್ನು ಪ್ರವಾಸಿಗಳ ಆಯಸ್ಕಾಂತವನ್ನಾಗಿ ಪರಿವರ್ತಿಸಬಲ್ಲರು ನಿಸರ್ಗದತ್ತವಾದ ಒಂದು ಪರಿಸರವನ್ನು ಆಕರ್ಷಕವೂ, ಲಾಭದಾಯಕವೂ ಆದ ನೆಲೆಯನ್ನಾಗಿ ಮಾಡಬಲ್ಲರು ಆದರೆ ನಮ್ಮಲ್ಲೂ ಇದಕ್ಕಿಂತ ಸೊಗಸಾಗಿ ಕಡಲ ತೀರಗಳಿವೆ ಅವುಗಳನ್ನು ಸುಂದರವಾಗಿ ಆಕರ್ಷಣೆಯ ನೆಲೆಗಳನ್ನಾಗಿ ಮಾಡುವ ಕಲೆಗಾರಿಕೆಯಾಗಲಿ, ಕುಶಲತೆಯಾಗಲಿ ಇಲ್ಲವೆಂದು ಹೇಳುವ ಲೇಖಕರು ಅಮೇರಿಕನ್ನರ ಜೀವನೋತ್ಸಾಹ, ಬದುಕಿನಲ್ಲಿ ಸಂತೋಷವನ್ನು ಹುಡುಕಿಕೊಂಡು ಹೋಗುವ ಮನಸ್ಸನ್ನು ಎಲ್ಲಕ್ಕಿಂತ ಮಿಗಿಲಾಗಿ ಅವರ ಜೀವನ ಪ್ರೀತಿಯನ್ನು ಲೇಖಕರು ಬಹುವಾಗಿ ಮೆಚ್ಚಿಕೊಳ್ಳುತ್ತಾ, ಭಾರತೀಯರ ನಿಸ್ಕಾಳಜಿ, ಬೇಜವಾಬ್ದಾರಿತನವನ್ನು ಎತ್ತಿ ತೋರಿಸಿದ್ದಾರೆ.

ತಾವು ಕಂಡ ಪ್ರೇಕ್ಷಣೀಯ ಸ್ಥಳಗಳ ಪೂರ್ವೇತಿಹಾಸದೊಂದಿಗೆ ಅವುಗಳ ಸೊಬಗನ್ನು ಸುಂದರವಾಗಿ ವರ್ಣಿಸಿದ್ದಾರೆ. ಪ್ರಕೃತಿ ವರ್ಣನೆಯಲ್ಲಿ ಬಳಸುವ ದೃಷ್ಟಾಂತಗಳು ಕವಿ ಪ್ರತಿಭೆಯ ಮೂಡಿಗೆಯಿಂದ ಹೊರಹೊಮ್ಮಿದಂತಿದೆ. "ಗಾಳಿ ಬೀಸಿದರೆ ಉದುರಲು ತಯಾರಾಗಿರುವ ಈ ಎಲೆಗಳು ತಾಳುವ ಈ ವರ್ಣವಿನ್ಯಾಸ ಏಕಕಾಲಕ್ಕೆ ಬೆರಗನ್ನೂ ವಿಷಾದವನ್ನೂ ಉಂಟುಮಾಡುತ್ತದೆ. ಉದುರುವೆಲೆಗಳ ಮೋಹಕತೆ, ಜೈನಪುರಾಣಗಳಲ್ಲಿ ಚಿತ್ರಿತವಾಗುವ, ಎಲ್ಲವನ್ನು ತೊರೆದು ವಿರಾಗಿಯಾಗುವ ಜೀವದ ತುತ್ತತುದಿಯ ಭೋಗ–ವೈಭವದಂತೆ ಉಜ್ವಲ ಸುಂದರ ಹಾಗೂ ನಶ್ವರ ಮನೋಹರವಾಗಿದೆ".[೯] ಎಂದು ಸಮೀಕರಿಸಿ ಹೇಳಿದ್ದಾರೆ.

'ನಯಾಗರಾ' ಜಲಪಾತದ ಕುರಿತು ಪದನಿಷ್ಪತ್ತಿಯಿಂದ ಹಿಡಿದು ಅದರ ಚರಿತ್ರೆಯನ್ನು ವಿವರವಾಗಿ ವಿಸ್ತರಿಸಿದ್ದಾರೆ ಅದೇ ರೀತಿ ಮಿರಾಮಿಕ್ ಗುಹೆಗಳು, 'ಮಾಂಟಿಸೂಮಾ' ಬೆಟ್ಟದ ಗೋಡೆ, 'ಗ್ರ್ಯಾಂಡ್ ಕ್ಯಾನಿಯನ್ನಿ'ನ ಪ್ರಪಾತ ಪ್ರಪಂಚದ ವಿಸ್ಮಯಗಳು. ಹೀಗೆ ಮೊದಲಾದವುಗಳನ್ನು ನೋಡಿ ತಮಗಾದ ಅನುಭವವನ್ನು ಸಾಕ್ಷಾತ್ತಾಗಿ ಕಣ್ಣಿಗೆ ಕಟ್ಟಿ, ಸಹೃದಯರನ್ನು ಆ ಅನುಭವದೊಳಕ್ಕೆ ಸೆಳೆದುಕೊಂಡು ತನ್ಮಯರನ್ನಾಗಿಸಿದ್ದಾರೆ.

ಅಮೇರಿಕನ್ನರಲ್ಲಿ ವಯಸ್ಸಿನ ಅಂತರವಿಲ್ಲದೆ ಪ್ರತಿಯೊಬ್ಬರೂ ಕೂಡಾ ಎಂಥ ಕೆಲಸವಾದರೂ ಸರಿ, ಯಾವುದೇ ಕೀಳರಿಮೆಯಿಲ್ಲದೆ ನಿಷ್ಠೆಯಿಂದ ದುಡಿಯುತ್ತಾರೆ ಎಂದು ತಿಳಿಸುವಲ್ಲಿ ಲೇಖಕರು ಅಮೇರಿಕನ್ ಸಮಾಜದ ವೃತ್ತಿ ಗೌರವವನ್ನು ಎತ್ತಿ ಹಿಡಿದಿದ್ದಾರೆ. ಅಮೇರಿಕನ್ನರಲ್ಲಿ ಸ್ವಚ್ಛತೆ ಪ್ರಜ್ಞೆ ಎಷ್ಟಿದೆ ಎಂಬುದನ್ನು ಲೇಖಕರು ಒಂದು ಉದಾಹರಣೆಯ ಮೂಲಕ ತಿಳಿಸುತ್ತಾರೆ. "ಮೂರು ವರ್ಷದ ಪುಟ್ಟ ಮಗು, ಏನು ಕೇಳಿತೋ, ಅದರ ತಾಯಿ ಅದನ್ನು ಮೊಗಸಾಲೆಯೊಳಗಿನ ಅಂಗಡಿಗೆ ಕರೆದುಕೊಂಡು ಹೋಗಿ ಒಂದೆರಡು ಚಾಕಲೇಟು ಕೊಡಿಸಿ ಮತ್ತೆ ಕರೆದುಕೊಂಡು ಬಂದಳು ಮಗು ಆ ಚಾಕಲೇಟಿಗೆ ಸುತ್ತಿದ್ದ ಬಣ್ಣದ ಹೊದಿಕೆಯನ್ನು ಬಿಚ್ಚಿ, ಕೈಯಲ್ಲಿ ಹಿಡಿದುಕೊಂಡು ಪುಟ್ಟ ಪುಟ್ಟ ಹೆಜ್ಜೆಯಿಡುತ್ತಾ ನಡೆದುಹೋಗಿ, ಸಮೀಪದಲ್ಲಿಯೆ ಇದ್ದ ಪೋಸ್ಟಬಾಕ್ಸ ಆಕಾರದ ಕಸದ ಬುಟ್ಟಿಗೆ ಹಾಕಿತು"[10] ಎಂದು ಹೇಳಿದ್ದಾರೆ. ಅಮೇರಿಕನ್ನರು ಕಸವನ್ನು ಎಲ್ಲೆಂದರಲ್ಲಿ ಎಸೆಯಬಾರದೆಂಬ ತಿಳಿವಳಿಕೆ ಹುಟ್ಟಿನಿಂದಲೇ ತಮ್ಮ ಪ್ರಜ್ಞೆಯೊಳಗೆ ತಂದುಕೊಂಡಿರುತ್ತಾರೆ. ಇಲ್ಲಿ ಅಮೇರಿಕನ್ನರ ಸಾಮಾಜಿಕ ಪರಿಸರದ ನಡವಳಿಕೆಯ ಪ್ರಜ್ಞಾವಂತಿಕೆಯನ್ನು ಕಾಣಬಹುದು.

ಲೇಖಕರು ಅಮೇರಿಕಾದ ಸುವ್ಯವಸ್ಥೆಗಳನ್ನು ವಿವರಿಸುತ್ತಾ ಅಲ್ಲಿಯ ಹೆದ್ದಾರಿ ಉದ್ದಕ್ಕೂ "ರೆಸ್ಟ್ ಏರಿಯಾ, ಅಲ್ಲಿನ ಪುಟ್ಟ ಉಪಾಹಾರ ಮಂದಿರ; ಸ್ವಚ್ಛವಾದ ಶೌಚಾಲಯಗಳು; ಹೊರಗೆ ಕೂತು ವಿಶ್ರಮಿಸಲು ಕುರ್ಚಿಗಳು; ಕಸವನ್ನು ಹಾಕಲು ದೊಡ್ಡ ಡಬ್ಬಿಗಳು; ಮಕ್ಕಳು ಆಡಿಕೊಳ್ಳಲು ಸಣ್ಣದೊಂದು ಆಟದಬಯಲು; ಅಲ್ಲಿ ಮಕ್ಕಳಿಗಾಗಿ ಜೋಕಾಲಿಗಳು, ಜಾರುಬಂಡೆಗಳು; ಪಕ್ಕದಲ್ಲಿ ಕಾರಿಗೆ ಪೆಟ್ರೋಲು ತುಂಬಿಸಿಕೊಳ್ಳುವ ವ್ಯವಸ್ಥೆ. ಎಷ್ಟೊಂದು ಮುಂದಾಲೋಚನೆ, ಎಷ್ಟೊಂದು ಅಚ್ಚುಕಟ್ಟು. ಮನುಷ್ಯನ ಮೂಲಭೂತ ಅವಶ್ಯಕತೆಗಳೇನು ಎಂಬುದನ್ನು ಯೋಚಿಸಿ ಅದಕ್ಕೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿ ನೆಮ್ಮದಿಯನ್ನು, ಪ್ರಯಾಣದ ಬಗ್ಗೆ ಸಂತೋಷದ ಭಾವನೆಗಳನ್ನು ಉಳಿಸಿಕೊಡುವ ಈ ವ್ಯವಸ್ಥೆಯ

ಹಿಂದೆ ಅಡಗಿರುವ ಹೃದಯವಂತಿಕೆಯನ್ನು"[11] ಮೆಚ್ಚಿಕೊಳ್ಳುತ್ತಾ, ಭಾರತದಲ್ಲಿನ ಪ್ರಯಾಣದ ಅವ್ಯವಸ್ಥೆ, ಶೌಚಾಲಯದ ಅನಾನುಕೂಲ, ಮನುಷ್ಯನ ಮೂಲಭೂತ ಅಗತ್ಯಗಳನ್ನು ಕುರಿತು ಯೋಚನೆ ಮಾಡದ ಆಡಳಿತ ವ್ಯವಸ್ಥೆ, ಮೂಢಸಂಪ್ರದಾಯಗಳನ್ನು ಟೀಕಿಸುತ್ತಾರೆ. ಸ್ವಚ್ಛತೆ, ಸುವ್ಯವಸ್ಥೆ ಇವೆಲ್ಲವೂ ಜೀವನದ ಒಂದು ವಿಧಾನ ಇದನ್ನು ರೂಢಿಸಿಕೊಳ್ಳವುದು ಮುಖ್ಯ ಎಂಬ ತಿಳುವಳಿಕೆ ಲೇಖಕರ ನಿಲುವಾಗಿದೆ.

ಅಮೇರಿಕಾದಲ್ಲಿ ಬಂದು ನೆಲೆಸಿರುವ ಕನ್ನಡ ಜನ ಬೇರೊಂದು ಸಾಂಸ್ಕೃತಿಕ ಸನ್ನಿವೇಶದಲ್ಲಿ ಬದುಕುತ್ತಾ, ಲೌಕಿಕವಾಗಿ ಅತ್ಯಂತ ಆಕರ್ಷಕವೂ ಹಾಗೂ ಪ್ರಬಲವಾದ ಜೀವನ ಕ್ರಮದೊಂದಿಗೆ ಮುಖಾಮುಖಿಯಾಗುವ ಅನಿವಾರ್ಯತೆ ಅವರಿಗೆ ಒದಗಿದೆ ಎನ್ನುತ್ತಾ ಲೇಖಕರು ಒಂದು ಬಗೆಯ ಸಾಂಸ್ಕೃತಿಕ ಸಂಘರ್ಷವನ್ನು ಚಿತ್ರಿಸಿದ್ದಾರೆ. ಈ ಸಾಂಸ್ಕೃತಿಕ ಸಂಘರ್ಷದಲ್ಲಿ ಲಾಭವೂ, ನಷ್ಟವೂ ಇದೆ. ಲಾಭ ಎಂದರೆ ಭಾರತೀಯ ಅನೇಕ ಸಂಪ್ರದಾಯ, ನಂಬಿಕೆ, ವಿಚಾರಗಳಿಗೆ ಆ ದೇಶದ ಸಂಸ್ಕೃತಿಯ ಸಂಪರ್ಕದಿಂದ ಕೆಲವು ಮೂಢ ವಿಚಾರ ಮತ್ತು ನಂಬಿಕೆಗಳು ತಿದ್ದುಪಡಿಯಾಗುತ್ತದೆ. ನಷ್ಟವೆಂದರೆ ಹೊಸ ಸಾಂಸ್ಕೃತಿಕ ಪ್ರವಾಹದಲ್ಲಿ ವ್ಯಕ್ತಿತ್ವ ಕಳೆದುಕೊಳ್ಳುವಂತದ್ದು, ಸಹಸ್ರಾರು ವರ್ಷಗಳಿಂದ ರೂಢಿಸಿಕೊಂಡಿದ್ದ ನಂಬಿಕೆ ವಿಚಾರಗಳನ್ನು ಭಾರತೀಯರು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಆದರೂ ತಲೆಮಾರುಗಳ ಬದಲಾವಣೆಯಲ್ಲಿ ಹೀಗೆಯೇ ಇರುತ್ತದೆ ಎಂದು ಹೇಳುವುದು ಕಷ್ಟ. ಇಂತಹ ಸಾಂಸ್ಕೃತಿಕ ಸಂಘರ್ಷದಲ್ಲಿ ಕೂಡಾ ತಮ್ಮ ವ್ಯಕ್ತಿತ್ವವನ್ನು ಅಮೇರಿಕಾದಲ್ಲಿನ ಕನ್ನಡಿಗರು ಉಳಿಸಿಕೊಂಡಿದ್ದಾರೆ. ಇದರಂದಾಗಿ ತಮ್ಮ ಕನ್ನಡತನವನ್ನು ಸಾಂಸ್ಕೃತಿಕ ಕಾರ್ಯಕ್ರಮ ಸಂಘ-ಸಂಸ್ಥೆಗಳ ನಿರ್ಮಾಣ, ಸಮ್ಮೇಳನಗಳನ್ನು ಕೈಗೊಳ್ಳುವುದರ ಮೂಲಕ ಅಭಿವ್ಯಕ್ತಿಸುತ್ತಿದ್ದಾರೆ. ಲೇಖಕರ ಅರ್ಥವತ್ತಾದ ನಿರೂಪಣೆಯಲ್ಲಿ ಮಾನವನ ಸಹಜವಾದ ಮನೋಧರ್ಮವನ್ನು ನೋಡಬಹುದು.

ಅಮೇರಿಕಾದಲ್ಲಿ ಕನ್ನಡ ವಾತಾವರಣ ನಿರ್ಮಾಣ ಲೇಖಕರನ್ನು ಆಶ್ಚರ್ಯ-ಚಕಿತರನ್ನಾಗಿ ಮಾಡಿದೆ. ಅಲ್ಲಿನ ಬಹು ಸಂಖ್ಯಾತ ಇಂಜಿನಿಯರ್, ಡಾಕ್ಟರುಗಳೂ ಹಾಗೂ ವಿವಿಧ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಪ್ರಯತ್ನ ಹಾಗೂ ಶ್ರಮ ಸಾರ್ಥಕವಾಗಿದೆ. ಆದರೆ ಕನ್ನಡ ನಾಡಿನಲ್ಲಿ ಕನ್ನಡದ ಕುರಿತ ಯಾವುದೇ ಕಾರ್ಯಕ್ರಮ ಏರ್ಪಟ್ಟರೂ ಅಲ್ಲಿ ಸೇರುವಷ್ಟು ಜನ ಈ ನಾಡಿನಲ್ಲಿ ಸೇರುವುದಿಲ್ಲ. ಪರದೇಶಗಳಲ್ಲಿ ನೆಲೆಸಿರುವವರಿಗೆ ಇರುವಷ್ಟು ಕನ್ನಡ ಅಭಿಮಾನ ಸ್ವದೇಶದಲ್ಲಿ ನೆಲೆಸಿರುವವರಿಗೆ ಇಲ್ಲದಿರುವುದರಿಂದ ಕನ್ನಡತನ ಕುಸಿಯುತ್ತಿದೆ ಎಂಬುದು ವಾಸ್ತವಿಕ ಸತ್ಯವಾಗಿದೆ.

ಒಟ್ಟಿನಲ್ಲಿ ಜಿ.ಎಸ್. ಶಿವರುದ್ರಪ್ಪ ಸರಳ ಹಾಗೂ ಸುಂದರ ಭಾಷೆಯಲ್ಲಿ ನೋಡಿದ್ದನ್ನು ಸಚಿತ್ರಗೊಳಿಸಿದ್ದಾರೆ. ಇಲ್ಲಿನ ಅಪರಿಮಿತ ಅನುಭವ, ಅವಲೋಕನ ದೃಷ್ಟಿ ವಿಶಿಷ್ಟವೆನಿಸಿದೆ. ಈ ಕೃತಿಯ ಮತ್ತೊಂದು ವೈಶಿಷ್ಟವೆಂದರೆ; ಇದು ವಾಚಕನನ್ನು ಹಲವು ಬಾರಿ ಓದುವಂತೆ ಪ್ರೇರೇಪಿಸುವುದರೊಂದಿಗೆ ಮರು ಓದಿನಲ್ಲೂ ಅನೇಕ ನವೀನ ಸುಳಿಹುಗಳನ್ನು, ನವಾನುಭವಗಳನ್ನುಂಟುಮಾಡುತ್ತಾ, ಸಹೃದಯನ ವಿಚಾರವಂತಿಕೆ ಹಾಗೂ ಚಿಂತನಾಲಹರಿಗಳನ್ನು ವಿಸ್ತರಿಸುತ್ತದೆ.

**ಈ ಇ ಆ ಅ – ಕೋ. ಚೆನ್ನಬಸಪ್ಪ :**

ಲೇಖಕರಾದ ಕೋ. ಚೆನ್ನಬಸಪ್ಪರವರು ತಮ್ಮ ಅಮೇರಿಕಾದ ಪ್ರವಾಸಾನುಭವವನ್ನು ಈ.ಇ.ಆ.ಅ ಎಂಬ ಶೀರ್ಷಿಕೆಯ ಮೂಲಕ ತಮ್ಮ ಪ್ರವಾಸಕಥನ ಹೊರತಂದಿದ್ದಾರೆ. ಶೀರ್ಷಿಕೆಯ ಈ ಹೆಸರು ಹೀಗೇಕೆ? ವಿಚಿತ್ರವಾಗಿದೆ ಎನಿಸದೆ ಇರದು. ಅದಕ್ಕಾಗಿ ಶೀರ್ಷಿಕೆಯ ಕುರಿತು ಲೇಖಕರು "ಈ ಇಂಡಿಯಾಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ಆ ಅಮೇರಿಕ ಇಲ್ಲಿ ಹಗಲಾದಾಗ ಅಲ್ಲಿ ರಾತ್ರಿ, ಇಲ್ಲಿ ಕಂದು ಕಪ್ಪು ಜನ; ಅಲ್ಲಿ ಬಿಳಿ ಮತ್ತು ಕಪ್ಪು ಜನ. ಈ ಇಂಡಿಯಾಕ್ಕೆ ನಾಲ್ಕು ಸಾವಿರ ವರ್ಷಗಳ ನಾಗರಿಕತೆ; ಆ ಅಮೇರಿಕಗೆ ಕೇವಲ ನಾಲ್ಕು ನೂರು ವರ್ಷಗಳ ಇತಿಹಾಸ. ಎಲ್ಲ ವಿಚಾರದಲ್ಲೂ ತದ್ವಿರುದ್ಧ, ತಿರುಗು ಮುರುಗು. ಅದರ ಸಂಕೇತವೇ ಈ ಇ ಆ ಅ!" ಎಂದು ತಿಳಿಸುತ್ತಾರೆ.

ಅಮೇರಿಕಾದಲ್ಲಿ ಜರುಗುವ ಉತ್ತರ ಅಮೇರಿಕಾ ವೀರಶೈವ ಸಮಾಜ ವಾರ್ಷಿಕ ಸಮ್ಮೇಳನದ ಆಮಂತ್ರಣ ಪತ್ರಬಂದಿದ್ದರಿಂದ ಅಮೇರಿಕಾ ಪ್ರವಾಸ ಕೈಗೊಂಡಿದ್ದಾರೆ.

ಅಮೇರಿಕಾಕ್ಕೆ ಹೋಗಬೇಕು. ಆ ದೇಶವನ್ನು ನೋಡಬೇಕು; ಆ ಜನರ ಆಡಳಿತ, ನಡತೆ, ನಾಗರಿಕತೆಯನ್ನು ಕಣ್ಣಾರೆ ಕಾಣಬೇಕೆಂಬ ಬಯಕೆ ಮೊದಲಿನಿಂದಲೂ ಇದ್ದುದರಿಂದ ಲೇಖಕರು ಎಲ್ಲವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. "ಅಮೇರಿಕಾ ವೀರಶೈವ ಸಮಾಜ ವಾರ್ಷಿಕ ಸಮ್ಮೇಳನಗಳನ್ನು ಸುಮಾರು 1971–72ರಿಂದಲೂ ದೇಶದ ವಿವಿಧ ಭಾಗಗಳಲ್ಲಿ ಏರ್ಪಡುತ್ತಿದೆ. ಇದಕ್ಕೆ ದೇಶದಾದ್ಯಂತ ಸಮಾಜದ ಸದಸ್ಯರಿದ್ದಾರೆ. ಆ ಸದಸ್ಯರು ಅನಿವಾಸಿ ಭಾರತೀಯರು, ಎನ್ನುತ್ತಾ ಈ ಸದಸ್ಯರುಗಳ ಪೂರ್ವೇತಿಹಾಸವನ್ನು ಕೊಡುತ್ತಾರೆ. ಅಲ್ಲಿಗೆ ಹೋದ ಮೇಲೆ ಇತರ ಭಾರತೀಯರಂತೆ ಉನ್ನತ ವಿದ್ಯಾಭ್ಯಾಸ ಮಾಡಿದ ಮೇಧಾವಿಗಳೆ. ಕೆಲವರು ಉದ್ಯೋಗಗಳನ್ನು ಆರಿಸಿಕೊಂಡು ಹೋದವರು.

ಅಲ್ಲಿಯೆ ಉದ್ದಿಮೆಗಳನ್ನು ಸ್ಥಾಪಿಸಿ ಉದ್ಯೋಗ ಪತಿಗಳೂ ಆದವರು ಕೆಲವರು. ಬಹುಮಟ್ಟಿಗೆ ಆರ್ಥಿಕವಾಗಿ ಸ್ಥಿತಿವಂತರು ಎಂದು ತಿಳಿಸುತ್ತಾರೆ. ಅಮೇರಿಕದಲ್ಲಿರುವ ಭಾರತೀಯರ ಕುರಿತು "ಬಹುಜನ ವೈದ್ಯರು, ಎಂಜಿನಿಯರುಗಳು, ವಿಶ್ವವಿದ್ಯಾಲಯಗಳಲ್ಲಿ ಅಲ್ಲಿಯ ನಾಗರಿಕತ್ವವನ್ನು ಪಡೆದು ಆ ದೇಶದ ಪೌರತ್ವವನ್ನು ಪಡೆದವರೂ ಇದ್ದಾರೆ. ಬಹುಮಟ್ಟಿಗೆ ಇಲ್ಲಿಂದ ಹೋದವರು ಇಲ್ಲಿಯೆ ಮದುವೆ ಆಗಿ ಅಲ್ಲಿ ಸಂಸಾರ ಹೂಡಿದವರು. ಅಲ್ಲಿಯವರನ್ನೇ ಮದುವೆ ಆದವರೂ ಕೆಲವೆ ಕೆಲವರು ಇದ್ದರೂ ಇರಬಹುದು. ಇಲ್ಲಿಂದ ಹೋದವರ ಸಂತತಿ ಒಂದೆರಡು ತಲೆಮಾರುಗಳನ್ನು ಕಂಡಿದೆ. ಮೊದಲನೆ ತಲೆಮಾರಿನವರು ಈಗ ಮುಪ್ಪಿನ ಮುದುಕರಾಗಿದ್ದಾರೆ. ಎರಡನೆಯ ತಲೆಮಾರಿನವರು ಮೂರನೆಯ ತಲೆಮಾರಿಗೆ ಜನ್ಮಕೊಟ್ಟು ಅವರೂ ನಿವೃತ್ತರಾಗುವ ಹಂತದಲ್ಲಿದ್ದಾರೆ. ಈ ಪರಿಸ್ಥಿತಿ ಅಮೇರಿಕದಲ್ಲಿರುವ ಎಲ್ಲ ಭಾರತೀಯರಿಗೂ ಅನ್ವಯಿಸುತ್ತದೆ. ಈಗ ಅವರು ಮುಖ್ಯವಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ."[12] ಎಂದು ಲೇಖಕರು ತಿಳಿಸುವುದರಲ್ಲಿ ಆದಿ ತಲೆಮಾರಿನವರು ಕಣ್ಮರೆಯಾಗುತ್ತಿದ್ದು ಎರಡನೆಯ ತಲೆಮಾರಿನವರು ಜೀವನೋಪಾಯಕ್ಕೆ ಅನ್ಯ ದೇಶದಲ್ಲಿ ವೃತ್ತಿ ಕೈಗೊಂಡವರಾದರೂ ಇವರಲ್ಲಿ ಕನ್ನಡದ ಸಂಸ್ಕೃತಿ ಉಳಿದಿರುವುದನ್ನು ಅವರುಗಳ ಸಮಸ್ಯೆಯನ್ನು ಅರಿಯಬಹುದು.

ಅಮೇರಿಕ ವೀರಶೈವ ಸಮಾಜ ಪ್ರತಿವರ್ಷ ಜರುಗಿಸುವ ಸಮ್ಮೇಳನ ವೆಚ್ಚದಲ್ಲಿ ಕೇವಲ ಸ್ವಲ್ಪ ಭಾಗವನ್ನು ಉಳಿಸಿದರೂ ಎಷ್ಟೋ ಸಹಾಯವಾಗುತ್ತದೆ ಎನ್ನುತ್ತಾರೆ. 2001 ಜುಲೈ ಒಂದರಂದು ಕ್ಯಾಲಿಪೋರ್ನಿಯಾ ರಾಜ್ಯದ ಶಾನ್‌ಜೋಸ್ ಶಹರದಲ್ಲಿ ಜರುಗಿದ ಇಪ್ಪತ್ನಾಲ್ಕನೇ ಅಮೆರಿಕಾ ವಿರಶೈವ ಸಮಾಜ ಸಮ್ಮೇಳನವನ್ನು ಕುರಿತು ಲೇಖಕರು ಸವಿಸ್ತಾರವಾಗಿ ವಿವರಿಸಿದ್ದಾರೆ.

ವಾಷಿಂಗ್‌ಟನ್, ನ್ಯೂಯಾರ್ಕ್, ಲಾಸ್ ಏಂಜಲಿಸ್ ಮೊದಲಾದ ಕಡೆಗಳಲ್ಲಿ ಅಲ್ಲಿಯ ಮತ್ತು ಇಲ್ಲಿಯ ವಕೀಲರ ನಡವಳಿಕೆಯಲ್ಲಿರುವ ಒಂದು ದೊಡ್ಡ ವ್ಯತ್ಯಾಸವನ್ನು ಗುರುತಿಸುರುವ ಲೇಖಕರು ನಿರೂಪಿಸವ ಬಗೆ; ಅಮೇರಿಕಾದ ನಗರ ಬೀದಿಗಳಲ್ಲಿ ವಕೀಲರ ಬಹುದೊಡ್ಡ ಜಾಹೀರಾತುಗಳನ್ನು ನೋಡಿರುವುದಲ್ಲದೆ ವಕೀಲರು, ಕಕ್ಷಿದಾರರನ್ನು ಕೈ ಬೀಸಿ ಕರೆಯುವ, ಬೇಡಿಕೊಳ್ಳುವ ಫಲಕಗಳನ್ನು ಕಂಡು ಚಕಿತರಾಗುತ್ತಾರೆ. ಅಂತಹ ಫಲಕಗಳ ಉದಾಹರಣೆಯನ್ನು ಈ ಕೆಳಗಿನಂತೆ ಕೊಡುತ್ತಾ "ಯಾರ‍್ಯಾರು ಯಾವ ಯಾವ ನ್ಯಾಯಾಶಾಖೆಯಲ್ಲಿ ಪರಿಣಿತರು ಎಂಬುದನ್ನು ಜಾಹೀರು ಮಾಡುತ್ತಾರೆ. ಪಾಸ್‌ಪೋರ್ಟ್ ಬೇಕೆ? ಇಲ್ಲಿಗೆ ಬನ್ನಿ 'ವಲಸೆ' ಬಂದವರಿಗೆ ನಾಗರಿಕತ್ವ ಆಗಬೇಕಿದ್ದರೆ ಬನ್ನಿ 'ವಿವಾಹ

ವಿಚ್ಛೇದನ ಬೇಕಾಗಿದ್ದರೆ ನಮ್ಮನ್ನು ಸಂದರ್ಶಿಸಿ.... ಹೀಗೆ ನಾನಾ ಬಗೆಯ ಫಲಕಗಳು"[13] ಎಂದು ಹೇಳುತ್ತಾರೆ. ಈ ರೀತಿ ಬರೆದುಕೊಳ್ಳುವುದು ನಮ್ಮಲ್ಲಿ ನಿಷಿದ್ಧ. ನಮ್ಮ ನಾಮಫಲಕದ ಉದ್ದ ಅಗಲ ಇಂತಿಷ್ಟು ಅಂಗಲಗಳಿಗಿಂತ ಮೀರಬಾರದು ಎಂಬ ನಿಯಮ ಇದೆ! ಅಲ್ಲದೆ ನ್ಯಾಯವಾದಿಗಳಾದವರು ಹೀಗೆ ಕಕ್ಷಿದಾರರಿಗಾಗಿ ಜಾಹೀರಾತು ಮಾಡಿಕೊಂಡು ಬೇಡಿಕೊಳ್ಳುವುದು ನಮ್ಮ ಆತ್ಮಾಭಿಮಾನಕ್ಕೆ ಕುಂದು ಮತ್ತು ನಾಚಿಕೆಗೇಡು ಎಂಬುದು ನಮ್ಮ ವೃತ್ತಿಧರ್ಮ ಎಂದು ಲೇಖಕರು ನಮ್ಮ ನ್ಯಾಯಾಂಗದ ವ್ಯವಸ್ಥೆಯನ್ನು ಮೆಚ್ಚಿಕೊಳ್ಳುತ್ತಾರೆ.

ವಕೀಲ ವೃತ್ತಿ ಪವಿತ್ರವಾದದ್ದು. ವಕೀಲ ಜ್ಞಾನ ನಿಧಿ. ಅವನು ತನ್ನ ಜ್ಞಾನವನ್ನು ಮಾರಿ ಉಪಜೀವನ ಮಾಡಬಾರದು ಎನ್ನುತ್ತಾ ಕಪ್ಪು ಗೌನಿನ ಮಹತ್ವವನ್ನು ತಿಳಿಸುತ್ತಾರೆ. "ಹಿಂದಿನ ಕಾಲದಲ್ಲಿ ಜ್ಞಾನಾರ್ಜನೆ ಮಾಡುವವರೂ, ಮಾಡಿದವರೂ ತಮ್ಮ ಉದರ ಪೋಷಣೆಗಾಗಿ ಶ್ರಮಜೀವಿಗಳಂತೆ ಕಾಯಕಷ್ಟದಿಂದ ದುಡಿಯುತ್ತಿರಲಿಲ್ಲ. ಅವರು ಫ್ರಾನ್ಸ್, ಇಟಲಿ ದೇಶಗಳಲ್ಲಿ ಕಫಣಿ ಹಾಕಿಕೊಂಡು, ಬೆನ್ನಿನ ಮೇಲೆ ಒಂದು ಜೋಳಿಗೆ ಇಳಿಬಿಟ್ಟುಕೊಂಡು ಬೆನ್ನ ಹಿಂದೆ ಕಟ್ಟಿಕೊಂಡು ಸುಮ್ಮನೆ ಬೀದಿಯಲ್ಲಿ ಹಾದು ಹೋಗುತ್ತಿದ್ದರು. ಅವರು ಬಂದರೆಂದರೆ ಜನ ತಾವಾಗಿಯೆ ಆ ಜ್ಞಾನಿಯ ಬೆನ್ನಿನ ಮೇಲಿದ್ದ ಆ ಜೋಳಿಗೆಯಲ್ಲಿ ಏನಾದರು ಆಹಾರ ಹಾಕುತ್ತಿದ್ದರು ಅದರ ಪಳೆವುಳಿಕೆಯೆ ನಮ್ಮ ಗೌನು, ಅದರ ಪಾವಿತ್ರ್ಯಕ್ಕೆ ಭಂಗ ಬಾರದಂತೆ ಬದುಕಬೇಕೆಂದು ವಕೀಲರು ಕಕ್ಷಿಗಾರರನ್ನು ಬೇಡಿಕೊಳ್ಳುವುದು (Solicit) ವೃತ್ತಿ ದುರ್ನಡತೆ. ಇದೇ ಶ್ರೇಷ್ಠ ನಡತೆ. ಈ ವಿಚಾರದಲ್ಲಿ ಆ ಅಮೆರಿಕೆಗಿಂತ ಈ ಇಂಡಿಯಾವೆ ಉತ್ತಮ" ಎಂದು ಹೇಳುವುದಲ್ಲದೆ ಅಮೆರಿಕೆಯಲ್ಲಿ ಪ್ರಸಿದ್ಧ ಕಾನೂನು ವಿದ್ಯಾಲಯ ಎಂದರೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಲಾ ಸ್ಕೂಲ್. ಅಲ್ಲಿ ವ್ಯಾಸಂಗ ಮಾಡಿದವರಲ್ಲಿ ಅಮೆರಿಕ ಸುಪ್ರೀಂಕೋರ್ಟ್ ಪೀಠವನ್ನು ಅಲಂಕರಿಸಿದವರು ಬಹುಜನವೆಂದು ಅಮೇರಿಕಾದ ಹಾರ್ವಾರ್ಡ ವಿಶ್ವವಿದ್ಯಾನಿಲಯವನ್ನು ಮುಕ್ತ ಮನಸಿನಿಂದ ಶ್ಲಾಘೀಸಿದ್ದಾರೆ. ನಮ್ಮಲ್ಲಿ ಇಂಥ ವಿದ್ಯಾಪೀಠಗಳು ವಿರಳ"[14] ಎಂದು ಬೇಸರ ಪಟ್ಟುಕೊಳ್ಳುತ್ತಾರೆ.

ಲೇಖಕರು ಅಮೇರಿಕಾಕ್ಕೆ ಹೋಗಬೇಕೆಂಬ ಬಹುದಿನಗಳ ಅಪೇಕ್ಷೆಗೆ ಮೂಲಕಾರಣ ಅವರೇ ಹೇಳಿರುವಂತೆ ಶ್ರೀ ಸ್ವಾಮಿ ವಿವೇಕಾನಂದರು. ಅಮೇರಿಕಾ ದೇಶದಲ್ಲಿ ಭಾರತೀಯ ಧರ್ಮಪ್ರಚಾರ ಮಾಡಿ, ಆ ಕಾಲದಲ್ಲಿ ಅಮೇರಿಕೆಯ ಜನರಲ್ಲಿ ಹಿಂದೂ ಧರ್ಮದ ಬಗ್ಗೆ ಜಾಗೃತಿಯನ್ನುಂಟು

ಮಾಡಿದ ಸಾಹಸಯಾತ್ರೆಯ ತಾಣಗಳನ್ನು ಕಣ್ಣಾರೆ ಕಾಣಬೇಕೆಂಬುದು. ಚಿಕಾಗೋ ಶಹರದ ಆರ್ಟ್ ಇನ್ಸ್‌ಟಿಟ್ಯೂಟ್‌ನಲ್ಲಿ ಸೆಪ್ಟೆಂಬರ್ 11, 1893ರಂದು ಯಾವ ಸಭಾಂಗಣದಲ್ಲಿ ಮಾತನಾಡಿದರೂ ಆ ಸಭಾಂಗಣ ಮತ್ತು ಅವರು ನಿಂತು ಮಾತನಾಡಿದ ವೇದಿಕೆಯನ್ನಾದರೂ ನೋಡಬೇಕೆಂಬ ಹೆಬ್ಬಯಕೆಯಿಂದ ಆ ನಗರಕ್ಕೆ ಹೋದಾಗ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ ಜಾಗ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ಗೆ ಬದಲಾಗಿರುವುದನ್ನು ಕೇಳಿದ ಲೇಖಕರಿಗೆ ಕುತೂಹಲಕ್ಕಿಂತ ನಿರಾಶೆಯುಂಟಾಗುತ್ತದೆ. ಎರಡನೇ ಬಾರಿ 2003ರಲ್ಲಿ ಚಿಕಾಗೋದಲ್ಲಿನ ಬಂಧುಗಳನ್ನು ನೋಡುವ ಅವಕಾಶ ಲಭ್ಯವಿದ್ದರಿಂದ ಇದನ್ನು ಸದುಪಯೋಗ ಪಡಿಸಿಕೊಂಡು ಬಂಧುಗಳೊಂದಿಗೆ ಅಕ್ಟೋಬರ್ 11, 2003 ಶನಿವಾರ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ತೆರಳಿದರು. ಲೇಖಕರು ನೋಡಬೇಕಿದ್ದ ಜಾಗದ (ಕೊಠಡಿಯ) ಬಾಗಿಲು ಮುಚ್ಚಿಕೊಂಡು ಆ ಸಂಜೆ ಅಲ್ಲಿ ಜರುಗಲಿದ್ದ ಒಂದು ಸಭೆಗಾಗಿ ವೇದಿಕೆಯನ್ನು ಸಜ್ಜುಗೊಳಿಸುತ್ತಿದ್ದಾರೆಂದೂ ತಿಳಿದಾಗ ಮತ್ತೊಮ್ಮೆ ನಿರಾಸೆಯ ಛಾಯೆ ಮೂಡಿತ್ತು. ಆದರೆ ಪ್ರಯತ್ನ ಬಿಡದೆ ವಿನಂತಿಸಿಕೊಂಡಾಗ ಒಪ್ಪಿಕೊಂಡು ಆ ಮಹನೀಯರು ಬಾಗಿಲು ತೆರೆದರು. ಆಗ ಲೇಖಕರು ಬಾಗಿಲಲ್ಲೆ ನಿಂತುಕೊಂಡೂ ಆ ವೇದಿಕೆಯನ್ನು ನೋಡಿದರು. ಕುತೂಹಲ ತಾಳಲಾರದೆ ವೇದಿಕೆಯ ಬಳಿ ಹೋಗಲು ಅನುಮತಿ ಕೇಳಿ ಒಪ್ಪಿಗೆ ಪಡೆದು ಬಂಧುಗಳೊಂದಿಗೆ ವೇದಿಕೆಯ ಬಳಿಗೆ ಹೋದರು. "ಮೆಲ್ಲಗೆ ವೇದಿಕೆಯ ಮೇಲಕ್ಕೆ ಹೋಗಿ ಶ್ರೀ ವಿವೇಕಾನಂದರು ನಿಂತಿದ್ದಿರಬಹುದಾದ ಜಾಗದಲ್ಲಿ ಮೈಕಿಗೆ ಎದುರಾಗಿ ನಿಂತುಕೊಂಡೆ! ನನಗೊಂದು ವರ್ಣಿಸಲಸದಳವಾದ ಅನುಭವವಾಯಿತು! ನನ್ನ ಜೀವನದ ಒಂದು ಅಮೃತ ಘಳಿಗೆ ಅದು! ಒಂದು ಉನ್ನತ ಧ್ಯೇಯ ಸಿದ್ಧಿಸಿದ ಆತ್ಮತೃಪ್ತಿ ಉಂಟಾಯ್ತು. ವೇದಿಕೆಯಿಂದ ಕೆಳಗಿಳಿದು ಬಂದು ಮೌನವಾಗಿ ಹೊರನಡೆದೆ. ಇಂಥ ಅನುಭವ ಸಾಧ್ಯವೆ? ಎಲ್ಲರಿಗು ಆಗುವುದೆ?"[15] ಎಂದು ಲೇಖಕರು ತಮ್ಮ ದಿವ್ಯಾನುಭವದಲ್ಲಿ ಭಾವಪರವಶರಾಗುತ್ತಾ ಪುಕಿತಗೊಂಡಿರುವಲ್ಲಿ ಸ್ವಾಮಿವಿವೇಕಾನಂದರ ಮೇಲೆ ಲೇಖಕರಿಗಿದ್ದ ಭಕ್ತಿ-ಗೌರವಗಳು ಅಭಿವ್ಯಕ್ತಗೊಂಡಿವೆ.

ಕೋ.ಚೆಯವರು ಹೆಲೆನ್‌ರನ್ನು ಕುರಿತು ಅಮೇರಿಕಾದ ಭಾವನಾತ್ಮಕ ರಹಿತತೆ ಬಗ್ಗೆ ಪ್ರಶ್ನಿಸುತ್ತಾ; 'ಹೆಲೆನ್, ಈ ದೇಶದಲ್ಲಿ ಮುಪ್ಪಾದ ಗಂಡ ತಂದೆ ತಾಯಿಗಳನ್ನು ಹೆಂಡತಿ, ಮಕ್ಕಳು ನೋಡಿಕೊಳ್ಳುವುದೆ ಇಲ್ಲ. ಅಂಥ ವೃದ್ಧರನ್ನು ವೃದ್ಧಾಶ್ರಮಕ್ಕೆ ಸೇರಿಸಿ ವರ್ಷಕ್ಕೊಮ್ಮೆ ಹುಟ್ಟುಹಬ್ಬದ ದಿನ ಶುಭಾಶಯ ಕೋರಿ ಹೂಗುಚ್ಛಕೊಟ್ಟು ಬರುವುದೆ ವಾಡಿಕೆ ಎಂದು ಕೇಳಿದ್ದೆ, ಓದಿದ್ದೆ ಎಂದಾಗ ಹೆಲೆನ್, ಲೇಖಕರನ್ನು ಕುರಿತು ನೀವು ಅಮೇರಿಕೆಯ ಬಗ್ಗೆ ಕೇಳಿದ್ದು ಓದಿದ್ದು, ನಿಜ. ಹಾಗೆಯೆ ನನ್ನ ಪತಿಯಾದ ಥಾಮಸ್ಸರನ್ನು

ಮುಪ್ಪಿನಲ್ಲಿ ಪೋಷಿಸುತ್ತಿರುವುದನ್ನು ನೀವಿಲ್ಲಿ ನೋಡುತ್ತಿರುವುದೂ ಸಹ ನಿಜವೆ ಇದೆ ಅಮೆರಿಕೆಯ ಸತ್ಯವೆಂದಾಗ ಅದಕ್ಕೆ ಪ್ರತಿಯಾಗಿ ಲೇಖಕರು, "ನಾವು ಇಲ್ಲಿ ಕುಳಿತು ಅಲ್ಲಿಯ ಕೌಟುಂಬಿಕ ಜೀವನದ ಕಪ್ಪು ಮಗ್ಗುಲನ್ನೇ ಅಮೇರಿಕೆಯ ಪೂರ್ಣಸತ್ಯ ಎಂದು ಲಘುವಾಗಿ ತಿರಸ್ಕರಿಸುವುದು ಸೂಕ್ತವಲ್ಲ ಎಂದೇ ನನಗೆ ಮನವರಿಕೆ ಆಯಿತು. ಅಮೇರಿಕೆಯಲ್ಲಿ ಬಹುಸಂಖ್ಯಾತ ಮುಪ್ಪಾದವರು, ವೃದ್ಧಾಶ್ರಮ **(oldage)** ಗಳಲ್ಲಿರುವುದೇನೋ ನಿಜ. ಅಂಥವುಗಳನ್ನು ನ್ಯೂಯಾರ್ಕ್, ವಾಷಿಂಗ್‌ಟನ್, ಎಲ್‌ಎ.ನಲ್ಲಿ ನೋಡಿದೆ. ಆ ವೃದ್ಧರ ಅನಾಥ ಸ್ಥಿತಿ ಕರುಣಾಜನಕ. ಅದರಲ್ಲಿ ಸಂಶಯವೇ ಇಲ್ಲ. ಆದರೂ ಥಾಮಸ್ ಅವರಂಥ ಸುದೈವಿಗಳೂ ಅಲ್ಲಿದ್ದಾರೆ. ಹೆಲೆನ್‌ಳಂಥ ಪತಿ ಸೇವಾತತ್ಪರರು, 'ಟಾಡ್'ನಂಥ ಪಿತೃವಾತ್ಸಲ್ಯ ಪುತ್ರರೂ ಇದ್ದಾರೆ. ಮಾನವರೆಲ್ಲ ಒಂದೆ ಎಂಬುದಕ್ಕೆ ಇದು ನಿದರ್ಶನ. ಇಂಡಿಯಾದಲ್ಲಿ ತಂದೆ-ತಾಯಿಗಳನ್ನು ಒದ್ದು ಹೊರಗೆ ಹಾಕಿದ ಮಕ್ಕಳು ಇದ್ದಾರೆ. ಅವರನ್ನು ಕೊಲೆ ಮಾಡಿದ ಪುತ್ರರತ್ನರನ್ನೂ ಕಾಣುತ್ತೇವೆ. ಗಂಡನಿಗೆ ವಿಷಕೊಟ್ಟು ಕೊಲ್ಲುವ ಸಾಧ್ವಿಯರು ಇಲ್ಲಿಯೂ ಇದ್ದಾರೆ! ಅಂದಮೇಲೆ ಅವರ ಕೌಟುಂಬಿಕ ಜೀವನವನ್ನು ತೆಗಳಿ ತುಚ್ಚೀಕರಿಸುವ ನೈತಿಕ ಹಕ್ಕು ನಮಗಿದೆಯೆ?"[16] ಎಂದು ಲೇಖಕರು ಎರಡೂ ದೇಶಗಳಲ್ಲಿರುವ ವಾಸ್ತವಿಕ ಅಂಶಗಳನ್ನು ತೌಲನಿಕ ಆಯಾಮದಲ್ಲಿ ವಿಶ್ಲೇಸಿದ್ದಾರೆ.

ಭಾರತದ ಅವ್ಯವಸ್ಥೆಯಿಂದ ಪ್ರತಿಭಾವಂತರಿಗೆ ಸೌಲಭ್ಯಗಳು ಸಿಗದಿದ್ದಾಗ ಬೇಸತ್ತು ಅಮೇರಿಕಾಕ್ಕೆ ತೆರಳಿದ ಯುವಕರ ಬಗ್ಗೆ ತಿಳಿಸುತ್ತಾ, "ಆ ಯುವಕರು ಬಿ.ಇ. ಪದವಿಧರರು ಉತ್ತಮ ಶ್ರೇಣಿಯಲ್ಲಿ ಪದವಿ ಪಡೆದಿದ್ದರೂ ಮೀಸಲಾತಿ ನಿಯಮದ ಸುತ್ತಿಗೆಯ ಏಟಿಗೆ ಸಿಕ್ಕುಬಿದ್ದು ನಮ್ಮ ರಾಜ್ಯದಲ್ಲಿ ಸರ್ಕಾರಿ ನೌಕರಿಯಿಂದ ವಂಚಿತರಾಗಿ ಬೇಸರಪಟ್ಟು, ತಲೆಕೆಟ್ಟು ಈ ದೇಶವನ್ನೆ ತೊರೆದು ಅಮೇರಿಕಾಕ್ಕೆ ಅದೃಷ್ಟವನ್ನರಸಿ 'ಓಡಿ' ಬಂದಿದ್ದ ವ್ಯಕ್ತಿ. ಜೀವನದಲ್ಲಿ ನಿರಾಶೆಯ ಕಾರ್ಮೋಡ ಕವಿದಿದ್ದರೂ ಧೈರ್ಯಗುಂದಿರಲಿಲ್ಲ. ನಮ್ಮ ಸರ್ಕಾರದಿಂದ ತನಗಾಗಿದ್ದ ಅನ್ಯಾಯವನ್ನು ಸವಾಲಾಗಿ ಅಂಗೀಕರಿಸಿ ಬಂದಿದ್ದ ಸಾಹಸಿ, ಯಾವುದೂ ನಿಶ್ಚಿತ ಖಾಯಂ ಉದ್ಯೋಗ ಸಿಕ್ಕಿತ್ತೊ ಇಲ್ಲವೊ ಕಾಣೆ. ಎರಡು ಮೂರು ವರ್ಷ ಇಲ್ಲಿ ಇದ್ದು, ತನ್ನ ಕಾಲಮೇಲೆ ತಾನು ನಿಲ್ಲುವಂತೆ ಆದ ಮೇಲೆ ತನ್ನ ತಮ್ಮನನ್ನು ಉನ್ನತ ಶಿಕ್ಷಣ ವ್ಯಾಸಂಗಕ್ಕಾಗಿ ಅಲ್ಲಿಗೆ ಕರೆಸಿಕೊಂಡಿದ್ದ. ಆ ಯುವಕನೂ ಅಣ್ಣನೊಡನೆ ಆ ಚಿಕ್ಕ ಕೊಠಡಿಯಂಥ ಫ್ಲ್ಯಾಟ್‌ನಲ್ಲಿದ್ದ. ಆ ತಮ್ಮ ಯಾವುದೊ ಒಂದು ರೆಸ್ಟೋರೆಂಟಿನಲ್ಲೊ, ಹೋಟೆಲಿನಲ್ಲೊ ಯಾವುದೊ ಒಂದು ಕೆಲಸದಲ್ಲಿದ್ದ. ಈ ದೇಶದಲ್ಲಿ ಆಗಿದ್ದರೆ ಆ ಯುವಕ ಅಂಥ ಕೆಲಸಕ್ಕೆ ಸೇರಿಕೊಳ್ಳುತ್ತಲೆ ಇರಲಿಲ್ಲ. ಅಲ್ಲಿ ಸಂಜೆ ಎರಡು ಗಂಟೆ ಕೆಲಸ ಮಾಡಿದರೆ ಹದಿನೆಂಟು ಇಪ್ಪತ್ತು ಡಾಲರ್ ಮಜೂರಿ ಸಿಕ್ಕುತ್ತಿತ್ತು. ಬೆಳಗಿನಿಂದ ಸಂಜೆಯವರೆಗೆ ವ್ಯಾಸಂಗ. ಸಂಜೆ ಈ ನೌಕರಿ. ಜೀವನೋಪಾಯಕ್ಕೆ ಒಂದು

ದಾರಿಯೂ ಸಿಕ್ಕಿತ್ತು. ವ್ಯಾಸಂಗಕ್ಕೆ ಅನುಕೂಲವೂ ಆಯಿತು. ಇಂಥ ಯುವಕರು ಆ ದೇಶಕ್ಕೆ ಹೋಗಿ ಅಲ್ಲಿ, ಇಲ್ಲಿ ಸಿಕ್ಕದಿದ್ದ ಅವಕಾಶ ಪಡೆದು ಸಾಕಷ್ಟು ನೆಮ್ಮದಿಯಿಂದ ಬದುಕುತ್ತಿದ್ದಾರೆ"[17] ಎನ್ನುವ ಲೇಖಕರ ಅಭಿಪ್ರಾಯದಲ್ಲಿ ಪ್ರತಿಭಾ ಪಲಾಯನ ಪ್ರತಿಭಾವಂತರ ತ್ರಿಶಂಕು ಸ್ಥಾನವನ್ನು ಕಾಣಬಹುದು.

ಬಾಲ್ಟಿಮೋರ್‌ನಲ್ಲಿ 1998ರಲ್ಲಿ ಮಹೇಶ್ ಮಹಾದೇವಪ್ಪ ಎಂಬ ವೈದ್ಯರೊಬ್ಬರ ಕಂಡಾಗ ಇವರ ಹೇಳಿಕೆಯಂತೆ "ನಮ್ಮ ರಾಜ್ಯದಲ್ಲಿ ಒಂದು ರೇಡಿಯಾಲಜಿಸ್ಟ್ ಕೆಲಸಕ್ಕೆ ಅರ್ಜಿ ಹಾಕಿ, ಮೀಸಲಾತಿ ನಿಯಮದಂತೆ ಆತನಿಗೆ ನೌಕರಿ ಸಿಗದೆ ಆತನಿಗಿಂತ ಅರ್ಹತೆಯಲ್ಲಿ ತೀರಾ ಕೆಳಗಿದ್ದವರೊಬ್ಬರಿಗೆ ಆ ಹುದ್ದೆ ಕೊಟ್ಟಿದ್ದರಂತೆ. ಅದರಿಂದ ಬೇಸತ್ತ ಆ ಪ್ರತಿಭಾವಂತ ವೈದ್ಯ ಹಾಪ್‌ಕಿನ್ಸ್ ಇನ್ಸ್ಟ್ಯೂಟ್‌ಗೆ ಹೋಗಿ ಉನ್ನತ ಶಿಕ್ಷಣ ಪಡೆದಾಗ ಅವರ ಪ್ರತಿಭೆಯನ್ನು ಗುರುತಿಸಿ ಅದೇ ಸಂಸ್ಥೆ ಅವರಿಗೆ ಉತ್ತಮ ಕೆಲಸಕ್ಕೆ ಸೇರಿಸಿಕೊಂಡರಂತೆ. ಹೀಗೆ ಅನೇಕ ಉದಾಹರಣೆಗಳನ್ನು ಲೇಖಕರು ಉಲ್ಲೇಖಿಸುತ್ತಾ, ಭಾರತದ ತಾರತಮ್ಯದ ನೀತಿಯಿಂದಾಗಿ ನಮ್ಮಲ್ಲಿನ ಅನೇಕ ಪ್ರತಿಭಾವಂತರನ್ನು ಇತರ ದೇಶಗಳಿಗೆ ಹೋಗಿ ಆ ದೇಶಕ್ಕೆ ಸೇವೆಸಲ್ಲಿಸುವಂತಾಗಿದೆ. ಅವರ ಅರ್ಹತೆ, ಸೇವೆ ಗಮನಿಸಿ ಉತ್ತಮ ಕೆಲಸ ಸಾಕಷ್ಟು ಸುವ್ಯವಸ್ಥೆ ಒದಗಿಸಿಕೊಟ್ಟಾಗ ಸಹಜವಾಗಿಯೇ ಆ ದೇಶದ ಬಗ್ಗೆ ಗೌರವ. ನಮ್ಮ ದೇಶದ ಬಗ್ಗೆ ತಾತ್ಸಾರ ಭಾವ ಉಂಟಾಗುತ್ತದೆ ಎನ್ನುವ ಲೇಖಕರು ನೈಜ ಪರಿಸ್ಥಿತಿಗಳ ತುಲನಾವಲೋಕನ ಮಾಡಿದ್ದಾರೆ.

ಲೇಖಕರು ಅಮೇರಿಕಾಕ್ಕೆ ಹೋದಾಗಲೆಲ್ಲ ಅಲ್ಲಿನ ಕನ್ನಡಿಗರ, ಕನ್ನಡ ಕೂಟಗಳಲ್ಲಿ ಭಾಗಿಯಾಗಿಬಂದಿದ್ದಾರೆ. ಎರಡು ರಾಜ್ಯೋತ್ಸವಗಳಲ್ಲಿ ಮುಖ್ಯ ಅತಿಥಿಯಾಗಿ ಸಹ ಭಾಗವಹಿಸಿದ್ದಾರೆ. 2003ರಲ್ಲಿ ಆಸ್ಟಿನ್ ಕನ್ನಡ ಸಂಘದ ಉತ್ಸವದಲ್ಲಿ ಪಾಲ್ಗೊಂಡು ಸಭೆ ಪ್ರಾರಂಭವಾಗುವ ಮೊದಲು ವೇದಿಕೆ ಸಜ್ಜುಗೊಳಿಸುತ್ತಿದ್ದರಿಂದ ಲೇಖಕರು ಮುಂದಿನ ಸಾಲಿನಲ್ಲಿ ಕುಳಿತಿದ್ದಾಗ ಮೂರು ವರ್ಷದ ಮಗು ವೇದಿಕೆಯತ್ತ 'ಪಪ್ಪಾ.. ಪಪ್ಪಾ.. ಅಮ್ಮಾ ಅಮ್ಮಾ ಎಂದು ಕೂಗುತ್ತ ಹೋಗುತ್ತದೆ. ಇದನ್ನು ಕೇಳಿ ಲೇಖಕರಿಗೆ ಆಶ್ಚರ್ಯವಾಗುತ್ತದೆ. ಕರ್ನಾಟಕಕ್ಕೆ ಹದಿನೈದು ಸಾವಿರ ಮೈಲು ದೂರದಲ್ಲಿರುವ ಪೃಥ್ವಿ ಗೋಲದ, ತದ್ವಿರುದ್ಧ ದಿಕ್ಕಿನ ಕನ್ನಡಿಗರ ಮಕ್ಕಳು 'ಅಮ್ಮ, ಅಪ್ಪ' ಎಂದೇ ತಂದೆ-ತಾಯಿಗಳನ್ನು ಕರೆಯುತ್ತವೆ. ಇಂಗ್ಲಿಷ್ ಮಾಧ್ಯಮ ಶಾಲೆಗೆ ಎರಡನೆ ವರ್ಷದಿಂದಲೆ ಹೋಗುತ್ತವೆ. ಮಕ್ಕಳೊಡನೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತವೆ ಆದರೂ ಆ ಮಕ್ಕಳು ಡ್ಯಾಡಿ ಮಮ್ಮಿ' ಎನ್ನುವುದಿಲ್ಲ. ಅದು ಆ ಒಬ್ಬ ಮಗನಿಗೆ ಮಾತ್ರ ಸೀಮಿತವಲ್ಲ ಎಂದು ತಿಳಿಸುತ್ತಾ, ಕನ್ನಡಿಗರ ಎಷ್ಟೋ ಮನೆಗಳಿಗೆ ಹೋಗಿ ಗಮನಿಸಿರುವುದರೊಂದಿಗೆ ಅವರ ಕನ್ನಡ ಪ್ರಿಯತೆಯನ್ನು ಮೆಚ್ಚಿಕೊಂಡಿದ್ದಾರೆ.

ಕನ್ನಡ ಮನೆ ಮಾತಾಗಿರುವವರ ಈ ನಡವಳಿಕೆ ಕನ್ನಡಿಗರಿಗೆ ಮಾತ್ರವಲ್ಲದೆ ಅಲ್ಲಿಗೆ ಹೋಗಿ ಖಾಯಂ ನೆಲೆಸಿರುವ ತೆಲುಗು, ತಮಿಳು, ತುಳುವರು, ಕೊಂಕಣಿಗಳಿಗೂ ಅನ್ವಯಿಸುವ ಮಾತು ಎನ್ನುತ್ತಾ, "ಭಾಷೆ ಮನುಷ್ಯ ಮನುಷ್ಯರ ಬಾಂಧವ್ಯ ಬೆಸುಗೆಯ ಸಾಧನ. ಎರಡು ಜೀವಗಳು ಒಂದನ್ನೊಂದು ಅರಿಯುವ, ಅರ್ಥಮಾಡಿಕೊಳ್ಳುವ ಮಾಧ್ಯಮ. ತನ್ನ ಮನದಲ್ಲಿರುವ ಭಾವನೆಗಳನ್ನು– ಆ ಭಾವನೆಗಳು ಒಳ್ಳೆಯವು ಆಗಿರಬಹುದು, ಕೆಟ್ಟವು ಆಗಿರಬಹುದು– ಇನ್ನೊಬ್ಬರಿಗೆ ತಿಳಿಸುವ ಶಬ್ದರೂಪೀ ಮಾಧ್ಯಮ, ಸಂಜ್ಞೆ, ಚಿತ್ತಾರ, ಚೀತ್ಕಾರ, ನಿಟ್ಟುಸಿರು ಮುಂತಾದವುಗಳಿಗಿಂತ ಸ್ಪಷ್ಟವಾದ ಶ್ರೇಷ್ಠ ಸಾಧನ ಈ ಭಾಷೆ. ಒಂದೇ ಭಾಷೆಯನ್ನಾಡುವ ಜನರ ಈ ಭಾಷಾ ಬಾಂಧವ್ಯ ರಕ್ತಬಾಂಧವ್ಯದಷ್ಟು ಹತ್ತಿರ. ಭಾಷಾಭಿಮಾನ 'ಬಿಟ್ಟೆನೆಂದರೆ ಬಿಡದೀ ಮಾಯೆ' ಎಂಬಂತೆ ಮನುಷ್ಯನನ್ನು ಬೆನ್ನು ಹತ್ತಿದೆ. ಅದೇ ಭಾಷಾಭಿಮಾನ ಇಲ್ಲಿಯೆ ಇರುವ ಕನ್ನಡದ ನೆಲಜಲ ವಾಯು ಋಣದಲ್ಲಿಯೆ ಬದುಕುವ ಇಲ್ಲಿಯವರಿಗೆ ಯಾಕೆ ಇಲ್ಲ? ಅದೇ ಸೋಜಿಗದ ಸಂಗತಿ"[18] ಎನ್ನುವ ಲೇಖಕರು ಕನ್ನಡಿಗರ ಕನ್ನಡಾಭಿಮಾನ ಕುಸಿಯುತ್ತಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿರುವುದಲ್ಲದೆ, ನಿರಭಿಮಾನಿಗಳನ್ನು ಪಶು, ಮೃಗೀಯ ಎಂದು ಟೀಕಿಸಿದ್ದಾರೆ.

ಅಮೇರಿಕದಲ್ಲಿ ಕನ್ನಡದ ಅಭಿಮಾನ ಒಂದು ಹೆಜ್ಜೆ ಮುಂದೆ ಹೋಗಿ ವಿಶ್ವಕನ್ನಡ ಸಮ್ಮೇಳನಗಳನ್ನು ಏರ್ಪಡಿಸುವ ಬಹುದೊಡ್ಡ ಉತ್ಸವದ ಸಂಭ್ರಮಕ್ಕೆ ತಲುಪಿದೆ ಎನ್ನುತ್ತಾ, ಅಮೇರಿಕದಲ್ಲಿರುವ ಕನ್ನಡ ಕೂಟಗಳೆಲ್ಲ 'ಅಕ್ಕ' (AKKA) ಎಂಬ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡಿವೆ. ಆ ಒಕ್ಕೂಟ ಎರಡು ವರ್ಷಕ್ಕೊಮ್ಮೆ ಅಮೇರಿಕೆಯಲ್ಲಿ ಜರುಗುವ ವಿಶ್ವ ಕನ್ನಡ ಸಮ್ಮೇಳನಗಳನ್ನು ಏರ್ಪಡಿಸುವಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತವೆ. ಯಾವ ಶಹರದಲ್ಲಿ ಆ ಸಮ್ಮೇಳನ ನಡೆಯುತ್ತದೆಯೋ, ಆ ಶಹರ ಮತ್ತು ರಾಜ್ಯಗಳು ಸಮ್ಮೇಳನದ ಸ್ವಾಗತ ಸಮಿತಿಯನ್ನು ರಚಿಸಿ ಅದರ ಬಹು ಭಾಗದ ಏರ್ಪಾಟುಗಳನ್ನು ಮಾಡಿ ವೆಚ್ಚವನ್ನು ಭರಿಸುತ್ತವೆ ಎಂಬುದೇನೊ ನಿಜ. ಆದರೂ ಇಡೀ ದೇಶದ ಎಲ್ಲ ಕನ್ನಡ ಕೂಟಗಳ ಸಹಕಾರವನ್ನು ನಿಯೋಜಿಸಿ, ಸಮ್ಮೇಳನದ ಕಾರ್ಯಕ್ರಮಗಳಿಗೆ ವಿವಿಧ ಕೂಟಗಳ ಸಹಕಾರವನ್ನು ಒದಗಿಸುವಲ್ಲಿ 'ಅಕ್ಕ' ತನ್ನ ಪಾತ್ರವಹಿಸುತ್ತದೆ. ವಸ್ತು ಪ್ರದರ್ಶನ, ನೃತ್ಯ, ಗಾಯನ, ನಾಟಕ, ಚರ್ಚಾಕೂಟಗಳು.. ಇತ್ಯಾದಿ ಕಾರ್ಯಕ್ರಮಗಳನ್ನು ಹೊಂದಾಣಿಕೆ ಮಾಡುವಾಗ ಇಡೀ ದೇಶದ ಕನ್ನಡ ಸಂಘಗಳು, ಕೂಟಗಳು ಒಂದಾಗಿ ಕಾರ್ಯನಿರ್ವಹಿಸುತ್ತವೆ. ಹ್ಯೂಸ್ಟನ್ನಿನ ಸಮ್ಮೇಳನದಲ್ಲಿ ಒಂದು ಕಾರ್ಯಕ್ರಮ ನಡೆಯಿತು. ಸುಮಾರು ಅರವತ್ತು–ಎಪ್ಪತ್ತು ನೃತ್ಯಗಾರರು, ನೃತ್ಯಗಾರ್ತಿಯರಿದ್ದ 'ವೃಂದನೃತ್ಯ'ದಲ್ಲಿ ಭಾಗವಹಿಸಲಿದ್ದರು. ಆ ಅರವತ್ತು–ಎಪ್ಪತ್ತು ನೃತ್ಯಗಾರರು, ನೃತ್ಯಗಾರ್ತಿಯರು ವಿವಿಧ ರಾಜ್ಯಗಳಲ್ಲಿದ್ದವರು. ಅವರೆಲ್ಲ ಆ ವೃಂದನೃತ್ಯದಲ್ಲಿ ಭಾಗವಹಿಸಬೇಕಾಗಿತ್ತು. ವಿವಿಧ ಬಗೆಯ ನೃತ್ಯ, ವಿವಿಧ ವೇಷಭೂಷಣ

ವಿವಿಧ ಸಂಗೀತದ ಹಿನ್ನೆಲೆ. ಆ ಯುವಕ ಯುವತಿಯರು ತಮ್ಮ ಸರದಿಯ ಪ್ರಕಾರ ಒಂದೇ ಗುಂಪಿನಲ್ಲಿದ್ದು ನರ್ತಿಸುವ ಆ ಜಟಿಲ ಕುಶಲ ಕಲೆಯನ್ನು ಹೇಗೆ ಹೊಂದಾಣಿಕೆ ಮಾಡಿದರೂ ಅದೇ ಆಶ್ಚರ್ಯ. ಇದಕ್ಕೆ ಎಷ್ಟು ಪೂರ್ವಸಿದ್ಧತೆ ಬೇಕೆಂಬುದನ್ನು ಕಲ್ಪನಾಶಕ್ತಿ ಇದ್ದರೆ ಊಹಿಸಿಕೊಳ್ಳಬಹುದು"[19] ಹೀಗೆ ಲೇಖಕರು ಅಮೇರಿಕದ ಕನ್ನಡ ಸಂಸ್ಥೆಗಳ ಕಾರ್ಯವೈಖರಿಯನ್ನು ತಿಳಿಸುತ್ತಾರೆ. ಅವರ ಕನ್ನಡಾಭಿಮಾನ ಹೆಮ್ಮೆ ಪಡುವಂತಹದ್ದು. ಅಲ್ಲದೇ ಅವರ ಈ ಸೇವೆ ಅಮೋಘ ಎನಿಸುತ್ತದೆ. ಕನ್ನಡವನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಇಲ್ಲಿಯ ಸರ್ಕಾರದಿಂದ ಯಾವುದೇ ನೆರವು, ಪುರಸ್ಕಾರ ಬಯಸದೆ ಇರುವುದೂ ಸಹ ಪ್ರಶಂಸನೀಯ. ಅಲ್ಲಿ ಪ್ರವಾಸಕ್ಕೆ ತಕ್ಕ ಏರ್ಪಾಟು ಮಾಡುತ್ತಾರೆ. ಸರ್ಕಾರ ಇಲ್ಲಿಂದ ಕಲಾವಿದರನ್ನು ಕಳಿಸಿಕೊಟ್ಟರೆ ಅವರು ಅಲ್ಲಿ ತಂಗುವ, ಊಟ, ವಸತಿಯನ್ನು ಏರ್ಪಡಿಸುತ್ತಾರೆ. ಅದಕ್ಕೆಲ್ಲ ಆಗುವ ಖರ್ಚನ್ನು ಸ್ವಾಗತ ಸಮಿತಿಯು ಭರಿಸುತ್ತದೆ. ಇದು ಅವರ ಕನ್ನಡ ಮತ್ತು ಕರ್ನಾಟಕಾಭಿಮಾನ, ಅವರು ಅಭಿನಂದನಾರ್ಥರ್ಹರು ಎಂದು ಸಂತೋಷದಿಂದ ಹೇಳಿಕೊಳ್ಳುವುದು ಸೂಕ್ತವಾಗಿದೆ.

"ಆ ದೇಶವನ್ನು ಕಣ್ಣಿಟ್ಟು ನೋಡಿ ಮನದ ಕಣ್ಣಿಂದ ಕ್ಷ-ಕಿರಣ ಬೀರಿ ಆ ದೇಶ, ಆ ಜನರ ಮನೋಭಾವದ ಅಂತರಾಳವನ್ನು ನಾನು ತಿಳಿದುಕೊಳ್ಳುವ ಸಾಧ್ಯವಾದರೆ ಅದರಿಂದ ನನ್ನ ಭಾವಪುಷ್ಪ ಪಡೆಯುವ, ವಿಶ್ಲೇಷಣಾತ್ಮಕ ದೃಷ್ಟಿಯಿಂದ ಹೃದಯ ವೈಶಾಲ್ಯವನ್ನು ಹೊಂದುವುದು 'ಮನುಜ ಕುಲ ತಾನೊಂದೆ ವಲಂ' ಎಂಬ ಮಹಾ ಆದಿಕವಿ ಪಂಪನ ಮಹಾಸತ್ಯ ದಿಟವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು ನನ್ನ ಉದ್ದೇಶವಾಗಿತ್ತು. ಆ ದೇಶವನ್ನು ಕಣ್ಮುಚ್ಚಿ ಪ್ರಶಂಸಿಸುವುದಾಗಲಿ ಇಲ್ಲವೆ ಖಂಡಿಸುವುದಾಗಲಿ ನ್ಯಾಯವಾಗಲಾರದು. ನಾವು ಹೇಗೆ ಬದುಕಬೇಕೆಂಬುದನ್ನು ನಾವೇ ನಿರ್ಧರಿಸಿಕೊಳ್ಳುವ ಹಕ್ಕು ನಮಗೆ ಇರುವಂತೆ ಅವರಿಗೂ ಇದೆ. ಅದನ್ನು ಹೇಳುವುದಕ್ಕೆ ನಿರ್ಧರಿಸುವುದಕ್ಕೆ ನಾವ್ಯಾರು? ಹೇಳಿದರೂ ಅದನ್ನು ಅಲ್ಲಿ ಕೇಳುವವರು ಯಾರು?"[20] ಎನ್ನುವ ಲೇಖಕರ ಮಾತು ಔಚಿತ್ಯಪೂರ್ಣವಾಗಿದೆ. ಅಮೇರಿಕಾ ದೇಶದ ದೌರ್ಬಲ್ಯಗಳ ಬಗ್ಗೆ ಗಮನಕೊಡದೆ ಆ ದೇಶದಿಂದ ಉಪಯುಕ್ತವಾಗುವ ಅಂಶಗಳನ್ನು ಮಾತ್ರ ಸ್ವೀಕರಿಸಿದ್ದಾರೆ. ನಮ್ಮ ದೇಶದ ಕೊರತೆಗಳನ್ನು ಮನವರಿಕೆ ಮಾಡಿಸಿದ್ದಾರೆ. ತಾವು ಕಂಡಿದ್ದನ್ನು ಅನುಭವಿಸಿದ್ದನ್ನು ಪ್ರಾಮಾಣಿಕವಾಗಿ ಹೇಳಲು ಪ್ರಯತ್ನಿಸಿದ್ದಾರೆ. ಈ ಪ್ರವಾಸ ಕಥನ ಸರಳ ನಿರೂಪಣೆಯೊಂದಿಗೆ ಸರಾಗವಾಗಿ ಓದಿಸಿಕೊಂಡು ಸುಂದರ ಅನುಭವವನ್ನೊದಗಿಸುತ್ತದೆ.

## ಕೊನೆ ಟಿಪ್ಪಣಿ :


1. ಹಣತೆಗೆ ಹನಿ ಎಣ್ಣೆ, ಡಾ. ತಾಳ್ತಡೆ ವಸಂತಕುಮಾರ. ಪುಟ–77
2. ವ್ಯಾಸಾರಾಯ ಬಲ್ಲಾಳ, ಡಾ. ಡಿ.ವಿಜಯಲಕ್ಷ್ಮಿ. ನವಕರ್ನಾಟಕ ಪಬ್ಲಿಕೇಷನ್, ಪ್ರವೆಟ್ ಲಿಮಿಟೆಡ್, ಎಂಬಿಸಿ ಸೆಂಟರ್, ಕ್ರೆಸೆಂಟ ರಸ್ತೆ, ಬೆಂಗಳೂರು. ಪ್ರಕಟಣೆ–2001, ಪುಟ 64,65.
3. ವ್ಯಾಸಾರಾಯ ಬಲ್ಲಾಳ, ಡಾ. ಡಿ.ವಿಜಯಲಕ್ಷ್ಮಿ. ನವಕರ್ನಾಟಕ ಪಬ್ಲಿಕೇಷನ್, ಪ್ರವೆಟ್ ಲಿಮಿಟೆಡ್, ಎಂಬಿಸಿ ಸೆಂಟರ್, ಕ್ರೆಸೆಂಟ ರಸ್ತೆ, ಬೆಂಗಳೂರು. ಪ್ರಕಟಣೆ–2001, ಪುಟ 64,65.
4. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ್, ಪುಟ–339.
5. ಅಮೇರಿಕ ಭಾರತೀಯನ ದೃಷ್ಟಿಯಲ್ಲಿ–1987, ಪ್ರೊ. ಎನ್. ನಂಜುಂಡಶಾಸ್ತ್ರಿ, ಪುಟ 177.
6. ಅಮೇರಿಕ ಭಾರತೀಯನ ದೃಷ್ಟಿಯಲ್ಲಿ–1987, ಪ್ರೊ. ಎನ್. ನಂಜುಂಡಶಾಸ್ತ್ರಿ, ಪುಟ 178.
7. ಅವಕಾಶಗಳ ಅಮರಾವತಿ ಅಮೇರಿಕಾ – ಗುರುಮೂರ್ತಿ ಪೆಂಡಕೂರು, ಪುಟ 47.
8. ಅವಕಾಶಗಳ ಅಮರಾವತಿ ಅಮೇರಿಕಾ – ಗುರುಮೂರ್ತಿ ಪೆಂಡಕೂರು, ಪುಟ 42.
9. ಜಿ.ಎಸ್. ಶಿವರುದ್ರಪ್ಪ–1988, ಅಮೇರಿಕಾದಲ್ಲಿ ಕನ್ನಡಿಗ, ಪುಟ 151.
10. ಜಿ.ಎಸ್. ಶಿವರುದ್ರಪ್ಪ–1988, ಅಮೇರಿಕಾದಲ್ಲಿ ಕನ್ನಡಿಗ, ಪುಟ 84.
11. ಜಿ.ಎಸ್. ಶಿವರುದ್ರಪ್ಪ–1988, ಅಮೇರಿಕಾದಲ್ಲಿ ಕನ್ನಡಿಗ, ಪುಟ 115.
12. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 15.
13. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 44.
14. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 46–47.
15. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 128.
16. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 147.
17. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 182.
18. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 205–206.
19. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 208.
20. ಈ ಇ ಆ ಅ–2006, ಕೋ. ಚೆನ್ನಬಸಪ್ಪ, ಪುಟ 212.


* * *

# ಅಧ್ಯಾಯ – 5

# ಅನ್ಯ ಕೃತಿಗಳಲ್ಲಿ ಅಮೇರಿಕಾ ಪ್ರವಾಸದ ವಿಶ್ಲೇಷಣೆಗಳು

## ಅನ್ಯ ಕೃತಿಗಳಲ್ಲಿ ಅಮೇರಿಕಾ ಪ್ರವಾಸದ ವಿಶ್ಲೇಷಣೆಗಳು

ಅನ್ಯ ಕೃತಿಗಳಲ್ಲಿ ಅಮೇರಿಕಾ ಪ್ರವಾಸ ಕುರಿತು ಪ್ರವಾಸಕಥನಗಳನ್ನು ಬಿಟ್ಟು ಉಳಿದ ಸಾಹಿತ್ಯದ ಇತರ ಪ್ರಕಾರಗಳಾದ ಕಥೆ, ಕಾವ್ಯ, ಜೀವನಚರಿತ್ರೆ, ಆತ್ಮಕಥೆ ಇತ್ಯಾದಿಗಳಲ್ಲಿ ಉಲ್ಲೇಖಗೊಂಡಿರುವ ಅಮೇರಿಕಾ ಪ್ರವಾಸದ ಅನುಭವ, ಅಭಿಪ್ರಾಯಗಳುಳ್ಳ ಕೃತಿಗಳ ವಿಷಯವನ್ನು ವಿಶ್ಲೇಷಿಸಿದ್ದಾರೆ.

### ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ 1998 (ಆತ್ಮಚರಿತ್ರೆ)–ಪಾರ್ವತಮ್ಮ ಮಹಾಲಿಂಗಶೆಟ್ಟಿ :

ಲೇಖಕಿ, ಪಾರ್ವತಮ್ಮ ಮಹಾಲಿಂಗಶೆಟ್ಟಿ ವಿದೇಶ ಪ್ರಯಾಣದ ಸ್ವಂತ ಅನುಭವವನ್ನು ಬರೆಯುವುದಕ್ಕಿಂತ ಮೊದಲ ವಿದೇಶದಲ್ಲಿರುವ ತಮ್ಮ ಮಗಳು ಅಮೇರಿಕಾಕ್ಕೆ ಹೋದಾಗ ಅವಳ ಅನುಭವಗಳನ್ನು ಕಾಗದದ ರೂಪದಲ್ಲಿ ತಿಳಿಸಿರುವುದನ್ನು ಲೇಖಕರು ಓದುಗರಿಗೆ ಅದನ್ನು ಮೊದಲು ತಿಳಿಸುತ್ತಾರೆ.

ಲೇಖಕಿಯ ಮಗಳು  ಮಂಗಳಾ ವಸಂತ ಅಮೇರಿಕಾಕ್ಕೆ ಹೋದಾಗ ಅವರಿಗೆ ಭಾಷೆಯ ತೊಡಕು ಕಾಡಿದ್ದಿದೆ. ಭಾರತೀಯರ ಇಂಗ್ಲೀಷ್ ಉಚ್ಚಾರ ಅಮೇರಿಕಾದವರ ಉಚ್ಚಾರ ಬೇರೆ ಬೇರೆ. ಇಂಗ್ಲಿಷ್ ಭಾಷೆಯಾದರೂ ಪರಸ್ಪರ ಅರ್ಥಮಾಡಿಕೊಳ್ಳಲು ಕಾಲಾವಧಿಬೇಕಾಯಿತೆಂದು ಹೇಳಿದ್ದಾರೆ. ಅಮೇರಿಕಾದ ಪ್ರತಿ ಊರಿನಲ್ಲಿಯೂ ಭಾರತೀಯರ ಅಂಗಡಿಗಳಲ್ಲಿ ಅವರಿಗೆ ಬೇಕಾದ ಎಲ್ಲಾ ಅಡಿಗೆಯ ಸಾಮಾನುಗಳು ಸಿಗುತ್ತವೆ. ಅವು ಆರು ತಿಂಗಳಿಟ್ಟರೂ ಕೆಡುವುದಿಲ್ಲವಂತೆ. ಎಲ್ಲವೂ ದೂರ ದೂರ ಪ್ರದೇಶಗಳಲ್ಲಿರುವುದರಿಂದ ಕಾರು ಅವಶ್ಯಕವಾಗಿಬೇಕೆಂದು ಹೇಳುತ್ತಾರೆ. ಡಾಕ್ಟರರ ಟ್ರೈನಿಂಗ್‌ಗೆ 'ರೆಸಿಡೆನ್ಸಿ' ಎನ್ನುತ್ತಾರೆ. ಡಾಕ್ಟರರು ರೆಸಿಡೆನ್ಸಿ ಮಾಡುವಾಗ ಇಪ್ಪತ್ನಾಲ್ಕು ಗಂಟೆ, ಕೆಲವು ಸಲ ನಲವತ್ತೆಂಟು ಗಂಟೆ ಒಂದೇ ಸಮ ಕೆಲಸ ಮಾಡಬೇಕಾಗುತ್ತದೆ ರೆಸಿಡೆನ್ಸಿ ಮಾಡಿ ಮುಗಿಸಿದರೆ ಎಂತಹ ಕೇಸನ್ನಾದರೂ ಎದುರಿಸುವ ಧೈರ್ಯ ಬರುತ್ತದೆ. ಭಾರತದಲ್ಲಿ ಎಂ.ಎಸ್., ಎಂ.ಡಿ ಮಾಡಿದ್ದರೂ ಅದು ಲೆಕ್ಕಕ್ಕಿಲ್ಲ ರೆಸಿಡೆನ್ಸಿ ಪೂರ್ತಿ ಮಾಡಿದ ನಂತರವೇ ಡಾಕ್ಟರಾಗಲೂ ಅವರಿಗೆ ಅನುಮತಿ ಸಿಗುವುದಂತೆ. ಇಲ್ಲಿ ಅಮೇರಿಕಾದ ವೈದ್ಯಕೀಯ ಶಿಕ್ಷಣದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಸಂಪೂರ್ಣಜ್ಞಾನ ಪಡೆಯುವುದಲ್ಲದೆ ಎಂತಹ ಕಷ್ಟದ ಕೇಸ್ ಬಂದರೂ ಎದುರಿಸುವ ಸಾಮರ್ಥ್ಯ ಹೊಂದುವಂತೆ ತರಬೇತುಗೊಳಿಸುತ್ತಾರೆ. ಉನ್ನತ ಶಿಕ್ಷಣದ ಗುಣಮಟ್ಟವನ್ನು ನಾವು ತಿಳಿಯಬಹುದು. ಮಂಗಳಾ ವಸಂತ ಅವರು ಅಮೇರಿಕದಲ್ಲಿ

ಮಕ್ಕಳ ರೋಗಶಾಸ್ತ್ರ ಕಲಿತು ನಂತರ ದಿನ ತುಂಬುವ ಮೊದಲೇ ಹುಟ್ಟುವ ಶಿಶುಗಳ ರೋಗಶಾಸ್ತ್ರವನ್ನು ಕಲಿತು ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡಂತೆ ಕಾಣುತ್ತದೆ. ಅವರೇ ತಿಳಿಸಿರುವಂತೆ 'ಅಮೇರಿಕಾದಲ್ಲಿ ಭಾರತದಂತೆ ಒಬ್ಬೊಬ್ಬ ಡಾಕ್ಟರದೇ ಒಂದೊಂದು ಆಸ್ಪತ್ರೆ ಇರುವುದಿಲ್ಲ. ಸರ್ಕಾರದವರೋ, ಚರ್ಚಿನವರೋ, ಸಾರ್ವಜನಿಕರೋ ಕಟ್ಟಿಸಿರುವ ಎಲ್ಲಾ ಅನುಕೂಲತೆಗಳಿರುವ ಒಂದೆರಡು, ದೊಡ್ಡ ಆಸ್ಪತ್ರೆಗಳು ಪ್ರತಿ ಊರಿನಲ್ಲಿ ಇರುತ್ತವೆ" ಅಲ್ಲಿ ಎಲ್ಲಾ ಖರ್ಚನ್ನು ಇನ್ಶೂರೇನ್ಸ್‌ನವರೇ ನೋಡಿಕೋಳ್ಳುತ್ತಾರೆ. ಅಮೇರಿಕಾದಲ್ಲಿ ವೈದ್ಯಕೀಯ ಸೌಲಭ್ಯ ಸೌಕರ್ಯಯುತವಾಗಿದೆ. ಭಾರತದಲ್ಲಿ ಇದು ವ್ಯತಿರಿಕ್ತ.

ಮಂಗಳಾ ಮತ್ತು ಅವರ ಪತಿ ವಸಂತ ಇವರು ಸಹ ಮೂತ್ರಕೋಶಕ್ಕೆ ಸಂಬಂಧಿಸಿದ ಕಲಿತು, ಇಬ್ಬರೂ ರಾತ್ರಿ, ಹಗಲು ದುಡಿದು ಸೇವೆ ಸಲ್ಲಿಸುತ್ತಿದ್ದಾರೆ. ಇದನ್ನು ಗಮನಿಸಿದರೆ ಇದೊಂದು ಪ್ರತಿಭಾ ಪಲಾಯನ ಎನಿಸುತ್ತದೆ. ಉನ್ನತ ಶಿಕ್ಷಣ ಪಡೆದು, ಸಾಕಷ್ಟು ಜ್ಞಾನ ಸಂಪಾದಿಸಿಕೊಂಡು ಸ್ವದೇಶಕ್ಕೆ ಮರಳುವುದಿಲ್ಲ. ಅಲ್ಲಿಯೇ ನೆಲೆಸಿ ಆ ದೇಶಕ್ಕೆ ತಮ್ಮ ಸೇವೆ ಸಲ್ಲಿಸಿರುತ್ತಾರೆ. ನಿಜಕ್ಕೂ ವಿಷಾದವೆನಿಸುತ್ತದೆ. ಭಾರತದ ಶಿಕ್ಷಣ ವ್ಯವಸ್ಥೆಯ ಸ್ಥಿತಿಗತಿಗಳು ಚಿಂತನೆಗೆ ಎಡೆಮಾಡಿಕೊಡುತ್ತವೆ.

ಲೇಖಕಿ ಪಾರ್ವತಮ್ಮ ಮಹಾಲಿಂಗಶೆಟ್ಟಿ ಮಗಳ ಕರೆಯ ಮೇರೆಗೆ ಅಮೇರಿಕಾ ಪ್ರವಾಸ ಕೈಗೊಂಡು ತಾವು ಪಡೆದ ಅನುಭವವನ್ನು ಸರಳವಾಗಿ ನಿರೂಪಿಸಿದ್ದಾರೆ. ಮೊದಲೆರಡು ಪುಟಗಳಲ್ಲಿ ವೀಸಾ ಪಡೆಯುವಾಗಿನ ಅನುಭವ, ವಿಮಾನ ಪ್ರಯಾಣ ಅನುಭವವನ್ನು ಹೇಳಿಕೊಂಡಿರುವುದೆಲ್ಲಾ ವರದಿಯ ಮಾದರಿಯಲ್ಲಿರುವುದನ್ನು ಕಾಣಬಹುದು.

ನಂತರ ಅಮೇರಿಕವನ್ನು ತಲುಪಿದ ಮೇಲೆ ಆರೆಂಟು ಕಾರುಗಳು ಸರಾಗವಾಗಿ ಓಡಾಡುವಷ್ಟು ವಿಸ್ತಾರವಿರುವ ರಸ್ತೆಗಳನ್ನು ನೋಡಿ ಆಶ್ಚರ್ಯಪಟ್ಟಿದ್ದಾರೆ. ಅಮೇರಿಕನ್ನರು ರಸ್ತೆಗಳಲ್ಲಿನ ಅಪರಿಚಿತರನ್ನಾಗಲಿ ಅಥವಾ ಯಾರನ್ನೆ ನೋಡಲಿ ನಕ್ಕು 'ಹೈ, ಬೈ', Good Morning, Have a nice day ಇತ್ಯಾದಿಗಳನ್ನು ಹೇಳುವುದು ಅವರಿಗೆ ಹುಟ್ಟಿದಾಗಿನಿಂದ ರಕ್ತಗತವಾಗಿ ಬಂದಿದೆ ಎನ್ನುತ್ತಾರೆ. ಇಲ್ಲಿ ಅವರ ಸ್ನೇಹ ಮನೋಭಾವವನ್ನು ಕಾಣಬಹುದು. ಲೇಖಕಿಗೆ ಮೊದಲು ಯಾರಾದರೂ ಹೈ, ಬೈ ಎಂದಾಗ ಇರಿಸುಮುರಿಸಾದರೂ ನಂತರ ಕ್ರಮೇಣ ಅವರಂತೆ ವರ್ತಿಸಿದ್ದಾರೆ. ಕಾಲಕ್ಕೆ, ಸಂದರ್ಭಕ್ಕೆ ತಕ್ಕಂತೆ ಹೊಂದಾಣಿಕೆಯ ಮನೋಭಾವ ಭಾರತೀಯರಿಗೆ ಹುಟ್ಟಿದಾಗಿನಿಂದ ಬಂದಿದೆ ಎನ್ನುವುದನ್ನು ಲೇಖಕಿ ತೋರಿಸಿಕೊಟ್ಟಿದ್ದಾರೆ.

ಅಮೇರಿಕಾದಲ್ಲಿ ಟೆಲಿಫೋನ್, ಗ್ಯಾಸ್, ವಿದ್ಯುತ್, ಬಸ್ಸು, ವಿಮಾನ ಮುಂತಾದವುಗಳಲ್ಲೆಲ್ಲಾ ಹೆಚ್ಚಾಗಿ ಖಾಸಗಿಯವರದೇ ವ್ಯವಹಾರ; ಪೈಪೋಟಿಯೂ ಬಹಳ, ಹೀಗಾಗಿ ಉತ್ತಮ ಸೇವೆ ಕಡಿಮೆ ಖರ್ಚಿನಲ್ಲಿ ಸಿಗುತ್ತದೆ. ನಮ್ಮಲ್ಲಿರುವಂತೆ ಸಾಧ್ಯವಾದಷ್ಟು ಕಿರುಕುಳ ಕೊಡಬೇಕೆಂಬ ಮನೋಭಾವವಿಲ್ಲ. ಎನ್ನುವ ಲೇಖಕಿಯ ಈ ಮಾತುಗಳಲ್ಲಿ ನಮ್ಮ ದೇಶದ ಸರ್ಕಾರದ ಅವ್ಯವಸ್ಥೆಯನ್ನು ಎತ್ತಿತೋರಿಸುತ್ತಾರೆ. ಅಲ್ಲದೆ ಅಮೇರಿಕಾದವರ ಸಹಾಯ ಮಾಡುವ ಪ್ರವೃತ್ತಿಯನ್ನು ವಿಶ್ಲೇಷಿಸಿದ್ದಾರೆ.

ಲೇಖಕಿ 1980 ರಿಂದ 1990ರವರೆಗೆ ಆರು ಸಲ ಹೋಗಿ ನಾಲ್ಕು ನಾಲ್ಕು ತಿಂಗಳಿದ್ದು ಮೊದಲಿನ ವಿಸ್ಮಯ, ಆಶ್ಚರ್ಯ ಕಡಿಮೆ. ಮಕ್ಕಳು, ಮೊಮ್ಮಕ್ಕಳ ಜೊತೆ ಸಂತೋಷ, ಉಲ್ಲಾಸದಿಂದ ಕಾಲ ಕಳೆದಿದ್ದೇನೆ ಎಂದು ತೃಪ್ತಿಯಿಂದ ಹೇಳಿಕೊಂಡಿದ್ದಾರೆ. ಅಮೇರಿಕಾದಲ್ಲಿ ಎಲ್ಲರು ಸಾಮಾನ್ಯವಾಗಿ ಕೇಳುವ ಪ್ರಶ್ನೆ 'ನಿಮಗೆ ಅಮೇರಿಕಾ ಹೇಗನಿಸುತ್ತದೆ? ಇದಕ್ಕೆ ಉತ್ತರ ಹೇಳಿ ಬೇಸತ್ತಂತೆ ಕಾಣುತ್ತದೆ. ಒಬ್ಬ ಅಮೇರಿಕನ್ ಮಹಿಳೆ ಕೇಳುವ ಪ್ರಶ್ನೆಗೆ ಲೇಖಕಿ ಗೊಂದಲದ ಸ್ಥಿತಿಗೆ ಈಡಾಗಿದ್ದು, ಉತ್ತರ ಕೊಡವಲ್ಲಿ ಹಿಂಜರಿಕೆ ಇರುವುದು ಕಂಡುಬರುತ್ತದೆ. ಅವಳು ಕೇಳಿದ ಪ್ರಶ್ನೆ;- ನಿಮ್ಮಲ್ಲಿ ಜನಗಳು ರಸ್ತೆಯಲ್ಲೇ ಮೂತ್ರಕ್ಕೆ ಕೂಡುತ್ತಾರಂತೆ ನಿಜವೇ? ಎಂದು ಕೇಳಿದಾಗ ಲೇಖಕಿಗೆ ಮಾತ್ರವಲ್ಲದೆ ಭಾರತದ ಯಾವ ಪ್ರಜೆಗಾದರೂ ಉತ್ತರ ಕೊಡಲು ಕಸಿವಿಸಿಯಾಗುತ್ತದೆ. ಅಮೇರಿಕದಂತೆ ಇಲ್ಲಿ ಸೌಕರ್ಯಗಳಿಲ್ಲ ಅಲ್ಲದೆ ಅಮೇರಿಕನ್ನರಂತೆ ಭಾರತೀಯರು ಸ್ವಚ್ಛತೆಗೆ ಅಷ್ಟೊಂದು ಮಹತ್ವ ಕೊಟ್ಟವರಲ್ಲ ಇದರ ಬಗ್ಗೆ ಗಮನಹರಿಸುವುದು ಮುಖ್ಯ.

ಅಮೇರಿಕಾದ ಮತ್ತೊಬ್ಬ ಮಹಿಳೆ ನಿಮ್ಮ ದೇಶದ ಉಡುಪು ಸೆಕ್ಸಿ ಎಂದಾಗ ಆಶ್ಚರ್ಯವಾದರೂ ನಿಧಾನವಾಗಿ ಯೋಚಿಸಿ ಹೌದೆಂದು ಒಪ್ಪಿಕೊಂಡಿದ್ದಾರೆ. "ಸೀರೆಯೇ ಬಹಳ ಗಂಭೀರವಾದ, ಪೂರ್ಣ ಮೈ ಮುಚ್ಚುವ ಉಡುಪು ನಿಜವಾದರೂ ಹೊಟ್ಟೆ, ಬೆನ್ನು, ಕತ್ತು, ಅರ್ಧಎದೆ ಎಲ್ಲಾ ಕಾಣಿಸಲು ಸಾಧ್ಯ. ಪೂರ್ತಿ ಕಾಣುವುದಕ್ಕಿಂತ, ಅರ್ಧಂಬರ್ಧ ಕಾಣಿಸುವುದು, ಅರ್ಧಂಬರ್ಧ ಮುಚ್ಚುವುದು ಮತ್ತು ಕುತೂಹಲಕಾರಿ, ಉತ್ತೇಜನಕಾರಿ ಸೆಕ್ಸಿ ನಿಜ"., (ಪುಟ 552) ತಮ್ಮ ಸಮ್ಮತಿಗೆ ಕಾರಣವನ್ನು ತಿಳಿಸಿದ್ದಾರೆ. ಆದರೆ ಭಾರತದಲ್ಲಿ ಇತ್ತೀಚೆಗೆ ಪಾಶ್ಚಾತ್ಯರ ಉಡುಪಿನ ವ್ಯಾಮೋಹ ಹೆಚ್ಚಾಗಿ ಕಂಡುಬರುತ್ತಿದೆ. ಸೀರೆ ನಮ್ಮ ಸಂಸ್ಕೃತಿಯ ಪ್ರತೀಕ. ಆಕರ್ಷಣೀಯವಾಗಿದೆ. ಇದನ್ನು ಉಳಿಸಿಕೊಳ್ಳುವುದು ಬಹುಮುಖ್ಯ.

ಕುಟುಂಬ ಸಮೇತರಾಗಿ ಲೇಖಕಿ ಅಮೇರಿಕಾದ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಕೊಟ್ಟಿದ್ದಾರೆ. ವಿಶೇಷ ಅನುಭವವನ್ನು ಪಡೆದಿದ್ದಾರೆ. ನಯಾಗರ ಫಾಲ್ಸ, ನೋಡಿ ಆಶ್ಚರ್ಯ ಪಟ್ಟಿದ್ದಾರೆ ಸಿನಿಮಾ ಜಗತ್ತಿಗೆ ಪ್ರಸಿದ್ಧವಾದ ಲಾಸ್ ಏಂಜಲೀಸ್ ನೋಡಿದ್ದಾರೆ. ಯೂನಿವರ್ಸಲ್ ಸ್ಟುಡಿಯೋದ ದೃಶ್ಯಗಳು ನೆನಪಿನಂಗಳದಲ್ಲಿ ತೇಲಾಡುತ್ತಿರುವಂತೆ ವ್ಯಕ್ತಪಡಿಸಿದ್ದಾರೆ. ಹಳೆಯ ಮತ್ತು ಹೊಸದಾಗಿ ಕಟ್ಟಿಸಿದ ಡಿಸ್ನಿಲ್ಯಾಂಡನ್ನು ನೋಡಿ ಮಾನವ ಜೀವನದ ಪ್ರಗತಿಯನ್ನು ಅಮೇರಿಕನ್ನರು ಮೆರೆದಿದ್ದಾರೆ ಎನ್ನುತ್ತಾರೆ. ಈ ಡಿಸ್ನಿಲ್ಯಾಂಡನ್ನು ನೋಡಲು ಸಾವಿರಾರು ಜನರೂ ಪ್ರತಿದಿನ ಬರುತ್ತಾರೆಂದು ಹೇಳುವುದಲ್ಲದೆ, ಸೀವರ್ಲ್ಡ್ ಕೂಡಾ ಆಕರ್ಷಣೀಯವೆನ್ನುತ್ತಾರೆ.

"ಯುಸುಮಿಟಿ ಪಾರ್ಕ್ ಜಗತ್ಪ್ರಸಿದ್ಧವಾದ ನೈಸರ್ಗಿಕ ಪ್ರೇಕ್ಷಣೀಯ ಸ್ಥಳ. ಮೇಲೆ ದೊಡ್ಡ ದೊಡ್ಡ ರಾಕ್ಷಸಾಕಾರದ ಬಂಡೆಗಳು ಇದ್ದರೆ, ಕೆಳಗೆ ಮುಗಿಲು ಮುಟ್ಟುವಂತಹ ಎತ್ತರವಾದ ಮರಗಳ ಕಾಡು ಇದೆ. ಮಧ್ಯ ಜುಳು ಜುಳು ಹರಿಯುವ ನೀರಿನ ತೊರೆಗಳು ಕಾರಿನಲ್ಲೆ ಕುಳಿತು ನೀವು ಮೇಲಿನವರೆಗೆ ಏರಬಹುದು ಸುತ್ತಲಿನ ಭವ್ಯ ಪ್ರಕೃತಿ ಸೌಂದರ್ಯ ಸವಿಯಬಹುದು ಅಲ್ಲಿ ಪ್ರತಿ ಬಂಡೆಗೂ ವಿಶಿಷ್ಟವಾದ ಮರಕ್ಕೂ ಒಂದೊಂದು ಹೆಸರಿಟ್ಟಿದ್ದಾರೆ. ಕೆಳಗಡೆ ಬೇಸಿಗೆ ರಜದಲ್ಲಿ ಕೆಲವು ವಾರ ವಾಸವಾಗಿರಲು ಎಲ್ಲ ಸೌಕರ್ಯಗಳಿರುವ ಸಣ್ಣ ಮನೆಗಳಿವೆ ಅವನ್ನು ಬಾಡಿಗೆ ಕೊಡುತ್ತಾರೆ. ಅವು ಎಷ್ಟು ಜನಪ್ರಿಯವಾಗಿ ಬೇಡಿಕೆಯಲ್ಲಿವೆ ಎಂದರೆ ಅವನ್ನು ಎರಡು,ಮೂರು ವರ್ಷ ಮೊದಲೇ ಬುಕ್ ಮಾಡಬೇಕಾಗುತ್ತದೆ ಅದಕ್ಕೆ ಅಲ್ಲಿಯ ಸೌಂದರ್ಯವು ಒಂದು ಕಾರಣವಾದರೆ, ಆದಷ್ಟು ಮಜಾಮಾಡುವ, ಸುಖ ಅನುಭವಿಸುವ, ರಜವನ್ನು ಆರಾಮದಿಂದ ಕಳೆಯುವ ಅಮೇರಿಕನ್ನರ ಮನೋಭಾವವೂ ಕಾರಣ".$_2$ (ಪುಟ 560) ಲೇಖಕಿಯ ಈ ಮಾತಿನಲ್ಲಿ ಚಿಂತನಾ ಲಹರಿಯನ್ನು ಕಾಣುತ್ತೇವೆ. ನಿಸರ್ಗ ಸೌಂದರ್ಯವನ್ನು ಕಾಪಾಡಿಕೊಂಡು ಇದನ್ನು ಆಕರ್ಷಕ ಪ್ರವಾಸೋದ್ಯಮವಾಗಿ ಮಾರ್ಪಡಿಸುವ ಜಾಣ್ಮೆ ಅಮೇರಿಕನ್ನರಲ್ಲಿ ಕಂಡಿದ್ದಾರಲ್ಲದೆ ಅಮೇರಿಕನ್ನರು ಪರಿಶ್ರಮ ಪಡುವ ಸ್ವಭಾವದವರಷ್ಟೇ ಅಲ್ಲದೆ ಮನರಂಜನಾಪ್ರಿಯರು ಎನಿಸುತ್ತದೆ. ಆದರೆ ಭಾರತದಲ್ಲಿ ಅಮೇರಿಕಾಕ್ಕಿಂತ ಹೆಚ್ಚಾಗಿ ನೈಸರ್ಗಿಕ ಸಂಪತ್ತಿನ ಸೌಂದರ್ಯ ಹೊಂದಿದ್ದರೂ ಅಭಿವೃದ್ಧಿ ಪಥದಲ್ಲಿ ಎಲ್ಲವನ್ನು ಹಾಳುಮಾಡುತ್ತಿದ್ದಾರೆಂದು ವಿಷಾದವನ್ನು ವ್ಯಕ್ತಪಡಿಸುತ್ತಾರೆ.

ಒಟ್ಟಾರೆಯಾಗಿ ಲೇಖಕಿಯು ಓದುಗರ ಮನಸ್ಸನ್ನು ತನ್ನೊಳಗೆ ಸೆಳೆದುಕೊಳ್ಳುವ ರೀತಿ ಅನನ್ಯವಾಗಿದೆ.

[illegible]

## ಸಂಗೀತ ಕಲಾವಿದನೋರ್ವನ ಸವಿನೆನಪುಗಳು (ಆತ್ಮಕಥೆ)–ಪ್ರೊ.ವಿ. ಶಾಮರತ್ನಂ :

ಪ್ರೊ.ವಿ. ಶಾಮರತ್ನಂ ಸಂಗೀತ ವೃತ್ತಿಯನ್ನು ಅವಲಂಬಿಸಿ ಸಂಗೀತ ಪಥದಲ್ಲಿ ಮುಂದುವರಿದ ಹಿರಿಯ ಖ್ಯಾತ ಗಾಯಕ, ಬೋಧಕ, ಗ್ರಂಥಕರ್ತ ಹಾಗೂ ಪ್ರಾಂಶುಪಾಲರು ಆಗಿದ್ದರು. ಇವರು ತಮ್ಮ ಹಲವು ದಶಕಗಳ ಸಂಗೀತಾನುಭವ, ಸಂಗೀತಪಥದಲ್ಲಿ ಮುಂದುವರಿದ ಕಲಾ ಜೀವನದ ಕತೆಯನ್ನು ಕುರಿತು ಬರೆದಿದ್ದಾರೆ. ಸ್ವತಃ ಬರೆದ ಆತ್ಮಕತೆಯಲ್ಲ. ಸ್ವತಃ ಹೇಳಿ ಬರೆಸಿದ ಆತ್ಮಕತೆ.

ಸಂಗೀತ ಪಥದಲ್ಲಿ ನಡೆದು ತಮ್ಮ ಜೀವನವನ್ನು ಹೇಗೆ ರೂಪಿಸಿಕೊಂಡರು. ಆಗಿನ ಅತ್ಯಂತ ಹಿರಿಯ ಸಂಗೀತ ವಿದ್ವಾಂಸರ ಅನ್ಯೂನ್ಯ ಸಹಚರ್ಯದಿಂದ ಹೇಗೆ ಪ್ರಭಾವಿತರಾದರು. ಅವರ ಜ್ಞಾನ ಪಿಪಾಸೆ ಹಿರಿಯ ಕಲಾವಿದರ ಔದಾರ್ಯ, ಆಗಿನ ಸಂಗೀತದ ಸ್ವರೂಪ ಇತ್ಯಾದಿ ವಿಷಯಗಳನ್ನು ನಿದರ್ಶನಗಳ ಸಹಿತ ತಮ್ಮ ನೆನಪಿನ ಆಳದಿಂದ ಹೆಕ್ಕಿ ತೆಗೆದಿದ್ದಾರೆ. ಇದಲ್ಲದೆ ಸಂಗೀತವನ್ನೇ ನಂಬಿದ್ದ ಕೆಲವು ಕಲಾವಿದರ ಬದುಕು ಬವಣೆ, ಸಾಧನೆ, ಸಂಕಷ್ಟ ಇಂತಹವರಿಗೆ ಅಧಿಕಾರದಲ್ಲಿದ್ದ ಕೆಲವರಿಂದ ಆದ ಅನ್ಯಾಯ ಇವೆಲ್ಲವನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ನಿವೃತ್ತರಾದ ನಂತರ ಹಲವು ವರ್ಷಗಳ ಕಾಲ ತಮ್ಮ ಮಕ್ಕಳೊಡನೆ ಅಮೇರಿಕದಲ್ಲಿದ್ದ ಜೀವನ, ವಿದೇಶಗಳ ಪರ್ಯಟನ ಇವೆಲ್ಲವೂ ಸಂಗ್ರಹವಾಗಿರುವುದು ರೋಚಕವಾಗಿದೆ.

ಮೈಸೂರು ಲಲಿತ ಕಲಾ ಕಾಲೇಜಿನ ಪ್ರಾಂಶುಪಾಲ ವೃತ್ತಿಯಿಂದ ನಿವೃತ್ತರಾದ ಮೇಲೆ 1988ರಲ್ಲಿ ಹೃದಯಘಾತವಾದಾಗ ಯು.ಎಸ್.ಎ.ನಲ್ಲಿ ನೆಲೆಸಿದ್ದ ಮಗ ಬಂದು ನೋಡಿ ವೈದ್ಯಕೀಯ ಚಿಕಿತ್ಸೆಗಾಗಿ ಯು.ಎಸ್.ಎಗೆ ಕರೆದುಕೊಂಡು ಹೋದರು. ಗುಣಮುಖವಾದ ಮೇಲೆ ಮೈಸೂರಿಗೆ ಹಿಂತಿರುಗಿ ಮೂರ್‍ನಾಲ್ಕು ತಿಂಗಳು ಇಲ್ಲಿದ್ದು ನಂತರ ಯು.ಎಸ್.ಎ.ಗೆ. ಹೀಗೆ ಒಟ್ಟಿನಲ್ಲಿ ಇಪ್ಪತ್ತು ವರ್ಷಗಳ ಕಾಲದಷ್ಟು ಅಲ್ಲಿ ವಾಸಮಾಡಿದ್ದಾರೆ. ಈ ಕಾಲದಲ್ಲಿ ಅವರು ತಾವೇ ಹೇಳಿರುವಂತೆ 'ಒಬ್ಬ ಸಾಮಾನ್ಯ ಸಂದರ್ಶಕನು ಯು.ಎಸ್.ಎ.ಯಲ್ಲಿ ಅನುಭವಿಸುವುದಕ್ಕಿಂತ ಹೆಚ್ಚಾಗಿ ಮೌಲ್ಯಗಳನ್ನು ಜೀವನದ ಅನುಭವಗಳನ್ನೂ ಪಡೆದಿದ್ದೇನೆ, ನೋಡಿದ್ದೇನೆಂದು ಅವರು ಹೇಳಿದ್ದು ಸತ್ಯವೆನಿಸುತ್ತದೆ. 1987ರಲ್ಲಿ ಸ್ಯಾನ್ ಡಿಯಾಗೋವಿನಲ್ಲಿ ಪ್ರಥಮ ಗಾಯನ ಕಚೇರಿಯನ್ನು ಜರುಗಿಸಿದರು. ಲಾಸ್ ಏಂಜೆಲೀಸ್‌ನಲ್ಲಿ ನೆಲೆಸಿದ್ದ ಹಿರಿಯ ಮಗಳು ಮನೆಯಲ್ಲಿದ್ದಾಗ ಅಲ್ಲಿಯ ಪ್ರಸಿದ್ಧ ದಕ್ಷಿಣ ಭಾರತೀಯ ಸಂಗೀತ

ಸಂಸ್ಥೆಯ ಆಶ್ರಯದಲ್ಲಿ ಜರುಗಿದ ಟಿ.ಎನ್.ಕೃಷ್ಣನ್‌ರ ತನಿ ಪಿಟೀಲು ಕಚೇರಿ ಕೇಳಿ ಅದರಲ್ಲಿ ಭಾಗವಹಿಸಿ ತಾವು ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ.

ಓಹಿಯೋವಿನ ಡೇಟ್ರಾಡ್‌ನಲ್ಲಿ ನೆಲೆಸಿದ್ದ ಕೊನೆಯ ಮಗಳು ರಮಾ ಭೌತಶಾಸ್ತ್ರದಲ್ಲಿ ಪಿ.ಎಚ್.ಡಿ, ಅಳಿಯ ಕೆ.ಎಸ್.ಶ್ರೀನಿವಾಸನ್ ಏರೋನಾಟಿಕ್ಸ ಮತ್ತು ಕಂಪ್ಯೂಟರ್ ವಿಜ್ಞಾನದಲ್ಲಿ ಹಲವು ಸ್ನಾತಕೋತ್ತರ ಪದವೀಧರರು ಅಲ್ಲದೆ ಎಂ.ಎಸ್ ಪದವಿಗಾಗಿ ಓದುತ್ತಿದ್ದರು. ಇದನ್ನು ನೋಡಿದರೆ ಹೆಚ್ಚಿನ ವಿದ್ಯಾಭ್ಯಾಸ ಪಡೆದು ಅದಕ್ಕೆ ತಕ್ಕಂತೆ ಕೆಲಸವನ್ನು ಅರಿಸಿಕೊಂಡು ವಿದೇಶಗಳಿಗೆ ಹೋಗುವುದು ಅಂದರೆ ಪ್ರತಿಭಾ ಪಲಾಯನವನ್ನು ನೋಡಬಹುದು. ಅಲ್ಲಿ ಉದ್ಯೋಗವನ್ನು ಮಾಡುತ್ತಾ ಇನ್ನೂ ಉನ್ನತ ಶಿಕ್ಷಣ ಪಡೆದು ಅದಕ್ಕೆ ತಕ್ಕ ವೃತ್ತಿ ಆಯ್ದುಕೊಂಡು ಶಾಶ್ವತವಾಗಿ ಅಲ್ಲೇ ನೆಲೆಸುತ್ತಾರೆ.

ಲೇಖಕರು ಇಪ್ಪತ್ತು ವರ್ಷಗಳ ಕಾಲದಿಂದಲೂ ನೋಡಿದ ಅಮೇರಿಕಾದಲ್ಲಿ ಸಂಗೀತ ಕಚೇರಿಯನ್ನು ಯಾವ ರೀತಿ ವ್ಯವಸ್ಥೆಗೊಳಿಸುತ್ತಾರೆ ಮತ್ತು ಅವು ಹೇಗೆ ಜರುಗುತ್ತವೆ ಎಂಬುವುದನ್ನು ಸಂಕ್ಷಿಪ್ತವಾಗಿ ಸ್ಪಷ್ಟವಾಗಿ ತಿಳಿಯುವಂತೆ ಹೇಳಿದ್ದಾರೆ. ನ್ಯೂಯಾರ್ಕ್, ಕ್ಯಾಲಿಪೋರ್ನಿಯಾ, ಟೋರಾಂಟೋ, ನ್ಯೂಜೆರ್ಸಿ, ಕ್ಲೀವ್ ಲ್ಯಾಂಡ್ ಇತ್ಯಾದಿ ಸ್ಥಳಗಳಲ್ಲಿದ್ದ ಕೆಲವು ಪ್ರಭಾವಶಾಲಿ ವ್ಯಕ್ತಿಗಳು ಸಂಗೀತ ಕಚೇರಿಗಳ ವ್ಯವಸ್ಥೆಗೊಳಿಸುತ್ತಾರೆ. ಇವರು ತಮ್ಮ ಪ್ರಭಾವದ ವಲಯದಲ್ಲಿ ತಮಗೆ ಇಷ್ಟವಾದ ಕಲಾವಿದರ ಸರಣಿ ಕಚೇರಿಗಳನ್ನು ಏರ್ಪಡಿಸುತ್ತಾರೆ. ಭೇಟಿ ನೀಡುವ ಕಲಾವಿದರ ಕಚೇರಿಗಳಿಂದ ಉತ್ಪತ್ತಿಯಾಗುವ ವರಮಾನದ ಒಂದು ಭಾಗವು ಏರ್ಪಡಿಸುವ ಸಂಸ್ಥೆಗೆ ಹೋಗುತ್ತದೆ. ಬೇರೆ ಬೇರೆ ನಗರಗಳಲ್ಲಿರುವ ಸಭೆಗಳು ಸಾಂಸ್ಕೃತಿಕ ಪ್ರವಾಸದ ವಿವರ ಪಟ್ಟಿಯನ್ನು ಗೊತ್ತು ಮಾಡಲು ಸಹಕಾರ ನೀಡುತ್ತವೆ. ಕಲಾವಿದರಿಗೆ ಗೌರವ ಸಂಭಾವನೆಯನ್ನು ನೀಡುತ್ತಾರೆ. ಇಲ್ಲಿ ಸಂಗೀತ ಕಚೇರಿಗಳನ್ನು ಏರ್ಪಡಿಸುವವರ ಕ್ರಿಯಾಶೀಲತೆಯನ್ನು ಲೇಖಕರು ಮೆಚ್ಚಿಕೊಂಡಿದ್ದಾರೆ.

ಅಮೇರಿಕಾದಲ್ಲಿ ಎಲ್ಲಿ ಹಿರಿಯ ನಾಗರಿಕರು ಫೆಡರಲ್ ಮತ್ತು ರಾಜ್ಯಗಳ ವೈದ್ಯಕೀಯ ವಿಮೆ (ಇನ್ಸೂರೆನ್ಸ) ಪಡೆಯುತ್ತಾರೆ. ಇದು ಅವರ ಆಸ್ಪತ್ರೆಯ ಖರ್ಚು, ವೈದ್ಯರ ಖರ್ಚು ಮತ್ತು ಔಷಧಿಗಳ ಖರ್ಚನ್ನು ಒಳಗೊಂಡಿರುತ್ತದೆ. ಈ ಎಲ್ಲ ಅನುಕೂಲಗಳನ್ನು ಲೇಖಕರು ಅನುಭವಿಸಿದ್ದು ಇಲ್ಲಿ ಮಾನವನ ಜೀವಕ್ಕೆ ಎಷ್ಟು ಬೆಲೆ ಕೊಡುತ್ತಾರೆ ಎಂಬುದನ್ನು ಕಂಡುಕೊಂಡಿದ್ದಾರೆ. ವ್ಯಕ್ತಿಗೆ ಇನ್ಸೂರೆನ್ಸ್ ಇರಲಿ,

ಇಲ್ಲದಿರಲಿ ಆ ವ್ಯಕ್ತಿಯನ್ನು ಬದುಕಿಸಲು ಸರ್ವಪ್ರಯತ್ನವನ್ನು ಮಾಡುತ್ತಾರೆ. "ಅವರು ಹೆಚ್ಚು ಕಡಿಮೆ ಎಲ್ಲ ವಿಷಯಗಳಲ್ಲಿ ಸ್ವಯಂಪೂರ್ಣವಾದ ಸಮಾಜ ಮತ್ತು ನಾಗರೀಕತೆಯನ್ನು ಸೃಷ್ಟಿಸಿದ್ದಾರೆ ಎಂದು ಧೈರ್ಯವಾಗಿ ಹೇಳುತ್ತೇನೆ" ಎನ್ನುವ ಲೇಖಕರ ಮಾತುಗಳು ಪ್ರಭಾವಪೂರ್ಣವಾಗಿವೆ.

**ಬೆಂಕಿಯಲ್ಲಿ ಅರಳಿದ ಹೂವು–ಡಾ॥ಬಿ.ಎಸ್. ಸ್ವಾಮಿ :**

ಆತ್ಮಕಥನವನ್ನು ನಿರೂಪಿಸುವ ಕೃತಿ ಜೀವನದಲ್ಲಿ ಕಂಡುಂಡ ಸಹಿ–ಕಹಿ–ರೋಮಾಂಚಕ ಅನುಭವಗಳ ರಸಸಾರವಾಗಿದೆ. ಇದು ಸಂಪೂರ್ಣ ಕೃತಿಯಲ್ಲ. ಲೇಖಕರು ಇನ್ನು ಬದುಕಿದ್ದಾರೆ. ಬದುಕಿರುವಷ್ಟು ದಿನಗಳಲ್ಲಿ ಕಂಡುಂಡ ಅನುಭವಗಳನ್ನು ಚಿತ್ರಿಸಿದ್ದಾರೆ. ಈ ಕಾಲದಲ್ಲಿ ಕೈಗೊಂಡ ವಿದೇಶಿ ಪ್ರವಾಸದ ಅನುಭವ ಇನ್ನೂ ವಿಶೇಷವಾಗಿದೆ. ಎರಡು ಸಲ ಅಮೇರಿಕಾ ಪ್ರವಾಸ ಮಾಡಿ ಅಗಾಧ ಅನುಭವ ಪಡೆದಿದ್ದಾರೆ. ಮೂರು ತಿಂಗಳು ಮಗನ ಮನೆಯಲ್ಲಿದ್ದು ಅಮೇರಿಕಾದ ಐದು ರಾಜ್ಯಗಳ ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಭೇಟಿ ಮಾಡಿದ್ದಾರೆ.

ಲೇಖಕರೆ ಹೇಳುವಂತೆ "ಅಮೆರಿಕಾ ಸುಂದರ ಹಾಗೂ ಅದ್ಭುತ ದೇಶ ಕಣ್ಣಿಗೆ ಹಬ್ಬ ನೀಡುವ ಬೀಡು. ಅತ್ಯದ್ಭುತ ದೃಶ್ಯಗಳು! ಪ್ರವಾಸಿಗಳಿಗೆ ಸಂಪತ್ತು, ಬೆಟ್ಟ, ಗುಡ್ಡ, ಮರಳು, ಕಾಡು, ಬಯಲು ಸೀಮೆಗಳಿಂದ ಕೂಡಿದ ನಾಡು, ಸಮುದ್ರ ಚುಂಬಿತ ಪ್ರದೇಶ, ಆಕರ್ಷಕ ಸರೋವರಗಳು, ಕ್ಯಾಲಿಪೋರ್ನಿಯಾ; ಅಮೇರಿಕಾ ಖಂಡದ ಕೊನೆಯ ತುದಿ ಕೊಲ್ಲಿ ದೇಶ"[3] (ಪುಟ 147). ನಮ್ಮ ದೇಶದ ಅನುಭವಕ್ಕಿಂತ ಭಿನ್ನವಾದ ವಿಸ್ಮಯವಾದ ಅನುಭವಗಳನ್ನು ಮೂಡಿಸುತ್ತಾರೆ.

ಅಮೆರಿಕಾದ ವಿವಿಧ ಜನಾಂಗಗಳು, ವಿವಿಧ ಸಂಸ್ಕೃತಿ, ಭಾಷೆಗಳು, ವಿವಿಧ ಆಚರಣೆಗಳು, ಆಚಾರ–ವಿಚಾರಗಳು, ಪ್ರಕೃತಿ ಸೌಂದರ್ಯದ ತಾಣಗಳು, ಕ್ರೀಡಾ ತರಂಗಗಳು, ಮನರಂಜನಾ ಮಾಧ್ಯಮಗಳು ಇವೆಲ್ಲವೂ ಲೇಖಕರ ಮನದ ಹಾಳೆಯಲ್ಲಿ ಅಚ್ಚೊತ್ತಿದಂತಿವೆ. ಅಮೆರಿಕಾವನ್ನು ನೋಡಿದಾಗ ಮೂಗಿನ ಮೇಲೆ ಬೆರಳಿಡುವಷ್ಟು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ.

ಹೊಲಗಳ ಮಧ್ಯೆ ಒಂದು ಎಸ್ಟೇಟಿನಂಥ ಮನೆ ಇಲ್ಲಿ ವ್ಯವಸಾಯ, ವಿಶಾಲವಾದ ಹೊಲಗಳು, ಟ್ರಾಕ್ಟರ್‌ನಲ್ಲೇ ಉಳುವುದು, ಆಳುಗಳ ಸಂಖ್ಯೆ ಕಡಿಮೆ. ದನಗಳ ದೊಡ್ಡಿಗಳಲ್ಲಿ ಸಾವಿರಾರು ಹಸುಗಳು, ದೊಡ್ಡ ದೊಡ್ಡ ಟ್ರಕ್ಕುಗಳು, ಹಸಿರು ಹುಲ್ಲು ತುಂಬಿದ ಮಾಟ, ಗುಡ್ಡದ ಬೆಟ್ಟಗಳು, ಹರಿವ ತೊರೆಗಳು,

[illegible]

ಅಲ್ಲಲ್ಲಿ ಕೆರೆಗಳು, ಸಾಸಿವೆ, ಬೆಳ್ಳುಳ್ಳಿ, ದ್ರಾಕ್ಷಿ, ಕ್ಯಾರೆಟ್, ಆಫ್ರಿಕಾಟ್, ಬೆಳೆ ಬೆಳೆದು ನಿಂತ ಹಸಿರು ಹೊಲಗಳು, ತೋಟಗಳು, ಡ್ರಿಪ್ ಇರಿಗೇಷನ್‌ನಿಂದ ವ್ಯವಸಾಯ, ಅಲ್ಲಲ್ಲಿ ವಿಶ್ರಾಂತಿ ಪಡೆಯಲು 'Rest room'ಗಳು. ಹೀಗೆ ಲೇಖಕರು ಅಮೇರಿಕಾದ ಹಳ್ಳಿಗಳ ಚಿತ್ರವನ್ನು ನೀಡಿದ್ದಾರೆ. ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಂಡು ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ. ಸಾಂಪ್ರದಾಯಿಕ ಪದ್ಧತಿ ಬೇಸಾಯ ಬಿಟ್ಟು ಅಮೇರಿಕನ್ನರಂತೆ ನಾವು ವೈಜ್ಞಾನಿಕ ಅಂಶಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳುವುದು ಒಳ್ಳೆಯದೆನಿಸುತ್ತದೆ.

ನೆವಾಡ ರಾಜ್ಯದಲ್ಲಿ ಲಾಸ್‌ವೇಗಸ್ ಇದೆ. ಇದು ಮರಳು ಕಾಡಿನಲ್ಲಿದೆ, ಇಲ್ಲಿ ಮರಗಳಲ್ಲಿ ಕುರುಚಲು ಗಿಡ ಬೆಳೆದಿರುತ್ತವೆ. ಬರಡು ಪ್ರದೇಶದಂತಿದೆ ಇಟಲಿಯ ಭೂಗತ ದೊರೆಗಳು ಮೊದಲು ಹಣವನ್ನು ತೊಡಗಿಸಿ ಆಕರ್ಷಿಸುವಂತೆ ಮಾಡಿದರು. ಈ ಮನರಂಜನಾ ಕೇಂದ್ರ ನೋಡಿದರೆ ಎಂಥವರಿಗೂ ಸಂತೋಷವಾಗುತ್ತದೆ. ಏಕೆಂದರೆ ಇದು ಜೂಜಿನ ಮೋಜಿನ ಸ್ಥಳ. ಇದನ್ನು ನೋಡಲು ವಿಶ್ವದಿಂದ ಮೂವತ್ತು ಮಿಲಿಯನ್ ಪ್ರವಾಸಿಗರು ಬರುತ್ತಾರೆ. ಇದೇ ರೀತಿ ಕ್ಯಾಲಿಫೋರ್ನಿಯಾದ ಅಮ್ಯೂಸ್‌ಮೆಂಟ್ ಪಾರ್ಕ್ ಆಕರ್ಷಕವಾಗಿದ್ದು ಮನರಂಜನಾ ಕ್ರೀಡಾ ಸ್ಥಳವಾಗಿದೆ. ಇಲ್ಲಿ ಹದಿನೆಂಟು ದೊಡ್ಡ ರೈಡ್‌ಗಳಿವೆ. ನೃತ್ಯ, ಸಂಗೀತ, ಮನರಂಜನಾ ಕಾರ್ಯಕ್ರಮಗಳು ನಡೆಯುತ್ತವೆ. ಇಲ್ಲಿ ಎಲ್ಲಾ ರೀತಿಯ ಜನರೂ ಬರುತ್ತಾರೆ. ಇನ್ನೊಂದು ಮುಖ್ಯ ಮನರಂಜನಾ ಕೇಂದ್ರ ಡಿಸ್ನಿಲ್ಯಾಂಡ್. ಇಪ್ಪತ್ತೈದು ಎಕರೆ ವ್ಯಾಪ್ತಿಯ ಸ್ಥಳ ಇದನ್ನು ನೋಡಲು ಒಂದು ದಿನ ಸಾಲದು ತಿಂಗಳುಗಟ್ಟಲೆ ಪಾಸ್ ಮಾಡಿಸಿಕೊಂಡು ನೋಡುತ್ತಾರೆ. ಮಕ್ಕಳ ಜೊತೆ ದೊಡ್ಡವರಿಗೂ ಮನರಂಜನೆ. ಇಲ್ಲಿ ನಾನಾ ರೀತಿಯ ಜನರ ದರ್ಶನ, ಬೇರೆ ಬೇರೆ ದೇಶಗಳ ಜನರ ದರ್ಶನ, ಕಲಾ ಪ್ರದರ್ಶನಗಳು, ದೋಣಿಯಲ್ಲಿ ತೇಲುತ್ತಾ, ಕುದುರೆ ಇಲ್ಲವೆ ಕೋಚ್‌ಗಳಲ್ಲಿ ಸುತ್ತುತ್ತಾ, ಕೇಕೆ ಹಾಕುತ್ತಾ ಆನಂದ ಪಡುತ್ತಾರೆ. ಹಾಲಿವುಡ್ಸ್ ಯುನಿವರ್ಸಲ್ ಸಿಟಿ, ಡಿಸ್ನಿಲ್ಯಾಂಡ್‌ಗಿಂತ ಒಂದು ಕೈ ಮಿಗಿಲು ಮತ್ತು ಆಕರ್ಷಕ ಹಾಲಿವುಡ್ ಸ್ಟುಡಿಯೋ ವಿಶ್ವದಲ್ಲೇ ಅತಿ ದೊಡ್ಡದು. ಇಲ್ಲಿ ಟೆಲಿವಿಷನ್ ಕೇಂದ್ರವಿದೆ. ಒಂದು ಸಿನಿಮಾ ತೆಗೆಯಬೇಕಾದರೆ ಏನೇನು ಬೇಕೋ ಎಲ್ಲಾ ಸೌಲಭ್ಯಗಳಿವೆ. ಸಿನಿಮಾ ತೆಗೆದ ವಿಭಾಗದಲ್ಲಿ ಭೂಕಂಪ, ಜಲಪ್ರವಾಹದ ಅದ್ಭುತ ಲೋಕವನ್ನೇ ಕಾಣಬಹುದು. ದೋಣಿ ಮುಳುವುದು, ಜಲಪಾತ, ಚರ್ಚ್, ಹೋಟೆಲು, ಆಸ್ಪತ್ರೆ, ಬಸ್‌ಗಳು ನಿಜಕ್ಕೂ ಹೋಗುವಾಗ ರೋಮಾಂಚನಗಳನ್ನುಂಟು ಮಾಡುತ್ತವೆ. ಬೆಂಕಿ ಹತ್ತಿಸುವುದು, ನಂದಿಸುವುದು ಕುತೂಹಲ ಕೆರಳಿಸುತ್ತಾ ಹೊಸ ಅನುಭವವಾಗುತ್ತದೆ ಎನ್ನುವ ಲೇಖಕರಿಗೆ ಈ ಎಲ್ಲಾ ಮನರಂಜನಾ ಕೇಂದ್ರಗಳು ಎಂದೆಂದೂ ಮರೆಯಲಾಗದ ದೃಶ್ಯವಾಗಿ ಅವರ ಮಿದುಳ ಭಿತ್ತಿಯಲ್ಲಿ ಅಚ್ಚೊತ್ತಿವೆ.

ಇಲ್ಲಿ ನಾವು ಅಮೇರಿಕನ್ನರು ಮನರಂಜನಾ ಕೇಂದ್ರಗಳಿಗೆ ಕೊಡುವ ಪ್ರಾಮುಖ್ಯತೆಯನ್ನು ಕಾಣಬಹುದು. ವಿಶ್ವದ ಎಲ್ಲಾ ಜನರನ್ನು ಆಕರ್ಷಿಸುವಂತೆ ಮಾಡಿದ್ದಾರೆ. ಇದರಿಂದ ಸಾಕಷ್ಟು ಆದಾಯ ಮಾಡಿಕೊಳ್ಳುತ್ತಾರೆ. ಅಮೇರಿಕನ್ನರ ವ್ಯವಹಾರ ಜ್ಞಾನ ಮೆಚ್ಚುವಂತದ್ದು.

ಅಮೇರಿಕಾದ ಕನ್ನಡ ಕೂಟದಲ್ಲಿ ಮನರಂಜನಾ ಕಾರ್ಯಕ್ರಮಗಳನ್ನು ಆಗಾಗ ಏರ್ಪಡಿಸುತ್ತಾರೆ. ಭಾರತದಿಂದ ಬಂದ ಹೆಸರಾಂತ ಸಂಗೀತಗಾರರು, ಸಾಹಿತಿಗಳ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ಭಾರತದ ಸಾವಿರಾರು ಜನರು ಬೆರೆಯುತ್ತಾರೆ. ತಮ್ಮ ಅನಸಿಕೆ, ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಭಾರತದ ವಿವಿಧ ರಾಜ್ಯದ ಜನರಾದರು ಅಲ್ಲಿ ತಾವೆಲ್ಲಾ ಒಂದೇ ಕುಟುಂಬದವರಂತೆ ಅನ್ಯೋನ್ಯವಾಗಿರುತ್ತಾರೆ ಎನ್ನುವುದರಿಂದ ನಾವು ಅಲ್ಲಿನ ಮಾನವೀಯ ಪ್ರೀತಿಯನ್ನು ಕಾಣಬಹುದು.

ಲೇಖಕರಿಗೆ ಅಮೇರಿಕನ್ನರ ಆಹಾರ ಪದ್ಧತಿ ಸೇರದೆ ತಾವು ಎಲ್ಲಿಗೆ ಹೋಗಲಿ ಎರಡು-ಮೂರು ದಿನಗಳಿಗೆ ಆಗುವ ತಿಂಡಿ, ಊಟ ಕೊಂಡೊಯ್ಯುತ್ತಿದ್ದೆವು. ಪುಳಿಯೋಗರೆ, ಮೊಸರನ್ನು, ಚಕ್ಕುಲಿ, ಉಪ್ಪಿಟ್ಟು, ಸಿಹಿತಿಂಡಿ, ಹಣ್ಣುಗಳನ್ನು ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಹೋಗುತ್ತಿದ್ದೆವು. 'ನಾನು ಯಾವ ಹೋಟೆಲ್‌ನಲ್ಲೂ ತಿನ್ನುತಿರಲ್ಲಿಲ್ಲ' ಎಂದು ತಾವೇ ಹೇಳಿದ್ದಾರೆ.

ಅಮೇರಿಕಾದಲ್ಲಿದ್ದರೆ; ಪ್ರವಾಸ ಮಾಡುತ್ತಿರಬೇಕು, ಮಾತಿನವರಿರಬೇಕು, ಮನರಂಜನೆ ಇರಬೇಕು, ಕೈ ತುಂಬಾ ಕೆಲಸವಿರಬೇಕು, ಬೇಕಾದ ಊಟ ತಿಂಡಿ ಸಿಗುತ್ತಿರಬೇಕು. ಹಾಗಿದ್ದರೆ ಮಾತ್ರ ನಮ್ಮ ದೇಶದಲ್ಲಿದ್ದಂತೆ ಹಾಯಾಗಿ ಇರಬಹುದು ಇಲ್ಲದೆ ಹೋದರೆ ಅಮೇರಿಕಾದಲ್ಲಿ ಕಾಲ ಕಳೆಯುವುದು ತುಂಬಾ ಕಷ್ಟವೆಂದು ಹೇಳಿದ್ದಾರೆ. ಪ್ರವಾಸದ ವೇಳೆಯನ್ನು ಬಿಟ್ಟು ಉಳಿದ ಸಮಯದಲ್ಲಿ ಲೇಖಕರು ಕಾಲ ಕಳೆಯಲು ಶ್ರಮಪಟ್ಟಿರುವ ಬೇಸರವನ್ನು ನಾವು ಕಾಣಬಹುದು.

"ಅಮೇರಿಕಾ ನಿಜಕ್ಕೂ ಸುಂದರ, ಸ್ವಚ್ಛ ವಿಶಾಲವಾದ, ಶಿಸ್ತಿನ ಜನರಿಂದ ಕೂಡಿದ ಪ್ರದೇಶ, ಸಂಪದ್ಭರಿತ ರಾಷ್ಟ್ರ. ಆದರೆ ನಮ್ಮ ಭಾರತ ಅದಕ್ಕಿಂತ ಕಡಿಮೆ ಏನಿಲ್ಲ ಎಲ್ಲವೂ ಇದೆ. ಆದರೆ ಅಲ್ಲಿಯಂತೆ ವಿರಳ ಜನಸಂಖ್ಯೆಯಲ್ಲ. ಹೆಚ್ಚು ಜನಸಂಖ್ಯೆ, ಸ್ವಚ್ಛತೆ ಇಲ್ಲ, ವಿಶಾಲ ರಸ್ತೆಗಳಿಲ್ಲ, ಅಲ್ಲಿಯ ಜನಜೀವನವೇ ಬೇರೆ, ಇಲ್ಲಿಯ ಜನಜೀವನವೇ ಬೇರೆ, ಅಲ್ಲಿ ಏಕಾಂಗಿತನ ಕಾಡುತ್ತದೆ ಇಲ್ಲಿ ಸಂಘಜೀವನವಿದೆ. ಒಮ್ಮೆ ನೋಡಲು ಚೆನ್ನ, ಇಲ್ಲೇ ಇರಲು ಆಗದು." ಎಂಬ ಲೇಖಕರ ಈ

ಮಾತಿನಲ್ಲಿ ಪ್ರತಿಯೊಬ್ಬರಿಗೂ ಅವರವರ ದೇಶ, ಅವರವರ ಧರ್ಮ ಪ್ರಿಯವೆನಿಸುತ್ತದೆ, ದೊಡ್ಡದೆನಿಸುತ್ತದೆ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತದೆ. ಲೇಖಕರಲ್ಲಿ ಸ್ವದೇಶಕ್ಕೆ ಹಿಂತಿರುಗುವ ತುಡಿತವನ್ನು ಕಾಣುತ್ತೇವೆ. ಅಮೇರಿಕನ್ನರಂತೆ ನಾವು ಮುಂದಿದ್ದೇವೆ. ನಮ್ಮಲ್ಲಿ ಶಿಸ್ತು ಪರಿಪಾಲನೆ, ಸ್ವಚ್ಛತೆಗಳ ಬಗೆಗೆ ಗಮನ ಹರಿಸಿದರೆ ಯಾವ ಅಭಿವೃದ್ಧಿ ಹೊಂದಿದ ರಾಷ್ಟ್ರಕ್ಕಿಂತಲೂ ಕಡಿಮೆ ಎನಿಸುವುದಿಲ್ಲ.

ಲೇಖಕರ ಆತ್ಮಕಥನದಲ್ಲಿ ಮೂಡಿ ಬಂದ ಪ್ರವಾಸದ ಅನುಭವ ಹಂಚಿಕೆ ಓದುಗರಿಗೂ ಪ್ರವಾಸ ಮಾಡಿದ ಅನುಭವವಾಗುತ್ತದೆ. ಅಮೇರಿಕನ್ನರ ಜೀವನ ರೀತಿ-ನೀತಿ ಈ ಮೊದಲಾದವುಗಳ ಕುರಿತು ಯಾವುದೇ ಮಾಹಿತಿಯನ್ನು ನೀಡಿಲ್ಲ. ಪ್ರೇಕ್ಷಣೀಯ ಸ್ಥಳಗಳು, ಮನರಂಜನಾ ಸ್ಥಳಗಳ ಬಗೆಗೆ ಹೆಚ್ಚಾಗಿ ಭೇಟಿ ಕೊಟ್ಟು ಅವುಗಳ ಬಗೆಗೆ ಸಾಕಷ್ಟು ತಿಳಿಸಿದ್ದಾರೆ.

**ಪಾಪು-ಶಾ. ಮಂ. ಕೃಷ್ಣರಾಯ (ಡಾ: ಪಾಟೀಲ ಪುಟ್ಟಪ್ಪನವರ ಜೀವನ ಚರಿತ್ರೆ) :**

ಕರ್ನಾಟಕ ಮತ್ತು ಕನ್ನಡಕ್ಕಾಗಿ ಸಮರ್ಪಣಾ ಭಾವದಿಂದ ದುಡಿದವರಲ್ಲಿ ಪಾಟೀಲ ಪುಟ್ಟಪ್ಪನವರು ಒಬ್ಬರು. ಪತ್ರಿಕಾರಂಗದಲ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ. ಇಂತಹವರ ಬದುಕು ವಿಸ್ತಾರವಾದದ್ದು. ಅದನ್ನೆಲ್ಲ ತಮ್ಮ ಕಿರುಬೊಗಸೆಯಲ್ಲಿ ಹಿಡಿದಿಡಲು ಲೇಖಕ ಶಾ.ಮಂ. ಕೃಷ್ಣರಾಯ ಪ್ರಯತ್ನಿಸಿದ್ದಾರೆ. ಪಾಟೀಲ ಪುಟ್ಟಪ್ಪನವರಿಂದ ಪಡೆದ ಮಾಹಿತಿಗಳನ್ನು ಸಂಗ್ರಹಿಸಿ ಅವರ ಬದುಕಿನ ಚಿತ್ರವನ್ನು ಜೀವಂತಗೊಳಿಸಿದ್ದಾರೆ.

ತಮ್ಮ ಬದುಕಿನ ಕಾಲಾವಧಿಯಲ್ಲಿ ಪಾಟೀಲ ಪುಟ್ಟಪ್ಪನವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹಲವು ವಿದೇಶಗಳಿಗೆ ಹೋಗಿ ಬಂದಿದ್ದಾರೆ. ಅದರಲ್ಲಿ ಅಮೇರಿಕಾ ಮೊದಲು. ಕ್ಯಾಲಿಪೋರ್ನಿಯಾ ವಿಶ್ವವಿದ್ಯಾನಲಯದಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿಯಾಗಿ ಕಾಲಿಟ್ಟರು. "The individual, the state and the Press" ಎನ್ನುವ ವಿಷಯವನ್ನು ತಮ್ಮ ಪ್ರಬಂಧಕ್ಕೆ ಆಯ್ದುಕೊಂಡು ಅಧ್ಯಯನಕ್ಕೆ ತೊಡಗಿದರು. ಅದಕ್ಕೆ ಬೇಕಾದ ವಿವರಗಳನ್ನು ಪಡೆದುಕೊಳ್ಳಲು ಇತರರೊಂದಿಗೆ ಸಂಪರ್ಕ, ವ್ಯವಹಾರ ಮಾಡುವಾಗ, ಬಿಡುವಿನ ವೇಳೆಯಲ್ಲಿ ಹಲವು ಸ್ಥಳಗಳಿಗೆ ಭೇಟಿಕೊಟ್ಟಾಗ ಅವರಿಗಾದ ಅನುಭವವನ್ನು ಸ್ಪಷ್ಟವಾಗಿ, ಯಾವುದೇ ಮುಚ್ಚು ಮರೆಯಿಲ್ಲದೆ ತಿಳಿಸಿದ್ದಾರೆ. ಪಾಟೀಲ ಪುಟ್ಟಪ್ಪನವರು ತಮಗಾದ ಅನುಭವವನ್ನು ಓದುಗರಿಗೆ ನೇರವಾಗಿ ಹೇಳುತ್ತಿರುವಂತೆ ಲೇಖಕ ಶಾ.ಮಂ. ಕೃಷ್ಣರಾಯರು ತುಂಬಾ ಸೊಗಸಾಗಿ ನಿರೂಪಿಸಿದ್ದಾರೆ.

"ಪಾಟೀಲ ಪುಟ್ಟಪ್ಪ ಅಮೇರಿಕೆಯಲ್ಲಿ ಕಾಲಿಟ್ಟ ಆರಂಭದಲ್ಲಿ ಅಲ್ಲಿದ್ದ ಭಾರತೀಯ ವಿದ್ಯಾರ್ಥಿಗಳು, 'ನಿಮಗೆ ಬೇಕದ್ದರೆ ಒಂದು ಅಪಾರ್ಟಮೆಂಟ್ ವ್ಯವಸ್ಥೆ ಮಾಡಿ ಕೊಡುತ್ತೇವೆ' ಎಂದಾಗ 'ಬೇಡ ಭಾರತೀಯರೊಂದಿಗೆ ನಾನು ಜೀವನವಿಡೀ ಕಳೆಯಬೇಕು ಅಮೇರಿಕನ್‌ರೊಂದಿಗೆ ಕೆಲವು ದಿನ ಇರುವ ಅವಕಾಶ ಕೊಡಿ" ಎಂದು ಹೇಳಿದರಂತೆ. ಲೇಖಕರ ಈ ಮಾತಿನಿಂದ ಪಾಟೀಲ ಪುಟ್ಟಪ್ಪನವರಿಗಿದ್ದ ವಿಷಯ ಸಂಗ್ರಹಣೆ, ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವ ಹಂಬಲದ ಮೂಲಕ ಅವರಿಗಿರುವ ಕಲಿಕಾ ಕುತೂಹಲವನ್ನು ಕಾಣಬಹುದು.

ವಿಶ್ವವಿದ್ಯಾನಿಲಯದಿಂದ ಐದು ನಿಮಿಷದ ದಾರಿಯಲ್ಲಿ ಐದು 'ಕಾಮ್ ಸ್ಟಾಕ್ ಎವಿನ್ಯೂ' ಎಂಬ ಮನೆಯಲ್ಲಿ ಗಂಡ-ಹೆಂಡತಿ ಮೂವರು ಗಂಡು ಮಕ್ಕಳು; ಒಂದು ದಿನ ಊಟಕ್ಕೆ ಕುಳಿತಾಗ ಪಾಟೀಲ ಪುಟ್ಟಪ್ಪನವರು, ಚಿಕ್ಕ ಹುಡುಗನಿಗೆ 'ನೀನು ಮುಂದೆ ಏನಾಗಬೇಕೆಂದಿರುವೆ?' ಎಂದಾಗ 'ನಾನು ಅಮೇರಿಕಾದ ಅಧ್ಯಕ್ಷನಾಗುವೆ' ಎಂದು ತಕ್ಷಣ ಉತ್ತರಿಸಿದನಂತೆ. ಆ ಮನೆಯ ಮಕ್ಕಳು ಶಾಲೆಗೆ ಹೋಗುವ ಮೊದಲು ನೂರು ಮನೆಗೆ ಬೆಳಗ್ಗೆ ಪತ್ರಿಕೆಗಳನ್ನು ಮುಟ್ಟಿಸಿ ಶಾಲೆಗೆ ಹೋಗಬೇಕಾಗಿತ್ತು. ದುಡಿದು ಓದುವ ಕ್ರಮ ಅಲ್ಲಿ ಜಾರಿಯಲ್ಲಿದೆ. ವಿದ್ಯಾರ್ಥಿಗಳೇ ಕೆಫೆಟೇರಿ(ಹೋಟೆಲ್)ಗಳನ್ನು ನಡೆಸುತ್ತಿದ್ದರು. ತಿಂಡಿ-ತಿನಿಸುಗಳಿಗೆ ಅವರೇ ದರ ನಿಗಧಿ ಮಾಡುತ್ತಿದ್ದರು. ಅಲ್ಲಿ, ಪ್ರತಿಯೊಬ್ಬ ವಿದ್ಯಾರ್ಥಿ ಶ್ರಮವಹಿಸಿ ದುಡಿಯಬಾಕಾಗುತ್ತದೆ. ಹೆಚ್ಚು ಹೆಚ್ಚು ಗೃಹಕೆಲಸ (Home Work) ಕೊಡುತ್ತಿದ್ದರೂ, ವಿದ್ಯಾರ್ಥಿಯ ವಾರ್ಷಿಕ ಎಲ್ಲಾ ಚಟುವಟಿಕೆಗಳ ಮೇಲೆ ಅಂಕಗಳನ್ನು ನೀಡುವ ಪದ್ಧತಿಯಿದೆ. ಸ್ನಾತಕೋತ್ತರ ಶಿಕ್ಷಣದಲ್ಲಿ ಸೇಮಿನಾರ್ ಪದ್ಧತಿ ಇದ್ದೂ, ವಿದ್ಯಾರ್ಥಿಗಳೇ ಒಂದೊಂದು ವಾರ ಸೆಮಿನಾರ್‌ಗಳನ್ನು ನಡೆಯಿಸಿಕೊಡುತ್ತಾರೆ. ಆದರೆ ಭಾರತದಲ್ಲಿ ಇದಕ್ಕೆ ವ್ಯತಿರಿಕ್ತವಾಗಿದೆ. ಇಲ್ಲಿಯ ಶಿಕ್ಷಣ ಪದ್ಧತಿಯನ್ನು ಲೇಖಕರು ವಿಶ್ಲೇಷಿಸುತ್ತಲೆ ಅಮೇರಿಕೆಯ ಯುನಿವರ್ಸಿಟಿಗಳು ಜನಪ್ರಿಯವಾಗಲು ಕಾರಣಗಳನ್ನು ನೀಡುತ್ತಾರೆ.

1. ಪಾರ್ಕಿಂಗ್ ಏರಿಯಾ, 2. ಸ್ಪೋರ್ಟ್ಸ್ ಕ್ರೇಜ್ 3. ಎಕ್ಸಲೆಂಟ್ ಸ್ಟಾಫ್ ಇಷ್ಟನ್ನು ಅವಶ್ಯವಾಗಿ ಹೊಂದಿರತಕ್ಕದ್ದು. ಇಲ್ಲವಾದರೆ ವಿದ್ಯಾರ್ಥಿಗಳು ಹೋಗುವುದಿಲ್ಲ. ಎಲ್ಲಾ ಸೌಕರ್ಯವನ್ನು ಹೊಂದಿದ್ದು, ಶಿಕ್ಷಣ ಸಂಸ್ಥೆಗಳ ಆಡಳಿತ ವೈಖರಿ ನಿಯಮಾವಳಿಗಳು ವ್ಯವಸ್ಥಿತವಾಗಿವೆ ಎಂದು ಲೇಖಕರು ಶ್ಲಾಘನೆ ಮಾಡಿದ್ದಾರೆ.

ಕ್ಯಾಲಿಪೋರ್ನಿಯಾ ವಿಶ್ವವಿದ್ಯಾನಿಲಯದ ಜನ್ರಲಿಸಂ ವಿಧಾನದ ಡೀನ್ ಜೋಸೆಫ್ ಬ್ರಾಂಟ ಭಾರತದಿಂದ ಬಂದ ಪುಟ್ಟಪ್ಪನವರನ್ನು ಪ್ರೀತಿ-ವಿಶ್ವಾಸದಿಂದ ಕಾಣುತ್ತಿದ್ದರು ಅಲ್ಲದೆ ಅವರ ಮನಗೆ ಊಟಕ್ಕೆ ಆಹ್ವಾನವಿತ್ತಾಗ ಪುಟ್ಟಪ್ಪ ಅತಿಥಿಯಾಗಿ ಹೋದಾಗ ಅವರು ಸತ್ಕಾರಗಳಿಂದ ಕಾಣುತ್ತಾರೆ. ಅಲ್ಲದೆ "ಪುಟ್ಟಪ್ಪನವರು ಭಾರತಕ್ಕೆ ಹೊರಡಲು ಮೂರು ತಿಂಗಳಿದೆಯೆನ್ನವಾಗ; ಆ ದೇಶದ ನಲವತ್ತು ಜನ ಪ್ರಮುಖರಿಗೆ ಪತ್ರ ಬರೆದುಕೊಟ್ಟು ಅವರನ್ನೆಲ್ಲ ಕಂಡು ಬಾ ಎಂದು ಆದೇಶಿಸಿದ್ದರು. ಅವರಲ್ಲಿ ಸುಪ್ರೀಂಕೋರ್ಟ್ ನ್ಯಾಯಾಧೀಶರು ಸೇರಿದಂತೆ ಅನೇಕ ಗಣ್ಯರು, ರಾಜಕಾರಣಿಗಳು, ಉದ್ಯಮಿಗಳು, ಶಿಕ್ಷಣ ತಜ್ಞರೇ ಮೊದಲಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದವರಿದ್ದರು."[4] ಭಾರತದಿಂದ ಬಂದವರು ಅಮೇರಿಕವನ್ನು ಅರಿತುಕೊಳ್ಳಲಿ ಎಂಬ ಡೀನ್‌ರವರ ಉದ್ದೇಶ ವಿವೇಚನಾಯುಕ್ತವಾಗಿದೆ. ಅದರಂತೆ ಪುಟ್ಟಪ್ಪನವರು ಅವರೆಲ್ಲರನ್ನು ಕಂಡು ಮಾತನಾಡಿಸಿ, ತಮ್ಮ ಪರಿಚಯವನ್ನು ಅವರಿಗೆಲ್ಲಾ ಮಾಡಿಕೊಟ್ಟಿದ್ದರಿಂದ ಅಮೇರಿಕೆಯ ಸಮಸ್ತ ಬದುಕಿನ ಚಿತ್ರ ಕಣ್ಣಮುಂದೆ ಹಾದು ಹೋಗಿದೆ ಎಂದು ಪುಟ್ಟಪ್ಪನವರ ಸಂತೃಪ್ತಭಾವವನ್ನು ಲೇಖಕರು ಈ ಮೂಲಕ ತಿಳಿಸಿಕೊಡುತ್ತಾರೆ.

**ಸ್ವಾಮಿ ವಿವೇಕಾನಂದ-ಜೀವನ ಚರಿತ್ರೆ - ರಾಮಕೃಷ್ಣಾಶ್ರಮ** : ಸ್ವಾಮಿ ವಿವೇಕಾನಂದರ ಕುರಿತು ರಾಮಕೃಷ್ಣಾಶ್ರಮದವರು ಸಾಕಷ್ಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅಂತಹದರಲ್ಲಿ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯು ಒಂದು. ಸ್ವಾಮಿ ವಿವೇಕಾನಂದರು ತಮ್ಮ ಜೀವಿತದ ಕಾಲಾವಧಿಯಲ್ಲಿ ಹಲವು ದೇಶಗಳಿಗೆ ಭೇಟಿ ಕೊಟ್ಟಿದ್ದಾರೆ ಅವುಗಳಲ್ಲಿ ಅಮೇರಿಕಾ ಕೂಡಾ ಒಂದು. ಅಮೇರಿಕಾದಲ್ಲಿ ಉಪನ್ಯಾಸ ನೀಡಲು ಕೆಲವು ಕಾಲ ತಂಗಿದ್ದಾಗ ಆದಂತಹ ಅನುಭವವನ್ನು ನಿರೂಪಿಸಿದ್ದಾರೆ.

ಸ್ವಾಮೀಜಿ ತಮ್ಮ ಗುರುಬಾಯಿ ಮತ್ತು ಅಮೇರಿಕಾದಿಂದ ಬಂದ ಶಿಷ್ಯರೊಡನೆ ಅಮೇರಿಕಾಕ್ಕೆ ಹೊರಟಿದ್ದರು. ಇವರು ನ್ಯೂಯಾರ್ಕ್ ಮುಟ್ಟಿದ ದಿನ ಮಧಾಹ್ನವೇ ಅಲ್ಲಿಂದ ಸುಮಾರು ನೂರೈವತ್ತು ಮೈಲಿ ದೂರದಲ್ಲಿ ಹಡ್ಸನ್ ನದೀ ತೀರದಲ್ಲಿ ರಿಡ್ಜ್ ತಿ ಮೇನರ್ ಎಂಬ ಗ್ರಾಮದ ಮನೆಗೆ ಲೇಟ್ ದಂಪತಿಗಳೊಂದಿಗೆ ಒಂದು ತಿಂಗಳು ಇದ್ದರು ಈ ಒಂದು ತಿಂಗಳ ಅವಧಿಯಲ್ಲಿ ಹಲವು ಉಪನ್ಯಾಸಗಳನ್ನು ನೀಡಿದರು. ಅಮೇರಿಕಾದಲ್ಲಿ ಉಪನ್ಯಾಸ ಮಾಡುತ್ತಿದ್ದ ಅಭೇದಾನಂದರನ್ನು ತಮ್ಮಲ್ಲಿಗೆ ಕರೆಸಿಕೊಂಡ ವೇದಾಂತ ಪ್ರಚಾರದ ಕಾರ್ಯ ಹೇಗೆ ಹಬ್ಬುತ್ತಿದೆ ಎಂಬುದನ್ನು ಅವರಿಂದಲೇ ತಿಳಿಸಿಕೊಟ್ಟರು. ಈ ಸಂಘಕ್ಕೆ ನ್ಯೂಯಾರ್ಕ್‌ನಲ್ಲಿ ತನ್ನದೆ ಆದ ಕಟ್ಟಡ ಇದೆ. ಈ ವೇದಾಂತ ಸೊಸೈಟಿಯಲ್ಲಿಯೂ, ಅಭೇದಾನಂದರ

ಕೆಲಸಗಳೊಡನೆ ಇವರು ಬಾಗಿಯಾಗಿರುತ್ತಿದ್ದರು. ಅಲ್ಲದೆ ವೇದಾಂತ ತತ್ವ, ಬ್ರಹ್ಮಾಂಡ, ಕರ್ಮ ಮತ್ತು ಅದರ ರಹಸ್ಯ, ಮನಸ್ಸಿನ ಶಕ್ತಿ ತೆರದ ರಹಸ್ಯ ಮುಂತಾದ ವಿಷಯಗಳ ಮೇಲೆ ಮಾತನಾಡಿ ಗಮನಸೆಳೆದರು.

ಲಾಸ್ ಏಂಜಲೀಸ್ ಎಂಬಲ್ಲಿ Home of Truth ಎಂಬ ಸಂಘದಿಂದ ಆಮಂತ್ರಣ ಬಂದಾಗ ಅಲ್ಲಿ ಸುಮಾರು ಒಂದು ತಿಂಗಳು ಇದ್ದು ಪ್ರವಚನಗಳನ್ನು ಕೊಟ್ಟರು. ಲಾಸ್ ಏಂಜಲೀಸ್‌ನಿಂದ ಓಕಲೆಂಡ್‌ಗೆ ಹೋಗಿ ಅಲ್ಲಿ ರೆವೆರೆಂಡ್ ಡಾಕ್ಟರ್ ಬೆಂಜಮೀನ್ ಫೆ ಎಂಬುವರ ಅತಿಥಿಗಳಾಗಿದ್ದಾಗ ಆ ಚರ್ಚಿನಲ್ಲಿ ಎಂಟು ಉಪನ್ಯಾಸಗಳು ನೀಡಿದರು. ಆ ಉಪನ್ಯಾಸಕ್ಕೆ ಸಹಸ್ರಾರು ಜನ ಬರುತ್ತಿದ್ದರು. ಅವರ ಉಪನ್ಯಾಸಗಳ ಸಾರಾಂಶವನ್ನೆಲ್ಲಾ ಆ ದೇಶದ ವೃತ್ತಪತ್ರಿಕೆಗಳು ಕೊಡುತ್ತಿದ್ದವು. ಹಲವರ ಕೋರಿಕೆಯ ಮೇಲೆ ಸ್ಯಾನ್‌ಫ್ರಾನ್ಸಿಸ್ ಹೋಗಿ ಹಲವು ಉಪನ್ಯಾಸವನ್ನು ನೀಡಿ ಜನರಲ್ಲಿ ವೇದಾಂತದ ಮೇಲೆ ಆಸಕ್ತಿಯನ್ನು ಕೆರಳಿಸಿದರು.

ಹೀಗೆ ಅಮೇರಿಕಾದಲ್ಲಿ ಇದ್ದಷ್ಟು ದಿನ ಸ್ವಾಮಿ ವಿವೇಕಾನಂದರು ವಿಶ್ವಧರ್ಮಕ್ಕೆ ಒಂದು ತಳಹದಿ ಹಾಕಿದರು. ವಿವಿಧ ಜ್ಞಾನ ಕ್ಷೇತ್ರಗಳನ್ನು ಸಮನ್ವಯಗೊಳಿಸಿದರು. ಮಾನವನ ಶ್ರೇಷ್ಠತೆಯನ್ನು ಎತ್ತಿ ಸಾರಿ ಅವನ ಕೀಳರಿಮೆಯನ್ನು ಹೋಗಲಾಡಿಸಿದನ್ನು ನೋಡಬಹುದು. ಆಧ್ಯಾತ್ಮಿಕ ತಳಹದಿಯನ್ನು ಆಧರಿಸಿದ ಹೊಸ ನೀತಿ ತತ್ವವನ್ನು ಪ್ರತಿಪಾದಿಸಿ ಜಗತ್ತಿನ ಚಿಂತನಾಧಾರೆಯ ಮೇಲೆ ನಿರ್ದಿಷ್ಟ ಪ್ರಭಾವ ಬೀರಿದರು. ಅವರ ಸಂದೇಶದ ಹೊಸ ಹೊಸ ಅಂಶಗಳು ಬೆಳಕಿಗೆ ಬರುತ್ತಾ ಅವರು ಕಾಲಾತೀತ ವ್ಯಕ್ತಿಯಾಗಿ ಮೆರೆಯುತ್ತಿದ್ದಾರೆ.

ಇಂತಹ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಅದರಲ್ಲಿಯೂ ಅಮೇರಿಕಾದಲ್ಲಿದ್ದಾಗ ದಿನಗಳನ್ನು ಕಳೆದ ಬಗೆಯನ್ನು ಶ್ರೀರಾಮಕೃಷ್ಣ ಆಶ್ರಮದವರು ಸಂಕ್ಷಿಪ್ತವಾಗಿ ಮನಮೋಹಕ ಶೈಲಿಯಲ್ಲಿ ಬರೆದಿದ್ದಾರೆ.

**ಅಮೇರಿಕಾದಲ್ಲಿ 'ಕನ್ನಡದ ಕಂಪು'–ಕಮಲಾ ಎಂ.ಎಸ್. ಬಾಲು :**

ಲೇಖಕಿ ಸಂಚಿಕೆ 99ರಲ್ಲಿ ಬಂದ ಕಮಲಾ ಎಂ.ಎಸ್.ಬಾಲು ಅವರ ಲೇಖನ.. ಲೇಖಕಿ ತಾವು ಅಮೇರಿಕಾದಲ್ಲಿ ಕಂಡದ್ದನ್ನು ಸಚಿತ್ರವಾಗಿ ನಿರೂಪಿಸಿದ್ದಾರೆ.

'ಕನ್ನಡ ಸಾಹಿತ್ಯ ರಂಗ' ಅಮೇರಿಕದಲ್ಲಿ ಸ್ಥಾಪಿತವಾಗಿದ್ದು, ಅಮೇರಿಕನ್ನಡಿಗರಿಂದ ರಚಿತವಾದ ಸಾಹಿತ್ಯವನ್ನು ಪ್ರಕಟಿಸಿ, ಕನ್ನಡತನವನ್ನು ವಿದೇಶಿ ನೆಲದಲ್ಲಿ ಮೆರೆಯುತ್ತಿರುವ ಒಂದು ಅಪೂರ್ವ ರೀತಿಯ ಸಂಸ್ಥೆ. ಈ ಸಂಸ್ಥೆ ಎರಡು ವರ್ಷಕ್ಕೊಮ್ಮೆ ಅಮೇರಿಕದ ಬೇರೆ ಬೇರೆ ಸ್ಥಳಗಳಲ್ಲಿ ವಸಂತ ಸಾಹಿತ್ಯೋತ್ಸವವನ್ನು ಆಚರಿಸುವ ಪರಿಪಾಠ ಇಟ್ಟುಕೊಂಡಿದೆ. ಅದೇ ಸಮಯದಲ್ಲಿ ಅಮೇರಿಕನ್ನಡಿಗರು ಬರೆದ ಲೇಖನಗಳನ್ನು ಕ್ರೋಡೀಕರಿಸಿ, ಪುಸ್ತಕ ರೂಪದಲ್ಲಿ ಹೊರತಂದು, ಕನ್ನಡ ನಾಡಿನಿಂದ ಬರಮಾಡಿಕೊಂಡ; ಖ್ಯಾತ ಬರಹಗಾರರಿಂದ ಲೋಕಾರ್ಪಣೆ ಮಾಡಿಸುವ ಸುತ್ಯರ್ಹ ಕಾರ್ಯಕ್ರಮವನ್ನು ಈ ಸಂಸ್ಥೆ ನಡೆಸಿಕೊಡುತ್ತದೆ. ಇದುವರೆಗೆ ಈ ರೀತಿಯ ನಾಲ್ಕು ಪುಸ್ತಕಗಳನ್ನು ಸಂಸ್ಥೆ ಹೊರತಂದಿದೆ ಎನ್ನುವ ಲೇಖಕಿಯ ಮಾತಿನಲ್ಲಿ ನಾವು, ಅಮೇರಿಕದಲ್ಲಿ ಕನ್ನಡದ ಕಂಪು ಪಸರಿಸುತ್ತಿರುವುದು ಕಾಣಬಹುದು.

ಕನ್ನಡ ಸಾಹಿತ್ಯ ರಂಗ ಇದು ಪ್ರತಿ ವರ್ಷ ಸಾಹಿತ್ಯೋತ್ಸವವನ್ನು ಆಚರಿಸಿಕೊಳ್ಳುತ್ತದೆ. 2009ನೇ ಮೇ 30, 31ರಂದು ವಾಷಿಂಗ್ಟನ್ ಸಂಸ್ಥಾನದ ಮೇರಿಲ್ಯಾಂಡ್‌ನಲ್ಲಿ ಹಮ್ಮಿಕೊಂಡಿದ್ದಿದು; ನಾಲ್ಕನೇ ವಸಂತ ಸಾಹಿತ್ಯೋತ್ಸವ. ಈ ಸಮ್ಮೇಳನಕ್ಕೆ ಆಹ್ವಾನಿತರಾದ ಕನ್ನಡದ ಪ್ರಸಿದ್ಧ ಲೇಖಕಿಯರಾದ ವೈದೇಹಿ, ವೀಣಾ ಶಾಂತೇಶ್ವರರವರುಗಳು ಎರಡು ದಿನಗಳ ಕಾಲ ಕನ್ನಡದ ಸವಿಯನ್ನು ತಾವು ಅನುಭವಿಸಿ; ಇತರರಿಗೂ ಅನುಭವಿಸುವಂತೆ ಮಾಡಿದ್ದನ್ನು ಲೇಖಕಿ ಕಮಲಾ ಎಂ.ಎಸ್.ಬಾಲು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

ಅಮೇರಿಕಾದಲ್ಲಿ ಸಮ್ಮೇಳನಗಳನ್ನು ಹೇಗೆ ಅಚ್ಚುಕಟ್ಟಾಗಿ ನಡೆಸುತ್ತಾರೆ. ಇಂತಹ ಸಮ್ಮೇಳನಗಳಿಗೆ ನಾನಾ ರಾಜ್ಯಗಳಿಂದ ಅನೇಕ ಕನ್ನಡಿಗರು ಯಾವ ರೀತಿಯಲ್ಲಿ ಆಗಮಿಸುತ್ತಾರೆ. ಎಲ್ಲರಿಗೂ ಬೆಳಗಿನ ಉಪಹಾರ, ಮಧ್ಯಾಹ್ನದ ಭೋಜನ, ಸಂಜೆಯ ಲಘು ತಿಂಡಿ, ರಾತ್ರಿಯ ಊಟ ಎಲ್ಲವನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು ನಾಡಿನ ಅಭಿಮಾನದಿಂದ ಎನ್ನುತ್ತಲೇ ಶ್ರದ್ಧೆಯಿಂದ ಜನರು ಭಾಗವಹಿಸಿದ್ದನ್ನು ನೋಡಿದ ಲೇಖಕಿ ಕನ್ನಡ ನಾಡಿನಲ್ಲಿ ನಡೆಯುವ ಸಮ್ಮೇಳನಗಳನ್ನು ಇಲ್ಲಿನ ಅವ್ಯವಸ್ಥೆಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾರೆ.

ಅಮೇರಿಕಾದಲ್ಲೇ ಹುಟ್ಟಿದ ಅಥವಾ ಅಲ್ಲೇ ಬೆಳೆದ ಮಕ್ಕಳು ಕನ್ನಡ ಕಲಿತು ಮುಂದೆ ಕನ್ನಡದ ಕಂಪನ್ನು ಪಸರಿಸಲು ಹೇಗೆ ಸಿದ್ಧರಾಗುತ್ತಿದ್ದಾರೆ ಎಂಬ ಸೂಚನೆಯನ್ನು ಲೇಖಕಿ ಈ ಕೆಳಗಿನ ನಿದರ್ಶನದ

ಮೂಲಕ ತಿಳಿಸಿದ್ದಾರೆ. ಅದೇನೆಂದರೆ ಅಮೇರಿಕನ್ ನ್ಯಾಷನಲ್ ಜಿಯೋಗ್ರಾಫಿಕ್ ಸಂಸ್ಥೆ ನಡೆಸುವ 'ಸ್ಪೆಲ್ಲಿಂಗ್ ಬೀ' ಸ್ಪರ್ಧೆಯ ಮಾದರಿ 'ಬರೆದು ಹೇಳಿ' ಎಂಬ ಕಾರ್ಯಕ್ರಮ ನಡೆಸುತ್ತಿದ್ದೂ, ಈ ಸ್ಪರ್ಧೆ ಮೂರು ಹಂತದಲ್ಲಿರುತ್ತದೆ. ಮೊದಲ ಹಂತದಲ್ಲಿ ಕಾಗುಣಿತ ಮತ್ತು ಒತ್ತಕ್ಷರಗಳಿಲ್ಲದ; ಎರಡು ಅಥವಾ ಮೂರು ಅಕ್ಷರಗಳಲ್ಲಿರುವ ಪದಗಳನ್ನು ಬಳಸುವುದು.

ಎರಡನೇ ಹಂತದಲ್ಲಿ ಕಾಗುಣಿತಗಳಿರುವ; ಮೂರು ಅಥವಾ ನಾಲ್ಕು ಅಕ್ಷರಗಳಿರುವ ಪದಗಳನ್ನು ಬಳಸುವುದು. ಈ ಎರಡು ಸುತ್ತಿನಲ್ಲಿ ವಿಜೇತರಾಗಿ ಮೂರನೇ ಹಂತದಲ್ಲಿರುವವರ ಅಂತಿಮ ಸ್ಪರ್ಧೆ; ಅತಿಥಿಗಳು, ಸಭಿಕರ ಸಮ್ಮುಖದಲ್ಲಿ ರಂಗದ ಮೇಲೆ ನಡೆಯುವುದು. ಎಲ್ಲ ಸ್ಪರ್ಧಿಗಳೂ, ತಮ್ಮ ಪ್ರಾಥಮಿಕ ಜ್ಞಾನವನ್ನು ಬರೆದು ಹೇಳುವ ಮೂಲಕ ಪ್ರದರ್ಶಿಸುವುದಲ್ಲದೆ, ಗೆದ್ದವರಿಗೆ ಬಹುಮಾನವನ್ನು ವಿತರಿಸುವರು.

ಹೀಗೆ ಮಕ್ಕಳೆಲ್ಲಾ ಕನ್ನಡವನ್ನು ಆಸಕ್ತಿಯಿಂದ ಕಲಿಯಲು ಮುಂದಾಗುವುದು. ಅದಕ್ಕೆ ಪೂರಕವಾಗಿ ಅವರವರ ತಂದೆ–ತಾಯಿಗಳ ಪ್ರೋತ್ಸಾಹ ನೀಡುವುದು. ಈ ಎಲ್ಲವನ್ನು ಗಮನಿಸಿದರೆ ಅಮೆರಿಕನ್ನಡಿಗರಿಗೆ ಇರುವಷ್ಟು ನಾಡಿನ ಅಭಿಮಾನ, ದೇಶಾಭಿಮಾನ ಸ್ವದೇಶದಲ್ಲಿ ನೆಲೆಸಿರುವವರಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವಂತಾಗಿದೆ. ಬಹುಪಾಲು ಕನ್ನಡಿಗರಿಗೆ ಇಂಗ್ಲಿಷಿನ ವ್ಯಾಮೋಹ ಹೆಚ್ಚಾಗಿರುವುದರಿಂದಾಗಿ ನಾಡಿನ ಶಿಕ್ಷಣ ವ್ಯವಸ್ಥೆ ಕುಸಿಯುತ್ತಿದೆ. ತಕ್ಷಣದಿಂದಲೇ ಎಚ್ಚರ ವಹಿಸುವುದು ಅಗತ್ಯ ಮತ್ತು ಆದ್ಯ ಕರ್ತವ್ಯವೆಂದು ಮನದಟ್ಟಾಗುವಂತಿದೆ.

ಗಣಕ ಯಂತ್ರದಲ್ಲಿ ಮತ್ತು ಅಂತರ ಜಾಲದಲ್ಲಿ ಕನ್ನಡ ಲಿಪಿಯನ್ನು ಉಪಯೋಗಿಸಿ ಇಮೇಲ್ ಬರೆಯುವುದು ಹೇಗೆ, ಮೈಕ್ರೋಸಾಫ್ಟ್; ವರ್ಡ್, ಎಕ್ಸೆಲ್, ಪವರ್ ಪಾಯಿಂಟ್‌ಗಳಲ್ಲೂ ಕನ್ನಡ ಕಡತಗಳನ್ನು ತಯಾರಿಸುವುದು ಹೇಗೆ, ಯುನಿಕೋಡ್ ಕನ್ನಡ ಲಿಪಿ ಎಂದರೇನು? ಪ್ರಯೋಜನಗಳೇನು? ಈ ಮೊದಲಾದವುಗಳನ್ನು ಶ್ರೀವತ್ಸ ಜೋಶಿ ಪ್ರಾತ್ಯಕ್ಷಿಕೆಯ ಮೂಲಕ ಸೋದಾಹರಣವಾಗಿ ವಿವರಿಸಿದ ನಂತರ ಸಭಿಕರು ಉತ್ಸಾಹದಿಂದ ಪ್ರಶ್ನೋತ್ತರ ಮಾದರಿಯಲ್ಲಿ ತಮಗಿದ್ದ ಅನೇಕ ಸಂದೇಹಗಳನ್ನು ಪರಿಹರಿಸಿಕೊಂಡು, ವಿವರಿಸಿದ ಅಂಶಗಳೆಲ್ಲವನ್ನು ಒಂದು ಸರಳ ಕೈಪಿಡಿಯ ರೂಪದಲ್ಲಿ ಪ್ರಕಟಿಸಿ ವಿತರಿಸಿದರೆ ಬಹಳ ಉಪಯೋಗವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಎಂದು ಲೇಖಕಿ ತಿಳಿಸಿದ್ದಾರೆ. ಇಲ್ಲಿ ಸಭಿಕರಲ್ಲಿದ್ದ ಉತ್ಸಾಹವನ್ನು ನೋಡಿದರೆ ಅವರಲ್ಲಿರುವ ಜ್ಞಾನದಾಹದ

ಅರಿವಾಗುತ್ತದೆ. ಕನ್ನಡವನ್ನು ಗಣಕ ಯಂತ್ರದಲ್ಲಿ ಅಳವಡಿಸಿಕೊಂಡು ಆ ಮೂಲಕ ತಮ್ಮ ಕಾರ್ಯ ಚಟುವಟಿಕೆ, ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಅಭೀಪ್ಸೆ ಕಂಡುಬರುತ್ತದೆ.

ಒಟ್ಟಿನಲ್ಲಿ ಲೇಖಕಿ ಕಮಲಾ ಎಂ.ಎಸ್.ಬಾಲು ಕನ್ನಡ ಸಾಹಿತ್ಯ ರಂಗ ನಡೆಸಿಕೊಟ್ಟ ಎರಡು ದಿನಗಳ ಸಮ್ಮೇಳನದ ಕಾರ್ಯಚಟುವಟಿಕೆಗಳು, ಶಿಸ್ತು, ಅಚ್ಚುಕಟ್ಟುತನ, ಅಮೇರಿಕನ್ನಡಿಗರ ಕನ್ನಡ ಅಭಿಮಾನವನ್ನು ಸರಳವಾಗಿ ಸಂಕ್ಷಿಪ್ತವಾಗಿ ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ.

**ಸಮಾಜಮುಖಿ ಎಂ. ಶಂಕರಮೂರ್ತಿ (ಕೌಟುಂಬಿಕ ಚಿತ್ರ)–ಬೆಳವಾಡಿ ಮಂಜುನಾಥ :** ಎಂ.ಶಂಕರಮೂರ್ತಿ ಇವರೊಬ್ಬ ಸಮಾಜಮುಖಿ. ಇವರ ಜೀವನದ ವೈಶಿಷ್ಟ್ಯವನ್ನು ಕುರಿತು ಲೇಖಕ ಬೆಳವಾಡಿ ಮಂಜುನಾಥ ಅತ್ಯಂತ ಆತ್ಮೀಯವಾಗಿ ಬರೆದಿದ್ದಾರೆ. ಎಂ. ಶಂಕರಮೂರ್ತಿಯವರ ಬದುಕಿನ ಹಲವು ಘಟ್ಟಗಳನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ಅದರಲ್ಲಿ ಎಂ. ಶಂಕರಮೂರ್ತಿ ಕೈಗೊಂಡ ವಿದೇಶ ಪ್ರವಾಸವು ಒಂದು.

ಬೆಳವಾಡಿ ಮಂಜುನಾಥ ಎಂ. ಶಂಕರಮೂರ್ತಿ ಕೈಗೊಂಡ ಹಲವು ವಿದೇಶ ಪ್ರವಾಸಗಳಲ್ಲಿ ಅಮೇರಿಕ ಒಂದಾಗಿದೆ. ಅದರ ಕುರಿತು ಮೂರು ಪುಟಗಳಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

1960ರ ದಶಕದಲ್ಲಿ ಭಾರತದವರು ಅಮೇರಿಕಾಗೆ ಹೋಗಿ ಬರುವುದು ಎಂದರೆ ಅದೊಂದು ಸಾಹಸ ಮತ್ತು ಸಾಧನೆಯ ವಿಷಯವೇ ಆಗಿತ್ತು. Pass Port ಸಿಕ್ಕುವುದಾಗಲಿ, Visa ದೊರೆಯುವುದಾಗಲಿ ಅಥವಾ Dollar Exchange ಮಾಡಿಕೊಳ್ಳುವುದಾಗಲೀ ಈಗಿನಂತೆ ಸುಲಭವಾಗದೆ ಕಷ್ಟಕರವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ 1968ರಲ್ಲಿ ಎಂ. ಶಂಕರಮೂರ್ತಿ ಕೈಗೊಂಡ ಮೊಟ್ಟ ಮೊದಲನೆಯ ವಿದೇಶ ಪ್ರವಾಸ ಅಮೇರಿಕಾ.

ಅಮೇರಿಕಾದಲ್ಲಿ Association of the experiment in international living ಎಂಬ ಅಂತರಾಷ್ಟ್ರೀಯ ಸಂಸ್ಥೆ. ಇದರ ಪ್ರಧಾನ ಕಛೇರಿ Vermount ಎಂಬ ಪಟ್ಟಣದಲ್ಲಿದೆ. ಇದರ ಭಾರತೀಯ ಶಾಖೆ Indian Association of the Experiment in International living ಎಂಬ ಹೆಸರಿನಲ್ಲಿ ದೆಹಲಿಯಲ್ಲಿದೆ. ಈ ಸಂಸ್ಥೆಯು ಕೆಲವೊಮ್ಮೆ ಭಾರತ ದೇಶದಿಂದ ಸುಮಾರು ಎಂಟು, ಹತ್ತು ಜನ ಸದಸ್ಯರನ್ನು ಆಯ್ದು Junior Business Executives ಎಂದು ಅಮೇರಿಕಾ ಪ್ರವಾಸಕ್ಕೆ ಕಳುಹಿಸುವ

ಕ್ರಮ ಆಗಿನ ಕಾಲದಲ್ಲಿ ಇತ್ತು ಈ ಸಂಸ್ಥೆಯ ಸದಸ್ಯತ್ವವನ್ನು ಪಡೆದುಕೊಂಡು ಆಯ್ದ ತಂಡವನ್ನು ಪ್ರವಾಸಕ್ಕೆ ಕಳುಹಿಸುವ ಸಂದರ್ಭಕ್ಕಾಗಿ ಕಾದಿದ್ದು, ಅರ್ಜಿ ಸಲ್ಲಿಸಿದ ಶಂಕರಮೂರ್ತಿ ಅವರು ಬಂದಂತಹ ಅವಕಾಶವನ್ನು ಸದುಪಯೋಗಪಡಿದಿಕೊಂಡರು, (ಪುಟ 207-208) ಅಂತಹ ಸಂದಿಗ್ಧ ಕಾಲದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಎಲ್ಲಾ ಪರೀಕ್ಷೆಗಳಲ್ಲಿ ಆಯ್ಕೆಯಾಗಿ, ಅಮೇರಿಕಾದಲ್ಲಿರುವ ಅವಧಿಯ ಯೋಜನೆಯ ಬಗೆಗೆ ಮಾಹಿತಿ ಪಡೆದು ಯು.ಎಸ್.ಎಗೆ ತೆರಳಿದ್ದನ್ನು ಲೇಖಕರು ತುಂಬಾ ಮೆಚ್ಚಿಕೊಂಡಿದ್ದಾರೆ.

ಶಂಕರಮೂರ್ತಿ ಮತ್ತು ಅವರ ತಂಡದ ಎಲ್ಲಾ ಸದಸ್ಯರೂ ಒಂದು ತಿಂಗಳ ಪ್ರವಾಸದ ಅವಧಿಯಲ್ಲಿ ಒಬ್ಬೊಬ್ಬರಿಗೂ ಕೂಡಾ ನಿಗದಿಪಡಿಸಿದ ಅತಿಥೇಯರ ಮನೆಯಲ್ಲಿ ವಾಸ್ತವ್ಯವಿದ್ದಿತು. ಶಂಕರಮೂರ್ತಿ Mr. & Mr's Glen Rain Brand ಎಂಬುವವರ ಮನೆಯಲ್ಲಿ ಅತಿಥಿಯಾಗಿ ಗೌರವ ಅಭಿಮಾನವನ್ನು ಪಡೆದರು ಇಲ್ಲಿ ಶಂಕರಮೂರ್ತಿ ಅಮೇರಿಕನ್ನರ ಅತಿಥಿ ಸತ್ಕಾರವನ್ನು ಕಂಡು ಮೆಚ್ಚಿಕೊಂಡಿದ್ದಾರೆ. Kalama 200 ನಲ್ಲಿ UPSHON ಎಂಬ ಔಷಧಿ ತಯಾರಿಕಾ ಕಂಪನಿಗೆ, Kellogs ಎಂಬ ಆಹಾರ ಪದಾರ್ಥ ತಯಾರಿಕಾ ಘಟಕಕ್ಕೆ ಭೇಟಿಕೊಟ್ಟು ಹಲವು ವಿಷಯಗಳನ್ನು ತಿಳಿದುಕೊಂಡರು ಉನ್ನತ ಮಟ್ಟದ ವೈಜ್ಞಾನಿಕ ಸಂಶೋಧನೆಯ ಬೃಹತ್ ಕೈಗಾರಿಕಾ ಘಟಕಗಳು, ಪ್ರಸಿದ್ಧ ವಿಜ್ಞಾನಿಗಳ ಸಂಯೋಜನೆ ಮತ್ತು ಕಾರ್ಯನಿರ್ವಹಣೆ, ರಸ್ತೆ ಸಾರಿಗೆ ವ್ಯವಸ್ಥೆ, ಅಲ್ಲಿಯ ಸಂಪತ್ತು, ಅಧಿಕಾರಿಕಗಳ ಕಾರ್ಯತತ್ಪರತೆ, ಸರ್ಕಾರಿ ಅಧಿಕಾರಿಗಳ ಪ್ರಾಮಾಣಿಕತೆ ನೋಡಿ ತಂಡದ ಎಲ್ಲಾ ಸದಸ್ಯರೂ ರೋಮಾಂಚನಗೊಂಡರು ಎಂದು ಲೇಖಕರು ತಿಳಿಸುತ್ತಾರೆ. ಅಮೇರಿಕನ್ನರ ಕಾರ್ಯಕ್ಷಮತೆಯನ್ನು ಮೆಚ್ಚಿಕೊಳ್ಳುತ್ತಾ ಇದೇ ದಿಶೆಯಲ್ಲಿ ಭಾರತದಲ್ಲಿ ಮಾದರಿ ವ್ಯವಸ್ಥೆಯನ್ನು ರೂಪಿಸಬೇಕಾದ ಅಗತ್ಯವನ್ನು ತಿಳಿಸುತ್ತಾರೆ.

ತಂಡದ ಸದಸ್ಯರೆಲ್ಲರೂ Western Michigan University ಭೇಟಿ ಕೊಟ್ಟಾಗ University Faculty Members ಆತ್ಮೀಯವಾಗಿ ಬರಮಾಡಿಕೊಂಡು ಅಲ್ಲಿಯ ವಿದ್ಯಾಭ್ಯಾಸದ ರೀತಿ-ನೀತಿಗಳನ್ನು ವಿವರಿಸಿದರು. ಅನಂತರ ತಂಡದ ಸದಸ್ಯರಲ್ಲಿ ಯಾರಾದರೊಬ್ಬರು ತರಗತಿಯಲ್ಲಿ ಒಂದು Period ನಡೆಸಿ, ವಿದ್ಯಾರ್ಥಿಗಳನ್ನು ಕುರಿತು ಇಪ್ಪತ್ತು ನಿಮಿಷ ಮಾತನಾಡಬೇಕು ಎಂದಾಗ; ಶಂಕರಮೂರ್ತಿಯವರು ಧೈರ್ಯದಿಂದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಭಾರತದ ಪ್ರತಿನಿಧಿಯಾಗಿ ಭಾರತದ ಸಂಸ್ಕೃತಿ, ನಂಬಿಕೆಗಳು, ಆಚರಣೆಗಳು, ಸಾಂಸ್ಕೃತಿಕ ಹಿರಿಮೆ ಮೊದಲಾದವುಗಳನ್ನು ಕುರಿತು ಮಾತನಾಡಿದ್ದು ಲೇಖಕರ ದೃಷ್ಟಿಯಲ್ಲಿ ಎರಡು ದೇಶಗಳ ತೌಲನಿಕ ಪರಿಶೀಲನೆಯಾಗಿ ಕಾಣುತ್ತದೆ.

1977ರಲ್ಲಿ ಶಂಕರಮೂರ್ತಿ ಕುಟುಂಬ ಸಮೇತ ಅಮೇರಿಕಾಕ್ಕೆ ಮತ್ತೆ ಪ್ರವಾಸ ಕೈಗೊಂಡು ಹಲವು ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿದ್ದಾರೆ. ಅವುಗಳಲ್ಲಿ University studios, ಡಿಸ್ನಿ ಲ್ಯಾಂಡ್, Las Vegas, Red Wood Tree Forest ಇವೆಲ್ಲವೂ ತುಂಬಾ ಆಕರ್ಷಣೀಯವಾಗಿವೆ ಎಂದು ಹೊಗಳಿದ್ದಾರೆ.

East Coast, Smith Sonian Institute and Independence Bell at Phillidelphia and Underground caves ನಂತಹ ಅಪರೂಪದ ಸ್ಥಳಗಳನ್ನು ಸುಲಭವಾಗಿ ನೋಡಲು ದೊರಕಿರುವುದು ಅವರ ಮನದ ಹಾಳೆಯಲ್ಲಿ ಅಚ್ಚೊತ್ತಿದಂತೆ ಇದೆ. ಅಮೇರಿಕಾದಲ್ಲಿ Coast to coast ಎಂಬ ಮಾತು ಹೆಚ್ಚು ಪ್ರಚಲಿತ. ಅಂದರೆ East coastನಿಂದ West coastಗೆ ಪ್ರಯಾಣಿಸಬೇಕೆಂಬುದು ಅದರ ಅರ್ಥ ಅಂದರಂತೆ ಆ ದಂಪತಿಗಳು ಪ್ರವಾಸ ಕೈಗೊಂಡಿದ್ದಾರೆ. ನ್ಯೂಯಾರ್ಕ್‌ನಲ್ಲಿ World Trade Centre, Radio City, Statue of Liberty, Kennedy Flame ಮೊದಲಾದ ಸ್ಥಳಗಳಿಗೆ ಭೇಟಿ ನೀಡಿ ವಿಶೇಷ ಅನುಭವ ಪಡೆದಿದ್ದಾರೆ. ವಾಷಿಂಗ್‌ಟನ್‌ನಲ್ಲಿ White House, Lincon Centre ಮೊದಲಾದ ಭವ್ಯ ಕಟ್ಟಡಗಳನ್ನು ವೀಕ್ಷಿಸಿ ಅಲ್ಲಿನ ಸೌಂದರ್ಯ, ವಿಶೇಷತೆ ಮತ್ತು ಭವ್ಯತೆಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ಅತ್ಯಂತ ಸಂತೋಷವಾಗಿ ಪ್ರವಾಸ ಮಾಡಿದ್ದೇವೆಂಬ ತೃಪ್ತಿಯ ಭಾವಗಳನ್ನು ವ್ಯಕ್ತಪಡಿಸಿದ್ದಾರೆ.

ಶಂಕರಮೂರ್ತಿ ಅವರು ಅನೇಕ ದೇಶಗಳನ್ನು ಪ್ರವಾಸ ಮಾಡಿ ವಿದೇಶಿಯರ ಕಾರ್ಯದಕ್ಷತೆ, ಕೈಗಾರಿಕಾ ಮುನ್ನಡೆ, ಆರ್ಥಿಕ ಅಭಿವೃದ್ಧಿ, ತಂತ್ರಜ್ಞಾನ, ವೈದ್ಯಕೀಯ ಪ್ರಗತಿ ಮತ್ತು ಸೌಲಭ್ಯ, ಶಿಕ್ಷಣ ವ್ಯವಸ್ಥೆ, ಅಲ್ಲಿನ ಜನರ ಶಿಸ್ತು ಪ್ರಾಮಾಣಿಕ, ಸಮಯ ಪಾಲನೆ ನೋಡಿ ಮೆಚ್ಚಿಕೊಂಡು ಅದರ ಬಗ್ಗೆ ಎರಡು ಮಾತಿಲ್ಲ. ಕೆಲವು ಮೆಚ್ಚುವ ವಿಷಯಗಳಿದ್ದರೂ, ಎಲ್ಲವೂ ಅನುಕರಣೀಯವಲ್ಲ ಎಂಬುವುದು ಅವರ ಸ್ಪಷ್ಟ ಅಭಿಪ್ರಾಯ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಕೌಟುಂಬಿಕ ಜೀವನದ ವಿಷಯಗಳು ಬಂದಾಗ ನಮ್ಮ ಭಾರತ ದೇಶದಲ್ಲೇ ಮೆಚ್ಚಿಕೊಳ್ಳುವ ಮತ್ತು ಅನುಕರಣೀಯ ವಿಷಯಗಳಿವೆ ಎಂದು ಹೇಳುತ್ತಾರೆ.

## ನಾನು (ಆತ್ಮ ಚರಿತ್ರೆ)–S.R. ಗುಂಜಾಳ :

S.R. ಗುಂಜಾಳ ತಮ್ಮ ಆತ್ಮ ಚರಿತ್ರೆಯಲ್ಲಿ ಜೀವನದ ಹಲವು ಮಹತ್ವ ಘಟನೆಗಳನ್ನು ವಿಶದೀಕರಿಸಿ ಬರೆದಿದ್ದಾರೆ. ಅದರಲ್ಲಿ ಪಾಶ್ಚಿಮಾತ್ಯ ದೇಶಗಳನ್ನು ಸಂದರ್ಶಿಸಬೇಕೆನ್ನುವ ಬಯಕೆಯು ಒಂದಾಗಿದ್ದು, ಅದನ್ನು 1983ರಲ್ಲಿ ನಾಲ್ಕು ತಿಂಗಳ ಕಾಲ ಉತ್ತರ ಅಮೇರಿಕಾ ಮತ್ತು ಕೆನಡಾ ದೇಶಗಳನ್ನು ಸುತ್ತಾಡಿ ತಮ್ಮ ಬಯಕೆಯನ್ನು ಈಡೇರಿಸಿಕೊಂಡಿದ್ದಾರೆ. ಈ ನಾಲ್ಕು ತಿಂಗಳ ಕಾಲಾವಧಿಯಲ್ಲಿ ಪಡೆದ ಅನುಭವವನ್ನು ಮೂರು ಪುಟಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಪ್ರವಾಸದ ಕಾಲಾವಧಿಯಲ್ಲಿ ಹೆಚ್ಚಾಗಿ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದ್ದಾರೆ. ಅನೇಕ ಸಾರ್ವಜನಿಕ ಗ್ರಂಥಾಲಯಗಳಿಗೆ ಭೇಟಿ ಕೊಟ್ಟಿದ್ದಾರೆ. ಅಮೇರಿಕ ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ದೇಶ ಅದರ ಶ್ರೀಮಂತಿಕೆಯನ್ನು ಗ್ರಂಥಾಲಯಗಳಲ್ಲೂ ಕಾಣಬಹುದೆಂದು ಹೇಳುತ್ತಾರೆ. ನಮ್ಮ ದೇಶದ ಗ್ರಂಥಾಲಯದ ಸ್ಥಿತಿಗತಿಗಳಿಗೆ ಅವುಗಳನ್ನು ಹೋಲಿಸಲು ಅಸಾಧ್ಯವೆಂದು ಹೇಳುತ್ತಾರೆ. ನಮ್ಮ ದೇಶದ ಗ್ರಂಥಾಲಯಗಳ ಹೀನ ಸ್ಥಿತಿಗೆ ಮರುಕವನ್ನು ವ್ಯಕ್ತಪಡಿಸುತ್ತಾರೆ.

ನ್ಯೂಯಾರ್ಕ್ ಸಾರ್ವಜನಿಕ ಗ್ರಂಥಾಲಯ ಮತ್ತು ವಾಶಿಂಗಟನ್ ಕಾಂಗ್ರೆಸ್ ಗ್ರಂಥಾಲಯಗಳಲ್ಲಿ ಕೋಟ್ಯಾಂತರ ಗ್ರಂಥಗಳನ್ನು ನೋಡಿ ಆಶ್ಚರ್ಯಪಡಬೇಕಾಯಿತು ಎಂದು ಹೇಳುತ್ತಾರೆ. ಈ ಗ್ರಂಥಗಳ ಮೂಲಕ ಜಗತ್ತಿನ ಜ್ಞಾನವೆಲ್ಲಾ ಶೇಖರಿಸಿಟ್ಟಿದ್ದಾರೆ. ಭಾರತದ ಮೇಲೆ ಏನಾದರೂ ಸಂಶೋಧನೆ ಮಾಡಬೇಕಾದರೆ ಮೂಲ ಗ್ರಂಥಗಳಿಗಾಗಿ ಅಮೇರಿಕಾಕ್ಕೆ ಹೋಗಿ ಅವಲೋಕಿಸಬಹುದು. ಅವು ನಮ್ಮ ದೇಶದಲ್ಲಿ ಲಭ್ಯವಾಗುವುದಿಲ್ಲ ಎನ್ನುವ ಲೇಖಕರ ಮಾತಿನಲ್ಲಿ ಎರಡು ದೇಶಗಳ ಗ್ರಂಥಾಲಯ, ಸಂಶೋಧನೆಯ ತೌಲನಿಕ ಪರಿಶೀಲನೆಯನ್ನ ಕಾಣಬಹುದು.

ಅಲ್ಲಿಯ ಗ್ರಂಥಾಲಯಗಳು ಜನಜೀವನದ ಪ್ರಮುಖ ಅಂಗಗಳಾಗಿವೆ. ನೂರಕ್ಕೆ ನೂರರಷ್ಟು ಸುಕ್ಷಿತರಾದ ಅಲ್ಲಿಯ ಪ್ರಜೆಗಳ ಓದುವ ಚಟ ಅಧಿಕವಾಗಿದೆ. ತಮ್ಮ ಆದಾಯದ ಬಹಳಷ್ಟು ಅಂಶ ಹಣವನ್ನು ಗ್ರಂಥ–ನಿಯತಕಾಲಿಕೆಗಳನ್ನು ಕೊಂಡು ಓದುವುದಕ್ಕಾಗಿ ವ್ಯಯಿಸುತ್ತಾರೆ. ಭಾರತದಲ್ಲಿ ಒಂದು ದಿನಪತ್ರಿಕೆಯನ್ನು ಯಾವನಾದರೊಬ್ಬನು ಕೊಂಡರೆ ಅದನ್ನು ಪುಕ್ಕಟೆ ಓದಲು ಹತ್ತು ಜನ ಮುಗಿದು ಬೀಳುತ್ತಾರೆ. ಅಲ್ಲಿ ಹಾಗಲ್ಲ ದಿನಪತ್ರಿಕೆಯನ್ನು ಒಬ್ಬನು ಕೊಂಡರೆ ಮತ್ತೊಬ್ಬನು ಅದರ ಕಡೆಗೆ ಹಣಕಿ

ಹಾಕುವುದಿಲ್ಲ. ಅದೇ ಪತ್ರಿಕೆಯನ್ನು ಓದಬೇಕೆನಿಸಿದರೆ ಕೊಂಡೇ ಓದುತ್ತಾನೆ. ದಿನಪತ್ರಿಕೆಗಳನ್ನು ಮಾರಾಟ ಮಾಡಲು ಅಲ್ಲಿಯ ಸಾರ್ವಜನಿಕ ಸ್ಥಳಗಳಾದ ಬಸ್‌ಸ್ಟ್ಯಾಂಡ್, ರೈಲ್ವೆ ಸ್ಟೇಷನ್, ಸಿನಿಮಾ ಮಂದಿರ ಮುಂತಾದೆಡೆಗಳಲ್ಲಿ ಏಜೆಂಟರು ಇರುವುದಿಲ್ಲ. ಏಜೆಂಟನ ಬದಲಾಗಿ ಹಣದ ಗಲ್ಲೆ ಪೆಟ್ಟಿಗೆಗಳಿರುತ್ತದೆ. ದಿನಪತ್ರಿಕೆಯ ಮುಖಬೆಲೆಯನ್ನು ಆ ಪೆಟ್ಟಿಗೆಯಲ್ಲಿ ಹಾಕಿ ಒಂದೊಂದು ಪತ್ರಿಕೆಯನ್ನು ತೆಗೆದುಕೊಳ್ಳುವುದು ಅಲ್ಲಿಯ ಜನರ ಪದ್ಧತಿ. ನಮ್ಮಲ್ಲಿ ಸ್ಥಿತಿಯೇ ಬೇರೆ ಏಜೆಂಟನೂ ಕಾಯುತ್ತ ಕುಳಿತರೂ ಪತ್ರಿಕೆಯನ್ನು ಕದ್ದು ಒಯ್ಯುವವರೂ ಉಂಟು.' (ಪುಟ 207, 208) ಲೇಖಕರ ಈ ಮಾತಿನಲ್ಲಿ ಅವರ ಚಿಂತನಾಪರಿಯೂ ದಾಖಲಾಗಿವೆ. ಅಮೇರಿಕದ ಸುಶಿಕ್ಷಿತ ಜನಾಂಗದ ಬದುಕಿನ ನೈತಿಕ ಮೌಲ್ಯಗಳನ್ನು; ಭಾರತೀಯರ ಬದುಕಿನ ನೈತಿಕ ಮೌಲ್ಯಗಳನ್ನು ಓರೆ ಹಚ್ಚಿ ನೋಡಿದ್ದಾರೆ. ಅಮೆರಿಕನ್ನರ ನಿಷ್ಠೆ, ಪ್ರಾಮಾಣಿಕತೆಯನ್ನು ಮುಕ್ತ ಮನಸ್ಸಿನಿಂದ ಮೆಚ್ಚಿಕೊಂಡಿದ್ದಾರೆ.

ಅಮೇರಿಕದ ವಿಶ್ವವಿದ್ಯಾಲಯಗಳಿಗೆ ಹೊಸ ಹೊಸ ಪುಸ್ತಕ ಪತ್ರಿಕೆಗಳನ್ನು ಕೊಳ್ಳಲು ಹಣದ ಕೊರತೆಯಿಲ್ಲ-ಸಿಬ್ಬಂದಿಯ ಕೊರತೆಯೂ ಇಲ್ಲ. ಪೀಠೋಪಕರಣಗಳ ಕೊರತೆಯಿಲ್ಲ. ಆದರೆ ಸ್ಥಳದ ಕೊರತೆ ಮಾತ್ರ ಬಹಳಷ್ಟಿದೆ. ಏಕೆಂದರೆ ಅಲ್ಲಿಯ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲಿ 30–40–50 ಲಕ್ಷ ಗ್ರಂಥಗಳಿರುವುದು ಸರ್ವೇ ಸಾಮಾನ್ಯ. ಹೊಸ ಹೊಸ ಗ್ರಂಥಗಳನ್ನು ದಿನದಿನವೂ ಈ ಸಂಗ್ರಹಗಳಿಗೆ ಕೊಂಡು ಕೊಡಿಸುತ್ತಲೇ ಹೋಗುತ್ತಾರೆ ಎಂದು ಲೇಖಕರು ಹೇಳುತ್ತಾರೆ. ಅಮೇರಿಕನ್ನರ ಓದುವ ಹವ್ಯಾಸ, ಪುಸ್ತಕ ಪ್ರಿಯತೆ ಎಷ್ಟು ವ್ಯಾಪಕವಾಗಿದೆಯೆಂಬುದು ಪಾಯಶಃ ಇದಕ್ಕಿಂತಲೂ ವಿವರಣೆ ಅನಗತ್ಯವೆನ್ನಬಹುದು.

ಹಳೆಯ ಪುಸ್ತಕಗಳನ್ನು, ಐದಾರು ತಿಂಗಳವರೆಗೆ ಯಾವನೊಬ್ಬ ಓದುಗನು ಎರವಲು ಒಯ್ಯದೇ ಇದ್ದ ಗ್ರಂಥಗಳನ್ನು ಗ್ರಂಥ ಸಂಗ್ರಹದಿಂದ ತೆಗೆದು ಹಾಕಿ ಅವುಗಳನ್ನು ಕಡಿಮೆ ಬೆಲೆಗೆ ಮಾರುತ್ತಾರೆ. ಯಾರು ತೆಗೆದುಕೊಳ್ಳದೆ ಹೋದರೆ ಬಡ ದೇಶಗಳಿಗೆ ಉಚಿತವಾಗಿ ರವಾನಿಸುತ್ತಾರೆ. ಅದು ಆಗದಿದ್ದಲ್ಲಿ ರದ್ದಿ ಅಂಗಡಿಗೆ ತೂಕಕ್ಕೆ ಹಾಕುತ್ತಾರೆ. ಅಲ್ಲದೆ ಅಲ್ಲಿನ ಗ್ರಂಥಾಲಯಗಳಲ್ಲಿ ಯಾವುದೇ ಕಳ್ಳತನವಾಗಲಿ ಆಗುವುದಿಲ್ಲ. ಆದರೆ ಭಾರತದಲ್ಲಿ ಇದು ತದ್ವಿರುದ್ಧವಲ್ಲದೆ ನಿರುಪಯೋಗಿ ಗ್ರಂಥಗಳನ್ನು ರದ್ದಿ ಮಾಡಲು ಹಿಂದೆ ಮುಂದೆ ನೋಡುತ್ತೇವೆ. ಅಲ್ಲದೆ ಗ್ರಂಥಪಾಲಕನ ಹಾಗೂ ಸಿಬ್ಬಂದಿಯ ಕಣ್ಣು ತಪ್ಪಿಸಿ ಗ್ರಂಥಗಳನ್ನು ದೋಚುತ್ತಾರೆ. ಇಂತಹ ಸಣ್ಣತನವನ್ನು ಬಿಡಬೇಕೆಂದು ಲೇಖಕರು ಗ್ರಂಥ ಕಳ್ಳರನ್ನು ಟೀಕಿಸಿದ್ದಾರೆ.

ಲೇಖಕರು ಅಮೇರಿಕ ಸಂಯುಕ್ತ ಸಂಸ್ಥಾನವನ್ನು ನಾಲ್ಕು ತಿಂಗಳಲ್ಲಿ ಗ್ರಂಥಾಲಯ, ವಿಶ್ವವಿದ್ಯಾಲಯಕ್ಕೆ ಭೇಟಿಕೊಟ್ಟು ಅಲ್ಲಿಯ ಗ್ರಂಥಾಲಯಗಳ ಸಂಪೂರ್ಣ ವಿಷಯವನ್ನು ತಿಳಿದುಕೊಂಡಿದ್ದಾರೆ. ಅವುಗಳಲ್ಲಿನ ಸುವ್ಯವಸ್ಥೆಯ ಗ್ರಂಥಗಳ ಮಹತ್ವ ಅಮೇರಿಕನ್ನರ ಶಿಸ್ತು. ಇವುಗಳನ್ನು ಭಾರತೀಯ ಅಳವಡಿಸಿಕೊಳ್ಳುವುದು ಒಳ್ಳೆಯದು ಎಂಬ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.

**ಕಾರಂತ–ಚಿಂತನ (ಕಡಲಾಚೆಯ ಕನ್ನಡಿಗರಿಂದ) – ಸಂಪಾದಕ–ನಾಗ ಐತಾಳ :**

ನಾಗ ಐತಾಳರು ಕಾರಂತ ಬಗ್ಗೆ ಒಂದು ಗ್ರಂಥ ಹೊರತರುವ ಮನೋಭಿಲಾಷೆ ಹೊಂದಿದ್ದರು. ಇದಕ್ಕೆ ಹಲವರಿಂದ ಉತ್ತೇಜನ ದೊರೆತು ಕಾರ್ಯಪ್ರವೃತ್ತರಾದರು. ಅಮೇರಿಕಾದಲ್ಲಿ ನೆಲೆಸಿದ ಕನ್ನಡಿಗರು ಕಾರಂತ ಪ್ರೇಮಿಗಳಿಂದ ಲೇಖನಗಳನ್ನು ಪಡೆದು ಸಂಪಾದಿಸಿದ್ದಾರೆ. ಎರಡು ಪುಟಗಳಲ್ಲಿ ಲೇಖಕರು ಶಿವರಾಮ ಕಾರಂತರ ಬಗ್ಗೆ, ಅವರ ಅಮೇರಿಕಾ ಪ್ರವಾಸದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಶಿವರಾಮ ಕಾರಂತರು ಎರಡು ಬಾರಿ ಅಮೇರಿಕಾಕ್ಕೆ ಭೇಟಿ ನೀಡಿದ್ದಾರೆ. ಮೊದಲ ಬಾರಿ ಬಂದಾಗ ಲೇಖಕರು ಅವರನ್ನು ಭೇಟಿ ಮಾಡಲಿಲ್ಲ. (ವೈಯಕ್ತಿಕ ಕಾರಣಗಳಿಂದ) ಈ ಅವಧಿಯಲ್ಲಿ ಕಾರಂತರು ಮಿನಿಸೋಟ, ಅರಿಜೋನ್, ಕ್ಯಾಲಿಫೋರ್ನಿಯವನ್ನು ಸಂದರ್ಶಿಸಿದ್ದರಂತೆ, ಅಲ್ಲದೆ "ಗ್ರ್ಯಾಂಡ್ ಮತ್ತು ಬ್ರೈಸ್ ಕ್ಯಾನಿಯನ್‌ನ ನೈಸರ್ಗಿಕ ಸೌಂದರ್ಯವನ್ನು ಕಾರಂತರು ಹೀಗೆ ವಿವರಿಸುತ್ತಾರೆ;– 'ಅದರ ಮೇಲೆ ಚೆಲ್ಲುವ ವಿವಿಧ ಕಾಲದ ಸೂರ್ಯ, ಚಂದ್ರರ ರಶ್ಮಿಗಳು, ಕತ್ತಲಿನ ಮಾಯಕದ ಪರದೆ, ಈ ನಿರ್ಜೀವ ಜಗತ್ತಿಗೆ ಪ್ರತಿ ಸಂದುಗೊಂದಿನಲ್ಲೂ ಜೀವದುಸಿರನ್ನು ತುಂಬುತ್ತವೆ. ಆ ಕೊರಕಲು ಚೈತನ್ಯಮಯವಾದುದೊಂದು ಜೀವಲೋಕವೆನಸುತ್ತದೆ" ಎಂದಾಗ ಕಾರಂತರ ನಿಸರ್ಗದೊಳಗಿನ ಬಾಂದವ್ಯವು ಸಮಂಜಸವಾಗಿ ವ್ಯಕ್ತವಾಗುತ್ತದೆ" ಎಂದು ಲೇಖಕರು ಕಾರಂತರ ನಿಸರ್ಗಪ್ರೀಯತೆಯನ್ನು ಶ್ಲಾಘಿಸಿದ್ದಾರೆ.

ಶಿವರಾಮ ಕಾರಂತರು ಅಮೇರಿಕಾಕ್ಕೆ ಎರಡನೇ ಬಾರಿ ಬಂದಾಗ ನ್ಯೂಯಾರ್ಕ್, ಶಿಕಾಗೋ, ಡೆಸ್ಟ್ರಾಡ್‌ಗಳನ್ನು ಭೇಟಿ ಮಾಡಿದರಂತೆ ಶಿಕಾಗೋಗೆ ಬಂದಾಗ ಲೇಖಕರ ಮನೆಯಲ್ಲಿ ಅತಿಥಿಯಾಗಿದ್ದು ಶಿಕಾಗೋ ಯೂನಿವರ್ಸಿಟಿಯ ಹಲವು ಪ್ರಾಧ್ಯಾಪಕರನ್ನು ಅಲ್ಲಿಯ ಆರ್ಟ್ ಇನ್ಸಿಟ್ಯೂಟ್‌ನ್ನು ಭೇಟಿ ಮಾಡಿ ತೃಪ್ತಗೊಂಡರಂತೆ ಅಲ್ಲದೆ ಆರ್ಟ್ ಇನ್ಸಿಟ್ಯೂಟ್‌ನಲ್ಲಿ ಪ್ರದರ್ಶನಕ್ಕೆಂದು ಇಟ್ಟ ವಸ್ತುಗಳ ಮೇಲಿನ

ಅವರ ಜ್ಞಾನವನ್ನು ನೋಡಿ ಲೇಖಕರು ಬೆರಗಾದರಂತೆ ಅದಕ್ಕಾಗಿ ಲೇಖಕರ ‘Walking encyalopedia’ಎಂಬ ಮಾತು ಶಿವರಾಮ ಕಾರಂತರಿಗೆ ಅಕ್ಷರಶಃ ಅನ್ವಯವಾಗುತ್ತದೆಂದು ಹೆಮ್ಮೆಪಟ್ಟಿರುವುದನ್ನು ತಿಳಿಸಿದ್ದಾರೆ.

ಅಮೇರಿಕದಲ್ಲಿ ನೆಲೆಸಿರುವ ಕನ್ನಡಿಗರ ಕುರಿತು ಲೇಖಕರು ತಮ್ಮನ್ನು ಒಳಗೊಂಡಂತೆ ಈ ಭಾವವನ್ನು ವ್ಯಕ್ತಪಡಿಸುತ್ತಾರೆ. “ಎಲ್ಲಾದರು ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು’ ಎಂದು ಕನ್ನಡದ ನೆಚ್ಚಿನ ಕವಿ ಕುವೆಂಪುರವರ ನುಡಿಯನ್ನು ನಾವು ಎಂದಿಗೂ ಮರೆಯಲಾರೆವು, ಮುಂದೆಯೂ ನಮ್ಮ ಮುಂದಿನ ಪೀಳಿಗೆಯವರು ಅದನ್ನು ಉಳಿಸಿಕೊಂಡು ಬಂದಾರು ಎಂಬ ಆಸೆಯೂ ಇದೆ”.[7] (ಪುಟ 26). ಇಲ್ಲಿ ನಾವು ಅಮೆರಿಕನ್ನಡಿಗರ ಅಭಿಮಾನ, ನಾಡಿನ ತುಡಿತವನ್ನು ಕಾಣಬಹುದು. ಅಮೇರಿಕಾದಲ್ಲಿ ನೆಲೆಸಿದ ಕನ್ನಡಿಗರ ಪರಿಸರ, ಭಾರತದ ಕನ್ನಡಿಗರ ಪರಿಸರಕ್ಕಿಂತ ತೀರಾ ಭಿನ್ನವಾದದ್ದು. ಅಲ್ಲಿನ ವ್ಯವಹಾರಗಳಿಗೆ ತಕ್ಕಂತೆ ಬಾದ್ಯರಾಗಿ ಅಲ್ಲಿಯವರಂತೆ ಇದ್ದರೂ ಅಂತರಂಗದಲ್ಲಿ ತಮ್ಮ ಸಂಸ್ಕೃತಿ, ಸಾಹಿತ್ಯ ಈ ಮೊದಲಾದವುಗಳ ಕುರಿತು ಸಹಜವಾಗಿ ಅಭಿಮಾನ ಹೊಂದಿರುವುದು ಕಂಡುಬರುತ್ತದೆ. ತಮ್ಮ ಮಕ್ಕಳಿಗೆ ಕನ್ನಡ ಕಲಿಸಿ, ಸಾಹಿತ್ಯದ ಮೇಲೆ ಅಭಿರುಚಿ ಮೂಡಿಸುವಲ್ಲಿ ಸಾಕಷ್ಟು ಪ್ರಯತ್ನಿಸುತ್ತಿದ್ದಾರೆ. ಕನ್ನಡದ ಇತರ ಲೇಖಕರ ಕೃತಿಗಳು ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡಿ ಪಾಶ್ಚಾತ್ಯರಿಗೆ ಇಷ್ಟವಾದಂತೆ, ಆ ನಿಟ್ಟಿನಲ್ಲಿ ಕಾರಂತರ ಹಲವಾರು ಕಾದಂಬರಿಗಳೂ ಭಾಷಾಂತರವಾದರೂ ಪಾಶ್ಚಾತ್ಯ ಸಾಹಿತಿಗಳ ಗಮನ ಸೆಳೆಯದಿರುವುದು ವಿಪರ್ಯಾಸವಾಗಿದೆ ಎಂದು ಲೇಖಕರು ಭಾಷಾಂತರದಲ್ಲಿ ಸಾಧಿಸಿದ ನಮ್ಮ ಪ್ರೌಢಿಮೆಯ ಬಗ್ಗೆ ದುಗುಡವನ್ನು ವ್ಯಕ್ತಪಡಿಸುತ್ತಾರೆ. ನಮ್ಮ ಮುಂದಿನ ಪೀಳಿಗೆಯವರು ಈ ಕಾರ್ಯಸಾಧನೆಯಲ್ಲಿ ಯಶಸ್ಸುಗಳಿಸುವಂತಾಗಲೆಂದು ಇಚ್ಛಿಸುವುದು ಒಂದು ಆಸೆಯ ನಿರೀಕ್ಷೆ” ಎಂದು ಲೇಖಕರು ತಮ್ಮ ಮನಸ್ಸಿನ ಬಯಕೆಯು ಈಡೇರುತ್ತದೇನೊ ಎಂಬ ಆಶಾಭಾವವನ್ನು ಪ್ರಕಟಿಸಿದ್ದಾರೆ.

ಕನ್ನಡದ ಸಾಹಿತ್ಯ ಸಂಸ್ಕೃತಿಯ ಮಣ್ಣಿನಲ್ಲಿ ತಮ್ಮ ಅನುಭವ ಮತ್ತು ಅಧ್ಯಯನಗಳ ಮೂಲಕ ಪ್ರೀತಿ, ಪರಿಶ್ರಮಗಳಿಂದ ಕನ್ನಡದ ಬಹು ಬೆಳೆಗಳನ್ನು ಬೆಳೆಸುವಲ್ಲಿ ಅಮೆರಿಕನ್ನಡಿಗರು ಪ್ರಯತ್ನಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯವಾಗಿದೆ. ಈ ಮಾರ್ಗದಲ್ಲಿ ಲೇಖಕರ ಕಾರ್ಯವು ಸಹ ಸಾರ್ಥಕವಾಗಿದೆ.

**ಕುಲಪತಿ ಎನ್. ಎಸ್. ರಾಮೇಗೌಡ(ಜೀವನಚರಿತ್ರೆ)–ಕೆ. ಮಾಯಿಗೌಡ :**

ಲೇಖಕ ಕೆ. ಮಾಯಿಗೌಡ. ಪ್ರೊ. ಎನ್.ಎಸ್. ರಾಮೇಗೌಡರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಲೇಖಕ ತಿಳಿಸುವಂತೆ ಪ್ರೋ. ರಾಮೇಗೌಡರು ಶಿಕ್ಷಣ ತಜ್ಞರಾಗಿದ್ದು, ತಮ್ಮ ಪ್ರತಿಭೆಯ ಮೂಲಕ ಸುಲಭವಾಗಿ ಅಮೇರಿಕಾಕ್ಕೆ ಹೋಗುವ ಅವಕಾಶ ತಮ್ಮದಾಗಿಸಿಕೊಂಡರು ಬಂದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು ಎಂದು ಪ್ರೊ. ರಾಮೇಗೌಡರ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅವರಿಗೆ ದೊರೆತ ಸದವಕಾಶವನ್ನು ಸಂಕ್ಷಿಪ್ತವಾಗಿ ಹತ್ತು, ಹನ್ನೆರಡು ಸಾಲುಗಳಲ್ಲಿ ತಿಳಿಸುತ್ತಾರೆ.

ಪ್ರೊ. ರಾಮೇಗೌಡರು (ಯುನೈಟೆಡ್)ಸ್ಟೇಟ್ಸ್ ಎಜುಕೇಶನ್, ಫೌಂಡೇಸನ್ ಇನ್ ಇಂಡಿಯಾ–ದೆಹಲಿ, ಪ್ರಾಂಶುಪಾಲರ ತಂಡದ ನಾಯಕರಾಗಿದ್ದು, ವಿಶ್ವವಿದ್ಯಾಲಯ ಶೈಕ್ಷಣಿಕ ಕಾರ್ಯಗಳ ಅನುಭವವಿದ್ದ, ಇವರು ಅನೌಪಚಾರಿಕ ಶಿಕ್ಷಣ ಪದ್ಧತಿ ಜಾರಿಗೆ ತರುವಲ್ಲಿ ಸಮರ್ಥವಾಗಿ ತಮ್ಮನ್ನು ತೊಡಗಿಸಿಕೊಂಡು ಆ ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗುತ್ತಾರೆ. 1991ರಲ್ಲಿ ಮತ್ತೊಮ್ಮೆ ಅಮೇರಿಕಾಕ್ಕೆ ಹೋಗುವ ಸಂದರ್ಭದಲ್ಲಿ ಓ.ಡಿ.ಎ ಯೋಜನೆ ಅನುಸಾರ ಅಮೇರಿಕಾ ಮುಕ್ತ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅಲ್ಲಿ ಅಧ್ಯಯನ ಮಾಡಿ ಆ ಪದ್ಧತಿಯಲ್ಲೂ ಸಾಕಷ್ಟು ಜ್ಞಾನ ಸಂಪಾದನೆ ಮಾಡಿಕೊಂಡು ಪ್ರಬುದ್ಧ ತಜ್ಞರೆನಿಸಿಕೊಂಡರು ಎಂದು ಲೇಖಕರು ಅಮೇರಿಕಾ ಪ್ರವಾಸ ಕುರಿತು ಹೇಳುತ್ತಾ, ಹೆಚ್ಚಿನ ಜ್ಞಾನ ಸಂಪಾದಿಸಲು ವಿದೇಶಗಳಿಗೆ ಹೋಗುವುದು ಅನಿವಾರ್ಯವಾಗಿತ್ತು ಆದರೆ ಈಗಿನಂತೆ ಎಲ್ಲರಿಗೂ ಹೋಗಲು ಮುಕ್ತ ಅವಕಾಶವಿರಲಿಲ್ಲ ಎಂಬುದನ್ನು ಪರೋಕ್ಷವಾಗಿ ವ್ಯಕ್ತಪಡಿಸುತ್ತಾರೆ.

**ಅಮೇರಿಕಾ ಚರಿತ್ರೆಯ ವಿವಿಧ ಆಯಾಮಗಳು :**

ಕನ್ನಡ ವಿಶ್ವವಿದ್ಯಾಲಯ; ಚರಿತ್ರೆ. ಸಂಪುಟ–8 ಜಗತ್ತಿನ ಅತಿದೊಡ್ಡ ಸಾಮ್ರಾಜ್ಯಶಾಹಿಯಾಗಿ ಮೆರೆಯುತ್ತಿದ್ದ ಅಮೇರಿಕದ ಸಾಮಾಜಿಕ, ಆರ್ಥಿಕ ಸಾಮ್ಯತೆ, ಸಾಮರಸ್ಯ, ಸಂಘರ್ಷ ಹಾಗೂ ಇತರ ಸಂಬಂಧಗಳನ್ನು ಈ ಕೃತಿ ಒಳಗೊಂಡಿದೆ.

ಈ ಕೃತಿಯಲ್ಲಿ ಹದಿಮೂರು ಲೇಖನಗಳಿವೆ. 'ಎಸ್. ವಿಜಯ್' ಅವರ 'ಅಮೇರಿಕಾ ಇಂಡಿಯನ್ನರ ಸ್ವಾತಂತ್ರ್ಯದಿಂದ ಸಂರಕ್ಷಣಾ ಶಿಬಿರ'ದವರೆಗೆ ಎನ್ನುವ ಅಧ್ಯಯನದ ಲೇಖನವನ್ನು ಅಶ್ವತ್ಥ ನಾರಾಯಣ ಅವರು ಅನುವಾದಿಸಿದ್ದಾರೆ. ಇದರ ಅಡಿಯಲ್ಲಿ ಲೇಖಕರು ಅಮೇರಿಕಾದ ಮೂಲನಿವಾಸಿಗಳ ಬಗ್ಗೆ

ಹೇಳುತ್ತಾರೆ. ಅಮೇರಿಕಾದ ಮೂಲನಿವಾಸಿಗಳು ಮುಲತಃ ಇಂಡಿಯನ್ನರು ಅವರು ಮಧ್ಯ ಏಷಿಯಾದಿಂದ ಬಂದವರು ದುರದೃಷ್ಟವಶಾತ್ ಪೂರ್ವದೊಂದಿಗಿನ ಅವರ ಸಂಪರ್ಕ ಸಾವಿರಾರು ತಲೆಮಾರುಗಳಿಂದಲೇ ಕಡಿದುಹೋಗಿದೆ. ಆದರೂ ಇದರಿಂದ ಫಲವತ್ತಾದ ಒಂದು ಜನಾಂಗ ಪ್ರತ್ಯೇಕವಾಗಿ ಬೆಳವಣಿಗೆಯಾಗಿದೆ ಎನ್ನುತ್ತಾರೆ.

ಬಿಳಿಯ ಮನುಷ್ಯ ಈ ಹೊಸ ಜಗತ್ತಿನಲ್ಲಿ ಹೆಜ್ಜೆಯಿರಿಸುವ ಮೊದಲು ಅಮೇರಿಕಾದ ಇಂಡಿಯನ್ನರು ಉತ್ತರ ಮತ್ತು ದಕ್ಷಿಣ ಅಮೇರಿಕಾದ ಎಲ್ಲಾ ಭಾಗಗಳಲ್ಲೂ ಹರಡಿಕೊಂಡಿದ್ದರು. ಈ ಇಂಡಿಯನ್ನರ ಪೂರ್ವಜರೇ ಇಂಕಾ, ಮಾಯಾ ಮತ್ತು ಆಜೆಟಿಕ್‌ನಲ್ಲಿ ನೆಲೆನಿಂತು ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಕಟ್ಟಿ ಬೆಳೆಸಿದವರು.[8] (ಪುಟ 2) ಆದರೆ ಹದಿನೈದನೇ ಶತಮಾನದ ಹೊತ್ತಿಗೆ ಐರೋಪ್ಯರು ಜಗತ್ತಿನ ಮೂಲೆ ಮೂಲೆಗೆ ವಲಸೆ ಹೋಗಲಾರಂಭಿಸಿದ್ದರು. ಇಂಥ ವಲಸೆಯ ಒಂದು ಹಂತ ಅಮೇರಿಕಾ ಭೂಖಂಡದಲ್ಲಿ ಶಕ್ತಿಶಾಲಿಯಾದ ಹೊಸ ಜನಾಂಗವೊಂದರ ಸೃಷ್ಟಿಗೆ ಕಾರಣವಾಯಿತು. ಆರಂಭದಲ್ಲಿ ಇಂಡಿಯನ್ನರು ಬಿಳಿಯರನ್ನು ಸ್ವಾಗತಿಸಿದರು. ಮೊದಲು ಎರಡು ಸಂಸ್ಕೃತಿಯ ಜನರ ನಡುವೆ ಸೌಹಾರ್ದಯುತವಾದ ಸಂಬಂಧಗಳು ಇದ್ದವು. ಕ್ರಮೇಣ ಈ ಶಾಂತ ಪರಿಸ್ಥಿತಿ ಕದಡತೊಡಗಿತು; ಇಂಡಿಯನ್ನರು ವಾಸಿಸುತ್ತಿದ್ದ ಪ್ರದೇಶದೊಳಕ್ಕೆ ಬಿಳಿಯರು ನುಗ್ಗ ತೊಡಗಿದ್ದರ ಫಲವಾಗಿ ಎರಡು ಜನಸಮುದಾಯಗಳ ನಡುವೆ ಘರ್ಷಣೆ, ಕಾದಾಟಗಳು ಮೊದಲುಗೊಂಡವು. ಬಿಳಿಯರು ಒಂದು ಕಡೆ ಸ್ಥಳೀಯ ಬುಡಕಟ್ಟುಗಳಿಗೆ ಭೂ ಪ್ರದೇಶವನ್ನು ಹಂಚಿಕೊಟ್ಟು ಅವರ ಚಲನೆಯನ್ನು ನಿಯಂತ್ರಿಸುವ ಯಜಮಾನರಾಗುತ್ತಿದ್ದರು. ಮತ್ತೊಂದು ಕಡೆ ಇಂಡಿಯನ್ನರು ತಮ್ಮ ನೆಲದಲ್ಲೇ ಅನಾಥರಾಗಿ, ಬಲಾತ್ಕಾರವಾಗಿ ಸಂರಕ್ಷಣಾ ಶಿಬಿರಗಳೊಳಕ್ಕೆ ತಳ್ಳಲ್ಪಟ್ಟರು. ಈ ರೀತಿಯಾಗಿ ಅಮೇರಿಕಾ ಇಂಡಿಯನ್ನರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಕಡೆಗಣಿಸಲ್ಪಟ್ಟರು ಆದರೆ ಪ್ರಸ್ತುತ ದಿನಗಳಲ್ಲಿ ಸ್ಥಳೀಯ ಇಂಡಿಯನ್ನರು ನಾಗರಿಕತೆಯೆಡೆಗೆ ಮುನ್ನಡೆದಿದ್ದಾರೆಂದು ತಿಳಿಸುತ್ತಾರೆ.

**ಅಮೇರಿಕಾದಲ್ಲಿ ಗುಲಾಮಗಿರಿಯ ಸಮಸ್ಯೆ ;** ಹುಟ್ಟು ಮತ್ತು ಬೆಳವಣಿಗೆ ಎರಡನೇ ಲೇಖನವಾಗಿದ್ದು ಡಾ. ಹನುಮನಾಯಕ ಅವರು ವಿಶ್ಲೇಷಿಸಿದ್ದಾರೆ. ಈ ಲೇಖನದಲ್ಲಿ ಗುಲಾಮಗಿರಿಯ ಹುಟ್ಟು, ಬೆಳವಣಿಗೆ ಮತ್ತು ಸ್ವರೂಪ, ಪ್ಲಾಂಟೇಷನ್, ಆರ್ಥಿಕತೆ, ಗುಲಾಮಗಿರಿ ಹಾಗೂ ಹೊಸ ಜಗತ್ತು, ಗುಲಾಮ ವ್ಯಾಪಾರ, ವರ್ಣಭೇದ ನೀತಿ ಮತ್ತು ಗುಲಾಮಗಿರಿ ವಿರೋಧಿ ಚಳುವಳಿಗಳು ಈ ಎಲ್ಲಾ ವಿಚಾರಗಳ

ಮೂಲಕ ಅಮೇರಿಕಾ ಗುಲಾಮಗಿರಿಯ ಸ್ವರೂಪವನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. "ಅಮೇರಿಕಾದಲ್ಲಿ 1776ರ ಕ್ರಾಂತಿಯ ಮೊದಲು ಗುಲಾಮಗಿರಿಯ ಸಮಸ್ಯೆಯು ಅಷ್ಟು ತೀವ್ರತರವಾಗಿರಲಿಲ್ಲ ಆದರೆ 1800ರ ನಂತರದಲ್ಲಿ ಪಶ್ಚಿಮ ದಿಕ್ಕಿನಡೆ ಹೊಸ ಪ್ರದೇಶಗಳನ್ನು ವಿಸ್ತರಿಸುವುರರೊಂದಿಗೆ ಅಲ್ಲಿ ಹೊಸ ನೆಲವನ್ನು ಕೃಷಿಗೆ ಯೋಗ್ಯವಾಗುವಂತೆ ಮಾಡುವುದಕ್ಕೆ ಸಾವಿರಾರು ಸೇವಕರ ಗುಲಾಮರ ಅವಶ್ಯಕತೆ ಹೆಚ್ಚಾಯಿತು. ಗುಲಾಮರ ಸಂಖ್ಯೆ ಹೆಚ್ಚಾದಂತೆ ಅವರ ಸ್ಥಾನಮಾನಗಳ ಬಗ್ಗೆಯೂ ಚಿಂತನೆಗಳು ನಡೆದವು. ಅವರ ಸಬಲೀಕರಣಕ್ಕಾಗಿ ಹಲವಾರು ಸಂಘ-ಸಂಸ್ಥೆಗಳು ನೈತಿಕತೆಯ ಮತ್ತು ಧಾರ್ಮಿಕ ಹಿನ್ನಲೆಯಲ್ಲಿ ಹುಟ್ಟಿಕೊಂಡು ಕಾರ್ಯಾರಂಭ ಮಾಡಿದವು. ಅವರ ಸಬಲೀಕರಣವನ್ನು ಉತ್ತರದ ರಾಜ್ಯಗಳು ಎತ್ತಿ ಹಿಡಿದರೆ ದಕ್ಷಿಣದ ರಾಜ್ಯಗಳು ತೀವ್ರವಾಗಿ ವಿರೋಧಿಸಲಾರಂಭಿಸಿದವು. ಗುಲಾಮಗಿರಿಯು ಕೇವಲ ಸಾಮಾಜಿಕ ಅದೊಂದು ಆರ್ಥಿಕ ಸಮಸ್ಯೆಯಾಗಿಯೂ ಮುಂದುವರಿಯಿತು", (ಪುಟ 42) ಪ್ರತ್ಯೇಕತಾ ನೀತಿಯು ಹಲವರ ಪ್ರಯತ್ನದಿಂದಾಗಿ, ಕಾನೂನುಬಾಹಿರವಾಗಿದ್ದರೂ ಅಮೇರಿಕಾದ ಕೆಲವು ಸಾಮಾಜಿಕ ವಿಷಯಗಳಲ್ಲಿ ಇನ್ನೂ ಸಹ ಪ್ರತ್ಯೇಕತೆಯಿಂದ ಉಳಿದುಕೊಂಡಿದೆ ಎಂದು ಲೇಖಕರು ತಿಳಿಸುತ್ತಾರೆ.

"ರೇಚಲ್ ಕುರಿಯನ್‌ರ ಅಮೇರಿಕಾದಲ್ಲಿ ವರ್ಣಭೇದ ನೀತಿ: ಕಪ್ಪು ಅಮೇರಿಕನ್ನರ ಸಮಸ್ಯೆಗಳು" 'ಜ್ಯೋತಿ ಶಿವಕುಮಾರ್' ಅನುವಾದಿಸಿದ್ದು ಮೂರನೇ ಲೇಖನವಾಗಿದೆ.

ಒಂದು ಗುಂಪಿನ ಜನರು ಇನ್ನೊಂದು ಗುಂಪಿನ ಜನರಿಗಿಂತ ನೈತಿಕವಾಗಿ ಅಥವಾ ಬೌದ್ಧಿಕವಾಗಿ ಮೇಲ್ವರ್ಗಕ್ಕೆ ಸೇರಿದವರೆಂದು ವಾದಿಸುವುದನ್ನೇ ವರ್ಣಭೇದವೆಂದು ಹೇಳಬಹುದೆನ್ನುತ್ತಾರೆ ಲೇಖಕರು. ಅಮೇರಿಕಾ ನೆಲದಲ್ಲಿ ಆಫ್ರಿಕನ್ನರ ಗುಲಾಮಗಿರಿಯಿಂದ ಸ್ವಾತಂತ್ರ್ಯದವರೆಗಿನ ಹೋರಾಟದ ಕತೆ ಹೃದಯಸ್ಪರ್ಶಿಯಾಗಿದೆ. ಈ ಪದ್ಧತಿಯ ಹಿಂದಿರುವ ಅಮಾನವೀಯತೆಯನ್ನು ತಿಳಿಯಬೇಕಾದರೆ ಯೂರೋಪ್ ಮತ್ತು ಅಮೇರಿಕಾದಲ್ಲಿ ಈ ಗುಲಾಮಗಿರಿಯ ಬೆಳವಣಿಗೆಯನ್ನು ಹಿನ್ನೆಲೆಯಲ್ಲಿ ತಿಳಿಯಬಹುದು ಎಂದು ಲೇಖಕರು ಯೂರೋಪ ಮತ್ತು ಅಮೇರಿಕಾದಲ್ಲಿ ಬೆಳೆದು ಬಂದ ಬಗೆಯನ್ನು ವಿಸ್ತಾರವಾಗಿ ತಿಳಿಸಿದ್ದಾರೆ.

'ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಸಂವಿಧಾನ' ಕುರಿತು 'ಕೆ.ಎಂ. ಲೋಕೇಶ್ ಅವರು ವಿಮರ್ಶಿಸಿದ್ದಾರೆ. ಇದು ನಾಲ್ಕನೇ ಲೇಖನವಾಗಿದ್ದು ಇದರಡಿಯಲ್ಲಿ ಅಮೇರಿಕಾ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ ಮತ್ತು ಅದರ ಸಂವಿಧಾನದ ಬಗ್ಗೆ ಲೇಖಕರು ವಿವರವಾಗಿ ತಿಳಿಸುತ್ತಾ ವಿಮರ್ಶಿಸಿದ್ದಾರೆ.

ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮವು ಪ್ರಪಂಚದ ಇತಿಹಾಸದಲ್ಲಿ ಮಹತ್ತರ ಸ್ಥಾನವನ್ನು ಹೊಂದಿದೆ. ಇಂಗ್ಲೆಂಡಿನಲ್ಲಿ ಹಾಗೂ ಯೂರೋಪ್ ಖಂಡದ ಇತರೆ ಭಾಗಗಳಲ್ಲಿ ತಮ್ಮ ಧಾರ್ಮಿಕ ನಂಬಿಕೆಗಳು, ಪದ್ಧತಿಗಳು ಅನುಷ್ಠಾನಕ್ಕೆ ಸ್ವಾತಂತ್ರ್ಯ ಸಾಲದೆಂದು ಭಾವಿಸಿದರು. ನಂತರ ಅಲ್ಲಿಂದ ಈ "ಹೊಸ ಪ್ರಪಂಚಕ್ಕೆ" ಸಾಗರೋಪಾದಿಯಲ್ಲಿ ಆಗಮಿಸಿದ ವಲಸೆಗಾರರ ನಿರಂತರ ಸ್ವಾತಂತ್ರ್ಯ ಪ್ರೇಮವೇ ಅಮೇರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯಾಯಿತು ಎನ್ನುತ್ತಾರೆ. ಲೇಖಕರು ಭೌಗೋಳಿಕ, ರಾಜಕೀಯ, ಆರ್ಥಿಕ ಹಾಗೂ ಆಡಳಿತಾತ್ಮಕವಾದ ಸಾರ್ವಭಾಮತ್ವವನ್ನು ಅಮೇರಿಕನ್ನರ ಮೇಲೆ ಹೇರಲು ಪ್ರಯತ್ನಿಸಿದಾಗ, ದೂರದ ಅಮೇರಿಕಾದಲ್ಲಿ ಈಗಾಗಲೇ ಸ್ವತಂತ್ರ ಸರ್ಕಾರ ವ್ಯವಸ್ಥೆಯಲ್ಲಿ ಅನುಭವ ಪಡೆದಿದ್ದ ವಲಸೆಗಾರರು ಮಾತೃರಾಷ್ಟ್ರ ಇಂಗ್ಲೆಂಡಿನ ಮೇಲೆ ದಂಗೆ ಎದ್ದರು. ಆ ಮೂಲಕ ತಮ್ಮ ಹೃದಯಕ್ಕೆ ಹತ್ತಿರವಾದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪಡೆದುಕೊಂಡು ಅವುಗಳನ್ನು ಲಿಖಿತ ಸಂವಿಧಾನ ರೂಪದಲ್ಲಿ ಬಲಪಡಿಸಿಕೊಂಡರು. ಅಮೇರಿಕಾದ ಹದಿಮೂರು ವಸಾಹತುಗಳ ಈ ಹೋರಾಟ ಹಾಗೂ ಕ್ರಾಂತಿಯ ತತ್ವಗಳು ಪ್ರಪಂಚದ ಇನ್ನಿತರ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಸ್ಫೂರ್ತಿಯ ಸೆಲೆಯಾಯಿತು ಎಂದು ತಿಳಿಸುತ್ತಾರೆ.

ಸ್ವಾತಂತ್ರ್ಯೋತ್ತರ ಅಮೇರಿಕಾ ರಾಜಕಾರಣದ ಆಯಾಮಗಳು ಐದನೇ ಲೇಖನವಾಗಿದ್ದು ಇದನ್ನು ರಮೇಶ ನಾಯಕ ವಿಶ್ಲೇಷಿಸಿದ್ದಾರೆ.

ಯೂರೋಪಿನಲ್ಲಿನ ವಿಚಾರ ಕ್ರಾಂತಿಯಿಂದ ರೂಪಿತಗೊಂಡ ಶಿಕ್ಷಣವು ಅಮೇರಿಕಾದಲ್ಲಿ ಬದಲಾವಣೆಯ ಹೊಸ ಗಾಳಿಯನ್ನು ಬಿಸಿತು. ಕೇಲವೇ ವರ್ಷಗಳಲ್ಲಿ ಯೂರೋಪಿನಲ್ಲಿ ಬೋಧಿಸುತ್ತಿದ್ದ ಸರಿಸಮಾನ ಶಿಕ್ಷಣವು ಅಮೇರಿಕದಲ್ಲಿ ದೊರೆಯಲಾರಂಭಿಸಿತು. ಅಮೇರಿಕಾ ದೇಶದಲ್ಲಿ ಹೊಸ ಮಾರ್ಗಗಳು ಹುಟ್ಟಲು ಪತ್ರಿಕಾರಂಗವು ವಿಶೇಷವಾಗಿ ದುಡಿಯಿತು. ಸಾಹಿತ್ಯ ಕ್ಷೇತ್ರದಲ್ಲೂ ಅದ್ಭುತ ಬೆಳವಣಿಗೆಗಳಾದವು. ಕಲಾಕಾರರು ತಮ್ಮ ಕುಂಚಗಳಿಂದ ಅಮೇರಿಕಾದ ನೈಜ ಚಿತ್ರಣವನ್ನು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾದರು. ಪ್ರಗತಿಪರ ಚಟುವಟಿಕೆಗಳಿಂದ ಉತ್ತೇಜಿತರಾದ ಕೆಲವು ಸಾಮಾಜಿಕ ಕಾರ್ಯಕರ್ತರು ಅನೇಕ ಸಂಘ-

ಸಂಸ್ಥೆಗಳನ್ನು ಸ್ಥಾಪಿಸಿ ಜನರ ನೋವುಗಳಿಗೆ ಸ್ಪಂದಿಸಿದರು. ಕೈಗಾರಿಕೆ ಮತ್ತು ವ್ಯವಸಾಯೋತ್ಪನ್ನಗಳು ಕೂಡಾ ಆಗಾಧ ಪ್ರಮಾಣದಲ್ಲಿ ನಿರ್ಮಾಣವಾಗಿದ್ದು, ಅದನ್ನು ವಿಕ್ರಯಿಸಲು ವಿಶಾಲ ಮಾರುಕಟ್ಟೆ ಬೇಕಾಗಿದ್ದರಿಂದ ಬಲಾಢ್ಯ ರಾಷ್ಟ್ರವಾಗಿ ಬೆಳೆದು ಈ ಹಿನ್ನೆಲೆಯಲ್ಲಿ ಏಷ್ಯಾ ಮತ್ತು ದಕ್ಷಿಣ ಅಮೇರಿಕಾದ ಖಂಡಗಳಲ್ಲಿರುವ ದೇಶಗಳೊಂದಿಗೆ ತನ್ನ ವ್ಯಾಪಾರ ಚಟುವಟಿಕೆಗಳನ್ನು ಪ್ರಾರಂಭಿಸಿ, ವೃದ್ಧಿಸಿಕೊಳ್ಳತೊಡಗಿತು. ಎಂದು ತಿಳಿಸುತ್ತಾ ಅಮೇರಿಕಾ ತನ್ನ ಸ್ವಾರ್ಥಕ್ಕಾಗಿ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಬಡದೇಶಗಳನ್ನು ಹೇಗೆ ಗೋಳಾಡಿಸುತ್ತಿದೆ ಎಂದು ಅಮೇರಿಕಾವನ್ನು ಟೀಕಿಸಿದ್ದಾರೆ.

'ಇಪ್ಪತ್ತನೆಯ ಶತಮಾನದ ಅಮೇರಿಕಾ; ಆಂತರಿಕ ಮತ್ತು ಜಾಗತಿಕ ರಾಜಕಾರಣ' ಇದು ಆರನೇ ಲೇಖನವಾಗಿದ್ದು ಇದನ್ನು ರಮೇಶ ನಾಯಕ ಅವರು ವಿಶ್ಲೇಷಿಸಿದ್ದಾರೆ.

ಇಪ್ಪತ್ತನೇಯ ಶತಮಾನದಲ್ಲಿ ಅಮೆರಿಕಾ, ಜಗತ್ತೇ ಬೆರಗಾಗುವಂತೆ ಬೆಳೆದು ನಿಂತಿದೆ ಈ ಕಾಲಾವಧಿಯಲ್ಲಿ ಹಲವು ಏಳು ಬೀಳುಗಳನ್ನು ಕಂಡ ಆಂತರಿಕ ರಾಜಕಾರಣ ಹಾಗೂ ಅದೇ ಸಂದರ್ಭದಲ್ಲಿ ಜಾಗತಿಕವಾಗಿ ಅಮೇರಿಕಾ ನಿರ್ವಹಿಸಿದ ರಾಜಕಾರಣದ ಬಗೆಗೆ ಸ್ಥೂಲವಾಗಿ ಈ ಲೇಖನದಲ್ಲಿ ಚರ್ಚಿಸಲಾಗಿದೆ" ಎಂದು ತಿಳಿಸಿದ ಲೇಖಕರ ಮಾತು ಸಮರ್ಪಕವಾಗಿದೆ. ಅಭಿವೃದ್ಧಿ ರಾಜಕಾರಣವನ್ನು ಬೆಳೆಸಿಕೊಂಡರೂ ತನ್ನದೆ ದೇಶದಲ್ಲಿರುವ ಕರಿಯರ ಬಗೆಗೆ ಅಮೇರಿಕಾ ತಾಳಿರುವ ದ್ವಂದ್ವ ನಿಲುವುಗಳು ಜಾಗತಿಕ ನಾಗರಿಕ ಸಮಾಜವನ್ನು ತಲೆತಗ್ಗಿಸುವಂತೆ ಮಾಡಿರುವುದು ದುರಂತವೇ ಸರಿ ಎಂದು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ವಿದೇಶಿ ಬಂಡವಾಳದ ನೇರ ಹೂಡಿಕೆಯಲ್ಲಿ ಅತಿದೊಡ್ಡ ರಾಷ್ಟ್ರ ಅಮೇರಿಕಾವಾಗಿದೆ. ಅದರಂತೆ ಭಾರತದ ಬಂಡವಾಳಗಾರರು ಸಹ 2008–2010ನೇಯ ಸಾಲಿನಲ್ಲಿ ಸುಮಾರು ಹತ್ತು ಶತಕೋಟಿ ಡಾಲರನ್ನು ಅಮೇರಿಕಾದ ವಿವಿಧ ಕ್ಷೇತ್ರಗಳಲ್ಲಿ ಹೂಡಿದ್ದಾರೆ. ಇಂತಹ ನೇರ ಹೂಡಿಕೆಯಲ್ಲದೆ ಬೇರೆ ಬೇರೆ ವಲಯದಲ್ಲಿಯೂ ಸಹ ಒಟ್ಟು ಸುಮಾರು ಐವತ್ತು ಶತಕೋಟಿ ಡಾಲರ್‌ನಷ್ಟು ಪ್ರಮಾಣದ ಭಾರೀ ಬಂಡವಾಳವನ್ನು ಅಮೇರಿಕಾದ ಮುಕ್ತ ಮಾರುಕಟ್ಟೆಯಲ್ಲಿ ಭಾರತವು ತೊಡಗಿಸಿದೆ ಪ್ರಮುಖವಾಗಿ ಜವಳಿ, ಔಷಧಿ, ಮಾಹಿತಿ ತಂತ್ರಜ್ಞಾನ ಮತ್ತು ಸೇವಾ ವಲಯಗಳಲ್ಲಿ ಈ ಹಣವನ್ನು ಹೂಡಲಾಗಿದೆ. ಅಮೇರಿಕಾದಲ್ಲಿ ಪರೋಕ್ಷವಾಗಿ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸುತ್ತಿರುವ ಭಾರತದ ಬಂಡವಾಳವನ್ನು

[illegible]

ಅಲ್ಲಿನ ಆರ್ಥಿಕ ಶಕ್ತಿಯ ಬೆನ್ನುಲುಬಾಗಿ ನಿಲ್ಲಿಸಿದೆ. ಇಂತಹ ಅನಿವಾರ್ಯತೆಯನ್ನು ಮನಗಂಡಿರುವ ಅಮೇರಿಕಾದ ಆಡಳಿತ ಭಾರತದ ಜೊತೆಗೆ ಎಲ್ಲ ಕ್ಷೇತ್ರಗಳಲ್ಲಿ ಮುಕ್ತ ವ್ಯಾಪಾರ ಒಪ್ಪಂದ (ಫ್ರೀ ಟ್ರೈಡ್ ಅಗ್ರಿಮೆಂಟ್) ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದೆ ಎಂದು ತಿಳಿಸುತ್ತಾರೆ. ಇದು ಪ್ರಬಲ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವ ಭಾರತಕ್ಕೆ ಹೆಮ್ಮೆಯ ಸಂಗತಿಯೆಂದು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಆಗಾಧವಾದ ಪ್ರಗತಿಯನ್ನು ಇಪ್ಪತ್ತನೇಯ ಶತಮಾನದ ಅಮೇರಿಕಾ ಸಾಧಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದೆ ಎಂದು ತಿಳಿಸುತ್ತಾರೆ.

'ಒಬಾಮ ಮತ್ತು ಅಮೇರಿಕಾ' ಇದು 'ಏಳನೇ ಲೇಖನ'ವಾಗಿದ್ದು ಇದನ್ನು ನಿತ್ಯಾನಂದ ಬಿ. ಶೆಟ್ಟಿ ನಿರೂಪಿಸಿದ್ದಾರೆ. ಕರಿಯರನ್ನು ಉದ್ದೇಶಿಸಿ ನಡೆದ ಸಾಮಾಜಿಕ ಚಳುವಳಿಗಳು ಮತ್ತು ಕರಿ-ಬಿಳಿಯರ ನಡುವೆ ನಡೆದ ನಾಗರಿಕ ಹಕ್ಕುಗಳ ಹೋರಾಟ ಹಾಗೂ ರಾಜಕೀಯವಾದ ಕೆಲ ದಿಟ್ಟ ನಿರ್ಧಾರಗಳಿಂದ ಅಮೇರಿಕಾ ಹಂತ ಹಂತವಾಗಿ ಬದಲಾಯಿತು ಕರಿಯರು ಆಡಳಿತದ ಅನನ್ಯ ಕ್ಷೇತ್ರಗಳಲ್ಲಿ ಕಾಣಿಸಿಕೊಂಡರು. ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿ, ಸೆನೆಟರ್‌ಗಳಾಗಿ ಸೈನ್ಯಾಧಿಕಾರಿಗಳಾಗಿ, ಸೆಕ್ರೆಟರಿ ಆಫ್ ಸ್ಟೇಟ್ ಆಗಿ ಕರಿಯರು ಕಾಣಿಸಿಕೊಂಡರು. ಅಮೇರಿಕಾದ ಅಧ್ಯಕ್ಷ ಹುದ್ದೆಗೂ ಒಬಾಮಗಿಂತ ಮೊದಲೇ ವರ್ಚಸ್ವೀ ಕರಿಯ ನಾಯಕರಾದ ರೆವರೆಂಡ್ ಜೆಸ್ಸಿ, ಜ್ಯಾಕ್ ಸನ್ ಎರಡು ಬಾರಿ ಡೆಮಾಕ್ರಾಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಲು ಪ್ರಯತ್ನಿಸಿ ವಿಫಲರಾಗಿದ್ದರು. ಅಮೇರಿಕಾದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡಾ ಹದಿಮೂರುರಷ್ಟು ಮಾತ್ರ ಇರುವ ಕರಿಯರು ಈ ದೇಶದ ಆಡಳಿತ ಚುಕ್ಕಾಣಿ ಹಿಡಿಯುವುದು ಅಸಾಧ್ಯ ಎಂಬಂಥ ಸ್ಥಿತಿಯಲ್ಲಿ ಕಾಣಿಸಿಕೊಂಡಿದ್ದು, ಬರಾಕ್ ಒಬಾಮ ಎಂಬ ಆಫ್ರೋ ಅಮೆರಿಕನ್ ಕರಿಯ ತಂದೆಯ ಮತ್ತು ಬಿಳಿಯ ತಾಯಿಯ ಮಗ. ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿ ಎಂದು ಲೇಖಕರು ಅಮೇರಿಕಾದಲ್ಲಾದ ಸಾಮಾಜಿಕ ಪರಿವರ್ತನೆಯನ್ನು ತಿಳಿಸುತ್ತಾರೆ.

'ಕೆನಡಾ ರಾಜಕೀಯ ಆಯಾಮಗಳು' ಎಂಟನೇ ಲೇಖನವಾಗಿದ್ದು ಮೀನಿಕ್ಕರ ಎ. ಮಹಮದ್‌ರು ವಿಶ್ಲೇಷಿಸಿದ್ದಾರೆ.

ಉತ್ತರ ಅಮೇರಿಕಾದ ಉತ್ತರ ಭಾಗದಲ್ಲಿರುವ ಕೆನಡ 3,850,809 ಚ. ಮೈಲು ವಿಸ್ತೀರ್ಣ ಹೊಂದಿದ್ದು, ವಿಶ್ವದ ಮೂರನೇ ಅತಿದೊಡ್ಡ ದೇಶವಾಗಿದೆ ಸರಿಸುಮಾರು ಯುರೋಪ್‌ನಷ್ಟೇ

ವಿಸ್ತಾರವಾಗಿರುವ ಕೆನಡ, ಅಮೆರಿಕದೊಡನೆ ಸು 4000 ಕಿ.ಮೀ. ನಷ್ಟು ಉದ್ದವಾದ ಗಡಿಯನ್ನು ಹಂಚಿಕೊಂಡಿದೆ ಮೂರು ಸಮುದ್ರಗಳಲ್ಲಿ (ಪೂರ್ವದಲ್ಲಿ ಅಟ್ಲಾಂಟಿಕ್, ಪಶ್ಚಿಮದಲ್ಲಿ ಪೇಸಿಪಿಕ್ ಹಾಗೂ ಉತ್ತರದಲ್ಲಿ ಆರ್ಕಟಿಕ್)ತನ್ನ ಕರಾವಳಿಯನ್ನು ಹರಡಿಕೊಂಡಿರುವ ಕೆ1ನಡವು ರಾತ್ರೋರಾತ್ರಿ ಒಂದು ರಾಷ್ಟ್ರವಾಗಿ ಹೊರಹೊಮ್ಮಿದ್ದಲ್ಲ ಅಸಂಖ್ಯ ರಾಜಕೀಯ ಬೆಳವಣಿಗೆಗಳೊಡನೆ ಹಂತಹಂತವಾಗಿ ಕೆನಡವೆಂಬ ಭವ್ಯರಾಷ್ಟ್ರದ ನಿರ್ಮಾಣವಾಗಿದೆ ಎನ್ನುತ್ತಾರೆ. ಬ್ರಿಟಿಷರ ಆಕ್ರಮಣ, ಸರ್ಕಾರದ ಸಮಸ್ಯೆಗಳು, ಇಬ್ಭಾಗವಾದ ಕೆನಡಾ, ಜಬ್ದಾರಿಯುತ ಸರ್ಕಾರಕ್ಕಾಗಿ ಹೋರಾಟ, ಐಕ್ಯತೆಗಾಗಿ ಹೋರಾಟ, ಒಂದು ರಾಷ್ಟ್ರವಾಗಿ ಕೆನಡ, ದ್ವಿತಿಯ ಮಹಾಯುದ್ಧ ಮತ್ತು ಕೆನಡ, ಆಧುನಿಕ ಕೆನಡ ಎಂಬ ಉಪ ಶೀರ್ಷಿಕೆಗಳಡಿ ಕೆನಡಾ ದೇಶದ ವಿದ್ಯಮಾನಗಳನ್ನು, ಅಮೇರಿಕಾ–ಕೆನಡದ ಸಂಬಂಧಗಳನ್ನು ಲೇಖಕರು ವಿವರಿಸಿದ್ದಾರೆ.

ದಕ್ಷಿಣ ಅಮೇರಿಕಾ; 'ರಾಜಕೀಯ ಆಯಾಮಗಳು'. ಒಂಬತ್ತನೇ ಲೇಖನವಾಗಿದ್ದು,

'ಜೆ. ಸೋಮಶೇಖರ'ರು ದಕ್ಷಿಣ ಅಮೇರಿಕಾದ ಬಗ್ಗೆ ತಿಳಿಸಿದ್ದಾರೆ.

ದಕ್ಷಿಣ ಅಮೇರಿಕಾ ಒಂದು ಸ್ವತಂತ್ರ ಖಂಡವಾಗಿದ್ದು, ಇದು ಪನಾಮದ ಇಸ್ತಮಸ್ ಮೂಲಕ ಉತ್ತರ ಅಮೇರಿಕಾದ ಸಂಪರ್ಕವನ್ನು ಹೊಂದಿದೆ ಎಂದು ತಿಳಿಸುತ್ತಾರೆ. ದಕ್ಷಿಣ ಅಮೇರಿಕಾ ಖಂಡವು ಹದಿಮೂರು ರಾಷ್ಟ್ರಗಳನ್ನು ಒಳಗೊಂಡಿದ್ದು ಅವುಗಳೆಂದರೆ ಅರ್ಜೆಂಟೈನಾ, ಬೊಲಿವಿಯಾ, ಬ್ರೆಜಿಲ್, ಚಿಲಿ, ಕೊಲಂಬಿಯಾ, ಇಕ್ವಿಡರ್, ಫ್ರೆಂಚ್ ಗಯಾನಾ, ಗುಹೇನಾ, ಪರಾಗ್ವೆ, ಪೆರು, ಉರುಗ್ವೆ ವೆನಿಜೋಲಿಯಾ, ಸೂರಿನಾಂ ರಾಷ್ಟ್ರಗಳ ಸಂಕ್ಷಿಪ್ತ ವಿವರಗಳನ್ನು ಲೇಖಕರು ಕೊಡುತ್ತಾರೆ.

ಲ್ಯಾಟಿನ್ ಅಮೇರಿಕ: 'ಚಾರಿತ್ರಿಕ ಹಿನ್ನೋಟಗಳು'. ಹತ್ತನೇ ಲೇಖನವಾಗಿದ್ದು ಇದನ್ನು 'ಕೆ. ಪ್ರೇಮಕುಮಾರ್' ಲ್ಯಾಟಿನ್ ಅಮೇರಿಕಾದ ಬಗ್ಗೆ ವಿವರವಾಗಿ ತಿಳಿಸುತ್ತಾರೆ. ದಕ್ಷಿಣ ಅಮೇರಿಕಾ, ಮಧ್ಯ ಅಮೇರಿಕಾ, ಮೆಕ್ಸಿಕೊ ಮತ್ತು ಕ್ಯಾರಿಬಿಯನ್ ದ್ವೀಪವನ್ನು ಲ್ಯಾಟಿನ್ ಅಮೇರಿಕ ಒಳಗೊಡಿದೆನ್ನುತ್ತಾರೆ.

'ಲ್ಯಾಟಿನ್ ಅಮೇರಿಕ: ಸಮಕಾಲೀನ ರಾಜಕೀಯ ಸ್ಥಿತ್ಯಂತರಗಳು' ಹನ್ನೊಂದನೇ ಲೇಖನವಾಗಿದ್ದು ಇದನ್ನು ವೇದರಾಜ. ಎನ್.ಕೆ ಮತ್ತು ವಸಂತರಾಜು ಎನ್.ಕೆ ಅವರು ವಿಶ್ಲೇಷಿಸಿದ್ದಾರೆ. "ಐದು ಶತಮಾನಗಳ ಕಾಲ ಯೂರೋಪಯನ್ನರ ಅಡಿಯಾಳಾಗಿ ಹತ್ತೊಂಬತ್ತನೇಯ ಶತಮಾನದಲ್ಲಿ ಸ್ವತಂತ್ರವಾಗಿ

ಬೆಳವಣಿಗೆ ಸಾಧಿಸುವ ಪ್ರಯತ್ನ ಮಾಡಿತು ಆದರೆ ಅದಕ್ಕೆ ಉತ್ತರದ 'ಹಿರಿಯಣ್ಣ' ಯು.ಎಸ್.ಎ ತೀವ್ರ ಅಡೆತಡೆಗಳನ್ನು ಹಾಕಿತು. ಸತತ ಮಿಲಟರಿ ಮಧ್ಯ ಪ್ರದೇಶಗಳಿಂದ ಎಪ್ಪತ್ತರ ದಶಕದ ಹೊತ್ತಿಗೆ ಇಡೀ ಲ್ಯಾಟಿನ್ ಅಮೇರಿಕ ಖಂಡವನ್ನು 'ಅಮೇರಿಕದ ಹಿತ್ತಲು' ಆಗಿಸಿತು. ಇದರ ಫಲವಾಗಿ 1980ರ ದಶಕ, ಬೆಳವಣಿಗೆ ಮಟ್ಟಿಗೆ ಲ್ಯಾಟಿನ್ ಅಮೇರಿಕಾದ ಜನತೆಗೆ 'ಕಳಕೊಂಡ ದಶಕ'ವಾಯಿತು. 1990ರ ದಶಕದಲ್ಲಿ ಇದಕ್ಕೆ ತೀವ್ರ ಬದಲಾವಣೆಯ 'ಏಳೆಗೆಂಪು ಅಲೆ' ಎದ್ದಿದೆ. ವೆನಿಜುಲಾ ಈ ಹೊಸ ಅಲೆಯ ಹರಿಕಾರನಾಗಿದ್ದು, ಖಂಡದ ವ್ಯಾಪ್ತಿ 'ಒಳಿತಿನ ಅಕ್ಷ' ರೂಪಿಸುತ್ತಿದೆ. ಈ ಅಕ್ಷರವನ್ನು ಸೋಲಿಸಲು 'ಹಿರಿಯಣ್ಣ' ಅಮೇರಿಕಾ ಸಂಯುಕ್ತ ಸಂಸ್ಥಾನದ ಹಳೆಯ ತಂತ್ರಗಳು ಅಷ್ಟಾಗಿ ಕೆಲಸ ಮಾಡುತ್ತಿಲ್ಲ. ವೆನಿಜುಲಾದಲ್ಲಿ 'ಇಪ್ಪತ್ತನೇಯ ಶತಮಾನದ ಸಮಾಜವಾದ' ಎಂಬ ಹೊಸ ಸಾಮಾಜಿಕ ವ್ಯವಸ್ಥೆ ರೂಪಿಸುವ ಮಹಾನ್ ಪ್ರಯೋಗ ನಡೆಯುತ್ತಿದೆ. ಈ ಪ್ರಯೋಗಗಳನ್ನು ಲ್ಯಾಟಿನ್ ಅಮೇರಿಕಾ ಮಾತ್ರವಲ್ಲ, ಇಡೀ ಜಗತ್ತಿನ ಜನತೆ ಆಸಕ್ತಿ ಮತ್ತು ಆಶಾಭಾವನೆಯಿಂದ ನೋಡುತ್ತಿದ್ದಾರೆ. ವೆನಿಜುಲಾ ಇಂದು ಮಾಡಿದ್ದು ನಾಳೆ ಇಡೀ ಲ್ಯಾಟಿನ್ ಅಮೇರಿಕಾ ಮಾಡುತ್ತದೆ ಎಂಬ ಪರಿಸ್ಥಿತಿ ಇದೆ" ಎಂದು ಲೇಖಕರು ಲ್ಯಾಟಿನ್ ಅಮೇರಿಕಾದ ರಾಜಕೀಯ ಆಯಾಮಗಳನ್ನು ಸಂಕ್ಷಿಪ್ತವಾಗಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಲ್ಯಾಟಿನ್ ಅಮೇರಿಕಾದ ಆಗುಹೋಗುಗಳು ಇಪ್ಪತ್ತನೇಯ ಶತಮಾನದ ಜಾಗತಿಕ ಬೆಳವಣಿಗೆಯ ಮೇಲೆ ಗಮನಾರ್ಹ ಪ್ರಭಾವ ಬೀರಲಿವೆ ಎಂದು ತಿಳಿಸುತ್ತಾರೆ.

ಇಪ್ಪತ್ತನೇಯ ಶತಮಾನದ ಕ್ಯೂಬಾ: 'ಹೋರಾಟ ಮತ್ತು ಕ್ರಾಂತಿ'. ಹನ್ನೆರಡನೇ ಲೇಖನವಾಗಿದ್ದು 'ಸಿ.ಆರ್. ಭಟ್' ನಿರೂಪಿಸಿದ್ದಾರೆ. ಇಪ್ಪತ್ತನೇಯ ಶತಮಾನದ ಆರಂಭದಿಂದ ಕೊನೆಯವರೆಗೆ ಕ್ಯೂಬಾವು ಅಮೇರಿಕಾ ಖಂಡದಲ್ಲೇ ತನ್ನ ಉಳಿವಿಗಾಗಿ ಮಾಡಿದ ವಿವಿಧ ಮಜಲುಗಳ ಹೋರಾಟ ಮತ್ತು ಕ್ರಾಂತಿಯ ಚಿತ್ರಣಗಳನ್ನು ನೀಡಿದ್ದಾರೆ. ಈ ದೇಶದ ಜನರು ತಮ್ಮ ಸ್ವಾಯುತ್ತತೆಗಾಗಿ, ಸ್ವಾವಲಂಬನೆಗಾಗಿ, ಸ್ವಾಭಿಮಾನಕ್ಕಾಗಿ, ಸಾರ್ವಭೌಮತೆಗಾಗಿ, ವಿಶ್ವಶಾಂತಿ ಸೌಹಾರ್ದತೆಗಾಗಿ ತತ್ವನಿಷ್ಠವಾದ ಹೋರಾಟ ನಡೆಸುತ್ತಾ ಬಂದ ಶ್ರೀಮಂತ ಪರಂಪರೆಯನ್ನು ಲೇಖಕರು ಶ್ಲಾಘಿಸಿದ್ದಾರೆ.

ಜಾಗತಿಕ ಶಕ್ತಿಯಾಗಿ: 'ಅಮೇರಿಕಾ ಸಂಯುಕ್ತ ಸಂಸ್ಥಾನ'. ಇದು ಹದಿಮೂರನೇ ಲೇಖನವಾಗಿದ್ದು, ಇದನ್ನು 'ಹರ್ಷಕುಮಾರ್ ಕೆ.ಎಸ್.' ವಿಶ್ಲೇಷಿಸಿ ಅನುವಾದಿಸಿದ್ದಾರೆ.

ಅಮೇರಿಕಾ ಸಂಯುಕ್ತ ಸಂಸ್ಥಾನವು ರೂಪುಗೊಂಡ ಇನ್ನೂರು ವರ್ಷಗಳ ಅವಧಿಯಲ್ಲಿ ಅದು ಆರ್ಥಿಕವಾಗಿ, ರಾಜಕೀಯವಾಗಿ, ಸೈನಿಕನಾಗಿ ತನ್ನನ್ನು ಸದೃಢೀಕರಿಸಿಕೊಳ್ಳುತ್ತಾ ಹಂತ ಹಂತವಾಗಿ ಇಡೀ ಜಗತ್ತಿನ ಎಲ್ಲಾ ದೇಶಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು. ಅಮೇರಿಕಾ ಕಾಲ ಕಾಲಕ್ಕೆ ಕೈಗೊಂಡ ರಾಜಕೀಯ ನೀತಿಗಳು, ಜಾರಿಗೊಳಿಸಿದ ಆರ್ಥಿಕ ಸಿದ್ಧಾಂತಗಳು ಹಾಗೂ ಜಗತ್ತಿನಾದ್ಯಂತ ಮಾಡಿದ ಸೈನಿಕ ಮಧ್ಯ ಪ್ರವೇಶಿಕೆಯಿಂದಾಗಿ ಪ್ರಪಂಚದಲ್ಲಿ ಅಗ್ರರಾಷ್ಟ್ರವಾಗಿ ರೂಪುಗೊಂಡಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಅಮೇರಿಕಾದ ಸಾಮಾಜಿಕ ಚಳುವಳಿಗಾಳಾದ ಕಪ್ಪು ಅಮೇರಿಕನ್ನರ ಸ್ವಾಭಿಮಾನಿ ಚಳುವಳಿ, ಅಮೇರಿಕಾದ ಮಹಿಳಾ ಚಳುವಳಿಗಳ ಕುರಿತು ವಿವರಿಸಿದ್ದಾರೆ. ಅಲ್ಲದೆ ಅಮೇರಿಕಾ ಇತರ ದೇಶಗಳಾದ ಸ್ಪೇನ್, ಬೊಲಿವಿಯಾ, ಕ್ಯೂಬಾ, ಪನಾಮ, ಚಿಲಿ ಮತ್ತು ಏಷಿಯಾದ ಇತರ ದೇಶಗಳಿಂದ ಭಾರತ, ಚೀನಾ ಇತ್ಯಾದಿ ದೇಶಗಳಲ್ಲಿ ಅನುಸರಿಸಿದ ಅಮೇರಿಕಾ ನೀತಿಯನ್ನು ವಿವರವಾಗಿ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಈ ಹದಿಮೂರು ಲೇಖನಗಳನ್ನು ಒಳಗೊಂಡ ಈ ಕೃತಿಯ ಮುಖಾಂತರ "ಅಮೇರಿಕಾ ಸಂಯುಕ್ತ ಸಂಸ್ಥಾನವು ಜಗತ್ತಿನೆಲ್ಲೆಡೆ ಕಳೆದ ಶತಮಾನದಲ್ಲಿ ತನ್ನ ಬಂಡವಾಳ, ಆಕ್ರಮಣಕಾರಿ ಪ್ರವೃತ್ತಿ ಹಾಗೂ ದೊಡ್ಡಣ್ಣನ ಠೇಂಕಾರದಿಂದಾಗಿ ವಿಶ್ವದ ಬಹುತೇಕ ಬಡದೇಶಗಳನ್ನು ತನ್ನ ಕೈಗೊಂಬೆಗಳನ್ನಾಗಿ ಮಾಡಿಕೊಂಡಿತು. ಅದೇ ಪ್ರಕ್ರಿಯೆ ಈಗಲೂ ಮುಂದುವರೆದಿದೆ. ಯೂರೋಪಿಯನ್ನರು ಅಮೇರಿಕಾ ಪ್ರವೇಶ ಮಾಡುವ ಮೊದಲು ಅಲ್ಲಿದ್ದ ಮೂಲನಿವಾಸಿಗಳನ್ನು ಮೂಲೆಗುಂಪು ಮಾಡಿ, ಆಫ್ರಿಕಾದ ಕರಿಯರನ್ನು ಬಿಟ್ಟಿ ದುಡಿಸಿಕೊಂಡು, ಜಗತ್ತಿನ ಅತಿ ದೊಡ್ಡ ಸಾಮ್ರಾಜ್ಯಶಾಹಿಯಾಗಿ ಅಮೇರಿಕಾ ಎದ್ದು ನಿಂತಿತು. ಅಮೇರಿಕವು ತನ್ನ ಸ್ವಾತಂತ್ರ್ಯವನ್ನು ಪಡೆದುಕೊಂಡ ಕಾಲದಿಂದ ಪ್ರಸ್ತುತ ಕಾಲದವರೆಗಿನ ಚರಿತ್ರೆಯ ವಿವಿಧ ಆಯಾಮಗಳನ್ನು ಈ ಸಂಪುಟ ಒಳಗೊಂಡಿದೆ ಎನ್ನುವ 'ವಿಜಯ್ ಪೂಣಚ್ಚ ತಂಬಂಡ'ರ ಮಾತು ಸಮರ್ಪಕವಾಗಿದೆ.

ಹದಿಮೂರು ಲೇಖನಗಳನ್ನು ಆಯಾ ಲೇಖಕರು ಸರಳವಾಗಿ ಮತ್ತು ಅಮೇರಿಕದ ಸಂಪೂರ್ಣ ಅಂಶಗಳನ್ನು ವಿವರವಾಗಿ ವಿಶದವಾಗಿ ವಿಸ್ತರಿಸುವಲ್ಲಿ ಯಶಸ್ವಿಯಾಗಿದ್ದಾರೆ.

**ಕಾವ್ಯಭಾಷೆ–ಸಾಹಿತ್ಯ ವಿಮರ್ಶಾ ಲೇಖನಗಳು–ಎಂ.ಎಚ್. ಕೃಷ್ಣಯ್ಯ ಮಗನಿಗೊಂದು ಪತ್ರ (ಲೇಖನ) (ಪುಟ:184–194) :** ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ 'ಮಗನಿಗೊಂದು ಪತ್ರ' ಕವನವನ್ನು

ಎಂ.ಎಚ್. ಕೃಷ್ಣಯ್ಯ ಅವರು ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಇತರ ಕವನಗಳಿಗಿಂತ ಹೇಗೆ ಬೇರೆಯಾಗಿ ನಿಲ್ಲುತ್ತದೆ ಎಂಬಲ್ಲಿ ಅದರ ವಿಶಿಷ್ಟತೆಗಳನ್ನು ತೋರಿಸಿಕೊಟ್ಟಿದ್ದಾರೆ. ಲೇಖಕರು ಆ ಕವನ ಓದಿದಾಗ ವಿದೇಶಕ್ಕೆ ವೃತ್ತಿಯೋ ಮತ್ತೊಂದು ಕಾರಣದಿಂದ ಹೋದ ಮಗನ ಬಗ್ಗೆ ಒಬ್ಬ ವ್ಯಕ್ತಿಯ, ಒಬ್ಬ ತಂದೆಯ ಸೂಕ್ಷ್ಮ ಮನಸ್ಸಿನ ಹಲವು ಯಾತನೆಗಳ, ಅನುಭವವನ್ನು ಚಿತ್ರಿಸಿದ್ದಾರೆ.

ಮಗನ ಬಗ್ಗೆ ತಂದೆಯ ಕಳವಳ, ತಳಮಳ, ಆತಂಕಗಳನ್ನು ಸುಂದರವಾಗಿ ನಿರೂಪಿಸಿದ್ದಾರೆ. ತಂದೆಗೆ ಮಗ ಹೋಗಿರುವ ಭೋಗನಗರಿಯ ಬಗ್ಗೆ ದುಃಸ್ವಪ್ನ. ಹೆಬ್ಬಾವಿನಂತಹ ನಗರ ಅದು. ಸಾಧಿಸಿದವರನ್ನು ನುಂಗಿ ವ್ಯಕ್ತಿತ್ವವನ್ನು ಅಳಿಸುವ ವಾಣಿಜ್ಯ, ಭೋಗ ಸಂಸ್ಕೃತಿ ಅದು. ಬಿಸಿರಕ್ತದ ಯುವಕ ಮಗ, ಬದುಕಿನಲ್ಲಿ ನೋವು ನಲಿವುಂಡು ತಣಿದ ದಣಿದ ತಂದೆ ಈ ಅಂತರವೂ ತಳಮಳಕ್ಕೆ ಕಾರಣವಾಗ ಬಹುದೆಂದು ಲೇಖಕರು ತಿಳಿಸುತ್ತಾರೆ. ಸಾಮಾನ್ಯವಾದ ತಂದೆಗೆ ಅಲ್ಲಿ ಮಗ ಹಾಳಾಗುತ್ತಾನೇನೋ ಎಂಬ ಭಯ ಕಾಡುವುದು ಸಹಜ. ಆದರೆ ಈ ಕವನದ ತಂದೆಗೆ ಮಗನ ಬಗ್ಗೆ ವಿಶ್ವಾಸವಿದೆ ಪರಿಸರದಿಂದ ದೂರ ನೆಲಸಿರುವ ಮಗನಗೆ ಒಂಟಿತನ ಕಾಡುತ್ತದೆ ಎಂಬ ಆತಂಕ ಈ ತಂದೆಯದ್ದು ಎಂದು ತಿಳಿಸುವ ಲೇಖಕರು ಮಗನಿಗೆ ಒಂಟಿತನ ಅನುಭವದ ವಿಚಾರಗಳು ಒಮ್ಮುಖವಾದವು ಎನ್ನುತ್ತಾರೆ. ಮಗನನ್ನು ಕಳೆದುಕೊಂಡ ವ್ಯಕ್ತಿಗೆ ವೃದ್ಧಾಪ್ಯದಲ್ಲಿ ಅವನ ನೆನಪುಗಳು ಕಾಡುವಂತೆ, ಇದೂ ಸಹ ಅಸಹನೀಯವಾದ ಒಂಟಿತನ ಇಲ್ಲಿ. ಇದು ಮಗ–ತಂದೆ ಇಬ್ಬರನ್ನೂ ಕಾಡುವಂಥದು. ಇದು ಎರಡು ನಿಟ್ಟಿನ ಸ್ಥಿತಿ ಎಂದು ತಿಳಿಸುತ್ತಾರೆ.

ಮಗನಿಗೊಂದು ಪತ್ರ ಇದು ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ತಮ್ಮ ವೈಯಕ್ತಿಕ ಬದುಕಿನ ಘಟನೆಯ ಒತ್ತಡದಲ್ಲಿ ಬರೆದ ಕವನ ಅಲ್ಲ. ಅದು ಚಿಂತನೆಯ ಫಲವಾಗಿ ಹದಗೊಂಡ ಭಾಷೆ ಸೂಚ್ಯವಾಗಿ, ರೂಪಕ ಶಕ್ತಿಯಾಗಿ ಅನುಭವವನ್ನು ಧ್ವನಿಸುವ ಸಾಮರ್ಥ್ಯ ಪಡೆದಿದೆ ಎಂದು ಲೇಖಕರು ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಸಾಮಾನ್ಯವಾದ ಒಂದು ಘಟನೆ, ಒಂದು ಪತ್ರ ಪತ್ರವೇ ಆಗದ ವಿಸ್ಮಯಕಾರೀ ಅನುಭವವಾಗಿದೆ ಎಂದು ತಿಳಿಸುತ್ತಾರೆ.

**ಕೊನೆ ಟಿಪ್ಪಣಿ :**

1. ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ 1998 (ಆತ್ಮಚರಿತ್ರೆ), ಪಾರ್ವತಮ್ಮ ಮಹಾಲಿಂಗಶೆಟ್ಟಿ, ಪುಟ–552.
2. ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ 1998 (ಆತ್ಮಚರಿತ್ರೆ), ಪಾರ್ವತಮ್ಮ ಮಹಾಲಿಂಗಶೆಟ್ಟಿ, ಪುಟ–560.
3. ಬೆಂಕಿಯಲ್ಲಿ ಅರಳಿದ ಹೂವು, ಡಾ॥ಬಿ.ಎಸ್. ಸ್ವಾಮಿ ಪುಟ–147.
4. ಡಾ॥ ಪಾಟೀಲ ಪುಟ್ಟಪ್ಪನವರ ಜೀವನ ಚರಿತ್ರೆ, ಶಾ.ಮಂ. ಕೃಷ್ಣರಾಯ, ಪುಟ 43.
5. ಸಮಾಜಮುಖಿ ಎಂ. ಶಂಕರಮೂರ್ತಿ – ಕೌಟುಂಬಿಕ ಚಿತ್ರ, ಬೆಳವಾಡಿ ಮಂಜುನಾಥ, ಪುಟ 207–208.
6. ನಾನು – ಆತ್ಮ ಚರಿತ್ರೆ, ಖ.ಖ. ಗುಂಜಾಳ, ಪುಟ–207, 208.
7. ಕಾರಂತ – ಚಿಂತನ, ಕಡಲಾಚೆಯ ಕನ್ನಡಿಗರಿಂದ, ಸಂಪಾದಕ – ನಾಗ ಐತಾಳ, ಪುಟ–26.
8. ಅಮೇರಿಕಾ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ; ಚರಿತ್ರೆ, ಸಂಪುಟ–8, ಪುಟ–2.
9. ಅಮೇರಿಕಾ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ; ಚರಿತ್ರೆ, ಸಂಪುಟ–8, ಪುಟ–42.

* * *

# ಅಧ್ಯಾಯ – 6

# ಮಹಿಳಾ ಅಮೇರಿಕ ಪ್ರವಾಸ ಕಥನಗಳ ವಿಶ್ಲೇಷಣೆಗಳು

# ಮಹಿಳಾ ಅಮೇರಿಕ ಪ್ರವಾಸ ಕಥನಗಳ ವಿಶ್ಲೇಷಣೆಗಳು

**ಮಹಿಳಾ ಪ್ರವಾಸ ಸಾಹಿತ್ಯ :**

ಮಾನವ ನಿಸರ್ಗದ ಮಗು. ತಾಯಿಯ ತೊಡೆಯ ಮೇಲೆ ಆಡಬೇಕೆಂಬಾಸೆ ಸಹಜ. ಅದಕ್ಕೆ ಪ್ರತಿಯೊಬ್ಬರು ಪ್ರವಾಸ ಮಾಡಲು ಪ್ರಕೃತಿ ಮಾತೆಯ ಮಡಿಲೊಳು ಆಡಲು ಬಯಸುತ್ತಾರೆ. ಪ್ರವಾಸವೆಂದರೆ ಸೃಷ್ಠಿಯ ಸೊಬಗು ಸವಿಯುವದೊಂದೇ ಅಲ್ಲ. ಆದ್ದರಿಂದ ಶಿಕ್ಷಣ ಪಡೆಯಬೇಕು ಅನುಭವಿಸಿ ಆನಂದಿಸಬೇಕು. ಪುಸ್ತಕಗಳನ್ನು ಎಷ್ಟು ಓದಿದರೂ ಸ್ವತ: ನೋಡಿ ಆನಂದಿಸುವ ಸುಖ ದೊರೆಯದು. ಪ್ರತಿಯೊಂದು ದೇಶಕ್ಕೂ ಅದರದೇ ಆದ ಸಂಸ್ಕೃತಿ ರೀತಿ ರಿವಾಜು ಇದೆ. ಇದನ್ನೆಲ್ಲಾ ನೋಡಿ ಅನುಭವಿಸಿದಾಗ ತಿಳಿಯುವುದು.

ಕೆಲವರು ಭಕ್ತಿಯಿಂದ ತೀರ್ಥಯಾತ್ರೆ ಮಾಡಿದರೆ ಇನ್ನು ಕೆಲವರು ಐತಿಹಾಸಿಕ ಸಾಮಾಜಿಕ, ರಾಜಕೀಯ ಏರುಪೇರುಗಳನ್ನು ವೀಕ್ಷಿಸಲು ಪ್ರವಾಸ ಮಾಡುತ್ತಾರೆ. ಮೊದಲು ಮಹಿಳೆಯರು ಒಬ್ಬರೇ ಪ್ರವಾಸ ಮಾಡಿದುದು ವಿರಳ. ಆಗ ಅನುಕೂಲಗಳು ಅಷ್ಟಿರಲಿಲ್ಲ. ಕಾಲ ಬದಲಾದಂತೆ, ಶಿಕ್ಷಣದ ಪ್ರಭಾವವಾದಂತೆ ದೇಶ ಸುತ್ತುವ ಹಂಬಲವೂ ಮಹಿಳೆಯರಲ್ಲಿ ಹೆಚ್ಚಾಯಿತು. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ದೊರೆತಂತೆ, ಆಫೀಸಿನ ವತಿಯಿಂದ, ಶಾಲೆ ಕಾಲೇಜುಗಳಿಂದ ಹೊರಹೋಗುವ ಅವಕಾಶ ದೊರೆಯಿತು. ಈಗ ಮಹಿಳೆಯರು ಸಾಕಷ್ಟು ಪ್ರವಾಸ ಮಾಡುತ್ತಾರೆ ಆದರೆ ಅದನ್ನು ಸಾಹಿತ್ಯಕ್ಕೆ ಇಳಿಸುವವರು ಕಡಿಮೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಪ್ರವಾಸ ಕಥನದ ಕೊರತೆ ಇದೆ.

ವಚನ ಸಾಹಿತ್ಯದಲ್ಲಿ ಶರಣೆಯರು ಪ್ರವಾಸ ಮಾಡಿದುದನ್ನು ದಾಖಲಿಸಿದ ಉದಾಹರಣೆಗಳಿವೆ. ಹನ್ನೆರಡನೇ ಶತಮಾನದ ಅಕ್ಕಮಹಾದೇವಿ "ಹಸಿವಾದೊಡೆ ಭಿಕ್ಷಾನ್ನ, ತೃಷೆಯಾದೊಡೆ ಕೆರೆಹಳ್ಳ, ಶಯನಕ್ಕೆ ಪಾಳು ದೇಗುಲ ಎನ್ನುತ ಕಲ್ಯಾಣದತ್ತ ಸಾಗಿದುದನ್ನು ದಾಖಲಿಸಿದ್ದಾರೆ. ಅದಲ್ಲದೇ ಕಲ್ಯಾಣದಿಂದ ಕದಳಿಯವರೆಗೆ ತನ್ನ ಆರಾಧ್ಯ ದೇವನನ್ನು ಅರಸುತ್ತ ಸಾಗಿದ್ದಾಳೆ. ಕಾಶ್ಮೀರದಿಂದ ಕಲ್ಯಾಣದವರೆಗೆ ರಾಜಕುಮಾರಿ ಬೊಂತಾದೇವಿ 'ಬಿಡಾಡಿ' ವಚನಾಹಿತಳಾಗಿ "ಅಂತು ಇಂತು ಎಂತೆನಬೇಡ, ಬಯಲು ಎಲ್ಲೆಲ್ಲೂ ಒಂದೆಂದು ಸಾರುತ್ತಾ ಸಾಗಿದ್ದಾಳೆ."[1] ಹೀಗೆ ಹನ್ನೆರಡನೇ ಶತಮಾನದಿಂದ ಆಧುನಿಕ ಕಾಲದವರೆಗೂ ಸಾಕಷ್ಟು ಮಹಿಳೆಯರು ಸ್ವದೇಶ ಮತ್ತು ವಿದೇಶ ಪ್ರವಾಸವನ್ನು ಕೈಗೊಂಡಿದ್ದಾರೆ.

ಸ್ವದೇಶ ಪ್ರವಾಸವನ್ನು ಶ್ರೀಮತಿ.ಶಿವಲಿಂಗಮ್ಮ ಕಟ್ಟೆ. ಶ್ರೀಮತಿ.ಎಸ್.ಜಾನಕಿ ಬ್ರಹ್ಮಾವರ ಮೊದಲಾದವರನ್ನು ಕಾಣಬಹುದು. ಹಾಗೆಯೇ 1971ರಲ್ಲಿಯೇ ಲಲಿತ ಸುಬ್ಬರಾವ್ ಹಾಗೂ ಚಂದ್ರಭಾಗದೇವಿ ಮೊದಲಾದವರು ವಿದೇಶ ಪ್ರವಾಸ ಕೈಗೊಂಡು ಅದನ್ನು ಬರಹ ರೂಪಕ್ಕೆ ಇಳಿಸಿರುವವರನ್ನು ಸ್ವಲ್ಪ ಹೆಚ್ಚಾಗಿ ನೋಡಬಹುದು. ವಿದೇಶ ಪ್ರವಾಸದಲ್ಲಿ ಹಲವು ದೇಶಗಳ ಪ್ರವಾಸ ಕಥನಗಳನ್ನು ಕಾಣುತ್ತೇವೆ. ಆದರೆ ಅದರಲ್ಲಿ ಹೆಚ್ಚಾಗಿ ಅಮೇರಿಕಾ ಪ್ರವಾಸ ಕಥನಗಳೇ ಹೊರಬಂದಿವೆ ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

1. ಅಂಗೈಯಲ್ಲಿ ಯುರೋ ಅಮೇರಿಕ – ಡಾ॥. ಅನುಪಮಾ ನಿರಂಜನ
2. ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ – ಪಾರ್ವತಮ್ಮ ಮಹಾಲಿಂಗಶೆಟ್ಟಿ
3. ಅದ್ಭುತ ಅಮೇರಿಕ ಮತ್ತು ಅನ್ಯ ರಾಷ್ಟ್ರಗಳಲ್ಲಿ – ಪ್ರೊ. ಕೆ.ರಾಜೇಶ್ವರಿಗೌಡ
4. ಅಟ್ಲಾಂಟಿಕ್‌ದಾಚೆಗೆ – ಶ್ರೀಮತಿ. ಸುಧಾಮೂರ್ತಿ
5. ನಾನು ಮತ್ತು ಅಮೇರಿಕ – ಶ್ರೀಮತಿ. ಲಲಿತ ಸುಬ್ಬರಾವ್
6. ಯೂರೋ ಅಮೇರಿಕಾದ ಇಣುಕುನೋಟ – ಶ್ರೀಮತಿ. ದೇವಕಿ ಮೂರ್ತಿ
7. ಉತ್ತರ ಅಮೇರಿಕಾದಲ್ಲಿ ಚಾತುರ್ಮಾಸ್ಯ – ಶ್ರೀಮತಿ. ಲಲಿತಾ ಶಾಸ್ತ್ರಿ

ಈ ಮೊದಲಾದ ಪ್ರವಾಸ ಕಥನಗಳ ವಿಶ್ಲೇಷಣೆಯನ್ನು ಈ ಮುಂದಿನಂತೆ ನೋಡಬಹುದು.

**ಅಂಗೈನಲ್ಲಿ ಯೂರೋ ಅಮೇರಿಕ – ಡಾ॥ ಅನುಪಮ ನಿರಂಜನ :**

ಸಾಹಿತ್ಯದ ಮುಖಾಂತರ ಜಗತ್ತಿನ ಎಲ್ಲ ದೇಶಗಳ ಹಾಗೂ ಜನರ ಪರಿಚಯ ನನಗಿದ್ದೇ ಇತ್ತು. ಆದರೆ ವಿದೇಶಿರನ್ನು ಕಣ್ಣಾರೆ ಕಾಣುವ, ಅವರು ಬದುಕುವ ಪರಿಸರವನ್ನು ಅವಲೋಕಿಸುವ, ತನ್ಮೂಲಕ ಅವರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕೆಂಬ ಆಸಕ್ತಿ ಇತ್ತು ಎಂದು ಲೇಖಕಿ ತಮ್ಮ ಮನದ ಬಯಕೆಯನ್ನು ಪ್ರವಾಸ ಕಥನದ ಆರಂಭದಲ್ಲಿ ಹೇಳಿದ್ದಾರೆ. ಅದರಂತೆ ಹಲವು ದೇಶಗಳ ಪ್ರವಾಸವನ್ನು ಕೈಗೊಂಡಿದ್ದಾರೆ. ಇವರ ಪ್ರವಾಸ ಕಥನದ ಶೀರ್ಷಿಕೆಯಂತೆ ಪಶ್ಚಿಮ ಯುರೋಪ್, ಅಮೇರಿಕಾ ಪ್ರವಾಸದ ಅನುಭವವನ್ನು ಪಡೆದು ಅದನ್ನು ಕೃತಿ ರೂಪದಲ್ಲಿ ಇಳಿಸಿದ್ದಾರೆ.

ಈ ಪ್ರವಾಸ ಕಥನವು ಒಟ್ಟು 167 ಪುಟಗಳನ್ನು ಹೊಂದಿದ್ದು ಅದರಲ್ಲಿ 100 ರಿಂದ 154ರವರೆಗೆ ಅಮೇರಿಕಾ ಪ್ರವಾಸದ ಅನುಭವವನ್ನು ನಿರೂಪಿಸಿದ್ದಾರೆ. ಅದನ್ನು ಈ ಮುಂದಿನಂತೆ ನೋಡಬಹುದು.

ನ್ಯೂಯಾರ್ಕ್ ಹತ್ತಿರವಾದ ಹಾಗೆ ಗಗನಚುಂಬಿಗಳು ಕಣ್ಣಿಗೆ ಬಿದ್ದುವು. ನೀಲಿ ಸಾಗರವೂ ನಿಚ್ಚಳವಾಗಿ ಕಂಡಿತು. ನ್ಯೂಯಾರ್ಕಿನ ಕೆನಡಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಜಗತ್ತಿನಲ್ಲೇ ಅತ್ಯಂತ ದೊಡ್ಡ ವಿಮಾನ ನಿಲ್ದಾಣ. ವಿಮಾನದಿಂದ ಹೊರಬಿದ್ದು ಗವಿಯೊಳಗೆ ನಡೆದು ಹತ್ತುವ, ಇಳಿಯುವ, ನಡೆಯುವ ಎಸ್ಕಲೇಟರುಗಳಲ್ಲಿ ನಿಂತು ಸುಮಾರು ಒಂದು ಫರ್ಲಾಂಗು ದೂರ ಕ್ರಮಿಸಿದ ನಂತರ ಪಾಸ್‌ಪೋರ್ಟ್, ಕಸ್ಟಮ್ಸ್ ಚೆಕ್‌ಗಳ ಕ್ಯೂ ಕಂಡು ಅದನ್ನು ದಾಟಿ ಹೋಟಲಿಗೆ ಕರೆದೊಯ್ಯುವ ಬಸ್ ಏರುವ ಹೊತ್ತಿಗೆ ನಮ್ಮ ಮೈ, ಮನಸ್ಸು ಎರಡು ಪುಡಿಪುಡಿ ಎಂದು ಲೇಖಕಿ ಅಮೇರಿಕಾದಲ್ಲಿ ಮೊದಲ ದಿನ ಆದ ಅನುಭವವನ್ನು ಹೇಳಿಕೊಂಡಿದ್ದಾರೆ. ಅಲ್ಲದೇ ಸ್ನೇಹಿತರು ನೀಡಿದ ಮುಂಜಾಗ್ರತ ಕ್ರಮಗಳು "ದಯವಿಟ್ಟು ಕತ್ತಲಾದ ಮೇಲೆ ಒಬ್ಬೊಬ್ಬರೆ ಕರಿಯರ ಬೀದೀಲಿ ಹೋಗ್ಬೇಡಿ ಇಲ್ಲಿ ಕಳ್ಳತನ, ಕೊಲೆ, ಸುಲಿಗೆ- ಇವು ಸರ್ವೆ ಸಾಮಾನ್ಯವಾಗಿ ಬಿಟ್ಟಿವೆ ಎಲ್ಲಿ ಹೋದರೂ ಎಲ್ಲರೂ ಜೊತೆಯಲ್ಲೇ ಹೋಗಿ, ಬಂಗಾರದ ಆಭರಣ ಏನನ್ನು ಧರಿಸಬೇಡಿ"[2] ಎಂಬುದನ್ನು ಕೇಳಿ ಹೊಸ ನಾಡನ್ನು ಕಾಣಲು ಇದ್ದ ಉತ್ಸಾಹ ಕುಗ್ಗಿಹೋಯಿತೆಂದು ಲೇಖಕಿ ಹೇಳುತ್ತಾರೆ. ಎಷ್ಟೇ ಅಭಿವೃದ್ಧಿ ಹೊಂದಿದ ರಾಷ್ಟ್ರವಾದರೂ ಇಂತಹ ಅನಿಷ್ಟಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವಲ್ಲಿ ವಿಫಲವಾಗುತ್ತವೆಂಬುದನ್ನು ನೋಡಬಹುದು.

ಲೇಖಕಿ ಅಮೇರಿಕನ್ನರ ಜೀವನ ವಿಧಾನ ಸೌಲಭ್ಯಗಳನ್ನು, ಸಮಸ್ಯೆಗಳನ್ನು ಈ ಮೊದಲಾದವುಗಳ ಪರಿಶೀಲನೆ ನಡೆಸಲು ಹೆಚ್ಚಿನ ಪ್ರಯತ್ನಪಟ್ಟಿದ್ದಾರೆ ಅದನ್ನು ಈ ಕೆಳಗಿನಂತೆ ವರ್ಗೀಕರಿಸಿಕೊಂಡು ನೋಡಬಹುದು.

* ಸಾಮಾಜಿಕ ಅಂಶಗಳು
* ಆರ್ಥಿಕ ಅಂಶಗಳು
* ಸಾಂಸ್ಕೃತಿಕ ಅಂಶಗಳು
* ಇತರೆ ಅಂಶಗಳು

[illegible]

**ಸಾಮಾಜಿಕ ಅಂಶಗಳು** : ಅಮೇರಿಕಾದಲ್ಲಿ ನೀಗ್ರೋಗಳ ಪರಿಸ್ಥಿತಿ ಶೋಚನೀಯವಾಗಿದೆ ತುಂಬಾ ಕಷ್ಟಪಟ್ಟು ದುಡಿದರೂ ಹೊಟ್ಟೆ ತುಂಬುವುದಿಲ್ಲವಂತೆ, ಓಟಿ(ಮತ)ನ ಹಕ್ಕಿಲ್ಲ, ವಿದ್ಯಾಭ್ಯಾಸವಿಲ್ಲ ಹೀಗೆ ಅವರ ಶೋಚನೀಯ ಪರಿಸ್ಥಿತಿಯನ್ನು ಲೇಖಕಿ ಅವರ ಸ್ನೇಹಿತರ ನಡುವೆ ನಡೆದ ಸಂವಾದ ಮೂಲಕ ತಿಳಿಯುತ್ತದೆ – "ಬ್ಲಾಕ್ ಅಮೇರಿಕನ್ಸ್ ಇಲ್ಲಿ ಬಿಳಿಯರ ಜೊತೆ ಹೋಟೆಲಿಗೆ ಹೋಗೋ ಹಾಗಿಲ್ಲ. ನಮ್ಮೂರಿನ ಹಳ್ಳಿಗಳಲ್ಲಿ ಹರಿಜನರನ್ನು ಈಗಲೂ ಹೋಟೆಲುಗಳಿಗೆ ಸೇರಿಸೊಲ್ಲ ನೋಡಿ, ಹಾಗೇನೇ ಇಲ್ಲೂ ಇದೆ. ಇಲ್ಲಿ ಬಸ್‌ಸ್ಟ್ಯಾಂಡ್ ಮುಂತಾದ ಕಡೆಗಳಲ್ಲಿ ಬಿಳಿಯರಿಗೆ ಕರಿಯರಿಗೆ ಬೇರೆ ಬೇರೆಯೇ ಕ್ಯೂ ಇದೆ".[3] ಇವರ ಈ ಮಾತಿನಲ್ಲಿ ಅಮೇರಿಕದಲ್ಲಿರುವ ವರ್ಣ, ವರ್ಗ ವೈಷ್ಯಮದ ಸ್ವರೂಪವನ್ನು ಗುರುತಿಸುವ ಯತ್ನ ನಡೆದಿರುವುದನ್ನು ಕಾಣಬಹುದು.

**ಆರ್ಥಿಕ ಅಂಶಗಳು** : ಸ್ವತಂತ್ರ ರಾಷ್ಟ್ರವಾದ ಅಮೇರಿಕ ಪ್ರಮುಖ ಬಂಡವಾಳಶಾಹಿ ದೇಶ. ಇಲ್ಲಿ ಸಿರಿಸಂಪತ್ತು ಹೇರಳವಾಗಿದ್ದರೂ ಬಡತನ, ನಿರುದ್ಯೋಗಗಳು ಹೆಚ್ಚಾಗಿವೆ ಎನ್ನುವುದನ್ನು ಲೇಖಕಿ ಈ ಕೆಳಗಿನ ನಿದರ್ಶನವನ್ನು ಕೊಡುತ್ತಾರೆ – "ನಾವು ವಾಷಿಂಗ್ಟನ್ ನ್ಯಾಷನಲ್ ಪಾರ್ಕ್‌ನಲ್ಲಿ ಬರುತ್ತಿರುವಾಗ ಒಂದು ಪ್ರತಿಭಟನಾ ಸಭೆಯನ್ನು ಕಂಡೆವು. ಸುಮಾರು ನೂರಿನ್ನೂರು ಜನ ನಿಂತಿದ್ದರು, ಮುಖಂಡನೊಬ್ಬ ಭಾಷಣ ಮಾಡುತ್ತಿದ್ದ: 'ನಮಗೆ ಸ್ವಾತಂತ್ರ್ಯ ಬೇಕು, ಎಲ್‌ಸಾಲ್ವಡಾರಿನಲ್ಲಿ ಅಮೇರಿಕಾದ ದಬ್ಬಾಳಿಕೆ ನಿಲ್ಲಬೇಕು, ಪ್ರಪಂಚದ ಇತರ ಜನರಂತೆ ಸ್ವತಂತ್ರವಾದ ಗಾಳಿ ಕುಡಿದು, ಬದುಕಿ ಬೆಳೆಯಲು ನಮಗೂ ಅವಕಾಶ ಕೊಡಿ... ಇತ್ಯಾದಿ ಆತನ ಮಾತಿನ ಸಾರಾಂಶ'." ಇಂತಹುದೇ ಇನ್ನೊಂದು ಪ್ರತಿಭಟನೆಯನ್ನು ಲೇಖಕಿ ಶ್ವೇತಭವನದ ಮುಂದೆ ಕಂಡಿದ್ದಾರೆ.

ಹೀಗೆ ಸಮೃದ್ಧ ಅಮೇರಿಕದಲ್ಲಿ, ವಾಷಿಂಗ್ಟನ್-ಲಿಂಕನ್‌ರು ಸ್ವಾತಂತ್ರ್ಯ, ಸಮಾನತೆ ಬೋಧಿಸಿದ ನಾಡಿನಲ್ಲಿ, ಒಳಗೊಳಗೆ ಕುದಿಯುವ ಜ್ವಾಲಾಮುಖಿಗಳು ಇದ್ದೇ ಇವೆ ಇವುಗಳೆಲ್ಲಾ ಎಂದು ಶಾಂತವಾಗುವವೋ ಏನೋ ಎಂದು ಲೇಖಕಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

**ಸಾಂಸ್ಕೃತಿಕ ಅಂಶಗಳು** : ಸುಸಜ್ಜಿತವಾದ ರಂಗಮಂದಿರಗಳು ಸರಳವಾಗಿದ್ದರೂ ತುಂಬಾ ಆಕರ್ಷಕವಾಗಿವೆ. ವಾದ್ಯಗೋಷ್ಠಿ ಮತ್ತು ಅಪೆರಗಳಿಗಾಗಿ ಒಂದು ರಂಗಮಂದಿರ, ನಾಟಕ, ಸಂಗೀತ, ನಾಟಕ, ಲಘು ಅಪೆರಾಗಳಿಗಾಗಿ ಇನ್ನೊಂದು ರಂಗಮಂದಿರ. ಪ್ರಯೋಗಾತ್ಮಕ ನಾಟಕಗಳಿಗೂ ಪುಟ್ಟ ರಂಗಮಂದಿರ. ವಾಷಿಂಗ್ಟನ್ನಿನ ಕೆನಡಿ ಸೆಂಟರ್‌ನಲ್ಲಿಯೂ ಸಹ ವಾದ್ಯಗೋಷ್ಠಿ, ನಾಟಕ ಮತ್ತು ಅಪೆರಾಗಳಿಗೆ

ಬೇರೆ ಬೇರೆ ರಂಗಮಂದಿರಗಳು ಇರುವುದನ್ನೆಲ್ಲಾ ನೋಡಿದ ಲೇಖಕಿಗೆ ನಮ್ಮ ದೇಶದಲ್ಲಿ ಒಂದೊಂದು ನಗರಕ್ಕೆ ಒಂದು ರಂಗ ಮಂದಿರವಿರುವುದೇ ಹೆಚ್ಚು ಎಂದು ವಿಷಾದಿಸುತ್ತಾರೆ. ಅಮೇರಿಕನ್ನರು ಕಲೆ, ಸಾಹಿತ್ಯಕ್ಕಾಗಿ ಅಷ್ಟೊಂದು ಹಣ ವ್ಯಯ ಮಾಡುವುದು ನಿಜಕ್ಕೂ ಸಂತೋಷದ ಸಂಗತಿ ಎಂದು ಹೇಳುತ್ತಾರೆ. ಎರಡು ದೇಶಗಳ ಸಾಂಸ್ಕೃತಿಕ ಅಂಶಗಳನ್ನು ಲೇಖಕಿ ತೌಲನಿಕ ಪರಿಶೀಲನೆಗೆ ಒಳಪಡಿಸಿದ್ದಾರೆ.

ಅಮೇರಿಕಾದಲ್ಲಿ ನೆಲೆಸಿರುವ ಕನ್ನಡಿಗರ ಅಭಿಮಾನವನ್ನು ಲೇಖಕಿ ಅವರ ಸಾಹಿತ್ಯಕ, ಧಾರ್ಮಿಕ ಚಟುವಟಿಕೆಗಳು ಅವರು ಆಚರಿಸುವ ರಾಷ್ಟ್ರೀಯ ದಿನಾಚರಣೆಗಳು ಈ ಮೊದಲಾದವುಗಳನ್ನು ನೋಡಿ ತಿಳಿದುಕೊಂಡಿದ್ದಾರೆ. ಅಲ್ಲದೆ ಈಶಾನ್ಯ ಅಮೇರಿಕ ಕನ್ನಡಿಗರ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೂ ಅದರ ವಿಡಿಯೋ ನೋಡಿ ಪ್ರಶಂಸಿಸಿದ್ದಾರೆ.

**ಇತರ ಅಂಶಗಳು :** ಅಮೇರಿಕಾದಲ್ಲಿ ಐವತ್ತು ಅಂತಸ್ತುಗಳ ಕಟ್ಟಡಗಳಿರುವುದೆಲ್ಲಾ ಸರ್ವೇ ಸಾಮಾನ್ಯ. ಬ್ಯಾಟರಿ ಪಾರ್ಕ್, ವಿಶ್ವಸಂಸ್ಥೆ ಕಟ್ಟಡ, ಎಂಪೇರ್ ಸ್ಟೇಟ್ ಭವನ, ಸೆಂಟ್ರಲ್ ಪಾರ್ಕ್, ಚೈನಾ ಟೌನ್ ಇವೆಲ್ಲವೂ ಅದ್ಭುತ ಮತ್ತು ರಮ್ಯವಾಗಿವೆ ಎಂದೆನ್ನುತ್ತಾರೆ. ಬಹು ಸುಂದರ ವಿನ್ಯಾಸವುಳ್ಳ ಲಿಂಕನ್ ಸೆಂಟರ್ ಅಲ್ಲಿ ಮೂರು ವಿಭಾಗಗಳಿವೆ ಒಂದನೇಯದು ಫಿಲ್ ಹಾರ್ಮೋನಿಕ್ ಹಾಲ್. ಇದರಲ್ಲಿ ನ್ಯೂಯಾರ್ಕಿನ ಅದ್ದೂರಿ ವಾದ್ಯಮೇಳಗಳು ಜರಗುತ್ತವೆ. ಎರಡನೆಯದು ನ್ಯೂಯಾರ್ಕ್ ಸ್ಟೇಟ್ ಥಿಯೇಟರ್. ಇಲ್ಲಿ ನಾಟಕಗಳು, ಬ್ಯಾಲೆಗಳು ನಡೆಯುತ್ತವೆ. ಅಪೆರಾ ಹೌಸ್‌ನಲ್ಲಿ ನ್ಯೂಯಾರ್ಕಿನ ಪ್ರಸಿದ್ಧ ಅಪೆರಾಗಳು ನಡೆಯುತ್ತವೆ. ನೃತ್ಯ, ಸಂಗೀತ, ನಾಟಕಗಳಿಗೆ ಸಂಬಂಧಿಸಿದ ಎಲ್ಲ ಮನರಂಜನಾ ವಿಭಾಗಗಳು ಒಟ್ಟಿಗೆ ಇರುವುದು ಲಿಂಕನ್ನ ಸೆಂಟರಿನ ವಿಶೇಷ ಎನ್ನುತ್ತಾರೆ.

ಅಲಾರಾಡೋಗೆ ಸಮೀಪದಲ್ಲಿರುವ ಡಿಸ್ನಿವರ್ಲ್ಡ್ ನೋಡಿ ಸಂತೋಷಪಟ್ಟು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ. ಡಿಸ್ನಿ ಮಾಯಾಲೋಕದ ಇತಿಹಾಸದ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಕೊಡುತ್ತಾರೆ. ಅದು "ಹುಡುಗನಾಗಿದ್ದಾಗ ವಾಲ್ಟ್‌ಡಿಸ್ನಿ ಶಿಕಾಗೋ ನಗರದ ಹೂದೋಟವೊಂದರಲ್ಲಿ ಕೆಲಸ ಮಾಡುತ್ತಿದ್ದ. ವಾಸಿಸುತ್ತಿದ್ದುದು ಗ್ಯಾರೇಜ್ ಒಂದರಲ್ಲಿ. ಕೆಲಸ ಮುಗಿಸಿ ಬಂದ ಬಳಿಕ ಚಿತ್ರ ರಚಿಸುವುದು ಅವನ ಹವ್ಯಾಸ. ಈ ಗ್ಯಾರೇಜಿನಲ್ಲಿ ಒಂದು ಇಲಿ ಇತ್ತು. ಡಿಸ್ನಿ ಚಿತ್ರ ಬರೆಯುತ್ತಿದ್ದ ಹಾಳೆಯ ಬಳಿ ಕುಳಿತು ತನ್ನ ಮೀಸೆ ತಿರುವಿಕೊಳ್ಳುತ್ತಿತ್ತು. ಈ ಇಲಿಯ ಚೇಷ್ಟೆ ಡಿಸ್ನಿಯ ಮನಸೂರೆಗೊಂಡಿತು ಮುಂದೆ ವಾಲ್ಟ್‌ಡಿಸ್ನಿ ಕಾರ್ಟೂನ್ ಚಿತ್ರಗಳನ್ನು ತಯಾರಿಸಿದಾಗ ಈ ಚತುರ ಇಲಿ ಅವರ ಮಿಕಿಮೌಸ್ ಪಾತ್ರಕ್ಕೆ

ಸ್ಫೂರ್ತಿಯಾಯಿತು'[4]. ಹೀಗೆ ವಾಲ್ಟ್‌ಡಿಸ್ನಿಯ ಜೀವನ ಸಾಧನೆಯನ್ನು ಲೇಖಕಿ ಸ್ವಾರಸ್ಯಯುತವಾಗಿ ನಿರೂಪಿಸಿದ್ದಾರೆ.

ನೈಸರ್ಗಿಕ ತಾಣಗಳು ಅಮೇರಿಕಾದಲ್ಲಿ ಭವ್ಯವಾಗಿವೆ ಎಂಬುದಕ್ಕೆ ನಯಾಗರ ಜಲಪಾತದ ನಿದರ್ಶನ ನೀಡುತ್ತಾರೆ. ಇದು ಬಫೆಲೋ ನ್ಯೂಯಾರ್ಕಿನಿಂದ ಉತ್ತರಕ್ಕೆ ಸುಮಾರು ಮುನ್ನೂರ ಅರವಯತ್ತೇಳು ಮೈಲಿ ದೂರದಲ್ಲಿರುವ ನಗರ ಇದರ ಹತ್ತಿರವೇ ಜಗದ್ವಿಖ್ಯಾತ ನಯಾಗರ ಜಲಪಾತ ಸುಂದರ ಮತ್ತು ಸ್ನಿಗ್ಧವಾಗಿದೆ. ರಭಸದಿಂದ ಹರಿಯುತ್ತಿರುವ ನಯಾಗಾರದ ಹಸಿರು ನೀರು ಇದ್ದಕ್ಕಿದ್ದಂತೆ ಧುಮುಕಿ ಜಲಪಾತವಾಗಿ ಕೆಳಗೆ ಬೀಳುವ ದೃಶ್ಯ ತುಂಬಾ ಮೋಹಕವಾಗಿದೆ ಎನ್ನುವ ಲೇಖಕಿ ಈ ಜಲಪಾತ, ಹೃದಯವನ್ನು ತಣಿಸಿದ ಹಾಗೆ ಬೇರೆಲ್ಲೂ ಆಗಿಲ್ಲ ಎಂದು ಆನಂದದಿಂದ ಹೇಳಿಕೊಳ್ಳುತ್ತಾರೆ.

ಹೀಗೆ ಲೇಖಕಿ ಅಮೇರಿಕಾದಲ್ಲಿ ಇದ್ದಷ್ಟು ದಿನ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಅವುಗಳ ಸಂಕ್ಷಿಪ್ತ ವಿವರಣೆಯನ್ನು ನೀಡಿದ್ದಾರೆ.

ಯಾವುದೇ ಅಂಶವಾಗಿರಲಿ ಅದನ್ನು ಮೆಚ್ಚಿ ಬೆಲೆ ಕಟ್ಟುವುದು ಒಂದು ಹೊಣೆಗಾರಿಕೆಯ ಕೆಲಸ. ಅದಕ್ಕೆ ಉತ್ತಮ ಅಭಿರುಚಿಯೊಂದೆ ಬೇಕಾದ ಪ್ರಮುಖ ಅರ್ಹತೆ. ಈ ಅರ್ಹತೆ ಸಂಪಾದಿಸಲು ಮನ:ಪ್ರವೃತ್ತಿ ಮತ್ತು ವಿಶೇಷ ಸಂಸ್ಕಾರವೂ ಬೇಕಾಗುತ್ತದೆ. ಇದನ್ನು ನಾವು ಲೇಖಕಿಯ ಅಭಿರುಚಿಗಳಲ್ಲಿ ಸಿದ್ಧಹಸ್ತವಾಗಿರುವುದನ್ನು ಕಾಣುತ್ತೇವೆ. ಅಮೇರಿಕಾದ ಪ್ರೇಕ್ಷಣೀಯ ಸ್ಥಳಗಳು, ಅದ್ಭುತ ಕಟ್ಟಡಗಳು, ನೈಸರ್ಗಿಕ ತಾಣಗಳನ್ನು ನೋಡಿ ಅವುಗಳ ಕುರಿತು ಮುಕ್ತ ಮನಸ್ಸಿನಿಂದ ಹೊಗಳಿದ್ದಾರೆ. ಮನಸ್ಸಿಗೆ ಹಿಡಿಸದಿರುವುದನ್ನು ನೇರ–ನಿಷ್ಠುರವಾಗಿ ಅಲ್ಲಗಳೆದಿದ್ದಾರೆ.

ಲೇಖಕಿಯ ಈ ಪ್ರವಾಸ ಕಥನ ದಿನಚರಿ ರೂಪದ ಪ್ರವಾಸ ಕಥನವಾಗಿದೆ. ಇದರಲ್ಲಿ ಅಮೇರಿಕನ್ನರ ಆಚಾರ, ವಿಚಾರ, ವಿಧಿ ವಿಧಾನಗಳು, ನಂಬಿಕೆ – ನಡಾವಳಿಗಳ ಬಗ್ಗೆ ಯಾವುದೇ ಮಾಹಿತಿಯನ್ನು ನೀಡುವುದಿಲ್ಲ. ಅಮೇರಿಕನ್ನರು ಸಾಧಿಸಿದ ಅಭಿವೃದ್ಧಿ, ಅವರ ಒತ್ತಡ ಬದುಕನ್ನು ನಿರ್ವಹಿಸಲು ಯಂತ್ರಗಳಿಗೆ ಮೊರೆ ಹೋಗಿರುವುದು ಅನಿವಾರ್ಯವೆಂದು ಹೇಳುತ್ತಾರೆ.

ಲೇಖಕಿಯ ಸರಳವಾದ ನಿರೂಪಣೆ ಬೇಸರ ತರಿಸುವುದಿಲ್ಲ. ಓದಿಸಿಕೊಂಡು ಹೋಗುತ್ತದೆ. ತಮ್ಮ ಸೀಮಿತ ಪರಿಜ್ಞಾನದ ಹಿನ್ನೆಲೆಯಲ್ಲಿ ತಾವು ನೋಡಿದ ಅನುಭವಿಸಿದ ಅಂಶಗಳನ್ನು ಅವಲೋಕನಕ್ಕೆ ಒಳಪಡಿಸಿರುವುದು ಸಾರ್ಥಕವಾಗಿವೆ.

'ಲೋಕೋ ಭಿನ್ನರುಚಿ' ಎಂಬ ಮಾತಿನಂತೆ ಒಬ್ಬೊರಿಗೆ ಒಂದು ಇಷ್ಟ ಅದರಂತೆ ಅವರ ದೃಷ್ಟಿ ಇಲ್ಲಿ ಲೇಖಕಿಯ ಅಮೇರಿಕನ್ನರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಂಡಿರುವರು. ಪ್ರೇಕ್ಷಣೀಯ ಸ್ಥಳಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ಅವುಗಳ ಸೌಂದರ್ಯವನ್ನು ಅನುಭವಿಸಿದ್ದಾರೆ. ಓದುಗರಿಗೂ ಅದರ ಸವಿಯನ್ನು ಉಣಿಸಿದ್ದಾರೆ.

**ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ – ಪಾರ್ವತಮ್ಮ ಮಹಾಲಿಂಗಶೆಟ್ಟಿ :** ಆರಂಭದಲ್ಲಿ ಲೇಖಕಿಯೇ ಹೇಳಿಕೊಂಡಿರುವಂತೆ ಇಪ್ಪತ್ತು ವರ್ಷಗಳಲ್ಲಿ ಅಮೇರಿಕಾಕ್ಕೆ ಏಳು ಸಲ ಹೋಗಿ ಬಂದಿರುವರು. ಸುಮಾರು ಮುವತ್ತೆರಡು ತಿಂಗಳು ಅಲ್ಲಿ ವಾಸ ಮಾಡಿದ್ದಾರೆ. ಇದರಿಂದಾಗಿ ಎಲ್ಲವನ್ನು ಕುತೂಹಲದಿಂದ ಗಮನಿಸಿದ್ದಾರೆ.

ಈ ಪ್ರವಾಸ ಕಥನವನ್ನು ಎರಡು ಭಾಗಗಳಾಗಿ ನೋಡಬಹುದು. ಮೊದಲನೆಯದು ಅಮೇರಿಕಾದ ಇತಿಹಾಸ, ಎರಡನೆಯದು ಪ್ರವಾಸ ಕಾಲದಲ್ಲಿನ ಅನುಭವಗಳು.

ಉಚ್ಚ ಸಂಸ್ಕೃತಿ ಇಲ್ಲದ, ಸಾಧಾರಣ ಸಂಸ್ಕೃತಿಯ ಬೇರೆ ಬೇರೆ ಭಾಷೆ ಮಾತನಾಡುವ ಪ್ರತ್ಯೇಕ ಗುಂಪುಗಳು ಮೂಲ ನಿವಾಸಿಗಳಾಗಿದ್ದ, ಅಮೇರಿಕಾ ಖಂಡವನ್ನು ಕಂಡುಹಿಡಿದು ಕೇವಲ ಐನೂರು ವರ್ಷಗಳಾಗಿವೆ. ಯೂರೋಪಿನ ವಿವಿಧ ರಾಜ್ಯಗಳಿಂದ ವಲಸೆ ಹೋದವರು, ಕಾನೂನು ವ್ಯವಸ್ಥೆ ಇಲ್ಲದ ಅರಾಜಕತೆಯ ಹೊಸ ದೇಶಕ್ಕೆ ಬಂದು ನೆಲೆಸಿ, ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ, ಈಗ ಜಗತ್ತಿನಲ್ಲಿಯೇ ಪ್ರಮುಖ ರಾಷ್ಟ್ರವಾಗಿ ಬೆಳೆಯುವಂತೆ ಮಾಡಿದ್ದಾರೆ. ಇದು ಹೇಗೆ ಸಾಧ್ಯವಾಯಿತು ಎನ್ನುವ ಕುತೂಹಲ ಎಲ್ಲರಿಗೂ ಇರುವುದು ಸಹಜ (ಪುಟ 4 ಮೊದಲ ಮಾತು). ಅದರಂತೆಯೇ ಲೇಖಕಿ ಅಮೇರಿಕಾದಿಂದ ಎರಡು–ಮೂರು ಅಮೇರಿಕಾ ಚರಿತ್ರೆಯ ಇಂಗ್ಲೀಷ್ ಪುಸ್ತಕಗಳನ್ನು ತರಿಸಿ ಓದಿ, ವಿಷಯ ಸಂಗ್ರಹಿಸಿ ಅಮೇರಿಕಾದ ಸಮಗ್ರ ಇತಿಹಾಸ ಮತ್ತು ಅದು ಮುಂದುವರೆಯಲು ಕಾರಣಗಳನ್ನು ಸಂಕ್ಷಿಪ್ತ ವಿವರಣೆಯೊಂದಿಗೆ ಓದುಗರಿಗೆ ಅನುಕೂಲವಾಗಲೆಂದು ಪ್ರವಾಸ ಕಥನದ ಪ್ರಾರಂಭದಲ್ಲಿ (ಮೊದಲ ಭಾಗ) ಅಮೇರಿಕಾದ ಹುಟ್ಟು, ಬೆಳವಣಿಗೆ ಎಂಬ ಅಧ್ಯಾಯದಲ್ಲಿ ಪುಟ 1 ರಿಂದ 52ರವರೆಗೆ ತಿಳಿಸಿದ್ದಾರೆ. ಮೂಲನಿವಾಸಿಗಳು, ಸಂಸ್ಕೃತಿ, ಯೂರೋಪಿಯನ್ನರ ಆಗಮನ, ಹದಿಮೂರು ಕಾಲನಿಗಳು, ಉಚಿತ ವಿದ್ಯಾಭ್ಯಾಸ, ಬ್ರಿಟನ್‌ನೊಡನೆ ಕಾದಾಟ, ಶಾಸನ ಅಂಗೀಕಾರ, ರಾಜ್ಯ ವಿಸ್ತರಣೆ, ಕೈಗಾರಿಕಾ ಕ್ರಾಂತಿ, ಗುಲಾಮಗಿರಿ ಬಂಧ ವಿಮೋಚನೆ, ರೈಲು, ರಸ್ತೆ, ವಿದ್ಯುತ್–

ಮೋಟಾರು, ಕಾರು-ವಿಮಾನ ಹೀಗೆ ಮೊದಲಾದ ಉಪ ವಿಭಾಗಗಳ ಮೂಲಕ ಲೇಖಕಿ ಅಮೇರಿಕಾ ಸಮಗ್ರ ಇತಿಹಾಸ ಮತ್ತು ಅದು ಮುಂದುವರೆಯಲು ಕಾರಣಗಳನ್ನು ಕೊಟ್ಟಿದ್ದಾರೆ. ಕ್ರಿ.ಶ.1890ರ ದಶಕದಲ್ಲಿ ಕೈಗಾರಿಕಾ ಕ್ರಾಂತಿಯಾಯಿತು. ಹೊಸ ಹೊಸ ಸಂಶೋಧನೆ ಮತ್ತು ತಂತ್ರಜ್ಞಾನದಿಂದ ಅನೇಕ ಬದಲಾವಣೆಗಳಾಗಿ ಜನರ ಬದುಕು ಸುಲಭವಾಯಿತು. ಅಲ್ಲದೇ ಅನೇಕರು ತಾವು ಸಂಪಾದಿಸಿದ ಹೆಚ್ಚಿನ ಹಣವನ್ನು ಜನಗಳ ಹಿತಕ್ಕಾಗಿ ಉಪಯೋಗಿಸುವ ಪರಿಪಾಠ ಬೆಳೆಯಿತು. ಕಷ್ಟಪಟ್ಟು ದುಡಿಯುವ ಮನೋಭಾವ, ಕೈಗಾರಿಕೆಗಳಿಂದ ಶೀಘ್ರವಾಗಿ ಬೆಳೆದು ಜಗತ್ತಿನ ಆಗು-ಹೋಗುಗಳಲ್ಲಿ ಮುಖ್ಯ ಪಾತ್ರ ವಹಿಸುವಂತಾಗಿ, ಹೊಸ ಶಕ್ತಿಯಿಂದ ಜಗತ್ತಿನಲ್ಲಿ ಮೇಲೆ ಬಂದಿದೆ. ಇಂತಹ ಬೃಹತ್ ರಾಷ್ಟ್ರ ಐವತ್ತು ರಾಜ್ಯಗಳನ್ನು ಹೊಂದಿದ್ದು, ಅದರಲ್ಲಿ ಅನೇಕ ಸಂಸ್ಕೃತಿಗಳು ಒಳಗೊಂಡಿವೆ. ಜನರ ನಂಬಿಕೆಗಳು, ಭಾಷೆಗಳು, ಜೀವನ ಕ್ರಮಗಳೆಲ್ಲಾ ವೈಶಿಷ್ಟ್ಯಪೂರ್ಣವಾಗಿವೆ. ಜಗತ್ತಿನ ಎಲ್ಲಾ ಕಡೆಗಳಿಂದ ಬಂದಿರುವ ಮತ್ತು ಬರುತ್ತಿರುವ ಜನಗಳು ತಮ್ಮ ತಮ್ಮ ಸಂಸ್ಕೃತಿಯ ವೈವಿಧ್ಯತೆಯನ್ನು ತಂದಿದ್ದಾರೆ. ಹಲವು ವಿವಿಧ ಸಂಸ್ಕೃತಿ ಮತ್ತು ಸ್ಥಳಗಳ ಹಿನ್ನೆಲೆಯಿಂದ ಬಂದ ಜನರೆಲ್ಲಾ ಇಲ್ಲಿ ಸೇರಿರುವುದರಿಂದಲೇ ಯುನೈಟೆಡ್ ಸ್ಟೇಟ್ಸ್ ಆಗಿದೆ. ವಲಸೆ ಬಂದವರು ಅನೇಕ ಹೊಸ ಹೊಸ ಪ್ರಾವೀಣ್ಯತೆಯನ್ನು, ಸಂಪ್ರದಾಯಗಳನ್ನು ತಮ್ಮೊಡನೆ ತಂದು, ಕಷ್ಟಪಟ್ಟು ಕೆಲಸ ಮಾಡಿದ್ದರಿಂದ ಅಮೇರಿಕಾ ದೊಡ್ಡ ರಾಷ್ಟ್ರವಾಗಿ ಬೆಳೆಯಲು ಇದು ಸಹ ಸಹಾಯವಾಗಿದೆ.

ಪ್ರವಾಸ ಕಾಲದಲ್ಲಿನ ಅನುಭವಗಳನ್ನು ಸರಳವಾಗಿ ಎರಡನೆಯ ಭಾಗದಲ್ಲಿ ನಿರೂಪಿಸಿದ್ದಾರೆ. ಅಮೇರಿಕಾಕ್ಕೆ ಏಳು ಸಲ ಹೋಗಿ ಬಂದರೂ ಪ್ರಯಾಣದ ಸಿದ್ಧತೆ (ಅಮೇರಿಕಾಕ್ಕೆ ಹೋಗುವ ತಯಾರಿ, ಪ್ರಯಾಣ)ಯಲ್ಲಿ ಮೊದಲ ಪ್ರಯಾಣದ ಅನುಭವವನ್ನು ಲೇಖಕಿ ಹೇಳಿದ್ದಾರೆ. ಲೇಖಕಿ ಅಮೇರಿಕಾದಲ್ಲಿನ ಮನೆಗಳನ್ನು ವಿಶೇಷವಾಗಿ ಗಮನಸಿದ್ದಾರೆ. ಮನೆಯ ಮುಂದಿನ ಬಾಗಿಲಿನಿಂದ ಒಳಗೆ ಪ್ರವೇಶಿಸಿದ ಕೂಡಲೇ ಆ ರೂಮಿನಲ್ಲಿ ಎಲ್ಲಾ ಮನೆಗಳಲ್ಲಿ ಸಾಧಾರಣವಾಗಿ ಒಂದು ದೊಡ್ಡ ಬೀರು ಇರುತ್ತದೆ. ಒಳಗೇ ನಿಲ್ಲಬಹುದಷ್ಟು ಎತ್ತರ ಇರುತ್ತದೆ. ಅದಕ್ಕೆ ಎರಡು ದೊಡ್ಡ ಮಡಚುವ ಬಾಗಿಲುಗಳಿದ್ದು, ಅದರ ಹಿಡಿಕೆಯನ್ನು ಹಿಡಿದೆಳೆದರೆ, ಬಾಗಿಲುಗಳು ಮೇಲೆ ಕೆಳಗೆ ಇರುವ ರೇಲಿಂಗಗಳಲ್ಲಿ ಸದ್ದಿಲ್ಲದಂತೆ ಚಲಿಸಿ, ಬಾಗಿಲು ಮಡಚಿ ತೆರೆಯುತ್ತದೆ ಅಥವಾ ಮುಚ್ಚುತ್ತದೆ. ಒಳಗೆ ಮೇಲಿರುವ ರಾಡಿನ ಉದ್ದಕ್ಕೂ ಸ್ವೆಟರ್‌ಗಳು, ಕೋಟುಗಳು, ರೇನ್ ಕೋಟ್‌ಗಳು, ಜವರ್ ಕೋಟ್‌ಗಳು, ಲಾಂಗ್ ಕೋಟ್‌ಗಳನ್ನು ತಗಲು ಹಾಕಿರುತ್ತಾರೆ. ಅವಶ್ಯಕವಾದ ವಸ್ತುಗಳನ್ನು ವ್ಯವಸ್ಥಿತವಾಗಿ ಇಟ್ಟಿರುತ್ತಾರೆ.

[illegible]

[illegible]

ಅವುಗಳನ್ನೆಲ್ಲಾ ಹೊರಗೆ ಹೋಗುವಾಗ ಹಾಕಿಕೊಂಡು ಹೋಗಿ ಒಳಗೆ ಬರುವಾಗ ಅಲ್ಲೇ ಇಟ್ಟು ಬರುವಂತಹವು. ಋತುಮಾನ ಅಥವಾ ಕಾಲಕ್ಕೆ ತಕ್ಕಂತೆ ಹಾಗೂ ಸಮಯಕ್ಕೆ ಸರಿಯಾಗಿ ಸಿಗುವಂತೆ ವ್ಯವಸ್ಥಿತವಾಗಿ ಜೋಡಿಸಿಕೊಂಡಿರುವ ಸಾಮಾನುಗಳನ್ನು ನೋಡಿದರೆ, ಇಲ್ಲಿ ಅಮೇರಿಕನ್ನರ ಅಚ್ಚುಕಟ್ಟುತನವನ್ನು ನೋಡಬಹುದು. ಅಡಿಗೆ ಮನೆಯಲ್ಲಿ ಬಹಳ ಸಮಯ ಕಳೆಯ ಬೇಕಾಗಿರುವುದರಿಂದ ಅಡಿಗೆ ಮನೆ ದೊಡ್ಡದಾಗಿರುತ್ತದೆ. ಅಡುಗೆ ಮಾಡುವಾಗ ಎಣ್ಣೆ ಮುಂತಾದವು ಸಿಡಿಯದಂತೆ. ಒಂದು ಗುಂಡಿ ಒತ್ತಿದರೆ, ಒಲೆಯ ಮುಂದೆ ತೆರೆ ಏಳುತ್ತದೆ. ಮತ್ತೆ ಗುಂಡಿ ಒತ್ತಿ ಕೆಳಗೆ ಮಾಡಬಹುದು. ಫ್ರಿಜ್‌ನಂತೆ ಮೈಕ್ರೊ ಒವೆನ್ ಮತ್ತು ಒವೆನ್ ಎಲ್ಲರ ಮನೆಯಲ್ಲೂ ಇರುತ್ತದೆ. ಊಟದ ಮನೆ ಬೇರೆಯೇ ಇರುತ್ತದೆ. ಅಲ್ಲಿ ದೊಡ್ಡ ಟೇಬಲ್ ಆರೆಂಟು ಕುರ್ಚಿಗಳು ಇರುತ್ತವೆ. ಪಕ್ಕದಲ್ಲಿ ದೊಡ್ಡ ಎತ್ತರವಾದ ವಿದ್ಯುತ್ ದೀಪಗಳು ಇರುತ್ತವೆ. ಊಟದ ತಟ್ಟೆ, ಬಟ್ಟಲು, ಗ್ಲಾಸುಗಳನ್ನಿಡಲು ಒಂದು ಕಡೆ ಗಾಜಿನ ಬೀರು ಇರುತ್ತದೆ. ಪ್ರತಿಯೊಂದಕ್ಕೂ ಬಣ್ಣದ ಹೊಂದಾಣಿಕೆ, ರೂಮಿನ ಗೋಡೆಗಳ ಬಣ್ಣ, ಕೈ ಒರೆಸುವ ನ್ಯಾಪ್‌ಕಿನ್ ಬಣ್ಣ ಹೀಗೆ ಎಲ್ಲವನ್ನು ಹೊಂದಿಸಿರುತ್ತಾರೆ. ಅಮೇರಿಕನ್ನರಿಗೆ ಸ್ಟೋರು ರೂಮ್‌ನ ಅವಶ್ಯಕತೆ ಇಲ್ಲ ಏಕೆಂದರೆ ಅಂಗಡಿಯಿಂದ ತಂದ ಪ್ಯಾಕನ್ನು ಹಾಗೇ ಉಪಯೋಗಿಸುತ್ತಾರೆ. ನಮ್ಮಂತೆ ಪುಡಿ ಮಾಡುವ, ಅರೆಯುವ, ತುರಿಯುವ, ರುಬ್ಬುವ ಗೋಜೇ ಇಲ್ಲ ನಮ್ಮಂತೆ ಮಸಾಲೆಯನ್ನು ಅವರು ಉಪಯೋಗಿಸುವುದಿಲ್ಲ. ತರಕಾರಿ ಬೇಯಿಸಿ ಬರೀ ಉಪ್ಪು, ಮೆಣಸಿನಪುಡಿ ಉಪಯೋಗಿಸಿ ತಿನ್ನುತ್ತಾರೆ. ಆದರೆ ಭಾರತೀಯರಿಗೆ ಮಾತ್ರ ಎಲ್ಲಿದ್ದರೂ ಸ್ಟೋರ್ ರೂಮ್ ಬೇಕೆಬೇಕು. ಇಂಡಿಯಾದ ಅಂಗಡಿಯಿಂದ ಅಕ್ಕಿ, ಗೋಧಿಹಿಟ್ಟು, ಬೇಳೆಕಾಳುಗಳನ್ನು ಇಪ್ಪತ್ತು-ಮುವತ್ತು ಕೆ.ಜಿ. ತಂದಿಡುತ್ತಾರೆ. ಮನೆಯಲ್ಲಿ ಯಾವಾಗಲೂ ಒಂದೇ ಸಮನಾದ ಉಷ್ಣತೆ ಆರ್ದ್ರತೆ ಇರುವುದೂ ಕಾರಣವಿರಬಹುದು. ಸಾಧಾರಣವಾಗಿ ಎಲ್ಲಾ ಬೆಡ್ ರೂಮ್‌ಗಳಿಗೂ ಹೊಂದಿಕೊಂಡು ಬಾತ್‌ರೂಮ್‌ಗಳಿರುತ್ತವೆ. ಅವರವರ ಅಭಿರುಚಿಗೆ ಐಶ್ವರ್ಯಕ್ಕೆ ತಕ್ಕಂತೆ ಆ ರೂಮ್‌ಗಳನ್ನು ಅಲಂಕಾರ ಮಾಡಿರುತ್ತಾರೆ. ಸ್ನಾನ ಮಾಡಲು ಟಬ್, ಮುಖ ತೊಳೆಯಲು ವಾಷ್‌ಬೇಸಿನ್, ಕಮೋಡು, ಕಮೋಡಿನ ಪಕ್ಕದಲ್ಲೇ ಕೈಗೆ ಎಟುಕದಂತೆ ಪೇಪರ್ ರೋಲ್, ಕಾಲಿಡುವಲ್ಲಿ ಸಣ್ಣ ಕಾರ್ಪೆಟ್ ಹಾಕಿರುತ್ತಾರೆ. ಇತರ ಕೋಣೆಗಳಂತೆ ಸ್ನಾನದ ರೂಮ್‌ಗೆ ಹೆಚ್ಚಿನ ಮನ್ನಣೆ ಕೊಡುತ್ತಾರೆ. ಸ್ತ್ರೀಯರ ಸಹಜ ಸ್ವಭಾವದಂತೆ ಲೇಖಕಿ ಭೇಟಿ ಕೊಟ್ಟ ಮನೆಗಳನ್ನು ಕುತೂಹಲದಿಂದ ಮನೆ, ಅದರ ಅಚ್ಚುಕಟ್ಟುತನ, ಮನೆಯಲ್ಲಿನ ವಸ್ತುಗಳು ಎಲ್ಲವನ್ನು ಪರಿಶೀಲಿಸಿದ್ದಾರೆ. ಅಮೇರಿಕನ್ನರಿಗೆ, ತಮ್ಮ ಮನೆಯನ್ನು, ಸುತ್ತಲಿನ ಸ್ಥಳವನ್ನು ತಮ್ಮ ಊರನ್ನು

ಚೊಕ್ಕಟವಾಗಿಡಬೇಕೆನ್ನುವುದು ಹುಟ್ಟಿದಾಗಿನಂದ ಅವರಿಗೆ ರಕ್ತಗತವಾಗಿ ಬಂದಿರುವುದನ್ನು ನೋಡಬಹುದು. ಮಕ್ಕಳು ಸಹ ತಾವು ತಿಂದ ಚಾಕಲೇಟಿನ ಕಾಗದವನ್ನು ಕಸದ ಬುಟ್ಟಿಗೇ ಒಯ್ದು ಹಾಕುತ್ತಾರೆ. ಆಕಸ್ಮಾತ್ ಏನಾದರೂ ಚೆಲ್ಲಿದರೆ, ಪೇಪರ್, ಟವಲ್‌ನಂದ ಒತ್ತಿ ತೆಗೆದು ಹೇರ್ ಡ್ರಯರ್‌ನಿಂದ ಒಣಗಿಸುತ್ತಾರೆ. ಇದನ್ನು ಯಾರು ಹೇಳಿಕೊಡಬೇಕಾಗಿಲ್ಲ. ಉಸಿರಾಟದಷ್ಟೆ ಸಹಜವಾಗಿ ಸಣ್ಣಂದಿನಂದ ಬೆಳೆದು ಬಂದಿರುತ್ತದೆ. ಆದರೆ ನಮ್ಮ ದೇಶದಲ್ಲಿ ರಸ್ತೆಯನ್ನು ಸ್ವಚ್ಛವಾಗಿಡುವುದು ಪ್ರತಿ ಒಬ್ಬ ನಾಗರೀಕನ ಕರ್ತವ್ಯ ಎಂದು ತಿಳಿಯುವುದಿಲ್ಲ. ನಾವು ಸುಸಂಸ್ಕೃತರಾದಂತೆ ನಾಗರೀಕ ಪ್ರಜ್ಞೆ ಬೆಳೆಸಿಕೊಂಡಂತೆ ಸ್ವಚ್ಛತೆಯಿಂದ ಇರುವುದನ್ನು ಬೆಳೆಸಿಕೊಳ್ಳಬೇಕಾಗಿದೆ.

ಅಮೇರಿಕಾದಲ್ಲಿನ ಭಾರತೀಯರು ಕುರಿತು ಲೇಖಕಿ ಪುಟ 95–125ರವರೆಗೆ ವಿವರಿಸಿದ್ದಾರೆ. "ಪ್ರತಿ ಊರಿನಲ್ಲೆಲ್ಲಿಯೂ ಭಾರತೀಯರಿದ್ದಾರೆ ಎನ್ನಬಹುದು. ಭಾರತೀಯರು ಅಲ್ಲಿ ಉತ್ತಮ ದರ್ಜೆಯ ಕೆಲಸದಲ್ಲಿದ್ದು, ಆರ್ಥಿಕವಾಗಿ ಉತ್ತಮ ಪರಿಸ್ಥಿತಿಯಲ್ಲಿ ಇದ್ದಾರೆ ಎನ್ನುವುದು ಸಂತೋಷದ ಮತ್ತು ಹೆಮ್ಮೆಯ ವಿಷಯ. ಡಾಕ್ಟರ್‌ಗಳು, ಇಂಜಿನಿಯರ್‌ಗಳು, ವಾಣಿಜ್ಯೋದ್ಯಮಿಗಳು, ಕೈಗಾರಿಕೋದ್ಯಮಿಗಳು, ಪ್ರೊಫೆಸರ್‌ಗಳು ಇದ್ದಾರೆ. ಡಾಕ್ಟರುಗಳಲ್ಲಿ ಸ್ಪೆಷಲಿಸ್ಟರೇ ಹೆಚ್ಚು ಸರಾಸರಿ ಅಮೇರಿಕಾದ ಡಾಕ್ಟರೊಡನೆ ಹೋಲಿಸಿದರೆ, ಭಾರತೀಯ ಡಾಕ್ಟರುಗಳಲ್ಲಿ ಹೆಚ್ಚು ಪರಿಣಿತರಿದ್ದಾರೆಂದು ಹೇಳಬಹುದು. ಅವರಿಗೆ ಒಳ್ಳೆಯ ಹೆಸರೂ ಇದೆ". ಲೇಖಕಿಯ ಈ ಅಭಿಪ್ರಾಯದಲ್ಲಿ ನಾವು ಭಾರತದ ಪ್ರತಿಭಾ ಫಲಾಯನವನ್ನು ನೋಡಬಹುದು. ಪ್ರತಿಭೆ ತಕ್ಕ ಪ್ರತಿಫಲ ಸಿಗದೆ ಇರುವುದರಿಂದ ಪ್ರತಿಭಾವಂತರು ಅಮೇರಿಕಾದಲ್ಲಿ ನೆಲೆಸಿ, ಆರ್ಥಿಕವಾಗಿ ಉತ್ತಮ ಸ್ಥಿತಿವಂತರಾಗಿ ಆ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಇದು ನಿಜಕ್ಕೂ ವಿಷಾದವೆನಿಸುತ್ತದೆ.

ಅಲ್ಲಿ ಭಾರತೀಯರು ಆರ್ಥಿಕವಾಗಿ ಮೇಲಿರುವಂತೆ ಭಾರತೀಯ ಮಕ್ಕಳು ವಿದ್ಯಾಭ್ಯಾಸದಲ್ಲಿ ಮೇಲಿದ್ದಾರೆ. ಪ್ರತಿ ವರ್ಷ ಇಡೀ ಅಮೇರಿಕಾದಲ್ಲಿ ನಡೆಯುವ ಪರೀಕ್ಷೆಯಲ್ಲಿ ಪ್ರತಿಭಾವಂತರಾದ ನೂರು ವಿದ್ಯಾರ್ಥಿಗಳಲ್ಲಿ, ಏಶಿಯಾದವರೇ ಇಪ್ಪತ್ತು–ಮುವತ್ತು ಜನ ಇರುತ್ತಾರೆ. ಅದರಲ್ಲೂ ಭಾರತೀಯರು. ಭಾರತೀಯ ಮಕ್ಕಳಿಗೆ ಮೊದಲಿನಿಂದಲೂ ಕಷ್ಟಪಟ್ಟು ಓದಿ ಮುಂದೆ ಬರಬೇಕೆನ್ನುವುದು ರಕ್ತಗತವಾಗಿ ಬಂದಿರುವುದನ್ನು ನೋಡಬಹುದು. ಕೇವಲ ವಿದ್ಯಾಭ್ಯಾಸವನ್ನಲ್ಲದೇ ಬೇರೆ ಬೇರೆ ಸಹ ವಿಷಯಗಳನ್ನು ಕಲಿಯುತ್ತಾರೆ. ಅದಕ್ಕಿಂತ ಹೆಚ್ಚಾಗಿ ಅವರ ತಂದೆ–ತಾಯಿ ಕಲಿಯಲು ಪ್ರೋತ್ಸಾಹ ಕೊಡುತ್ತಾರೆ.

ಟೆನ್ನಿಸ್, ಈಜುವುದು, ಡ್ರಾಯಿಂಗ್, ಪೇಂಟಿಂಗ್, ಸಂಗೀತ, ಭರತನಾಟ್ಯ ಮೊದಲಾದವು ವಿದ್ಯಾಭ್ಯಾಸದ ಜೊತೆಗೆ ಮಕ್ಕಳಲ್ಲಿ ಅಡಗಿದ ಸೂಕ್ತ ಪ್ರತಿಭೆಯನ್ನು ಗುರುತಿಸಿ ಹೊರತರುತ್ತಾರೆ ಎಂಬ ಮಾತು ಚಿಂತನಾಗ್ರಾಹ್ಯವಾಗಿದೆ.

**ಸಮ್ಮೇಳನಗಳು** : ಪ್ರತಿ ವರ್ಷ ಜುಲೈನಲ್ಲಿ ಉತ್ತರ ಅಮೇರಿಕಾದಲ್ಲಿ ವೀರಶೈವ ಸಮ್ಮೇಳನ ನಡೆಯುತ್ತದೆ. ಅಮೇರಿಕದ ಸ್ವಾತಂತ್ರ್ಯ ದಿನ ಜುಲೈ 'ನಾಲ್ಕು', ಶನಿವಾರ, ಭಾನುವಾರಗಳ ಜೊತೆ ಅದನ್ನು ಸೇರಿಸಿ ಮೂರು ದಿನ ರಜಾ ಆಗುವುದರಿಂದ ಪ್ರತಿ ವರ್ಷ ಆ ದಿನಗಳಲ್ಲಿ ಒಂದೊಂದು ರಾಜ್ಯದಲ್ಲಿ ನಡೆಸುತ್ತಾರೆ. ಸಮ್ಮೇಳನಕ್ಕಾಗಿ ಕೆಲಸ ದಿನಗಳನ್ನು ಹೆಚ್ಚು ವ್ಯರ್ಥ ಮಾಡುವುದಿಲ್ಲ, ಸಮ್ಮೇಳನದ ಹಿಂದಿನ ದಿನದಿಂದಲೇ ಕಾರ್ಯಕ್ರಮಗಳು ಪ್ರಾರಂಭಿಸುತ್ತಾರೆ. ಅತಿಥಿಗಳಾಗಿ ರಾಜಕಾರಣಿ, ಸಾಹಿತಿ ಅಥವಾ ಬೇರೆ ಯಾರನ್ನಾದರೂ ಭಾರತದಿಂದಲೂ ಕರೆಸುತ್ತಾರೆ. ಈ ಸಮ್ಮೇಳನಗಳ ಮೂಲಕ ಭಾರತೀಯರೆಲ್ಲರೂ ಒಂದಾಗಿ ಸೇರಿ ತಮ್ಮ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಸಮ್ಮೇಳನಗಳ ಮುಖಾಂತರ ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಳ್ಳಬೇಕೆಂಬ ತಿರುಳನ್ನ ಕಾಣಬಹುದು.

ವೀರಶೈವ ಸಮ್ಮೇಳನ ನಡೆಸುವವರು ಪ್ರತಿ ವರ್ಷ ಅದಕ್ಕಾಗಿ ಹಣ ವಸೂಲಿ ಮಾಡಬೇಕಾಗುತ್ತದೆ. ಅದಕ್ಕಾಗಿ ಅವರು ಐವತ್ತು ಲಕ್ಷ ಡಾಲರ್ ಅಥವಾ ಐದು ಲಕ್ಷ ಡಾಲರ್ ಕೂಡಿಸಿ ಬ್ಯಾಂಕಿನಲ್ಲಿಟ್ಟರೆ ಅದರ ಬಡ್ಡಿಯಿಂದಲೇ ಯಾರನ್ನು ಕೇಳದೇ ಪ್ರತಿ ವರ್ಷ ಸಮ್ಮೇಳನ ನಡೆಸುತ್ತಾರೆ. ಆದರೆ ಭಾರತದಲ್ಲಿನ ನಾವು ಸಮ್ಮೇಳನಕ್ಕಾಗಿಯೇ ಹೆಚ್ಚಿನ ಹಣವನ್ನು ವ್ಯರ್ಥ ಮಾಡುತ್ತೇವೆ. ಆದರೂ ಕೂಡಾ ಸಮ್ಮೇಳನಗಳು ಯಶಸ್ವಿಯಾಗಿ ನಡೆಯುವುದು ಅನುಮಾನವೇ? ಎಂದೆನಿಸುತ್ತದೆ.

**ಅಮೇರಿಕಾದ ಸಾಮಾಜಿಕ ಸ್ವರೂಪ** : ಅಮೇರಿಕನ್ನರಲ್ಲಿ, ತಂದೆ – ತಾಯಿಗಳೂ ಸಹ ಮಕ್ಕಳ ಜೊತೆಗೆ ಇರದೆ ಸ್ವತಂತ್ರವಾಗಿರುತ್ತಾರೆ. ಇದಕ್ಕೆ ಒಂದು ನಿದರ್ಶನವೆಂದರೆ ಎಂಬತ್ತು, ಎಂಬತ್ತೈದು ವರ್ಷದ ಮುದುಕಿ ಕ್ಯಾನ್ಸರ್ ಆಗಿ ಆಪರೇಷನ್ ಮಾಡಿಸಿಕೊಳ್ಳಲು ಮಗಳ ಊರಿಗೆ ಹೋಗಿ ಆರು ತಿಂಗಳಿದ್ದು ಆಪರೇಷನ್ ಮತ್ತು ಮುಂದಿನ ಚಿಕಿತ್ಸೆ ಮುಗಿಸಿಕೊಂಡು ಮೊದಲು ತಾನು ಇದ್ದ ಕ್ಯಾಲಿಪೋರ್ನಿಯಾಕ್ಕೆ ವಾಪಸ್ಸು ಹೊರಟಿದ್ದಳು. ಈ ವಯಸ್ಸಿನಲ್ಲಿ ಮಗಳ ಮನೆಯಲ್ಲಿ ಇರಬಹುದಲ್ಲ ಎಂಬ ಲೇಖಕಿಯ ಪ್ರಶ್ನೆಗೆ ಆ ಮುದುಕಿ ನನ್ನ ಮನೆಯಲ್ಲಿ ನಾನಿರುವುದು ಹೆಚ್ಚು ಸಂತೋಷ ಅಲ್ಲವೇ

ಎಂದು ಹೇಳುವ ಅವಳ ಮಾತಿನಲ್ಲಿ ಅಮೇರಿಕನ್ನರೆಷ್ಟು ಸ್ವತಂತ್ರ ಮನೋವೃತ್ತಿಯವರು ಎಂದು ತಿಳಿಯುತ್ತದೆ.

ಅಲ್ಲದೆ ಅಮೇರಿಕನ್ನರ ವ್ಯವಹಾರಿಕ ಪ್ರವೃತ್ತಿಯಿಂದ ಸಾಮಾಜಿಕ ಜೀವನ ಹಾಳಾಗುತ್ತಿದೆ. ಅವರ ಶಿಥಿಲ ಕುಟುಂಬ ಜೀವನ ಅವರ ಮಕ್ಕಳ ಮೇಲೂ ಪ್ರಭಾವ ಬೀರುತ್ತದೆ ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ.

**ಪ್ರೇಕ್ಷಣೀಯ ಸ್ಥಳಗಳು** : ಲೇಖಕಿ ಪ್ರತಿ ಸಾರಿ ಅಮೇರಿಕಾಕ್ಕೆ ಹೋದಾಗ ಅಲ್ಲಿಯ ಅನೇಕ ಪ್ರೇಕ್ಷಣೀಯ ಸ್ಥಳಗಳು, ಮನರಂಜನಾ ಕೇಂದ್ರಗಳಿಗೆ ಭೇಟಿ ನೀಡಿದ್ದಾರೆ. ನೆನಪಿರುವ, ಅದರಲ್ಲೂ ವಿಶೇಷ ಎನಿಸಿದ್ದನ್ನು ಬರೆಯುತ್ತೇನೆಂದು ಹೇಳಿ ಅವುಗಳ ಕುರಿತು ಸಾಕಷ್ಟು ವಿಸ್ತಾರವಾದ ವಿಷಯವನ್ನು ತಿಳಿಸಿಕೊಟ್ಟಿದ್ದಾರೆ. ಅದರಲ್ಲಿ ಕೆಲವೊಂದು ಸಂಕ್ಷಿಪ್ತ ಮಾಹಿತಿ ನೀಡಬೇಕೆಂದರೆ : 1) ಗೋಲ್ಡನ್ ಟೆಂಪಲ್, ಪಿಟ್ಸ್‌ಬರ್ಗ್‌ನ ದೇವಸ್ಥಾನಗಳು, ಮ್ಯೂಸಿಯಂಗಳು, ಜಗತ್ತಿನ ಎತ್ತರವಾದ ಕಟ್ಟಡವಾದ ಸಿಯರ್ಸ್‌ಟವರ್, ಕೆನಡಿ ಸೆಂಟರ್, ಗುಹೆಗಳು–ವರ್ಜಿನಿಯಾದ ಲೋರೇ ಕೆಟ್ಸ್, Grand Canyan, Hurt's Castle, Red Wod Trees, Usimity Park, Sandiago, Disney Land, Las Vegas ಮೊದಲಾದವುಗಳನ್ನು ಸರಳವಾದ ರೀತಿಯಲ್ಲಿ ಮಾಹಿತಿಯನ್ನು ಒದಗಿಸುತ್ತಾರೆ. ಅನೇಕ ಆಕರ್ಷಣೆಗಳನ್ನೊಡ್ಡಿ ಪ್ರವಾಸಿಗರನ್ನು ಸೆಳೆಯುವ ಅಮೇರಿಕನ್ನರ ಜಾಣ್ಮೆ ಮೆಚ್ಚುವಂತದ್ದು.

**ಅಮೇರಿಕಾ ಶವ ಸಂಸ್ಕಾರದ ಗೃಹದ ಕುರಿತು :** ಲೇಖಕಿ ಪುಟ 318–323 ರವರೆಗೆ ವಿವರವಾಗಿ ತಿಳಿಸಿಕೊಟ್ಟಿರುವುದನ್ನು ನಾವಿಲ್ಲಿ ಸಂಕ್ಷಿಪ್ತವಾಗಿ ನೋಡಬಹುದು. ಯಾರಾದರೂ ಮನೆಯಲ್ಲಿ ತೀರಿಕೊಂಡಾಗ, ಅವರ ಮನೆಯವರು Funeral Homeಗೆ ಫೋನ್ ಮಾಡಿ ತಿಳಿಸುತ್ತಾರೆ. ಆ ಗೃಹದವರು ಬಂದು ಶವವನ್ನು ತೆಗೆದುಕೊಂಡು ಹೋಗಿ ಆ ದೇಹದ ರಕ್ತ ತೆಗೆದು ಕೆಡದಂತೆ ಬೇರೆ ಧ್ರಾವಕ ತುಂಬಿ ಸಹಜವಾಗಿ ಕಾಣುವಂತೆ ಮಾಡುತ್ತಾರಂತೆ. ಎಲ್ಲರಿಗೂ ಈ ಗೃಹದವರಿಗೆ ವಿಷಯ ತಲುಪಿಸುತ್ತಾರೆ. ಮನೆಯವರಿಗೆ ಬಿಡುವಾದಾಗ ಅವರ ಇಚ್ಚೆಯಂತೆ ಶವಸಂಸ್ಕಾರ ಮಾಡುತ್ತಾರಂತೆ. ಇದೆಲ್ಲವೂ ನಮಗೆ ವಿಚಿತ್ರವೆನಿಸದೆ ಇರುವುದಿಲ್ಲ.

ಒಟ್ಟಿನಲ್ಲಿ ಲೇಖಕಿ ಅಮೇರಿಕನ್ನರ ದೋಷಗಳ ಜೊತೆಗೆ ಒಳ್ಳೆಯ ಗುಣಾತ್ಮಕ ಅಂಶಗಳನ್ನು ಒತ್ತಿ ಹೇಳಿದ್ದಾರೆ. ಅವರಲ್ಲಿನ ಲೈಂಗಿಕ ಸ್ವೇಚ್ಚಾಚಾರ, ದುಂದುವೆಚ್ಚ, ವೃದ್ಧಾಶ್ರಮ, ಸಾಮಾಜಿಕ ಶೋಷಣೆ,

ಅನಿಷ್ಟಗಳನ್ನು ಟೀಕಿಸಿದ್ದಾರೆ. ಅದರಂತೆ ಅಲ್ಲಿ ಕಾನೂನಿಗೆ ಎಲ್ಲರೂ ಬದ್ದರೂ, ಎಲ್ಲ ಕೆಲಸಗಾರರು ಸರಿಸಮಾನರು ಎಂಬ ಭಾವನೆ, ಅವರ ಸಮಯ ಪ್ರಜ್ಞೆ, ಸ್ವಚ್ಛತೆ ಈ ಮೊದಲಾದವುಗಳನ್ನು ಸ್ತುತಿಸಿದ್ದಾರೆ. ನಾವು ಅವರಲ್ಲಿನ ಶ್ರೇಷ್ಠವಾದ ಉತ್ತಮ ಅಂಶಗಳನ್ನು ಅವರಿಂದ ಕಲಿಯಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

"ಅಮೇರಿಕಾದವರು, ಪ್ರತಿಯೊಂದನ್ನು ಕೂಲಂಕಷವಾಗಿ ಯೋಚಿಸಿ ಮಾಡಿದ ಕಾನೂನುಗಳನ್ನು ಅಕ್ಷರಶ: ಕಾರ್ಯರೂಪಕ್ಕೆ ತರುತ್ತಾರೆ. ಕಾನೂನು, ಪುಸ್ತಕದಲ್ಲಿರದೆ ಜನಜೀವನದಲ್ಲಿದೆ. ಪ್ರತಿದಿನದ ಉಪಯೋಗದಲ್ಲಿದೆ"[7] ಎನ್ನುವ ಲೇಖಕಿಯ ಈ ಮಾತು ಗಮನಾರ್ಹವಾಗಿದೆ. ನಮ್ಮಲ್ಲಿಯ ರಾಜಕೀಯ, ಕಾನೂನನ್ನು ಜಾರಿಗೆ ತರುವಲ್ಲಿನ ವಿಳಂಬ, ಭ್ರಷ್ಟಾಚಾರ ಇವೆಲ್ಲವನ್ನು ಪರೋಕ್ಷವಾಗಿ ಟೀಕಿಸುವುದರ ಜೊತೆಗೆ ವಿಷಾದವನ್ನು ವ್ಯಕ್ತಪಡಿಸುತ್ತಾರೆ. "ಕನ್ನಡದ ಜನತೆಗೆ ಅಮೇರಿಕಾದ ವಿಷಯ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದು ನನ್ನ ನಂಬಿಕೆ. ಇದ್ದದನ್ನು ಇದ್ದಂತೆ, ಉತ್ಪ್ರೇಕ್ಷೆ ಇಲ್ಲದೆ ಬರೆದಿದ್ದೇನೆ" ಎನ್ನುವ ಲೇಖಕಿಯ ಮಾತು ಸಮರ್ಪಕವಾಗಿದೆ. ಅಮೇರಿಕಾದ ಸಮಗ್ರ ವಿಷಯಗಳನ್ನು ಒಳಗೊಂಡು ಕಥನ ರೂಪದಲ್ಲಿ ಸಾದರಪಡಿಸಿದ್ದಾರೆ.

**ಅಟ್ಲಾಂಟಿಕ್‌ದಾಚೆಗೆ – ಶ್ರೀಮತಿ. ಸುಧಾ ಮೂರ್ತಿ :**

ಅಟ್ಲಾಂಟಿಕ್‌ದಾಚೆಗೆ ಈ ಪ್ರವಾಶ ಕಥನದಲ್ಲಿ ಅಮೇರಿಕಾ ಮತ್ತು ಪ್ಯಾರಿಸ್‌ನ ಹಲವು ಪಟ್ಟಣಗಳು ಮತ್ತು ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಸಂಬಂಧಪಟ್ಟಿದೆ. ಅಮೇರಿಕಾದ ಅಂಶಗಳನ್ನು ಹೆಚ್ಚಾಗಿ ಒಳಗೊಂಡಿಗೆ. ಅದಕ್ಕಾಗಿ ಇದನ್ನು ಅಮೇರಿಕಾ ಪ್ರವಾಸ ಕಥನವೆಂದು ಕರೆಯಬಹುದು. ಅಪರಿಚಿತ ದೇಶದಲ್ಲಿ ಒಬ್ಬರೇ ಪ್ರವಾಸ ಕೈಗೊಂಡ ದಿಟ್ಟ ಹೆಣ್ಣು ಸುಧಾಮೂರ್ತಿ. ದಿಟ್ಟ, ದೃಢ ನಿಲುವಿನಂತೆ ಇವರ ಅನುಭವದ ನಿರೂಪಣೆಯು ಸೊಗಸಾಗಿ ಸಾಗಿದೆ.

"ಏಕಾಂಗಿ ಪ್ರವಾಸ, ಶ್ರೀಮತಿ.ಸುಧಾ ಮೂರ್ತಿಯವರಿಗೆ ಸುಲಭವಾಗಿರಲಿಲ್ಲ, ಅದು ಮಧುರವೂ ಹೌದು, ಕಹಿಯೂ ಹೌದು. ಅವರೇ 'ಹೇಳಿರುವಂತೆ ಕೆಲವು ಕೆಟ್ಟ ಅನುಭವಗಳು ನನ್ನ ಧೈರ್ಯ, ಮಾನಸಿಕ ಸ್ವಾಸ್ಥ್ಯಗಳನ್ನೇ ಹಲವಾರು ಬಾರಿ ಅಲುಗಿಸಿದವು. ಗ್ರ್ಯಾಂಡ್ ಕ್ಯಾನಿಯನ್ನು ಕೊಳದ ಹೋಟೆಲ್ ಕಟ್ಟಡವಿಯಲ್ಲಿದ್ದು ಚಿಕ್ಕ ಬಂಗಲೆಯಲ್ಲಿ ನಾನೊಬ್ಬಳೇ ಇದ್ದೆ. ದಟ್ಟ ಅರಣ್ಯದ ಹೊರತು ಮತ್ತೇನೂ

ಗೋಚರಿಸಲಿಲ್ಲ. ಅಂತೆಯೇ ಲಾಸ್ ಏಂಜಲ್ಸ್‌ನ ಕಿರುಮನೆಯಲ್ಲಿ ಕೇವಲ ಒಂದು ಮುದಿಬೆಕ್ಕಿನ ಜೊತೆಯಲ್ಲಿ ಎಂಟು ದಿನ ಕಳೆದಿರುವೆ. ರಾತ್ರಿಯ ವೇಳೆ ವಾಷಿಂಗ್‌ಟನ್ನಿನಲ್ಲಿ ಲಿಂಕನ್ನಿನ ಜೆಫರಸನ್ ಸ್ಮಾರಕ ನೋಡಲು ಹೋದಾಗ ಆ ಭವ್ಯ ಸ್ಮಾರಕದೆದುರು ನಾನೊಬ್ಬಳೇ ಇದ್ದುದು ಈಗ ನೆನಪಾದರೂ ಅದ್ಹೇಗೆ ನಾನು ಹೋಗಿ ಬಂದೆನೋ ಅನಿಸುವುದು! ನ್ಯೂಯಾರ್ಕಿನ ಅನುಭವವಂತೂ ಮರೆಯಲಾರದಂಥದ್ದೇ 'ಶ್ರೀಮತಿ.ಮೂರ್ತಿಯವರನ್ನು ನೋಡಿ ಸಂಶಯಗೊಂಡ ಓರ್ವ ಸಿ.ಐ.ಬಿ. ಆಫೀಸರ್ ಅವರನ್ನು ಹಿಂಬಾಲಿಸಿಕೊಂಡು ಬಂದು ಕೊನೆಗೆ ಹೀಗೆ ಬುದ್ಧಿವಾದ ಹೇಳಿದನಂತೆ "Never travel by train at New York after 6-30pm'[8] ಎಂಬ ಲೇಖಕಿಯ ಅಭಿಪ್ರಾಯದಲ್ಲಿ ಲೇಖಕಿಯ ಪ್ರವಾಸದ ಆನಂದಾಶ್ಚರ್ಯಗಳನ್ನು ಕಾಣಬಹುದು.

"ಶ್ರೀಮತಿ.ಮೂರ್ತಿಯವರು 'Foder U.S.A. 1979' ಎಂಬ ಪುಸ್ತಕದ ಸಹಾಯದಿಂದ, ಪಟ್ಟಣಗಳ ನಕಾಶೆಯ ಸಹಾಯದಿಂದ, ಅಮೇರಿಕಾದ ಪ್ರಮುಖ ಪ್ರವಾಸಿ ತಾಣಗಳ ಸುತ್ತಾಟ ನಡೆಸಿರುವರು. ತಾವು ನೋಡಿದ ಸ್ಥಳಗಳ ವಿವರವಾದ ವರ್ಣನೆಯನ್ನು ಅವರು ಮಾಡಿರುವರು. ಒಮ್ಮೊಮ್ಮೆ ಇವರು ಕೊಡುವ ವಿವರಗಳನ್ನು ಗಮನಿಸಿದಾಗ ಇವರಲ್ಲಿ ಎಲ್ಲವನ್ನು ವಿವರಿಸಿ ಹೇಳಬೇಕೆನ್ನುವ ತವಕ ಪ್ರಧಾನವಾಗಿರುವುದನ್ನು ಕಾಣಬಹುದು. ಈ ವಿವರಗಳು ಸಾಹಿತ್ಯವಾಗಿ ನಿರೂಪಣೆಗೊಳ್ಳುವಾಗ ಮನಸ್ಸನ್ನು ಸೆರೆಹಿಡಿಯುವ ಗುಣವನ್ನು ಪಡೆದುಕೊಳ್ಳದೆ ವರದಿರೂಪವಾಗಿ ಬಿಡುತ್ತದೆ. ಆದರೂ, ಗ್ರ್ಯಾಂಡ್ ಕ್ಯಾನಿಯನ್, ಡಿಸ್ನಿಲ್ಯಾಂಡ್, ಹಾಲಿವುಡ್, ಲೂವ್ರ್ ವಸ್ತುಸಂಗ್ರಹಾಲಯ, ವರ್ಸಾಯ್ ಅರಮನೆ ಇವುಗಳನ್ನು ನೋಡಿದಾಗಿನ ಅನುಭವಗಳ ವಿವರಣೆ ವಿದ್ಯೆಯಿಂದ ಸಂಸ್ಕಾರಗೊಂಡ ಚೇತನವೊಂದರ ಸರಳ ನಿರೂಪಣೆ ಎನಿಸದಿರದು. ಶ್ರೀಮತಿ. ಮೂರ್ತಿಯವರದು ನುರಿತ ಬರವಣಿಗೆ, ಅವರ ಈ ಹಿತಮಿತವಾದ ಪ್ರವಾಸೀ ಅನುಭವಗಳು ಬೆಲೆಯುಳ್ಳವಾಗಿವೆ. ಆ ದೇಶಗಳಿಗೆ ಭೇಟಿ ನೀಡುವವರಿಗೆ ಮಾರ್ಗದರ್ಶಿಯಾಗಿದೆ."[9] ಎಸ್.ವಿದ್ಯಾಶಂಕರ ಈ ಮಾತಿನಲ್ಲಿ ಶ್ರೀಮತಿ. ಸುಧಾಮೂರ್ತಿ ಪ್ರವಾಸ ಕಥನದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿರುವುನ್ನು ಕಾಣಬಹುದು.

ಒಟ್ಟಿನಲ್ಲಿ ಲೇಖಕಿಯು ಒಬ್ಬಂಟಿಯಾಗಿ ಪ್ರವಾಸ ಕೈಗೊಂಡ ಅವರ ಧೈರ್ಯವನ್ನು ಪ್ರತಿಯೊಬ್ಬರು ಮೆಚ್ಚಬಹುದು. ಅಮೇರಿಕಾದ ಬಹುತೇಕ ರಾಜ್ಯಗಳನ್ನು ಸುತ್ತಾಡಿ ಆಯಾ ರಾಜ್ಯದ ಪ್ರೇಕ್ಷಣೀಯ ಸ್ಥಳಗಳ ವಿವರವನ್ನು ಕೃತಿಯುದ್ದಕ್ಕೂ ಕೊಟ್ಟಿದ್ದಾರೆ.

## ನಾನು ಮತ್ತು ಅಮೇರಿಕಾ – ಶ್ರೀಮತಿ. ಲಲಿತ ಸುಬ್ಬರಾವ್ :

ಶ್ರೀಮತಿ.ಲಲಿತ ಸುಬ್ಬರಾವ್‌ರು ಸಮಾಜಶಾಸ್ತ್ರದಲ್ಲಿ ಮಾಸ್ಟರ್ ಡಿಗ್ರಿ ಪಡೆಯುವ ಉದ್ದೇಶದಿಂದ ಸಂಸಾರ, ಮಕ್ಕಳನ್ನು ಬಿಟ್ಟು ಅಮೇರಿಕಾಕ್ಕೆ ಹೋಗಿ ಅಲ್ಲಿ ಒಂದು ವರ್ಷ ಕಾಲ ಇದ್ದು ವಿಶೇಷ ಅನುಭವವನ್ನು ಪಡೆದಿದ್ದಾರೆ. ಅಮೇರಿಕನ್ನರ ಜೀವನದ ಹಲವು ಮುಖಗಳನ್ನು ದರ್ಶಿಸಿ, ವಿಶೇಷವಾಗಿ ಶೈಕ್ಷಣಿಕ ವಿಷಯಗಳನ್ನು ಕಥನ ರೂಪದಲ್ಲಿ, ಪ್ರವಾಸಾನುಭವ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ.

ಯಾವೊಂದು ಕೆಲಸ ಸಾಧಿಸಬೇಕಾದರೂ ಅನೇಕ ಜನರ ಸಹಾಯವಿಲ್ಲದೆ ಆ ಕೆಲಸ ಸಮರ್ಪಕವಾಗಿ ಪೂರ್ಣಗೊಳಿಸಲು ಯಾರಿಗೂ ಸಾಧ್ಯವಿಲ್ಲ. ಅದರಲ್ಲೂ ಮಾನವನ ಸಂಸ್ಕೃತಿ ಮುಂದುವರೆದಂತೆ ಮನುಷ್ಯರಲ್ಲಿ ಪರಸ್ಪರ ಸಹಾಯ, ಸೌಹಾರ್ದ ಮತ್ತು ಅವಲಂಬನೆ ಹೆಚ್ಚುತ್ತದೆ.[10] ಎಂಬ ಲೇಖಕಿಯ ಈ ಮಾತುಗಳು ಪ್ರವಾಸ ಕಥನದುದ್ದಕ್ಕೂ ಕಾಣುತ್ತೇವೆ. ಅಮೇರಿಕಾದ ಮೊದಲ ದಿನದಿಂದ ಕೊನೆಯವರೆಗೂ ಹಲವು ಜನರ ಸಹಾಯ ಸಹಕಾರ ಪಡೆದಿದ್ದಾರೆ.

ಅಮೇರಿಕನ್ನರು, ಸ್ವಚ್ಛತೆಗೆ ಕೊಟ್ಟ ಮಹತ್ವವನ್ನು ನೋಡಿ, ಈ ಪದ್ಧತಿ ನಮ್ಮಲ್ಲೂ ಬಂದರೆ ಎಷ್ಟು ಉತ್ತಮ? ಎಂದು ಯೋಚಿಸಿದ್ದಾರೆ. ಅಂತರಾಷ್ಟ್ರೀಯ ವಿದ್ಯಾರ್ಥಿ ಗೃಹಕ್ಕೆ ತೆರಳಿದಾಗ ಅಲ್ಲಿಯ ವಿದ್ಯಾರ್ಥಿಗಳು ಸಂಭ್ರಮ–ಸಡಗರದಿಂದ ಆತ್ಮೀಯವಾಗಿ ಬರಮಾಡಿಕೊಂಡದ್ದನ್ನು ನೋಡಿ ಲೇಖಕಿ ಮೂಕವಿಸ್ಮಿತರಾಗಿದ್ದಾರೆ. "ಅಲ್ಲಿನ ಪ್ರಕೃತಿ ಸೌಂದರ್ಯ ಎಷ್ಟು ಸುಂದರವೋ ಅಲ್ಲಿಯ ಜನರ ಹೃದಯವೂ ಹಾಗೆಯೇ ಅವರ ಆದರ, ಅತಿಥ್ಯವನ್ನು ಅನುಭವಿಸಿದವರಿಗೆ ಅದರ ರುಚಿ ಗೊತ್ತು. ತಮ್ಮ ದೇಶಕ್ಕೆ ಬಂದ ಅತಿಥಿಗಳು ಯಾವ ಬಗೆಯ ತೊಂದರೆಗೂ ಒಳಗಾಗದೆ ಅಮೇರಿಕಾ ದೇಶ ಬಿಟ್ಟರೆ ಇಲ್ಲ, ಅಲ್ಲಿನವರು ಎಷ್ಟು ಒಳ್ಳೆಯ ಜನರು, ಎಂತಹ ಸುಂದರ ದೇಶ ಎಂದು ತಮ್ಮ ದೇಶವನ್ನು ಮೆಚ್ಚಿ ಹೋಗಬೇಕೆಂಬ ದೇಶಪ್ರೇಮ ಅವರಿಗೆ. ಅದಕ್ಕಾಗಿ ಅನೇಕ ವೇಳೆ ನೂರಾರು ಮೈಲಿಗಳ ದೂರದ ಸ್ಥಳಗಳಿಗೆಲ್ಲಾ ದೂರ ದೇಶದವರನ್ನು ಕರೆದು ಕೊಂಡು ಹೋಗಿ ತೋರಿಸುತ್ತಾರೆ. ಅಮೇರಿಕನ್ನರು ಆಗಾಧ ಅಗಾಧ ದೇಶ ಪ್ರೇಮಿಗಳು ಜೊತೆಗೆ ಧಾರಾಳಿಗಳು".[11] ಎಂದು ಲೇಖಕಿ ಹೇಳಿರುವುದು ಅಮೇರಿಕನ್ನರ ಕುರಿತು ಬಾಹುಳ್ಯವಾಗಿ, ವ್ಯಾಪಕವಾಗಿ ಹೊಗಳಿದ್ದಾರೆ.

ಅಮೇರಿಕಾದ ಜನಜೀವನ, ಸಂಸ್ಕೃತಿ, ನಡವಳಿಕೆಗಳನ್ನು ಕ್ರಮೇಣ ತಿಳಿದುಕೊಳ್ಳುತ್ತಾ, ಅದನ್ನೆಲ್ಲಾ ಅನುಭವದ ಮೂಲಕ ಕಂಡುಕೊಳ್ಳುತ್ತಾರೆ. ಹೇಳಿದ ಹೊತ್ತಿಗೆ ಸರಿಯಾಗಿ ಬರುವ ವಾಡಿಕೆಯನ್ನು

ನಾವು ಕಲಿಯಬೇಕಾದ ವಿಷಯ ಎಂದು ಅಮೇರಿಕನ್ನರ ಸಮಯ ಪ್ರಜ್ಞೆಯನ್ನು ಶ್ಲಾಘಿಸಿದ್ದಾರೆ. "ಕಾನೂನು ಮಾಡಿರುವುದೇ ಜನರ ಉಪಯೋಗಕ್ಕಾಗಿ. ಅದು ಆ ಕಾರ್ಯ ಮಾಡದಿದ್ದಲ್ಲಿ ಆ ಕಾನೂನಿನ ಪ್ರಯೋಜನವೇನು? ಕಾನೂನನ್ನು ಅಕ್ಷರಶ: ಉಪಯೋಗಿಸುವುದರ ಬದಲು ಅದರ ಉದ್ದೇಶವನ್ನು ನೋಡಬೇಕು ಎನ್ನುವುದು ಅವರ ಅಭಿಪ್ರಾಯ"[12] ಎನ್ನುತ್ತಾರೆ. ವ್ಯಕ್ತಿಯ ಅನುಕೂಲತೆಗೆ ತಕ್ಕಂತೆ ಕಾನೂನು ರೂಪಿಸುವ ಕ್ರಮ ಸ್ವಾಗತಾರ್ಹ.

ಲೇಖಕಿ ತನ್ನ ಅಮೇರಿಕನ್ ಮಿತ್ರನ ಜೊತೆ ರಾತ್ರಿಯ ವೇಳೆ ಆತನ ಮನೆಗೆ ಹೋದಾಗ ಆತನ ತಾಯಿ ಆದರ, ಸ್ವಭಾವ ಕಂಡು ಬೆರಗಾಗುತ್ತಾರೆ. "ಈ ರೀತಿ ನಮ್ಮ ಸ್ತ್ರೀಯರು ಅನ್ಯ ದೇಶದ ಸ್ತ್ರೀಯರನ್ನು ಆದರಿಸಿಯಾರೆ? ಅದರಲ್ಲೂ ಪ್ರಾಯದ ಮಗ, ತಿಳಿಯದ ಪರದೇಶದ ಸ್ತ್ರೀಯೊಬ್ಬಳನ್ನು ಮನೆಗೆ ಕರೆತಂದಲ್ಲಿ ಆದರಿಸಲು ಸಾಧ್ಯವೆ?" ಅರಿಯದ ಅಪರಿಚಿತರನ್ನು ಕಂಡರೆ ತೋರುವ ಸಹಾನುಭೂತಿಯನ್ನು ಕಂಡು ನನಗೆ ಆಶ್ಚರ್ಯ ಹಾಗೂ ನಮ್ಮ ಅನುಮಾನದ ಸ್ವಭಾವ ನೆನಸಿಕೊಂಡು ನನಗೆ ಅವಮಾನವಾಯಿತೆಂದು ಹೇಳುತ್ತಾರೆ.

ಹದಿನೈದು ವರ್ಷದ ಹೈಸ್ಕೂಲ್ ಹುಡುಗಿ, ಆ ವಯಸ್ಸಿನವಳಾದರೂ ಅವಳ ಕೋಣೆಯ ತುಂಬಾ ವಿಧವಿಧವಾದ ಗೊಂಬೆಗಳು, ಅನೇಕ ಪುಸ್ತಕಗಳು, ಹೆಣ್ಣು ಮಕ್ಕಳ ಆಟದ ಸಾಮಾನುಗಳನ್ನು ತುಂಬಿದ್ದನ್ನು ನೋಡಿದ ಲೇಖಕಿಗೆ ನಮ್ಮ ದೇಶದ ಹೆಣ್ಣು ಮಕ್ಕಳ ಸ್ಥಿತಿಯನ್ನು ಸ್ಮರಿಸಿ ಚಿಂತಿತರಾಗಿದ್ದಾರೆ. ಆ ಆಡುವ ವಯಸ್ಸಿನಲ್ಲೇ ಸಂಸಾರ ಸಾಗರದಲ್ಲಿ ಮುಳುಗಿರುತ್ತಾರೆ. ಇಲ್ಲಿಯ ಬಾಲ್ಯವಿವಾಹ ಪದ್ಧತಿ, ಗಂಡು–ಹೆಣ್ಣು ಎಂಬ ಭೇದಭಾವವನ್ನು ಕಟುವಾಗಿ ಹಲ್ಲಗಳಿದಿದ್ದಾರೆ.

ಇಂತಹ ಸಮಯದಲ್ಲಿ ಲೇಖಕಿಗೆ ಮಕ್ಕಳ ನೆನಪು ತೀವ್ರವಾಗಿದೆ. ತಾಯಿಯ ದೇಹ ಸಹಸ್ರಾರು ಮೈಲಿ ದೂರದಲ್ಲಿದ್ದರೂ ಮನಸ್ಸು ಮಾತ್ರ ಮನೆಯ ಕಡೆಗೆ ಸಂಚರಿಸುತ್ತದೆ. ಕಣ್ಣೀರು ಸುರಿಸಿ ತನಗೆ ತಾನು ಸಮಾಧಾನ ತಂದುಕೊಳ್ಳುವುದು ಹೃದಯಸ್ಪರ್ಶಿಯಾಗಿದೆ.

ಲೇಖಕಿ ತಮ್ಮ ಪ್ರವಾಸ ಕಥನದುದ್ದಕ್ಕೂ ಭಾರತೀಯರ ಜೀವನ ಕ್ರಮ, ಸಾಮಾಜಿಕ ಇತರ ಅಂಶಗಳೊಂದಿಗೆ ಅಮೇರಿಕನ್ನರ ಜೀವನ ಕ್ರಮಗಳೊಂದಿಗೆ ಪ್ರತಿಯೊಂದನ್ನು ತೌಲನಿಕವಾಗಿ ವಿವೇಚಿಸುತ್ತಾ ವಿವರಿಸಿರುವುದನ್ನು ಗಮನಿಸಬಹುದು. ಸರಳವಾಗಿ ನಿರೂಪಿಸಿರುವುದರಿಂದ ಓದಿಸಿಕೊಂಡು ಹೋಗುತ್ತದೆ.

## ಅದ್ಭುತ ಅಮೇರಿಕ ಮತ್ತು ಅನ್ಯ ರಾಷ್ಟ್ರಗಳಲ್ಲಿ – ಪ್ರೊ॥ ಕೆ.ರಾಜೇಶ್ವರಿ ಗೌಡ :

ಶ್ರೀಮತಿ. ಪ್ರೊ॥ ಕೆ.ರಾಜೇಶ್ವರಿಗೌಡ ದಂಪತಿಗಳು ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಹಾಗೂ ಕೆನಡಾ ದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿ ಪಡೆದ ಅನುಭವವನ್ನು ಈ ಪ್ರವಾಸ ಕಥನದಲ್ಲಿ ಹಂಚಿಕೊಂಡಿದ್ದಾರೆ. ಪುಣ್ಯಕ್ಷೇತ್ರ ಶ್ರೀ.ಆದಿಚುಂಚನಗಿರಿಯ ಶ್ರೀ.ಬಾಲಗಂಗಾಧರನಾಥ ಸ್ವಾಮೀಜಿಯವರು ಉತ್ತಮ ಲೇಖಕಿಯೆಂದು ಹೆಸರಾದ ಪ್ರೊ॥ ಕೆ.ರಾಜೇಶ್ವರಿಗೌಡ ಅನುಭವದ ದೃಷ್ಟಿಯಿಂದ ಪ್ರಪಂಚವನ್ನು ಸುತ್ತಿ ಬರಲೆಂದು ಇವರಿಗೆ ವಿದೇಶ ಪ್ರವಾಸದ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದಾರೆ. ಸುಲಭವಾಗಿ ದೊರೆತ, ವಿದೇಶಗಳ ಸುತ್ತಿ ಬರುವ ಸುಸಂದರ್ಭವನ್ನು ಉಪಯೋಗಿಸಿಕೊಂಡು ನಲವತ್ತೇಳು ದಿನಗಳ ಕಾಲ ಪ್ರವಾಸ ಕೈಗೊಂಡು ವಿಶಿಷ್ಟವಾದ ಅನುಭವವನ್ನು ಪಡೆದುಕೊಂಡಿದ್ದಾರೆ. ಆರಂಭದಲ್ಲಿ ಲೇಖಕಿಯೇ ಹೇಳಿರುವಂತೆ "ನಾವು ಗಳಿಸಿದ ಸ್ನೇಹ ಸಂಸರ್ಗ ನಿಜಕ್ಕೂ ದೊಡ್ಡದು, ಎಷ್ಟೊಂದು ಹಿರಿಯ ಚೇತನಗಳು, ಕವಿಗಳು, ತತ್ವವೇತರು, ದಾರ್ಶನಿಕರು, ಕಲಾವಿದರು, ತಂತ್ರಜ್ಞರು, ಬುದ್ಧಿಜೀವಿಗಳು ಪರಿಚಿತವಾದರು" ಇದನ್ನು ನಾವು ಕೃತಿಯುದ್ದಕ್ಕೂ ಕಾಣಬಹುದು. ಲೇಖಕಿ ಅಮೇರಿಕಾದ ಶಿಕ್ಷಣ ಪದ್ಧತಿ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಒಳ್ಳೆಯದನ್ನು ಗುಣಗಾನ ಮಾಡಿದ್ದಾರೆ. ಅಮೇರಿಕನ್ನರ ಮುನ್ನಡೆಗೆ ಕಾರಣವಾದ ಅಂಶಗಳನ್ನು ಭಾರತದಲ್ಲೂ ಅಳವಡಿಸಿಕೊಳ್ಳುವುದು ಸೂಕ್ತವೆಂದು, ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

**ಅಮೇರಿಕಾ ಶಿಕ್ಷಣ ಪದ್ಧತಿ** : ಅಮೇರಿಕಾದಲ್ಲಿ ವಿದ್ಯಾರ್ಥಿಯಾದವನು ತಾನು ಕಲಿಯಬೇಕಾದ ವಿಷಯಕ್ಕೆ ಪೂರಕವಾಗಿರುವ ವಿಷಯಗಳಲ್ಲೂ ಸಾಮಾನ್ಯ ಜ್ಞಾನ ಹೊಂದಿರಬೇಕಾಗುತ್ತದೆ. ಉದಾ: 'ಚರಿತ್ರೆ'ಯನ್ನು ಪ್ರಮುಖ ವಿಷಯವನ್ನಾಗಿ ತೆಗೆದುಕೊಂಡ ವಿದ್ಯಾರ್ಥಿ ಭೂಗೋಳ, ರಾಜ್ಯಶಾಸ್ತ್ರ ಮೊದಲಾದವುಗಳನ್ನು ಅರಿತಿರಬೇಕು. ಭೌತಶಾಸ್ತ್ರ ವಿಶೇಷವಾಗಿ ಕಲಿಯಬಂದವರು ರಸಾಯನಶಾಸ್ತ್ರ, ಗಣಿತಶಾಸ್ತ್ರಗಳಲ್ಲೂ ಆಳವಾಗಿ ಅಭ್ಯಾಸ ಮಾಡಿರಬೇಕು, ಕಂಪ್ಯೂಟರ್ ಕಲಿಯಬಂದವರು ಎಲೆಕ್ಟ್ರಾನಿಕ್ ಅರಿತಿರಬೇಕು. ಸಾಹಿತ್ಯದಲ್ಲಿ ಪ್ರಾವೀಣ್ಯತೆ ಪಡೆಯಬಂದವರು ಜಾನಪದ, ಭೂ ವಿಜ್ಞಾನಗಳನ್ನು ತಿಳಿದಿರಬೇಕು. ಅಲ್ಲೆಲ್ಲಾ ತಿಂಗಳಿಗೊಂದು 'ಮಾಸಿಕ ಲಘು ಪರೀಕ್ಷೆ' ಇರುತ್ತದೆ. ಪ್ರವಚನಾ ನಂತರ ಗುರು–ಶಿಷ್ಯರ ನಡುವೆ ಪಾಠಕ್ಕೆ ಬದ್ಧವಾಗಿ ಸಂವಾದವಿರುತ್ತದೆ. ವಿಷಯ ಜ್ಞಾನದ ಆಳ ತಿಳುವಳಿಕೆಗೆ ಇದು ಅನುವು ಮಾಡಿಕೊಡುತ್ತದೆ.[13] ಅಲ್ಲಿ ಅಧ್ಯಾಪಕರು ಮಾರ್ಗದರ್ಶನ ಮಾಡುತ್ತಾರೆ ಅಷ್ಟೇ. ವಿಷಯಕ್ಕೆ ಸಂಬಂಧಿಸಿದಂತೆ

ಅವರು ಹೇಳಿದ ಗ್ರಂಥಗಳನ್ನು ಪರಾಮರ್ಶಿಸಿ ಟಿಪ್ಪಣಿ ಮಾಡಿಕೊಳ್ಳಬೇಕಾದ ಸಂಪೂರ್ಣಕರ್ತವ್ಯ ಹೇಗೆ ವಿದ್ಯಾರ್ಥಿಗಳದ್ದೇ ಆಗಿರುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳು ತರಗತಿ ಮುಗಿದೊಡನೆ ಸಮಯ ಸಿಕ್ಕಿದಾಗಲೆಲ್ಲಾ ಗ್ರಂಥಾಲಯದಲ್ಲಿ ಅಧ್ಯಯನಕ್ಕೆ ತೊಡಗುತ್ತಾರೆ. ಆದರೆ ನಮ್ಮ ದೇಶದಲ್ಲಿ ಪ್ರಾಧ್ಯಾಪಕರೇ ಟಿಪ್ಪಣಿ ಬರೆಸುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ಹೆಚ್ಚಿನ ಕಾಲ ಕಳೆಯದೆ ವ್ಯರ್ಥವಾಗಿ ಕಾಲಹರಣ ಮಾಡುತ್ತಾರೆ.

ಹದಿನೆಂಟು ತುಂಬಿದ ಯುವಕ ಯುವತಿಯರು ಎಷ್ಟೇ ಶ್ರೀಮಂತ ಕುಟುಂಬದವರಾಗಿದ್ದರೂ ಯಾವುದೇ ಅಹಂ, ಪ್ರತಿಷ್ಠೆಗಳಿಲ್ಲದೆ ಸ್ವಯಂ ಉದ್ಯೋಗಕ್ಕೆ ತೊಡಗುತ್ತಾರೆ. ಉದಾಹರಣೆಗೆ ಕಾರು ತೊಳೆಯುವುದು, ಅಂಗಡಿ ಕೆಲಸಕ್ಕಿರುವುದು, ಕಛೇರಿ ಸಹಾಯಕರಾಗುವುದು ಇತ್ಯಾದಿ. ಲೇಖಕಿ ಕಂಡಂತೆ ಹೆಣ್ಣು ಮಕ್ಕಳು ಕೂಡಾ ರಸ್ತೆ ಡಾಂಬರು ಹಾಕುವ, ಕಂಟ್ರಾಕ್ಟರುಗಳಾಗಿ, ಟ್ರಕ್ ಡ್ರೈವರ್‌ಗಳಾಗಿ ದುಡಿಯುತ್ತಿದ್ದುದು ಕಾಣಬಹುದು. ಯುವ ಪೀಳಿಗೆ ಸೋಮಾರಿಗಳಾಗಿ ಉಳಿಯಲು ಅಲ್ಲಿನ ಕಾನೂನು ಸಹ ಬಿಡುವುದಿಲ್ಲ. ದುಡಿಯದೆ ಕುಳಿತು ತಿನ್ನುವುದು ತಪ್ಪು ಎಂದು ಪರಿಗಣಿಸುವ ಯುವ ಜನಾಂಗದ 'ಗಳಿಕೆಯಿಂದ ಕಲಿಕೆ' ಎನ್ನುವ ತತ್ವ ಪ್ರಶಂಶನೀಯವಾಗಿದೆ. ಭಾರತದಲ್ಲಿನ ಗಾಂಧೀಜಿಯವರ ಮೂಲ ಶಿಕ್ಷಣವೂ ಸಹ ಇದನ್ನೆ ಪ್ರತಿಪಾದಿಸುವುದರಿಂದ ಇದನ್ನು ಅಳವಡಿಸಿಕೊಳ್ಳಬೇಕಾಗಿರುವುದು ಪ್ರಜ್ಞಾವಂತರ ಲಕ್ಷಣವಾಗಿದೆ.

**ಸಾಮಾಜಿಕ ಅಂಶಗಳು :** ಬಿಳಿಯರು ಮತ್ತು ಇನ್ನಿತರ ಅಮೇರಿಕದವರು, ಕರಿಯರು ವಾಸಿಸುವ ಬೀದಿಗಳಲ್ಲಿ ಓಡಾಡಲೂ ಹಿಂಜರಿಯುತ್ತಾರೆ. ಕರಿಯರ ಕಾಲೋನಿಗಳಲ್ಲಿ ಬಿಳಿಯರೂ ವಾಸಿಸುವುದೂ ಇಲ್ಲ. ದರೋಡೆಗಾರರು ಒಂದು ಡಾಲರಿಗಾಗಿಯೂ ಕೊಲ್ಲಬಹುದೆನ್ನುವ ಆತಂಕ ಸಾಮಾನ್ಯವಾಗಿರುತ್ತದೆ. ರಸ್ತೆ, ದರೋಡೆ, ಹಗಲು ದರೋಡೆಗಳು ಸಾಮಾನ್ಯ. ಇಂತಹ ಅಪರಾಧ ಪ್ರವೃತ್ತಿಗೆ ದಾರಿದ್ರ್ಯ, ಅನಕ್ಷರತೆ, ತಾಯ್ತಂದೆಗಳ ಪ್ರೀತಿಯ ಕೊರತೆಯು ಕಾರಣವಾಗಿದೆ. ಅಂತಹ ಶ್ರೀಮಂತ ರಾಷ್ಟ್ರದಲ್ಲೂ ಕಡು ಬಡತನದ ಕರಿಯರ ಕಾಲೋನಿಗಳಿವೆ. ಭಿಕ್ಷುಕರಿದ್ದಾರೆ, ಅನಕ್ಷರಸ್ಥರಿದ್ದಾರೆ, ವರ್ಣದ್ವೇಷ, ವರ್ಗ ತಾರತಮ್ಯ ಅಲ್ಲಿನ ಸಾಮಾಜಿಕ ಪಿಡುಗಾಗಿದೆ. ದೇಶ ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ಒಂದಲ್ಲ ಒಂದು ಕೊರತೆ ಅಥವಾ ಸಾಮಾಜಿಕ ಅನಿಷ್ಟಗಳು ಕಂಡುಬರುತ್ತವೆ. ಇದಕ್ಕೆ ಒಂದು ನಿದರ್ಶನವೆಂದರೆ ದಿನಪತ್ರಿಕೆಯಲ್ಲಿ ಪ್ರಕಟವಾದ ಒಂದು ಸಂಗತಿ "ಸಾವಿರಾರು ಎಕರೆಯುಳ್ಳ ಬಿಳಿಯ ಭೂಮಾಲೀಕನೊಬ್ಬ ಕೃಷಿ ಸಂಬಂಧಿತ

ರಾಸಾಯನಿಕ ದ್ರವ್ಯದ ಮೇಲೆ ಇಂಗ್ಲೀಷಿನಲ್ಲಿದ್ದ ಎಚ್ಚರಿಕೆ ಬರಹ ಓದಲು ಬಾರದೆ ಅದನ್ನು ಹಸುವಿನ ಆಹಾರಕ್ಕೆ ಬೆರೆಸಿದ್ದರಿಂದ ಅದನ್ನು ತಿಂದ ಅವನ ಹಸುಗಳು ಮರಣ ಹೊಂದಿದ್ದವು".[14] ಅನಕ್ಷರತೆಯಿಂದಾದ ಅನಾಹುತ, ಅಭಿವೃದ್ಧಿಶೀಲ ರಾಷ್ಟ್ರವಾದರೂ, ಅನಕ್ಷರತೆ, ಬಡತನ, ದಾರಿದ್ರ್ಯದಿಂದ ಸಂಪೂರ್ಣ ಮುಕ್ತವಾಲು ಸಾಧ್ಯವಾಗಿಲ್ಲ ಎನ್ನುವುದನ್ನು ನೋಡಬಹುದು.

**ಯೂರೋ ಅಮೇರಿಕಾದ ಇಣುಕುನೋಟ – ದೇವಕಿ ಮೂರ್ತಿ :**

ಲೇಖಕಿ ಯೂರೋ ಅಮೇರಿಕಾದ ಪ್ರವಾಸ ಕೈಗೊಂಡು ತಾವು ಕಂಡುಂಡ ಅನುಭವಗಳನ್ನು ಕಥನ ರೂಪದಲ್ಲಿ ಹೆಣೆದಿದ್ದಾರೆ. ಪುಟ 85 ರಿಂದ 181ರವರೆಗೆ ಅಮೇರಿಕಾ ಪ್ರವಾಸದ ಅನುಭವಗಳನ್ನು ಚಿತ್ರಿಸಿದ್ದಾರೆ. ಎಲ್ಲ ಪ್ರವಾಸ ಕೃತಿಗಳಂತೆ ಪ್ರವಾಸ ಕಾಲದ ಹೊರನೋಟಗಳ ವಿವರಣೆಯನ್ನು ಕೊಟ್ಟಿದ್ದಾರೆ. ಪ್ರವಾಸ ಕಥನದುದ್ದಕ್ಕೂ ಪ್ರೇಕ್ಷಣೀಯ ಸ್ಥಳಗಳು ಮತ್ತು ಅವುಗಳ ವಿಶೇಷತೆಯನ್ನು ಹೆಚ್ಚಾಗಿ ಹೇಳಲು ಯತ್ನಿಸಿದ್ದಾರೆ. ಹೊರತು ಅಲ್ಲಿನ ಸಂಸ್ಕೃತಿ, ಜೀವನ ವಿಧಾನ ಈ ಮೊದಲಾದವುಗಳ ಕುರಿತು ಹೆಚ್ಚಾಗಿ ಬೆಳಕು ಚೆಲ್ಲುವುದಿಲ್ಲ.

ಈ ಪ್ರವಾಸ ಕಥನದ ಮೂಲಕ ಅಮೇರಿಕದ ಬಹುತೇಕ ಪ್ರೇಕ್ಷಣೀಯ ಸ್ಥಳಗಳ ಮಾಹಿತಿಯನ್ನು ತಿಳಿಯಬಹುದು. ಲೇಖಕಿಗೆ ಇಷ್ಟವಾದ ಕೆಲವು ಪ್ರೇಕ್ಷಣೀಯ ಸ್ಥಳಗಳ ಕುರಿತು ದೀರ್ಘವಾಗಿ ಹೇಳಿದ್ದಾರೆ. ಅಮೇರಿಕಾದಲ್ಲಿ ಕಾಲಿಟ್ಟಾಗ ಜಗತ್ತಿನ ಅತ್ಯಂತ ದೊಡ್ಡದಾದ ಅಂತರಾಷ್ಟ್ರೀಯ ಕೆನಡಿ ವಿಮಾನ ಕಂಡಾಗ ಕಕ್ಕಾಬಿಕ್ಕಿಯಾಗಿದ್ದಾರೆ. ಅಮೇರಿಕಾದ ದೊಡ್ಡ ದೊಡ್ಡ ನಗರಗಳು ಅವುಗಳಲ್ಲಿನ ಕಟ್ಟಡಗಳು, ಅಗಲವಾದ ರಸ್ತೆಗಳು, ಅಲ್ಲಿಯ ಸುವವಸ್ಥೆಯನ್ನು ಕಂಡು ಆಶ್ಚರ್ಯಚಕಿತರಾಗಿದ್ದಾರೆ.

ಅಮೇರಿಕನ್ನರು ನಾಗರಿಕ ನಿಯಮವನ್ನು ಎಷ್ಟು ಕಟ್ಟುನಟ್ಟಾಗಿ ಪಾಲಿಸುತ್ತಾರೆ ಎನ್ನುವುದನ್ನು ಈ ನಿದರ್ಶನದ ಮೂಲಕ ತಿಳಿಸುತ್ತಾರೆ. "ಒಬ್ಬ ನಡುಹರೆಯದ ಮಹಿಳೆ ಸರಪಳಿಯಿಂದ ಬಿಗಿದ ದೊಡ್ಡ ನಾಯಿಯನ್ನು ಎಳೆಯುತ್ತ ವಿಹಾರಕ್ಕೆ ಬರುತ್ತಿದ್ದಳು. ನಾಯಿ ಅಲ್ಲೇ ನಿಂತು ಪುಟ್‌ಪಾತಿನ ಮೇಲೆ ಮಲವಿಸರ್ಜನೆ ಮಾಡತೊಡಗಿತು ತಕ್ಷಣ ಆಕೆ ಕೈ ಚೀಲದಿಂದ ಒಂದು ಪತ್ರಿಕೆ ತೆಗೆದು ಅದರ ಬಾಲದ ಹಿಂದೆ ಹಾಕಿದಳು. ಅನಂತರ ಅದನ್ನು ಮುದುರಿ ಹತ್ತಿರದಲ್ಲಿದ್ದ ಕಸದ ಡಬ್ಬಿಗೆ ಹಾಕಿ ನಾಯಿಯನ್ನು ಎಳೆದುಕೊಂಡು ಮುಂದೆ ಹೋದಳು".[15] ಭಾರತದಲ್ಲಿ ಈ ನಿದರ್ಶನಕ್ಕೆ ವ್ಯತಿರಿಕ್ತವಾಗಿ ನಡೆಯುತ್ತದೆ. ಇದನ್ನು ನಾವು ಅನುಸರಿಸಿದರೆ ಹಿತವಾಗಿತ್ತದೆಂಬ ಭಾವವನ್ನು ವ್ಯಕ್ತಪಡಿಸುತ್ತಾರೆ.

ನಯಾಗಾರ ಜಲಪಾತದ ರುದ್ರ ರಮಣೀಯ ಸೌಂದರ್ಯವನ್ನು ನೋಡಿದಾಗ, ಎಳೆಯ ಮಕ್ಕಳ ಹಾಗೆ ಕುಣಿದು ಕುಪ್ಪಳಿಸಬೇಕು ಎಂದೆನಿಸಿತೆಂದು ಅತಿಯಾದ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. "ತಡಸಲು ಕಡಸಲು ಅಗೊ ಅಲ್ಲಿ ದಡದಡಿ ಎನ್ನುವುದು ಎದೆ ಇಲ್ಲಿ" ಎಂದು ಹಾಡಿದ ಬೇಂದ್ರೆಯವರ 'ತಡಸಲು' ಎನ್ನುವ ಕವಿತೆಯ ನೆನಪು ಮಾಡಿಕೊಂಡಿದ್ದಾರೆ. ನಿಸರ್ಗದ ಈ ಜಲವೈಭವವನ್ನು ಎಷ್ಟು ನೋಡಿದರೂ ಕಣ್ಣು ದಣಿಯದು, ಆತ್ಮ ತಣಿಯದು. ಇದನ್ನು ನೋಡುತ್ತಿದ್ದಂತೆ ಕಾಲ ಅನಂತಾನಂತವಾಗಲಿ" ಎಂದು ಹೇಳುವಲ್ಲಿ ಲೇಖಕಿ ಈ ನಯನ ಮನೋಹರ ಜಲಪಾತ ನೋಡಿ ಮೈಮರೆತಿರುವುದು ಕಾಣಬಹುದು. ಓದುಗರಿಗೂ ಆ ಜಲಪಾತವನ್ನು ನೋಡಬೇಕೆನಿಸುವಂತೆ ಅದರ ಸೌಂದರ್ಯವನ್ನು ಅದ್ಭುತವಾಗಿ ವರ್ಣಿಸಿದ್ದಾರೆ.

ಫ್ಲಾರಿಡಾದಲ್ಲಿರುವ ಸೈಫೀಸ್ ತೋಟವನ್ನು ಹೊಕ್ಕು ಅಲ್ಲಿಯ ಅಪೂರ್ವ ಸಸ್ಯ ಕೋಟಿಯನ್ನು ಕಂಡಾಗ ಲೇಖಕಿಗೆ ಲಾಲ್‌ಬಾಗ್ ನೆನಪಾಗಿದೆ. ಇನ್ನೂರ ಇಪ್ಪತ್ತಮೂರು ಎಕರೆ ಭೂಮಿಯನ್ನು ಆವರಿಸಿಕೊಂಡಿರುವ ಈ ಬಟಾನಿಕಲ್ ಗಾರ್ಡನ್ಸ್‌ನಲ್ಲಿ ಎಂಟು ಸಾವಿರಕ್ಕೂ ಹೆಚ್ಚು ವಿವಿಧ ಜಾತಿಯ ಗಿಡಗಳು ತುಂಬಿವೆಯಂತೆ ಎಪ್ಪತ್ತೈದಕ್ಕೂ ಹೆಚ್ಚಿನ ದೇಶಗಳಿಂದ ನಾನಾ ತರಹದ ಗಿಡಗಳನ್ನು ತಂದು ಇಲ್ಲಿ ನೆಟ್ಟು ಬೆಳೆಸಿದ್ದಾರಂತೆ. ಬಹುತೇಕ ಗಿಡಗಳ ಅಪರೂಪವಾದ ಅವುಗಳ ಚೆಲುವನ್ನು ಲೇಖಕಿ ಸವಿದಿದ್ದಾರೆ. ಡಿಸ್ನಿಲ್ಯಾಂಡ್, ಲಾಸ್‌ವೇಗಸ್, ಗ್ಯಾಂಡಕ್ಯಾನಿಯನ್, ಮ್ಯುಸಿಯಂಗಳು, ಹಾಲಿವುಡ್ ಸ್ಟುಡಿಯೋ ಹೀಗೆ ಮೊದಲಾದ ಆಕರ್ಷಣೀಯ, ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಅವುಗಳ ಕುರಿತು ವಿಶ್ಲೇಷಿಸಿದ್ದಾರೆ.

ಒಟ್ಟಾರೆಯಾಗಿ ಲೇಖಕಿ ದೊರೆತ ಸೀಮಿತ ಅವಧಿಯಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಅವುಗಳ ವಿಶೇಷತೆ, ಸೌಂದರ್ಯವನ್ನು ನೋಡಿ ಸಂತೋಷಪಟ್ಟಿದ್ದಾರೆ. ಸೌಂದರ್ಯವನ್ನು ನೋಡಿ ಸಂತೋಷಪಟ್ಟಿದ್ದಾರೆ. ಅಮೇರಿಕನ್ನರ ಜೀವನ ವಿಧಾನದ ಕುರಿತು ಯಾವುದೇ ಮಾಹಿತಿ ನೀಡುವುದಿಲ್ಲ. ಇದು ದಿನಚರಿ ರೂಪದ ಪ್ರವಾಸ ಕಥನವಾಗಿದೆ.

### ಉತ್ತರ ಅಮೇರಿಕಾದಲ್ಲಿ ಚಾತುರ್ಮಾಸ್ಯ – ಲಲಿತಾ ಶಾಸ್ತ್ರಿ :

ಕೃತಿಯ ಶೀರ್ಷಿಕೆಯಂತೆ ಲೇಖಕಿ ಮಗ ಮತ್ತು ಸೊಸೆಯನ್ನು ನೋಡಲು ದಂಪತಿಗಳ ಸಮೇತ ನಾಲ್ಕು ತಿಂಗಳು ಅಲ್ಲಿ ನೆಲೆಸಿದ ಸಂದರ್ಭದಲ್ಲಿ ತಮಗಾದ ಅನುಭವವನ್ನು ಈ ಪ್ರವಾಸಕಥನದಲ್ಲಿ ನಿರೂಪಿಸಿದ್ದಾರೆ.

'ಅತಿ ಭಾರವಾದ ಸೂಟ್‌ಕೇಸನ್ನು ಹೊತ್ತು ತಂದ ಬಾಬು, ಏದುಸಿರು ಬಿಟ್ಟಾಗ ನನಗೆ ನಿಜವಾಗಿಯೂ ನಾಚಿಕೆಯಾಯಿತು' ಎನ್ನುವ ಲೇಖಕಿಯ ಮಾತಿನಲ್ಲಿ ಭಾರತದಿಂದ ಅದೆಷ್ಟು ಸಾಮಾನು ತೆಗೆದುಕೊಂಡು ಹೋಗಿದ್ದಾರೆ, ಆ ಸಾಮಾನು ಸಾಗಿಸುವಲ್ಲಿ ಅವರು ಪಟ್ಟ ಪ್ರಯಾಸ ಎದ್ದುಕಾಣುತ್ತದೆ. ತಮ್ಮ ಸೀಮಿತ ಕಾಲದ ಪ್ರವಾಸಾನುಭವವನ್ನು ಸಹಜವಾಗಿ ನಿರೂಪಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಭಾರತೀಯ ಸಂಸ್ಕೃತಿ ಅಲ್ಲಿನ ಭಾರತೀಯ ಸಂಜಾತರ ಜೀವನದಲ್ಲಿ ಎಷ್ಟರಮಟ್ಟಿಗೆ ಅಳವಡಿಸಿಕೊಂಡಿದ್ದಾರೆ ಎಂಬುವುದರ ಕುರಿತು ಜಿಜ್ಞಾಸೆ ನಡೆಸಿದ್ದಾರೆ. ಇದಕ್ಕೆ ಒಂದು ನಿದರ್ಶನವೆಂದರೆ ಅಮೇರಿಕಾದಲ್ಲಿ ನೆಲೆಸಿರುವ ಲೇಖಕಿಯ ಅಣ್ಣನ ಕುಟುಂಬದ ಚಿತ್ರಣವನ್ನು ನೀಡಿದ್ದಾರೆ. "ಪೂಜಾ ಗೃಹದಲ್ಲಿ ಕುಳಿತು ದೇವತಾರ್ಚನೆ ಮಾಡುತ್ತಿರುವ ನಮ್ಮಣ್ಣ ಹಾಗೂ ಶುಭ್ರಸ್ನಾತರಾಗಿ ವಿನೀತರಾಗಿ ಮಂಗಳಾರತಿಗಾಗಿ ಕಾಯುತ್ತಿರುವ ಮಕ್ಕಳು, ಸೋಮ ಸೂತ್ರದ ತಟ್ಟೆ, ಧಾರಾಪಾತ್ರೆಗಳನ್ನಿರಿಸಿಕೊಂಡು ನಮಕ ಚಮಕಗಳನ್ನು ಹೇಳಿಕೊಂಡು ಅಭಿಷೇಕ ಮಾಡುತ್ತಿರುವ ದೃಶ್ಯ, ನಮ್ಮನ್ನು ದಂಗು ಬಡಿಸಿತು. ಅಷ್ಟೆತ್ತರೆದ ನೀಲಾಂಜನದಲ್ಲಿ ಅಖಂಡ ದೀಪವನ್ನಿರಿಸಿದ್ದಾರೆ. ಮಂದಾಸನದ ಮುಂದೆ ಶಾಂತವಾಗಿ ಬೆಳಗುತ್ತಿರುವ ದೀಪಗಳು, ನಮಗೆ ಕುಡಿಯಲು ಕಾಫಿ ಕೊಟ್ಟರೂ ಆ ಹದಿ-ವಯಸ್ಸಿನ ಮಕ್ಕಳು ಮಾತ್ರ ತಮ್ಮ ತಂದೆ ಮಂಗಳಾರತಿ ತೀರ್ಥ ಪ್ರಸಾದಗಳನ್ನು ಕೊಡುವವರೆಗೂ ಏನನ್ನೂ ಸ್ವೀಕರಿಸಲಿಲ್ಲ. ಅವರ ತಾಯಿಯೂ ಅಷ್ಟೇ. ಶನಿವಾರದಂದು ಬೆಳಿಗ್ಗೆಯಿಂದ ಸಂಜೆಯವರೆಗೂ ಏನನ್ನೂ ತೆಗೆದು ಕೊಳ್ಳುವುದಿಲ್ಲವಂತೆ ಹಾಗೇ ತಮ್ಮ ಕೆಲಸಕ್ಕೆ ಹೋದರು ಇಷ್ಟು ವಿವರವಾಗಿ ಏಕೆ ಹೇಳುತ್ತಿದ್ದೇನೆಂದರೆ ಭಾರತೀಯ ಸಂಪ್ರದಾಯಗಳನ್ನು ಬಿಟ್ಟಿಲ್ಲವೆಂದು ತಿಳಿಸಲು. ಆದಷ್ಟು – ಇರುವ ಅವಕಾಶಗಳಲ್ಲೆ ನಡೆಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸತ್ಯ ಶ್ರೀಧರನೂ ಅಷ್ಟೇ, ತಿಂಗಳು ತಿಂಗಳು ಸತ್ಯನಾರಾಯಣ ಪೂಜೆ ಮಾಡುತ್ತಾರೆ. ಪ್ರತಿ ಭಾನುವಾರ ಮಕ್ಕಳನ್ನು ಕನ್ನಡ ಕಲಿಯಲು ತರಗತಿಗೆ ಕಳುಹಿಸುತ್ತಾರೆ. ಭರತನಾಟ್ಯ, ಶ್ಲೋಕಗಳ ಪಠಣೆ ಮನೆ ಮನೆಯಲ್ಲೂ ಕಾಣುವ ದೃಶ್ಯ".[16] ಹೀಗೆ ಲೇಖಕಿ ತಾವು ಅತಿಥ್ಯ ಸ್ವೀಕರಿಸಿದ ಕುಟುಂಬಗಳಲ್ಲೆಲ್ಲಾ ಸಂಪ್ರದಾಯದ ರೀತಿ ನೀತಿಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ನೋಡಿ ಹೆಮ್ಮೆಪಟ್ಟಿದ್ದಾರೆ.

ಲೇಖಕಿ ತಾವು ನೋಡಿದ್ದನ್ನು, ಕೇಳಿದ್ದನ್ನು ಹಾಗೂ ಓದಿದ್ದನ್ನು ತನ್ಮಯವಾಗಿ ನಿರೂಪಿಸಿದ್ದಾರೆ. ಆ ಅಂಶಗಳನ್ನು ಈ ಕೆಳಗಿನ ರೀತಿಯಲ್ಲಿ ವಿಭಾಗಿಸಿಕೊಂಡು ನೋಡಬಹುದು.

1. ಶಿಕ್ಷಣ
2. ಸಾಮಾಜಿಕ ಅಂಶಗಳು

3. ಪ್ರೇಕ್ಷಣೀಯ ಸ್ಥಳಗಳು

4. ಭಾರತೀಯ ಸಂಜಾತರ ಕುರಿತು

**ಶಿಕ್ಷಣ :** ಅಮೇರಿಕಾದಲ್ಲಿ ಮಕ್ಕಳು ತಮಗಿಷ್ಟವಾದ ಒಂದೊಂದೇ ವಿಷಯವನ್ನು ತೆಗೆದುಕೊಂಡು ಅದರಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯಬಹುದು. ಮುಂದಿನ ಬಾರಿಯ ಪರೀಕ್ಷೆಗೆ ಮತ್ತೊಂದು ವಿಷಯವನ್ನು ಆರಿಸಿಕೊಳ್ಳಬಹುದು. ಇದನ್ನು ಒಪ್ಪದ ಲೇಖಕಿ ನಮ್ಮ ದೇಶದ ಶಿಕ್ಷಣ ಪದ್ಧತಿಯನ್ನು ಮೆಚ್ಚಿದ್ದಾರೆ. ಮಕ್ಕಳಿಗೆ ಅಲ್ಪ ಸ್ವಲ್ಪ ಭೌಗೋಳಿಕ ಜ್ಞಾನ, ಇತಿಹಾಸದ ಮಾಹಿತಿ ಗಣಿತದಂತಹ ಮಹತ್ವದ ವಿಷಯದ ಪರಿಚಯ ಜೊತೆಗೆ ಭಾಷಾ ಜ್ಞಾನ ಇವೆಲ್ಲವೂ ಒದಗುತ್ತವೆ ಎಂದು ಹೇಳುತ್ತಾರೆ. ಲೇಖಕಿಯ ಈ ಅಭಿಪ್ರಾಯ ಸರಿಯೆನಿಸುತ್ತದೆ.

ಬಾಸ್ಟನ್ ನಗರದಲ್ಲಿನ ಕೇಂಬ್ರಿಜ್, ಹಾರ್ವರ್ಡ್ ಯೂನಿವರ್ಸಿಟಿಗಳಲ್ಲಿ ಪ್ರವೇಶ ದೊರೆಯುವುದು ಕಷ್ಟವೆನ್ನುತ್ತಾರೆ. ಅಲ್ಲದೆ ಫೀಸು ಕೂಡಾ ದುಬಾರಿ ಎಂದು ತಿಳಿಸುತ್ತಾರೆ. ಅಲ್ಲಿ ಪ್ರತಿಯೊಂದು ವಿಭಾಗಕ್ಕೂ ಐನ್‌ಸ್ಟೈನ್, ಫ್ರಾಂಕ್ಲಿನ್, ಗೆಲಿಲಿಯೋ ಮುಂತಾದ ಗಣ್ಯರ ಹೆಸರುಗಳಿನ್ನಿಟ್ಟಿದ್ದಾರಂತೆ. ಪ್ರತಿಯೊಬ್ಬ ಪ್ರತಿಭಾವಂತ ವಿದ್ಯಾರ್ಥಿಯೂ ಆ ಯೂನಿವರ್ಸಿಟಿಗಳ ಹೆಸರು ಕೇಳಿಯೇ ಪುಳಕಿತನಾಗುತ್ತಾನೆ ಎನ್ನುವಲ್ಲಿ ಆ ಯೂನಿವರ್ಸಿಟಿಯ ಘನತೆ ತಿಳಿದು ಬರುತ್ತದೆ. ಟೆರೊಂಟೋ ಯೂನಿವರ್ಸಿಟಿಯಲ್ಲಿ ನೋಬಲ್ ಬಹುಮಾನ ವಿಜೇತರು ಏಳೆಂಟು ಜನರಿದ್ದಾರೆಂದು ತಿಳಿದಾಗ ದರ್ಪಾತಿರೇಕದಿಂದ ಲೇಖಕಿಯ ಮೈ ಮಾತ್ರವಲ್ಲದೆ ಓದುಗರ ಮೈ ಕೂಡಾ ಪುಳಕಿತವಾಗುತ್ತದೆ. ವಿದ್ಯಾರ್ಥಿಗಳಿಗೆ ಸಕಲ ಸೌಲಭ್ಯಗಳು, ಸುವ್ಯವಸ್ಥೆ, ಶಿಸ್ತು, ಸ್ಕಾಲರ್‌ಶಿಪ್ ಮೊದಲಾದವುಗಳನ್ನು ವಿಶ್ವವಿದ್ಯಾಲಯಗಳು ಒದಗಿಸಿಕೊಡುತ್ತವಂತೆ ಇದರಿಂದಾಗಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಇಲ್ಲದೆ ಸುಲಭವಾಗಿ ತಮ್ಮನ್ನು ವಿದ್ಯಾರ್ಜನೆಗಾಗಿ ತೊಡಗಿಸಿಕೊಳ್ಳುತ್ತಾರೆ. ಆದರೆ ಭಾರತದಲ್ಲಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳು ದೊರೆಯುವುದು ಕಷ್ಟವಾಗಿದೆ.

**ಸಾಮಾಜಿಕ ಅಂಶಗಳು :** ಲೇಖಕಿ ಅಮೇರಿಕನ್ನೇತರ ಸಾಮಾಜಿಕ ಅಂಶಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ದೂರದರ್ಶನದಲ್ಲಿ ಪ್ರಸಾರವಾಗುವ ಒಂದೆರಡು ಕೌಟುಂಬಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಅಲ್ಲಿಯ ಜೀವನದ ಕೆಲವು ಮುಖಗಳ ಕಿರು ಪರಿಚಯ ಮಾಡಿಕೊಂಡಿದ್ದಾರೆ. ಅದನ್ನು ಈ

ಮುಂದಿನಂತೆ ನಿರೂಪಿಸಿದ್ದಾರೆ. "ಮೂರು ನಾಲ್ಕು ದಂಪತಿಗಳನ್ನು ಕರೆಸಿ ಅವರ ಸಮಸ್ಯೆಗಳನ್ನು ಕೇಳಿ ಅವರು ಒಟ್ಟಾಗಿ ಬಾಳಲು ಸಾಧ್ಯವೆ? ಇಲ್ಲವೆ? ಎಂಬುದನ್ನು ಪದರ ಪದರವಾಗಿ ಬಿಡಿಸಿ ಪರಿಹಾರವನ್ನೊದಗಿಸುವುದನ್ನು ವಿವರಿಸಿದ್ದಾರೆ.

ಸಿಂಗಲ್ ಪೇರೆಂಟ್ ಅಂದರೆ ತಮಗೆ ತಂದೆಯ ಅಥವಾ ತಾಯಿಯ ಜೊತೆಯಲ್ಲಿರುವ ಮಕ್ಕಳು ತಮಗೆ ತಂದೆ-ತಾಯಿಗಳಿಬ್ಬರೂ ಬೇಕೆಂದು ಬಯಸುವ ದೃಶ್ಯ ಎಂತಹವರನ್ನು ಮನಕಲಕುವಂತೆ ಮಾಡುತ್ತದೆ. ಆದರೆ ಆ ತಂದೆ-ತಾಯಿಗಳು ಮಾತ್ರ ಸ್ವಲ್ಪವೂ ವಿಚಲಿತರಾಗದೆ ಹಾಗೆ ಜೊತೆಗೂಡಿ ಬಾಳುವುದು ಅಸಾಧ್ಯದ ಮಾತೆಂದು ಹೇಳುತ್ತಾರೆ". ಲೇಖಕಿ ಅಲ್ಲಿನ ಕುಟುಂಬ ವ್ಯವಸ್ಥೆಯನ್ನು ದೂಷಿಸಿದ್ದಾರೆ. ಭಾರತದಲ್ಲಿ ಕುಟುಂಬದಲ್ಲಿ ಏನೇ ಸಮಸ್ಯೆಗಳಿದ್ದರೂ ಮಕ್ಕಳಿಗಾಗಿ ಎಲ್ಲವನ್ನು ಸಹಿಸಿಕೊಳ್ಳುತ್ತಾರೆ. ಒಬ್ಬರನ್ನೊಬ್ಬರು ಕ್ಷಮಿಸಿಕೊಂಡು ಮಕ್ಕಳನ್ನು ಬೆಳೆಸುತ್ತಾರೆ. ಆ ವಿಷಯದಲ್ಲಿ ಹೆಣ್ಣಿನ ಸಹನೆ ಭೂತಾಯಿಗಿಂತ ಮಿಗಿಲಾದುದು ಎಂದು ಭಾರತದ ಕುಟುಂಬ ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"ಅಲ್ಲಿನ ಮುಖ್ಯ ಸಮಸ್ಯೆಯೆಂದರೆ ಹದಿಹರೆಯದವರ ಕಟ್ಟುಪಾಡಿಲ್ಲದ ಸ್ವೇಚ್ಛೆ. ಅಮೇರಿಕಾದಲ್ಲೂ ಗಂಡಸು ಸಿಕ್ಕ ಸಿಕ್ಕವರೊಡನೆ ಕೂಡಿ ತಾನೇ ವೀರನೆಂದು ಬೀಗುತ್ತಾನೆ. ಇಲ್ಲಿನಂತೆಯೇ ಅಲ್ಲೂ ಹೆಣ್ಣು ತಾನೂ ನಂಬಿದವನೊಡನೆ ಕೂಡಿ ಬಾಳಲು ಅಪೇಕ್ಷಿಸುತ್ತಾಳೆ. ತೊಂಬತ್ತೇಳು ಸ್ತ್ರೀಯರ ಸಂಪರ್ಕ ತನಗಿದೆಯೆಂದು ಹೇಳಿಕೊಳ್ಳುವ ಪುರುಷ, ಮೊದಲಾದವುಗಳನ್ನು "ದೂರದರ್ಶನದ ಮೂಲಕ ಇಂತಹ ಕಾರ್ಯಕ್ರಮಗಳನ್ನು ನೋಡಿ ಬೇಸರಪಟ್ಟಿದ್ದಾರೆ. ಯಾವೊಂದು ಮೌಲ್ಯ ಕೂಡಾ ಅವರ ಗಣನೆಗೆ ತಾಗದಷ್ಟು ಮೀರಿ ಹೋಗುತ್ತಿದ್ದಾರೇನೋ ಎಂದು ತಮ್ಮಲ್ಲಿಯೇ ಪ್ರಶ್ನಿಸಿಕೊಂಡಿದ್ದಾರೆ. ಈ ಮೇಲೆ ಬಳಸಿದ ಅಲ್ಲೂ ಅನ್ನುವ ಪದದ ಮೂಲಕ ಗಂಡಿನ ಸ್ವೇಚ್ಛಾಚಾರ, ಹೆಣ್ಣಿನ ಅಪೇಕ್ಷೆ ಎರಡೂ ದೇಶದಲ್ಲಿ ಒಂದೇ ರೀತಿಯಾಗಿದೆ ಎನ್ನುವ ಭಾವವನ್ನು ಲೇಖಕಿ ವ್ಯಕ್ತಪಡಿಸುತ್ತಾರೆ. ಅಲ್ಲಿನ ತಂದೆ-ತಾಯಿಗಳು ಆ ಮಕ್ಕಳ ಮುಂದಿನ ಜೀವನದಲ್ಲಿ ಮೂಗೂ ತೂರಿಸುವುದಿಲ್ಲವಂತೆ. ಇದು ಒಳ್ಳೆಯದೇ ಕೆಟ್ಟದೇ ಎಂದು ವಿಶ್ಲೇಷಿಸುವಾಗ ಮಾತ್ರ ಸಹಾಯಕರಾಗುತ್ತಾರಂತೆ ಎನ್ನುವುದನ್ನು ಹಂಚಿಕೊಂಡಿದ್ದಾರೆ.

ಅಮೇರಿಕಾದಲ್ಲಿ ಕಪ್ಪು ವರ್ಣದವರು ಅವಕಾಶ ವಂಚಿತರು ಅವರ ಸ್ಥಿತಿಗತಿಗಳ ಕುರಿತು ಪುಟ 46-47ರಲ್ಲಿ ಚಿತ್ರಿಸಿದ್ದಾರೆ. ಹೀಗೆ ಲೇಖಕಿ ಅಲ್ಲಿನ ಸಾಮಾಜಿಕ ಅಂಶಗಳನ್ನು ಇಲ್ಲಿಯ ಅಂಶಗಳೊಂದಿಗೆ ತುಲನಾತ್ಮಕವಾಗಿ ವಿವೇಚಿಸಿದ್ದಾರೆ.

**ಪ್ರೇಕ್ಷಣೀಯ ಸ್ಥಳಗಳು :** ನಿಸರ್ಗ ಪ್ರಿಯರಾದ ಅಮೇರಿಕನ್ನರು ಪ್ರತಿಯೊಂದು ಸ್ಥಳವನ್ನು ಚೊಕ್ಕಟವಾಗಿಟ್ಟುಕೊಂಡಿದ್ದಾರೆ. ಪ್ರೇಕ್ಷಣೀಯ ಸ್ಥಳಗಳ ನಿರ್ವಹಣೆ ಅವುಗಳ ಸೌಂದರ್ಯವನ್ನು ಇಮ್ಮಡಿಗೊಳಿಸಿ ಅನ್ಯದೇಶೀಯರನ್ನು ತಮ್ಮೆಡೆ ಸೆಳೆಯುವ ಜಾಣ್ಮೆ ಮೆಚ್ಚುವಂತದ್ದು ಇದನ್ನು ಲೇಖಕಿ ನೋಡಿದ ಕೆಲವು ಪ್ರದೇಶದ ಪ್ರಮುಖ ಪ್ರವಾಸಿ ತಾಣಗಳ ಮೂಲಕ ತಿಳಿಯಬಹುದು.

ನಯಾಗಾರ ಜಲಪಾತ, ಗ್ರ್ಯಾಂಡ ಕ್ಯಾನಿಯನ್, ಎಲ್ಲೋಸ್ಟೋನ್ ಪಾರ್ಕ್, ನ್ಯಾಷನಲ್ ಪಾರ್ಕ್ ಮೊದಲಾದ ಪಾರ್ಕ್‌ಗಳು, ಮ್ಯೂಸಿಯಂಗಳು, ಲಾಸ್ ಏಂಜಲೀಸ್, ಡಿಸ್ನಿಲ್ಯಾಂಡ್, ಟೊರೊಂಟೋದ ಶ್ಯಾಸಲೋಯಾ ಕೋಟೆ, ಅಬ್ರಹಾಂ ಲಿಂಕನ್, ಮೆಮೋರಿಯಲ್ ಕಟ್ಟಡ, ಸೈಂಟ್ ಲೂಹಿಸ್ ವಿಶ್ವವಿಖ್ಯಾತ ಆರ್ಚ್ (ಕಮಾನು). ತಾವು ನೋಡಿದ ತಾಣಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬಿಂಬಿಸುವಲ್ಲಿ ಲೇಖಕಿಯ ತುಡಿತ ತುಂಬಾ ಸೊಗಸಾಗಿ ಮೂಡಿಬಂದಿದೆ.

**ಭಾರತೀಯ ಸಂಜಾತರ ಕುರಿತು :** ವಿದೇಶದಲ್ಲಿ ನೆಲೆಸಿದರೂ ಸ್ವದೇಶದ ಬಗ್ಗೆ ಎಷ್ಟು ಕಾಳಜಿ ಇದೆಯೆನ್ನುವುದನ್ನು ಈ ನಿದರ್ಶನದ ಮೂಲಕ ತಿಳಿಸುತ್ತಾರೆ. "ಕಂಪ್ಯೂಟರ್ ಸೈನ್ಸ್ ಗ್ರಾಜ್ಯುಯೇಟ್ಸ್ ಎಲ್ಲಾ ಸೇರಿ ಒಂದು ನಿಧಿ ಸಂಗ್ರಹ ಮಾಡಿ ಅದನ್ನು ಭಾರತದ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕಳುಹಿಸುತ್ತಿದ್ದಾರಂತೆ. ತಮಿಳುನಾಡು ಮುಂತಾದ ಕಡೆಗಳಲ್ಲಿ 'ಸಳಿಪ' ಎಂಬ ಹೆಸರಿನಲ್ಲಿ ಆ ಶಾಲೆಗಳು ನಡೆಯುತ್ತಿವೆಯಂತೆ" ಶೇಷಾದ್ರಿ ಅವರಿಂದ ಸಂಗ್ರಹಿಸಿದ ಮಾಹಿತಿಯನ್ನು ಕೊಡುತ್ತಾರೆ. ಸ್ವದೇಶಕ್ಕಾಗಿ ತುಡಿಯುತ್ತಿರುವ ಹೃದಯವಂತರನ್ನು ಲೇಖಕಿ ಮೆಚ್ಚಿಕೊಂಡಿದ್ದಾರೆ. ಆದರೆ ಅಲ್ಲಿ ನೆಲೆಸಿರುವ ಎಲ್ಲ ಭಾರತೀಯರಲ್ಲೂ ಈ ಭಾವನೆ ಇಲ್ಲ ಎನ್ನುವುದನ್ನು ಲೇಖಕಿ ಕೆಲವರನ್ನು ಮಾತನಾಡಿಸಿ ಕಂಡು ಕೊಂಡಿದ್ದಾರೆ. "ಇಂಡಿಯಾ ನಮಗೆ ಏನು ಮಾಡಿದೆ? ಏಕೆ ಅದರ ಬಗ್ಗೆ ಮಮಕಾರ ಬೆಳೆಸಿಕೊಳ್ಳಬೇಕು ಎನ್ನುವ ಮಹಾನುಭಾವರನ್ನು ಕಂಡು ದು:ಖಿತರಾಗಿದ್ದಾರೆ. ಉಕ್ಕಿ ಬರುವ ರೋಷವನ್ನು ಹತ್ತಿಕ್ಕಿಕೊಂಡು ಇಂತಹ ಬುದ್ಧಿವಂತ ಮೂರ್ಖರ ಬಳಿ ಮಾತೇನು ಎಂದು ಲೇಖಕಿ ಸುಮ್ಮನಾಗಿರುವುದಲ್ಲಿ ಲೇಖಕಿಗೆ ಸ್ವದೇಶದ ಬಗೆಗಿರುವ ಕಾಳಜಿಯನ್ನು ಅರಿಯಬಹುದು.

ಒಟ್ಟಾರೆಯಾಗಿ ಲೇಖಕಿ ತಮ್ಮ ಪ್ರವಾಸ ಅನುಭವವನ್ನು ಸರಳವಾಗಿ ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

'ಪ್ರವಾಸ ಸಾಹಿತ್ಯ ರಚನೆಯಲ್ಲಿ ಪುರುಷರಷ್ಟೇ ಅಲ್ಲ ಮಹಿಳೆಯರೂ ಪ್ರಧಾನ ಪಾತ್ರ ವಹಿಸಿರುವುದನ್ನು ಕಾಣಬಹುದು. ಮಹಿಳೆಯರ ಪ್ರವಾಸ ಸಾಹಿತ್ಯದಲ್ಲಿ ಸ್ತ್ರೀಪರ ಕಾಳಜಿಗಳು, ಸ್ತ್ರೀಪರ ಸಂವೇದನೆಗಳು,

ಸಂಸ್ಕೃತಿಯ ಬಗೆಗಿನ ಕಾಳಜಿ, ವಿಜ್ಞಾನ, ಸಂಶೋಧನೆ, ಪ್ರಕೃತಿ ಹಾಗೂ ನಿಸರ್ಗದ ಬಗೆಗಿನ ಕಾಳಜಿಗಳು, ಭಿನ್ನ ಸಂಸ್ಕೃತಿಯ ತೌಲನಿಕ ಅಧ್ಯಯನ ಇವುಗಳನ್ನು ಕುರಿತ ಬಹಳಷ್ಟು ಅಂಶಗಳನ್ನು ದಾಖಲಿಸಿದ್ದಾರೆ. ಸಾಂಪ್ರದಾಯತೆಯನ್ನು ಮುರಿವ ಮತ್ತು ಪೋಷಿಸುವ ಅಂಶಗಳೂ ಪ್ರವಾಸ ಕೃತಿಗಳಲ್ಲಿ ಕಾಣುತ್ತೇವೆ'. ಪಾಶ್ಚಾತ್ಯ ಜಗತ್ತನ್ನು ಪರಿಚಯಿಸಿಕೊಟ್ಟು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಈ ಲೇಖಕಿಯರು ಮುಂದಾಗಿದ್ದಾರೆ.

**ಅವನಿಯ ಅಪ್ಸರೆ ಅಮೇರಿಕ – ಜಲಜಾ ಗಂಗೂರ್ :**

ಅಮೇರಿಕೆಯಲ್ಲಿದ್ದ ಮಗನ ಕರೆಯ ಮೇರೆಗೆ ಮೊಮ್ಮಗಳನ್ನು ನೋಡಿಕೊಳ್ಳಲು ಅಮೇರಿಕಾಕ್ಕೆ ಪ್ರವಾಸ ಕೈಗೊಂಡಿರುವರು.

ಅಮೇರಿಕಾವನ್ನು 'ಅಪ್ಸರೆ' ಎಂದು ಹೊಗಳಿ ಆ ಭೋಗ ಭೂಮಿಯನ್ನು ಪಾವನ ಮಾತೆಯಾಗಿ ಕಂಡಿದ್ದಾರೆ. "ಆ ಭೂಮಿ, ಪಾಪ ಭೂಮಿ ಎಂಬ ಅಪಸ್ವರದ ಭೂತವನ್ನು ನನ್ನ ಮನದಾಳದಿಂದ ಓಡಿಸಿ, ಪುಣ್ಯವಂತೆ, ಪಾವನ ಚರಿತೆ ಎಂದು ಹಾಡಿ ಹರಿಸಿರುವೆ" ಎಂದು ಲೇಖಕಿಯೇ ಹೇಳಿಕೊಂಡಿದ್ದಾರೆ. ಅಮೇರಿಕಾದಲ್ಲಿ ಇದ್ದಷ್ಟು ದಿನಗಳನ್ನು ಲೇಖಕಿ ಅನುಸಂಧಾನ ಮಾಡಿಕೊಂಡು ಜೀವನ ಸಾಗಿಸುವ ರೀತಿಯನ್ನು ಸ್ವಾರಸ್ಯಯುತವಾಗಿ ವಿವರಿಸಿದ್ದಾರೆ. ಭಾರತದಲ್ಲಿಯ ದೈನಂದಿನ ಕಾರ್ಯಗಳಿಗೂ ಇಲ್ಲಿಯ ದೈನಂದಿನ ಕಾರ್ಯಗಳಿಗೂ ಅಜಗಜಾಂತರ ವ್ಯತ್ಯಾಸವನ್ನು ತಿಳಿಸಿದ್ದಾರೆ.

ಪ್ರತಿಭೆಯಿಂದಲೇ ವಿದ್ಯಾರ್ಥಿ ವೇತನ ಪಡೆದು, ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಬರುತ್ತಾರೆ. ಪ್ರತಿಭೆ ಇದ್ದರೂ ಸರಿಯಾದ ಕೆಲಸಗಳಿಲ್ಲದೇ ಕಷ್ಟಪಡುತ್ತಾರೆ. ಇಲ್ಲಿ ಕಂಪನಿಗಳ ಮೂಲಕ ಭಾರತದಿಂದ ಬಂದ ಇಂಜಿನಿಯರ್‌ಗಳಿಗೆ ಯಾವ ತೊಂದರೆ ಇರುವುದಿಲ್ಲ ಸುಖವಾಗಿರುತ್ತಾರೆ. ಸ್ವಂತ ಉದ್ಯೋಗ ಹುಡುಕಿಕೊಂಡು, ವಿದ್ಯಾಭ್ಯಾಸಕ್ಕಾಗಿ ಬಂದವರು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಾರೆ. ಹೋಟೆಲುಗಳಲ್ಲಿ, ಅಂಗಡಿಗಳಲ್ಲಿ ಅತೀ ಸಣ್ಣ ಪುಟ್ಟ ಕೆಲಸಗಳನ್ನು ಸದಾ ಮಾಡುತ್ತಾ ತುಂಬಾ ಶ್ರಮ ಪಡುತ್ತಾರೆ. ಆದರೆ ಭಾರತಕ್ಕೆ ಮರಳುವುದಿಲ್ಲ. ಅಲ್ಲಿಯ ಡಾಲರು ಮೊತ್ತದ ಹಣಕ್ಕೆ ಮರುಳಾಗಿದ್ದಾರೆ ಎಂದು ಲೇಖಕಿ ತಮ್ಮ ಮಗ, ಸೊಸೆಯ ಜರ್ಜರಿತ ಬದುಕಿನೊಂದಿಗೆ ಇತರ ಪ್ರತಿಭಾವಂತರ ಸ್ಥಿತಿಯನ್ನು ತಿಳಿಸಿದ್ದಾರೆ.

ಅಮೇರಿಕನ್ನರ ಅಲೆಮಾರಿ ಜೀವನ ಲೇಖಕಿಗೆ ಸೋಜಿಗವಾಗಿ ಕಂಡಿದೆ. ಅಲ್ಲಿಯ ಬಹಳಷ್ಟು ಜನ ಒಂದೇ ಕೆಲಸದಲ್ಲಿ ಒಂದೇ ಜಾಗದಲ್ಲಿ ಯಾರು ಇರುವುದಿಲ್ಲ. ಸ್ವತಂತ್ರ ದೇಶವಾದರೂ, ಮನುಷ್ಯನಿಗೆ ನಮ್ಮ ದೇಶದಲ್ಲಿ ಇರುವಂತೆ ಇಲ್ಲಿ ಯಾವ ಸ್ವಾತಂತ್ರ್ಯವೂ ಇಲ್ಲ, ಬಾಡಿಗೆ ಮನೆ ಇರಲಿ, ಸ್ವಂತ ಮನೆ ಇರಲಿ; ಸೊಸೈಟಿಯವರು, ಅಪಾರ್ಟಮೆಂಟಿನವರು ಹೇಳಿದ ಬಣ್ಣಗಳನ್ನು ಮನೆಗಳಿಗೆ ಬಳಿಸಬೇಕು, ಮನೆಗಳನ್ನು ಅಚ್ಚುಕಟ್ಟಾಗಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಬಹಳ ಕಷ್ಟ. ಹೀಗೆ ಅನೇಕ ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ ಎಂದು ಲೇಖಕಿ ಅವರ ಅಲೆಮಾರಿ ಜೀವನ, ಮಾನಸಿಕ ಒತ್ತಡದ ಬಗ್ಗೆ ಮರುಕ ವ್ಯಕ್ತಪಡಿಸಿದ್ದಾರೆ.

ನಯಾಗರ ಜಲಪಾತ ನೋಡಿ ಲೇಖಕಿ "ಅಬ್ಬಾ, ಎಷ್ಟು ಸುಂದರ, ಎಂಥ ನಯನ ಮನೋಹರ, ಜಗತ್ತಿನ ಎಂಟನೇ ಅದ್ಭುತ ಎಂಬುದು ಖಂಡಿತ ನಿಜ. ನೂರಕ್ಕೆ ನೂರರಷ್ಟು ಸತ್ಯ. ಜಗತ್ತಿನ ಅಪೂರ್ವ ಸುಂದರಿಯಾಗಿ ಕಂಗೊಳಿಸುತ್ತಿದೆ, ಈ ನಯಾಗಾರ ಜಲಪಾತ. ಈ ನಿಸರ್ಗ ರೂಪಸಿಯನ್ನು ವರ್ಣಿಸಲು ಬಹುಶ: ಸಾವಿರ ನಾಲಿಗೆಯ ಆದಿಶೇಷಗೂ ಅಸಾಧ್ಯವಾಗಬಹುದೆಂದು" ಉದ್ಗಾರ ತೆಗೆದಿದ್ದಾರೆ. ತಾಯಿ, ನಯಾಗರಿಯ ತೊಡೆಮಡಿಲನಲ್ಲಿ ಮಲಗಿ ಮಮತೆಯ ಅಮೃತ ವರ್ಷದಭ್ಯಂಜನದ ಸವಿಸುಖವನ್ನು ಅನುಭವಿಸಿದೆವು ಎನ್ನುವುದಲ್ಲದೆ, ಇದರ ಸುಖವನ್ನು ಓದಿದರೆ ಅರ್ಥವಾಗುವುದಿಲ್ಲ, ಪ್ರತ್ಯಕ್ಷ ದರ್ಶನದಿಂದ ಮಾತ್ರ ಆಸ್ವಾದವಾಗುತ್ತದೆ ಎಂದು ಲೇಖಕಿ ಓದುಗರನ್ನು ನಯಾಗರ ಜಲಪಾತ ವೀಕ್ಷಣೆಗೆ ಪ್ರೇರಿಪಿಸುವಂತಿದೆ.

ಅಮೇರಿಕಾದ ಜನರು, ಸ್ವಾಭಾವಿಕವಾಗಿ ಒಳ್ಳೆಯವರು, ಶಾಂತ ಸ್ವಭಾವದವರು, ಶ್ರಮಜೀವಿಗಳೆಂದು ಲೇಖಕಿ ತಮ್ಮ ಒಂಭತ್ತು ತಿಂಗಳಲ್ಲಿ ಸುತ್ತ ಮುತ್ತ ನೋಡಿದ ಜನರ ಮೂಲಕ ಅಲ್ಲಿಯ ಜನ ಜೀವನ ಸ್ವಭಾವದ ಬಗ್ಗೆ ವಿವರವಾಗಿ ತಿಳಿಸಿದ್ದಾರೆ ಪ್ರತಿಯೊಬ್ಬರು ನಿಷ್ಠೆಯಿಂದ ದುಡಿಯುತ್ತಾರೆ. ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೆ. ಆದರೆ ಭಾರತದಲ್ಲಿ ಇದರ ಅಭಾವ ಎದ್ದು ಕಾಣುತ್ತದೆ ಎಂದು ವಿಷಾದಿಸುತ್ತಾರೆ. ಅಲ್ಲಿನವರು ವಾಹನ ಸೌಕರ್ಯ, ಸ್ವಚ್ಛತೆಯನ್ನು ಮೆಚ್ಚಿಕೊಂಡಿದ್ದಾರೆ. "ಬಸ್ಸಿನಲ್ಲಿ, ಮೂತ್ರಾಲಯದ ಶೌಚಾಲಯಗಳಿರುತ್ತವೆ ಬಸ್ಸಿನಲ್ಲಿ ಏನೂ ಕಸ, ಕಡ್ಡಿ, ತಿಂಡಿ ತಿನಿಸು ಎಸೆಯುವಂತಿಲ್ಲ. ಆ ಎಲ್ಲಾ ಕಸ ಅಥವಾ ಕೊಳಕುಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿಕೊಂಡು, ನಿಲ್ದಾಣದಲ್ಲಿ ಇಳಿದಾಗ ಅಲ್ಲಿರುವ ಕಸದ ತೊಟ್ಟಿಗೆ ಹಾಕಬೇಕು. ಈ ನಿಯಮವನ್ನು ಅಮೇರಿಕಾದ ಪ್ರತಿಯೊಬ್ಬ ಪ್ರಜೆಯೂ ಪಾಲಿಸುತ್ತಾನೆ. ಆ ಕಾರಣದಿಂದ ಬಸ್ಸುಗಳು ಸದಾ ಸ್ವಚ್ಛವಾಗಿದ್ದೂ; ಪ್ರಯಾಣಿಕರಿಗೆ, ಸುಖಕರವು, ಹರುಷದಾಯಕವೂ

ಆಗಿರುತ್ತದೆ ಎನ್ನುತ್ತಾರೆ. ದೇಶವೆಲ್ಲಾ ಯಂತ್ರಮಯ, ತಂತ್ರಜ್ಞಾನದಲ್ಲಿ ಜಾಣತನದಿಂದ ತಮಗೆ ಬೇಕಾದ ಸಕಲ ಸೌಕರ್ಯಗಳನ್ನು ಕಂಡುಕೊಂಡಿರುವುದು ಒಳ್ಳೆಯದೆಂದು ಲೇಖಕಿಗೆ ಅನಿಸುತ್ತದೆ.

ನಮ್ಮ ದೇಶದಲ್ಲಿ ವಿದೇಶಿಯರನ್ನು ನೋಡಿ ಹಾಸ್ಯ ಮಾಡುವುದು, ನಗುವುದು ಮೊದಲಾದವುಗಳ ನೆನಪಾಗಿ ಅಸಮಧಾನಗೊಂಡು; ನಮ್ಮಲ್ಲಿಯ ಬಿಸಿಲಿನ ಬೇಗೆಗೆ ವಿದೇಶಿಯರೆಲ್ಲಾ ತುಂಡು ಚಡ್ಡಿ, ಬನಿಯನ್ ಧರಿಸಿಯೇ ಓಡಾಡುತ್ತಾರೆ ಇದನ್ನು ನೋಡಿ ನಗುವುದು, ಅವರು ಮಾಹಿತಿ ಕೇಳಿದರೆ ಸರಿಯಾಗಿ ಉತ್ತರಿಸದೆ ತಿರಸ್ಕಾರ ಭಾವದಿಂದ ಕಾಣುವುದು, ನಮ್ಮ ವಾಹನ ಚಾಲಕರು, ರಿಕ್ಷಾವಾಲಗಳು ಅವರಿಂದ ಒಂದಕ್ಕೆ ನಾಲ್ಕರಷ್ಟು ದುಡ್ಡು ವಸೂಲಿ ಮಾಡುವುದು ಇದನ್ನೆಲ್ಲಾ ಲೇಖಕಿ ಅಮೇರಿಕಾದ ನೆಲದಲ್ಲಿ ನಿಂತು ನೆನೆಸಿಕೊಂಡು ಎಂಥಾ ತಪ್ಪು ಮಾಡುತ್ತೇವೆ ಎಂದು ಪಶ್ಚಾತ್ತಾಪಪಟ್ಟಿದ್ದಾರೆ. ಅನ್ಯದೇಶಿಯರಿಗೆ, ಸ್ವದೇಶಿಯವರು ಗೌರವ ಕೊಡುವುದು ಮಾನವ ಧರ್ಮವೆಂದು ವಿದೇಶಿಯರ ನಡವಳಿಕೆಯಿಂದ ತಿಳಿದುಕೊಂಡು ತಲೆಬಾಗಿದ್ದಾರೆ. ಒಳ್ಳೆಯ ಗುಣಗಳನ್ನು ತಿಳಿದುಕೊಂಡು ಕಲಿತುಕೊಳ್ಳಬೇಕು. ಇದಕ್ಕೆ ಪ್ರಾಂತ್ಯ ಭೇದಗಳು, ಜಾತಿ ಮತದ ತೊಡಕುಗಳನ್ನು ಗಂಟು ಹಾಕಬಾರದೆಂದು ಹೇಳುತ್ತಾರೆ. ನೀತಿ–ನಿಯಮ, ಉತ್ತಮ ನಡವಳಿಕೆ, ಅದು ಎಲ್ಲಿದ್ದರೂ ಅದಕ್ಕೆ ಮಾನ್ಯತೆ ನೀಡುವುದು ಎಲ್ಲರ ಕರ್ತವ್ಯ ಎನಿಸುತ್ತದೆ.

ಅಮೇರಿಕಾವನ್ನು ಲೇಖಕಿ, ಒಂದು ವಿಚಿತ್ರ ಪಾತ್ರದ ವೈಚಿತ್ರ ಗುಣಗಳ ವೈಶಿಷ್ಟತೆ ಹೊಂದಿರುವ ದೇಶ ಇದು ಅಭಿಪ್ರಾಯಪಟ್ಟಿದ್ದಾರೆ. ಕಾರಣ ಪ್ರಪಂಚದ ಯಾವ ಮೂಲೆಗಳಿಂದ ಜನರು ಬಂದರೂ ಆಶ್ರಯ ಕೊಟ್ಟು, ಅನ್ನ ನೀಡುತ್ತದೆ. ಇದಕ್ಕಾಗಿ ಅಮೇರಿಕಾವನ್ನು ಲೇಖಕಿ ಅನ್ನಪೂರ್ಣೇಶ್ವರಿ ಎಂದು ಕರೆಯುತ್ತಾರೆ. ನಮ್ಮ ಜನಗಳ ಮನೋಭಾವ ಬದಲಾಗಿದೆ. ಸಮಾಜನ ಕಟ್ಟಳೆಗಳು ಸುಧಾರಿಸಿವೆ. ಎಲ್ಲರೂ ಅಮೇರಿಕಾಕ್ಕೆ ಬರಲು ಹಾತೊರೆಯುತ್ತಾರೆ. ಇದರಿಂದಾಗಿ ಬೇಕಾದಷ್ಟು ಭಾರತೀಯರು ಅಮೇರಿಕಾದಲ್ಲಿದ್ದಾರೆ. 'ಕಂಪ್ಯೂಟರ್ ಯುಗದಲ್ಲಿಂದು ಅಮೇರಿಕಾ ಭಾರತಕ್ಕೆ ಹತ್ತಿರದ ಬಂದುವಾಗಿದೆ' ಎಂದು ತಿಳಿಸುತ್ತಾರೆ.

ಲೇಖಕಿಯ ಮಾತು, ನಿರೂಪಣೆಯನ್ನು ಕಂಡು ಪ್ರೊ:ಮಲ್ಲೇಪುರಂ ಜಿ. ವೆಂಕಟೇಶ ಅವರು ತಮ್ಮ ಮುನ್ನುಡಿಯಲ್ಲಿ 'ಬುದ್ಧಿಮಟ್ಟಕ್ಕೆ ತಕ್ಕ ಹಾಗೆ, ಲೆಕ್ಕಣಿಕೆಯಿಂದ ಒಕ್ಕಣೆ ಮೂಡಿಸಲು ಪ್ರಯತ್ನಿಸುವುದು ಕಂಡು ಬರುತ್ತದೆ. "ಹಳ್ಳಿಗಾಡಿನ ಮುತ್ತೈದು ಅಮೇರಿಕೆಯಲ್ಲಿ ನಡೆದಾಡಿದ ಅನುಭವವು ಕನ್ನಡದ

ಕನ್ನಡಿಯಲ್ಲಿ ಹೊಳೆದಿದೆ" ಎನ್ನುವ ಹೇಳಿಕೆ ಔಚಿತ್ಯಪೂರ್ಣವಾಗಿದೆ ಎನಿಸುತ್ತದೆ. ತಮ್ಮ ಇತಿ ಮಿತಿಗಳನ್ನು ಪ್ರಾಮಾಣಿಕವಾಗಿ ಹೇಳಿದ್ದಾರೆ. ಬೃಹತ್ ರಾಷ್ಟ್ರದ ಕೆಲವು ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಇಣುಕುತ್ತವೆ ಹೊರತು ವಿಶೇಷವೇನೂ ಕಂಡುಬರುವುದಿಲ್ಲ. ಪ್ರವಾಸ ಕಥನದುದ್ದಕ್ಕೂ ಒಮ್ಮೊಮ್ಮೆ ಆಸಕ್ತಿ ಕಳೆದುಕೊಳ್ಳುವಂತೆ ಅತೀ ಭಾವುಕ ನಿರೂಪಣೆ ಎನಿಸಿದರೂ ಒಬ್ಬ ಸಾಧ್ವಿ ಸಂಪ್ರದಾಯಸ್ಥ ಮಹಿಳಾ ಆಲೋಚನೆಯಿಂದ ಕೂಡಿದೆ ಎಂಬುದು ಮನವರಿಕೆಯಾಗುತ್ತದೆ.

**ವಿದೇಶ ಪ್ರವಾಸ – ಆರ್ಯಾಂಭ ಪಟ್ಟಾಭಿ :**

ಲೇಖಕಿ ಮೂರು ಸಲ ಅಮೇರಿಕಾಗೆ ಭೇಟಿ ನೀಡಿ ಅಲ್ಲಿಯ ಸಂಸ್ಕೃತಿ, ಜನಜೀವನ, ರೀತಿ ನೀತಿಗಳನ್ನು ಕುತೂಹಲದಿಂದ ಅಧ್ಯಯನ ಮಾಡಿದ್ದಾರೆ. ಪ್ರವಾಸಾನುಭವದಲ್ಲಿ ಲೇಖಕಿಯನ್ನು ಮುದಗೊಳಿಸಿದ, ಕೌತುಕಗೊಳಿಸಿದ, ಪ್ರೇಕ್ಷಣೀಯ ಸ್ಥಳಗಳನ್ನು ಕಂಡಾಗ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಹಾಗೂ ಚಿಂತನ ಮಂಥನಗಳನ್ನು ತರ್ಕಿಸಿ ಗಮನ ಸೆಳೆದ ವಿಚಾರಗಳನ್ನು ಚಿತ್ರಿಸಿದ್ದಾರೆ. ನಮ್ಮ ಜನಜೀವನದಲ್ಲಿರುವ ಕೊರತೆಯನ್ನು, ಮಾಡುತ್ತಿರುವ ಅವಿವೇಕಗಳನ್ನು ತಿದ್ದಿಕೊಂಡು ಪ್ರಬುದ್ಧರಾಗಲು ಬೇಕಾಗುವ ವಿಚಾರಗಳನ್ನು ಓದುಗರಿಗೆ ತಿಳಿಸಲು ಯತ್ನಿಸಿದ್ದಾರೆ.

ಅಮೇರಿಕ ಜನಜೀವನದಲ್ಲಿ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿ ಕಂಡು ಬರುವಂತಹ ಹಲವಾರು ಅಂಕುಡೊಂಕು ಕೊರತೆಗಳಿದ್ದರೂ, ಆ ರಾಷ್ಟ್ರದ ವಿಜ್ಞಾನ, ತಾಂತ್ರಿಕ ಜಗತ್ತಿನ ಪ್ರಗತಿ, ಆಡಳಿತ ವ್ಯವಸ್ಥೆ, ಶಿಕ್ಷಣ ಪದ್ಧತಿ, ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು, ಆರೋಗ್ಯ ರಕ್ಷಣೆ, ಆಸ್ಪತ್ರೆಗಳು, ಪೋಲಿಸ್ ವ್ಯವಸ್ಥೆ, ಪ್ರವಾಸೋದ್ಯಮ, ವ್ಯಾಪಾರ ವಹಿವಾಟುಗಳು ಕಾನೂನು ಪರಿಪಾಲನೆ, ಶಿಸ್ತಿನ ಅನುಕರಣೆ ಇವೆಲ್ಲವನ್ನು ಗಮನಿಸಿ ಅವರಿಂದ ನಾವು ಕಲಿಯಬೇಕಾದ ಅಂಶಗಳ ಬಗ್ಗೆ ಲೇಖಕಿ ಬೆಳಕು ಚೆಲ್ಲಿದ್ದಾರೆ.

"ಜನರ ಶ್ರಮಜೀವನ, ಶಿಸ್ತು, ನಿಷ್ಠೆ, ಪ್ರಾಮಾಣಿಕತೆ ನನ್ನ ಕಣ್ಣು ತೆರೆಸಿದವು. ಅವರೂ ನಮ್ಮಂತೆ ಸ್ವಾತಂತ್ರ್ಯ ಪಡೆಯಲು ಯುದ್ಧ ಮಾಡಿದವರು. ಅವರ ಸಂಸ್ಕೃತಿ ಸುಂದರವಾದದ್ದು, ಜನಪದ ಸಂಪತ್ತು ಅಪಾರವಾದದ್ದು. ಜಾಗತಿಕ ಸಂಸ್ಕೃತಿ ಯಾವುದೊಂದು ರಾಷ್ಟ್ರದ ಮೀಸಲು ಆಸ್ತಿಯಾಗಿರದೆ ಎಲ್ಲ ರಾಷ್ಟ್ರಗಳ, ಜನಾಂಗಗಳ, ಒಟ್ಟಾರೆ ಮಾನವರ ಸಾಮೂಹಿಕ ಸೃಷ್ಟಿ ಎನ್ನಬಹುದು ಆ ರಾಷ್ಟ್ರದ ಜನತೆಯ ದೇಶಾಭಿಮಾನ, ಸ್ವಾಭಿಮಾನ ಮತ್ತು ಸಾಂಸ್ಕೃತಿಕ ಜಾಗೃತಿಗಳಿಗೆ ಕೊರತೆಯಿಲ್ಲ"[17] ಎನ್ನುವ ಲೇಖಕಿ ಅಲ್ಲಿಯ ಕೆಲವು ಗುಣಮೌಲ್ಯಗಳನ್ನು ಉಲ್ಲೇಖಿಸಿದ್ದಾರೆ.

ಒಂದು ಬಡಾವಣೆಯಲ್ಲಿ ಎಷ್ಟೇ ಮನೆಗಳಿದ್ದರೂ ಅವುಗಳ ಮುಂದಿರುವ ರಸ್ತೆಯ ಮೇಲೆ ಓಡಾಡುವ ಜನ ಅಪರೂಪವೆಂದು, ಅಮೇರಿಕಾದಲ್ಲಿ ವಾಸವಾಗಿರುವ ಹೆಚ್ಚಿನವರು ಮನೆಯಿಂದ ಕಾರಿನಲ್ಲೆ ಹೋಗಿಬರುವುದರಿಂದ ಅಕ್ಕ ಪಕ್ಕದ ಮನೆಗಳಲ್ಲಿ ಯಾರಿದ್ದಾರೆ ಎನ್ನುವುದೂ ತಿಳಿಯುವುದಿಲ್ಲ. ರಸ್ತೆಯಲ್ಲಿ ಆಗಾಗ್ಗೆ ಓಡಾಡುವ ಕಾರುಗಳು ಮಾತ್ರ ನಮ್ಮ ಕಣ್ಣಿಗೆ ಬೀಳುತ್ತವೆ ಎನ್ನುತ್ತಾ, ರಸ್ತೆಗಳಲ್ಲಿ ಮನುಷ್ಯರು ಹಾಗಿರಲಿ, ನಾಯಿ, ಕತ್ತೆ, ದನ, ಕೋಳಿ, ಬೆಕ್ಕು ಯಾವುವು ಕಾಣುವುದಿಲ್ಲ. ಅಲ್ಲದೇ ಮನೆಯ ಸುತ್ತಲಿರುವ ನಿವೇಶನ ಎಷ್ಟೇ ವಿಶಾಲವಾಗಿದ್ದರೂ ಅದರ ಮೇಲೆ ಹುಲ್ಲು ಕಡ್ಡಾಯವಾಗಿ ಬೆಳಸಿ ಅದು ಹೆಚ್ಚು ಎತ್ತರ ಬೆಳೆಯದಂತೆ ಯಂತ್ರದಿಂದ ಸಮತಟ್ಟಾಗಿ ಕತ್ತರಿಸುವುದು.. ಹೀಗೆ ಅಲ್ಲಿನ ನಿಶಬ್ದ ವಾತಾವರಣ, ಪ್ರಶಾಂತತೆ, ಅಚ್ಚುಕಟ್ಟುತನವನ್ನು ಕಾಣಬಹುದು. ಆದರೆ ನಮ್ಮ ದೇಶದಲ್ಲಿ ಎಲ್ಲೆಲ್ಲೂ ಕಾಣುವ ಕೊಳಚೆ, ಅತಿಯಾದ ಜನಸಂಖ್ಯೆ, ದಾರಿದ್ರ್ಯ, ಅನಕ್ಷರತೆ, ನಿರುದ್ಯೋಗ, ಸೋಮಾರಿತನ, ಮೋಸ, ವಂಚನೆ, ಭ್ರಷ್ಟಾಚಾರ, ಲಂಚ ಇತ್ಯಾದಿ ಸಮಸ್ಯೆಗಳು ಅಪರೂಪವೆನ್ನುವಲ್ಲಿ ಅಮೇರಿಕಾ ಮತ್ತು ಭಾರತಗಳ ಬಗ್ಗೆ ಸಮಾಧಾನ ಹಾಗೂ ಅಸಮಾಧಾನಗಳನ್ನು ಮುಕ್ತವಾಗಿ ನಿರೂಪಿಸಿದ್ದಾರೆ.

ಹಾಗೆಯೇ ಪ್ರೇಮ ವಿವಾಹ, ವಿವಾಹ ವಿಚ್ಛೇದನ, ಲೈಂಗಿಕ ಚಟುವಟಿಕೆಗಳು, ಅದರಿಂದ ಉದ್ಭವಿಸುವ ಭಯಂಕರ ಸಮಸ್ಯೆಗಳು ಅಮೇರಿಕನ್ನರ ಜೀವನದಲ್ಲಿ ಅನಿವಾರ್ಯ ಅಂಗವಾಗಿ ಬೆಳೆದುಬಂದಿದೆ ಇತ್ತೀಚೆಗೆ ಇವುಗಳ ದುಷ್ಪರಿಣಾಮವನ್ನು ಮನಗಂಡು ಭಾರತೀಯ ಸಂಸ್ಕೃತಿಯ ಒಂದು ಭಾಗವಗಿರುವ ಯೋಗ, ಧ್ಯಾನ, ಸಂಗೀತ, ನೃತ್ಯ, ಕಲೆ ಇತ್ಯಾದಿಗಳಲ್ಲಿ ಅವರು ಆಸಕ್ತಿವಹಿಸುತ್ತಿರುವುದು ಸ್ವಾಗತಾರ್ಹವಾಗಿದೆ ಎಂದು ತಿಳಿಸುತ್ತಾರೆ. ಆದರೆ ನಮ್ಮ ಜನತೆ ಧೂಮಪಾನ ಕುಡಿತ, ಮಾದಕ ವಸ್ತುಗಳ ಸೇವನೆ ಮತ್ತು ಲೈಂಗಿಕ ಸ್ವಚ್ಛಂದತೆ ಹೆಚ್ಚುತ್ತಿರುವುದು ನಿಜಕ್ಕೂ ವಿಷಾದನೀಯ ಎನ್ನುತ್ತಾರೆ.

ಫಿಲಿಡೆಲ್ಫಿಯದಲ್ಲಿರುವಷ್ಟು ವಿವಿಧ ವಸ್ತು ಸಂಗ್ರಾಹಾಲಯಗಳು ಮತ್ತೆಲ್ಲೂ ಇಲ್ಲ ಎನ್ನುತ್ತಾರೆ. ಅತ್ಯಂತ ಪ್ರಾಚೀನ ಮತ್ತು ಪ್ರಮುಖವಾದ ಎರಡು ವಿಶ್ವ ವಿಖ್ಯಾತ ಎರಡು ಸಂಗ್ರಹಾಲಯಗಳೆಂದರೆ ಒಂದು ಆರ್ಟ್ ಮ್ಯೂಸಿಯಂ, ಇನ್ನೊಂದು ಸೈನ್ಸ್ ಮೂಸಿಯಂ ಎಂದು ಅವುಗಳ ಕುರಿತು ತಿಳಿಸುತ್ತಾರೆ. ವಸ್ತು ಸಂಗ್ರಹಾಲಯಗಳ ಬಗ್ಗೆ ಇದ್ದ ವಿಶೇಷ ಒಲವಿನಿಂದ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ.

ಸಂಗ್ರಹಾಲಯದಲ್ಲಿ; ಮಧುರೆ, ಜೈನ ಮತ್ತಿತರ ದೇವಾಲಯಗಳನ್ನು ಬಿಡಿಬಿಡಿಯಾಗಿ ತಂದು ಮನೋಜ್ಞವಾದ ರೀತಿಯಲ್ಲಿ ಜೋಡಿಸಿರುವುದು, ಫ್ರಾನ್ಸ್ ದೇಶದ ಕೆಲವು ಕಲಾತ್ಮಕ ಕೊಠಡಿಗಳು,

'ಇಸ್ಲಾಮಿಕ್ ಕಲಾವಿಭಾಗದಲ್ಲಿ ಎರಡು ಶತಮಾನಗಳ ಹಿಂದಿನ ಈಜಿಪ್ಟ್ ಮತ್ತು ಪರ್ಶಿಯಾ ದೇಶದ ರತ್ನಗಂಬಳಿಗಳು, ಇಲ್ಲಿರುವ ಕಲಾವಸ್ತುಗಳನ್ನು ನೋಡಲು ತಿಂಗಳಾದರೂ ಬೇಕು ಎನ್ನುತ್ತಾ, ಆ ವಸ್ತುಗಳ ಪ್ರದರ್ಶನ ನಿಜಕ್ಕೂ ಅದ್ಭುತ, ಅಮೋಘವೆಂದು ತಮಗುಂಟಾದ ಭಾವನೆಗಳನ್ನು ಬೆರಗಿನಿಂದ ಅಭಿವ್ಯಕ್ತಿಸಿದ್ದಾರೆ.

ಅಮೇರಿಕ ಪ್ರಜೆಗಳು ವಿಲಾಸಿಪ್ರಿಯರು, ರಸಿಕರು, ಭೋಗಪ್ರಿಯರು, ಮೇಲಾಗಿ ಪುಷ್ಪಪ್ರೇಮಿಗಳು ಎಂದು ತಿಳಿಸುತ್ತಾ, ಅವರ ಪುಷ್ಪ ಪ್ರೇಮವನ್ನು ತಿಳಿಯಲು ಯಾವ ತೋಟಗಳಿಗೆ ಹೋಗಬೇಕಾಗಿಲ್ಲ. ಏಕೆಂದರೆ ಅವರು ಮನೆಗಳ ಸುತ್ತಮುತ್ತ, ಆಸ್ಪತ್ರೆ, ಕಛೇರಿ, ಕಾರ್ಖಾನೆ, ಕಂಪನಿಗಳು, ಶಾಲಾ ಕಾಲೇಜು ಕಟ್ಟಡ ಮೊದಲಾದ ಪ್ರೇಕ್ಷಣೀಯ ಸ್ಥಳಗಳಲ್ಲಿ ಸುಂದರವಾದ ಹೂ ಗಿಡಗಳನ್ನು ಬೆಳೆಸುತ್ತಾರೆ. ನೋಡಲು ಆಕರ್ಷಣೀಯವಾಗಿರುತ್ತವೆ ಎಂದು ಸಹಜ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ.

ಭಾರತೀಯರಾದ ನಾವು ಹೂವುಗಳಿಂದ ದೇವರನ್ನು ಪೂಜಿಸುತ್ತೇವೆ. ಮಹಿಳೆಯರು ಸುವಾಸನೆ ಬರುವ ಹೂವುಗಳನ್ನು ತಲೆತುಂಬ ಮುಡಿಯುತ್ತಾರೆ. ಆದರೆ ಅಮೇರಿಕಾದವರು ಮೇಜುಗಳ ಮೇಲೆ ಹೂವುಗಳನ್ನು ಹೂದಾನಿಯಲ್ಲಿ ಕಲಾತ್ಮಕವಾಗಿ ಜೋಡಿಸಿಟ್ಟು ಪರಿಸರದ ಪ್ರಸನ್ನತೆಯನ್ನು ಹೆಚ್ಚಿಸುತ್ತಾರೆ. ಹಸಿರು ಹುಲ್ಲಿನ ಮೇಲೆ ಅರಳಿ ಕಂಗೊಳಿಸುವ ಪುಷ್ಪಗಳು ಕಣ್ಣುಗಳನ್ನು ಮುದಗೊಳಿಸುತ್ತವೆ. ಹೂಗಳನ್ನು ಒಣಗಿಸಿ ಅವುಗಳಿಂದ ಕಲಾಕೃತಿಗಳನ್ನು ಮಾಡುವ ಅವರ ಕಲಾನೈಪುಣ್ಯವನ್ನು ನೋಡಬಹುದು ಮತ್ತು ಅವುಗಳನ್ನು ಕೊಳ್ಳಬಹುದು ಎಂದಿರುವಲ್ಲಿ ಅಮೇರಿಕನ್ನರ ವ್ಯವಹಾರಿಕ ಕುಶಲತೆಯನ್ನು ನಾವು ತಿಳಿಯಬಹುದು.

"ಮಗು ಬಾಣಂತಿ ಅಥವಾ ರೋಗಿಗಳನ್ನು ನೋಡಲು ಆಸ್ಪತ್ರೆಗೆ ಹೋಗುವವರು ಬರಿಗೈಯಲ್ಲಿ ಹೋಗುವುದಿಲ್ಲ. ಹತ್ತು, ಇಪ್ಪತ್ತು ಇಲ್ಲವೇ ಮೂವತ್ತು ಡಾಲರು ಬೆಲೆ ಬಾಳುವ ಹೂ ಗೊಂಚಲನ್ನು ಖರೀದಿಸಿ ರೋಗಿಗಳಿಗೆ ಕೊಟ್ಟು 'ನಿಮಗೆ ಬೇಗ ಗುಣವಾಗಲಿ' ಎಂದು ಹಾರೈಸಿ, ಎಳೆ ಮಗುವಿನ ತಾಯಿಯ ಕೈಲಿಟ್ಟು ಅಭಿನಂದಿಸುತ್ತಾರೆ"[18] ಅಮೇರಿಕನ್ನರು ಹುಟ್ಟು, ಸಾವು, ನೋವು, ಪ್ರಾರ್ಥನೆ, ವಿವಾಹ ಇತ್ಯಾದಿ ಎಲ್ಲ ಶುಭ ಮತ್ತು ಅಶುಭ ಸಂದರ್ಭಗಳಲ್ಲಿ ಪುಷ್ಪಕ್ಕೆ ಮಹತ್ವದ ಸ್ಥಾನ ನೀಡುವುದು ನಾವು ಕಾಣಬಹುದೆನ್ನುವ ಸಂದರ್ಭದಲ್ಲಿ ಲೇಖಕಿ ಆ ದೇಶದ ಪುಷ್ಪಗಳು ನೋಡಲು ಸುಂದರವಾಗಿದ್ದರೂ ವಾಸನೆಯಿರುವುದಿಲ್ಲ ಎನ್ನುತ್ತಾ, ಅಲ್ಲಿನ ನಿರ್ಗಂಧ ಪುಷ್ಪಗಳನ್ನು ಕಂಡಾಗಲೆಲ್ಲ ಇಲ್ಲಿಯ ಮೈಸೂರು

ಮಲ್ಲಿಗೆ, ಸಂಪಿಗೆ ಜಾಜಿ ಹೂವುಗಳನ್ನು ನೆನೆಯುತ್ತ ಪ್ರತಿ ಸಂದರ್ಭಗಳಲ್ಲೂ ಅಮೇರಿಕ ಮತ್ತು ಭಾರತಗಳ ತೌಲನಿಕ ಚಿಂತನೆಗೈದಿದ್ದಾರೆ.

ಭವ್ಯವಾದ ಪ್ರಕೃತಿ ಸೌಂದರ್ಯದ ಜೊತೆಗೆ ಮಾನವ ಕಲಾತ್ಮಕವಾಗಿ ಸೃಷ್ಟಿಸಿರುವ ನೀರಿನ ಕಾರಂಜಿಗಳು, ರಂಗಮಂದಿಗಳು, ಗಾಜಿನ ಮನೆಗಳು, ಶಿಲ್ಪಗಳು ಲೇಖಕಿಯನ್ನು ಮಂತ್ರ ಮುಗ್ಧರನ್ನಾಗಿಸಿವೆ. ಅಮೇರಿಕಾದ ಅನೇಕ ಕನ್ನಡ ಸಂಘಗಳಿಗೆ ಭೇಟಿಕೋಟ್ಟಿದ್ದಾರೆ. ಅಲ್ಲಿ ಮೂವತ್ತೈದು ಕನ್ನಡ ಸಂಘಗಳಿದ್ದು ಸಾಕಷ್ಟು ಸಂಖ್ಯೆಯ ಸದಸ್ಯರನ್ನು ಹೊಂದಿ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸುತ್ತ ಕ್ರೀಯಾಶೀಲವಾಗಿವೆ. ಈ ಸಂಘಗಳ ಮೂಲಕ ಅಮೇರಿಕದಲ್ಲಿರುವ ಕನ್ನಡಿಗರೆಲ್ಲ ಒಂದಾಗಲು ಸಾಧ್ಯವಾಗಿದೆ ಎಂದು ತಿಳಿಸುತ್ತಾರೆ.

ಯಾವ ಆಧುನಿಕತೆ ನಾಗರಿಕತೆಯ ಸ್ಪರ್ಶವಿಲ್ಲದೆ, ವಿದ್ಯುಚ್ಛಕ್ತಿಯ ಸಹಾಯವಿಲ್ಲದೆ ಸುತ್ತಮುತ್ತಲಿರುವ ದೊಡ್ಡ ನಗರಗಳ ಪ್ರಭಾವಕ್ಕೆ ಬಲಿಯಾಗದೆ ವಾಸಿಸುವ ಆಮಿಷ ಹಳ್ಳಿಯ ಜನರ ಬಗ್ಗೆ ಲೇಖಕಿ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಆಮಿಷ ಜನರಿಗೆ ಕಾರಣ ಕೇಳಿದರೆ ಅವರು "ನಮ್ಮ ತಾತ ಮುತ್ತಾತಂದಿರು ಅವುಗಳನ್ನು ಉಪಯೋಗಿಸದೆ ಸುಖವಾಗಿ ನೆಮ್ಮದಿಯಿಂದ ಬದುಕಲಿಲ್ಲವೆ? ಅವುಗಳ ಸಹವಾಸವೇ ನಮಗೆ ಬೇಡ" ಎನ್ನುತ್ತಾರೆ ಎಂದು ಲೇಖಕಿ ಅಭಿಮಾನದಿಂದ ಹೇಳಿವಲ್ಲಿ, ಲೇಖಕಿಗಿರುವ ಸ್ವದುಡಿಮೆ, ದೇಸಿ ಬದುಕಿನ ಕಾಳಜಿಯನ್ನು ಕಾಣುತ್ತೇವೆ.

ಅಮೇರಿಕನ್ನರು ತುಂಬ ಸರಳ ಜೀವಿಗಳು, ಅಲ್ಪತೃಪ್ತರು ಒಡವೆಗಳನ್ನು ಹಾಕಿಕೊಳ್ಳುವುದಿಲ್ಲ. ಬೆಲೆಬಾಳುವ, ಆಡಂಬರದ ಉಡುಪುಗಳನ್ನು ಧರಿಸುವುದಿಲ್ಲ. ವರ್ಷಕ್ಕೆ ಬೇಕಾಗುವಷ್ಟು ದವಸ ಧಾನ್ಯಗಳನ್ನು ತಮ್ಮ ಜಮೀನಿನಲ್ಲೆ ಬೆಳೆಯುತ್ತಾರೆ. ವ್ಯವಸಾಯವೇ ಅವರ ವೃತಿ ಅದರಿಂದಲೇ ಅವರ ಬದುಕು ಉತ್ತಮವಾಗಿದೆ. ಇಂತಹ ಆಮಿಷ ಹಳ್ಳಿಯನ್ನು ನೋಡಲು, ಅಲ್ಲಿಯ ಜನರನ್ನು ಭೇಟಿ ಮಾಡಿ ಅವರ ಜೀವನದ ಆಚಾರ–ವಿಚಾರಗಳ ಪರಿಚಯ ಮಾಡಿಕೊಳ್ಳಲು ಅಮೇರಿಕದ ವಿವಿಧ ಭಾಗಗಳಿಂದ ಜನರು ಭೇಟಿಕೊಡುತ್ತಾರೆ ಎಂದು ತಿಳಿಸುತ್ತಾರೆ.

ಆಧುನಿಕ ಅಮೇರಿಕ ದೇಶದಲ್ಲಿ ಈ ಬಗೆಯ ಸರಳ ಜೀವಿಗಳಿರುವುದು ಸಾಧ್ಯವೆ? ಎಂಬ ಸಂಶಯವುಂಟಾದರೂ ಲೇಖಕಿ ಆ ಹಳ್ಳಿಗೆ ಭೇಟಿಕೊಟ್ಟು, ಅಲ್ಲಿಯ ಜನರ ಬದುಕು, ರೀತಿ ನೀತಿಗಳನ್ನು

ಕಣ್ಣಾರೆ ಕಂಡು ವಿವರಿಸಿರುವುರಿಂದ ಓದುಗರು ಕೂಡಾ ಸ್ಪಂದಿಸಲೇಬೇಕಾಗುತ್ತದೆ. ಲೇಖಕಿಗೆ ಇದೊಂದು ಮರೆಯಲಾಗದ ಮಹತ್ತರವಾದ ಮನ ಕೆದಕುವ, ಆತ್ಮಾವಲೋಕನದ ಅನುಭವವಾಗಿದೆ.

ಒಟ್ಟಾರೆಯಾಗಿ ಲೇಖಕಿ, ಅಮೇರಿಕಾದ ಪ್ರಮುಖ ನಗರಗಳಾದ ನ್ಯೂಯಾರ್ಕ್, ವಾಷಿಂಗ್‌ಟನ್, ಫಿಲಿಡೆಲ್ಫಿಯಾ, ಬಾಲ್ಟಿಮೋರ್, ಬಾಸ್ಟನ್, ಲಾಸ್ ಏಂಜಲೀಸ್, ನ್ಯೂಜೆರ್ಸಿ, ಅಟ್ಲಾಂಟಿಕ್‌ನಲ್ಲಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಕೊಟ್ಟು, ತಮ್ಮ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಂಡಿರುವುದಲ್ಲದೆ, ಪ್ರಗತಿಸೂಚಕವಾದ ಸದ್ಗುಣಗಳ ಕೊಳು–ಕೊಡುಗಳನ್ನು ವಿಮರ್ಶಿಸಿದ್ದಾರೆ.

**ಪಡುವಣದ ಪತ್ರಮಾಲೆ – ಸುಶೀಲಾ ಕೊಪ್ಪರ :**

ಈ ಕೃತಿಯ ಶೀರ್ಷಿಕೇ ಸೂಚಿಸುವಂತೆ ಹದಿನೆಂಟು ಪತ್ರಗಳಲ್ಲಿ ಕೆನಡ ಮತ್ತು ಅಮೇರಿಕಾ ದೇಶಗಳ ಜನ ಜೀವನ ಮತ್ತು ವಿಶೇಷತೆಗಳು ಸೇರಿದಂತೆ ಅನೇಕ ಅಂಶಗಳು ಅರಳಿ ನಿಂತಿವೆ. ಪುಟ 69 ರಿಂದ 146ರವರೆಗೆ ಅಮೇರಿಕಾ ದೇಶದ ವಿಷಯಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ.

'ಸಂವೇದನಾಶೀಲ ಮನಸ್ಸು', ಸಂತಸ ಹಾಗೂ ದುಗುಡವನ್ನು ಸಮಾನ ಪ್ರತಿಸ್ಪಂದನೆಯ ನೆಲೆಯಲ್ಲಿ ಪರಿಭಾವಿಸುತ್ತದೆ. ಹಾಗೂ ಇಂತಹ ಮನಸ್ಸು, ಚಲನಶೀಲತೆಯನ್ನು ಒಪ್ಪಿಕೊಂಡು ಮುಂದೆ ಸಾಗುತ್ತದೆ ಎನ್ನುವುದನ್ನು, ಸುಶೀಲಾ ಕೊಪ್ಪರ ಈ ಪ್ರವಾಸ ಕಥನದಲ್ಲಿ ಕಾಣಬಹುದು.

ಮನಸ್ಸಿಗೆ ಆಹ್ಲಾದ ನೀಡುವುದೇ ಸುಖ. ಈ ರೀತಿಯ ಸುಖವನ್ನು ಅಲ್ಲಲ್ಲಿ ಹುಡುಕಿಕೊಂಡು ಅತ್ಯಂತ ಸಂತೋಷ ಪಡುವುದರಲ್ಲಿ ಅಮೇರಿಕಾದ ಜನರು ಬಹಳ ಉತ್ಸಾಹಿಗಳು ಎನ್ನುತ್ತಾರೆ. ಅದಕ್ಕಾಗಿ ಅಮೇರಿಕನ್ನರು ನಿಸರ್ಗದ ಸ್ವಾಭಾವಿಕ ಸೌಂದರ್ಯಕ್ಕೆ ಮಾನವ ನಿರ್ಮಿತ ಕೃತಕವಾದ ಅಲಂಕಾರ ಮಾಡಿ ಸಾಕಷ್ಟು ಸುಖಪಡುತ್ತಾರೆ. ಸ್ವಾಭಾವಿಕ ಬಂದರು, ಸ್ವಚ್ಛವಾದ ರಸ್ತೆಗಳು, ತಂಪಾದ ಹವೆ, ಹಚ್ಚ ಹಸಿರಾದ ಗಿಡ–ಮರಗಳು, ಅಲ್ಲಲ್ಲಿ ಕಾಣ್ಣಿಗೆ ಕಾಣಿಸುವಷ್ಟು ದೂರಕ್ಕೆ ಪಚ್ಚೆ ನೆಲದ ಅಂಚಿಗೆ ಎತ್ತರವಾದ ಫರ್ ಮರಗಳು, ಗ್ಯಾಬ್ರಿಯಲ್ ಪರ್ವತಗಳು, ಲಾಸ್ ಏಂಜಲೇಸ್, ಯೂನಿವರ್ಸಲ್ ಸ್ಟುಡಿಯೋ ಹೀಗೆ ಮೊದಲಾದ ಪ್ರೇಕ್ಷಣೀಯ ಸ್ಥಳಗಳು, ನಿಸರ್ಗ ತಾಣಗಳು ಅಮೇರಿಕನ್ನರ ಕಲಾಭಿರುಚಿಯನ್ನು ಎತ್ತಿ ತೋರಿಸುತ್ತವೆ. ಅಮೇರಿಕನ್ನರ ಕಾರ್ಯವೈಖರಿ, ಶಿಸ್ತು, ಸ್ವಚ್ಛತೆ ಸುವ್ಯವಸ್ಥೆಗಳೆಲ್ಲವೂ ಅಚ್ಚುಕಟ್ಟು

ಇಲ್ಲಿ ಕುಡಿತದ ಪ್ರಮಾಣ ಹಾಗೂ ಅಫೀಮು ಸೇವನೆ ಅಮೇರಿಕದ ಎಲ್ಲ ನಗರಗಳಲ್ಲಿಯೂ ನೋಡಬಹುದಾದರೂ ಅತೀ ಹೆಚ್ಚಾಗಿ ನ್ಯೂಯಾರ್ಕ್‌ನಲ್ಲಿ ಕಾಣಬಹುದು ಎನ್ನುತ್ತಾರೆ. ಆತ್ಮಹತ್ಯೆಯ ಪ್ರಕರಣಗಳು, ವಿವಾಹ ವಿಚ್ಛೇದನಗಳಂತೂ ಲೆಕ್ಕವಿಲ್ಲದಷ್ಟು ಹಾಗೆಯೇ Homo Sexual ಹಾಗೂ Lesbian ನಡೆಯುತ್ತವೆ. ದೇಶಾದಾದ್ಯಂತ ಇವರು ತಮ್ಮದೇ ಆದ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ತಮ್ಮ ಜೀವನಕ್ಕೆ ಸಾಮಾಜಿಕ ಮನ್ನಣೆ, ದತ್ತು ಸ್ವೀಕಾರದ ಅಧಿಕಾರ ಮತ್ತು ಚರ್ಚ್ ಮದುವೆ ಮುಂತಾದ ವಿಚಾರವಾಗಿ ಮಾನವೀಯ ಹಕ್ಕು ರಕ್ಷಣೆ ಬೇಡುತ್ತಿದ್ದಾರೆ ಎನ್ನುವಲ್ಲಿನ ಲೇಖಕಿಯ ವಿಡಂಬನೆಯನ್ನು ಗ್ರಹಿಸಬಹುದು.

ಅಮೇರಿಕದಲ್ಲಿ ಲೇಖಕಿ 'ಬೇಬಿ ಸಿಟಿಂಗ್' ಕೆಲಸದ ಅನುಭವ ಪಡೆದಿದ್ದಾರೆ. ಒಂದೆರಡು ಗಂಟೆ ಕಾಲ ತಂದೆ-ತಾಯಿಗಳು; ಪಾರ್ಟಿ, ಭೇಟಿ, ಸಿನಿಮ ಮುಂತಾದ ಕಡೆಗೆ ಹೋದಾಗ ಅಥವಾ ಹೋಗುವಾಗ ಮಕ್ಕಳನ್ನು ಬಿಟ್ಟು ಹೋಗುತ್ತಾರೆ. ಅಂತಹ ಮಕ್ಕಳನ್ನು ನೋಡಿಕೊಳ್ಳುವುದು, ಅಲ್ಲಿಯವರೊಡನೆ ಬೆರೆತು ಅವರ ಮನೆ-ಮಕ್ಕಳು-ಜೀವನ ಮತ್ತು ಸಂಸ್ಕೃತಿ ಇತ್ಯಾದಿಗಳನ್ನು ತೀರ ಸಮೀಪದಿಂದ ನೋಡುವ ಉದ್ದೇಶದಿಂದ ಲೇಖಕಿ ಈ ಕೆಲಸ ಕೈಗೊಂಡು, ಅದರಂತೆ ಅವರ ಜೀವನ ವಿಧಾನ, ರೀತಿ-ನೀತಿ, ಆಚಾರ-ವಿಚಾರಗಳನ್ನು ತಕ್ಕ ಮಟ್ಟಿಗೆ ತಿಳಿದುಕೊಂಡಿದ್ದಾರೆ.

ಇಲ್ಲಿಯ ಆಲೋಚನೆಯ ಕ್ರಮ, ಅನುಭವಗಳನ್ನು ಮಂಡಿಸುವ ಶೈಲಿ ತನಗೆ ತಾನೇ ಒಂದು ಶಕ್ತಿಶಾಲಿಯಾದ ಸ್ವರೂಪವನ್ನು ಪಡೆದಿದೆ. "ಹಳೆಯ ಮಲೆ ಹಳೆಯ ನೆಲವಾದೊಡೆಯು । ಮೊರೆತು ಮಳೆ ಹೊಳೆ ನೀರಗಾವಗಂ ಹೊಸತಾಗಿಸುವ ವೋಲ್" ಎಂಬಂತೆ ಈ ನಿಸರ್ಗವು ಹಳೆಯದರಲ್ಲೇ ಹೊಸತನಕ್ಕೆ ತೆರೆದುಕೊಳ್ಳುತ್ತದೆ ಇದರಂತೆ ಅಮೇರಿಕಾ ಪ್ರವಾಸಗಳು ಸಾಕಷ್ಟಿದ್ದರೂ ಸುಶೀಲಾ ಕೊಪ್ಪರ ಈ ಪ್ರವಾಸ ಕಥನದಲ್ಲಿ "ಅವರ ವಿಚಾರಶಕ್ತಿ, ವಿವೇಕಯುತ ವಿಶ್ಲೇಷಣೆ, ಎರಡೂ ಸಂಸ್ಕೃತಿಗಳನ್ನು ಬಲ್ಲ ಅವರ ಆತ್ಮಾವಲೋಕನ ಪಾಶ್ಚಾತ್ಯ ಜನಜೀವನ ಸಂಸ್ಕೃತಿಗಳ ಪ್ರಾಮಾಣಿಕ ವಿವೇಚನೆ "ಮಹಿಳಾ ಪ್ರಜ್ಞೆ" ಎನ್ನುವ ಚೌಕಟ್ಟನ್ನು ಮೀರಿನಿಂತ ಅವರ ಪ್ರಪಂಚ ಜ್ಞಾನ ಬರಹದೊಂದಿಗೆ, ಹಾಸುಹೊಕ್ಕಾಗಿ ಸೇರಿರುವ ತಿಳಿಹಾಸ್ಯಗಳೆಲ್ಲವೂ ಪತ್ರಮಾಲೆಯನ್ನು ಒಂದು ವಿಶಿಷ್ಟ ಪ್ರವಾಸ ಕೃತಿಯನ್ನಾಗಿಸಿದೆ"[19] ಎಂದು ಚಿ.ನ. ಮಂಗಳಾರವರ ಹೇಳಿಕೆ ಪೂರಕವಾಗಿದೆ.

## ಸುವರ್ಣ ಮಧುಚಂದ್ರ – ರಾಜಾಮಣಿ ನಾಗರಾಜರಾವ್ :

ರಾಜಾಮಣಿ ನಾಗರಾಜರಾವ್‌ರವರು ಕೆನಡಾದಲ್ಲಿರುವ ಮಗಳು ಅಳಿಯ ಮತ್ತು ಮೊಮ್ಮಕ್ಕಳನ್ನು ನೋಡಿ ಬರುವ ನೆಪ ಮಾಡಿಕೊಂಡು ದಂಪತಿಗಳ ಸಮೇತ ಯೂರೋಪ್, ಕೆನಡಾ, ಅಮೇರಿಕಾ ದೇಶಗಳನ್ನು ನೊಡಿ ಬಂದಿದ್ದಾರೆ. ಈ ಪ್ರವಾಸಕ್ಕೆ ಹೊರಡುವಾಗ ರಾಜಾಮಣಿ ಅರವತ್ಮೂರು ವರ್ಷ, ಅವರ ಪತಿ ನಾಗರಾಜರಾಯರಿಗೆ ಅರವತ್ತೊಂಬತ್ತು ವರ್ಷ ಇಂತಹ ಇಳಿವಯಸ್ಸಿನಲ್ಲಿ ಪ್ರವಾಸ ಕೈಗೊಂಡಿರುವುದು ನೋಡಿದರೆ ಹೊಸತನ್ನು ನೋಡಬೇಕೆಂಬ, ತಿಳಿಯದಿರುವುದನ್ನು ತಿಳಿಯಬೇಕೆಂಬ ಉತ್ಸಾಹಕ್ಕೆ ಕೊರತೆಯಿಲ್ಲ ಎನ್ನುವುದು ಕಂಡುಬರುತ್ತದೆ.

ಅಮೇರಿಕಾದಲ್ಲಿ ಸುಮಾರು ಎರಡು ತಿಂಗಳಿದ್ದು ಪಡೆದ ಅನುಭವವನ್ನು ಸರಳ ಸುಂದರವಾಗಿ ನಿರೂಪಿಸಿದ್ದಾರೆ.

ಅಮೇರಿಕಾ ದೇಶ ಹೊಕ್ಕ ಮೇಲೆ ಇಲ್ಲಿ ಲೇಖಕಿಗೆ ರೈಲ್ವೆಲೈನ್ ಕಂಡಿದೆ. ನಂತರ ಆಂಟಿಲೋಪ್ ಎಂಬ ಊರು. ಇದು ಧಾನ್ಯ ಸಾಗಣೆ ಕೇಂದ್ರ. ಇಲ್ಲಿ ಗೂಡ್ಸ್ ರೈಲಿನ ವ್ಯಾಗನ್ ಗಳಿಗೆ ದವಸ ಧಾನ್ಯಗಳ ಪಿಂಡಿಗಳನ್ನು ಯಂತ್ರಗಳ ನೆರವಿನಿಂದ ಸೇರಿಸುವುದು, ನೋಡು ನೋಡುತ್ತಿದ್ದ ಹಾಗೆಯೇ ವ್ಯಾಗನ್ ಭರ್ತಿ, ಭಾರಿಯಾದ ದಾಸ್ತಾನು ಮಳಿಗೆ ಇದೆಲ್ಲವನ್ನು ನೋಡಿ ಆಶ್ಚರ್ಯ ಪಟ್ಟಿದ್ದಾರೆ.

ಅಮೇರಿಕಾ ದೇಶದಲ್ಲಿ ಪ್ರವಾಸಿಗರ ಸೌಕರ್ಯಕ್ಕಾಗಿ ಮುವತ್ತು–ನಲವತ್ತು ಮೈಲಿಗಳ ಅಂತರದಲ್ಲಿ ತಂಗುದಾಣ ಇದ್ದು, ಇವುಗಳು ಮರದ ತೋಪುಗಳ ನಡುವೆ ಇರುತ್ತವೆ. ಪ್ರವಾಸ ಮಾರ್ಗಗಳ, ಪ್ರವಾಸಿಗರ ಒತ್ತಡಗಳ ಆಧಾರದ ಮೇಲೆ ಈ ತಂಗುದಾಣಗಳಲ್ಲಿ ಮೇಜು ಬೆಂಚುಗಳ ಸಂಖ್ಯಾ ಪ್ರಮಾಣ ರೂಪಿಸಿರುತ್ತಾರೆ. ಆರು–ಎಂಟು ಸಂಖ್ಯೆಗಳಿಂದ ಇಪ್ಪತ್ತು–ಮುವತ್ತು ಸಂಖ್ಯೆಗಳವರೆಗೆ ಇರುತ್ತವೆ ಮತ್ತು ಆ ತಂಗುದಾಣದಲ್ಲಿ ಕಾರುಗಳನ್ನು ಅಚ್ಚುಕಟ್ಟಾಗಿ ನಿಲ್ಲಿಸಲು ಜಾಗದ ವ್ಯವಸ್ಥೆ, ಸ್ವಚ್ಛವಾದ ಶೌಚಾಗೃಹಗಳು, ದೂರವಾಣಿ ವ್ಯವಸ್ಥೆ ಇತ್ಯಾದಿ ಸರ್ವಸೌಕರ್ಯವಿರುವ ತಂಗುದಾಣವನ್ನು ಮೆಚ್ಚಿಕೊಂಡು, ಗ್ಲೆನ್‌ಡೈವ್ ಬಳಿಯ ಒಂದು ತಂಗುದಾಣದಲ್ಲಿ ಆಹಾರವನ್ನು ಸೇವಿಸಿದ್ದಾರೆ. ಲೇಖಕಿಯ ಮಗಳು ಹಗಲಿನ ಆಹಾರವನ್ನು ಸಿದ್ಧಪಡಿಸಿ ತಂದಿದ್ದರೊಂದಿಗೆ ಕಾರಿನ ಡಿಕ್ಕಿಯಲ್ಲಿ ಆಹಾರ ಸಾಮಗ್ರಿ ಸುರಕ್ಷಿತವಾಗಿ ಇಡುವಂತಹ ಪ್ಲಾಸ್ಟಿಕ್ ಅಂಕಣಗಳುಳ್ಳ ಬೃಹತ್ ಡಬ್ಬಿಗಳಲ್ಲಿ ಚಿತ್ರಾನ್ನದ ಗೊಜ್ಜು, ಮೆಂತ್ಯದ ಹಿಟ್ಟು,

ಚಟ್ನಿಪುಡಿ ಜೊತೆಗೆ ಹತ್ತು ಲೀಟರ್ ಹಿಡಿಯುವ ನೀರಿನ ಜಗ್ ಮೊದಲಾದವುಗಳಲ್ಲದೆ, ಊಟ ಮಾಡಲು ಕಾಗದದ ತಟ್ಟೆಗಳು, ಕುಡಿದು ಬಿಸಾಡುವ ಪ್ಲಾಸ್ಟಿಕ್ ಲೋಟಗಳು, ಚಮಚಗಳು, ಕೈ ಒರೆಸಿಕೊಳ್ಳುವ ಕಾಗದಗಳ ಕಂತೆ, ಜೊತೆಗೆ ಮೆಣಸಿನ ಪುಡಿ, ಹುಳಿಪುಡಿ, ಅಕ್ಕಿ, ಬೇಳೆ, ಉಪ್ಪು, ಹುಳಿ ಸಾಮಗ್ರಿಗಳು, ಅಡಿಗೆ ಮಾಡಿಕೊಳ್ಳಲು ವಿದ್ಯುತ್ ಸ್ಟೌವ್ ಹೀಗೆ ಎಲ್ಲಾ ಪರಿಕರಗಳನ್ನು ತಂದಿದ್ದರಿಂದ ಇವರ ಪ್ರವಾಸ ಕಾಲದಲ್ಲಿ ಯಾವುದೇ ಕೊರತೆ ಉಂಟಾಗಿಲ್ಲ. ಊರ ಹೊರಗಿನ ಪ್ರವಾಸಿ ಗ್ಲೆನ್‌ಡೈವ್‌ನಲ್ಲಿ ಮಾಡಿದ ಊಟ ಮೊಟ್ಟಮೊದಲನೆಯದಲ್ಲದೆ ಅವರ ಅಮೇರಿಕಾ ನೆಲದ ಮೊದಲ ಊಟವೂ ಸಹ ಆಗಿತ್ತು. ಸುಮಾರು ಇನ್ನೂರೈವತ್ತೈದು ಮೈಲಿ ಸಾಗಿದ್ದರೂ ಅಲ್ಲಿನ ಸ್ವಚ್ಛ ಹಾಗೂ ವಿಶಾಲವಾದ ರಸ್ತೆಗಳ ಪ್ರಯಾಣ ಹಿತಕರವಾಗಿತ್ತು ಎನ್ನುತ್ತಾರೆ.

ಎಲ್ಲೋಸ್ಟೋನ್ ನದಿಯ ದಂಡೆಯ ಮೇಲಿನ ಊರು ಬಿಲ್ಲಿಂಗ್ಸ್‌ಗೆ ತಲುಪಿ; ಇದರ ಕಿರುಪರಿಚಯವನ್ನು ನೀಡುತ್ತಾರೆ. "ಇದು ಮೊಂಟಾನಾ ರಾಜ್ಯದ ಒಂದು ಆಡಳಿತ ಘಟಕದ ಕೇಂದ್ರನಗರ. ರಾಜ್ಯದ ಪೂರ್ವಭಾಗದಲ್ಲಿರುವ ಈ ಘಟಕ ಕೃಷಿ ಪ್ರಧಾನವಾದ ಘಟಕ. ಈ ಮಾತಿಗೆ ಸಾಕ್ಷಿ ನಾವು ದಾರಿಯುದ್ದಕ್ಕೂ ನೋಡಿದ ಭೂಮಿ, ಹಿಂಡು ಹಿಂಡು ಜಾನುವಾರುಗಳು ದನ-ಕರು, ಕುರಿ, ಕುದುರೆ. ಆದರೆ ನಮಗೆ ಕಂಡು ಬಂದ ಆಶ್ಚರ್ಯವೆಂದರೆ ಯಾವುದೇ ಜಾನುವಾರುಗಳೂ ರಸ್ತೆಗೆ ಅಡ್ಡವಾಗಿ ಬಂದುದಿಲ್ಲವಲ್ಲದೆ ಯೂರೋಪಿನ ಯಾವ ದೇಶದಲ್ಲೂ ಸಹ ಯಾವ ಪ್ರಾಣಿಗಳೂ ರಸ್ತೆಗೆ ಅಡ್ಡಲಾಗಿ ಬಂದುದಿಲ್ಲ. ಎಲ್ಲ ಜಾನುವಾರುಗಳೂ ತಂತಿ ಬೇಲಿಯ ಒಳಗೆ ಇರುತ್ತವೆಯೇ ವಿನಾ ಬೀದಿಗೆ ಬರುವುದಿಲ್ಲ"[20] ಎಂಬ ಲೇಖಕಿಯ ಅಭಿಪ್ರಾಯದಲ್ಲಿ ಅಮೇರಿಕಾದ ಪ್ರಾಣಿಗಳೂ ಬಹಳ ಸೂಕ್ಷ್ಮಮತಿಳಾಗಿದ್ದು ಅನ್ಯರಿಗೆ ತೊಂದರೆ ನೀಡುವುದಿಲ್ಲವೆಂಬ ಭಾವನೆ ಇರಬಹುದು.

ಬಿಲ್ಲಿಂಗ್ಸ್‌ನಲ್ಲಿನ ಮೊಂಟಾನಾ ಪವರ್ ಕಾರ್ಪೊರೇಶನ್ ನೋಡಿ, ಕಾರಿಗೆ ಗ್ಯಾಸ್ ತುಂಬಿಸಿಕೊಂಡು ಮುಂದೆ ಸಾಗಿ ಲಾರೆಲ್ ತಲುಪಿದ್ದಾರೆ. ಅಲ್ಲಿ ತೂಕ ಮಾಡುವ ಸ್ಥಳ, ಕಾನ್‌ಕ್ರೀಟ್ ಕಾರ್ಖಾನೆ, ಮ್ಯೂಸಿಯಂಗಳನ್ನು ನೋಡಿ ಮುಂದೆ ಹೊರಟಿದ್ದಾರೆ. ಮೊಂಟಾನಾ ಮತ್ತು ವಯೋಮಿಂಗ್ ರಾಜ್ಯಗಳ ಗಡಿಯಲ್ಲಿರುವ ಗಾರ್ಡಿನರ್ ನದಿಯ ದಂಡೆಯ ಮೇಲೆ ಇರುವ ಗಾರ್ಡಿನರ್ ಊರನ್ನು ತಲುಪಿ ಅಲ್ಲಿನ ನ್ಯಾಷನಲ್ ಪಾರ್ಕ್ ನೋಡಿದ್ದಾರೆ. ಅಲ್ಲಿನ ಮ್ಯಾಮತ್ ಹಾಟ್ ಸ್ಪ್ರಿಂಗ್ಸ್ ಎಂಬ ಹೋಟೆಲಿನಲ್ಲಿ ತಂಗಿ ನಂತರ ಪ್ರಯಾಣ ಬೆಳೆಸಿದ್ದಾರೆ. ಮುಂದೆ ಲೇಖಕಿಯನ್ನು ದಿಗ್ಭ್ರಮೆಗೊಳಿಸುವ ಒಂದು ವರ್ಣರಂಜಿತ

ಭವ್ಯತಾನ ಶಿವನಮೂರ್ತಿ, ಅದನ್ನು ನೋಡಿದ ನಮ್ಮ ಮನಸ್ಸಿಗೆ ಒಂದು ಬಗೆಯ ಕಲ್ಪನೆ ಮೂಡಿತು ಎನ್ನತ್ತಾರೆ. ಆ ಕಲ್ಪನೆಯ ಹೊಳವಿನಲ್ಲಿ ಅವರ ಪತಿ ಶಿವನನ್ನು ಬೆಳ್ಳಿ-ಬೆಟ್ಟದ ಆವಾಸಿ ಎಂದಿದ್ದಾರೆ. ಹಂತ ಹಂತವಾಗಿ ಮೇಲೆರಿದ ಈ ಶ್ವೇತದಿಬ್ಬದ ಮೇಲ್ಭಾಗ ಚಪ್ಪಟೆಯಾಗಿದ್ದು ಇದನ್ನು ಒಬ್ಬ ಮಹಾಶಿಲ್ಪಿ ಕಲ್ಪಿಸಿ ರೂಪಿಸಿರುವಂತೆ ಕಾಣುತ್ತದೆ ಎಂದು ಹೇಳುತ್ತಾರೆ. ಅದರ ಅಚ್ಚುಕಟ್ಟು, ಅದರ ಕ್ರಮಬದ್ಧ ರಚನೆ, ರಸ್ತೆಯ ಬದಿಯಿಂದ ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿದರೆ ಅದರ ಮೇಲ್ಭಾಗ ಮುಟ್ಟಬಹುದು ಎನಿಸುತ್ತದೆ. ಆ ಮೆಟ್ಟಿಲುಗಳಿಗೆ ಅಲ್ಲಲ್ಲಿ ಹಳದಿ, ಪಚ್ಚೆ, ಕೆಂಪು ವರ್ಣರೇಖೆಗಳು. ವಜ್ರ, ಕೆಂಪು ಪಚ್ಚೆಗಳ ಕುಂದಣ ಪಡೆದ ಶಿವನ ಸಿಂಹಾಸನ ತಳದ ಮೆಟ್ಟಲಿನ ಭಾಗದಂತಿದ್ದ ಅದನ್ನೂ ಮೇಲೇರಿ ಹೋಗಬೇಕು ಎಂದು ಲೇಖಕಿಯ ಮನಸ್ಸಿಗೆ ಅನಿಸಿದರೂ ಅದು ಸಾಧ್ಯವಾಗುವುದಿಲ್ಲ ಏಕೆಂದರೆ ಅದು ನಡಿಗೆಗೆ ನಿಷಿದ್ಧ ತಾಣ ಎಂದು ತಿಳಿಸುತ್ತಾರೆ. ಸುತ್ತಲೂ ಆ ರಮ್ಯ ನೋಟ ನೋಡುತ್ತಿದ್ದ ಜನ ಸಮೂಹ ಶಿವ ಸಾಕ್ಷಾತ್ಕಾರ ಪಡಿಯಲು ಬಂದಿರುವ ಶಿವಭಕ್ತರಂತೆ ಕಾಣುತ್ತಾರೆ. ಪುಟ್ಟ ಮಕ್ಕಳಿಂದ ಹಿಡಿದು ಮುದುಕರವರೆಗಿನ ಸಮೂಹದವರಿಗೆಲ್ಲಾ ಉತ್ಸಾಹ, ಹುಮ್ಮಸ್ಸು ಆ ತಾಣದ ಮಹತ್ವ ಪ್ರಕೃತಿದತ್ತವಾದದೆಂದು ಹೇಳುತ್ತಾರೆ. ನೆರದಿದ್ದ ಈ ಪ್ರವಾಸಿಗರ ಬಹುಮಂದಿಯ ಕೈಯಲ್ಲಿ ಕ್ಯಾಮರಾಗಳೂ ಚಟುವಟಿಕೆಯಿಂದ ಕೆಲಸ ಮಾಡುತ್ತಿತ್ತು ಎನ್ನುತ್ತಾ ವಾಚಕರಲ್ಲಿ ಆ ಸ್ಥಳದ ಕುರಿತು ಪ್ರಭಾವಕಾರಿ ಪರಿಣಾಮವುಂಟಾಗುವಂತೆ ಮಾಡಿದ್ದಾರೆ.

ಈ ಪ್ರವಾಸಿಗರಲ್ಲಿ ನೀಲಿ ಸ್ವೆಟರ್ ಮತ್ತು ರೋಜಾ ಮ್ಯಾಕ್ಸಿ ತೊಟ್ಟಿದ್ದ ಒಬ್ಬ ವೃದ್ಧ ಅಮೇರಿಕನ್ ಮಹಿಳೆ ಈ ದಂಪತಿಗಳ ಭಾವಚಿತ್ರ ತೆಗೆಯಲು ಒಪ್ಪಿಗೆ ಕೇಳಿದಾಗ ಇವರು ಅನುಮತಿ ನೀಡಿ "We will pose for you" ಎಂದಾಗ ಆ ವೃದ್ಧೆ ಕ್ಲಿಕ್ ಮಾಡಿ ಥ್ಯಾಂಕ್ಸ್ ಎನ್ನುತ್ತಾಳೆ. ಆಕೆ ಹೊರಡುವಾಗ ಲೇಖಕಿಯ ಪತಿಯಾದ ಸಿ.ಕೆ.ನಾ ಅವರು "ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕೆನಸಿದೆ, ಕೇಳಲೆ? ಎಂದು ಕೇಳಿದಾಗ ಆಕೆ ಆಗಬಹುದೆಂದು ತಲೆಯಾಡಿಸಿದಳಂತೆ. ಅದಕ್ಕೆ ಅವರು 'ಇಲ್ಲಿ ಸಾವಿರಾರು ಜನ ಇದ್ದಾರೆ. ಬಹಳ ಸುಂದರವಾದ, ಬಹಳ ಅಚ್ಚುಕಟ್ಟಾಗಿ ವಸ್ತ್ರಾಲಂಕಾರ ಮಾಡಿಕೊಂಡಿರುವ ಯುವಕ ಯುವತಿಯರು ಇದ್ದಾರೆ. ಅವರುಗಳನ್ನೆಲ್ಲ ಬಿಟ್ಟಿ ನೀವು ನಮ್ಮ ಪೋಟೋ ತೆಗೆಯಲು ಏಕೆ ಬಯಸಿದಿರಿ" ಎಂದು ಪ್ರಶ್ನಿಸಿದಾಗ ಆಕೆ ಹೀಗೆ ಉತ್ತರ ಕೊಡುತ್ತಾಳೆ "ತಮ್ಮ ಸ್ವಂತ ಉಡಿಗೆಯಲ್ಲಿ ಬರುವ ಭಾರತೀಯ ಗಂಡಸರು ನಮಗೆ ದುರ್ಲಭ, ಅದರಿಂದ ಎಂದು ಹೇಳುತ್ತಾಳೆ" ಆಮೇಲೆ ಸಿ.ಕೆ.ನಾ ಅವರು "ತಮ್ಮ ತನವನ್ನು ಬಿಟ್ಟು ಕೊಟ್ಟು ಉಳಿದವರನ್ನು ಅನುಕರಣೆ ಮಾಡುವುದರಿಂದಲ್ಲವೆ?

ಆಕೆ, ಆ ಮಾತನಾಡಿದುದು. ಸ್ವಾಭಿಮಾನ, ಸ್ವದೇಶಾಭಿಮಾನ ಉಳಿಸಿಕೊಂಡವರಿಗೆ ಅನ್ಯರಿಂದಲು ಮನ್ನಣೆ ಉಂಟು ಎಂಬುದಕ್ಕೆ ಇದು ನಿದರ್ಶನ" ಎನ್ನುವಲ್ಲಿ ಬಹುಪಾಲು ಭಾರತೀಯರ ಉಡಿಗೆ-ತೊಡುಗೆಗಳು ಸ್ವದೇಶದ ನಮ್ಮ ಭೂಮಿಯಲ್ಲೇ ಮರೆಯಾಗುತ್ತಿರುವುದರ ಮತ್ತು ಪರಕೀಯ ವೇಷ-ಭೂಷಣಗಳ ಅನುಕರಣೆ ಹೆಚ್ಚಾಗುತ್ತಿರುವುದರ ಕುರಿತ ವಿಷಾದವನ್ನು ಗ್ರಹಿಸಬಹುದು.

ಎಲ್ಲೋಸ್ಟೋನ್ ನದಿ ಹರಿಯುವ ಕಣಿವೆ ಪ್ರದೇಶ ನೋಡಲು ಬಹು ರಮ್ಯವಾಗಿದೆ. ಇದರ ಎರಡು ಕಡೆ ನದಿ ಧುಮುಕುತ್ತದೆ. ಅದರಲ್ಲಿ ಒಂದು ನೂರು-ನೂರಾಹತ್ತು ಅಡಿ ಧುಮುಕಿದರೆ, ಇನ್ನೊಂದು ಮುನ್ನೂರು-ಮೂನ್ನೂರಹತ್ತು ಅಡಿ ಧುಮುಕುತ್ತದೆ. ಜೋಗ ಜಲಪಾತ ನೋಡಿದ ಲೇಖಕಿಗೆ ಇದು ಅದ್ಭುತವೆನಿಸದಿದ್ದರೂ ಅದರ ಸುತ್ತಲಿನ ಪ್ರಕೃತಿ ಸೌಂದರ್ಯ ಆಕರ್ಷಿಸಿದೆ. ಈ ದೇಶದಲ್ಲಿ ಒಂದು ನಗರವನ್ನು ನೋಡಿದರೆ ಇನ್ನೊಂದು ನಗರವನ್ನು ನೋಡಬೇಕೆನ್ನಿಸುವುದಿಲ್ಲ ಎಂದು ಹೇಳುತ್ತಾರೆ ಏಕೆಂದರೆ ನಗರ ರಚನೆ ಎಲ್ಲಾ ಒಂದೇ ಬಗೆ ಅನಿಸುತ್ತದೆ ಆದರೆ ಒಂದೊಂದು ನಗರದಲ್ಲಿಯೂ ಪ್ರವಾಸಿಗರಿಗೆ ಆಕರ್ಷಕವೆನಿಸಿರುವ ಕೇಂದ್ರಗಳು ಇದ್ದೇ ಇರುತ್ತವೆ ಅವು ಪ್ರಕೃತಿದತ್ತವಾಗಿರಬಹುದು ಅಥವಾ ಮಾನವ ನಿರ್ಮಿತವಾಗಿರಬಹುದು ಎನ್ನುತ್ತಾರೆ.

"ಸಾಲ್ಟ್‌ಲೇಕ್ ಸಿಟಿ ಒಂದು ರೀತಿಯಲ್ಲಿ ಮಟ್ಟಸವಾಗಿ ಹರಡಿ ನಿಂತಿರುವ ಅಚ್ಚುಕಟ್ಟಾದ ಮುಖ್ಯರಸ್ತೆ. ಅಡ್ಡರಸ್ತೆಗಳಿಂದ ಕೂಡಿದೆ. ನಾವು ನೇರವಾಗಿ ಕೌಂಟಿ ಕಛೇರಿ ಆವರಣಕ್ಕೆ ಬಂದೆವು. ಅದರ ಬದಿಯ ರಸ್ತೆಯಲ್ಲಿ ಕಾರ್ ನಿಲ್ಲಿಸಲು ಅನುಕೂಲವಿತ್ತು. ಕಾರನ್ನು ಅಲ್ಲಿ ನಿಲ್ಲಿಸಿ ನಾವು ಕೌಂಟಿ ಕಛೇರಿಯ ಸುತ್ತ ಇರುವ ರಮ್ಯವಾದ ಗಿಡ, ಮರಗಳ ನೆರಳು ಹರಡಿರುವ ತಾಣದಲ್ಲಿ ಈ ದೇಶದ ರೆಸ್ಟ್ ಏರಿಯಾಗಳಲ್ಲಿರುವಂತೆ ಮರದಟೇಬಲ್ ಹಾಗೂ ಇಕ್ಕೆಲಗಳಲ್ಲಿ ಬೆಂಚುಗಳು ಅಲ್ಲಿಲ್ಲಿ ಇದ್ದವು"[21] ಎಂದು ಲೇಖಕಿ ಕಾಲ್ನಡಿಗೆಯಲ್ಲಿಯೇ ನಗರವನ್ನು ಪ್ರದಕ್ಷಿಣೆ ಹಾಕಿದ್ದಾರೆ.

ಮೊದಲು ಹ್ಯಾನ್‌ಸನ್ ಪ್ಲಾನಿಟೋರಿಯಂಗೆ ಭೇಟಿಕೊಟ್ಟು 1969ರ ಅಪೋಲೋ ಗಗನ ಯಾತ್ರಿಗಳು ತೆರದ ಭೂಮಂಡಲದ ಚಿತ್ರಗಳನ್ನು ಮತ್ತು ಅಮೇರಿಕಾದ ವಿಶಿಷ್ಟವಾದ ಚಿತ್ರಗಳನ್ನು ಗಗನಯಾತ್ರಿಗಳು ಗಗನ ಸಂಚಾರಕ್ಕೆ ಹೊರಟ ಕ್ಯಾಪ್‌ಸ್ಯೂಲ್‌ಗಳ ಪ್ರತಿಕೃತಿಗಳನ್ನು ಗಮನಿಸಿದ್ದಾರೆ. ಮುಂದೆ ಪ್ರಯಾಣ ಬೆಳೆಸಿ ಪ್ರೊವೋ, ಪೇಸನ್, ನೆಫಿ, ಸ್ಕಿಫಿಯೋ ಫಿಲ್‌ಮೋರ್ ಹಾಗೂ ಬೀವರ್ ಊರುಗಳನ್ನು ದಾಟಿ ಸಿಡಾರ ಎಂಬ ನಗರಕ್ಕೆ ಬಂದು ಹೋಟೆಲಿನಲ್ಲಿ ವಾಸಿಸಿದ್ದು ಯುಟಾ ರಾಜ್ಯದ ಈ ತೆಂಕ ನಗರದಲ್ಲಿ

ಷೇಕ್ಸ್‌ಪಿಯರ್ ಉತ್ಸವವನ್ನು ಪ್ರತಿ ವರ್ಷ ತಪ್ಪದೆ ವಿಜೃಂಭಣೆಯಿಂದ ನಡೆಸುತ್ತಾರೆ ಎಂದು ತಿಳಿಸುತ್ತಾ, ಈ ರಾಜ್ಯದ ನಗರದಲ್ಲಿನ ತೆಂಕ ಕಾಲೇಜಿನ ವಿಸ್ತಾರವಾದ ಆವರಣದಲ್ಲಿ ಆಡಮ್ಸ ಸ್ಮಾರಕ ಷೇಕ್ಸ್‌ಪಿಯರ್ ರಂಗಮಂದಿರ ಇದ್ದು ಪ್ರತಿವರ್ಷ ಜುಲೈನಿಂದ ಸೆಪ್ಟಂಬರ್‌ವರೆಗಿನ ಸುಮಾರು ಎರಡು ತಿಂಗಳ ಕಲಮಾನದಲ್ಲಿ ಕನಿಷ್ಠ ನಲವತ್ತೈದು ಪ್ರದರ್ಶನಗಳ ವ್ಯವಸ್ಥೆ ಮಾಡುರಂತೆ, ಲೇಖಕಿ ಪ್ರವಾಸ ಕೈಗೊಂಡ ವರುಷ ಷೇಕ್ಸ್‌ಪಿಯರ್ ಮಹಾಶಯನ ಟೇಮಿಂಗ್ ಆಫ್ ದಿ ಷ್ರೊ (Taming of the shrew) ಟ್ರಾಯಲಿಸ್ ಆಂಡ್ ಕ್ರೆಸ್ಸಿಡಾ (Troylis and Cressida) ಮತ್ತು ಟೆಂಪೆಸ್ಟ (Tempest) ಈ ಮೂರು ನಾಟಕಗಳ ಪ್ರದರ್ಶನಗಳು ಯೋಜಿತವಾಗಿದ್ದೂ, ಇಂತಹ ನಾಟಕಗಳಿಗೆ ಪೂರ್ವಸಿದ್ಧತೆಯೂ ಸಾಕಷ್ಟು ಇರುತ್ತದೆ ಎನ್ನುತ್ತಾ, ಇಡೀ ತಂಡವನ್ನು ಒಂದು, ಆಯ್ಕೆ ಸಮಿತಿ ಆಯ್ಕೆ ಮಾಡುತ್ತದೆ. ಪರೀಕ್ಷಣ ಪರಿವೀಕ್ಷಣದ ನಂತರ, ಆದರೂ ಹೀಗೆ ಆಯ್ದ ಕಲಾವಿದರ ಜೊತೆಗೆ ಮೂರು ಜನ ಹೆಸರಾಂತ ವೃತ್ತಿ ನಟರನ್ನೂ ಒಬ್ಬ ಹೆಸರಾಂತ ವೃತ್ತಿ ನಟಿಯನ್ನು ಕಡ್ಡಾಯವಾಗಿ ಸೇರಿಸಿಕೊಂಡಿರುತ್ತಾರೆ ಎನ್ನುತ್ತಾ, ಇದೆಲ್ಲವೂ ಜನಾಕರ್ಷಣೆಗಾಗಿ ಎನ್ನುತ್ತಾರೆ. ಈ ಎಲ್ಲ ವಿವರಗಳನ್ನು ಲೇಖಕಿ ಈ ಉತ್ಸವಕ್ಕೆ ಸಂಬಂಧ ಪಟ್ಟ ಒಂದು ಸುಂದರ ಪ್ರಕಟನ ಪತ್ರದ ಮೂಲಕ ತಿಳಿದುಕೊಂಡಿದ್ದಾರಾದರೂ, ಈ ನಾಟಕಗಳನ್ನು ನೋಡುವ ಅದೃಷ್ಟ ಅವರಿಗಿರಲ್ಲಿವೆಂದು ಹಾಗೂ ಅದಕ್ಕಾಗಿ ಕಾಯುವಂತೆಯೂ ಇರಲಿಲ್ಲ ಮತ್ತು ಮತ್ತೆ ಬರುವ ಹಾಗೂ ಇರಲಿಲ್ಲ. ನಮ್ಮ ಕಾರ್ಯಕ್ರಮ ಹಾಗೆ ರೂಪಿತವಾಗಿತ್ತು[22] ಎಂಬ ಲೇಖಕಿಯ ದುಗುಡದಲ್ಲಿ ಅವರ ಕಲಾಸಕ್ತಿಯನ್ನು ಅರಿಯಬಹುದು.

ಅಮೇರಿಕದ ಪ್ರತಿಯೊಂದು ರಾಜ್ಯಕ್ಕೂ ಅದರದೇ ಆದ ಒಂದೇ ಬಾವುಟ, ಒಂದು ಪ್ರಾಂತ ಪಕ್ಷಿ, ಒಂದು ಪ್ರಾಂತ ಹೂವು ಇರುತ್ತದೆ ಎಂದು ತಿಳಿಸುತ್ತಾ, ಕ್ಯಾಲಿಫೋರ್ನಿಯಾ ರಾಜ್ಯದ ಸಂಕೇತಗಳನ್ನು ತಿಳಿಸುತ್ತಾರೆ. ಒಂದು ನಕ್ಷತ್ರವುಳ್ಳ, ಕರಡಿ ಚಿತ್ರವುಳ್ಳ ಬಾವುಟ, ಗೋಲ್ಡನ್ ಪೊಪ್ಪಿ ಹೂವು, ಕ್ವೇಯಲ್ ಹಕ್ಕಿ ರಾಜ್ಯ ಸಂಕೇತವಾಗಿದೆ ಎನ್ನುತ್ತಾರೆ. ಇಲ್ಲಿಂದ ಲಾಸ್ ಏಂಜಲೀಸ್‌ಗೆ ಹೊರಟು ಅಲ್ಲಿನ ರಮ್ಯ ಸ್ಥಳಗಳನ್ನು ನೊಡಿ ಲಾಸ್ ಏಂಜಲೀಸ್ ಬಿಟ್ಟ ಮೇಲೆ ಒಂದು ಕಡೆ ರಸ್ತೆಯ ಬದಿಯಲ್ಲಿ ಒಂದು ವಿಸ್ತಾರವಾದ ಬಯಲಿನಲ್ಲಿ ಪುಟ್ಟ ವಿಮಾನಗಳು ನಿಂತಿದ್ದವು. ಅವುಗಳ ಮೂಲಕ ಉದ್ಯೋಗಸ್ತರು ಕೆಲಸಕ್ಕೆ ಹೋಗಿ ಬರುತ್ತಾರಂತೆ ಅಂದರೆ ಅವರ ಸಂಪಾದನೆ ಎಷ್ಟಿರಬಹುದೆಂದು ಯೋಚಿಸಬೇಕಾಗುತ್ತದೆ. ಇಂತಹ ವಿಮಾನಗಳು ಆ ದೇಶದ ಶ್ರೀಮಂತಿಕೆಯನ್ನು ಸೂಚಿಸುತ್ತದೆ ಎಂದಿದ್ದಾರೆ.

[illegible]

"ಜೀವರಾಶಿಗಳನ್ನು ಗಬಕ್ಕನೆ ನುಂಗಿಬಿಡುವ ಎರಡು ಟನ್ ತೂಕದ 'ಶಾಮೂ ದಿ ಕಿಲ್ಲರ್ ಷೋ' (ಶಾಮೂ ತಿಮಿಂಗಲ) ಸಮುದ್ರ ದೈತ್ಯನನ್ನು ಸಾಧು ಮಾಡಿ ಸಂಗೀತಕ್ಕೆ ಸ್ಪಂದಿಸುವಂತೆ, ಅದರ ಸಂಕೇತ ಅನುಸರಿಸಿ ಕ್ರಿಯೆ ಎಸಗುವಂತೆ ತರಬೇತಿಗೊಳಿಸಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪ್ರತಿಯೊಂದು ಜೀವರಾಶಿಯಲ್ಲೂ ಉಪಕಾರಕ್ಕೆ ಉಪಕಾರ, ಪ್ರೀತಿಗೆ ಪ್ರೀತಿ ತೋರುವ ಪ್ರವೃತ್ತಿ ಇರುತ್ತದೆಯೋ ಏನೋ, ಈ ಶಾಮೂ ಮಾನವನನ್ನು ಪ್ರೀತಿಸುತ್ತದೆ. ಅವನು ತಬ್ಬಿದರೆ ಸಂತೋಷ ಪಡುತ್ತದೆ. ಅವನು ಕೆನ್ನೆ ತೋರಿಸಿದರೆ ತನ್ನ ನಾಲಿಗೆಯಿಂದ ಅದನ್ನು ಸವರುತ್ತದೆ. ಹದಿನೈದು-ಇಪ್ಪತ್ತು ಅಡಿ ನೀರಿನಿಂದ ಮೇಲಕ್ಕೆ ಜಿಗಿಯುತ್ತದೆ. ತರಬೇತಿ ಮಾಡಿದವನು ಹೇಳಿದಂತೆ ನಡೆಯುತ್ತದೆ. ಅವನ ಅಥವಾ ಅವಳ ಆದೇಶ ಪಾಲಿಸಿದ್ದಕ್ಕೆ ಒಂದೊಂದು ಅನುವರ್ತನೆಗೂ ಅದಕ್ಕೆ ಆಹಾರ ಲಭ್ಯವಾಗುತ್ತದೆ. ಅದಕ್ಕೆ ಆಹಾರ ಕೊಟ್ಟು ಸಾರ್ವಜನಿಕರೂ ಅದರ ಸಖ್ಯ ಸಂಪಾದಿಸಬಹುದೆಂಬುದನ್ನು ಅಲ್ಲಿ ಪ್ರೇಕ್ಷಕರೊಂದಿಗೆ ಸಾಕ್ಷಿಯಾಗಿ ಮಾಡಿಸಿ ತೋರಿಸುತ್ತಾರೆ. ಅದರ ಬೆನ್ನೇರಿ ಅಥವಾ ಹೊಟ್ಟೆಗೆ ಕೋತಿ ಮರಿಯಂತೆ ಅಂಟಿದ ತರಬೇತಿದಾರನನ್ನು ಅದು ತನ್ನೊಂದಿಗೆ ತನ್ನಂತೆಯೇ ಅಂತರ್ಜಲ ಸಂಚಾರ ಮಾಡಿಸುತ್ತದೆ. ಇದರ ಚೆಲ್ಲಾಟವನ್ನು ನೋಡುವ ಪ್ರೇಕ್ಷಕರು ನಿಜವಾಗಿ ಆನಂದದಲ್ಲಿ ಮುಳುಗಿ ಹೋಗುತ್ತಾರೆ".[23] ಜಲದಲ್ಲಿನ ಈ ಪ್ರಾಣಿಗಳನ್ನು ಅದರ ಮನಸ್ಸರಿತು ಬೇಕಾದಂತೆ ಆಡಿಸುವುದು ಸುಲಭದ ಕೆಲಸವಲ್ಲ. ಈ ಸಾಧನೆ ಅಪೂರ್ವ, ಆಹ್ಲಾದಕರ ಎಂದು ಅವರ ಈ ಸಾಧನೆಯನ್ನು ಮನಃಪೂರ್ವಕವಾಗಿ ಮೆಚ್ಚಿಕೊಂಡಿದ್ದಾರೆ.

ಒಟ್ಟಾರೆಯಾಗಿ ಲೇಖಕಿ ಈ ಪ್ರವಾಸ ಕಥನದ ಮೂಲಕ ಅಮೇರಿಕಾದ ಪ್ರಯಾಣದುದ್ದಕ್ಕೂ ಕಂಡುಬಂದ ರಮ್ಯ ಪ್ರಕೃತಿ, ಪ್ರೇಕ್ಷಣೀಯ ಸ್ಥಳಗಳು, ಮ್ಯೂಸಿಯಂಗಳು, ಪ್ರಸಿದ್ಧ ನಗರಗಳು ಈ ಮೊದಲಾದವುಗಳ ಬಗ್ಗೆ ಸಾಕಷ್ಟು ಮಾಹಿತಿಯೊಂದಿಗೆ ನೈಜವಾಗಿ ನಿರೂಪಿಸಿದ್ದಾರೆ. ಆದರೆ ಅಮೇರಿಕಾದ ಸಾಮಾನ್ಯ ಜನ ಜೀವನ, ರೀತಿ-ನೀತಿಗಳ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ. ಎಂತಹ ಅದ್ಭುತ ಅಂಶಗಳನ್ನು ಕಂಡರೂ ಅಲ್ಲಿ ಸಂಯಮವನ್ನು ತೋರಿದ್ದಾರೆ.

**ಪೆರುವಿನ ಪವಿತ್ರ ಕಣಿವೆಯಲ್ಲಿ – ನೇಮಿಚಂದ್ರ :**

ನೇಮಿಚಂದ್ರರವರು ತಮ್ಮ ಸಹೋದ್ಯೋಗಿ ಮಾಲತಿಯೊಡಗೂಡಿ ಸುಮಾರು ಎರಡು ತಿಂಗಳ ಕಾಲ ದಕ್ಷಿಣ ಅಮೇರಿಕ ಖಂಡದ ಪೆರು ಕಣಿವೆ ಮುಂತಾದ ಪ್ರದೇಶಗಳ ಸಾಹಸಮಯ ಪ್ರವಾಸಾನುಭವವನ್ನು ಲವಲವಿಕೆಯಿಂದ ಬಣ್ಣಿಸಿರುವ ವಿಶಿಷ್ಟ ಪ್ರವಾಸಕೃತಿ ಇದಾಗಿದೆ.

ಬಹುತೇಕ ಅಮೇರಿಕಾ ಪ್ರವಾಸ ಕಥನಗಳು ಉತ್ತರ ಅಮೇರಿಕೆಗೆ ಸಂಬಂಧಿಸಿದ್ದು ದಕ್ಷಿಣ ಅಮೇರಿಕಾದ ಪ್ರವಾಸ ಕಥನಗಳು ಕಡಿಮೆ ಎಂದೇ ಹೇಳಬಹುದು. ಅದರಲ್ಲೂ ಪೆರು ಮೊದಲಾದ ಸ್ಥಳಗಳ ಉಲ್ಲೇಖಗಳು ಇತರ ಅಮೆರಿಕ ಪ್ರವಾಸ ಕೃತಿಗಳ ಸಂಶೋಧನಾಧ್ಯಯನದಲ್ಲಂತೂ ಗೋಚರಿಸದ ಕಾರಣ ಈ ಕೃತಿಯನ್ನು ಸವಿಸ್ತಾರವಾಗಿ ನೋಡುವ ಪ್ರಯತ್ನ ಮಾಡಿದ್ದೇನೆ.

ಲೇಖಕಿಯ ಈ ಪ್ರವಾಸಕ್ಕೆ, ಪ್ರೋತ್ಸಾಹಿಸಿದವರಿಗಿಂತ ಭೀತಿಯುಂಟಾಗುವಂತೆ ಮಾತನಾಡಿದವರೆ ಹೆಚ್ಚು ಎಂಬುದನ್ನು ಹೀಗೆ ತಿಳಿಸುತ್ತಾ, "ನನ್ನ ಪರಿಚಿತರಾರೂ ಪೆರುವಿಗೆ ಹೋಗಿರಲಿಲ್ಲ. ದಕ್ಷಿಣ ಅಮೆರಿಕೆ ಖಂಡಕ್ಕೆ ಕಾಲಿರಿಸಿರಲಿಲ್ಲ. ಗೊತ್ತಿಲ್ಲದ ಜಾಗದ ಬಗ್ಗೆ ಜನರಿಗೆ ಭೀತಿ ಹೆಚ್ಚು. 'ಅಲ್ಲಿ ಯಾದವೀ ಕಲಹ, ರಾಜಕೀಯ ಗೊಂದಲ ವಿಪರೀತ. ಪ್ರಜಾಪ್ರಭುತ್ವ ಇನ್ನೂ ನೆಲೆ ನಿಂತಿಲ್ಲ. ಭಾಷೆ ಬಾರದು, ಹೇಗೆ ನಿಭಾಯಿಸುತ್ತೀರಾ?' ಎಂದು ಉತ್ಸಾಹಕ್ಕೆ ತಣ್ಣೀರು ಎರಚಿದವರಿದ್ದರು."[24] ಕೊನೆಯ ಗಳಿಗೆಯಲ್ಲಿ ಎನ್. ಜಯರಾಮ್ ಅವರು ಪೆರುವಿನ ಮಾಹಿತಿಯೊಂದಿಗೆ ದೊಡ್ಡ ನಕಾಶೆ ನೀಡಿ, ಪೆರುವಿಗೆ ಹೋಗಬೆಕೆಂದರೆ ಮೊದಲು 'ಎಲೋ ಫೀವರ್ ಇಂಜೆಕ್ಷನ್' ಹಾಕಿಸಿಕೊಳ್ಳಲೇಬೇಕೆಂದು ಎಚ್ಚರಿಸಿದಾಗ ಅಮೇರಿಕಾದ 'ವರ್ಜೀನಿಯಾ ಮೆಡಿಕಲ್ ಸೆಂಟರ್'ನಲ್ಲಿ ಹಳದಿ ಜ್ವರದ ಚುಚ್ಚುಮದ್ದು ನೀಡುವಾಕೆಯ ಒರಟು ಸ್ವಭಾವವನ್ನು ನಿರೂಪಿಸಿದ್ದಾರೆ. ಇದನ್ನು ಓದಿದಾಗ ಬೆಂಗಳೂರು ಸರ್ಕಾರಿ ಆಸ್ಪತ್ರೆಗಳ ನರ್ಸ್‌ಗಳು ನೆನಪಾಗುವುದರೊಂದಿಗೆ ಇತರ ಅಮೇರಿಕಾ ಪ್ರವಾಸ ಕಥನಗಳಲ್ಲಿ ಕಾಣುವ ಪ್ರೀತಿ, ತಾಳ್ಮೆ, ಸೌಜನ್ಯಪೂರ್ಣ ಶುಶ್ರೂಷಕಿಯರನ್ನು ಕಂಡು ಅಮೇರಿಕದ ಎಲ್ಲಾ ಶುಶ್ರೂಷಕಿಯರು ಮಮತಾಮಯಿಗಳೆ ಎಂದು ಭಾವಿಸಿದ್ದ ನಮ್ಮ ಭಾವನೆ ಭ್ರಮನಿರಸನವಾಗುತ್ತದೆ.

ನೇಮಿಚಂದ್ರರು ತಮ್ಮ ಒಟ್ಟು ಪ್ರವಾಸದ ಯೋಜನೆಯನ್ನು ಹೀಗೆ ತಿಳಿಸುತ್ತಾರೆ. "ಆಂಡೀಸ್ ಪರ್ವತಗಳ ಮೂಲಕ ಅಲೆಯಬೇಕಿತ್ತು. ಲೀಮಾದಿಂದ ದಕ್ಷಿಣಕ್ಕೆ 'ನಾಸಾ'ಗೆ ಹೋಗಬೇಕು, ಅದ್ಭುತ ರಹಸ್ಯದ ನಾಸ್ಕಾ ಗೆರೆಗಳನ್ನು ನೋಡಬೇಕು, ಅವುಗಳನ್ನು ರಕ್ಷಿಸಲು ದುಡಿದ ಮಹಿಳಾ ವಿಜ್ಞಾನಿ ಮರಿಯಾ ರೇಕಿಯ ಬಗ್ಗೆ ಮಾಹಿತಿ ಸಂಗ್ರಹಿಸಬೇಕು, ಆಕೆ ನಾಸ್ಕಾದಲ್ಲಿಯೇ ಈಗಲು ಇದ್ದರೆ ಭೇಟಿಯಾಗಬೇಕು. ಅಲ್ಲಿಂದ ಜ್ವಾಲಾಮುಖಿಗಳ ನಡುವಿನ ನಗರಿ 'ಅರಿಕೀಪಾ'ಗೆ ಹೋಗುವುದು, ಅಲ್ಲಿಂದ ಮತ್ತಷ್ಟು ದಕ್ಷಿಣಕ್ಕೆ ಸರಿದು 'ಕುಸ್ಕೋ' ತಲುಪುವುದು. ಇನ್ಕಾ ಸಾಮ್ರಾಜ್ಯದ ರಾಜಧಾನಿ ಕುಸ್ಕೋ. ಕುಸ್ಕೋದಿಂದ ಪೆರುವಿನ ಪವಿತ್ರ ಕಣಿವೆಗಿಳಿದು ಅಲೆಯುವುದು, ಆಂಡೀಸ್ ಪರ್ವತ

ಶಿಖರಗಳ ತುತ್ತ ತುದಿಯಲ್ಲಿಯ 'ಕಳೆದು'ಹೋದ ಇನ್ಕಾ ನಗರಿ 'ಮಾಚುಪಿಚು'ವನ್ನು ಕಾಣುವುದು. ಲೀಮಾಗೆ ಹಿಂತಿರುಗಿ ಉತ್ತರಕ್ಕೆ ಸಾಗಿ 'ಅಮೆಜಾನ್ ಬೇಸ್' ತಲುಪುವುದು. ಅಲ್ಲಿಂದ ಅಮೆಜಾನ್ ನದಿಯ ಮೇಲೆ ಹಾಯ್ದು, ಪೆರುವಿನಿಂದ ಬ್ರೆಜಿಲ್ ದೇಶಕ್ಕೆ ಪಯಣ."[25] ಇಂತಿಷ್ಟು ಲೇಖಕಿ ಹಾಕಿಕೊಂಡ ವ್ಯವಸ್ಥಿತ ಯೋಜನೆಗಳಾಗಿದ್ದು, ಅದರಲ್ಲಿ ಅವುಗಳನ್ನು ಕಾಣುವ ಅದಮ್ಯ ತುಡಿತವನ್ನು ಕಾಣಬಹುದು.

**ಅಮೇರಿಕಾದೊಂದಿಗಿನ ತುಲನಾತ್ಮಕ ಅಂಶಗಳು :** ದಕ್ಷಿಣ ಅಮೇರಿಕಾ ಪೆರುವಿನಲ್ಲಿ ಕಾಲಿಡುತ್ತಿದ್ದಂತೆ ಲೇಖಕಿಗಾದ ಅನುಭವವನ್ನು ಹೇಳುತ್ತಾ "ಮೈಯಲ್ಲಿ ಎಂತಹ ರೋಮಾಂಚನ! ಪುರಾತನ ಸಂಸ್ಕೃತಿಯ ನೆಲಕ್ಕೆ ಆಗಮಿಸಿದ್ದೆ. ಸಾವಿರ ಸಾವಿರ ವರ್ಷಗಳ ವೈಭವದ ವರ್ಣರಂಜಿತ ಇತಿಹಾಸದ ನೆಲಕ್ಕೆ, ನಾಗರಿಕತೆಯ ತೊಟ್ಟಿಲು ತೂಗಿದ ಸ್ಥಳಕ್ಕೆ ಬಂದಿಳಿದಿದ್ದೆವು. ಅಮೆರಿಕದಂತೆ ಎಲ್ಲಿಂದಲೋ ವಲಸೆ ಬಂದು, ಸ್ಥಳೀಯರನ್ನೆಲ್ಲ ಬಡಿದು ಮುಗಿಸಿ, ರಾತ್ರೊ ರಾತ್ರಿ ಏರಿ ನಿಂತು, ಬೇರಿಲ್ಲದೆ ಬೆಳೆದ ಸಂಸ್ಕೃತಿಯಲ್ಲ. ಈ ನೆಲದಲ್ಲಿ ಸಾವಿರಾರು ವರ್ಷಗಳ ಚರಿತ್ರೆಯಿತ್ತು. ಅತ್ಯಂತ ಪುರಾತನ ಆಂಡೀಸ್ ಬೆಟ್ಟಗಳ ಕಠಿಣ ನೆಲದಲ್ಲಿ ಜೀವಂತವಿದ್ದ ಜನಜೀವನವಿತ್ತು." ಎಂಬ ಲೇಖಕಿಯ ಅಭಿಪ್ರಾಯದಲ್ಲಿ ಅಮೇರಿಕಾ ಮತ್ತು ಪೆರುವಿನ ಸಂಸ್ಕೃತಿಗಳು ಉತ್ತರ–ದಕ್ಷಿಣದಷ್ಟೇ ಅಜಗಜಾಂತರ ವ್ಯತ್ಯಾಸವನ್ನು ಅರಿಯಬಹುದು.

ಅಮೆರಿಕಾದ ಜಗತ್ಪ್ರಸಿದ್ಧತೆಗಳನ್ನು ಉಲ್ಲೇಖಿಸುತ್ತಲೇ ಅದರ ಇನ್ನೊಂದು ಮುಖವನ್ನು ಲೇಖಕಿ ಪರಿಚಯಿಸುವ ರೀತಿ "ಅಮೆರಿಕದಂತಹ ಅತ್ಯಾಧುನಿಕ ಶ್ರೀಮಂತ ದೇಶದಲ್ಲಿ ನಾವು ತೀರಾ ಅಸ್ವತಂತ್ರರಾಗಿದ್ದೆವು. ಮಹಿಳಾ ವೈಮಾನಿಕರ ಸ್ಥಳಗಳನ್ನು, ರೈಟ್ ಸಹೋದರರು ಮೊದಲ ವಿಮಾನ ಹಾರಿಸಿದ 'ಕಿಟ್ಟಿಹಾಕ್'ಅನ್ನು, 1848ರಲ್ಲಿ ಮಹಿಳಾ ಹೋರಾಟ ಪ್ರಥಮವಾಗಿ ಆರಂಭವಾದ ಸೆನೆಕಾ ಫಾಲ್ಸ್, ಎಡಿಸನ್ ಪ್ರಯೋಗಶಾಲೆ, ಆರಿಸೋನಾ ಮರಳುಗಾಡಿನಲ್ಲಿ ಉಲ್ಕೆ ಭೂಮಿಯನ್ನು ಬಡಿದ ತಾಣ.... ಹೀಗೆ ನಾನು ಹುಡುಕಿ ಹೊರಟ ಜಾಗಗಳಿಗೆಲ್ಲ ಸಾರ್ವಜನಿಕ ಸಾರಿಗೆ ಸಿಗುವುದು ಕಷ್ಟವಿತ್ತು. ಕೆಲವೆಡೆ ರೈಲು, ಬಸ್ಸು ಯಾವುದೂ ಇರಲಿಲ್ಲ. 'ಕಾರಿದ್ದವರು ಮಾತ್ರ ಬನ್ನಿ' ಎಂಬಂತಿತ್ತು ಸಿರಿವಂತ ದೇಶದ ಧೋರಣೆ. ರೂಪಾಯಿಯಲ್ಲಿ ಗಳಿಸಿ ಉಳಿಸಿದ ನಮಗೆ, ನೂರಾರು ಡಾಲರ್ ಟ್ಯಾಕ್ಸಿಗೆ ಸುರಿಯುವುದು ಶಕ್ಯವಿರಲಿಲ್ಲ. ಸ್ನೇಹಿತರ, ಸಹೃದಯರ ನೆರವಿನಿಂದಲೇ ಬಯಸಿದ ಒಂದೊಂದು ಜಾಗವನ್ನು ನೋಡಲು ಸಾಧ್ಯವಾದರೂ ಅಪ್ಪಟ ಪರಾವಲಂಬಿಯಾದ ಮುಜಗರ". ಎಂದು ಹಿಂದಿನ ಪ್ರವಾಸವನ್ನು ಸ್ಮರಿಸುತ್ತಾ "ಲೀಮಾ ರಸ್ತೆಯಲ್ಲಿ ಮೆಟಾಡೋರಿನಂತಹ ಬಸ್ಸುಗಳು ತುಂಬಿಕೊಂಡು

ಬರುತ್ತಿದ್ದವು. ಬಾಗಿಲಿನಲ್ಲಿ ನಿಂತವ, ಬಾಗಿಲು ತೆರೆದು ಕೂಗಿ ಕೂಗಿ ಕರೆಯುತ್ತಿದ್ದ. ಇಲ್ಲಿ ಟ್ಯಾಕ್ಸಿ ಬೆಲೆಯೂ ಅಗ್ಗ. ವಿಪರೀತ ಸಂಖ್ಯೆಯಲ್ಲಿ ಟ್ಯಾಕ್ಸಿಗಳಿವೆ. ಬಡತನದ ಕಾರಣದಿಂದ ಟ್ಯಾಕ್ಸಿ ಹಿಡಿಯುವ ಜನ ಕಡಿಮೆ. ಮೀಟರ್ ಇಲ್ಲದೆ ಓಡಿಸುತ್ತಾರೆ. ಚೌಕಾಸಿ ಮಾಡಿಕೊಂಡು ಹೋಗಬಹುದು. ಲಬುಕಿ ಹೋದ ಹಳೆಯ ಕಾರುಗಳು. ಕೆಲವು ಕಾರುಗಳಿಗೆ ಕಿಟಕಿಯ ಗಾಜು ಒಡೆದು ಹೋಗಿ, ಪ್ಲಾಸ್ಟಿಕ್ ಹಾಳೆ ಅಂಟಿಸಿರುವುದನ್ನು ಕಂಡೆವು. ಕಾರಿನ ಕೊನೆಯ ಉಸಿರಿನವರೆಗೂ ಓಡಿಸುತ್ತಾರೆ. ಅಮೆರಿಕದಲ್ಲಿ, ಹೊಸ ಹೊಸ ಕಾರುಗಳನ್ನೇ ಬಳಸಿ ಬಿಸಾಕಿದ ಬೃಹತ್ 'ಜಂಕ್ ಯಾರ್ಡ್'ಗಳನ್ನು ಕಂಡಿದ್ದೆವು. ಬಗಲಲ್ಲಿರುವ ಎರಡು ಖಂಡಗಳ ನಡುವೆ ಎಷ್ಟೊಂದು ಅಂತರ!"[26.] ಎಂದು ಅಮೇರಿಕಾ ಉತ್ತರ ಖಂಡದ ಅಭಿವೃದ್ಧಿಯನ್ನು ಮತ್ತು ದಕ್ಷಿಣ ಖಂಡದ ಅನಭಿವೃದ್ಧಿಯ ಕುರಿತು ಲೇಖಕಿ ಬೆಳಕು ಚೆಲ್ಲುತ್ತಾರೆ.

"ಲೀಮಾದ ಹೊರವಲಯದಲ್ಲಿ 'ಶಾಂಟಿ ಟೌನ್'ಗಳು ಅಂದರೆ ಕೊಳಚೆ ಪ್ರದೇಶಗಳು ಯಥೇಚ್ಛವಾಗಿ ಕಂಡವು. ಐನೂರು ವರ್ಷಗಳ ಹಿಂದೆ, ಸ್ಪಾನಿಷರು ಬರುವ ಮೊದಲು ಇಲ್ಲಿ ಪೆರುವಿನ ನೆಲದಲ್ಲಿ ಇದ್ದ ಜನಸಂಖ್ಯೆ ಸುಮರು 120 ಲಕ್ಷ. ಎಪ್ಪತ್ತು ವರ್ಷಗಳ ನಂತರ ಉಳಿದವರು ಕೇವಲ 30 ಲಕ್ಷ ಜನ. ಮೆಲ್ಲನೆ ಇತರ ಜನಾಂಗಗಳೊಡಗೂಡಿ ಸ್ಪಾನಿಷರ ಸಂಖ್ಯೆ ಹೆಚ್ಚಿತು. ಶತಮಾನಗಳ ಕಾಲ ಆಫ್ರಿಕಾದಿಂದ ಕಪ್ಪು ಗುಲಾಮರನ್ನು, ಚೀನಾದಿಂದ ಕೂಲಿಯಾಳುಗಳನ್ನು ಇಲ್ಲಿಗೆ ಎಳೆತಂದರು. ಜಪಾನಿಂದ ವಲಸೆಗಾರರು ಬಂದು ನೆಲೆಸಿದರು. ಈ ನೆಲದಲ್ಲಿ ಬೆರೆತರು. ಇಲ್ಲಿ 'ಜನಾಂಗವಾದ' ಇಲ್ಲವೆಂದಲ್ಲ. ಆದರೆ ಈ ನೆಲದ ನೋವುಗಳು, ರಾಜಕೀಯ ಅಲ್ಲೋಲ ಕಲ್ಲೋಲಗಳು ಈ ಎಲ್ಲ ಜನರನ್ನೂ ಸಮಾನವಾಗಿ ಶೋಷಿಸಿವೆ, ಒಂದು ರೀತಿಯಲ್ಲಿ ಅವರನ್ನು ಒಗ್ಗೂಡಿಸಿವೆ. ಹಳ್ಳಿಯಿಂದ ವಲಸೆ ಬಂದ ಬಡಜನ, ಲೀಮಾದ ಸುತ್ತಲಿನ ಈ ಮರುಭೂಮಿಯಲ್ಲಿ ನೆಲೆಸಿದ್ದಾರೆ. ತುಳಿತಕ್ಕೆ ಒಳಗಾದ ಈ ಜನರ ನಡುವೆ ಅನೇಕ ಶಕ್ತ ಮಹಿಳೆಯರು ಮುಖಂಡರಾಗಿ ಮೇಲೆದ್ದರು. ಜನರ ಹಕ್ಕುಗಳಿಗಾಗಿ ಮಹಿಳಾ ಸಮಾನತೆಗಾಗಿ ಹೋರಾಡಿದರು. ಲೀಮಾದ ಇಂತಹ ಒಂದು ಶಾಂಟಿ ಟೌನ್ ನ ಮುಖಂಡಳಾದ ಎಲಿನಾ, ದಾರುಣವಾಗಿ ಹತ್ಯೆಗೀಡಾಗಿದ್ದಳು. ನೊಂದ ಈ ನೆಲ, ಆಕೆಯ ಕತೆಯನ್ನು ನನಗೆ ಹೇಳಲಿತ್ತು."[27] ಎಂದು ತಮ್ಮ ಪೂರ್ವಾಪರ ಪ್ರವಾಸಗಳ ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ.

ಅಮೆರಿಕ ಮತ್ತು ಪೆರುವಿನ ಸಹೃದಯತೆಯನ್ನು ಲೇಖಕಿ ಹೀಗೆ ದಾಖಲಿಸುತ್ತಾ, "ಅಮೆರಿಕದ ರಸ್ತೆಗಳು ಸ್ವಚ್ಛವಿದ್ದದ್ದು ನನಗೆ ಅದ್ಭುತವಾಗಿ ಕಾಣುತ್ತಿರಲಿಲ್ಲ. ಅಲ್ಲಿಯ ಜನಸಂಖ್ಯೆಯಾದರೂ ಏನು?

ಬೀದಿಯಲ್ಲಿ ನಡೆಯುವವರು ಒಬ್ಬರಾದರು ಕಾಣಬೇಕಲ್ಲ. ಆದರೆ ಇಲ್ಲಿ ಈ ಬಡದೇಶದಲ್ಲಿ ಬೀದಿಯ ತುಂಬಾ ಜನರಿದ್ದರು ಬಗಲಲ್ಲಿ ಬಡತನವಿತ್ತು. ಆದರೂ ರಸ್ತೆಗಳು ಸ್ವಚ್ಛವಿದ್ದವು. ರಸ್ತೆಯ ಉದ್ದಕ್ಕೆ ನಡೆಯುತ್ತಾ ಹೋಗುವಾಗ, ಒಂದು ಪುಟ್ಟ ಅಂಗಡಿ ಒಳಗೆ ಪ್ರವೇಶಿಸಿದ್ದೇ 'ಇಂಡಿಯನ್... ಇಂಡಿಯನ್' ಎಂದು ಸಂಭ್ರಮದಿಂದ ಸ್ವಾಗತಿಸಿದ. ನಾವು ಖರೀದಿಸಿದ ಹಣ ನೀಡಿ ಹೊರಡುತ್ತಿದ್ದಂತೆಯೆ, ನಮ್ಮನ್ನು ನಿಲ್ಲಿಸಿದ ಆತ, ಮಾರಲು ಇಟ್ಟಿದ್ದ ಕೃತಕ ರೋಜಾ ಹೂಗಳಲ್ಲಿ ಎರಡನ್ನು ತೆಗೆದು ನಮ್ಮ ಕೈಗಿಟ್ಟ. ನಾವು ಆತನ ಪ್ರೀತಿಗೆ ಮೂಕರಾದೆವು."[28] ಎನ್ನುತ್ತಾ ಅಲ್ಲಿನ ಸ್ಪಾನಿಷ್ ಮತ್ತು ಕೆಚುವಾ ಮಾತು ಬಾರದ, ಭಾಷೆ ಬಾರದ ಈ ನೆಲದಲ್ಲಿ ಸಂತಸವನ್ನು, ಸ್ನೇಹವನ್ನು ವ್ಯಕ್ತಪಡಿಸಲು ಭಾಷೆಯ ಅಗತ್ಯವೇ ಇಲ್ಲ ಎನಿಸಿತು ಎನುವುದರೊಂಗಿದೆ ಮತ್ತೊಂದು ನಿದರ್ಶನವನ್ನು ಹೀಗೆ ತಿಳಿಸುತ್ತಾರೆ; "ನಾಸ್ಕಾದ ಅರಿಕೀಪಾ ರಸ್ತೆಯಂಚಿನಲ್ಲಿ ಒಬ್ಬ ಕಡುಬಡವ ಮಾರುವ ಕೀ ಚೈನು ಮತ್ತು ಫ್ರೆಂಡ್ ಶಿಪ್ ಬ್ಯಾಂಡ್‌ಗಳನ್ನು ನೋಡುತ್ತಾ ನಿಂತಾಗ ಆತ 'ಇಂಡಿಯಾ ಇಂಡಿಯಾ?' ಎಂದು ಪ್ರಶ್ನಿಸಿದ. 'ಹೌದೆಂದು' ತಲೆಯಾಡಿಸಿದೆ. ಇನ್ನಾ ದೇವರಿದ್ದ ಕೀಚೈನ್ ಹಿಡಿದು 'ಎಷ್ಟು?' ಎಂದು ಕೇಳಿದೆ. 'ಮೂರು ಸೋಲೆ' ಎಂದು ಬೆರಳಿನಲ್ಲಿ ತೋರಿಸಿದ. ನಾನು 'ಎರಡು ಸೋಲೆಗೆ ಕೊಡುವುದಿಲ್ಲವೆ?' ಎಂದು ಬೆರಳೆತ್ತಿ ತೋರಿಸಿದಾಗ, 'ತಗೊಳ್ಳಿ' ಎಂದ. ಕೀ ಚೈನಿಗೆ ಹಣ ಕೊಟ್ಟು ಹೊರಡುತ್ತಿದ್ದಂತೆ, 'ತಡೆಯಿರಿ' ಎಂದು ನಿಲ್ಲಿಸಿ, 'ನಾಸ್ಕಾ, ಪೆರು' ಎಂದು ಬರೆದಿದ್ದ ಫ್ರೆಂಡ್ ಶಿಪ್ ಬ್ಯಾಂಡ್ ತೆಗೆದು ನನ್ನ ಕೈಗಿಟ್ಟ. ನಾನು ಹಣ ಕೊಡಲು ಹೋದೆ. 'ಇಲ್ಲ ಇಲ್ಲ ಇದಕ್ಕೆ ಹಣ ಬೇಡ, ಇದು ನನ್ನ ಕೊಡುಗೆ' ಎಂಬಂತೆ ಕೈಸನ್ನೆ ಮಾಡಿ ತೋರಿಸಿದ. ಪೆರುವಿನ ಈ ಪುಟ್ಟ ಊರಿನ ಈ ಕಡು ಬಡವನ ಸ್ನೇಹದ ಕುರುಹವನ್ನು ಜೋಪಾನವಾಗಿ ಚೀಲದಲ್ಲಿ ಇಟ್ಟುಕೊಂಡೆ. ನಮಗೆ ಪೆರುವಿನಲ್ಲಿ ಭಾಷೆ ಅಡ್ಡವಾಗದಿದ್ದರೆ ಅದಕ್ಕೆ ಈ ಜನರ ತೆರೆದ ಹೃದಯ ಕಾರಣವಿತ್ತು. 'ಎದೆಯ ದನಿಗಿಂತ ಮಿಗಿಲಾದ ಶಾಸ್ತ್ರವಿಹುದೇನು?' ರಸಋಷಿಯ ಮಾತುಗಳು ದಿಟವಾಗಿದ್ದವು. ಪ್ರತಿ ಕ್ಷಣ ನಮಗೆ 'ನಿಮಗಿಲ್ಲಿ ಸ್ವಾಗತ' ಎಂಬ ಭಾವವನ್ನು ಮೂಡಿಸಿದ ಜನ. ಇಲ್ಲಿ ನಾವು ಕೊಳ್ಳುಬಾಕ ಸಮಾಜವೊಂದರ ಕೇವಲ 'ಗ್ರಾಹಕ'ರಾಗಿರಲಿಲ್ಲ. ಹಣದಾಚೆಗಿನ ಸಂಬಂಧವೊಂದು, ಮನುಷ್ಯ ಮನುಷ್ಯನ ನಡುವೆ ಚಿಮ್ಮುವ ನಿರಾಯಾಸದ ಸ್ನೇಹದ ಸಂಬಂಧವೊಂದು ರೂಪುಗೊಮಡಿತ್ತು."[29] ಎಂಬ ಲೇಖಕಿಯ ವಿಚಾರದಲ್ಲಿ ಅಮೇರಿಕ, ಪೆರು, ಭಾರತಗಳು ತುಲನಾತ್ಮಕವಾಗಿ ಮೇಳೈಸಿರುವುದನ್ನು ಕಾಣಬಹುದು.

ಕುಸ್ಕೊ ಪ್ರವಾಸ ಮುಗಿಸಿದ ಲೇಖಕಿ ಮತ್ತು ಗೆಳತಿ ಇನ್ನಾ ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದಾಗ ಲಾಹೋರು ಮೂಲದ ವ್ಯಕ್ತಿಯೊಬ್ಬ ತನ್ನ ಹದಿನೆಂಟನೆ ವಯಸ್ಸಿಗೆ ಅಮೆರಿಕಾ ಬಂದು ಸಿಯಾಟಲ್‌ನಲ್ಲಿ

ನೆಲೆಸಿ ಆರ್ಕಿಟೆಕ್ಟ್ ಕಂಪನಿ ಇದೆ ಎಂದು ಮಾತಿಗಾರಂಭಿಸಿ "ಅಮೆರಿಕವನ್ನು ಬಾಯಿಗೆ ಬಂದಂತೆ ಬಯ್ಯತೊಡಗಿದ. 'ಭಾರತ, ನಮ್ಮ ಭವ್ಯ ಪರಂಪರೆ, ಆಧ್ಯಾತ್ಮದ ನೆಲೆ, ಜಗತ್ತಿಗೆ ನಾವು ಕೊಟ್ಟಿರುವುದೆಷ್ಟು. ಈಜಿಪ್ಟ್, ಗ್ರೀಸ್ ಜಗತ್ತಿಗೆ ಗಣಿತ ವಿಜ್ಞಾನದ ಕೊಡುಗೆ ನೀಡಿತು. ಅಮೆರಿಕಾ ಏನು ಕೊಟ್ಟಿದೆ, ಮಿಕ್ಕಿಮೌಸ್, ಹಾಲಾಹಲವಾದ ಕೋಲಾ-ಪೆಪ್ಸಿ ಬಿಟ್ಟರೆ. ಈ ಅಮೆರಿಕನ್ ಕೊಳ್ಳುಬಾಕ ಸಂಸ್ಕೃತಿಯಾದರೂ ಯಾವ ಮಟ್ಟದ್ದು, ಎಲ್ಲಕ್ಕೂ ನನಗಲ್ಲೇನಿದೆ ಲಾಭ ಎಂದು ಯೋಚಿಸುತ್ತಾರೆ. ಸಂಬಂಧಗಳಲ್ಲೂ ಲಾಭವನ್ನೇ ನೋಡುತ್ತಾರೆ..' ಎಂದು ಒಂದೇ ಸಮನೆ ಹೇಳುತ್ತಾ, 'ಒಂದು ದೇಶದ 'ಸಂಸ್ಕೃತಿ' ಸಣ್ಣ ಸಣ್ಣ ವರ್ತನೆಯಲ್ಲೂ ಎದ್ದು ಕಾಣಿಸುತ್ತದೆ. ನಮ್ಮ ಭಾರತದಲ್ಲಿ ನೀವು ಏನಾದರು ತಿನ್ನಲು ಹೊರಟರೆ, ಎದುರಿಗಿದ್ದವರಿಗೆ ಕೊಡಲು ಹೋಗುತ್ತೀರಿ. ಅದೊಂದು ವಿನಯದ ವರ್ತನೆ. ಇವರು ತಮ್ಮ ಸ್ಯಾಂಡ್‌ವಿಚ್ ಹಿಡಕೊಂಡು ಕಚ ಕಚ ಎಂದು ನಿಮ್ಮೆದುರೇ ಕುಳಿತು ತಮ್ಮಷ್ಟಕ್ಕೆ ತಾವು ತಿನ್ನುವುದನ್ನು ನೋಡಿದ್ದೀರಾ? ಸಂಸ್ಕೃತಿ ಇಲ್ಲದ ಜನ!' ಎಂದು ಗೊಣಗಿದಾಗ ಲೇಖಕಿಗೆ ಕೃಷ್ಣಾನಂದ ಕಾಮತರ' 'ಇಂಡಿಯನ್ ಟಿ' ಕತೆ ನೆನಪಾಗಿದೆ. ಮತ್ತೆ ಆತ ಮುಂದುವರಿಸಿ 'ನನಗೆ ಸಾರ್ವತ್ರಿಕ ನ್ಯಾಯದಲ್ಲಿ ನಂಬಿಕೆ ಇದೆ. ಅದಕ್ಕೇ ನೋಡಿ ಈ ಜನರು ಎಷ್ಟು ಖಾಲಿಯಾಗಿದ್ದಾರೆ. ಒಳಗೆಲ್ಲ ಬರೀ ಟೊಳ್ಳು. ಅಧ್ಯಾತ್ಮವಿಲ್ಲದ ಖಾಲಿತನ. ಚಡಪಡಿಕೆ. ನಮಗೆ ಸದಾ ಹೇಳುತ್ತಾರೆ. ಜಗತ್ತಿನ ಸಮಸ್ಯೆ ಎಂದರೆ ಜನಸಂಖ್ಯೆ. ನಾನು ಪ್ರತಿಭಟಿಸುತ್ತೇನೆ, ಸಮಸ್ಯೆ ಜನಸಂಖ್ಯೆಯದಲ್ಲ, ಒಬ್ಬ ಅಮೆರಿಕನ್ ಮಗು ಗಬಳಿಸುವ ಸಂಪನ್ಮೂಲಗಳಲ್ಲಿ ನೂರು ಭಾರತೀಯ ಮಕ್ಕಳು, ಐನೂರು ಇಥಿಯೋಪಿಯಾದ ಮಕ್ಕಳು ಬದುಕುತ್ತಾರೆ. ಜಗತ್ತಿನ ಸಂಪನ್ಮೂಲಗಳೆಲ್ಲವು ಅಮೆರಿಕದ ಆಸ್ತಿ ಎಂದು ಭಾವಿಸಿರುವ ದೇಶ ಇದು. ಇಡೀ ಜಗತ್ತೇ ಅಮೆರಿಕದ ವಿರುದ್ಧ ಏರಿ ನಿಲ್ಲುವ ದಿನ ದೂರವಿಲ್ಲ' ಎಂದ. 'ಈ ಅಮೆರಿಕನ್ನರು ದಿನಕ್ಕೆ ಅದೆಷ್ಟು ಜಂಕ ಜನರೇಟ್ ಮಾಡುತ್ತಾರೆ ಗೊತ್ತೆ? ಅಷ್ಟು ಪೇಪರ್ ಮತ್ತು ಪ್ಲಾಸ್ಟಿಕ್, ಸ್ಥಿತಿವಂತ ಭಾರತೀಯ ಒಂದು ತಿಂಗಳಲ್ಲೂ ಮಾಡಿರೋಲ್ಲ. ತಾನು ಪರಮಾಣು ಬಾಂಬ್ ಕೂಡಿಟ್ಟುಕೊಂಡು, ಜಗತ್ತಿಗೆ ಶಾಂತಿಯ ಉಪದೇಶ. ನೋಡುತ್ತಿರಿ ಒಂದು ದಿನ ಭಾರತ ಎಲ್ಲರಿಗಿಂತ ಮುಂದಿರುತ್ತದೆ. ನಮಗೆ ಆಧ್ಯಾತ್ಮಿಕ ಶಕ್ತಿ ಇದೆ. ನಮ್ಮ ಕುಟುಂಬ, ನಮ್ಮ ಸಮಾಜ, ನಮ್ಮ ದೇಶ ಎನ್ನುವ ಮನೋಭಾವದ ನಮ್ಮ ಅಂತಃಶಕ್ತಿಯಿಂದ ಜಗತ್ತಿಗೇ ಮಾರ್ಗದರ್ಶಕರಾಗುತ್ತೇವೆ' ಎಂದು ಭಾರತವನ್ನು ಹೊಗಳಿ, ಅಮೆರಿಕವನ್ನು ತೆಗಳಿದ ಆ ವ್ಯಕ್ತಿಯ ವಿಷಯವನ್ನು ಲೇಖಕಿ ತಿಳಿಸುತ್ತಾ ಮತ್ತೆ ಅದೇ ವ್ಯಕ್ತಿ ಇನ್ನಷ್ಟು ಹೇಳಿದ್ದನ್ನು ಹೀಗೆ ಹೇಳಿದ್ದಾರೆ. 'ಅಮೆರಿಕನ್ನರ ಅಹಂಕಾರ ಮತ್ತು ಅಜ್ಞಾನಕ್ಕೆ ಮಿತಿ ಇಲ್ಲ' ಎಂದು ಮತ್ತಷ್ಟು ಹೇಳಿ ಹಗುರಾದ."[30] ಎಂದು ಲೇಖಕಿ ಆ

ವ್ಯಕ್ತಿಯನ್ನು ಕುರಿತು "ಇಷ್ಟೊಂದು ಅಮೆರಿಕದ ಜೀವನ, ಸಂಸ್ಕೃತಿಯ ಬಗ್ಗೆ ಕಟುವಾಗಿ ಮಾತನಾಡುವ ಈತ, ದಶಕ ದಶಕಗಳಿಂದ ಭದ್ರವಾಗಿ ಇಲ್ಲಿಯೇ ನೆಲೆಸಿದ್ದಾನೆ. ಅದೇ ವಿಪರ್ಯಾಸವಾಗಿ ಕಾಣುತ್ತಿತ್ತು ಎಂದರೂ, 'ಅಮೆರಿಕ ಬಡ ದೇಶಗಳನ್ನು ಲೂಟಿ ಮಾಡಿ ಬದುಕುವುದು ಸದಾಕಾಲಕ್ಕೂ ಮುಂದುವರಿಯಲಾರದು' ಎಂಬ ಆ ವ್ಯಕ್ತಿಯ ಮಾತಿನಲ್ಲಿ ಸತ್ಯವಿತ್ತು ಎನ್ನುತ್ತಾರೆ.

ಅಮೆಜಾನ್ ನದಿಯ ದಂಡೆಯಲ್ಲಿ ಎರಡು ಹ್ಯಾಮಕ್ ತೂಗು ಬಿಟ್ಟಿರುತ್ತಾರೆ. ಅದರೊಂದರಲ್ಲಿ ಲೇಖಕಿ ಆನಂದದಿಂದ ಮಲಗಿ 'ರೀಡರ್ಸ್ ಡೈಜೆಸ್ಟ್' ಪುಸ್ತಕದಲ್ಲಿನ ಅಮೆರಿಕದ ಕಪ್ಪು ಹುಡುಗನೊಬ್ಬನ ಕತೆಯನ್ನು ಹೀಗೆ ಹೇಳುತ್ತಾರೆ. "ನಾವು ಕಂಡ ಅಮೆರಿಕ ಕೇವಲ ಶ್ರೀಮಂತರ  ಅಮೆರಿಕವಾಗಿತ್ತು. ಈ ಶ್ರೀಮಂತಿಕೆಯ ಹಿಂದುಗಡೆಗಿದ್ದ ಮತ್ತೊಂದು ಅಮೆರಿಕಾ ಕಂಡೇ ಇರಲಿಲ್ಲ. ಬರವರ, ಕರಿಯರ ದಿನದಿನದ ಬದುಕು ದುರ್ಭರವಾದ ಜನರ ದ್ವೀಪಗಳಿವೆ ಈ ಶ್ರೀಮಂತ ದೇಶದಲ್ಲಿ. ಲೆಸ್ಲ್ ಮಾರ್ಟಿನ್ ಕತೆ ಓದುತ್ತಿದ್ದೆ. ನ್ಯೂಯಾರ್ಕಿನ ಬುಶ್ವಿಕ್ ಸಬರ್ಬಿನ ಈ ಹುಡುಗನಿಗೆ ಅಮೆರಿಕದಲ್ಲಿ ಯಾವ ಅವಕಾಶವು ಇರಲಿಲ್ಲ. ದಿನಬೆಳಗಾದರೆ ಗುಂಡು ಹಾರವ, ಯುದ್ಧಭೂಮಿಯಂತಹ ಬುಶ್ವಿಕ್‌ನಲ್ಲಿ ಆತನ ಬದುಕು. ಒಂದು ಕಾಲದಲ್ಲಿ ಉತ್ತಮ ಸಬರ್ಬಿನಲ್ಲಿದ್ದ ಸ್ಥಿತಿವಂತ ಕುಟುಂಬ ತಟ್ಟನೆ ಬಡತನಕ್ಕಿಳಿದು ಇಲ್ಲಿಗೆ ಬಂದು ಬಿದ್ದಿತು. ಅಮೆರಿಕದಲ್ಲಿ ಶ್ರೀಮಂತಿಕೆಯ ತುತ್ತತುದಿಯಿಂದ ದಾರಿದ್ರ್ಯಕ್ಕೆ ಉರುಳಲು ಒಂದೇ ಮಜಲು. ಬದುಕೆಲ್ಲ ಸಾಲದ ಮೇಲೆ, ಕ್ರೆಡಿಟ್ ಬಲದ ಮೇಲೆ ನಿಂತಿರುತ್ತದೆ. ಹನ್ನೊಂದನೇ ತರಗತಿ ಪಾಸಾದ ಲೆಸ್ಲಿಗೆ ಓದಲು ಬರೆಯಲು ಬಾರದು! ಕರಿಯ ಎಂಬ ಕಾರಣಕ್ಕೆ ದಿನಸಿ ಅಂಗಡಿಯಲ್ಲಿ, ಮಾಲ್‌ಗಳಲ್ಲಿ ಕೆಲಸ ಸಿಗದು. 'ನ್ಯೂಯಾರ್ಕ್ ಒಂದು ದೇಶ' ಎಂದು ಭಾವಿಸಿದ್ದ ಹುಡುಗ, ಎಂದೂ ಮೆಟ್ರೋ ಹಿಡಿದು ಒಳ ಬಂದವನಲ್ಲ. ನಂಬಲು ಸಾಧ್ಯವೆ, ಮ್ಯಾನ್‌ಹಾಟನ್ ವೈಭವ ನೋಡಿ ಬರುವ ನಮ್ಮಂತಹ ಜನಕ್ಕೆ ಒಂದು ಮೆಟ್ರೋ ಹಿಡಿದು ಯಾವ ನರಕ ಮುಟ್ಟಬಹುದೆಂದು ಗೊತ್ತೆ? ನ್ಯೂಯಾರ್ಕ್ ಗ್ರಂಥಾಲಯದ ಹಿಂಬದಿಯ ಪಾರ್ಕಿನಲ್ಲಿ ಕಸದ ತೊಟ್ಟಿಯಲ್ಲಿ ತಡಕಾಡುವ ಬಡವರನ್ನು ಕಂಡಿದ್ದೆ. 'ಅವರ ಬಡತನಕ್ಕೆ ಕಾರಣ ಅವರು ಸೋಮಾರಿಗಳಾಗಿರೋದೆ. ಇದು ಅವಕಾಶಗಳ ದೇಶ, ಬೇಕಷ್ಟು ಕೆಲಸ ಇದೆ' ಎನ್ನುವ ಸಂತೃಪ್ತ ಭಾರತೀಯರಿಗೆ ಈ ಮುಖದ ಪರಿಚಯವೇ ಇರಲಿಲ್ಲ. ಸುರಕ್ಷಿತ ಸಬರ್ಬ್‌ಗಳಲ್ಲಿ, ಓದು ವಿದ್ಯಾಭ್ಯಾಸದ ಸವಲತ್ತಿನಲ್ಲಿ ಬೆಳೆಯುವ ಭಾರತೀಯರಿಗೆ, ಕರಿಯರಿಗಿಂತ ಮೇಲಿನ ಸಾಮಾಜಿಕ ಸ್ಥಾನಮಾನವಿದ್ದು, ಸುಲಭವಾಗಿ ಮಾಲ್‌ಗಳಲ್ಲಿ, ಮ್ಯಾಗ್‌ಡೊನಾಲ್ಡ್‌ಗಳಲ್ಲಿ ಕೆಲಸ ಸಿಗುತ್ತದೆ. ತಮ್ಮ ಮನೆ, ಕಛೇರಿ, ವಾರಾಂತ್ಯಗಳ ರಜೆಯ ತಾಣ ಇಷ್ಟೆ ಕಂಡ, ಮತ್ತೇನೂ ಕಾಣದ.

'ರೈಲು ನಿಲ್ದಾಣ ಡೌನ್ ಟೌನ್‌ನಲ್ಲಿದೆ, ಕರಿಯರ ಜಾಗ ಅದು' ಎಂದು ಇಪ್ಪತ್ತು ವರ್ಷ ಇದ್ದರೂ ನೋಡದ ಇವರ ಪಾಲಿಗೆ, ಅಮೆರಿಕ ಶ್ರೀಮಂತ ಸ್ವರ್ಗ. ಇಲ್ಲಿ ಬಡವರಿಲ್ಲ, ಇರುವವರು ಸೋಮಾರಿಗಳು ಮಾತ್ರ. ಈ ಅಮೆರಿಕದಲ್ಲಿ ನಿಜಕ್ಕೂ ಎಲ್ಲರಿಗೂ ಅವಕಾಶವಿದೆಯೆ? ಲೆಸ್ಸಿಗೆ ಬದುಕುವ ಅವಕಾಶ ಮಾಡಿಕೊಟ್ಟದ್ದು ಕೆನಡಾದವರು"[31] ಎಂದು ಲೇಖಕಿ ಪುಸ್ತಕದ ವಿಷಯದೊಂದಿಗೆ ಅಮೆರಿಕೆಯ ನೀಗ್ರೋಗಳ ಬಗ್ಗೆ ಮತ್ತು ಆ ಕುರಿತು ಅನವಾಸಿ ಭಾರತೀಯರ ನಲುವುಗಳ ಬಗ್ಗೆ ವಿಶ್ಲೇಷನಾತ್ಮಕ ಚಿಂತನೆ ಮಾಡಿದ್ದಾರೆ.

ಒಂದು ಖಂಡದಲ್ಲಿ ಚರಿತ್ರೆಯೇ ಇಲ್ಲ ಅಥವಾ ಉತ್ತರ ಅಮೆರಿಕಾ ಖಂಡದ ಚರಿತ್ರೆಯನ್ನು ವಲಸಿಗರು ನಾಶ ಮಾಡಿ ತಮ್ಮ ನವವಸಾಹತನ್ನು ಸ್ಥಾಪಿಸಿ ಇತ್ತೀಚೆಗಿನ ಚರಿತ್ರೆಯನ್ನು ಬರೆಯುತ್ತಿದ್ದಾರೆ. ದಕ್ಷಿಣ ಅಮೆರಿಕಾವಂತು ಕ್ರಿಸ್ತಪೂರ್ವದಿಂದ ಇಂದಿನವರೆಗೂ ಅನೂಚಾನವಾಗಿ ತಮ್ಮ ವಿಶಿಷ್ಟ ಶೈಲಿಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಬ್ರೆಜಿಲ್, ರಿಯಾ, ಡಿ. ಜನ್ಯರೂ ಆಂಡಿಸ್ ಪರ್ವತ ಶ್ರೇಣಿಯ ಗುಡ್ಡಗಾಡು ನಿವಾಸಿಗಳ ಸಂಸ್ಕೃತಿ, ಕೊಲೆರಾಡೂ ಸಂಸ್ಕೃತಿ ಮುಂತಾದವು ಅತ್ಯಂತ ಪ್ರಾಚೀನ ಸಂಸ್ಕೃತಿ ನಮ್ಮ ಗಂಗಾನದಿಯಂತೆ ಜೀವನದಿ ಅಮೆಜಾನ್. ಕಾಡು ಅಲ್ಲಿನ ನಿವಾಸಿಗಳ ಚಲನ ಸಂಸ್ಕೃತಿ ಇತ್ಯಾದಿಗಳನ್ನು ಅಲ್ಲಿಯ ಪ್ರವಾಸ ಸಾಹಿತ್ಯದ ಮೂಲಕ ಅರಿಯಬಹುದಾಗಿದೆ.

**ಸ್ವದೇಶ, ಸ್ವರಾಜ್ಯ, ಸ್ವಭಾಷೆಗಳಿಗೆ ಸಂಬಂಧಿಸಿರುವ ಅಭಿಮಾನಪೂರ್ವಕ ಅಂಶಗಳು :** ಲೇಖಕಿಯ ಪ್ರವಾಸದುದ್ದಕ್ಕೂ ಸ್ವದೇಶ, ಸ್ವರಾಜ್ಯ, ಸ್ವಭಾಷೆಗಳು ನೆನಪಾಗಿರುವುದನ್ನು ಈ ಕೃತಿಯ ಅನೇಕ ಕಡೆಗಳಲ್ಲಿ ಕಾಣಬಹುದು. ಅವುಗಳಲ್ಲಿ ಒಂದು; "ಪೆರುವಿನ ಪ್ರಥಮ ದರ್ಶನದಲ್ಲಿ ಲೇಖಕಿಗೆ ಪರದೇಶದಲ್ಲಿದ್ದೇನೆ ಎಂದು ಅನ್ನಿಸದೆ, ಹಳೆ ದಿಲ್ಲಿಯ ಗಲ್ಲಿಗಳಂತೆ ಕಂಡಿತು ಲೀಮಾ ಎನ್ನುತ್ತಾ, ಎರ್ರಾಬಿರ್ರಿ ಕಟ್ಟಿದ ಗಾರೆ ಇಲ್ಲದ ಮನೆಗಳೇ ಹೆಚ್ಚು. 'ಮೇಲು ಸೇತುವೆ'ಯ ಕೆಳಗೆ ಹಾಯುತ್ತಿದ್ದಂತೆ, 'ಇದೋ ಮೆಜೆಸ್ಟಿಕ್ ಬಂತು' ಎನಿಸಿದಂತಹ ಭ್ರಾಂತಿ. ಪೆರು ಅಷ್ಟು ಪರಿಚಿತವಾಗಿ ಕಂಡಿತು ಎನ್ನುವುದಲ್ಲದೆ, ನಮ್ಮ ನೆಲದೊಡನೆ ಅಷ್ಟೊಂದು ಹೋಲಿಕೆ. ಒತ್ತೊತ್ತು ಮನೆಗಳು ಬೀದಿಗೇ ಬಾಗಿಲಿದ್ದ ಮನೆಗಳು. ಹಾದಂತೆ, ಬಲಕ್ಕೆ ಪ್ರಶಾಂತ ಸಾಗರ ಜೊತೆಯಾಯಿತು. ಲೀಮಾದಲ್ಲಿ ಸದಾ ಮಂಕು ಬಡಿದ, ಮೋಡ ಮುಚ್ಚಿದ ವಾತಾವರಣ. ಇಲ್ಲಿ ಬಿಸಿಲು ಕಾಣಲಿಲ್ಲ"[32] ಎನ್ನುವ ಲೇಖಕಿ ಮತ್ತೊಂದು ಕಡೆ "ಪೆರುವಿನ ತುಂಬಾ ಸ್ಪಾನಿಷ್ ಮತ್ತು ಕೆಚುವಾ ಭಾಷೆಗಳೇ ಕೇಳಿ ಬರುವುದು. ನಮಗೋ ಸ್ಪಾನಿಷೂ ಗೊತ್ತಿಲ್ಲ. 'ಕೆಚುವಾ'

ಹೆಸರೂ ಕೇಳಿರಲಿಲ್ಲ. ಅವರಿಗೋ ಇಂಗ್ಲಿಷಿನ ಒಂದಕ್ಷರವೂ ಬಾರದು. ಮೊದಮೊದಲು ಇಂಗ್ಲಿಷಿನಲ್ಲಿ ವಿವರಿಸಲು ಪ್ರಯತ್ನಿಸುತ್ತಿದ್ದೆ. 'ಏರ್ ಪೋರ್ಟ್' ಎಂದರು ಅರ್ಥವಾಗದು, 'ಹೊಟೇಲ್' ಎಂದರೆ ತಿಳಿಯದು. ಹೇಗಿದ್ರೂ ಯಾವ ಭಾಷೆಯೂ ಅರ್ಥವಾಗದು ಎಂದ ಮೇಲೆ ಇಂಗ್ಲಿಷ್‌ನಲ್ಲಿ ಏಕೆ, ಕನ್ನಡದಲ್ಲಿಯೇ ಕೇಳತೊಡಗಿದೆ. ಟ್ಯಾಕ್ಸಿಯವನ ಮುಖಕ್ಕೆ ನಕಾಶೆ ಹಿಡಿದು, ನಾವು ಹೋಗಬೇಕಿದ್ದ ಸ್ಥಳವನ್ನು ತೋರಿಸುತ್ತಾ 'ಎಷ್ಟಯ್ಯಾ ಸೋಲೆ?' ಕೇಳುತ್ತಿದ್ದೆ. ಆತ ಸ್ಪಾನಿಷ್ ಭಾಷೆಯಲ್ಲಿ ಹೇಳುತ್ತಿದ್ದ. ನನಗದು ಅರ್ಥವಾಗದು. ಕೈಯಲ್ಲಿ ಸದಾ ಹಾಳೆಯೊಂದನ್ನು ಹಿಡಿದು, ಪೆನ್ನು ಕೈಗೆ ಕೊಟ್ಟು 'ಬರಿ...' ಎನ್ನುತ್ತಿದ್ದೆ. ಪುಣ್ಯಕ್ಕೆ ಅವರು ಬರೆಯುತ್ತಿದ್ದ ಅಂಕೆಗಳು ನಾವು ಬಳಸುವ 'ಇಂಡೋ-ಅರೇಬಿಕ್' ಅಂಕೆಗಳೆ. '40' ಎಂದು ಬರೆಯುವ. ನಾನು ಅದನ್ನು ಹೊಡೆದು ಹಾಕಿ '10' ಎಂದು ಬರೆಯುತ್ತಿದ್ದೆ. ಆತ 'ಇಲ್ಲ, ಇಲ್ಲ...' ಎನ್ನುವಂತೆ ತಲೆ ಕೊಡವಿ, ಕೈಯಲ್ಲಿ ಹಾವಭಾವ ಮಾಡಿ, '20' ಎಂದು ಬರೆಯುವ. ನಮ್ಮ ಚೌಕಾಸಿ ಹೀಗೆ ಮುಂದುವರಿದು, ಕಡೆಗೆ ಆತ ಹತ್ತಕ್ಕೋ, ಹದಿನೈದಕ್ಕೋ ಒಪ್ಪಿ ಬರುತ್ತಿದ್ದ"[33] ಎಂಬ ಲೇಖಕಿಯ ಹೇಳಿಕೆಗಳು ವಾಚಕರನ್ನು ಮುದಗೊಳಿಸುತ್ತವೆ.

ಇಕಿಟಸಿ "ಹೊಟೇಲಿನ ಕೌಂಟರಿನ ಇಬ್ಬರು ಮಹಿಳೆಯರಿಗೂ ಒಂದಕ್ಷರ ಇಂಗ್ಲಿಷ್ ಬರುತ್ತಿರಲಿಲ್ಲ, ಆದರೂ ನಾವು ಸಂಭಾಸಿಸಿದೆವು. ಬಾಯಿತುಂಬಾ ಮಾತನಾಡಿದೆವು. ಅವರು ಕೇಳಿದ್ದು ಏನೋ, ನಾವು ಹೇಳಿದ್ದು ಏನೋ ಭಗವಂತನಿಗೇ ಗೊತ್ತು. ನಾವಂತೂ ಪೆರು ತಲುಪಿದ ಮೇಲೆ ಇಂಗ್ಲಿಷ್ ಕೈ ಬಿಟ್ಟೆವು. ಕಲಿತರೆ ಈ ಜನರೇ ಒಂದಿಷ್ಟು ಕನ್ನಡ ಕಲಿಯಲಿ ಎಂದು ಇವರೊಡನೆ ಕನ್ನಡದಲ್ಲೇ ಮಾತನಾಡತೊಡಗಿದ್ದೆವು. ಅವರಿಗೆ ಕನ್ನಡ ಗೊತ್ತಿದ್ದಷ್ಟೇ ಇಂಗ್ಲಿಷ್ ಅರ್ಥವಾಗುತ್ತಿದ್ದದ್ದು. ನಮಗೆ, ಭಾರತೀಯರಿಗೆ ಇಂಗ್ಲಿಷ್ ಭಾಷೆಯ ಬಗ್ಗೆ ಎಂತಹ ಭ್ರಮೆ ಇದೆ ಎಂದರೆ, ಇಂಗ್ಲಿಷ್ ಅಂತಾರಾಷ್ಟ್ರೀಯ ಭಾಷೆ, ಇಡೀ ಜಗತ್ತಿಗೇ ಇಂಗ್ಲಿಷ್ ಅರ್ಥವಾಗುತ್ತೆ ಎಂದು ಭಾವಿಸುತ್ತೇವೆ. ವಾಸ್ತವದಲ್ಲಿ ನೋಡಿದರೆ, ಜಗತ್ತಿನ ಶೇ. 15ಕ್ಕೂ ಕಡಿಮೆ ಜನರು ಇಂಗ್ಲಿಷ್ ಬಳಸುತ್ತಾರೆ"[34] ಎಂಬ ಲೇಖಕಿಯ ನಿಲುವಿನಲ್ಲಿ ಕನ್ನಡ ಪ್ರೇಮ ಮೆರೆದಿರುವುದಲ್ಲದೆ ಇಂಗ್ಲಿಷ್ ಭಾಷಾ ಬಳಕೆದಾರರ ವಸ್ತುನಿಷ್ಠ ಅಂಕಿಅಂಶಗಳು ದೊರೆಯುತ್ತದೆ.

ಅಮೇರಿಕದಲ್ಲಿನ ಅನಿವಾಸಿ ಭಾರತೀಯರನ್ನು ಕುರಿತು ಲೇಖಕಿ ವಿವೇಚಿಸು ಬಗೆ; "ಬಹುಪಾಲು ಭಾರತೀಯರು ಕಾರಣಾಂತರದಿಂದ ಅಮೆರಿಕೆಗೆ ಬಂದರು, ಇಲ್ಲಿಯ ಅವಕಾಶಗಳನ್ನು ಬಾಚಿಕೊಂಡು

ಮೇಲೆದ್ದವರು. ಭೌತಿಕ ಅನುಕೂಲಗಳಿಗೆ ಹೊಂದಿ ನೆಲೆಸಿದವರು. ಆದರೆ ತಮ್ಮ ಹುಟ್ಟೂರಿನ ಏನನ್ನೋ ಸದಾ 'ಮಿಸ್' ಮಾಡುವವರು. ಇಲ್ಲಿ ಅಂತರ್ಗತವಾದ ಏಕಾಂಗಿಕತ, ಆದರೆ ಹಿಂತಿರುಗಲು ಬೇರುಗಳಿಲ್ಲ. ಹುಟ್ಟಿ ಬೆಳೆದ ಬೇರೊಂದು ಸಂಸ್ಕೃತಿಯ ಸೆಳೆತ, ಆದರೆ ಜೊತೆಯಲ್ಲೇ ಹೊಂದಿ ನಿಂತ ಇಲ್ಲಿಯ ಬದುಕನ್ನು ಬಿಟ್ಟು ನಡೆಯುವುದು ಸುಲಭವಲ್ಲ. 'ಎಷ್ಟೇ ಎಲ್ಲರೂ ಸಮಾನರು' ಎಂಬ ತೋರಿಕೆ ಇದ್ದರೂ ಏಷಿಯನ್ನರ ಬಗ್ಗೆ ಸೂಕ್ಷ್ಮ ತಾರತಮ್ಯ ಇದ್ದೇ ಇದೆ"[35] ಎಂದು ಅಭಿಪ್ರಾಯಪಡುತ್ತಾರೆ.

ಭಾರತ ಮತ್ತು ಇನ್ಕಾಗಳ ಪ್ರಕೃತಿ ಪೂಜೆಗಳು ಪರಸ್ಪರ ಪೂರಕವಾಗಿರುವುದನ್ನು ಗುರುತಿಸುತ್ತಾ, "ಇನ್ಕಾಗಳು ಸೂರ್ಯನನ್ನು ಪೂಜಿಸುತ್ತಿದ್ದರು, ಭೂಮಿಯನ್ನು, ನೀರನ್ನು, ಚಂದ್ರನನ್ನು, ತಾರೆಗಳನ್ನು, ಪರ್ವತಗಳನ್ನು, ಪರಿಸರವನ್ನು ಹಾಳು ಮಾಡದೆ ಪೂಜಿಸಿದರು. ಬೇಟೆಯನ್ನು ತೀವ್ರವಾಗಿ ನಿಯಂತ್ರಿಸಿದ್ದರು, ಎಂತಹ ಗಿಡಗಳನ್ನೂ ಎಂತಹ ಪ್ರದೇಶದಲ್ಲಾದರೂ ಬೆಳೆಯ ಬಲ್ಲವರಾಗಿದ್ದರು. ಪರಿಸರದ ನಡುವೆ ಪರಿಸರದಲ್ಲಿ ಒಂದಾಗಿ ಉಳಿದರು ಎಂಬುದನ್ನು ಕೇಳಿದ ಲೇಖಕಿ 'ಭಾರತೀಯರು ಇಂದಿಗೂ ಪ್ರಕೃತಿಯನ್ನು ಪೂಜಿಸುತ್ತೇವೆ. ಗಿಡಗಳನ್ನು, ಪ್ರಾಣಿಗಳನ್ನು, ಪಕ್ಷಿಗಳನ್ನು, ಭೂಮಿ, ಗಾಳಿ, ನೀರನ್ನು ಸಹ ಎಂದು ಹೇಳಿದಾಗ ಜೊತೆಯಲ್ಲಿದ್ದ ಅಮೆರಿಕನ್ ದಂಪತಿಗಳಲ್ಲೊಬ್ಬರು 'ಹೌದಾ'? ಎಂಬ ಅವರ ಸ್ವರದ ಭಾವ 'ಹೌ ಪ್ರಿಮಿಟಿವ್' ಎಂದಂತೆ ಲೇಖಕಿಗೆ ಭಾಸವಾಗಿ 'ಹೌದು ಅದರ ಅರ್ಥವೇನು, ಪ್ರಕೃತಿಯನ್ನು ಪೂಜಿಸುವುದೆಂದರೆ, ಪರಿಸರವನ್ನು ರಕ್ಷಿಸುವುದು. ಪರಿಸರವನ್ನು ಕುಲಗೆಡಿಸಿ ಪರಿಸರ ರಕ್ಷಣೆ ಸ್ಲೋಗನ್ ಕೂಗಿದರೆ ಸಾಕೆ? ಪ್ರಕೃತಿಯನ್ನು ದೇವರೆಂದು ಪೂಜಿಸಿದಾಗ ಅದನ್ನು ಹಾಳುಗೆಡಹುದಿಲ್ಲ'[36] ಎನ್ನುತ್ತಾ, "ಕ್ಷಣ ಕಾಲದ ಲಾಭಕ್ಕೆ 'ತಾನೊಬ್ಬ ಬದುಕಿದರೆ ಸಾಕು' ಎಂಬ ದೃಷ್ಟಿದೋಷಕ್ಕೆ ಬಲಿಯಾದವರಲ್ಲ. ಲೋಕಹಿತವನ್ನು ಸಕಲ ಜೀವಿಗಳ ಕ್ಷೇಮವನ್ನು ಬಯಸಿದ ಸಂಸ್ಕೃತಿಗಳಿವು. ಪರಿಸರದ ಪವಿತ್ರತೆಯಲ್ಲಿ ಆಧ್ಯಾತ್ಮವನ್ನು ಕಂಡವರು. ಅಲ್ಲಿ ಜೀವಾತ್ಮನನ್ನು, ಪರಮಾತ್ಮನನ್ನು ಕಂಡವರು. 'ದೇವರು ಅಣು ಋಣ ಕಣದಲ್ಲಿದ್ದಾನೆ, ಎಲ್ಲದರಲ್ಲೂ, ಎಲ್ಲರಲ್ಲೂ ದೇವರಿದ್ದಾನೆ' ಎಂದ ನಾಗರಿಕತೆಗಳಿವು. ವಿಶ್ವದ ಯಾವುದೇ ಮೂಲ ನಾಗರಿಕತೆಯ ಉದಾಹರಣೆಯನ್ನು ತೆಗೆದುಕೊಂಡರೂ, ಅಲ್ಲಿ ನಿಸರ್ಗ ಪೂಜೆಯ ಮೂಲಸೆಲೆಯಿದೆ" ಎಂದು ಲೇಖಕಿ ಅಮೆರಿಕನ್ ದಂಪತಿಗಳಿಗೆ ತಿಳಿಸುತ್ತಾರೆ.

"ಇನ್ಕಾಗಳು ಸೂರ್ಯನ ಆರಾಧಕರು. ಕುಸ್ಕೋ ನಗರದಲ್ಲಿ ಇನ್ಕಾ ದೊರೆಗಳು ಆಚರಿಸಿದ ಪ್ರಸಿದ್ಧ ನಾಲ್ಕು ಹಬ್ಬಗಳಲ್ಲಿ, ಸೂರ್ಯನ ಆರಾಧನೆಯ ಹಬ್ಬ ಅತ್ಯಂತ ಪ್ರಮುಖವಾದದ್ದು ಜೂನ್

[illegible]

ತಿಂಗಳ್ಲಲಿ ಬರುವ ಈ ಹಬ್ಬವನ್ನು 'ರೇಮಿ' ಎನ್ನುತ್ತಾರೆ. ಸೂರ್ಯನನ್ನು 'ವಿಶ್ವದ ದೇವನೆಂದು, ತನ್ನ ಬೆಳಕು ಮತ್ತು ಶಕ್ತಿಯಿಂದ ಈ ಭೂಮಿಯ ಮೇಲಿನ ಎಲ್ಲವನ್ನು ಸೃಷ್ಟಿಸಿ ಕಾಯ್ದಭಗವಂತನೆಂದು' ಆರಾಧಿಸುತ್ತಾರೆ. ಅವರು ಆರಾಧಿಸುತ್ತಿದ್ದ ಮತ್ತೊಂದು ದೈವ ವೀರಕೋಚ, ವಿಶ್ವದ ದೊರೆ. ಇನ್ಕಾಗಳ ಪವಿತ್ರ ಗ್ರಂಥದಲ್ಲಿ ಬರುವ ವೀರಕೋಚನನ್ನು ಕುರಿತ ಪ್ರಾರ್ಥನೆಗಳು ಅದೆಷ್ಟು ಅರ್ಥಪೂರ್ಣವಾಗಿವೆ.

ವೀರಕೋಚ, ವಿಶ್ವದ ದೊರೆಯೆ
ನೀನು ಹೆಣ್ಣೋ ಗಂಡೆ
ಆದರೆ ಜಗತ್ತಿಗೆ ಶಾಖವನ್ನು, ಫಲವತ್ತತೆಯನ್ನು ನೀಡಿದವನು
ಎಲ್ಲಿರುವೆ ನೀನು?
ಮೇಲಿರಬಹುದು, ಕೆಳಗಿರಬಹುದು,
ಆಕಾಶದಲ್ಲಿರಬಹುದು, ಭುವಿಯಲ್ಲಿರಬಹುದು
ನೀರಲ್ಲಿ, ಮರಳಲ್ಲಿ?
ಜಗತ್ತಿನ ಸೃಷ್ಟಿಕರ್ತ,
ನಿನ್ನನ್ನು ನೋಡಲು ಕಣ್ಣುಕಾತರಿಸುತ್ತಿದೆ.
ಕಾಲಾತೀತ ವೀರಕೋಚ?
ನಿನ್ನನ್ನು ಮೀರಿಸಿದವರು ಭುವಿಯಲ್ಲಿಲ್ಲ
ವಿಶ್ವದ ಆದಿಯಿಂದ ಅಂತ್ಯದವರೆಗೆ ನೀನಿರುವೆ
ಹೆಣ್ಣು ಗಂಡನ್ನು ಸೃಷ್ಟಿಸಿದಾತ
ಅವರು ಶಾಂತಿಯಿಂದ ಜೀವಿಸುವಂತೆ ಕಾಯ್ದವ
ನಮ್ಮ ಈ ಪೂಜೆಯನ್ನು ಸ್ವೀಕರಿಸು ಓ ಸೃಷ್ಟಿಕರ್ತ

ಈ ಸನಾತನ ಧರ್ಮ ಮತ್ತು ಪುರಾತನ ನಾಗರಿಕತೆಯ ನಂಬಿಕೆಗಳ ಹಾಗೂ ನಮ್ಮ ಭಾರತೀಯ ನಂಬಿಕೆಗಳ ನಡುವೆ ಎಷ್ಟು ಸಾಮ್ಯವಿದೆ ಎಂದು ನೋಡಿ ಅಚ್ಚರಿಯಾಯಿತು. ಸೂರ್ಯದೇವ ಜಗತ್ತಿಗೇ

ಬೆಳಕು ಮತ್ತು ಶಾಖ ನೀಡುವವ, ಭೂಮಿಯ ಜೀವಿಗಳಿಗೆಲ್ಲ ಪ್ರಾಣದಾತ. ನಮ್ಮ ಭವ್ಯ ಸೂರ್ಯ ದೇಗುಲಗಳಂತೆ, ಅದೆಂತಹ ಅದ್ಭುತ ದೇವಾಲಯಗಳನ್ನು ಕಟ್ಟಿ ಆರಾಧಿಸಿದ್ದರು. 'ವೀರಕೋಚ ನೀನು ಹೆಣ್ಣಾಗಿರು, ಗಂಡಾಗಿರು...' ಎಂದು ಅವರ ಪವಿತ್ರ ಗ್ರಂಥದ ಪ್ರಾರ್ಥನೆ ಆರಂಭವಾಗಿದ್ದು ಮತ್ತೂ ಖುಷಿ ಕೊಟ್ಟಿತ್ತು 'ಹೆಣ್ಣನ್ನು ಗಂಡನ್ನು ಸೃಷ್ಟಿಸಿದವ' ಎನ್ನುತ್ತದೆ. ದೇವರನ್ನು ಲಿಂಗಾತೀತವಾಗಿಸಿದ ಧರ್ಮ, ಸ್ತ್ರೀ ಸಮಾನತೆ ಪುರಾತನ ಧರ್ಮದ ನಿಲುವಾಗಿತ್ತೇನೋ"[37] ಎಂದು ಲೇಖಕಿ ತಿಳಿಸುವುದಲ್ಲದೆ "ಹಿಮವತ್ಪರ್ವತಗತಳು ಇನ್ಕಾಗಳ ಶಕ್ತಿಶಾಲಿ ದೈವಗಳಾಗಿದ್ದವು. ಹಿಮಾಲಯವನ್ನು ಕೈಲಾಸ ಪರ್ವತವೆಂದು ಪೂಜಿಸುವ ಭಾರತಕ್ಕೂ ಪೆರುವಿಗೂ ಎಷ್ಟು ಸಾಮ್ಯವಿದೆ ಎನಿಸಿತ್ತು"[38] ಎಂದಿದ್ದಾರೆ. ಈ ಸಂಸ್ಕೃತಿಯ ಹೋಲಿಕೆ ಮುಖ್ಯ. ಭಾರತೀಯರು ಅಮೆರಿಕಾವನ್ನು ಪಾತಾಳಲೋಕ ನಾಗಲೋಕ ಎನ್ನುತ್ತಿದ್ದರು.

"ಲೀಮಾ ಸಂಸ್ಕೃತಿಯಲ್ಲಿ ಸರ್ಪವನ್ನು, ಮೀನನ್ನು ದೇವರೆಂದು ಪೂಜಿಸುವುದು ಕಂಡಿತು. ಅವರ ಮಡಕೆ, ಕುಡಿಕೆಯ ಮೇಲೆ ತಳಿ ಹಾಕಿಕೊಂಡ ಸರ್ಪಗಳ ಚಿತ್ರ ಪದೇ ಪದೇ ಕಾಣಿಸುತ್ತಿದ್ದಾಗ, ಭಾರತದ ನಾಗರಕಲ್ಲುಗಳು ನೆನಪಾದವು. ವಿಶ್ವದಲ್ಲಿ ಪುರಾತನ ನಾಗರಿಕ ಸಂಸ್ಕೃತಿ ಎಲ್ಲೆಲ್ಲಿ ಇದ್ದವೋ ಅಲ್ಲೆಲ್ಲ ಈ ನಾಗಪೂಜೆಯ ರೂಢಿ ಇತ್ತು. ಲ್ಯಾಟಿನ್ ಅಮೆರಿಕ ಇದಕ್ಕೆ ಹೊರತಲ್ಲ"[39] ಎನ್ನುವ ಲೇಖಕಿ ಅನೇಕ ಸಂದರ್ಭಗಳಲ್ಲಿ ಸಂಸ್ಕೃತಿಗಳ ಸಾದೃಶ್ಯಗಳನ್ನು ಪರಿಶೀಲಿಸಿದ್ದಾರೆ.

ಲೀಮಾದ ಬಣ್ಣ ಬಣ್ಣದ ಇಂಡಿಯನ್ ಮಾರುಕಟ್ಟೆಗಳು ಲೇಖಕಿಯ ಕಣ್ಣಿಗೆ ಭಾರತದ ದಿಲ್ಲಿಯ ಜನಪತ್ ಅಂಗಡಿಗಳಂತೆ ವರ್ಣರಂಜಿತವಾಗಿ ಕಂಡಿವೆಯಲ್ಲದೆ ಅಲ್ಲಿನ ವಸ್ತುಗಳೆಲ್ಲ ಕೈಗೆಟಕುವ ಬೆಲೆಯವು ಎನ್ನುತ್ತಾರೆ. ಭಾರತೀಯ ಸಾಂಪ್ರದಾಯಿಕ ಉಡುಪಾದ ಸೀರೆ ಪಾಶ್ಚಿಮಾತ್ಯ ಹಿರಿಯ, ಕಿರಿಯರನ್ನು ಹೇಗೆ ಆಕಷಿಸುತ್ತದೆಂದು ತಿಳಿಸುತ್ತಾ, ಲೀಮಾದ 'ನ್ಯಾಷನಲ್ ಮ್ಯೂಸಿಯಂ'ಅನ್ನು ಲೇಖಕಿ ಮತ್ತು ಸ್ನೇಹಿತೆ ಮಾಲತಿ ವೀಕ್ಷಿಸುತ್ತಿದ್ದಾಗ, "ಓರ್ವ ತಂದೆ ತನ್ನ ಇಬ್ಬರು ಪುಟ್ಟ ಬಾಲಕರೊಡನೆ ಸುತ್ತಾಡುತ್ತಿದ್ದ. ನಮ್ಮನ್ನು ನೋಡಿದೊಡನೆ ಆತನ ಕಣ್ಣುಗಳು ಇಷ್ಟಗಲ ಹಿಗ್ಗಿದವು. ಅದರಲ್ಲೂ ಮಾಲತಿಯ ಮಾಸಲು ಬಣ್ಣದ ಮತ್ತು ಕಂದು ಬಣ್ಣದ ಸಿಂಥೆಟಿಕ್ ಸೀರೆ ಅದೇನು ಅದ್ಭುತದ್ದಾಗಿ ಕಂಡಿತೋ, 'ಇಂಡಿಯಾ ಇಂಡಿಯಾ' ಎಂದು ಉದ್ಗರಿಸಿ ಏನೆಲ್ಲ ಮಾತನಾಡಬಯಸಿದ. ಒಂದಕ್ಷರವೂ ಅರ್ಥವಾಗಲಿಲ್ಲ. ಆತ ಕ್ಯಾಮರಾ ಹೊರತೆಗೆದು 'ನಿಮ್ಮ ಪೋಟೋ ತೆಗೆಯಬಹುದೆ?' ಅಂಗಲಾಚಿದ. ನಾವು ಒಪ್ಪಿದೊಡನೆ ಸಂಭ್ರಮದಿಂದ ತನ್ನ ಮಕ್ಕಳನ್ನು ನಮ್ಮೊಡನೆ ನಿಲ್ಲಿಸಿ ಫೋಟೋ ತೆಗೆದುಕೊಂಡು 'ವಂದನೆ' ಹೇಳಿದ.

ಆ ಮಕ್ಕಳು ಮ್ಯೂಸಿಯಂನಲ್ಲಿರುವುದನ್ನು ನೋಡುವ ಬದಲು ನಮ್ಮನ್ನೇ ಮಿಕ ಮಿಕ ನೋಡುತ್ತಿದ್ದವು!"[40] ಎಂಬ ಲೇಖಕಿಯ ವಿವರಣೆಯಲ್ಲಿ ಕಾಲ, ದೇಶಗಳು ಎಷ್ಟೇ ಬದಲಾಗುತ್ತಾ ಮುಂದುವರೆಯುತ್ತಿದ್ದರೂ, ಭಾರತದ ಸೀರೆ ತನ್ನ ಅಸ್ಥಿತ್ವವನ್ನು, ಮಹತ್ವವನ್ನು ಉಳಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

**ಪ್ರೇಕ್ಷಣೀಯ ಸ್ಥಳಗಳು** : ಪೆರುವಿನ ಜನರ ನೇಯ್ಗೆ ಮತ್ತು ಚಿತ್ರಗಳ ನೈಪುಣ್ಯದ ಬಗೆಗೆ ಲೇಖಕಿ ತಿಳಿಸುತ್ತಾ, "ಪೆರುವಿನ ಜನ ನೇಯ್ಗೆ ಮಾಡುವುದರಲ್ಲಿ ಹಾಗೂ ಮಣ್ಣಿನ ಪಾತ್ರೆಗಳ ಮೇಲೆ ಚಿತ್ರ ಬಿಡಿಸುವುದರಲ್ಲಿ ಬಹಳ ನಿಪುಣರು. ಗೋರಿಯಲ್ಲಿ ಸಿಕ್ಕ ಆಗಿನ ಕಾಲದ ಬಟ್ಟೆಗಳನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದಾಗ ಅವರ ನೇಯ್ಗೆಯ ನೈಪುಣ್ಯ ಹೊರಬಿದ್ದಿತು" ಎಂದು ಕೂಲಂಕಷ ವಿವರ ನೀಡಿದ್ದಾರೆ. ಅವರ ಚಿತ್ರಗಳಲ್ಲಿ ಅದರಲ್ಲೂ ಕೋತಿ, ಜೇಡ, ಹಕ್ಕಿ ಇವೆಲ್ಲ ಚಿತ್ರಗಳ ಅರ್ಥವೇನು, ಬಹುಶಃ ಇದು ಚಿದಂಬರ ರಹಸ್ಯವಾಗಿಯೇ ಉಳಿಯಲಿದೆ. ವೈಜ್ಞಾನಿಕ ಕತೆಗಾರ ಆರ್ಥರ್ ಕ್ಲಾರ್ಕ್ ಹೇಳಿದ್ದರು– 'ಪೂರ್ವಿಕರು ಕತ್ತಲೆಯ ರಾತ್ರಿಯಲ್ಲಿ ಗ್ರಹ ನಕ್ಷತ್ರಗಳನ್ನು ನೋಡಿ, ಪ್ರಾಣಿ ಪಕ್ಷಿಗಳ ಆಕೃತಿಯನ್ನು ಕಲ್ಪನೆ ಮಾಡಿಕೊಳ್ಳುತ್ತಿದ್ದರು. ಸ್ವರ್ಗದಿಂದ ಕಾಣಬರುವ ಈ ಚಿತ್ರಗಳಿಗೆ ಉತ್ತರ ರೂಪವಾಗಿ ತಾವೂ ಒಂದಿಷ್ಟು ಚಿತ್ರಗಳನ್ನು ನಿರ್ಮಿಸಿರಬಹುದು' ಅಥವಾ ಇತ್ತೀಚೆಗೆ ನ್ಯಾಷನಲ್ ಜಿಯಾಗ್ರಫಿಯಲ್ಲಿ ತೋರಿದಂತೆ ಇವು ಧಾರ್ಮಿಕ ಆಚರಣೆಯ ಅಂಗವಾಗಿರಬಹುದು"[41] ಎಂದು ವೈಜ್ಞಾನಿಕ ಮಾಹಿತಿಯೊಂದಿಗೆ ವಿವೇಚಿಸಿದ್ದಾರೆ.–

ಆಂಡೀಸ್ ಪರ್ವತ ಶ್ರೇಣಿಗಳ ಗೆರೆ ಮತ್ತು ಚಿತ್ರಗಳ ಕುರಿತು ಲೇಖಕಿ ವಿವರಿಸುವ ಬಗೆ "ಆಂಡೀಸ್ ಪರ್ವತ ಶ್ರೇಣಿಗಳ ಇಳಿಜಾರಿನ ಕಣಿವೆಯ ಆಳದಲ್ಲೆಲ್ಲ ಸಮತಟ್ಟಿನ ಕಂದು ಬಣ್ಣದ ನೆಲ. ಈ ಕಂದು ನೆಲದಲ್ಲಿ ತಿಳಿಬಣ್ಣದಲ್ಲಿ ಎದ್ದು ಕಾಣುವ ಚಿತ್ರಗಳಿವು. ಎಲ್ಲಿಂದಲೋ ಹುಟ್ಟಿ, ಎತ್ತಲೋ ಬೊಟ್ಟು ಮಾಡುವ ನೂರಾರು ನೇರ ಗೆರೆಗಳಿವೆ. ಈ ಗೆರೆಗಳನ್ನು ನಿಖರವಾಗಿ ನೇರವಾಗಿ ಬರೆಯಲು ಅದೆಂತಹ ಗಮನ, ಜಾಗರೂಕತೆ ಮತ್ತು ಗಣಿತದ ಜ್ಞಾನ ಬೇಕಿತ್ತು! ಈ ಚಿತ್ರಗಳು ನೂರಾರು ವರ್ಷಗಳ ಕಾಲ ಸೃಷ್ಟಿಸುತ್ತಾ ಹೋದವು ಎಂಬ ಊಹೆ. 1500 ಅಡಿಗಳಷ್ಟು ಎತ್ತರದಿಂದ ನೋಡಿದರೂ ಸ್ಪಷ್ಟವಾಗಿ ಕಾಣುವ ಈ ಚಿತ್ರಗಳ ಬೃಹತ್ ಅಳತೆಯನ್ನು ಊಹಿಸಿಕೊಳ್ಳಬಹುದು. ಇವೆಲ್ಲವೂ ಮಾನವ ನಿರ್ಮಿತ ಅದ್ಭುತಗಳು"[42] ಎಂದು ಪ್ರಾಚೀನ ಕಲಾವೈಖರಿಯ ಕುರಿತು ಆಶ್ಚರ್ಯಾದ್ಭುತವನ್ನು ಅಭಿವ್ಯಕ್ತಿಸಿದ್ದಾರೆ.

ಚೌಚೀಲಾ ಸ್ಥಳದ ಮರಳಿನ ನೆಲದಲ್ಲಿ ತೆರೆದಿಟ್ಟ ಸಮಾಧಿಗಳ ಕುರಿತು ಹೇಳುತ್ತಾ, "ಅಚ್ಚ ಬಿಳಿಯ ಮೂಳೆಗಳು ಎಲ್ಲೆಲ್ಲೂ ಬಿದ್ದಿವೆ. ಈ ಸಮಾಧಿಗಳಲ್ಲಿ ಕೊಳೆಯದೆ, ಕೆಡದೆ, ಸುರಕ್ಷಿತವಾಗುಳಿದ ಮಮ್ಮಿಗಳು. ಈ ಶುಷ್ಕ ಹವಾಗುಣದಿಂದಾಗಿ ಮಮ್ಮಿಗಳು ಹಾಳಾಗದೆ ಉಳಿದಿವೆ. ಇಲ್ಲಿಯ ಅನೇಕಾನೇಕ ಗೋರಿಗಳನ್ನು ಗೋರಿಗಳ್ಳರು ಅದಾಗಲೆ ಲೂಟಿ ಮಾಡಿದ್ದಾರೆ. ಈ ಮಮ್ಮಿಗಳು ತೊಟ್ಟ ಬಟ್ಟೆಯ ಬಣ್ಣಗಳನ್ನು ಈಗಲೂ ಕೆಲವೆಡೆ ಗುರುತಿಸಬಹುದಿತ್ತು. ಮಮ್ಮಿಗಳ ಮೇಲೆ ಕೆಲವೆಡೆ ಕಟುವಾಗಿ ಒಣಗಿದ ಚರ್ಮವಿನ್ನೂ ಉಳಿದಿತ್ತು. ಕೆಲವು ಮಮ್ಮಿಗಳ ತಲೆಯಲ್ಲಿ ದಟ್ಟವಾದ ಉದ್ದನೆಯ ಕಪ್ಪು ಕೂದಲು ಜಟೆಗಟ್ಟಿತ್ತು. 'ನಮಗೀ ವಯಸ್ಸಿಗೆ ತಲೆಯೆಲ್ಲ ಅರ್ಧ ಬೋಳಾಗಿದೆ, ಬೆಳ್ಳಗಾಗಿದೆ. ಸಾವಿರ ವರ್ಷವಾದರೂ ಎಷ್ಟು ಕೂದಲು ಇದೆ ನೋಡಿ' ಎಂದು ಲೇಖಕಿ ಮತ್ತು ಗೆಳತಿ ಮಾಲತಿಯವರು ಪರಸ್ಪರ ಹಲುಬಿಕೊಂಡೆವು."[43] ಎಂಬ ಮಾಹಿತಿಯಲ್ಲಿ ಆಧುನೀಕರಣದ ಶೀತಲಯಂತ್ರಗಳ ಪರಿಣಾಮವನ್ನು ಪ್ರಕೃತಿ ಚೌಚೀಲಾ ಪ್ರದೇಶಗಳಿಗೆ ಉಚಿತವಾಗಿ ನೀಡಿರುವುದನ್ನು ನೋಡಬಹುದು.

ನಾಸ್ಕಾದಲ್ಲಿನ ಅತ್ಯದ್ಭುತ ರಹಸ್ಯ ಗೆರೆಗಳ ಉಳಿವಿಗೆ ಕಾರಣವೇ 'ಮರಿಯ' ಎನ್ನುತ್ತಾ, "ಜಗತ್ತಿನ ಗಮನವನ್ನು ಇವುಗಳತ್ತ ಸೆಳೆದಳು. ಸರಕಾರದ ಉದಾಸೀನದಿಂದ ಖಾಸಗಿ ಸ್ವತ್ತಾಗಿ ಹಾಳಾಗುತ್ತಿದ್ದ ಚಿತ್ರಗಳನ್ನು ಉಳಿಸಿದಳು. ಈಕೆ ಕೇವಲ ವಿಜ್ಞಾನಿಯಾಗಿ ಉಳಿಯಲಿಲ್ಲ. ಪೆರುವಿಗರ ಇತಿಹಾಸವನ್ನು ಕಾದಿರಿಸಲು ಈಕೆ ನಡೆಸಿದ ಏಕಾಂಗಿ ಹೋರಾಟಕ್ಕೆ ಸಮನಾದ ಹೋರಾಟವನ್ನು ಬಹುಶ: ಇಪ್ಪತ್ತನೇ ಶತಮಾನದ ಇತಿಹಾಸದಲ್ಲಿ ನಾವು ಕಂಡಿಲ್ಲ. ಇಂಥ ಮರಿಯಾಳನ್ನು ಜಗತ್ತು 'ದಿ ಲೇಡಿ ಆಫ್ ದಿ ಲೈನ್' ಎಂದೇ ಗುರುತಿಸಿತು. ಆಕೆಯ ಜ್ಞಾನ, ಸಂಶೋಧನೆ, ನಾಸ್ಕಾ ಗೆರೆಗಳನ್ನು ಕುರಿತು ಮಾತ್ರವಲ್ಲ, ಖಗೋಳಶಾಸ್ತ್ರ, ಜಾಮಿತಿ, ಪುರಾತತ್ವಶಾಸ್ತ್ರ, ಪ್ರತಿಮಾಶಿಲ್ಪ (Ethnography), ಮಾನವ ಕುಲಶಾಸ್ತ್ರ (Iconography) ರಂಗಗಳಲ್ಲಿ ಸಂಶೋಧನೆಯ ಅನಂತ ಸಾಧ್ಯತೆಗಳನ್ನು ತೆರೆದಿದೆ. 1994ರಲ್ಲಿ 'ಯುನೆಸ್ಕೋ' ನಾಸ್ಕಾ ಚಿತ್ರಗಳನ್ನು 'ವರ್ಲ್ಡ್ ಕಲ್ಚರ್ ಹೆರಿಟೇಜ್' ಎಂದು ಘೋಷಿಸಿತು. ಇದಕ್ಕೆ ಕೇವಲ ಮರಿಯಾಳ ಪ್ರಯತ್ನ ಕಾರಣವಾಗಿತ್ತು"[44] ಎಂದು ಮರಿಯಾಳ ಅತ್ಯಪೂರ್ವ ಅಸಾಮಾನ್ಯ ಸಾಧನೆಯನ್ನು ಮನದುಂಬಿದ ಮಾತುಗಳಿಂದ ಬಣ್ಣಿಸುವ ಲೇಖಕಿ ನಾಸ್ಕಾ ಊರು ಸಹ ಈಕೆಯನ್ನು ಹೇಗಿ ಚಿರಸ್ಥಾಯಿಗೊಳಿಸಿದೆ ಎಂಬುದನ್ನೇಳುತ್ತಾ, "ನಾಸ್ಕಾ ಪಾರ್ಕಿನ ಬದಿಗೆ, ಮರಿಯಾ ರೇಕಿಯ ಎತ್ತರದ ಮೂರ್ತಿ ಕಂಡಿತು. ಕೈಗಳೆರಡನ್ನು ತೆರೆದು ಆಕಾಶದತ್ತ ಎತ್ತಿ ನಿಂತ ಭಂಗಿ. ಆ ಮೂರ್ತಿಯ ಎದುರು ನಾಸ್ಕಾ ಗೆರೆಗಳ ಚಿತ್ರಗಳನ್ನು ಕಬ್ಬಿಣದ ಕಂಬಿಯಲ್ಲಿ ಬಿಡಿಸಿ ನಿಲ್ಲಿಸಿದ್ದರು. ಹಾಗೆಯೇ ಊರು ಅಲೆವಾಗ,

ಮರಿಯಾ ರೇಕಿಯ ಹೆಸರು ಹೊತ್ತ ರಸ್ತೆ ಕಂಡಿತು. ರಸ್ತೆಯ ಆರಂಭದಲ್ಲಿ ಆಕೆಯ ಮೂರ್ತಿಯನ್ನು ಇಟ್ಟಿದ್ದನ್ನು"[45] ನೋಡಿದ ಲೇಖಕಿಗೆ ನಾಸ್ಕಾ ಊರು ಮರಿಯಾಗೆ ತನ್ನ ಕೃತಜ್ಞತೆಯನ್ನು ಎಷ್ಟು ವಿಧದಲ್ಲಿ ತ್ತೋರಿಸಿತ್ತು ಎಂದು ಅರಿವುಂಟಾಗಿ ಆಶ್ಚರ್ಯವನ್ನು ಮೂಡಿಸಿದೆ.

ಇನ್ಕಾಗಳ 'ಕಳೆದುಹೋದ' ಭವ್ಯನಗರ ಮಾಚುಪಿಚುವನ್ನು ಲೇಖಕಿ ವರ್ಣಿಸುವ ಪರಿ; "ಸುತ್ತಲೂ ಒತ್ತೊತ್ತು ಪರ್ವತಗಳು ಮುಗಿಲಿಗೆ ತಲೆಯೆತ್ತಿ ನಿಂತಿವೆ. ಹೊರಗಿನ ಲೋಕಕ್ಕೆ ತಡೆಒಡ್ಡಿ, ಮಾಚುಪಿಚುವನ್ನು ತಮ್ಮ ಸೆರಗಿನಲ್ಲಿ ರಕ್ಷಿಸಿ ಕಾದಿವೆ. ಮಾಚುಪಿಚು ನಗರ ಎರಡು ಪರ್ವತ ಶಿಖರಗಳ ನಡುವೆ ತೂಗಿದ ತೊಟ್ಟಿಲಲ್ಲಿದೆ. ಕಾವಲು ನಿಂತ ಪರ್ವತ ಶಿಖರಗಳ ನಡುವೆ ಸುರಕ್ಷಿತವಾಗಿ ಉಳಿದ ಮಾಚುಪಿಚು. ರಹಸ್ಯ ರೋಮಾಂಚನದ ನಗರ. ಎರಡೂ ಪಕ್ಕಕ್ಕೂ ಆಳದ ಕಣಿವೆಗಳು. ಒಂದು ಕಡೆ ಉರುಬಂಬಾ ಎಂಬ ಮೋಹಕ ನದಿ ಆಳವಾದ ಇಕ್ಕಟ್ಟು ಕಣಿವೆಯನ್ನು ಕೊರೆದು ಹಾವಿನಂತೆ ಹರಿಯುತ್ತಿದ್ದಾಳೆ ಇದರ ಮುಂದೆ ಅಮೆರಿಕಾದ 'ಗ್ರಾಂಡ್ ಕ್ಯಾನಿಯನ್ ಕೂಡಾ ಎಷ್ಟು ಸಪ್ಪೆಯಾಗಿ ಕಂಡಿತು"[46] ಎನ್ನುತ್ತಾ ಪುಳಕಿತಗೊಂಡಿದ್ದಾರೆ.

ಮಾಚುಪಿಚುವಿನ ಆರ್ಕಿಡ್ ಹೂಗಳ ದಂತಕಥೆಯನ್ನು ಲೇಖಕಿ ಹೀಗೆ ಹೇಳುತ್ತಾರೆ. "ಕೆಚುವಾ ಭಾಷೆಯಲ್ಲಿ ಆರ್ಕಿಡ್ ಎಂದರೆ 'ವಕಾಂಕಿ' ಅಥವಾ 'ನೀ ಅಳುವೆ' ಎಂದು. ಒಬ್ಬ ರಾಜಕುಮಾರಿ ಮತ್ತು ಸಾಮಾನ್ಯ ಸೈನಿಕನ ಪ್ರೀತಿಯ ವಿಷಯ ದೊರೆಗೆ ತಿಳಿದು, ಸೈನಿಕನಿಗೆ ಮರಣದಂಡನೆ ವಿಧಿಸುತ್ತಾನೆ. ರಾಜಕುಮಾರಿ ಪ್ರಿಯಕರನಾದ ಸೈನಿಕನ ಪ್ರಾಣದಾನವನ್ನು ಬೇಡಿದಾಗ, ಮರಣದಂಡನೆಗೆ ಬದಲಾಗಿ ದುರ್ಗಮಕಾಡಿಗೆ ಗಡಿಪಾರು ಮಾಡುತ್ತಾನೆ. ರಾಜಕುಮಾರಿ ಸೈನಿಕನ ಹಿಂದೆ ಅಳುತ್ತಳುತ್ತಾ ಓಡಿದಾಗ ಕಂಬನಿ ಬಿದ್ದೆಡೆಯಲ್ಲೆಲ್ಲ ಸುಂದರವಾದ ಆರ್ಕಿಡ್ ಹೂಗಳು ಹುಟ್ಟಿದವಂತೆ ಎಂಬ ದಂತಕತೆಯನ್ನು ಬಿತ್ತರಿಸುತ್ತಲೇ ಯಾವ ದೇಶ, ಖಂಡ, ಕಾಲವಾದರೇನು? ಪ್ರೀತಿಯ ಕತೆಗಳು ಸದಾ ಮೋಹಕ" ಎನ್ನುತ್ತಾರೆ. ಇದು *ಭಾರತೀಯ ದಂತಕತೆಗಳಂತೆ ಜಾನಪದ ಕತೆ 'ಮರವಗುವ ಹೂ ಹುಡುಗಿ' ಕತೆಯನ್ನು ಜ್ಞಾಪಿಸುತ್ತದೆ. (* ಜಗತ್ತಿನ ಜಾನಪದ ಕತೆಗಳು, ಅನು: ಡಾ. ಕರೀಗೌಡ ಬೀಚನಹಳ್ಳಿ)

ಅಮೆಜಾನ್‌ಅನ್ನು ಸಂಜೆಯಲ್ಲಿ ಕಂಡು ಭಾವ ಪರವಶರಾಗುವ ಲೇಖಕಿ "ಕತ್ತಲು ಗರ್ಭದಲ್ಲಿ ಈ ಅಮೆಜಾನ್ ತಟದಲ್ಲಿ ಕಾಲ ತಟಸ್ಥವಾಗಿ ನಿಂತ ಈ ಹೊತ್ತು ಲೇಖಕಿಗೆ ರೋಮಾಂಚಕವಾಗಿ ಕಂಡಿದೆ. ಮತ್ತೊಂದು ಕಾಲ, ಆಯಾಮಕ್ಕೆ ಇಳಿದಂತಹ ವಿಚಿತ್ರ ಮನಸ್ಥಿತಿ. ಇವರ ಕಣ್ಣೆದುರು ಸೂರ್ಯ

ಹುಟ್ಟಲಿದ್ದ ಅಮೆಜಾನ್‌ನ ವಿಶಾಲ ಹರವಿನ ಆ ತುದಿಗೆ. ಬೆಳಗಿನ ಸಮಯದ ಮೌನ, ನಿಶಬ್ದ, ನಿರುದ್ವೇಗ, ನಿರಾತುರ, ಸಾವಧಾನವಾಗಿ ಕಾದ ಜನ, ಎಲ್ಲವೂ ಮನಸ್ಸನ್ನು ಶಾಂತಗೊಳಿಸುವಂತಿತ್ತು. ಕಡು ಕಪ್ಪಿನಿಂದ ಕೊಂಚ ನೀಲವಾಗುತ್ತಿದ್ದ ಆಕಾಶ, ಮೆಲ್ಲನೆ ಕತ್ತಲಿಗೆ ಕಣ್ಣು ಬಂದು ಅಸ್ಪಷ್ಟವಾಗಿ ಕಾಣತೊಡಗಿದ ಅಮೆಜಾನ್"[47] ಎಂದು ಬೇರೊಂದು ಲೋಕಕ್ಕೆ ತೇಲಿದಂತಿದೆ.

ಅಮೆಜಾನ್ ನದಿ ನೀರಿನ ಅಘಾದ ಪ್ರಮಾಣದ ಬಗ್ಗೆ "ಆಫ್ರಿಕಾದ ಜೀವನದಿ ನೈಲ್ ಬಿಟ್ಟರೆ, ಜಗತ್ತಿನ ಅತಿ ಉದ್ದನೆಯ ನದಿ ಅಮೆಜಾನ್. ಆದರೆ ಅಮೆಜಾನ್‌ನಲ್ಲಿ ಹರಿಯುವಷ್ಟು ನೀರಿನ ಪ್ರಮಾಣ ನೈಲ್‌ನಲ್ಲಿಲ್ಲ. ಈ ರಭಸ ನೈಲ್‌ಗೆಲ್ಲಿ? ನಮಗೆ ನದಿಯ ಪ್ರವಾಹದ ರಭಸ ಅನುಭವಕ್ಕೇ ಬರುತ್ತಿರಲಿಲ್ಲ. ಕಾರಣ ಪ್ರವಾಹದೊಡನೆ ನಾವು ಹರಿಯುತ್ತಿದ್ದೆವು. ಇದೆಂತಹ ರಾಕ್ಷಸ ಗಾತ್ರದ ನದಿ. ಜಗತ್ತಿನ ಎಲ್ಲ ನದಿಗಳೂ ಸಮುದ್ರಕ್ಕೆ ಸುರಿಯುವ ನೀರಿನ ಶೇಕಡಾ ಇಪ್ಪತ್ತರಷ್ಟು ಭಾಗ ಅಮೆಜಾನ್ ಒಂದೇ ಸುರಿಯುತ್ತದೆ. ಈ ನದಿಗೆ ಸಾವಿರಾರು ಮೈಲಿ ಹರಿದು ಸೇರುವ ದೊಡ್ಡ ಉಪ ನದಿಗಳೂ ಎಷ್ಟೋ ಇವೆ"[48] ಎಂದು ಲೇಖಕಿ ತಮ್ಮ ಅನುಭವವನ್ನು ಪರಿಣಾಮಕಾರಿಯಾಗಿ ಹಂಚಿಕೊಳ್ಳುತ್ತಾರೆ.

ಬ್ರಜಿಲ್ ಕುರಿತು "ವಿಶಾಲವಾದ ಈ ಬ್ರಜಿಲ್ ದೇಶದಲ್ಲಿ, ನಮ್ಮ ಭೂಗ್ರಹದ ಅತ್ಯಂತ ಫಲವತ್ತಾದ ನೆಲವಿದೆ. ವಿಪರ್ಯಾಸವೆಂದರೆ, ಹೀಗಿದ್ದೂ ಬಹುರಾಷ್ಟ್ರೀಯ ಬಯೋಟೆಕ್ ಕಂಪನಿಗಳು, ಇಲ್ಲಿಯ ರೈತರಿಗೆ ವಂಶವಾಹಿ ಪರಿವರ್ತನೆಯಿಂದ ಹೊರತಂದ 'ಜಿನಿಟಿಕಲಿ ಮಾಡಿಫೈಯ್ಡ್' ಬೀಜಗಳನ್ನು ಮಾರಲು ತವಕಿಸುತ್ತಿವೆ. ಇಂದು ಸಹಜ ಸೋಯಾ ಬೀಜಗಳನ್ನು ಅತ್ಯಂತ ಹೆಚ್ಚು ರಫ್ತು ಮಾಡುವ ದೇಶವಾಗಿರುವ ಬ್ರಜಿಲ್‌ನ ಸ್ಥಾನ ಕೂಡಾ ಪಲ್ಲಟವಾಗುತ್ತದೆ. ಇಲ್ಲಿಯವರೆಗೂ ಬ್ರಜಿಲ್ 'ಜಿ.ಎಮ್'. ಬೀಜಗಳಿಗೆ ಹಾಕಿದ್ದ ನಿಷೇಧವನ್ನು ತೊಡೆದು ಜಿ.ಎಮ್. ಬೀಜಗಳನ್ನು ತೆಗೆದುಕೊಳ್ಳಲು ಒತ್ತಡ ಏರಿ ಬರುತ್ತಿದೆ. ಬ್ರಜಿಲ್‌ನಂತಹ ಫಲವತ್ತಾದ, ಪ್ರಕೃತಿ ಶ್ರೀಮಂತಿಕೆಯ ದೇಶಕ್ಕೇಕೆ ಜಿ.ಎಮ್. ಬೇಕು ಅನಿಸುತ್ತದೆ. 'ಕಡಿಮೆ ಬಂಡವಾಳ, ಯಥೇಚ್ಛ ಲಾಭ' ಎಂಬ ಮಾರಾಟದ ಹುನ್ನಾರಿಗೆ ಬ್ರಜಿಲ್ ಮಣಿಯಬಹುದು"[49] ಎಂದು ಲೇಖಕಿ ಆತಂಕಪಡುತ್ತಲೇ ಬ್ರಜಿಲ್ ಜಿ.ಎಮ್. ಬಳಸಿದರೆ ಅಮೆಜಾನ್ ಪರಿಸರದ ಪರಿಶುದ್ಧತೆ ಹಾಳಾಗುವುದರೊಂದಿಗೆ, ಆ ಕಾಡಿನ ಮೇಲೆ ಅವಲಂಬಿರಾಗಿರುವ ಮೂಲನಿವಾಸಿಗಳು, ಇತಿಹಾಸಪೂರ್ವ ಜೀವಿಗಳ ಅಸಮತೋಲಗೊಳ್ಳುವ ಕುರಿತು ಬೆಳಕು ಹರಿಸುತ್ತಾರೆ.

[illegible]

ಅಮೆಜಾನ್ ಮೂಲನಿವಾಸಿಗಳ ಜನಜೀವನವನ್ನು ಲೇಖಕಿ ಹೀಗೆ ಹಿಡಿದಿಡುತ್ತಾ, "ಅಮೆಜಾನ್ ನದಿ ಜನರ ಬಡತನ ಅವರು ಉಟ್ಟ ಬಟ್ಟೆಯಲ್ಲಿ ಕಾಣುತ್ತಿತ್ತು. ಹಲಗೆಯ ತುಂಡು, ಈಚಲು ಹೊದಿಕೆಯ ಮನೆಗಳಲ್ಲಿ ದಾರಿದ್ರ್ಯವಿತ್ತು. ಅದರ ನಡುವೆಯೇ ಮುಖದ ತುಂಬಾ ಹಿಗ್ಗಿದ ಮುಗುಳ್ನಗೆ, ಪ್ರಸನ್ನತೆ, ಜೀವನೋತ್ಸಾಹ. ಇಲ್ಲಿಯ ಬದುಕು ಬೆಳಗ್ಗೆ ನಾಲ್ಕು ಗಂಟೆಗೆ ಸೀಮೇಎಣ್ಣೆ ದೀಪದ ಬೆಳಕಲ್ಲಿ ಆರಂಭವಾಗುತ್ತದೆ. ಹೆಂಗಸರು ಮಾಡಿಕೊಟ್ಟ ಗಂಜಿಯಂತಹ ಪೇಯ ಕುಡಿದು ಗಂಡಸರು ಮೀನು ಹಿಡಿಯಲು, ಬೇಟೆಯಾಡಲು ಹೋಗುತ್ತಾರೆ. ಬೇಟೆಗೆ ಹಲವು ದಿನ, ವಾರ ಹಿಡಿಸುವುದೂ ಉಂಟು. ದಟ್ಟ ಅಮೆಜಾನ್ ಕಾಡಿನೊಳಗೆ ಹೋಗುವುದುಂಟು. ಇಗ್ವಾನಾ, ಜಿಂಕೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡಿ, ಕಾಡಿನಲ್ಲೇ ಮಾಂಸ ಕೆಡದಂತೆ 'ಸ್ಮೋಕ್' ಮಾಡಿ ತರುತ್ತಾರೆ"[50] ಎಂದು ತಿಳಿಸುತ್ತಲೇ "ಅಮೆಜಾನ್ 'ನೇಟಿವ್' ಸ್ತ್ರೀಯರೆಲ್ಲ ಸೊಂಟದ ಮೇಲೆ ನಗ್ನ. ಅದರ ಕೆಳಗೆ ಒಂದು ಕೆಂಪು ವಸ್ತ್ರ ಸುತ್ತಿಕೊಂಡಿದ್ದರು. ಗಂಡಸರು, ಸೊಂಟದ ಕೆಳಗೆ ಹುಲ್ಲಿನ ಲಂಗ ತೊಟ್ಟಿದ್ದರು"[51] ಎಂದು ಅವರ ಸ್ವರೂಪ, ಲಕ್ಷಣ, ವೃತ್ತಿ, ಬದುಕನ್ನು ವಿವರಿಸುವುದರೊಂದಿಗೆ ಅವರ ಕಲಾಕೌಶಲ್ಯಗಳು, ನಾಟಿ ವೈದ್ಯ ಪದ್ಧತಿಗಳ ಜ್ಞಾನ ಮೊದಲಾವುಗಳನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ.

ಒಟ್ಟಾರೆ ಲೇಖಕಿ ತಮ್ಮ ಬೆಂಗಳೂರಿನ ಒತ್ತಡದ ಬದುಕಿಗೆ ಹೊರತಾದ ಪ್ರವಾಸದ ಸ್ವಾನುಭವಗಳನ್ನು ಕುರಿತು "ಕ್ಷಣ ಕ್ಷಣವೂ ಹೊಸ ಊರು, ತಾಣ, ಜನ, ಜೀವನ, ಅನುಭವಗಳನ್ನು, ರೋಮಾಂಚನಗಳನ್ನು ಬಾಚಿಕೊಂಡು ಹೊರಡು, ದಿನಗಳು ಕಳೆದದ್ದೇ ತಿಳಿದಿರಲಿಲ್ಲ"[52] ಎಂಬ ಅವರ ಮಾತಿನಿಂದ ಅವರ ಈ ಪ್ರವಾಸ ಅವರಿಗೆಷ್ಟು ಚಿರಸ್ಮರಣೀಯವಾಗಿದೆ ಎಂಬುದನ್ನು ಅರಿಯಬಹುದು.

**ಕೊನೆ ಟಿಪ್ಪಣಿ :**

1. ಪಿಹೆಚ್.ಡಿ., ಮಹಾಪ್ರಬಂಧ, ಪ್ರವಾಸ ಸಾಹಿತ್ಯ: ಸ್ತ್ರೀಯರ ಸಂವೇದನೆ ಸ್ವರೂಪಗಳು, ಅನುರಾಧ, ಮಾರ್ಗದರ್ಶಕರು ಸಿದ್ಧಲಿಂಗಯ್ಯ ಪುಟ 158.
2. ಅಂಗೈನಲ್ಲಿ ಯೂರೋ ಅಮೇರಿಕ–1984, ಡಾ॥ ಅನುಪಮ ನಿರಂಜನ, ಪುಟ 101.
3. ಅಂಗೈನಲ್ಲಿ ಯೂರೋ ಅಮೇರಿಕ–1984, ಡಾ॥ ಅನುಪಮ ನಿರಂಜನ, ಪುಟ 144.
4. ಅಂಗೈನಲ್ಲಿ ಯೂರೋ ಅಮೇರಿಕ–1984, ಡಾ॥ ಅನುಪಮ ನಿರಂಜನ, ಪುಟ 141.
5. ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ–2004, ಪಾರ್ವತಮ್ಮ ಮಹಾಲಿಂಗಶೆಟ್ಟಿ, ಪುಟ 72.
6. ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ–2004, ಪಾರ್ವತಮ್ಮ ಮಹಾಲಿಂಗಶೆಟ್ಟಿ, ಪುಟ 95.
7. ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ–2004, ಪಾರ್ವತಮ್ಮ ಮಹಾಲಿಂಗಶೆಟ್ಟಿ, ಪುಟ 5 ಮೊದಲ ಮಾತು.
8. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ್, ಪುಟ 325.
9. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ಎಸ್. ವಿದ್ಯಾಶಂಕರ್, ಪುಟ 326.
10. ನಾನು ಮತ್ತು ಅಮೇರಿಕಾ–1971, ಶ್ರೀಮತಿ. ಲಲಿತ ಸುಬ್ಬರಾವ್, ಪುಟ 5.
11. ನಾನು ಮತ್ತು ಅಮೇರಿಕಾ–1971, ಶ್ರೀಮತಿ. ಲಲಿತ ಸುಬ್ಬರಾವ್, ಪುಟ 21.
12. ನಾನು ಮತ್ತು ಅಮೇರಿಕಾ–1971, ಶ್ರೀಮತಿ. ಲಲಿತ ಸುಬ್ಬರಾವ್, ಪುಟ 45.
13. ಅದ್ಭುತ ಅಮೇರಿಕ ಮತ್ತು ಅನ್ಯ ರಾಷ್ಟ್ರಗಳಲ್ಲಿ–2000, ಪ್ರೊ॥ ಕೆ.ರಾಜೇಶ್ವರಿ ಗೌಡ, ಪುಟ 40.
14. ಅದ್ಭುತ ಅಮೇರಿಕ ಮತ್ತು ಅನ್ಯ ರಾಷ್ಟ್ರಗಳಲ್ಲಿ–2000, ಪ್ರೊ॥ ಕೆ.ರಾಜೇಶ್ವರಿ ಗೌಡ, ಪುಟ 50.
15. ಯೂರೋ ಅಮೇರಿಕಾದ ಇಣುಕುನೋಟ–ದೇವಕಿ ಮೂರ್ತಿ, ಪುಟ 102.
16. ಉತ್ತರ ಅಮೇರಿಕಾದಲ್ಲಿ ಚಾತುರ್ಮಾಸ್ಯ–2000, ಲಲಿತಾ ಶಾಸ್ತ್ರಿ, ಪುಟ 48.
17. ವಿದೇಶ ಪ್ರವಾಸ–2001, ಆರ್ಯಾಂಬ ಪಟ್ಟಾಭಿ, ಪುಟ 7.
18. ವಿದೇಶ ಪ್ರವಾಸ–2001, ಆರ್ಯಾಂಬ ಪಟ್ಟಾಭಿ, ಪುಟ 21.
19. ಪಡುವಣದ ಪತ್ರಮಾಲೆ–1990, ಸುಶೀಲಾ ಕೊಪ್ಪರ, ಮುನ್ನುಡಿ–ಪುಟ 6.
20. ಸುವರ್ಣ ಮಧುಚಂದ್ರ–1988, ರಾಜಾಮಣಿ ನಾಗರಾಜರಾವ್, ಪುಟ 119–120.
21. ಸುವರ್ಣ ಮಧುಚಂದ್ರ–1988, ರಾಜಾಮಣಿ ನಾಗರಾಜರಾವ್, ಪುಟ 136.
22. ಸುವರ್ಣ ಮಧುಚಂದ್ರ–1988, ರಾಜಾಮಣಿ ನಾಗರಾಜರಾವ್, ಪುಟ 137–138.
23. ಸುವರ್ಣ ಮಧುಚಂದ್ರ–1988, ರಾಜಾಮಣಿ ನಾಗರಾಜರಾವ್, ಪುಟ 160.
24. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 10.
25. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 17.

26. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ,ಪುಟ 26.
27. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 27.
28. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 49–50.
29. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 71.
30. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 144.
31. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 188.
32. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 20.
33. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 20.
34. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 151.
35. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 145.
36. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 105.
37. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 107.
38. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 128.
39. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 24.
40. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 147.
41. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 48.
42. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 57.
43. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 55.
44. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 68.
45. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 72.
46. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 131.
47. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 155–156.
48. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 157–158.
49. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 170.
50. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 194.
51. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 202.
52. ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನೇಮಿಚಂದ್ರ, ಪುಟ 169.

* * *

# ಅಧ್ಯಾಯ – 7

## ಆಯ್ದ ಅಮೇರಿಕ ಪ್ರವಾಸ ಕಥನಗಳ ಆನ್ವಯಿಕ ವಿಮರ್ಶೆ

## ಆಯ್ದ ಅಮೇರಿಕ ಪ್ರವಾಸ ಕಥನಗಳ ಆನ್ವಯಿಕ ವಿಮರ್ಶೆ

**ನಾನು ಕಂಡ ಅಮೇರಿಕೆ–ಡಾ॥ರಾ.ಯ.ಧಾರವಾಡಕರ್ :**

ಡಾ॥ರಾ.ಯ. ಧಾರವಾಡಕರ್ ಕ್ರಿ.ಶ.1964, 1983, 1987ರಲ್ಲಿ ಅಮೇರಿಕೆಯನ್ನು ಸಂದರ್ಶಿಸಿದರು. ಮೊದಲನೇ ಸಲ ಫುಲ್‌ಬ್ರೈಟ್ ಪ್ರವಾಸಿಯಾಗಿ ಮೂರು ತಿಂಗಳ ಕಾಲ, ಎರಡನೆಯ ಸಲ ಆರು ತಿಂಗಳ ಕಾಲ, ಮೂರನೆಯ ಸಲ ಸುಮಾರು ಒಂದು ವರ್ಷ ಕಾಲ ಈ ಮೂರನೆಯ ಅವಧಿಯಲ್ಲಿ ಪಡೆದ ಅನುಭವಗಳನ್ನು ವಿವರಿಸಿದ್ದಾರೆ.

ಅಮೇರಿಕದ ಕೆನಡಿ ವಿಮಾನ ನಿಲ್ದಾಣದಿಂದ ನೆವಾರ್ಕ ನಿಲ್ದಾಣಕ್ಕೆ ಕರೆದೊಯ್ದ ರಿಚರ್ಡನನ್ನು ಲೇಖಕರು 'ತುಂಬಾ ಉಪಕಾರ ಮಾಡಿದೆ ಥ್ಯಾಂಕ್ಸ್' ಎಂದು ಅಭಿನಂದಿಸಿದಾಗ ಅದಕ್ಕೆ ಅವನು "No thanks in words, say it with dollors. Give me five dollars for thanks" ಎಂದನಂತೆ ಈ ಡಾಲರ್ ಥ್ಯಾಂಕ್ಸ್ ಅಮೇರಿಕಾ ನೆಲದ ಮೇಲಿನ ಮೊದಲ ಅನುಭವ ಲೇಖಕರದಾಗಿದೆ.

ಅಮೇರಿಕೆಯಲ್ಲಿ ಯಾವುದೇ ಊರನ್ನು ಸಂದರ್ಶಿಸಿದಾಗ ಅಲ್ಲಿಯ ಸ್ಥಳೀಯ ಕಾನೂನುಗಳನ್ನು ಅರಿತುಕೊಳ್ಳುವುದು ಉಪಯುಕ್ತ ಎನ್ನುತ್ತಾರೆ. ಸೌಥ್ ಕೆರೊಲೈನಾ ರಾಜ್ಯದ ಸ್ಥಳೀಯ ಕಾನೂನುಗಳನ್ನು ಉದಾಹರಣೆ ಮೂಲಕ ತಿಳಿಸುತ್ತಾರೆ. ಅಲ್ಲಿ ಇಪ್ಪತ್ತೊಂದು ವರ್ಷದ ಒಳಗಿನವರು ಮಾದಕ ಪಾನೀಯಗಳನ್ನು ಕುಡಿಯುವಂತಿಲ್ಲ. ಶನಿವಾರ ಮಧ್ಯರಾತ್ರಿಯಿಂದ ಮೊದಲುಗೊಂಡು ಸೋಮವಾರ ಮುಂಜಾವಿನವರೆಗೆ ಎಲ್ಲಿಯೂ ಮಾದಕ ಪಾನೀಯಗಳನ್ನು ಕೊಡುವುದಿಲ್ಲ. ಅಲ್ಲಿನ ರಾಜಮಾರ್ಗಗಳಲ್ಲಿ ಹೋಗುವಾಗ ಬೀರ್, ವೈನ್ ಇಲ್ಲದೆ ಯಾವುದೇ ಮಾದಕ ಪಾನೀಯವನ್ನು ಕಾರುಗಳಲ್ಲಿ ಖುಲ್ಲಾ ಮಾಡಿ ಒಯ್ಯುವಂತಿಲ್ಲ. ಹಾಗೆ ಒಯ್ದರೆ ಅಪರಾಧ, ನಾರ್ಥ್ ಕ್ಯಾರೊಲೈನಾ, ಸೌಥ್ ಕೆರೊಲೈನಾ, ಲೂಸಿಯಾನಾ ಈ ರಾಜ್ಯಗಳಲ್ಲಿ ಬೈಬಲ್ ಬೆಲ್ಟ ಜಾರಿಯಲ್ಲಿದೆ. ಅಂದರೆ ಇಲ್ಲಿ ಧರ್ಮದ ಹಿಡಿತ ಬಹಳಷ್ಟಿದೆ. ಇದರಿಂದಾಗಿ ಈ ಕಾನೂನುಗಳು ಜಾರಿಯಲ್ಲಿದ್ದು ಪಾಲಿಸುವಂತಾಗಿದೆ ಎನ್ನುತ್ತಾರೆ.

ಅಮೇರಿಕೆಗೆ ಬಂದಿರುವ ಭಾರತೀಯರು ಸಾಮಾಜಿಕವಾಗಿ, ಆರ್ಥಿಕವಾಗಿ ಮುನ್ನುಗ್ಗುತ್ತಿರುವುದು ತುಂಬಾ ಅಭಿಮಾನದ ವಿಷಯ. ಇಂದು ಅಮೇರಿಕೆಯಲ್ಲಿರುವ ಭಾರತೀಯರು ಎರಡನೆಯ ಅತ್ಯಂತ

ಶ್ರೀಮಂತ ಜನಾಂಗಿಕ ಅಲ್ಪಸಂಖ್ಯಾತರು. ಭಾರತೀಯರು ಬರೀ ಮಾಚೆಲ್ಲುಗಳು ಹಾಗೂ ಇಂಡಿಯನ್ ಗ್ರೋಸರಿಗಳಲ್ಲಿ ಮಾತ್ರವಲ್ಲ, ಅವರು ಅನೇಕ ಬೌದ್ಧಿಕ ಕ್ಷೇತ್ರಗಳಲ್ಲಿಯೂ ಅತ್ಯುನ್ನತ ಸ್ಥಾನಗಳಲ್ಲಿದ್ದಾರೆ. ವಿಜ್ಞಾನಿಗಳು, ಡಾಕ್ಟರರು, ಎಂಜಿನಿಯರು, ಆಡಳಿತಗಾರರು, ಪ್ರೊಫೆಸರರು, ಶಿಕ್ಷಕರು ಹೀಗೆ ಅನೇಕ ಭಾರತೀಯರು ಉನ್ನತ ಸ್ಥಾನಗಳನ್ನು ಗಳಿಸಿದ್ದಾರೆ ಎಂದು ತಿಳಿಸುತ್ತಾ, ಹಲವರ ಸಾಧನೆಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ "ಭಾರತೀಯ ಮೂಲದ ಹರಗೋವಿಂದ ಖೊರಾನಾ ಪ್ರಯೋಗ ಶಾಲೆಯಲ್ಲಿ ವಂಶವಾಹಿಗಳನ್ನು ಸಂಯೋಜಿಸಿದರು. ಅವರಿಗೆ ನೊಬೆಲ್ ಪ್ರಶಸ್ತಿ ದೊರಕಿತು. ಖಗೋಲ ಭೌತವಿಜ್ಞಾನಿಗಳಾದ ಸುಬ್ರಹ್ಮಣ್ಯನ್ ಚಂದ್ರಶೇಖರ್ ಅವರು ನಶಿಸುತ್ತಿರುವ ನಕ್ಷತ್ರಗಳಲ್ಲಿಯ ಕರಿಯ ತಗ್ಗುಗಳನ್ನು ಹುಡುಕಿ ತೆಗೆದರು. ಅವರಿಗೂ ನೊಬೆಲ್ ಪ್ರಶಸ್ತಿ ದೊರೆಯಿತು. ನ್ಯೂಯಾರ್ಕ್ ಜೀವವಿಮಾ ಸಂಸ್ಥೆಯ ಒಂಬತ್ತು ಸಾವಿರಕ್ಕೂ ಹೆಚ್ಚಿನ ಜೀವವಿಮಾ ಏಜೆಂಟರಲ್ಲಿ ಜಯದೇವ ಪಟೇಲ್ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ದೀಧರ್‌ಸಿಂಗ್ ಬೇನ್ಸ್ ಎನ್ನುವವರು ಪೀಚು ಅಥವಾ ಅತಿಸಣ್ಣ ಹಣ್ಣುಗಳನ್ನು ಬೆಳೆಸುವುದರಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಡೈನೊಸರುಗಳಿಂದ ಪಕ್ಷಿಗಳು ವಿಕಾಸ ಹೊಂದಿವುವು ಎಂಬುದನ್ನು ಪ್ರಸ್ಥಾಪಿಸಲು ಸಾಧನವಾದ ಎಲುವುಗಳನ್ನು ಶಂಕರ್ ಚಟರ್ಜಿಯವರು ಹುಡುಕಿ ತೆಗೆದರು.[1] ಎಂಬ ಉದಾಹರಣೆಗಳಿಂದ ಹಲವು ಕ್ಷೇತ್ರಗಳಲ್ಲಿ ಭಾರತೀಯರು ವ್ಯಾಪಿಸಿರುವುದು ಕಂಡುಬರುತ್ತದೆ. ಅಮೇರಿಕೆಯ ಸರ್ಕಾರಿ ಅಧಿಕಾರಿಗಳಲ್ಲಿ ನಾಲ್ಕು ಜನ ಭಾರತೀಯರು ಅತ್ಯುನ್ನತ ಸ್ಥಾನದಲ್ಲಿದ್ದಾರೆ ಎಂದು ತಿಳಿಸುತ್ತಾ, ಅವರು ಮುನ್ನುಗ್ಗುವುದಕ್ಕೆ ಅವರ ಬುದ್ಧಿವಂತಿಕೆ, ಪ್ರಾಮಾಣಿಕತೆ, ಸತತ ಪರಿಶ್ರಮಗಳು ಕಾರಣ ಎಂದು ತಿಳಿದುಬರುತ್ತದೆ ಎನ್ನುವುದರೊಂದಿಗೆ ಬಹುತೇಕ ಭಾರತೀಯ ಮೆಡಿಕಲ್ ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕಾಗಿ ಅಮೇರಿಕಾಕ್ಕೆ ಆಗಮಿಸುತ್ತಾರೆ. ಆದರೆ ಅವರೆಲ್ಲರಿಗೂ ವೈದ್ಯಕೀಯ, ನೌಕರಿಗಳಾಗಲಿ ಅಥವಾ ಇಂಟರ್ನ್ ಶಿಪ್ ಇಲ್ಲವೆ ರೆಸಿಡೆನ್ಸಿಯಾಗಲಿ ಸುಲಭವಾಗಿ ಸಿಗುವುದಿಲ್ಲ. ಹಾಗೆ ಸಿಗದೆ ಇದ್ದವರಲ್ಲಿ ಅನೇಕರು; ಸ್ಟೋರುಗಳಲ್ಲಿ ಕೆಲಸ ಮಾಡುತ್ತಾರೆ. ಗ್ಯಾಸ್ ಸ್ಟೇಶನುಗಳಲ್ಲಿ ದುಡಿಯುತ್ತಾರೆ. ಬೂಟುಗಳ ಮಾರಾಟ ಮಾಡುತ್ತಾರೆ. ಆಸ್ಪತ್ರೆಗಳ ಲ್ಯಾಬೊರೇಟರಿಗಳಲ್ಲಿ ಕೆಲಸ ಮಾಡುತ್ತಾರೆ. ಹಲವರು ಟ್ರಕ್ಕುಗಳನ್ನು ಹೊಡೆಯುತ್ತಾರೆ. ಇವರುಗಳಿಗೆ ರೆಸಿಡೆನ್ಸಿ ಸಿಗುವವರೆಗೆ ದುಡಿದುಕೊಂಡು ತಮ್ಮ ಧ್ಯೇಯವನ್ನು ಸಾಧಿಸುತ್ತಾರೆ. ವಿಶ್ವವಿದ್ಯಾಲಯಗಳಲ್ಲಿ ಅಮೇರಿಕನ್ ಪ್ರಾಧ್ಯಾಪಕರು, ಭಾರತೀಯ ವಿದ್ಯಾರ್ಥಿಗಳನ್ನೇ ಸಂಶೋಧನ ಸಹಾಯಕರೆಂದು ಆರಿಸಿಕೊಳ್ಳುತ್ತಾರೆ. ಏಕೆಂದರೆ ಯಾವ ರೀತಿಯಲ್ಲಿಯೂ ಗೊಣಗುಟ್ಟದೆ ಕೆಲಸ ಮಾಡುತ್ತಾರೆಂದು ಭಾರತೀಯ ವಿದ್ಯಾರ್ಥಿಗಳನ್ನು ಬಹುತೇಕವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆಂದು

ನಿರೂಪಿಸುತ್ತಾ, ಶ್ರದ್ಧೆ, ಕಠಿಣ ಪರಿಶ್ರಮ, ಜಿಗುಟುತನ ಮೊದಲಾದ ಸ್ವಭಾವಗಳು ಕಾರಣವಾಗಿರುವುದಲ್ಲದ, ಇವು ಭಾರತೀಯರ ಲಕ್ಷಣಗಳು ಸಹ ಆಗಿವೆ ಎಂದು ಲೇಖಕರು ಹೆಮ್ಮೆಪಟ್ಟುಕೊಳ್ಳುತ್ತಾರೆ.

ಭಾರತೀಯರ ಯಶಸ್ಸಿನ ಕಾರಣಗಳನ್ನು ವಾಲ್‌ಸ್ಟ್ರೀಟ್ ಜರ್ನಲ್‌ದ ಜೇಮ್ಸ್ ಪಿ ಸ್ಟೆರ್ಬಾ ಅವರು ಸೂಚಿಸಿರುವ ಕೆಲವು ಸಂಗತಿಗಳಿಂದ ಅರಿಯಬಹುದು. ಅವುಗಳೇ;

1. ಅಮೇರಿಕೆಗೆ ಬಂದ ಭಾರತೀಯರಲ್ಲಿ ಬಹುಪಾಲು ಜನ ಉಚ್ಚಶಿಕ್ಷಣವನ್ನು ಹೊಂದಿದವರೇ ಆಗಿರುತ್ತಾರೆ. 1980ರ ಜನಗಣತಿಯ ಮೇರೆಗೆ ಪುರುಷರಲ್ಲಿ ನೂರಕ್ಕೆ, ಎಪ್ಪತ್ತೆಂಟು ಜನ, ಮಹಿಳೆಯರಲ್ಲಿ ನೂರಕ್ಕೆ, ಐವತ್ತೆರಡರಷ್ಟು ಮಹಿಳೆಯರು ಕಾಲೇಜು ಡಿಗ್ರಿ ಪಡೆದವರಾಗಿದ್ದಾರೆ.

2. ಅಮೇರಿಕೆಗೆ ಕಲಿಯಲೆಂದು ಬಂದ ಭಾರತೀಯರು ಭಾರತಕ್ಕೆ ಮರಳುವುದಿಲ್ಲ.

3. ಭಾರತೀಯರು ಇಂಗ್ಲೀಷ್ ಭಾಷೆಯಲ್ಲಿ ಶಿಕ್ಷಣ ಪಡೆದಿರುವುದು ಅವರಿಗೊಂದು ದೊಡ್ಡ ವರದಾನವಾಗಿದೆ. ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಇಂಗ್ಲೀಷ್‌ನಲ್ಲಿ ವಿಚಾರ ಮಾಡುತ್ತಾರೆ. ಇಂಗ್ಲೀಷ್ ಕನಸು ಕಾಣುತ್ತಾರೆ.

4. ಭಾರತದ ರಾಜಕೀಯ ಪದ್ಧತಿಯೂ ಸಹ ಅಮೇರಿಕೆಯಲ್ಲಿರುವಂತೆ ಪ್ರಜಾಪ್ರಭುತ್ವವಾದಿಯಾಗಿದೆ. ಭಾರತೀಯ ಸಮಾಜದಲ್ಲಿಯೂ ಸಹ ಅಮೇರಿಕೆಯಲ್ಲಿರುವಂತೆ ಭಿನ್ನ ಭಿನ್ನ ಜನಾಂಗ, ಧರ್ಮ, ಮತಗಳಿಗೆ ಸೇರಿದ ಜನರಿದ್ದಾರೆ.

5. ಭಾರತೀಯ ಬ್ಯೂರಾಕ್ರಸಿಯಲ್ಲಿ ಗೆಲ್ಲುವುದು ಹೋಗಲಿ, ಬದುಕುಳಿದರೂ ಸಾಕು; ಅಂಥ ಮನುಷ್ಯ ಜಗತ್ತಿನಲ್ಲಿ ಎಲ್ಲಿಯಾದರೂ ಗೆದ್ದು ಬರುತ್ತಾನೆ.

6. ಭಾರತದಂಥ ವೈವಿಧ್ಯಪೂರ್ಣವಾದ ದೇಶದಿಂದ ಅಮೇರಿಕೆಗೆ ಬರುವ ಜನ ದೇಶದಿಂದ ಅಮೇರಿಕೆಗೆ ಬರುವ ಜನ ಕಡಿಮೆ, ಮೂವತ್ತು ಮೂರು ಮುಖ್ಯ ಭಾಷೆಗಳು, ಸುಮಾರು 1500 ಉಪ ಭಾಷೆಗಳು ಏಳು ಮುಖ್ಯವಾದ ಮತಧರ್ಮಗಳು, ಮತ್ತು ಪ್ರತಿಯೊಬ್ಬ ಹೊಸ ಗುರು ಬೋಧಿಸುವ ಹೊಸ ಧರ್ಮ–ಇದೆಲ್ಲವನ್ನು ಭಾರತೀಯರು ಕಂಡಿದ್ದಾರೆ"[2] ಈ ಮೇಲಿನ ಕಾರಣಗಳ ಮುಖಾಂತರ

ಭಾರತೀಯರು ಸಹಿಷ್ಣುತೆ ಮತ್ತು ಹೊಂದಾಣಿಕೆಯಿಂದಾಗಿ ಜೀವಿಸುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಲೇಖಕರು ವಲಸೆ ಬಂದಿರುವ ಭಾರತೀಯರ ಯಶೋಗಾಥೆಯನ್ನು ತಿಳಿಸುತ್ತಾ. ಭಾರತೀಯರು ಎತ್ತರೆತ್ತರದ ಪ್ರಗತಿ, ಅಭಿವೃದ್ಧಿಯನ್ನು ಹೊಂದಲಿ ಎಂದು ಆಶಿಸುತ್ತಾರೆ.

ಅಮೇರಿಕನ್ನರು ವಿಜ್ಞಾನವನ್ನು ತಮ್ಮ ಐಷಾರಾಮಕ್ಕಾಗಿ ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಹಲವು ಉದಾಹರಣೆ ಮತ್ತು ಸಾಕ್ಷಿಗಳ ಮೂಲಕ ತಿಳಿಸುತ್ತಾರೆ. ಮನೆಗಳು, ಕಾರುಗಳು, ಅಂಗಡಿಗಳು, ನಾಟ್ಯಗೃಹ ಮೊದಲಾದವುಗಳೆಲ್ಲ ಶಾಖನಿಯಂತ್ರಿತಗಳು. ವೃತ್ತಪತ್ರಿಕೆ ಮಾರಲು ಯಂತ್ರಗಳು, ಹೋಟೆಲುಗಳಲ್ಲಿ ತಿಂಡಿಗಳಿಂದ ಕೂಡಿದ ಯಂತ್ರಗಳು. ಬೇಕಾದ ತಿಂಡಿಯ ಬೆಲೆಯನ್ನು ಹಾಕಿ ಆ ಗುಂಡಿಯನ್ನು ಒತ್ತಿದರೆ ಸಾಕು ಅದು ಹೊರಕ್ಕೆ ಬರುತ್ತದೆ. ಬ್ಯಾಕಿಂಗ್ ವ್ಯವಸ್ಥೆ ಕೂಡಾ ಯಂತ್ರಗಳ ಮೂಲಕವೇ, ವೈದ್ಯಕೀಯ ಕೆಲಸವನ್ನು ಸಹ ಯಂತ್ರಗಳೇ ಮಾಡುತ್ತವೆ. ಉದಾಹರಣೆಗೆ "ಆಲ್ಬರ್ಟ್ಸನ್ ಮಾರ್ಟ್ ಎಂಬ ದೊಡ್ಡ ಅಂಗಡಿಯಿದೆ. ನಾವು ನಮಗೆ ಬೇಕಾದ ಕಿರಾಣಿ ಅಥವಾ ಬಟ್ಟೆಬರೆ, ಷೋಕಿ ವಸ್ತುಗಳು ಇತ್ಯಾದಿಗಳನ್ನು ಕೊಳ್ಳಬಹುದು. ಅಲ್ಲಿ ಒಂದು ಮೂಲೆಯಲ್ಲಿ ನಾಡಿನೋಡುವ ಯಂತ್ರ ಇಟ್ಟಿದ್ದಾರೆ. ಆ ಯಂತ್ರದ ಹಲಗೆಯ ಮಧ್ಯದಲ್ಲಿರುವ ಕೆಂಪು ದೀಪದ ಮೇಲೆ ನಾವು ನಮ್ಮ ಬೆರಳನ್ನಿಟ್ಟು, ಹತ್ತು ಸೆಂಟ್ಸ್ ಹಾಕಿದರೆ ಸಾಕು ಆ ಯಂತ್ರ ನಮ್ಮ ನಾಡಿಯ ವೇಗ ಎಷ್ಟಿದೆಯಂಬುದನ್ನು ತೋರಿಸುತ್ತದೆ. ಅದರ ಪಕ್ಕದಲ್ಲಿ ಇನ್ನೊಂದು ಯಂತ್ರವಿದೆ. ಅದು ನಮ್ಮ ಬ್ಲಡ್ ಪ್ರೆಶರ್ ಎಷ್ಟಿದೆಯೆಂಬುದನ್ನು ತೋರಿಸುತ್ತದೆ. ಆ ಯಂತ್ರದ ಎದುರು ಇರುವ ಖುರ್ಚಿಯ ಮೇಲೆ ಕುಳಿತುಕೊಂಡು ಐದು-ಹತ್ತು ಸೆಕೆಂಡು ವಿಶ್ರಮಿಸಿಕೊಳ್ಳಬೇಕು ಅಂದರೆ ಉದ್ವೇಗ ಕಡಿಮೆಯಾಗಬಹುದು ಆನಂತರ ಆ ಯಂತ್ರದ ಪಕ್ಕದಲ್ಲಿರುವ ಒಂದು ತೋಳಿನಲ್ಲಿ ನಮ್ಮ ಕೈಯನ್ನು ಸೇರಿಸಿ ಒಂದು ಬಿರಡಿಯನ್ನು ಒತ್ತಬೇಕು. ನಿಧಾನವಾಗಿ ಆ ಯಂತ್ರದ ತೋಳು ನಮ್ಮ ತೋಳನ್ನು ಬಿಗಿದುಕೊಳ್ಳುತ್ತದೆ ಹಾಗೆಯೇ ನಾವು ನಾಲ್ಕು-ಐದು ನಿಮಿಷ ಮಾತಾಡದೆ, ಅಲ್ಲಾಡದೆ ಕುಳಿತುಕೊಳ್ಳಬೇಕು. ಯಂತ್ರ ನಿಧಾನವಾಗಿ ಕೈಯನ್ನು ಸಡಿಲು ಬಿಟ್ಟು ನಮ್ಮ ರಕ್ತದೊತ್ತಡ ಎಷ್ಟಿದೆಯೆಂಬ ನಮ್ಮ ಹಣೆಬರಹವನ್ನು ಬರೆದು ಸೂಚಿಸುತ್ತದೆ".[3]

ಕಂಪ್ಯೂಟರ್ ಸಹ ಎಲ್ಲ ಕ್ಷೇತ್ರಗಳಲ್ಲಿ ಬಳಸುತ್ತಾರೆ ಎಂಜನಿಯರ್ ಯಾವುದೇ ನಕ್ಷೆಯನ್ನು ತೆಗೆಯಬೇಕಾದರೆ ಆಸ್ಪತ್ರೆಗಳಲ್ಲಿ ಕೂಡಾ ಯಂತ್ರಗಳ ಮುಂದೆ ಹೋಗಿ "ನಮಗೆ ಕಣ್ಣುರಿ, ನೆಗಡಿ, ಮೈ ಕೈ ನೋವು" ಎಂದು ರೋಗಿ ಹೇಳಿದರೆ ಸಾಕು" ಇದು ಇನ್‌ಫ್ಲುಯೆಂಜಾ ಇದಕ್ಕಾಗಿ ಇಂತಿಂಥ ಮಾತ್ರೆ ತೆಗೆದುಕೊಳ್ಳಿ ಎಂದು ಯಂತ್ರ ಹೇಳಿಬಿಡಬಹುದು"[4]

[illegible]

ಹೀಗೆ ಅಮೇರಿಕನ್ನರು ನೂರಾರು ವಿಧದಲ್ಲಿ ಯಂತ್ರಗಳನ್ನು, ಕಂಪ್ಯೂಟರ್‌ಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಯಂತ್ರಗಳ ಶೋಧವನ್ನು ಅಮೇರಿಕನ್ನರು ಸಮರ್ಥವಾಗಿ ಬಳಸಿಕೊಂಡಿರುವುದು ನಮಗೆ ಕಂಡು ಬರುತ್ತದೆ. ಯಂತ್ರ ಸಾಮರ್ಥದಲ್ಲಿ ಅಮೇರಿಕನ್‌ರ ಯಶಸ್ಸು ಈ ರೀತಿ ಬೆಳೆಯುತ್ತಾ ಸಾಗಿದರೆ ಮುದೊಂದು ದಿನ ಯಂತ್ರಮಾನವರೇ ನಿರ್ಮಾಣವಾಗಿ ಅವುಗಳದೇ ಸಾಮ್ರಾಜ್ಯ ನಿರ್ಮಾಣವಾಗಬಹುದೆಂದು ಅನಿಸುತ್ತದೆ. "ಕವಿ ಕನಸ್ಸಿನಲ್ಲಿ ಕಂಡದ್ದನ್ನು ವಿಜ್ಞಾನಿ ಭೂಲೋಕಕ್ಕೆ ಇಳಿಸುತ್ತಾನೆ" ಎನ್ನುವ ಮಾತು ಸತ್ಯವಾದೀತು ಎಂದು ಲೇಖಕರು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಅಮೇರಿಕಾದ ಯಂತ್ರಾದ್ಭುತಗಳು ವಾಚಕರಲ್ಲಿ ಕುತೂಹಲ ಕೆರಳಿಸಿದರೂ ವಿವೇಚಿಸಿದಾಗ ಅವಶ್ಯಕತೆ ಇರುವಷ್ಟೇ ಯಂತ್ರಗಳನ್ನು ಬಳಸಿಕೊಳ್ಳುವುದು ಸೂಕ್ತವೆನಿಸುತ್ತದೆ.

ಅಮೇರಿಕನ್ನರ ಸ್ವಚ್ಛಂದ ಜೀವನ ರೀತಿಗಳ ಬಗ್ಗೆ ಕೆಲವು ಉದಾಹರಣೆಗಳ ಮೂಲಕ ತಿಳಿಸುತ್ತಾರೆ. ಡೇಟಿಂಗ್ ಪದ್ಧತಿ, ಸಲಿಂಗರತಿ "ಕಾರು ಬಾರದವ, ವ್ಹಿಸ್ಕಿ ಕುಡಿಯದವ ಅವನೆಂಥ" ಅಮೇರಿಕನ್? ಇವು ಅಮೇರಿಕನ್ ಸಂಸ್ಕೃತಿಯ ಮಹತ್ವದ ಲಕ್ಷಣಗಳಾಗಿವೆ ಎಂದು ಲೇಖಕರು ಅಭಿಪ್ರಾಯ ಪಡುತ್ತಾ, ನ್ಯೂಯಾರ್ಕ ಹಾಗೂ ಕ್ಯಾಲಿಫೋರ್ನಿಯಾಗಳಲ್ಲಿ ಏಡ್ಸ್ ರೋಗ ಹೆಚ್ಚಾಗಿ ಕಂಡುಬರುತ್ತದೆ. ಈ ರೋಗ ಸಲಿಂಗರತಿಯಿಂದ ಬರುತ್ತದೆ. ಇದು ಸ್ತ್ರೀಯರಿಗಿಂತ ಪುರುಷರಿಗೆ ಬರುವುದೇ ಹೆಚ್ಚಿದ್ದರೂ, ನಿರಂತರ ರಕ್ತ ಸ್ರಾವ ಇದ್ದವರಿಗೂ ಇದು ಬರುತ್ತದೆ ಅಮೇರಿಕೆಯಲ್ಲಿರುವ ಹೈಶಿಯನ್ ಜನರಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಂಡಿದೆ. ಈ ರೋಗದ ಮೂಲಕವಾಗಿ ಒಂದು ವಿಧದ ಕ್ಯಾನ್ಸರ್, ನ್ಯೂಮೋನಿಯಾ ಮೊದಲಾದವುಗಳೂ ಸಹ ಕಾಣಿಸಿಕೊಳ್ಳುತ್ತವೆ. ಇದನ್ನು ನಿಯಂತ್ರಿಸಲು, ತಡೆಗಟ್ಟಲು ಅಲ್ಲಿನ ಸರ್ಕಾರ ಸಾಕಷ್ಟು ಹಣವನ್ನು ವೆಚ್ಚಮಾಡುತ್ತಿದೆ ಎಂದು ಲೇಖರು ನೀಡುವ ಮಾಹಿತಿಯಿಂದ, ಸ್ವಚ್ಛಂದ ಜೀವನ ಮನುಷ್ಯನನ್ನು ಯಾವ ಹಂತಕ್ಕೆ ತಲುಪಿಸುತ್ತದೆ ಎನ್ನುವುದನ್ನು ಮನಗಾಣಬಹುದು.

ಹಿಂದುಳಿದ ದೇಶಗಳಲ್ಲಿ ಮಾತ್ರವಲ್ಲದೆ ಮುಂದುವರೆದ ದೇಶಗಳಲ್ಲಿ ಕೂಡಾ ಸಮಸ್ಯೆಗಳಿರುವುದನ್ನು ಗುರುತಿಸಿರುವ ಲೇಖಕರು; 'ಅಮೇರಿಕೆಯಲ್ಲಿ ನೀಗ್ರೋ ಸಮಸ್ಯೆ'ಯನ್ನು ಇದರ ಅಡಿಯಲ್ಲಿ ಸ್ಪಷ್ಟವಾಗಿ ನಿರೂಪಿಸಿರುವುದಲ್ಲದೆ ಜನಾಂಗಿಕ ಭೇದ ಭಾವವನ್ನು ಅನೇಕ ವರ್ಣೀಯ ಸಂಘ-ಸಂಸ್ಥೆಗಳು ಪ್ರತಿಭಟಿಸುತ್ತವೆ ಎನ್ನುತ್ತಾರೆ. ಕರಿಯ ಹುಡುಗರು ಬಿಳಿಯ ಹುಡುಗಿಯರ ಜೊತೆ ಡೇಟಿಂಗ್ ಮಾಡುವಂತಿಲ್ಲ. ಮದುವೆಯಾಗುವಂತಿಲ್ಲ, ಬಿಳಿ ರಕ್ತ ಪವಿತ್ರ, ಕರಿ ರಕ್ತ ಹಾಗಲ್ಲ- ಎಂದು ಭಾವಿಸಿದ ಜನ ಇನ್ನೂ

ಅಮೇರಿಕೆಯಲ್ಲಿದ್ದಾರೆ ಎಂದು ತಿಳಿಸುತ್ತಾರೆ. ಇದರಿಂದ ನಾವು ಕಾನೂನಿನ ಮೂಲಕ ನಾಗರಿಕ ಹಕ್ಕುಗಳ ಅಸಮಾನತೆ ಹೋಗಿದ್ದರೂ, ನೈಜವಾಗಿ ಅದು ಉಳಿದುಕೊಂಡೇ ಬಂದಿರುತ್ತದೆ. ಇದಕ್ಕೆ ಯಾವ ದೇಶವಾದರೂ ಹೊರತಲ್ಲ ಎನ್ನುವುದು ಅರಿವಾಗುವುದರೊಂದಿಗೆ, ಅಸಮಾನತೆ ಅಳಿಯುವುದು ಮಾನವರ ಹೃದಯದಲ್ಲಿ ಪರಿವರ್ತನೆಯಾದಾಗ ಮಾತ್ರವಷ್ಟೆ ಎಂದೆನಿಸುತ್ತದೆ.

ಅಮೇರಿಕೆಯ ಯಾವ ಯಾವ ಮೂಲೆಯಲ್ಲಿ ಭಾರತೀಯತ್ವವಿದೆಯೋ, ಕನ್ನಡತ್ವವಿದೆಯೋ, ಅದೆಲ್ಲವನ್ನು ಕಾಣುವುದು, ಅವರ ಜೀವನ ವಿಧಾನ, ನೋವು ನಲಿವುಗಳನ್ನು ಅರಿಯುವುದು ಲೇಖಕರ ಆಸಕ್ತಿಗಳಲ್ಲಿ ಒಂದಾಗಿದೆ. ಹೀಗಾಗಿ ಅವರು ಅಮೇರಿಕನ್ ಮತ್ತು ಭಾರತೀಯರ ಅನೇಕ ಕುಟುಂಬಗಳೊಂದಿಗೆ ಭೇಟಿಯಾಗಿ ಪರಾಮರ್ಶಿಸಿರುವುದನ್ನು ಕಾಣಬಹುದು. ಹಿಂದೂ ದೇವಾಲಯಗಳ ಉದಾಹರಣೆಯಲ್ಲಿ; ಹಿಟ್ಸ್ ಬರ್ಗನ ವೆಂಕಟೇಶ ದೇವಾಲಯ, ರಾಧಾಕೃಷ್ಣ ದೇವಾಲಯ, ಜೈನ ದೇವಾಲಯಗಳು ಹೀಗೆ ಅನೇಕ ಧಾರ್ಮಿಕ ಕೇಂದ್ರಗಳಿಗೆ ಹಾಗೂ ಭಾರತೀಯ ರೆಸ್ಟೋರೆಂಟ್‌ಗಳನ್ನು ಹುಡುಕಿಕೊಂಡು ಹೋಗಿದ್ದಾರೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬರ್ಮಿಂಗ್ ಹ್ಯಾಮ್ ಸಹ್ಯಾದ್ರಿ ಕನ್ನಡ ಕೂಟದ ವಾರ್ಷಿಕೋತ್ಸವ, ಫಿಲಿಡೆಲ್ಫಿಯಾದ ಕನ್ನಡ ಕಮ್ಮಟಗಳಲ್ಲಿ ಭಾಗವಹಿಸಿರುವುದಲ್ಲದೆ, ನೂರಾರು ಕನ್ನಡ ಕುಟುಂಬಗಳಲ್ಲಿ ಅತಿಥಿಯಾಗಿ ಉಳಿದಿದ್ದಾರೆ. ಈ ಮೂಲಕ ಅಮೇರಿಕೆಯ ಹೊಟ್ಟೆಯಲ್ಲಿ ಸೇರಿಕೊಂಡಿರುವ ಭಾರತೀಯರನ್ನು, ಕನ್ನಡಿಗರನ್ನು, ಕಣ್ಣಲ್ಲಿ ಕಣ್ಣಿಟ್ಟು ಹುಡುಕಿ, ಅವರಲ್ಲಿ ಅಮೇರಿಕ–ಭಾರತವೆಂಬ ಮಿಶ್ರಸಂಸ್ಕೃತಿ ಆಕಾರ ತಳೆಯುತ್ತಿರುವುದನ್ನು, ಕೆಲವೊಮ್ಮೆ ಅದು ಸಮಸ್ಯೆಯಾಗಿ ಕಾಡುತ್ತಿರುವುದನ್ನು ಗುರುತಿಸಿದ್ದಾರೆ. 'ತೆರಣಿಯ ಹುಳು ತನ್ನ ಸ್ನೇಹದಲ್ಲಿಯೇ ಸುತ್ತುವಂತೆ' ಮನುಷ್ಯ ಆ ದೇಶದಲ್ಲಿಯೆ ಸುತ್ತುತ್ತಾನೆ. ಅವಕಾಶಗಳು ಸಿಗದೇ ಇದ್ದಾಗ ಅಮೇರಿಕೆಯನ್ನು ದೂಷಿಸಿ, ಸಿಕ್ಕಾಗ ಭಾರತವನ್ನು ತೆಗಳಿ, ಅಮೇರಿಕೆಯಲ್ಲಿಯೇ ಜೀವನವನ್ನು ಸಾಗಿಸುವುದು ಸರ್ವೇ ಸಾಮಾನ್ಯವಾಗಿದೆ ಎನ್ನುತ್ತಾ ಅವರಲ್ಲಿನ ಜೀವನ ಮೌಲ್ಯಗಳ ಸಂಘರ್ಷವನ್ನು ಗುರುತಿಸಿದ್ದಾರೆ.

ಲೇಖಕರು ಒಂದೊಂದು ಘಟನೆಯನ್ನು ಹೇಳುತ್ತಾ, ಒಂದೊಂದು ಸ್ಥಳವನ್ನು ವರ್ಣಿಸುತ್ತ, ಅದರ ಇತಿಹಾಸವನ್ನು ಹೇಳುವಾಗಲ್ಲೇಲ್ಲಾ ಭಾರತಕ್ಕೆ ಸಂಬಂಧಿಸಿದ ಅದೇ ರೀತಿಯ ಘಟನೆ, ಸ್ಥಳಗಳೊಂದಿಗೆ ಅವುಗಳನ್ನು ಹೋಲಿಸಿ ನೋಡುವ ಅನೇಕ ಪೂರಕ ಅಂಶಗಳನ್ನು ಅಡಕಗೊಳಿಸುವ ರೀತಿಯಿಂದಾಗಿ ಮತ್ತು ಕೊಟ್ಟಿರುವ ಹೆಚ್ಚಿನ ವಿವರಗಳೆಲ್ಲಾ ವಿಷಯ ಸ್ಪಷ್ಟತೆಗೆ ಪೂರಕವೇ ಆಗಿವೆ.

ಉದಾಹರಣೆಗೆ ನಯಾಗಾರ ಜಲಪಾತದ ಬಗ್ಗೆ ನೋಡಬಹುದು. "ನಮ್ಮ ಗೆರೆಸೊಪ್ಪೆಯಲ್ಲಿ ನೀರು ಕೆಳಗುರುಳುವ ಮೊದಲಿನ ಮೇಲ್ತುದಿ ಅಷ್ಟಾಗಿ ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ಇಲ್ಲಿ ಮಾತ್ರ ನಾವು ನೀರು ಕೆಳಗುರುಳುವ ಮೇಲ್ತುದಿಯ ಮುಟ್ಟದೆ ಸಮವಾಗಿ ನಿಂತೇ ನೋಡಬಹುದು" ಎಂದು ಲೇಖಕರು ಹೋಲಿಸಿ ನೋಡಿರುವರು. ಇದರಂತೆ ಇನ್ನೂ ಅನೇಕ ನಿದರ್ಶನಗಳನ್ನು ಕಾಣಬಹುದು.

ಕೊಲಂಬಿಯಾದಲ್ಲಿ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಲೇಖಕರಿಗೆ 'ಅಮೇರಿಕೆಯಲ್ಲಿ ವಾಸಿಸುವ ಭಾರತೀಯರು ಭಾರತದ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ' ಎಂದೆನಿಸಿದೆ. ಇದನ್ನು ಅವರ ನಡೆ, ನುಡಿಗಳಲ್ಲಿ, ಉಚ್ಚ ಆದರ್ಶಗಳನ್ನು ಪಾಲಿಸುವಲ್ಲಿ ಗಮನಿಸಿದ್ದಾರೆ. ಹಾಗಾಗಿ ಅನಿವಾಸಿ ಭಾರತೀಯರು, ಭಾರತೀಯರೊಂದಿಗೆ ಮಾತ್ರ ಸಂಪರ್ಕವನ್ನಿಟ್ಟುಕೊಳ್ಳದೆ, ಅಮೇರಿಕನ್ ಜನಜೀವನದ ಮುಖ್ಯ ಪ್ರವಾಹಗಳಲ್ಲಿ ಒಂದಾಗಬೇಕು ಎಂದು ಮಾರ್ಗದರ್ಶಿಸುತ್ತಾರೆ. 'ಕೊಲಂಬಿಯಾ' ಭಾರತೀಯ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರವಾಗಿದೆ ಎನ್ನುತ್ತಾರೆ. ಏಕೆಂದರೆ ಅಲ್ಲಿ ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ, ದಸರೆ ಯುಗಾದಿ, ಕೃಷ್ಣ ಜನ್ಮಾಷ್ಟಮಿ, ಶ್ರೀರಾಮನವಮಿ, ಶಿವರಾತ್ರಿ ಮೊದಲಾದ ಧಾರ್ಮಿಕ ಉತ್ಸವಗಳಲ್ಲದೆ, ಗಣರಾಜ್ಯೋತ್ಸವ, ತ್ಯಾಗರಾಜ ಉತ್ಸವ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ನಡೆಯುವುದನ್ನು ಕಂಡಾಗ ಹಾಗೆನಿಸಿ ಹೇಳಿರುವುದು ಔಚಿತ್ಯಪೂರ್ಣವಾಗಿದೆ.

"ಡಾ॥ ಧಾರವಾಡಕರ ಅವರ ಜೀವನಾಸಕ್ತಿ ಅದ್ಭುತವಾದುದು. ಅಮೇರಿಕನ್ನರ ಜೀವನ ವಿಧಾನವನ್ನು ತಿಳಿಯುವುದಕ್ಕಾಗಿ, ಅಮೇರಿಕನ್ ಮಿತ್ರರ ಮನೆಗಳಿಗೆ ಹೋಗಿ ಬಂದಿರುವ ಮತ್ತು ತಾವು ನೋಡಿದ ಸ್ಥಳಗಳ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿರುವುದೆಲ್ಲಾ ಅಮೂಲ್ಯವಾಗಿವೆ. ಪ್ರವಾಸಿಗೆ ಕವಿಹೃದಯವಿದ್ದರೆ ಪ್ರವಾಸಿಯ ನೋಟವೆಲ್ಲವೂ ಹೃದ್ಯವಾಗುತ್ತದೆಂಬುದು ಸಾಹಿತಿ ಡಾ॥ರಾ.ಯ.ಧಾರವಾಡಕರ ವಿಷಯದಲ್ಲಿ ಸತ್ಯವಾಗಿದೆ. ಅವರ ಬರಹ ಇಲ್ಲಿ ಚೇತೋಹಾರಿಯಾಗಿ ಕಣ್ಣಿಗೆ ಕಟ್ಟುವಂತೆ, ಸಚಿತ್ರವಾಗಿ ನೋಡಿ ಅನುಭವಿಸಿದಂತೆ ವಿವರಗಳು ಬರುವುದರೊಂದಿಗೆ ನಮಗೆ ಹೊಸ ಪ್ರಪಂಚವೊಂದರ ಪರಿಚಯ ಮಾಡಿಕೊಡುತ್ತದೆ. ನಯಾಗಾರ ಜಲಪಾತದ ವರ್ಣನೆಯಾಗಲೀ, ಡಿಸ್ನಿ ಜಗತ್ತಿನ ವಿವರಗಳಾಗಲೀ, ಪ್ರಭಾಪಾದರ ಬಂಗಾರದ ಅರಮನೆಯಲ್ಲಿ ಕನ್ನಡದ ಹರಿದಾಸರ ಕೀರ್ತನೆಗಳನ್ನು ಕೇಳಿದಾಗಿನ ಅಪೂರ್ವ ಅನುಭವವಾಗಲೀ ರಸವತ್ತಾಗಿದೆ. ತಾವು ನೋಡಿದ ದೊಡ್ಡ ಇಲ್ಲವೆ ಸಣ್ಣ ಪ್ರವಾಸಿ ಸ್ಥಳಗಳ ಬಗೆಗೆ

ಅಂಕಿ–ಅಂಶಗಳೊಂದಿಗೆ, ಸಾಕಷ್ಟು ವಿವರಗಳೊಂದಿಗೆ ಅನುಭವ ಕಥನ ನೀಡಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಅಮೇರಿಕಾದಲ್ಲಿನ ವೈಚಿತ್ರ್ಯಗಳನ್ನು ಕುರಿತು ಬರೆದಿರುವ ಭಾಗ ನವಿರಾದ ಹಾಸ್ಯದಿಂದ ಕೂಡಿದೆ. ಅಮೆರಿಕನ್ ಸಮಾಜದ ವಿಚಿತ್ರ ವರ್ತನೆಗಳ ಬಗೆಗಿನ ವ್ಯಂಗ್ಯ ಓದುಗನ ಮನಮುಟ್ಟುತ್ತದೆ. ನಗೆತರಿಸುತ್ತದೆ. 'ಅಮೇರಿಕೆಯ ಹಬ್ಬಗಳು' ಒಂದು ಒಳ್ಳೆಯ ಪ್ರಬಂಧದ ಗುಣ ಪಡೆದಿವೆ. ಹಬ್ಬಗಳ ಬಗೆಗಿನ ವಿವರ ಕಲೆಹಾಕುವಲ್ಲಿ ಲೇಖಕರ ಶ್ರಮ ವ್ಯಕ್ತವಾಗುತ್ತದೆ".[5] ಎಂಬ ಡಾ॥.ಎಸ್.ವಿದ್ಯಾಶಂಕರರವರು ಸೂಚಿರುವುದು ಸಮಂಜಸವಾಗಿದೆ.

**ಪಾತಾಳಕ್ಕೆ ಪಯಣ–ಶಿವರಾಮ ಕಾರಂತ :**

ಶಿವರಾಮ ಕಾರಂತರು ಕ್ರಿ.ಶ.1952ರಲ್ಲಿ ಯೂರೋಪಿನ ಹಲವು ದೇಶಗಳನ್ನು ಕಂಡುಬಂದ ಮೇಲೆ ಅಮೇರಿಕವನ್ನು ನೋಡಿದರಾಗುತ್ತಿತ್ತು ಎಂಬ ಭಾವನೆ ಮೂಡಿ ಆ ಕಾರಣಕ್ಕಾಗಿ ಒಂದು ತಿಂಗಳ ಕಾಲ ಪ್ರವಾಸ ಕೈಗೊಂಡಿದ್ದಾರೆ. ಒಂದು ತಿಂಗಳ ಸುತ್ತಾಟದ ಅನುಭವಗಳನ್ನು ಸ್ವಾರಸ್ಯಯುತವಾಗಿ ಪಡಿಮೂಡಿಸಿದ್ದಾರೆ.

ಲೇಖಕರು ತಮ್ಮ ಪ್ರವಾಸದ ಉದ್ದೇಶಗಳನ್ನು ಆರಂಭದಲ್ಲಿಯೇ ತಿಳಿಸುತ್ತಾರೆ. 1) ಅವರ ಪ್ರಥಮ ಗಮನ ಚಿತ್ರಶಾಲೆಗಳನ್ನು ನೋಡುವುದು. 2) ಅಲ್ಲಿನ ಹೆಸರಾಂತ 'ಅಮೇರಿಕನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಮ್ ಹಾಗೂ ಸಾಧ್ಯವಾದರೆ ಒಂದೆರಡು ನಾಟಕಗಳನ್ನು ನೋಡುವುದು 3) ಪ್ರಕೃತಿಯದು; ಅವಕಾಶ ಸಿಕ್ಕರೆ ವಿಶ್ರಾಮ ಸ್ಥಳಗಳಾದ ಪಾರ್ಕುಗಳನ್ನು, ಪುರುಸೊತ್ತಿದ್ದರೆ ಹಡ್ಸನ ನದಿಯ ಮೇಲೆ ತೇಲಿ 'ಸ್ಟೇಚು ಆಫ್ ಲಿಬರ್ಟಿಯನ್ನು ನೋಡುವುದು.

ಕಾರಂತರ ಈ ಒಂದು ತಿಂಗಳ ಅನುಭವ ಸ್ವಂತದ್ದು. ಅವರು ಮಿತ್ರರಾಷ್ಟ್ರ ಅತಿಥಿಯಾಗಿಯೂ, ಇಲ್ಲವೆ ಸರಕಾರದ ಪರವಾಗಿಯೇ ಸಂಚಾರ ಹೋದವರಲ್ಲ. ಆತ್ಮೀಯ ಮಿತ್ರರ ಆಹ್ವಾನದ ಮೇರೆಗೆ ಅಮೇರಿಕಾಕ್ಕೆ ಹೋದವರು. ಕಾಲಾವಕಾಶದ ಮಿತಿಯಿಂದಾಗಿ ಈ ಮೇಲಿನ ಉದ್ದೇಶಗಳನ್ನು ಪೂರೈಸುವಲ್ಲಿ ಗಮನಹರಿಸಿದ್ದಾರೆ.

ಲೇಖಕರು, 'ಮೆಟ್ರೋಪಾಲಿಟನ್ ಮ್ಯೂಸಿಯಮ್ ಆಫ್ ಆರ್ಟ್' ಎಂಬ ದೈತ್ಯ ವಿಸ್ತಾರದ ಅಸಂಖ್ಯ ದೊಡ್ಡ ಕೊಠಡಿಗಳುಳ್ಳ ನೆಲಮಾಳಿಗೆ ಮತ್ತು ಎರಡು ಉಪ್ಪರಿಗೆಗಳಿರುವ ಒಂದು ಕಟ್ಟಡ,

ಮೇಲಿನ ಎರಡು ಮಾಳಿಗೆಗಳಲ್ಲೂ ಮತ್ತು ಪ್ರತಿಯೊಂದು ಕೋಣೆಯಲ್ಲೂ ಹೆಚ್ಚಾಗಿ ಪ್ರಸಿದ್ಧ ಪಾಶ್ಚಾತ್ಯ ಕಲಾವಿದರ ಚಿತ್ರ ಕೃತಿಗಳನ್ನು ತೂಗಿದ್ದು ನೋಡುವವರ ಸಲುವಾಗಿ ಆ ಚಿತ್ರಗಳ ಮೇಲೆ ಬೀಳುವ ಬೆಳಕನ್ನು ಬಲು ಚೆನ್ನಾಗಿ ನಿಯಂತ್ರಿಸಿದ್ದು, ಚಿತ್ರ ಕಾಪಾಡುವುದಕ್ಕಾಗಿ ಹವೆಯ ನಿಯಂತ್ರಣ ಇರುತ್ತದೆ ಎನ್ನುವಲ್ಲಿ ಕಲಾಕೃತಿಗಳನ್ನು ಕಾಪಾಡಿಕೊಳ್ಳುವಲ್ಲಿನ ಕಾಳಜಿಯನ್ನು ಕಾಣಬಹುದು.

"ಯೂರೋಪಿನ ಕಲಾವಿದರ ಪ್ರಸಿದ್ಧ ಚಿತ್ರಗಳ ಮೂಲ ಕೃತಿಗಳೆಲ್ಲ ಅಲ್ಲಿಯೇ ಕರೆತಂದಂತಿತ್ತು. ರೆಮ್ರಾಂಡ್, ವೆಲ್ಲಾಸ್ಕ್, ವಾನ್‌ಗಫ, ಟೆಶಿಯನ್, ಕೆನಲಿಟೊ– ಹೀಗೆ ಒಂದಲ್ಲ ಎರಡಲ್ಲ ನೂರಾರು ಪ್ರಸಿದ್ಧ ಹೆಸರುಗಳು ಅಲ್ಲಿ ಪ್ರಾತಿನಿಧ್ಯ ಪಡೆದಿವೆ.[6] ಎಂದು ಲೇಖಕರು ಆ ಚಿತ್ರಗಳ ಮಹತ್ವವನ್ನು ತಿಳಿಸುತ್ತಾರೆ. ಇಂದು ಅಲ್ಲಿನ ಒಂದೊಂದು ಚಿತ್ರದ ಮೌಲ್ಯ; ಲಕ್ಷ, ಮಿಲಿಯನ್ ಡಾಲರುಗಳಲ್ಲಿ ಎಣಿಕೆ ಹಾಕುತ್ತಾರೆ. ಎಷ್ಟು ನೋಡಿದರೂ ಮುಗಿಯದಿರುವ ಸಂಭ್ರಮ ಅಲ್ಲಿಯದು ಎಂದು ಸಂತೋಷಪಡುತ್ತಾ ಅದೊಂದು ಬೆಡಗಿನ ಸೀಮೆ, ಇಲ್ಲಿಯ ಮಹಾ ಸಂಗ್ರಹವು ಆ ಜನಗಳ ಕಲೆಯನ್ನು ಕುರಿತ ಕುತೂಹಲ ಆಸಕ್ತಿಗಳಿಗೆ ಒಂದು ಹಿರಿಯ ಸಾಕ್ಷಿ ಎನ್ನುತ್ತಾರೆ. ಅಲ್ಲಿ ಮೂಲ ಕೃತಿಗಳನ್ನು ಕಂಡಾಗ ಆ ಸಾಹಸಿಗಳು ತುಳಿದ ದಾರಿ, ಅದರ ವೈಶಿಷ್ಟ್ಯ ಅವರು ಚಿತ್ರಕಲೆಗಳಲ್ಲಿ ಸಾಧಿಸಿದ ಹೊಸ ರೀತಿಯ ಶಕ್ತಿ ಮನವರಿಕೆಯಾಗುತ್ತದ ಎಂದು ಹೇಳುತ್ತಾ ಮೇದೆ ಎಂಬ ಕಲಾವಿದನ ಸಾಧನೆವನ್ನು ತಿಳಿಸುತ್ತಾರೆ.[7]

'ಸನ್ ಫ್ಲವರ್' ಈ ಭೂದೃಶ್ಯ ಲೇಖಕರನ್ನು ದಿಗ್ಭ್ರಮೆಗೊಳಿಸಿದೆ. ಅದನ್ನು ಲೇಖಕರು ಈ ರೀತಿಯಿಂದ ವರ್ಣಿಸಿದ್ದಾರೆ. "ಆ ದೃಶ್ಯದ ಪ್ರತಿಕಣವೂ ಸ್ವಾತಂತ್ರ್ಯಕ್ಕಾಗಿ ಕುಣಿದಾಡುವ ಅಮೀಬಾದಂತೆ, ಬ್ಯಾಕ್ಟೀರಿಯಾದ ಕಣಗಳಂತೆ, ಕ್ರಿಮಿಗಳಂತೆ ಒಂದು ಮಹಾ ಸಮರವನ್ನೇ ನಡೆಯಿಸುತ್ತಿದ್ದಂತೆ ಕಾಣಿಸಿತು. ಕುಂಚ ಹಿಡಿಯದೆ, ಬಣ್ಣದ ಟ್ಯೂಬ್‌ಗಳಿಂದಲೇ ಆತ ಹೇಗೆ ಬೇಕಾದರೆ ಹಾಗೆ ಪೆಯಿಂಟನ್ನು ತುಂಬಿ ಒಂದು ಉಜ್ವಲ ಸೃಷ್ಟಿಯನ್ನೇ ಮಾಡಿದ್ದಾನೆ. ನಿರ್ಜೀವ ಜಗತ್ತಿನ ಕಣ ಕಣಕ್ಕೂ ಜೀವ ಇದೆ. ಅದರ ಮಿಡಿತ ಕೊನೆಗಾಣದ್ದು– ಎಂಬ ಅನುಭವವನ್ನು ಆತ ಚಿತ್ರದಲ್ಲಿ ಮೂಡಿಸಿದ್ದಾನೆ".[8] ಅಚ್ಚಳಿಯದ ನೆನಪು ಲೇಖಕರ ಮನಸ್ಸಿನಲ್ಲಿ ಉಳಿದಿದೆ. "ನನ್ನ ಪ್ರವಾಸಕ್ಕೆ ಕೇವಲ ಅದೊಂದೇ ಪ್ರತಿಫಲ ಸಾಕು" ಎಂಬ ಭಾವನೆ ಲೇಖಕರಲ್ಲಿ ಮೂಡಿ ಸಂತೃಪ್ತರಾಗಿವುದು ಕಂಡುಬರುವುದಲ್ಲದೆ, ಆ ಸನ್‌ಫ್ಲವರ್‌ನ ಸೊಗಸು ಸಹೃದಯರಿಗೆ ಪರಿಣಾಮಕಾರಿ ಪ್ರಭಾವವನ್ನು ಮೂಡಿಸುತ್ತದೆ.

ಪಾಶ್ಚಾತ್ಯ ಕಲಾಮಂದಿರಗಳಲ್ಲಿ ಜನಗಳ ಅಭಿರುಚಿಯನ್ನು ಬೆಳೆಯಿಸುವ ಸಲುವಾಗಿ ಸರ್ವ ಪ್ರಯತ್ನಗಳನ್ನು ಮಾಡುತ್ತಾರೆ. ಅವುಗಳಲ್ಲಿ ವ್ಯಕ್ತಿ ಕಲಾವಿದರ ಸಾಧನೆಗಳನ್ನು ಕುರಿತ ಗ್ರಂಥಗಳನ್ನು ಮಾರುವುದು, ಚಿತ್ರಪ್ರತಿಗಳನ್ನು ಅಗ್ಗದ ಬೆಲೆಯಲ್ಲಿ ಮಾರುವುದು. ಆ ವಿಷಯಗಳಿಗೆ ಸಂಬಂಧಿಸಿದ ಸಾರ್ವಜನಿಕ ಉಪನ್ಯಾಸಗಳನ್ನು ಜರುಗಿಸುವುದರೊಂದಿಗೆ ತಿಳಿಯಬೇಕು– ಎಂಬ ಕುತೂಹಲವುಳ್ಳವನಿಗೆ ಧಾರಾಳ ಜ್ಞಾನ ಒದಗಿಸುವುದು ಹೀಗೆ ಅನೇಕ ಬಗೆಗಳಲ್ಲಿ ಸಹಾಯ ಮಾಡುತ್ತಾರೆ. ಆದರೆ ನಮ್ಮಲ್ಲಿ ಇದರ ಕೊರತೆ ಇರುವುದರ ಬಗ್ಗೆ ಲೇಖಕರು ವಿಷಾದ ವ್ಯಕ್ತಪಡಿಸಿದ್ದಾರೆ. “ಅಮೇರಿಕನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿರುವ ಜಗತ್ತಿನ ಮೃಗ ಪಕ್ಷಿಗಳ ಸಂಗ್ರಹದಲ್ಲಿ ಕಾರಂತರು ಹೆಜ್ಜೆ ಹೆಜ್ಜೆಗೆ ಕಾಣುವ ವಿಸ್ಮಯ ಪ್ರಪಂಚವನ್ನಾಗಲೀ, ಸಿಕೋಯ ರಾಷ್ಟ್ರೀಯ ಅರಣ್ಯೋದ್ಯಾನದಲ್ಲಿ ಕಣ್‌ತಣಿಸುವ ನಿಸರ್ಗದ ಸುಂದರ ದೃಶ್ಯಗಳ ದೈತ್ಯವೃಕ್ಷಗಳ ಬಣ್ಣನೆಯನ್ನಾಗಲೀ ಕೊಲೆರಾಡೆ, ಕೊರಕಲಿನ ಅದ್ಭುತ ನೋಟವನ್ನಾಗಲೀ, ಗ್ರ್ಯಾಂಡ್ ಕೆನಿಯನ್‌ನ ಮನತಣಿಸುವ ಭವ್ಯತೆಯನ್ನಾಗಲೀ ಓದುವ ಓದುಗರ ಮನ ದಳ ದಳ ಅರಳುತ್ತದೆ ಹಾಗೆಯೇ ಅವನ ಪ್ರಜ್ಞಾಕೋಶ ಶ್ರೀಮಂತವಾಗುತ್ತದೆ”, ಎಂಬ ಡಾ॥ಎಸ್. ವಿದ್ಯಾಶಂಕರ್ ಅವರ ವಿಚಾರ ಸಮರ್ಪಕವಾಗಿದ್ದು, ಅಚ್ಚರಿಗೊಳಿಸುವಂತದಾಗಿದೆ. “ಹಡ್ಸನ್” ನದಿ ದಂಡೆಯ ಮಗ್ಗುಲಿನ ಉನ್ನತ ಗುಡ್ಡವನ್ನೂ ಅದರಲ್ಲಿ ಬೆಳೆದಿರುವ ಕಾಡಿನ ಸೊಂಪನ್ನೂ ಕಂಡಾಗ ಅಸೂಯೆಯಾಯಿತು. ನನಗೆ ಆಗ ಸ್ವಂತ ಮನೆಯ ತೆಂಕಣದಲ್ಲಿರುವ ಗುಡ್ಡ ಬೆಟ್ಟಗಳ ಹಸುರನ್ನು ವರ್ಷ ವರ್ಷವೂ ಕಡಿದು ಕ್ಷೌರ ಮಾಡುತ್ತಿರುವ ಸಸ್ಯ ವೈರಿಗಳನ್ನು ನೆನೆದುಕೊಂಡೆ” ಎನ್ನುವ ಲೇಖಕರು ನೋಡುವ ಕಣ್ಣಿದ್ದರೆ, ಅದಕ್ಕೆ ಬೇಕಾದ ತಿಳಿವಿನ ಹಿನ್ನಲೆಯಿದ್ದರೆ, ಹಣ ಮತ್ತು ಸಮಯದ ಸೌಕರ್ಯವಿದ್ದರೆ ಎಷ್ಟೊಂದು ನೋಡಬಹುದಿತ್ತು ಎಂದು ಆ ಸೌಂದರ್ಯಕ್ಕೆ ಮಾರು ಹೋಗಿ ತಮ್ಮ ಕಾಲ ಮಿತಿಯ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಲೇಖಕರು ಅಮೇರಿಕದ ಬರ್ಕ್ಲಿ ವಿಶ್ವವಿದ್ಯಾಲಯವು ಆಧುನಿಕ ಪರಮಾಣು ವಿಜ್ಞಾನಕ್ಕೆ ತೆತ್ತಿರುವ ಮಹಾಕಾಣಿಕೆಯನ್ನು ನೆನೆದಿದ್ದಾರೆ. ಅಲ್ಲಿನ ವಿದ್ಯಾಲಯಗಳು ಜ್ಞಾನಕೃಪೆಯಿಂದ ಕೂಡಿವೆ ಹೊರತು ಕೇವಲ ನೌಕರಿ ತಯಾರಿಸುವ ಕಾರ್ಖಾನೆಗಳಲ್ಲ ಎಂದು ಹೇಳುತ್ತಾರೆ. ನಮ್ಮ ವಿಶ್ವವಿದ್ಯಾಲಯಗಳ ಗುರಿಗೂ ಅಮೇರಿಕದ ವಿಶ್ವವಿದ್ಯಾಲಯಗಳಿಗೂ ಅಜಗಜಾಂತರ ಎನ್ನುತ್ತಾರೆ. ನಿರಂತರ ಅನ್ವೇಷಣೆ, ಸಂಶೋಧನೆಗಳನ್ನು ಸಾಗಿಸಿಕೊಂಡು ಹೋಗಲಾರದ ಯಾವ ಪ್ರಾಧ್ಯಾಪಕನೂ ಅಲ್ಲಿ ಮೂವತ್ತು ವರ್ಷಗಳ ಮಾಮೂಲಿ ಹಕ್ಕಿನಿಂದ ಬೇರು ಬಿಡಲಾರ ಎನ್ನುತ್ತಾ ನಮ್ಮಲ್ಲಿ ಇದಕ್ಕೆ ವ್ಯತಿರಿಕ್ತವಾಗಿದೆ ಎಂದು ತಿಳಿಸುತ್ತಾರೆ.

ಅವರು ವಿದ್ಯಾರ್ಥಿಗಳನ್ನು ಸ್ವತಂತ್ರ ಜೀವನಕ್ಕೆ ಸಿದ್ಧಗೊಳಿಸುತ್ತಾರೆ ಅವರ ಅಭಿರುಚಿಗೆ ತಕ್ಕಂತ ವಿದ್ಯೆಯನ್ನು ನೀಡುವುದು, ಧೈರ್ಯ, ಉತ್ಸಾಹಗಳನ್ನು ಹೆಚ್ಚಿಸುವುದು ಅಲ್ಲಿನ ಶಿಕ್ಷಣ ವ್ಯವಸ್ಥೆ ಗುರಿಯನ್ನು ತಿಳಿಸುತ್ತಾ ನಮ್ಮಲ್ಲಿನ ದುರ್ಬಲತೆಯನ್ನು ಪರೋಕ್ಷವಾಗಿ ಟೀಕಿಸುವುದನ್ನು ಕಾಣಬಹುದು.

ಒಂದೇ ಒಂದು ಮಿನಿಟಿನ ಅವಧಿಯಲ್ಲಿ ದೇಶದ ಯಾವ ಮೂಲೆಯೊಡನೆಯೂ ಟೆಲಿಫೋನು ಸಂಪರ್ಕ ಸಾಧ್ಯವಾಗುತ್ತದೆ. ಸಾಧ್ಯವಾದ ಮೇಲೆ 'ಹಲೋ ಹಲೋ' ಎಂದು ಗಂಟಲು ಬಿರಿಯುವ ತನಕ ಕಿರಿಚಬೇಕಾಗಿಲ್ಲ ಎನ್ನುತ್ತಾ ನಮ್ಮಲ್ಲಿನ ಟೆಲಿಫೋನ್ ಸಂಪರ್ಕದ ಬಗ್ಗೆ ದೂಷಿಸುತ್ತಾರೆ. "ಶೈಮಿನಿ ನಗರದ ಯಮರಾಯನೊಡನೆ ಕೂಗಿ ಮಾತನಾಡುವುದಾದರೂ ಸುಲಭ, ಕ್ಷಿಪ್ರ; ಆದರೆ ನಮ್ಮ ಟೆಲಿಫೋನು ಸಂಪರ್ಕ ಕಾದೇ ಸಾಕಾಗುತ್ತದೆ. ಹೇಳುವುದು ಕೇಳಿಸದೆ ಹೋಗಿ ದಂಡ ತೆರುವುದಲ್ಲದೆ ಇನ್ನೇನೂ ಇಲ್ಲ".[10] ಎಂದು ಸಹಜವಾಗಿಯೇ ಬೇಸರ ವ್ಯಕ್ತಪಡಿಸುತ್ತಾರೆ. ನಾವೂ ಆಧುನಿಕರು, ಬಹಳ ಮುಂದುವರೆದುರುವವರು ಎನ್ನುತ್ತಾ ನಮ್ಮ ಆಧುನಿಕತೆ ಬಗ್ಗೆ ನಾಚಿಕೆ ವ್ಯಕ್ತಪಡಿಸುತ್ತಾರೆ. ಈ ಹಿನ್ನೆಲೆಯಲ್ಲಿ ಲೇಖಕರು ನಮಗೂ ಅವರಿಗೂ ವ್ಯತ್ಯಾಸ ಗುರುತಿಸುತ್ತಾ ಅಮೇರಿಕನ್ನರಿಗೆ ಪ್ರಸಕ್ತ ಜನ್ಮದಲ್ಲಿ ಮಾತ್ರ ನಂಬಿಕೆವುಳ್ಳವರಾದ್ದರಿಂದ ಈ ಕ್ಷಣ ಬೇಕಾದುದನ್ನು ಈ ಕ್ಷಣವೇ ಮಾಡುತ್ತಾರೆ. ಪುನರ್ಜನ್ಮದಲ್ಲಿ ವಿಶ್ವಾಸವುಳ್ಳ ಭಾರತೀಯರು, ಅಮೇರಿಕನ್ನರಂತೆ ಅವಸರಿಸುವವರಲ್ಲ. ಹಾಗಾಗಿ ಈ ಜನ್ಮದಲ್ಲಿ ಮಾಡಬಹುದಾದದ್ದೆಲ್ಲವನ್ನೂ ಮುಂದಿನ ಜನ್ಮದಲ್ಲಿ ಮಾಡಲು ಅವಕಾಶವಿದೆ; ಅವಸರವಿಲ್ಲ- ಎಂಬ ದೃಢ ನಂಬುಗೆಯವರು ನಾವು ಎಂದು ವ್ಯಂಗ್ಯದೊಂದಿಗೆ ತಿಳಿಸುತ್ತಾ ಅಮೇರಿಕಾದ ತಾಂತ್ರಿಕ ಮುನ್ನಡೆಯನ್ನು ಹೊಗಳಿದ್ದಾರೆ.

ಅಮೇರಿಕಾದ ಜನರ ಮುಖ್ಯ ಧ್ಯೇಯವೇ 'ಕಾಂಚನ'. ಅವರ ಪ್ರತಿನಿಮಿಷವೂ ಕಾಂಚನದ ಹೋರಾಟಕ್ಕಾಗಿಯೇ ವ್ಯಯವಾಗುವುದು. ಯರೊಬ್ಬರೂ ಕಾಣದ ಒಂದು, ನವೀನವಾದ ದಾರಿಯನ್ನು ತಾನು ಹುಡುಕಿ, ಐಶ್ವರ್ಯವಂತನಾಗಬೇಕೆಂಬುದೇ ಅವರ ಹಂಚಿಕೆಯಾದ್ದರಿಂದ ಅದಕ್ಕಾಗಿಯೇ ಹಗಲಿರುಳು ಶ್ರಮಿಸುವರು. ಒಬ್ಬನಾದರೂ ಎರಡೇ ಎರಡು ನಿಮಿಷಗಳನ್ನು ಅನಾವಶ್ಯಕವಾಗಿ ಹಾಳುಮಾಡಲಾರನು ಏನಾದರೂ ಮಾಡುತ್ತಲೇ ಇರಬೇಕೆಂಬ ಸ್ವಭಾವದವರಾದ್ದರಿಂದ ಉದ್ದೇಶವಿರಲಿ, ಇಲ್ಲದಿರಲಿ, ಸುಮ್ಮನೆ ಕೂರುವ ನಿರುದ್ಯೋಗಿಯಾಗಕೂಡದೆಂಬುದೇ ಅವರ ತತ್ವ. ಅಲ್ಲಿನ ವಿಶಿಷ್ಟ ಸಾಧನೆಗೂ, ತೀವ್ರ ಸಂಪರ್ಕ ಸಾರಿಗೆ ಮೊದಲಾದ ಸಂಸ್ಥೆಗಳ ಚುರುಕಿಗೂ ಅದು ಸಾಕ್ಷಿಯಾಗಿದೆ.

ಅಲ್ಲಿನದೆಲ್ಲ ಯಾಂತ್ರಿಕ ಜೀವನ. ಅವರಸದ ಓಡಾಟ. ಇದರಿಂದಾಗಿಯೇ ಆ ದೇಶದಲ್ಲಿ ಹೃದ್ರೋಗದಿಂದ ಸಾಯುವವರ ಸಂಖ್ಯೆ ಹೆಚ್ಚು ಎನ್ನುವುದನ್ನು ಮನಗಂಡಿದ್ದಾರೆ. "ಅವರಿಗೆ ಇರುವ ಹೃದಯ ಮುಖಗಳನ್ನು ನೋಡಿದರೆ, ಅದು ಗೊತ್ತಾಗುವುದರೊಂದಿಗೆ ಮನಸ್ಸು ತಿಳಿಯುತ್ತದೆ. ನಮ್ಮಲ್ಲಿರುವುದು ಮುಚ್ಚಿಕೊಂಡ ಹೃದಯಕಮಲವಾದುದರಿಂದ ಮಿಡಿಯುವುದು ಕಡಿಮೆ. ಸಮಾಧಿ ಸ್ಥಿತಿಯಲ್ಲಿರುವುದೇ ಹೆಚ್ಚು, ಹೀಗಾಗಿ ನಮಗೆ ಹೃದ್ರೋಗದ ಬಾಧೆ ಬಂದರೆ ಸಾಯುವ ತನಕವೂ ಗೊತ್ತಾಗುವುದಿಲ್ಲ".[11] ಲೇಖಕರ ಈ ಅಭಿಪ್ರಾಯ ಹೆಚ್ಚು ಮೊನಚಾಗಿಯೂ ಮಾರ್ಮಿಕವಾಗಿಯೂ ಇರುವುದನ್ನು ಕಾಣಬಹುದು.

ಅಲ್ಲಿನ ತರುಣರಾಗಲಿ, ತರುಣಿಯರಾಗಲಿ ನಿತ್ಯ ಗೆಲಸಗಳಲ್ಲಿ ಇರುವ ಆಕರ್ಷಣೆಯನ್ನು ಲೇಖಕರು ಮೆಚ್ಚುತ್ತಾರೆ. ಇದನ್ನು ಹೋಟೆಲುಗಳಲ್ಲಿ ಕೆಲಸಮಾಡುವವರ ಬಗ್ಗೆ, ಅವರ ಸೇವಾ ಮನೋಭಾವದ ಬಗ್ಗೆ ತಿಳಿಸುತ್ತಾ, "ಗಿರಾಕಿಯ ಮೇಜಿನ ಬಳಿಗೆ ಧಾವಿಸಿ ಹೊಗಿ ಅವನಗೆ ಏನು ಬೇಕೆಂದು ಕೇಳಿ, ಬರೆದುಕೊಂಡು, ಅಡುಗೆ ಮನೆಗೆ ಧಾವಿಸಿ ಅದನ್ನು ತಂದು ಒಪ್ಪಿಸುವ ಕೆಲಸವಷ್ಟೇ, ಅಂಥ ಕೆಲಸವನ್ನು ಅವರು ಚುರುಕಿನಿಂದ ಮಾತ್ರವಲ್ಲ ನಗುಮೊಗದಿಂದ ಮಾಡುತ್ತಿರುವುದು ಕಂಡು ನನಗಂತು ಸದಾ ಆಶ್ಚರ್ಯವಾಗುತ್ತಿತ್ತು" ಎಂದು ಹೇಳುತ್ತಾರೆ. ಗಿರಾಕಿಗಳನ್ನು ನಕ್ಕು ಸ್ವಾಗತಿಸುವುದು ಅವರ ಮುಂದೆ ಮೆನು ಕಾರ್ಡ್‌ನ್ನು ಇರಿಸಿ, 'ಇಂಥ ತಿನಿಸು' ಬೇಕು ಎಂದು ಹೇಳುವ ತನಕ ಕಾದು, ಅದನ್ನು ತಂದುಕೊಟ್ಟು ಗಿರಾಕಿ ಏಳುವ ಮೊದಲು ಬಿಲ್ಲನ್ನು ಬರೆದು ಇರಿಸಬೇಕು. ಇಂಥ ನಿರಾಕರ್ಷಕ ಕೆಲಸವೂ ಮನುಷ್ಯರೊಡನೆ ನಡೆಸುವ ಸಂಪರ್ಕಾವಕಾಶ ಎಂಬ ಭಾವನೆಯಿಂದ ವರ್ತಿಸುವುದು ಕಂಡರೆ ಅವರ ಉದಾರ ಸೇವಾ ಮನೋಭಾವ ಮನದಟ್ಟಾಗುತ್ತದೆ. ಈ ಸಂದರ್ಭದಲ್ಲಿ ಲೇಖಕರು ನಮ್ಮ ನಾಡಿನ ಅನೇಕ ಹೋಟೆಲುಗಳನ್ನು ಸ್ಮರಿಸಿದ್ದಾರೆ. "ಪರರ ಚಾಕರಿಯನ್ನು ಬಿಗುಮುಖದಿಂದಲೇ ಮಾಡಬೇಕು ನಮ್ಮ ಬದುಕಿನ ಅಸಂತೃಪ್ತಿಯು ಗಿರಾಕಿಗೂ ತಿಳಿಯಬೇಕು ಎಂಬಂಥವರು ನಾವು ಎಂದು ವಿಡಂಭಿಸುವುದರೊಂದಿಗೆ ದೊರೆತ ಕೆಲಸದಿಂದ ಸಂತೋಷ ಪಡುವ ಜನರು ನಾವಲ್ಲಾ ಎಂದೆನ್ನುತ್ತಾರೆ.

ಉದ್ಯೋಗಗಳಲ್ಲಿ ಇಲ್ಲಿಯ ಜನರು ಪರಿಭೇದವನ್ನೇಣಿಸಲಾರರು. ಯಾರು ಯಾವ ವೃತ್ತಿಯನ್ನೇ ಮಾಡಲಿ, ಅದು ನಿಂದನಾಸ್ಪದವಾಗಲಾರದು. ಎಷ್ಟೋ ಜನರು ತಮ್ಮ ವೃತ್ತಿಯನ್ನು ಬದಲಾಯಿಸುತ್ತಾ ಬರುವುದುಂಟು; ಇಂದು ವಕೀಲನಾದವನು ನಾಳೆ ವ್ಯಾಪಾರಿಯಾಗುವನು. ಇಂದು ವ್ಯಾಪಾರಿಯಾದವನು

[illegible]

[illegible]

[illegible]

[illegible]

ನಾಳೆ ಬೇಸಾಯಗಾರನಾಗುವನು. ಇವರಿಗೆ ಮುಖ್ಯವಾಗಿ ದ್ರವ್ಯಾರ್ಜನಾ ಕಾರ್ಯವು ಎಲ್ಲಿ ಸುಲಭ ಆಗುವುದೋ ಅದನ್ನು ಮಾಡುವರು. ಅವರು ಗಳಿಸಿದ ಈ ಅಪಾರ ದ್ರವ್ಯವನ್ನು ವ್ಯಯ ಮಾಡುವ ರೀತಿಯು ವಿಚಿತ್ರವಾದದ್ದು. ಇವರ ನಡೆನುಡಿಗಳು ಸರಳವಾದವು. ಮನಸ್ಸಿಗೆ ತೋಚಿದುದನ್ನು ನೇರವಾಗಿ ಹೇಳುವವರಾಗಿದ್ದಾರೆ. ಅಲ್ಲಿನ ಜನರು ಸ್ವತಂತ್ರ ಪ್ರಿಯರು. ಅಲ್ಲಿ ಎಲ್ಲರೂ ಸ್ವತಂತ್ರರೇ ಸಾಮಾನ್ಯ ಕೂಲಿಕಾರನಿಗೂ, ಪ್ರಜಾಪ್ರಾತಿನಿಧ್ಯದ ಅಧ್ಯಕ್ಷನಿಗೂ ಸ್ವಾತಂತ್ರದಲ್ಲಿ ಭೇದವಿಲ್ಲ ಎನ್ನುವುದನ್ನು ಕಾಣಬಹುದು.

ಆದರೆ ಅಲ್ಲಿನ ಒಂದು ಅನಿಷ್ಟತೆ ಎಂದರೆ ವರ್ಣದ್ವೇಷ ಇದರ ಬಗ್ಗೆ ವಾಷಿಂಗ್ಟನ್ ನಗರದ ಉದಾಹರಣೆ ಕೊಡುತ್ತಾರೆ. ವಾಷಿಂಗ್ಟನ್ ನಗರದಲ್ಲಿನ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನರು ನೀಗ್ರೋಗಳು ಇಲ್ಲಿ ವಾಸಿಸುವ ಬಿಳಿಯರಿಗಿಂತ ಅವರ ಸಂಖ್ಯೆಯೇ ಅಧಿಕ ಎನ್ನುತ್ತಾರೆ. ಈ ಜನರು ಉಪಾಹಾರ ಗೃಹಗಳಲ್ಲಿ ಇರಲಿ, ಬೀದಿಗಳಲ್ಲೇ ಇರಲಿ, ವಿಮಾನಗಳಲ್ಲೇ ಆಗಲಿ, ಬಿಳಿಯರೊಡನೆ ಭುಜ ಭುಜ ತಾಗಿಸಿ ಅಲೆದಾಡುವುದನ್ನು ಕಂಡಿದ್ದಾರೆ. ಆರ್ಥಿಕವಾಗಿ ಬಿಳಿಯರಿಗಿಂತ ಹಿಂದುಳಿದಿದ್ದರೂ ಆ ತೋರಿಕೆ ಅವರ ನಡೆನುಡಿಗಳಲ್ಲಿ ಕಂಡುಬರುವುದಿಲ್ಲ. ಎಷ್ಟೋ ಕಡೆ ಅಚ್ಚ ಕರಿಯ ನೀಗ್ರೋವಿನ ಕೈಯನ್ನು ಹಿಡಿದು ಬಿಳಿಯ ತರುಣಿಯರು ಅಲೆದಾಡುವುದನ್ನು ಲೇಖಕರು ಕಂಡಿದ್ದಾರೆ. ಕರಿ, ಬಿಳಿಯ ಪ್ರಣಯಿಗಳು ಸುತ್ತಣ ಸಮಾಜವನ್ನು ಅಲಕ್ಷಿಸಿ ನಡೆದಾಡಿದ್ದನ್ನು ಕಂಡ ಅನೇಕರು ಅವರಲ್ಲಿನ ಸುಧಾರಣೆಯನ್ನು ತೋರಿಸುತ್ತಾರೆ. ನಮ್ಮ ನಾಡಿನ ಶೇಕಡಾ ಇಪ್ಪತ್ತರಷ್ಟು ಅಸ್ಪಶ್ಯರನ್ನು ನಡೆಯಿಸಿಕೊಳ್ಳುವ ರೀತಿಯನ್ನು, ಇನ್ನೂ ಅವರು ಆರ್ಥಿಕವಾಗಿ ದುರ್ಬಲರಾಗಿರುವ ಸ್ಥಿತಿಯನ್ನು ಕಾಣುತ್ತೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳುತ್ತಾ, ನೀಗ್ರೋ ಜನರ, ಹಕ್ಕು ಬಾಧ್ಯತೆಗಳಿಗಾಗಿ ಅವರೊಡನೆ ಹೆಗಲು ಕೊಟ್ಟು ಚಳುವಳಿ ಹೂಡುವ ಅಷ್ಟೊಂದು ದೊಡ್ಡ ಬಿಳಿಯರ ಗುಂಪಿಗೆ ತತ್ಸಮಾನ ರೀತಿಯಲ್ಲಿ ನಮ್ಮಲ್ಲಿ ಕಾಣಲು ಶಕ್ಯವೇ ಇಲ್ಲವೆನ್ನುತ್ತಾರೆ. ಹರಿಜನರ ವಿಷಯದಲ್ಲಿ ಮರುಕ ತೋರುವ ಸಾಮಾಜಿಕ ಪ್ರಜ್ಞೆ ಕೇವಲ ನಾಲಿಗೆಯ ಅನುಕಂಪದಲ್ಲಿ ಮುಗಿಯುತ್ತದೆ ಎಂದು ವಿಷಾದಿಸುತ್ತಾರೆ.

"ಅಸ್ಪೃಶ್ಯತೆಯನ್ನು ಕಾಯಿದೆಯಿಂದಲಷ್ಟೇ ವಿರೋಧಿಸಿ ಅವರ ಆರ್ಥಿಕ ಸ್ಥಿತಿಯನ್ನು ಕಾಯಿದೆಯಿಂದ ಸರಕಾರವೇ ಸುಧಾರಿಸಬೇಕು– ಎಂದು ಜೋಲುಮೋರೆ ಹಾಕಿ ನಮ್ಮ ಹರಿಜನರು ಕಾಯುತ್ತಾರೆ. ಸರಕಾರವನ್ನು ಕುಲುಕಿ, ತಮ್ಮ ಹಕ್ಕು ಬಾಧ್ಯತೆಗಳನ್ನು ಕಾದುಕೊಳ್ಳುವವರು ಅಲ್ಲಿಯ ಕರಿ ಜನರು. ತಮ್ಮ ಆರ್ಥಿಕ ಭದ್ರತೆಗಳನ್ನು ಸ್ವಶಕ್ತಿ ಮತ್ತು ಸಾಮರ್ಥ್ಯಗಳಿಂದ ಬೆಳೆಯಿಸಿಕೊಳ್ಳುವ ಹಟ ಅವರದ್ದು.

ಜನಕ್ಕೆ ನಾವು ಕೊಟ್ಟರೆ ಉಂಟು ಎಂದು ನಮ್ಮ ಪುಡಾರಿಗಳು ಆಶ್ರಯದಾತರ, ಸೋಗನ್ನು ಹಾಕುತ್ತಾರೆ. ಜನರ ಸ್ವಾಯತ್ತತೆಯನ್ನು, ಸ್ವಾತಂತ್ರ್ಯವನ್ನು ಅಪಹರಿಸಲಾಗದ ಜಗಜೀವನ ಅಲ್ಲಿನದು. ಅಂಥ ಸರಕಾರ ಅಲ್ಲಿನದು".[12] ಎಂದು ಲೇಖಕರು ನಮಗೂ ಅವರಿಗೂ ಇರುವ ನಿಜವಾದ ಅಂತಃಕರಣವನ್ನು ಗುರುತಿಸುತ್ತಾ ನಮ್ಮಲ್ಲಿನ ಅಸ್ಪೃಶ್ಯರ ದುರ್ಬಲತೆಯನ್ನು ಎತ್ತಿ ತೋರಿಸುವುದರೊಂದಿಗೆ ಗಂಭೀರವಾದ ವಿಷಯವನ್ನು ಲಘುವಾದ ಧಾಟಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ದಲಿತರಲ್ಲಿರುವ ಅಜ್ಞಾನ, ಸಣ್ಣತನ, ಡಾಂಭಿಕತೆಯನ್ನು ಲೇಖಕರು ನಿರ್ಭಿಡೆಯಿಂದ ಹೇಳಿರುವುದು ಕಂಡುಬರುತ್ತದೆ.

"ಕಾರಂತರು ಕಲಾ ಶಾಲೆಗಳ ಅಪೂರ್ವ ಚಿತ್ರ, ಶಿಲ್ಪ, ಪ್ರಕೃತಿಯ ಸುಂದರ ದೃಶ್ಯಗಳು; ಅಮೇರಿಕದ ಪ್ರಾಣಿ ಸಂಗ್ರಾಹಾಲಗಳು; ಪಾರ್ಕುಗಳು, ಬೃಹತ್ ಕಟ್ಟಡಗಳು– ಇವುಗಳಷ್ಟನ್ನೇ ತಮ್ಮ ಪ್ರವಾಸಾವಧಿಯಲ್ಲಿ ನೋಡಿ ಬರಲಿಲ್ಲ. ಅವರು ಆತ್ಮೀಯರ, ಸ್ನೇಹದ ಸವಿಯನ್ನು ಉಂಡಿದ್ದಾರೆ. ಆಪ್ತರ ಜೊತೆ ನಕ್ಕು ನಲಿದಿದ್ದಾರೆ, ಚರ್ಚಿಸಿದ್ದಾರೆ, ಸುತ್ತಾಡಿದ್ದಾರೆ. ಆ ಸ್ನೇಹದ ಆತಿಥ್ಯದ ಸವಿಯನ್ನು ಕಾರಂತರು ನಮಗೂ ಕಾಣಿಸಿದ್ದಾರೆ. ಅಂತರಾಳದಿಂದ ಒಸರಿ ಬರುವ ಸ್ನೇಹ, ಮಾನವೀಯ ಗುಣಗಳನ್ನು ಯಾರಲ್ಲಿಯೇ ಆಗಲಿ ಕಂಡರೆ ಮೆಚ್ಚುವ ಮನಸ್ಸು ಕಾರಂತರದು". ಎನ್ನುವ ಎಸ್.ವಿದ್ಯಾಶಂಕರ ಮಾತನ್ನು ಮರುಮಾತಿಲ್ಲದೆ ಒಪ್ಪಿಕೊಳ್ಳಬಹುದು. ಈ ದಿಸೆಯಲ್ಲಿ ಕಾರಂತರ ಬರಹಗಳಲ್ಲಿ ಬದುಕಿನ ಎಳೆಯನ್ನು ಬಿಡಿಸಿರುವುದು ಕಂಡುಬರುವುದರ ಜೊತೆಗೆ ಚಲನಶೀಲವಾದ ಚಿಂತನೆಗಳು ಪ್ರೇರಣೆಗೊಂಡಿರುವುದನ್ನು ಕಾಣಬಹುದು.

"ಪರದೇಶದ ಜನಗಳು, ಪವಿತ್ರ ಭಾರತಕ್ಕೆ ಬಂದು ಇಲ್ಲಿ ಏನೂ ಬೇಕಾದರೂ ತಮ್ಮ ಡಾಲರುಗಳನ್ನೋ, ಪೌಂಡುಗಳನ್ನೋ, ಮಾರ್ಕುಗಳನ್ನೋ, ಹೋಟೆಲುಗಳನ್ನು ಕಟ್ಟುತ್ತಾ ಹೋಗಬೇಕು. ನಮ್ಮ ಜನಗಳು ಮಾತ್ರ ಪರದೇಶಗಳಿಗೆ ಹೋಗಿ ಒಂದು ಕಾಸನ್ನೂ ವೆಚ್ಚ ಮಾಡಬಾರದು– ಎಂಬ ರಾಜಕೀಯ ನನಗಂತು ನಾಚಿಕೆ ತಂದಿತ್ತು" ಎಂದು ಲೇಖಕರು ಖಂಡಿಸುತ್ತಾರೆ. ಅಲ್ಲದೆ ನಮ್ಮ ದೇಶದ ಮಹಾನ್ ಯೋಜನೆಗಳಲ್ಲಿ ನಾಡಿನ ಸಾಂಸ್ಕೃತಿಕ ವಿಷಯಗಳ ಮತ್ತು ಪ್ರಾಚ್ಯ ಸಂಶೋಧನೆಗಳ ಬಗ್ಗೆ ಜನಸಾಮಾನ್ಯರು ಅಭಿರುಚಿ ಬೆಳೆಸಿಕೊಳ್ಳುವಂತಹ ಒಂದೇ ಒಂದು ಸಾರ್ಥಕ ಪ್ರಯತ್ನವೂ ನಮ್ಮಲ್ಲಿಲ್ಲ. ಆದರೆ ಸಂಸ್ಕೃತಿಯನ್ನು ಕುರಿತು ತಾಸು ತಾಸು ವಾಕರಿಕೆ ಮಾಡುವ ನಿಸ್ಸೀಮರಿಗೆ ಮಾತ್ರ ನಮ್ಮಲ್ಲಿ ಬರಗಾಲವಿಲ್ಲವೆಂದು ಎಂದು ಕುಟುಕುತ್ತಾ ಓದುಗರ ಚಿಂತನೆಗೆ ಸಾಣೆಹಿಡಿಯುತ್ತಾರೆ.

ಕಾರಂತರೇ ಹೇಳಿರುವಂತೆ "ಅಲ್ಲಿ ಏನೇನೆಲ್ಲ ಕೊಳಚೆ ಇದೆ ಎಂದು ಹುಡುಕಿ ತೋರಿಸಲು ಇಲ್ಲವೆ ನೋಡಲು, ನಾನು ಹೋದದಂತು ಅಲ್ಲ" ಎನ್ನುವುದನ್ನು, ತಮಗಾದ ಅನುಭವದಿಂದ ತಿಳಿಸಿದ್ದಾರೆ. ಇದರಿಂದಾಗಿ ಅಮೇರಿಕನ್ನರಲ್ಲಿನ ಉತ್ತಮ ಅಂಶಗಳ ಬಗ್ಗೆ ಒತ್ತಿ ಹೇಳುತ್ತಾ ಅವುಗಳಲ್ಲಿ ನಾವು ಅನುಸರಿಸಬೇಕಾದ ಅಂಶಗಳನ್ನು ತಿಳಿಸುತ್ತಾ ನಮ್ಮಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವಲ್ಲಿ ಸೂಕ್ಷ್ಮ ಹಾಸ್ಯರೂಪದಲ್ಲಿದ್ದರೂ ವಿಡಂಬನೆಯ ಮೊನಚನ್ನು ಕಾಣಬಹುದು.

**ಅಮೇರಿಕದಲ್ಲಿ ನಾನು–ಬಿ.ಜಿ.ಎಲ್. ಸ್ವಾಮಿ :**

ಲೇಖಕರು ಆರು ವರ್ಷ ಅಮೇರಿಕಾದಲ್ಲಿ ನೆಲೆಸಿ ಅಮೆರಿಕನ್ನರೊಡನೆ ಬೆರೆತು ಪಡೆದುಕೊಂಡ ಅನುಭವಗಳನ್ನು ನವಿರಾದ ಹಾಸ್ಯಶೈಲಿಯಲ್ಲಿ ನಿರೂಪಿಸಿದ್ದಾರೆ. ಎಲ್ಲೇ ಆದರೂ ಮನುಷ್ಯ ಸ್ವಭಾವ ಒಂದೇ ಎನ್ನುವುದನ್ನು ಲೇಖಕರು "ಹಾಸ್ಯಾಸ್ಪದವಾದಾಗ ನಾವೂ ಅವರಂತೆಯೇ, ಅವರೂ ನಮ್ಮಂತೆಯೇ, ಸಂದರ್ಭಗಳ ಸ್ವರೂಪ ಬೇರೆ ಬೇರೆ ಇರಬಹುದು. ಹಾಗೆಯೇ ನಗುವ ಬಾಯಿ ಅಗಲವೂ, ಆಳವೂ ಬಗೆ ಬಗೆಯಾಗಿರಬಹುದು" ಎಂದೆನ್ನುತ್ತ ಅನುಭವ ಚಿತ್ರಗಳ ತಾತ್ಪರ್ಯವೇ ಪ್ರವಾಸಕಥನವಾಗುತ್ತದೆ ಎಂದು ತಿಳಿಸುವ ಲೇಖಕರ ಅಭಿಪ್ರಾಯ ಸೂಕ್ತವೆನಿಸುತ್ತದೆ.

ಮನುಷ್ಯ ದಿನನಿತ್ಯದ ಬದುಕಿನಲ್ಲಿ ಅಪೇಕ್ಷಿಸುವ ನೆಮ್ಮದಿ, ಬದುಕಿನ ಸ್ವರೂಪವನ್ನು ಲೇಖಕರ ಹಾಸ್ಯಮಿಶ್ರಿತ ಶೈಲಿ ವಾಚಕರಿಗೆ ಮುದ ನೀಡುವುದರೊಂದಿಗೆ ವೈಚಾರಿಕತೆಯನ್ನು ಹೆಚ್ಚಿಸುತ್ತದೆ. "ಹಡಗಿನಲ್ಲಿ ಶೌಚಕ್ಕೆ ಕುಳಿತಾಗ ಏಕಾಂತ ಭಂಗ– ಅದರ ನಿವಾರಣೆಗಾಗಿ ಮಾಡಿದ ಪ್ರಯತ್ನ; ಅಮೇರಿಕನ್ ಸ್ತ್ರೀಯರ ಟೋಪಿಯ ಮೇಲಿನ ಹುಚ್ಚು, ಸೆಕ್ರೆಟರಿಯ ಥ್ರಿಲ್ ಹಾಗೂ ಅದರ ಪರಿಣಾಮ ಇದೆಲ್ಲಾ ಅಮೇರಿಕನ್ನರ ಹುಚ್ಚಾಟ ವರ್ತನೆಗಳ ಬಗೆಗೆ ನಗೆಯ ಕಚಗುಳಿ ಇಡುತ್ತವೆ"[13] ಡಾ॥ಎಸ್. ವಿದ್ಯಾಶಂಕರ ಅವರ ಮಾತು ನಿಜವಾದರೂ ಕೆಲವು ಸ್ವಾರಸ್ಯ ಪ್ರಸಂಗಗಳ ಬಗ್ಗೆ ಹೇಳದಿದ್ದರೆ ಅಮೇರಿಕನ್ನರ ಹುಚ್ಚಾಟಗಳು ಪರಿಚಿತವಾಗುವುದಿಲ್ಲ. ಆ ಕಾರಣಕ್ಕಾಗಿ ಈ ಮುಂದಿನಂತೆ ಕೆಲವನ್ನು ವಿವರಿಸಲಾಗಿದೆ.

**ಟೋಪಿಯ ಪ್ರಸಂಗ :** ಇಂಡಿಯಾ ಬಿಡುವುದಕ್ಕೆ ಮುನ್ನ ಲೇಖಕರನ್ನು ಅವರ ಗೆಳೆಯರು 'ಹ್ಯಾಟಿಲ್ಲದೆ ಪರದೇಶ ಪ್ರಯಾಣ ಮಾಡುವುದುಂಟೆ? ಟೋಪಿ ನೀನು ಧರಿಸಿರುವ ಸೂಟಿಗೊಂದು ಗಾಂಭೀರ್ಯ ಕೊಡುತ್ತದೆ. ಅದಿದ್ದೆ, ಇರಬೇಕು ಎಂದು ಉಪದೇಶಿಸಿದರು, ಮನೆಯವರು ತಲೆಗೊಂದು ಸೂರಿಲ್ಲದೆ ಮನೆಯಿಂದ ಹೊರಕ್ಕೆ ತಲೆಯಿಡುವುದೇ ಅವಮರ್ಯಾದೆ; ಇನ್ನು ಟೋಪಿ ಧರಿಸದೆ

ದೇಶದಿಂದ ಆಚೆ ಹೋಗುವುದು ಪೋಕರಿತನದ ಪರಮಾವಧಿ' ಎಂದು ವಾದಿಸಿದರು. ಕೊನೆಗೆ ಲೇಖಕರು ಕಾಶ್ಮೀರದ ಕಲೆಗಾರಿಕೆಯ ಶೈಲಿ, ರಟ್ಟು ರಟ್ಟಾದ ಮಡಚುವ ತೆರದ, ಕಲಾಕುಶಲತೆಯ ಕಸೂತಿಯಿದ್ದ ಟೋಪಿಯನ್ನು ಆರಿಸಿದರು. ಆ ಟೋಪಿ ಅಮೇರಿಕನ್ನರನ್ನು ಎಷ್ಟು ಆಕರ್ಷಿಸಿತೆಂದರೆ, ಲೇಖಕರಿಗೆ ಕಾಣದಂತೆ, ಅವರ ಬೆನ್ನ ಹಿಂದೆ ಹತ್ತಾರು ಜನ ಗುಂಪು ಗುಂಪಾಗಿ ಒಂದೆರಡು ಸಂದರ್ಭಗಳಲ್ಲಿ ಹಿಂಬಾಲಿಸಿ ಬಂದರು ಒಂದು ಸಂದರ್ಭದಲ್ಲಿ ಪೋಲಿಸಿನವನೊಬ್ಬ ಲೇಖಕರ ಬಳಿ ಬಂದು, ಇವರು ನಿಮಗೆ ತೊಂದರೆ ಕೊಡುತ್ತಾರೆಯೇ? ಬೇಸರ ಮಾಡುತ್ತಾರೆಯೇ ಎಂದು ಶ್ರದ್ಧೆಯಿಂದ ಕೇಳಿದ್ದೂ ಉಂಟು.

ಲೇಖಕರು ಕೆಲಸ ಮಾಡುತ್ತಿದ್ದ ಸ್ಥಳಕ್ಕೂ ವಾಸಿಸುತ್ತಿದ್ದ ಸ್ಥಳಕ್ಕೂ ಹತ್ತು ನಿಮಿಷದ ನಡಿಗೆ, ನಿತ್ಯವೂ ಬಸ್ಸಿಗಾಗಿ ಮನೆಯ ಎದುರಿನ ಬಸ್ ಸ್ಟಾಪ್‌ನಲ್ಲಿ ಕಾಯುತ್ತಿದ್ದಾಗ ಆ ವೇಳೆಗೆ ಅಲ್ಲಿಗೆ ಅರವತ್ತು ವರ್ಷದ ಮುದುಕಿಯೊಬ್ಬಳೂ ಇಪ್ಪತ್ತೈದು ವರ್ಷದ ಹುಡುಗಿಯೊಬ್ಬಳೂ ಬರುತ್ತಿದ್ದರು. ಒಂದು ದಿನ ಹಿರಿಯ ಗೆಳೆಯರೊಬ್ಬರ ಮನೆಗೆ ಔತಣಕ್ಕೆ ಹೋಗಬೇಕಿದ್ದುದರಿಂದ ಲೇಖಕರು ಟೋಪಿ ಹಾಕಿಕೊಂಡು ಬಸ್‌ಸ್ಟಾಪಿಗೆ ಬಂದರು. ಯಥಾ ಪ್ರಕಾರ ಮುದುಕಿ ಹುಡುಗಿಯರ ಭೇಟಿಯಾಯಿತು. ಅವರಿಗೆ ಟೋಪಿಯ ಮೇಲೆ ಕಣ್ಣು ತಾವೇ ಮೇಲೆಬಿದ್ದು ಲೇಖಕರೊಡನೆ ಮಾತಿಗಿಳಿದರು. ಟೋಪಿಯನ್ನು ಬಹಳ ಕೊಂಡಾಡಿದರು. ಸುತ್ತು ಬಳಸಿನ ಮಾತಾದ ಮೇಲೆ ಮುದುಕಿ "ನೋಡಿ, ನಾಳೆ ಸಂಜೆ ಡೋರಿಯ (ಡೋರಿ ಮುದುಕಿ ಮಗಳು) ಕಾಲೇಜಿನಲ್ಲಿ ಒಂದು ಪಾರ್ಟಿ ಇದೆ ಒಳ್ಳೆಯ ಬಟ್ಟೆ ಬರೆಗಳನ್ನು ಹಾಕಿಕೊಂಡು ಹೋಗಬೇಕಾಗಿದೆ. ಇದಕ್ಕೋಸ್ಕರವಾಗಿಯೇ ನೋಡಿ ಈ ಗೌನನ್ನು ತೆಗೆದುಕೊಂಡಿದ್ದೇನೆ" ಎಂದು ಗೌನನ್ನು ಬಿಚ್ಚಿ ತೋರಿಸಿದಳು. ಗೌನು ಬೂದು ಬಣ್ಣದ್ದು, ಲೇಖಕರ ಟೋಪಿಯೂ ಅದೇ ಬಣ್ಣದ್ದು. ಗೌನಿಗೊಪ್ಪುವ ತಲೆ ತೊಡಿಗೆ ಇಲ್ಲದ್ದರಿಂದ ಟೋಪಿಯನ್ನು ಒಂದೆರಡು ದಿನಗಳ ಮಟ್ಟಿಗೆ ಎರವಲು ಕೊಡಿರೆಂದು ಪ್ರಾರ್ಥಿಸಿದಳು. 'ಇದು ಗಂಡಸರ ಟೋಪಿ ಇದನ್ನು ಧರಿಸಿದರೆ ಜನ ನೋಡಿ ನಗುವುದಿಲ್ಲವೆ' ಎಂದು ತಮ್ಮ ಅನುಮಾನವನ್ನು ಲೇಖಕರು ಈ ಮಹಿಳೆಯ ಮುಂದಿಟ್ಟರು. 'ನಕ್ಕರೆ ಅದು ಅವರ ಹುಚ್ಚುತನವನ್ನು ತೋರಿಸುತ್ತದೆ ಅಷ್ಟೇ; ಎಂದಳು ಡೋರಿ ಜನ ನಗುತ್ತಾರೆಂದು ನಾವು ಸುಂದರ ವಸ್ತುಗಳನ್ನು ತೊಡದಿರುವುದಕ್ಕಾಗುತ್ತದೆಯೆ? ನಮ್ಮ ಡೋರಿ ರೂಪವಂತೆ ಅವಳ ಗೌನು ಸೊಬಗಿನ ಗಟ್ಟಿ. ಅದರೊಡನೆ ಈ ಟೋಪಿ ಸೇರಿದರೆ. . .' ಎಂದು ಡೇರಿಯ ಅಮ್ಮ ಗಾಳಿಯಲ್ಲಿ ತೇಲಾಡಲು ಮೊದಲಿಟ್ಟರು. ಡೋರಿಯಂತೂ ಆನಂದ ಪರವಶಳಾದಂತೆ ಅಭಿನಯಿಸಿದಳು.

'ಈ ಟೋಪಿಯನ್ನು ನಾನು ಧರಿಸಿ ಪಾರ್ಟಿಗೆ ಹೋದೆನಾದರೆ ಅಲ್ಲಿನ ಕಣ್ಣುಗಳೆಲ್ಲವೂ ನನ್ನ ಮೇಲೆಯೇ. ಜನ ನಗುವುದಿಲ್ಲ. ಈ ಅಪರೂಪ ಸೌಂದರ್ಯಕ್ಕೆ ಮನಸೋತು, ತಮ್ಮ ಹತ್ತಿರ ಇಲ್ಲವಲ್ಲಾ ಎಂದು ಅಸೂಯೆ ಪಟ್ಟುಕೊಳ್ಳುತ್ತಾರೆ' ಎಂದಳು ಡೋರಿ. ಲೇಖಕರು ತಾಯಿ–ಮಗಳ ವಾದಕ್ಕೆ ಸೋತು ತಮ್ಮ ಟೋಪಿಯನ್ನು ಕೊಟ್ಟರು. ಪಾರ್ಟಿಯಾದ ಮೂರು ದಿನಗಳ ಮೇಲೆ ಲೇಖಕರಿಗೆ ಡೋರಿಯ ಮನೆಯಿಂದ ಕರೆ ಬಂದಿತು. ಕರೆ ಮನ್ನಿಸಿ ಮನೆಗೆ ಹೋದರೆ ಮನೆಯ ಯಜಮಾನ ಬೇರೆ ಯಾರೂ ಅಲ್ಲ. ಅವರಿಗೆ ಪ್ರಯೋಗ ಶಾಲೆಯಲ್ಲಿ ಪಾಠ ಹೇಳುತ್ತಿದ್ದ ಪ್ರೊಫೆಸರುಗಳಲ್ಲಿ ಒಬ್ಬರು. ಟೀ ಕುಡಿಯುವ ಕುಶಲ ಸಂಭಾಪಣೆ ನಡೆಸಿಯಾದ ಮೇಲೆ ಡೋರಿ ಲೇಖಕನ ಕೈಗೆ ನ್ಯೂಸ್‌ಪೇಪರ್ ಕಟಿಂಗ್ ಒಂದನ್ನು ಕೊಟ್ಟಳು. ಅದರ ಒಕ್ಕಣೆ ಹೀಗಿತ್ತು;

"ಲಿಬರಲ್ ಆರ್ಟ್ಸ್ ಯೂನಿಯನ್‌ನ ಆಶ್ರಯದಲ್ಲಿ ನಡೆದ ಪಾರ್ಟಿಯಲ್ಲಿ ಡೋರಿ ತೊಟ್ಟುಕೊಂಡಿರುವ ಟೋಪಿ ಆಹ್ವಾನಿತರನ್ನೆಲ್ಲ ಬೆರಗುಗೊಳಿಸಿತು. ಅದರ ನವೀನತೆಯೂ, ಸೊಬಗೂ, ಚಾತುರ್ಯವೂ ಎಲ್ಲರನ್ನೂ ಮೆಚ್ಚಿಸಿತು. ನಮ್ಮಲ್ಲಿರುವ ಉಡುಪು ತಯಾರಿಕೆಯ ಕಲೆಗಾರರು ಈ ಟೋಪಿಯನ್ನು ಪರೀಕ್ಷಿಸುವುದು ಭವಿಷ್ಯದ ಫ್ಯಾಷನ್ ದೃಷ್ಟಿಯಿಂದ ಅವಶ್ಯಕವಾಗಿದೆ".

ಮಗಳು, ತಂದೆ, ತಾಯಿಯವರಿಗೆ ಹಿಗ್ಗೇ ಹಿಗ್ಗು. ಏನೋ ಮಹತ್ಕಾರ್ಯವನ್ನು ಸಾಧಿಸಿದಷ್ಟು ಹೆಮ್ಮೆ, ಸಂತೋಷ. ಕಳೆದ ಮೂರು ದಿನಗಳಿಂದ ಅವರ ಮನೆಗೆ ತಂಡ ತಂಡವಾಗಿ ಜನರು, ಡೋರಿಯ ಗೆಳತಿಯರು ಮತ್ತು ಪಾರ್ಟಿಯ ವಿಷಯವನ್ನು ಪೇಪರುಗಳಲ್ಲಿ ಓದಿದವರು– ಟೋಪಿಯನ್ನು ಪರೀಕ್ಷಿಸಿ ತಮಗೂ ಅಂಥದೊಂದು ಬೇಕೆಂದು ಕೇಳುತ್ತಿರುವವರೆಂದೂ, ಪ್ರತಿದಿನವೂ ಹತ್ತಾರು ಜನ ಪೋನಿನಲ್ಲಿ ಇದೇ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆಂದೂ, ಒಬ್ಬೊಬ್ಬರೂ ಬಿಡಿಸಿ, ಬಿಡಿಸಿ, ತಿರುಗಿಸಿ, ತಿರುಗಿಸಿ ಉಪಮಾನ ಉಪಮೇಯ ಉದಾಹರಣೆಗಳೊಡನೆ ಹೇಳಿದರು. ಲೇಖಕರಿಗೆ ಪ್ರತ್ಯುತ್ತರವನ್ನು ಹೇಳಲೂ ತೋರಲಿಲ್ಲ. "ಇದೇನು ಅಭ್ಯಾಸ" ಹುಚ್ಚರನ್ನು ಕಂಡು ಮೆಚ್ಚುವವರನ್ನು ಹುಚ್ಚರೆಂದು ಕರೆಯಬೇಕೆ ಅಥವಾ ಬೆಪ್ಪರೆಂದು ಕರೆಯಬೇಕೇ?' ಎಂಬ ಪ್ರಶ್ನೆಯೊಂದು ಮಾತ್ರ ಒಂದೇ ಸಮನೆ ಅವರ ಮೆದುಳನ್ನು ಮೀಟುತ್ತಿತ್ತು.

**ಸೀರೆಯ ಕತೆ** : ಲೇಖಕರ ಗೆಳೆಯನ ಹೆಂಡತಿ ಉಟ್ಟಿದ್ದ ಸೀರೆಯನ್ನು ನೋಡಿ ಅಮೇರಿಕನ್ ಮಹಿಳೆಯರು ದಂಗಾದರು. ಸೀರೆಯ ವಿಷಯವಾಗಿ ಅವರಲ್ಲಿ ಮೂಡಿದ ಕೆಲವು ಅಭಿಪ್ರಾಯಗಳೂ

ತೀರ ವಿಚಿತ್ರವಾದವು ಎಂದು ತಿಳಿಸಿ ಸೀರೆಯ ಸ್ವಾರಸ್ಯವನ್ನು ನಿರೂಪಿಸಿದ್ದಾರೆ. ಅಮೇರಿಕದ ಹೆಂಗಸರಿಗೆ ಸರ್ವೇ ಸಾಧಾರಣವಾದ ತಮ್ಮ ನೈಜ ಸೌಂದರ್ಯವನ್ನು ಪ್ರದರ್ಶಿಸಿಕೊಳ್ಳುವ ಹಂಬಲ. 'ದೇವರು ಸೌಂದರ್ಯ ಮತ್ತು ಸೌಂದರ್ಯಮಯವಾದ ಕಾಲುಗಳನ್ನು ನನಗೆ ಕೊಟ್ಟಿರುವಾಗ ನಾನದನ್ನು ಪ್ರದರ್ಶಿಸಿಕೊಳ್ಳುವುದರಲ್ಲಿ ತಪ್ಪೇನಿದೆ? ಎಂದು ಸವಾಲು ಹಾಕುತ್ತಾರಂತೆ. ಇಂಥವರು, ಸೀರೆಗೇನೋ ಸಂಪೂರ್ಣವಾಗಿಯೇ ಮನಸೋತು ಪಾರ್ಟಿಗಳಲ್ಲಿ ಉಟ್ಟುಕೊಳ್ಳಬೇಕೆಂಬ ಆಸೆಗೂ ಬಲಿಯಾಗಿದ್ದಾರೆ. ಆದರೆ ಇವರಿಗಿರುವುದು ಒಂದೇ ಕೊರತೆ– ಉಡುಪು ಮೈಯನ್ನು ಪೂರ್ತಿ ಮುಚ್ಚಿಬಿಟ್ಟು, ದೇಹದ ಸ್ವಾಭಾವಿಕವಾದ ಸೌಂದರ್ಯವನ್ನು ಮರೆಯಾಗಿಸುವುದೆಂದು, ಹೇಗಾದರೂ, ಮಾಡಿ ಸೀರೆಯನ್ನಂತೂ ಉಟ್ಟುಕೊಳ್ಳಬೇಕು; ಆದರೆ ಅದು ಮೊಣಕಾಲಿನಿಂದ ಮೇಲುಟ್ಟಿರಬೇಕು ಎಂಬ ಹಟ. ಈ ಆಸೆಯನ್ನು ಕಾರ್ಯರೂಪಕ್ಕೆ ಮೊದಲು ತಂದವಳು; ಲೇಖಕರ ಲ್ಯಾಬೊರೆಟರಿಯಲ್ಲಿ ಓದುತ್ತಿದ್ದ ಪೆಗ್ಗಿ ಎಂಬ ಹುಡುಗಿ. ಅವಳು ತನ್ನ ಮನೆಯ ಕಾಕ್‌ಟೈಲ್ ಪಾರ್ಟಿಯಲ್ಲಿ ಸೀರೆಯುಟ್ಟು ಅತಿಥಿಗಳನ್ನು ಬರಮಾಡಿಕೊಳ್ಳಬೇಕೆಂಬ ತನ್ನ ಆಸೆಯನ್ನು ಗಂಡನೊಂದಿಗೆ ಹಂಚಿಕೊಳ್ಳುತ್ತಾಳೆ. ಆದರೆ ಗಂಡನಿಗೆ, ಹೆಂಡತಿ ಅವಲಕ್ಷಣದಿಂದ ಸೀರೆಯುಟ್ಟು ಅತಿಥಿಗಳ ಮುಂದೆ ನಗೆಪಾಟಲಿಗೆ ಗುರಿಯಾಗುವುದು ಇಷ್ಟವಿರಲಿಲ್ಲ. ಹೆಂಡತಿ ಅತ್ತು ಕರೆದು ರಂಪಮಾಡಿ ಒಪ್ಪಿಸಿಬಿಟ್ಟಳು. ಪಾರ್ಟಿ ನಿಶ್ಚಯವಾಯಿತು. ಅತಿಥಿಗಳಿಗೆ ಅಹ್ವಾನವೂ ಹೋಯಿತು. ಪೆಗ್ಗಿ ತನ್ನ ಹಿಂದೂ ಗೆಳತಿಯೊಬ್ಬಳಿಂದ ಸೀರೆ ಎರವಲು ಪಡೆದು ಉಟ್ಟು ತನ್ನ ಹಟ ಸಾಧಿಸಿಯೇ ಬಿಟ್ಟಳು. ಪೆಗ್ಗಿ, ಅಂಚುಗಳೆರಡೂ ಸೇರುವಂತೆ ಸೀರೆಯನ್ನು ಮಡಿಸಿ ಅದರ ಎತ್ತರವನ್ನು ಅರ್ಧ ಮಾಡಿ ನಮ್ಮ ಹೆಂಗಳೆಯರು ಉಡುವಂತೆಯೇ ನೆರಿಗೆ ಹಿಡಿದು ಉಟ್ಟು, ಸೆರಗನ್ನೂ ಹೆಜ್ಜೆಯವರೆಗೂ ಇಳಿಬಿಟ್ಟಿದ್ದಾಳೆ. ಮನೆಯ ಮೆಟ್ಟಿಲ ಮೇಲೆ ನಿಂತು ಅತಿಥಿಗಳನ್ನು ನಿರೀಕ್ಷಿಸುತ್ತಾ ಬಂದವರನ್ನು ಸ್ವಾಗತಿಸುತ್ತಾ ಇದ್ದಳು. ಆಗಮಿಸಿದ ಅಮೇರಿಕನ್ ಮಹಿಳೆಯರಿಗೆ ಮೆಚ್ಚಿಗೆಯೋ ಮೆಚ್ಚಿಗೆ. ಈ ಮಹಿಳೆಯರ ಸಂಭಾಷಣೆ ಸ್ವಾರಸ್ಯಕರವಾಗಿದೆ.

ಪೆಗ್ಗಿಯ ಕೈಯಲ್ಲಿ ಸೀರೆ ತಾಳಿದ ಅವಸ್ಥೆಯನ್ನು, ಇದರ ವಿಷಯವಾಗಿ ಅಮೇರಿಕನ್ ಮಹಿಳೆಯರು ಪ್ರದರ್ಶಿಸಿದ ಅವರ ಸ್ವಾಭಾವಿಕವಾದ ಎಳೆತನವನ್ನು ಕಂಡು ಲೇಖಕರಿಗೂ ಹಾಗೂ ಅವರ ಗೆಳೆಯನಿಗೂ ದೊಡ್ಡ ತಮಾಷೆಯಾಗಿ, ಪ್ರೇಕ್ಷಕರನ್ನು ನೋಡಿ ತಣಿದಿದ್ದಾರೆ.

ಅಲ್ಲದೆ ಮಿಸ್ಟರ್ ಮತ್ತು ಮಿಸಸ್ ಟಬ್ ದಂಪತಿಗಳ ನಡೆ–ನುಡಿಗಳು ನಗೆಗೀಡಾಗಿರುವುದನ್ನು ಲೇಖಕರು ಹಲವು ನಿದರ್ಶನಗಳ ಮೂಲಕ ತಿಳಿಸಿದ್ದಾರೆ. ಉದಾಹರಣೆಗೆ ಮಿಸ್ಟರ್ ಟಬ್‌ನ ತಲೆಮೇಲಿದ್ದ ಹ್ಯಾಟು ಹಾರಿ ಹೋಗಿ ಪಕ್ಕದ ಚರಂಡಿಯಲ್ಲಿ ಬಿದ್ದಿತು. ಅವನ ಈ ಅವತಾರವನ್ನು ನೋಡಿ ಲೇಖಕರಿಗೆ

ವಿಪರೀತ ನಗು ತಾಳಲಾರದೆ ನಕ್ಕಿದ್ದಾರೆ ಮಿಸಸ್ ಟಬ್ ಹೀನಾಯ ಸೂಚಕವಾದ ನಗೆ ನಕ್ಕು "ನೀನು ತೆಗೆದುಕೊಂಡು ಹೋದ ಕೊಡೆ ಎಲ್ಲಿ?" ಎಂದು ಕೇಳಿದಳು. ಟಬ್ ಜೇಬುಗಳನ್ನು ಮುಟ್ಟಿ ಮುಟ್ಟಿ ನೋಡಿಕೊಂಡು, ಯಾವ ಗಡಿಬಿಡಿಯಲ್ಲಿ ಮಹಡಿಯಿಂದ ಕೆಳಕ್ಕೆ ಉರುಳಿಕೊಂಡು ಬಂದಿದ್ದನೋ ಅದೇ ಗಡಿಬಿಡಿಯಿಂದ ಮಹಡಿ ಮೆಟ್ಟಲು ಪುನಃ ಹತ್ತಿದ. ಛತ್ರಿಯನ್ನು ಮೇಲೆ, ಲೇಖಕರನ್ನು ರೂಮಿನಲ್ಲಿ ಮರೆತಿದ್ದ; ಹೆಂಡತಿಯನ್ನು ಕೆಳಗೆ ಕಾರಿನಲ್ಲಿ ಮರೆತಿದ್ದ!.. ಒಟ್ಟಿನಲ್ಲಿ ಮಿಸಸ್ ಟಬ್‌ಳ ಮೂರ್ಖವಾದ ಹಾಗೂ ಮಿಸ್ಟರ್ ಟಬ್‌ನ ಮರೆಗುಳಿತನ ಸಹೃದಯರನ್ನು ನಗುವಿನ ಅಲೆಯಲ್ಲಿ ತೇಲಿಸುತ್ತವೆ.

ಅಮೇರಿಕಾದಲ್ಲಿ ಖಚಿತವಾಗಿ ಲಾಭ ಕೊಡುವಂಥ ಒಂದೇ ಒಂದು ಕೆಲಸವೆಂದರೆ 'ರ್‍ಯಾಕೆಟ್ ವ್ಯಾಪಾರ' "ಅಮೇರಿಕಾದಲ್ಲಿ ರ್‍ಯಾಕೆಟ್ ಕೈವಾಡಕ್ಕೆ ಒಳಪಡದ ಮಾನವ ವ್ಯಾಪಾರಿಗಳಿಲ್ಲವೆಂದರೂ ಅತಿಶಯೋಕ್ತಿಯೇನಲ್ಲ. ಅಗಲವಾದ ಭುಜ, ಬಲಯುತವಾದ ಬಾಹು, ವ್ಯಾಯಾಮದಿಂದ ಮಾಟಗೊಂಡ ಮೈಕಟ್ಟು, ಮುಸಿನಗು ಇವುಗಳಿಂದ ವಿಶೇಷಿತರಾದ ಯುವಕರು ಅಂಗಡಿಯೊಳಕ್ಕೆ ಬರುವುದು; ವರ್ತಕನನ್ನು ಹಣ ಕೇಳುವುದು, ಪ್ರತಿ ತಿಂಗಳೂ ಗೊತ್ತಾದ ದಿನಕ್ಕೆ ಸರಿಯಾಗಿ ಹಣ ಪಾವತಿಸಬೇಕೆಂದು ಕೇಳುವುದು; ಪ್ರತಿಫಲವಾಗಿ ವರ್ತಕ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯಲ್ಲಿ ಇಳಿಯುವಾಗುವುದಂತೆ! ವರ್ತಕ ಈ ಹಂಚಿಕೆಗೆ ಒಪ್ಪಿ ಕೊಂಡನೋ ಸರಿ, ಇಲ್ಲದಿದ್ದರೆ ಪಿಸ್ತೂಲಿನ ಗುರಿಗೆ ತುತ್ತಾಗುತ್ತಾನೆ. ಈ ಅಂತ್ಯವನ್ನು ಬಯಸದೆ ವರ್ತಕ ಒಪ್ಪಿಗೆ ಕೊಡುತ್ತಾನೆ. ಇದೊಂದು ರ್‍ಯಾಕೆಟ್". [14] ಇದನ್ನು ಗಮನಿಸಿದಾದ ಅಮೇರಿಕದಂತಹ ನಾಗರೀಕ ದೇಶದಲ್ಲೂ ಕೊಳ್ಳೆ-ದರೋಡೆಗಳು ಸಾಮಾನ್ಯವೆ ಆಗಿವೆ. ರ್‍ಯಾಕೆಟ್ ವ್ಯಾಪಾರ, ವ್ಯವಹಾರಗಳು ಅಮೇರಿಕನ್ ಸಂಸ್ಕೃತಿಯ ಒಂದು ಉದಾರಣೆಯೋ ಏನೋ ಎಂದು ಸಂದೇಶ ವ್ಯಕ್ತಪಡಿಸಿದ್ದಾರೆ. ಸುಲಭವಾಗಿ ಜೀವನೋಪಾಯಕ್ಕೆ ಹಣ ಗಳಿಸುವ ಹೊಂಚಿಕೆಗೆ ರ್‍ಯಾಕೆಟ್ ಎನ್ನುವರು. ಇದು ಅಮೇರಿಕನ್ನರ ಸಂಸ್ಕೃತಿಯ ಕುರಿತ ವಸ್ತು ಸ್ಥಿತಿಯನ್ನು ತಿಳಿಸುತ್ತದೆ.

ಅಮೇರಿಕನ್ನರ ಬೋಳೇತನ, ಸ್ವತಂತ್ರವಾಗಿ ಒಂದು ನಿಮಿಷ ನಿಂತು ವಿಚಾರ ಮಾಡಲೂ ಸಮಯವಿಲ್ಲದ ಅವರ ಯಾಂತ್ರಿಕ ಜೀವನ, ಹೇಗೆ ಮತಪ್ರಚಾರಕರ ಸವಿಯಾದ ಮಾತುಗಳಿಗೆ, ಅವರು ಒಡ್ಡುವ ಆಮಿಷಗಳಿಗೆ ಬಲಿಯಾಗಿದೆ ಎಂಬುದು ಅವರ ವಿಚಿತ್ರ ನಡಾವಳಿಯ ಹಿನ್ನೆಲೆಯಲ್ಲಿ ನೈಜ ಪರಿಸ್ಥಿತಿಯನ್ನು ಚೆನ್ನಾಗಿ ಪರಿಚಯಿಸುತ್ತಾರೆ. ಅಲ್ಲದೆ ಲೇಖಕರ ಈ ಚಿಂತನೆಯ ಬರಹದಲ್ಲಿ ಕ್ರೌರ್ಯ, ಶೋಷಣೆ, ವೈರುಧ್ಯಗಳು ಮೊದಲಾದ ಅಂಶಗಳು ಕಂಡುಬರುತ್ತವೆ.

ಅಮೇರಿಕನ್ನರು ಔದಾರ್ಯವುಳ್ಳ ಜನ, ಗುಣಗ್ರಹಣ ಶೀಲರು; ಸಹಾನುಭೂತಿಯ ಸ್ವಭಾವದವರು; ಸಹಾಯಪರರು ಅನ್ಯರ ಸ್ನೇಹವನ್ನು ಸಂಪಾದಿಸಿಕೊಂಡು ಆ ಸ್ನೇಹದಿಂದ ತಮ್ಮ ಬಲವನ್ನು ವೃದ್ಧಿಪಡಿಸಿಕೊಳ್ಳಬೇಕೆಂಬ ಯೋಚನೆ ಅವರಿಗೆ ಉಂಟೆಂದು ತೋರುತ್ತದೆ. ಯಾವ ದೇಶದವನಲ್ಲಿ ಯಾವ ಸಾಮರ್ಥ್ಯ ಕಂಡುಬಂದರೂ ಅದರ ಪ್ರಯೋಜನವನ್ನು ತಮ್ಮ ದೇಶಕ್ಕೆ ಗಳಿಸಿಕೊಳ್ಳಬೇಕೆಂದು ಅವರು ಪ್ರಯತ್ನಿಸುತ್ತಾರೆ. ಬಹುಮಂದಿ ಭಾರತೀಯರ ಶಾಸ್ತ್ರ ಪಾಂಡಿತ್ಯವನ್ನು ಅವರು ಅಂಗೀಕರಿಸಿ ಪ್ರೋತ್ಸಾಹಿಸಿದ್ದಾರೆ – ಮೇಲ್ಮಟ್ಟದವರು ಕೆಳಮಟ್ಟದವರಿಗೆ ತೋರುವ ಅನುಗ್ರಹ ಭಂಗಿಯಿಂದ ಅಲ್ಲ; ಸರಿಸಮಾನಾಸಕ್ತರು ಪರಸ್ಪರ ತೋರುವ ಸ್ನೇಹ ವಿನಮಯದಿಂದ ಎಂದು ಲೇಖಕರು (ಅರಿಕೆಯಲ್ಲಿ) ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ನಾವು ಅಮೇರಿಕನ್ನರು; ಸ್ನೇಹ, ಶ್ರದ್ಧೆ, ಸಹಾನುಭೂತಿಗಳ ನೆಲೆಗಟ್ಟಿನ ಮೇಲೆ ತಮ್ಮ ಕೆಲಸ–ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ ಎಂಬ ವಿಚಾರವನ್ನು ಅರ್ಥೈಸಿಕೊಳ್ಳಬಹುದು

ಬದುಕಿನ ಸಹಜ ಘಟನೆಗಳು ಹಾಸ್ಯಯುತವಾಗಿ ಸೊಗಸಾಗಿ ಚಿತ್ರಿತವಾಗಿವೆ. ಅಮೇರಿಕನ್ನರ ಆಚಾರ–ವಿಚಾರಗಳಲ್ಲಿ ಕಂಡು ಬರುವ ಹುಚ್ಚು ವರ್ತನೆಯನ್ನು ಕಾಣಬಹುದು. ಇದರಿಂದಾಗಿ ಇದು ಸ್ವಸಂತೋಷದಿಂದ ಓದುವ ಕೃತಿಗಳಲ್ಲಿ ಒಂದಾಗುತ್ತದೆ. ಕಾರಣ ಕೃತಿಯುದ್ದಕ್ಕೂ ಆಸಕ್ತಿಯನ್ನು ಉಳಿಸಿಕೊಂಡು ಮುದವನ್ನು ನೀಡುತ್ತದೆ.

## ಅಮೇರಿಕಾದಲ್ಲಿ ಗೊರೂರು–ಗೊರೂರು ರಾಮಸ್ವಾಮಿ ಅಯ್ಯಂಗಾರ್ :

ಡಾ॥ ಗೊರೂರು ತಮ್ಮ ಶ್ರೀಮತಿಯೊಡನೆ ಅಮೇರಿಕಾ, ಕೆನಡಾ ಪ್ರವಾಸ ಕೈಗೊಂಡಿದ್ದು, ಆ ಪ್ರವಾಸದ ಕಥನವೇ 'ಅಮೇರಿಕದಲ್ಲಿ ಗೊರೂರು' ಪ್ರವಾಸ ಕಥನವಾಗಿದೆ. ಇಲ್ಲಿ ಗೊರೂರು ತಮ್ಮ ತನವನ್ನು ಸ್ವಲ್ಪವೂ ಬಿಟ್ಟುಕೊಡದೆ ಅಮೆರಿಕೆಯ ಸಂಸ್ಕೃತಿ, ಜನಜೀವನದಲ್ಲಿ ಕರಗಿಹೋಗುವ ಪ್ರಕ್ರಿಯೆ ಅದ್ಭುತವಾಗಿದೆ. ಇದರಿಂದಾಗಿಯೇ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

'ಅಮೇರಿಕದಲ್ಲಿ ಗೊರೂರು' ಅತ್ಯಂತ ಧ್ವನಿ ಪೂರ್ಣವಾದ ಶೀರ್ಷಿಕೆ. ಅದು ಪೂರ್ವ ಪಶ್ಚಿಮಗಳನ್ನು, ನಗರ ಗ್ರಾಮಗಳನ್ನು ಹಳತು–ಹೊಸತನ್ನು ಸಂಕೇತಿಸುತ್ತದೆ. ಅಮೇರಿಕದಲ್ಲಿ ಗೊರೂರು ಕಳೆದು ಹೋಗುವುದಿಲ್ಲ. ವಿವಿಧ ಸ್ತರಗಳಲ್ಲಿ ಮೈದೋರುತ್ತಾರೆ. ಇದು ಈ ಪುಸ್ತಕದ ವಿಶೇಷ. ಇದರಲ್ಲಿ ವರ್ಣಿತವಾದ ಅನುಭವಗಳು ಬಹುಪಾಲು ಗೊರೂರರಿಗೆ ಮಾತ್ರ ಆಗುವಂಥವು ಎಂದು ಹಾ. ಮಾ. ನಾಯಕರು ಹೇಳಿರುವುದು ಔಚಿತ್ಯಪೂರ್ಣವಾಗಿದೆ.[15]

"ಹುಟ್ಟಿದಾಗಲಿಂದ ಮನುಷ್ಯನಿಗೆ, ಹಕ್ಕಿಗಳನ್ನು ನೋಡಿದಾಗಲೆಲ್ಲ ತಾನೂ ಮೇಲಕ್ಕೆ ಅವುಗಳಂತೆ ಹಾರಬೇಕೆಂದು ಆಸೆ. ನನಗಂತೂ ಬಾಲ್ಯದಲ್ಲಿ ಹಾಗೆ ಇತ್ತು" ಎನ್ನುವ ಗೊರೂರು ತಮ್ಮ ಪ್ರವಾಸ ಪ್ರಿಯತೆಯ ಬಗ್ಗೆ ಹೇಳಿರುವುದು ತಿಳಿದುಬರುತ್ತದೆ.

"ಒಳ್ಳೆಯ ಸಂಸ್ಕಾರ ಹಾಗೂ ಓದಿನಿಂದ ಪಕ್ವವಾದ ಮನಸ್ಸು ಸಹಬಾಂಧವರ ಸುಖ ದು:ಖಗಳನ್ನು ಬಹುಬೇಗನೆ ಗ್ರಹಿಸುತ್ತದೆ. ಈ ಸುಖ ದು:ಖಗಳಿಗೆ ಮೂಲವಾಗಿರುವ ಜನಜೀವನವನ್ನು ತಮ್ಮ ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸಿ, ಸಮಸ್ಯೆಯನ್ನು ಗಂಭೀರವಾಗಿ ಪರಿಶೀಲಿಸಿ ನಿರ್ಣಯಿಸುವ ಅವರ ತೀರ್ಮಾನಗಳು ನಮಗೆಲ್ಲರಿಗೂ ಒಪ್ಪಿತವಾಗುತ್ತದೆ. ಬದುಕನ್ನು ನಗು ನಗುತ್ತಾ ನೋಡುವ, ಅದರ ಹಲವು ಮಗ್ಗಲಗಳ ಸಮಸ್ಯೆಯನ್ನು ಸರಸವಾಗಿ ಬಿಡಿಸಿ ತೋರುವ ಸುತ್ತಣ ಪ್ರಪಂಚವನ್ನು ಬೆರಗುಗಣ್ಣಿನಿಂದ ನೋಡಿ ಬಹುಮುಖವಾದ ವೈಚಿತ್ರಗಳಿಂದ ಸ್ಫುರಣೆಗೊಂಡು ಕವಿಯಾಗುವ ಗೊರೂರರ 'ವಿಶಿಷ್ಟ' ವ್ಯಕ್ತಿತ್ವವನ್ನು ನಾವು ಅಮೇರಿಕಾದಲ್ಲಿ ಗೊರೂರು ಎಂಬ ಅವರ ಕೃತಿಯಲ್ಲಿ ಕಾಣಬಹುದಾಗಿದೆ ಎಂದು ತಿಳಿಸುವ ವಿದ್ಯಾಶಂಕರ ಮಾತು ಸರಿಯೆನಿಸಿದೆಯಾದರೂ, ಇವರೇ ತಿಳಿಸಿರುವಂತೆ 'ಗೊರೂರು ಸಂಪ್ರದಾಯಸ್ಥರಾಗಿದ್ದರೂ ಅವರ ನಡವಳಿಕೆಯಲ್ಲಿ ಎಲ್ಲಿಯೂ ಅದು ಎದ್ದು ಕಾಣುವುದಿಲ್ಲ' ಎನ್ನುವುದು ಸಮರ್ಪಕವಾಗಿಲ್ಲ ಎಂಬುದನ್ನು ಕೃತಿಯ ಹಲವು ಕಡೆಗಳಲ್ಲಿ ಕಾಣಬಹುದು. ಶ್ರದ್ಧಾವಂತ ವೈಷ್ಣವ ಬ್ರಾಹ್ಮಣರು ಈ ಪ್ರವಾಸಕಥನದಲ್ಲಿ ಬ್ರಾಹ್ಮಣ ಮಡಿವಂತಿಕೆ ಕಾಣಬಹುದು. ಇಡೀ ಪ್ರವಾಸಕ್ಕಾಗುವಷ್ಟು ಗೊಜ್ಜನ್ನು ತಯಾರಿಸಿಕೊಂಡು ಹೋಗಿದ್ದು, ಅವರ ಹೆಂಡತಿ ಕೈ ಚೀಲದಲ್ಲಿ ಸದಾ ಒಂದು ಲೋಟ ಇಟ್ಟುಕೊಂಡಿರುವುದು.[16] ಲೇಖಕರ ಕುಟುಂಬ ಹೋಟೆಲಿಗೆ ಹೋದಾಗ ಸಾಲು ಸಾಲಾಗಿ ಜೋಡಿಸಿಟ್ಟ ತಿಂಡಿಯನ್ನು ನೋಡಿ ಗಲಿಬಿಲಿಯಾದಾಗ ಈ ಸಂದರ್ಭದಲ್ಲಿ ಅವರ ಊರಿನವನಾದ ದೇವಾಂಗ ಜನಾಂಗದ ಯುವಕ ಬಂದು ಸಹಾಯ ಮಾಡುತ್ತಾನೆ. "ಬಹುಶಃ ನಮ್ಮ ಊರಿನಲ್ಲಿಯೇ ಆಗಿದ್ದರೆ ಅವನು ಆ ಸಾಹಸಕ್ಕೆ ಹೋಗುತ್ತಿರಲಿಲ್ಲ" ಎನ್ನುತ್ತಾರೆ. ನಮ್ಮಲ್ಲಿ ಸ್ವಚ್ಛತೆ ಕಡಿಮೆ. ಅಮೇರಿಕದ ಕ್ರಮವನ್ನು ಅನುಸರಿಸಿದ್ದರೆ ಜಾತಿಭೇದ ಅಳಿಯಲು ಸಹಾಯಕವಾಗಬಹುದು ಎಂದು ಮಾರ್ಮಿಕವಾಗಿ ಹೇಳುತ್ತಾರೆ.[17] ಪ್ರವಾಸಕಥನದಲ್ಲಿ ಮೂಢಿ ಬಂದ ಲೇಖಕರ ಈ ಧೋರಣೆ ಸರಿಯೆನಿಸುವುದಿಲ್ಲ.

ಅಮೇರಿಕ ಕೆನಡಾ ವಿಸ್ತಾರವಾದ ರಾಷ್ಟ್ರಗಳು, ಸಮೃದ್ಧ ರಾಷ್ಟ್ರಗಳು, ಅವುಗಳ ಚರಿತ್ರೆ, ಸಂಸ್ಕೃತಿ, ನಾಗರಿಕ ಜೀವನ ದರ್ಶನ ಇದಾವುದನ್ನು ಹೇಳುವುದು ನನ್ನ ಉದ್ದೇಶವಲ್ಲ. ಇದು ಅಮೇರಿಕವನ್ನು

[illegible]

ನೋಡಿದ ನನ್ನ ಅನುಭವ ಅಷ್ಟೆ ಆದುದರಿಂದ ಇದರಲ್ಲಿ ನಾನು ನನ್ನ ದೇಶದ ಮಮಕಾರವೇ ಜಾಸ್ತಿ. ಜಗತ್ತನ್ನೆಲ್ಲ ಸುತ್ತಿದರೂ ಕೊನೆಗೆ "ಭಾರತದ ನಾಗರಿಕತೆಯೇ ಅತ್ಯುತ್ತಮ. ನಮ್ಮ ಸಂಸ್ಕೃತಿ, ಜೀವನ, ಇಲ್ಲಿಯ ಆರ್ಷೇಯ ಧರ್ಮ, ಧಾರ್ಮಿಕ ಪುರುಷರು, ಇವೇ ನಮಗೆ ತುಂಬ ಪ್ರಿಯ" ಎಂಬ ತೀರ್ಮಾನಕ್ಕೆ ನಾವು ಬರುತ್ತೇವೆ. ಭಾರತೀಯ ಸಂಸ್ಕೃತಿ ಮತ್ತು ಜೀವನದಲ್ಲಿ, ಧರ್ಮ ಪ್ರಧಾನ ಅರ್ಥ ಪಡೆದು, ಕಾಮಗಳು ಅದಕ್ಕೆ ಅಧೀನವಾಗಿರುತ್ತವೆ ಆದರೆ ಇತರ ಯಾವ ಸಂಸ್ಕೃತಿಯಲ್ಲಿಯೂ ಇದು ತದ್ವಿರುದ್ಧ. ಈ ಕಾರಣದಿಂದ ಕೆಲವರಾದರೂ ಭಾರತೀಯರು ಇಂದಲ್ಲ ನಾಳೆ, ಅಮೇರಿಕದಿಂದ ಸ್ವದೇಶಕ್ಕೆ ಹಿಂದಿರುಗುವುದರಲ್ಲಿ ನನಗೆ ಸಂಶಯವಿಲ್ಲ ಎನ್ನುತ್ತಾರೆ.

ಅಮೇರಿಕದಲ್ಲಿ ಲೇಖಕರಿಗೆ ಎದ್ದು ಕಾಣುವ ಅಂಶವೆಂದರೆ ಅಮೇರಿಕ ಸರ್ಕಾರ ಮತ್ತು ಜನತೆ, ಸರ್ವರಿಗೂ ಸರ್ವಸೌಖ್ಯವನ್ನು ಒದಗಿಸಿರುವುದು. ಅದು ಬಹುಜನರ ಬಹುಸುಖವಲ್ಲ. ಸರ್ವರ ಸರ್ವಸುಖ. ಅಲ್ಲಿಯ ಸರ್ಕಾರ ಜನತೆಗೂ, ಜನತೆ ಪರಸ್ಪರರಿಗೂ ಸತತವಾದ ಸೇವೆ ಮಾಡುವುದರಲ್ಲಿ ಆಲಸಿಕೆಯಿಲ್ಲದೆ ತೊಡಗಿರುವುದು. ಅಮೇರಿಕ ಜಗತ್ತಿನ ಅತ್ಯಂತ ಧನಿಕ ಮತ್ತು ಸಮೃದ್ಧವಾದ ರಾಷ್ಟ್ರ ಹೇಗೋ, ಹಾಗೆಯೇ ತುಂಬ ಕಷ್ಟಪಟ್ಟು ಕೆಲಸವನ್ನು ಮಾಡುವ, ದೇಶವನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಜನತೆಯ ರಾಷ್ಟ್ರ. ಈ ಭಾಗದಲ್ಲಿ ನಾವು ಅಮೇರಿಕದಿಂದ ಕಲಿತು ಆಚರಿಸಬೇಕಾದ ಅಂಶಗಳು ಅನೇಕ ಇವೆ ಎನ್ನುವ ಲೇಖಕರು ನಮ್ಮ ರಾಷ್ಟ್ರದ ಏಳಿಗೆ ಅವರ ಈ ಮಾರ್ಗ ಅನುಸರಿಸುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟಿದ್ದಾರೆ.

ಅಮೇರಿಕದ ಯಾಂತ್ರಿಕ ಜೀವನದಲ್ಲಿ ಮನುಷ್ಯನು ಯಂತ್ರವೇ ಆಗಿಬಿಟ್ಟಿದ್ದಾನೆಂದು ತಿಳಿಸುತ್ತಾರೆ. "ಗಡಿಯಾರದಂತೆ ಕ್ಲಪ್ತವಾಗಿ ಅವನ ಕೆಲಸ ಅವನು ಮಾಡಿಕೊಂಡು ಹೋಗಬೇಕು. ಗಾಣದ ಎತ್ತಿನಂತೆ ಆ ಕಡೆ ಈ ಕಡೆ ನೋಡದೆ ದುಡಿಯಬೇಕು. ತನ್ನ ಸೌಖ್ಯ, ಸಂತೋಷಗಳಿಗೆ ತನ್ನ ಮೇಲೆಯೇ ಅವಲಂಬಿಸಬೇಕು. ಹೀಗಾಗಿ ಯಾರೊಬ್ಬರಿಗೂ ಯಾರನ್ನೂ ಸಂಧಿಸುವುದು ಕಷ್ಟ ಹಾಗೂ ಸಂಧಿಸುವುದಾದರೆ ಕನ್ನಡಿಗ ಮೊದಲನೆಯದಾಗಿ ಕನ್ನಡಿಗನನ್ನೇ ಸಂಧಿಸುತ್ತಾನೆ. ಭಾಷೆಯ ಬಂಧನ ಕಟ್ಟುತ್ತದೆ. ತೆಲಗು, ತಮಿಳು, ಮಲೆಯಾಳಿ, ಹಿಂದಿ, ಗುಜರಾತಿ, ಸಿಂಧಿ, ಮರಾಠಿ, ಒರಿಯ ಎಲ್ಲರೂ ಹಾಗೆಯೇ, ಹೀಗಾಗಿ ಆಯಾ ಭಾಷೆಗಳವರು ಕೆಲವರಾದರೂ ಸೇರಿ ಆ ಭಾಷೆಯ ಒಂದು ಕೂಟವನ್ನು ಸ್ಥಾಪಿಸುತ್ತಾರೆ".[18]

ಎಂಬ ಲೇಖಕರ ಹೇಳಿಕೆಯಲ್ಲಿ ಅಮೇರಿಕದಲ್ಲಿನ ಒತ್ತಡದ ಬದುಕನ್ನು ಅಲ್ಲಗಳೆದಿರುವುದು ಕಾಣಬಹುದಲ್ಲದೆ ಈ ಹಿನ್ನೆಲೆಯಲ್ಲಿ ರೂಪಿತವಾದ ಸಂಘಗಳ ಬಗ್ಗೆ ತಿಳಿಯಬಹುದು.

ಭಾರತೀಯ ಸಂಸ್ಕೃತಿ, ಕನ್ನಡ ಸಾಹಿತ್ಯ ಸಂಸ್ಕೃತಿ, ಸಂಗೀತ, ನಾಟಕಗಳು ಇವುಗಳ ಬಗ್ಗೆ ವಿಚಾರ ವಿನಿಮಯ, ಪ್ರಯೋಗ ಕನ್ನಡ ಪುಸ್ತಕ ಭಂಡಾರ ಇವೆಲ್ಲ ಈ ಸಂಘಗಳ ಗುರಿ, ಅಮೇರಿಕದಲ್ಲಿ ಮೊದಲು ಸ್ಥಾಪಿತವಾದ ಕನ್ನಡ ಸಂಘ ಮಿಚಿಗನ್ ಸಂಘವೆಂದು ತಿಳಿಸುತ್ತಾರೆ. ನಂತರ ಮೆರಿಲ್ಯಾಂಡ್, ವಾಷಿಂಗಟನ್, ಡೆಲವೇರ, ಕಾವೇರಿ ಸಂಘ, ಉತ್ತರ ಕ್ಯಾಲಿಪೋರ್ನಿಯನ್ನರ ಕರ್ನಾಟಕ ಸಂಘ, ದಕ್ಷಿಣ ಕ್ಯಾಲಿಪೋರ್ನಿಯಾದ ಕನ್ನಡ ಕೂಟ, ನೃಪತುಂಗ ಕೂಟ, ನ್ಯೂ ಇಂಗ್ಲೆಂಡ್ ಕನ್ನಡ ಕೂಟ, ವಿದ್ಯಾರಣ್ಯ (ಇಲ್ಲಿ ನಾಯ್ ಇಂಡಿಯಾನಾ ವಿಸ್ ಕಾನ್ಸನ್) ನ್ಯೂಯಾರ್ಕ್ ಕನ್ನಡ ಕೂಟ, ತ್ರಿವೇಣಿ ಕನ್ನಡ ಸಂಘ. ಈ ಎಲ್ಲ ಕನ್ನಡ ಸಂಘಗಳು ತಮ್ಮ ಕಾರ್ಯವನ್ನು ಶ್ರದ್ಧೆಯಿಂದ ನಡೆಸುತ್ತಿವೆ ಎಂದು ಮನದುಂಬಿ ತಿಳಿಸುತ್ತಾರೆ.

ಕನ್ನಡಿಗರು ಅಮೇರಿಕದಲ್ಲಿದ್ದರೂ ಭಾರತದ ಆಗು-ಹೋಗುಗಳಲ್ಲಿ ಆಸಕ್ತಿವಹಿಸುತ್ತಾರೆ. ಅವರಲ್ಲಿ ಕೆಲವರು ಅಮೇರಿಕ ಪೌರತ್ವವನ್ನು ಪಡೆದಿದ್ದರೂ ಇಂಡಿಯಾದ ಮೇಲಿನ ಪ್ರೀತಿ ಆಕರ್ಷಣೆ ಅವರಿಗೆ ಹೋಗಿಲ್ಲ ಎನ್ನುವುದನ್ನು ಅಮೇರಿಕಾದಲ್ಲಿನ ಭಾರತೀಯರ ಈ ಮಾತಿನಿಂದ "ನಾವು ಇಲ್ಲಿಯ ಪೌರತ್ವವನ್ನು ಸ್ವೀಕರಿಸಿದ್ದೇವೆ; ಆದರೂ ಭಾರತದ ಧ್ಯಾನ ಪದೇ ಪದೇ ನಮಗೆ ಬರುತ್ತೆ" ಸಮರ್ಥಿಸಿದ್ದಾರೆ.

ಗೊರೂರರು ತಮ್ಮ ವೇಷ-ಭೂಷಣ, ಮಾತುಕತೆಗಳಿಂದ ಸುತ್ತಲಿನ ಜನರನ್ನು ಆಕರ್ಷಿಸಿದ್ದಾರೆ. ಅಗಲವಾದ ಎಂಟೂವರೆ ಮೊಳ, ಹಣೆಗೆ ಕುಂಕುಮ ನಾಮ, ಚಳಿಗಾಗಿ ತಲೆಗೆ ಒಂದು ಉಣ್ಣೆ ಶಾಲು ಮತ್ತು ಮಫ್ಲರ್, ಕಾವಿಬಣ್ಣದ ನೀಳವಾದ ಜುಬ್ಬ, ಕಾಲಿಗೆ ದಪ್ಪವಾದ ಎಕ್ಕಡ, ತಲೆಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು ಬಿಳಿಗಡ್ಡ ಮೀಸೆ-ಹೇಗೆ ಅವರ ಮೈ ಉಡುಪುಗಳಲ್ಲಿ ಏಳೆಂಟು ಬಣ್ಣಗಳ ಹೊಳಪು. ಈ ವಿಚಿತ್ರ ವೇಷದಲ್ಲಿ ಒಮ್ಮೆ ಮನೆಯ ಎದುರಿನ ಶಾಲೆಗೆ ಗೂರೂರರು ಹೋಗಬೇಕಾಗಿ ಬಂದಿತು. ಅವರನ್ನು ಆ ವೇಷದಲ್ಲಿ ನೋಡಿದ ಮಕ್ಕಳು ಪೈಡ್ ಪೈಪರ್, ಸಂಟಕ್ಲಾಸ್, ಪಿಕ್ಚರ್ ಎಂದೆಲ್ಲ ಕೂಗಿದರು. ಸ್ನೇಹಪ್ರಿಯರಾದ ಗೊರೂರರು ಅಪರಿಚಿತರೊಡನೆ ಬಹುಬೇಗ ಸ್ನೇಹ ಬೆಳೆಸುತ್ತಿದ್ದರು. ಬಹುಕಾಲದ ಗೆಳೆಯರೋ ಎನ್ನುವಂತೆ ಅವರೊಡನೆ ಆತ್ಮೀಯವಾಗಿ ವರ್ತಿಸುತ್ತಿದ್ದರು. ಅವರ ಸಹಜ ಸ್ವಭಾವವಾದ ಈ ಗುಣ, ಅಪರಿಚಿತ ನಾಡಾದ ಅಮೇರಿಕದಲ್ಲಿ ಬಹುಜನ ಸ್ನೇಹಿತರನ್ನು ಸಂಪಾದಿಸಿಕೊಟ್ಟಿತು.

ನಯಾಗಾರ ಜಲಪಾತ ನೋಡಲು ಹೋಗಿ ಟ್ಯಾಕ್ಸಿ ಡ್ರೈವರನೊಬ್ಬನ ಮನೆಯಲ್ಲಿ, ಗೊರೂರು ದಂಪತಿಗಳು ಒಂದು ರಾತ್ರಿ ತಂಗಿದ್ದು ಅವರ ಅತಿಥ್ಯ ಸ್ವೀಕರಿಸಿದ್ದು; ರಾಕೀ ಪರ್ವತದ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದ ರಾಕೀರಾಮ್ ರೊಡನೆ ಸ್ನೇಹ ಬೆಳೆಸಿದ್ದು (ಪುಟ 112–113) ಹಾಗೂ ರಾಕೀ ಪರ್ವತದ ಮೇಲಿನ ಹೋಟಲಿನಲ್ಲಿ ಅಮೇರಿಕದ ಭೂ ಶಾಸ್ತ್ರಜ್ಞರೊಡನೆ ಸ್ನೇಹ ಬೆಳಸಿ ನಡೆಸಿದ ಮಾತುಕತೆ (ಪುಟ 135–137) ಚರ್ಚನ ಪೂಜೆಯಲ್ಲಿ ಪಾಲ್ಗೊಂಡು, ತಮ್ಮ ಅದ್ವಿತೀಯ ವಾಕ್ಚಾತುರ್ಯದಿಂದ ಮತ್ತು ತಮಗೆ ಪ್ರಿಯವಾದ ಗಾಂಧಿ ತತ್ವಗಳಿಂದ ನೆರೆದಿದ್ದ ಪಾದರಿಗಳ ಜೊತೆ ಆತ್ಮೀಯತೆ ಬೆಳೆಸಿದ್ದು ಹೀಗೆ ಹಲವಾರು ನಿದರ್ಶನಗಳಲ್ಲಿ ಲೇಖಕರ ಸ್ನೇಹಪ್ರಿಯತೆಯನ್ನು ಗುರುತಿಸಬಹುದು.

ಗೊರೂರರ ಸರಳ, ಸುಂದರ ಮನೋವೃತ್ತಿಯನ್ನು ಅವರು ಅಮೇರಿಕದಲ್ಲಿ ತೊಟ್ಟ ನಾನಾ ವೇಷಗಳಿಂದ ಪರಿಚಿತಮಾಡಿಕೊಳ್ಳಬಹುದು. ಇದಕ್ಕೆ ನಿದರ್ಶನವೆಂದರೆ ಗೊರೂರರು ಜ್ಯೋತಿಷಿಗಳಾಗಿದ್ದು, ಸೆಂಟ್ ಆಲ್ಬರ್ಟ್‌ನಲ್ಲಿ ಲೇಖಕಕರನ್ನು ನೋಡಲು ಬರುತ್ತಿದ್ದ ಜ್ಯೋತಿಷ್ಯ ಭಕ್ತರ ಕೈಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗದಿದ್ದಾಗ ಸಂದರ್ಭದಲ್ಲಿ ಈ ಜಾನಪದ ತ್ರಿಪದಿಯನ್ನು ಸ್ಮರಿಸಿಕೊಂಡಿದ್ದಾರೆ.

ಹಗಲು ಹಾರುವನಾದ ಇರುಳು ಬಣಜಿಗನಾದ
ಅರಸರ ಮಗನಾಗಿ ತಿರುಗಿದ। ನನ್ನ ರಾಯ
ನರಸೀಪುರದೋರ ಮಗಳಿಗೆ॥...

ಗೊರೂರರು ಪೌರಸಭೆಗೆ ಉಮೇದುವಾರಳಾಗಿ ನಿಂತಿದ್ದ ಓರ್ವ ಮಹಿಳೆಯನ್ನು ಕುರಿತು "ನೀವು ಜಯಗಳಿಸುವಿರಿ ನನಗೆ ಇದು ಖಾತರಿ" ಎಂದು ಭವಿಷ್ಯ ನುಡಿದಿದ್ದರು. ಕಾಕತಾಳೀಯಂತೆ ಆಕೆ ಜಯಗಳಿಸಿದಳು. ಆಕೆ ಬಂದು "ನಿಮ್ಮ ಜ್ಯೋತಿಷ್ಯ ನಿಜವಾಯಿತು ನಾನು ಗೆದ್ದೆ. ನೀವು ಇಷ್ಟು ಕರಾರುವಕ್ಕಾದ ಜ್ಯೋತಿಷ್ಯಜ್ಞರು ಎಂದು ನನಗೆ ತಿಳಿದಿರಲಿಲ್ಲ ನಿಮಗೆ ತುಂಬಾ ವಂದನೆ" ಎಂದು ಹೇಳಿ ಹೊರಟಳು.[19] ಈ ಮೂಲಕ ಲೇಖಕರು ಜ್ಯೋತಿಷಿಗಳಾಗಿ ಪ್ರಸಿದ್ಧರಾಗಿಬಿಟ್ಟಿದ್ದಾರೆ.

ಅಮೇರಿಕದ ಶೇಕಡಾ ಇಪ್ಪತ್ತು ಮಂದಿಗೆ ಜ್ಯೋತಿಷ್ಯದಲ್ಲಿ ನಂಬಿಕೆ ಇದೆ ಎಂದು ಗೊತ್ತಾಯಿತು ಎನ್ನುತ್ತಾ, ಹಾಗೆ ನಂಬಿಕೆ ಇದ್ದರೂ ಅದನ್ನು ಅವರು ನೆಚ್ಚಿ ಕೂರುವುದಿಲ್ಲ ತಾವು ಮಾಡುವ ಯಾವ ಕೆಲಸವನ್ನು ಬಿಡುವುದಿಲ್ಲ ಎನ್ನುತ್ತಾರೆ.

ಅಮೇರಿಕ, ಕೆನಡಗಳಲ್ಲಿರುವ ಭಾರತೀಯರು ಮತ್ತು ಕನ್ನಡಿಗರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಮನೆಗಳಲ್ಲಿ ಕೈಲಾದಷ್ಟು ಪ್ರಯತ್ನಿಸುತ್ತಿದ್ದಾರೆಯಾದರೂ ಅಮೇರಿಕನ್ ಆಘಾತದಲ್ಲಿ ಅದನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ಅಮೇರಿಕನ್ ಜೀವನದಲ್ಲಿ ಯಾರು ಮಧ್ಯಪಾನಿಯೋ ಯಾರು ಮಾಂಸಹಾರಿಯೋ ತಿಳಿಯುವುದು ಕಷ್ಟವಾದ್ದರಿಂದ ಇಲ್ಲಿ ತಂದೆ-ತಾಯಿಯರ ಶ್ರಾದ್ಧ ಮಾಡಬೇಕೆನ್ನುವ ಬ್ರಾಹ್ಮಣರಿಗೆ ತುಂಬಾ ತೊಂದರೆ ಎಂದು ಹೇಳುತ್ತಾರೆ. ಲೇಖಕರ ಮಿತ್ರರೂ-ಬಂಧುವು ಆದ ಒಬ್ಬರು ತಮ್ಮ ತಾಯಿಯ ಶ್ರಾದ್ಧ ಮಾಡಿಸಬೇಕೆಂದು ಆ ವರುಷ ಇಬ್ಬರು ಬ್ರಾಹ್ಮಣರನ್ನು ಕರೆದಿದ್ದರಂತೆ "ಅದೇ ಸಂಜೆ ಆ ಬ್ರಾಹ್ಮಣರಲ್ಲಿ ಒಬ್ಬ, ಒಂದು ಮಾಂಸಹಾರಿ ಹೋಟಲಿನಿಂದ ಹೊರಕ್ಕೆ ಬರುತ್ತಿರುವುದನ್ನು ಇವರು ನೋಡಿದರಂತೆ ಮಾರನೇ ವರುಷ ನ್ಯೂಯಾರ್ಕ್‌ಗೆ ಎಂಭತ್ತು ಮೈಲಿ ದೂರದಲ್ಲಿರುವ ಒಂದು ಹಿಂದೂ ಸನ್ಯಾಸಿಯ ಮಠದಲ್ಲಿ ಗೊತ್ತು ಮಾಡಿದರಂತೆ. ಸನ್ಯಾಸಿಯು ಅದಕ್ಕೆ ಎಪ್ಪತ್ತೈದು ಡಾಲರು ಶುಲ್ಕ ವಿಧಿಸಿ ಇವರನ್ನು ಕಾಲಕ್ಕೆ ಸರಿಯಾಗಿ ಮಠಕ್ಕೆ ಬರುವಂತೆ ಹೇಳಿದ್ದನಂತೆ. ಇವರು ಪತ್ನಿ ಸಮೇತರಾಗಿ ಆ ದಿನ ಮಠಕ್ಕೆ ಎಂಬತ್ತು ಮೈಲಿ ಮೋಟಾರಿನಲ್ಲಿ ಹೋದಾಗ ಸನ್ಯಾಸಿ ಒಬ್ಬನೇ ಇದ್ದನಂತೆ. ಇವರು ಪಾಪ; ಹೋಮ-ಹವನ, ಬ್ರಾಹ್ಮಣರು, ಊಟ-ವಡೆ, ತಿಥಿಗೆ ಮುಖ್ಯವಾಗಿ ಬೇಕಾಗಿದ್ದು ಉದ್ದಿನ ವಡೆ ತಾನೆ; ಎಲ್ಲ ಎಲ್ಲಿ ಎಂದು ನೋಡುತ್ತಾರೆ. ಯಾವುದರ ಸುಳಿವೂ ಇಲ್ಲ. ಸನ್ಯಾಸಿ "ನಾನು ಶಾಸ್ತ್ರಭಾಗವನ್ನೆಲ್ಲ ಪೂರೈಸಿಬಿಟ್ಟೆ. ನೀವು ದೇವರಿಗೆ ನಮಸ್ಕಾರ ಮಾಡಿ ಹೋಗಿ" ಎಂದು ಹೇಳಿ ಅವರ ಕೈಗೆ ಒಂದು ಸಿಹಿತಿಂಡಿ ಪೊಟ್ಟಣ ಕೊಟ್ಟನಂತೆ".[20] ಇದರಿಂದಾಗಿ ಲೇಖಕರ ಮಿತ್ರರಿಗೆ ಮನಶ್ಯಾಂತಿ ಹಾಳಾಗಿ ಹೋಗಿದ್ದರಿಂದ ಲೇಖಕರು "ಚಿಂತೆಯಿಲ್ಲ, ನಿಮ್ಮ ಕೈಲಿ ಶ್ರಾದ್ಧ ಮಾಡಿಸುತ್ತೇನೆ. ಒಂದು ದಿನ ಉಪವಾಸ ಇರುವಿರಾ?" ಎಂದಾಗ ಅದಕ್ಕೆ ಅವರು ಒಪ್ಪಿದರಂತೆ. ಲೇಖಕರು "ನಿಮಗೆ ಗೊತ್ತಲ್ಲ ನಾನೂ ಪುರೋಹಿತನೆ! ಸತ್ತವರನ್ನು ಸ್ವರ್ಗಕ್ಕೆ ಕಳುಹಿಸುತ್ತೇನೆ. ಬದುಕಿರುವವರೆಗೆ ಮದುವೆ ಮಾಡಿಸುತ್ತೇನೆ. ಒಂದು ದಿನ ಪೂರ್ತ ಉಪವಾಸ ಇರಿ; ಮರುದಿನ ಶ್ರಾದ್ಧ ಮಾಡೋಣ. ಎಲ್ಲ ಮನೆಯಲ್ಲಿಯೇ, ನಾನೇ ಪುರೋಹಿತ; ಬ್ರಾಹ್ಮಣ, ನನ್ನ ಹೆಂಡತಿ ವಡೆ, ರವೆಉಂಡೆ, ಸಜ್ಜಪ್ಪ ಎಲ್ಲ ಮಾಡುತ್ತಾಳೆ. ತಿಥಿ ಅಡಿಗೆ ಜೀವಮಾನವೆಲ್ಲ ಮಾಡಿ ಅವಳ ಮೈಕೈ ಜಡ್ಡುಗಟ್ಟಿದೆ"[21] ಎನ್ನುತ್ತಾರೆ. ಲೇಖಕರು ತಮಗೆ ತಿಳಿದ ಮಟ್ಟಿಗೆ ಮಂತ್ರ-ಹೋಮ-ಹವನಗಳನ್ನು ಮಾಡಿ ಶಾದ್ಧ ಮಾಡಿ ಮುಗಿಸಿಬಿಟ್ಟಿರುವಲ್ಲಿ ಲೇಖಕರ ಪೌರೋಹಿತ್ಯ ಜ್ಞಾನದ ಪ್ರದರ್ಶನವಾಗಿರುವುದನ್ನು ಮತ್ತು ಮಿತ್ರರ ಆಸೆಯನ್ನು ನೆರವೇರಿಸಬೇಕೆನ್ನುವ ಸಹೃದಯತೆಯನ್ನು ನಾವು ಅರಿಯಬಹುದು.

ಪಾಕಶಾಸ್ತ್ರ ಪ್ರವೀಣರಾಗಿ, ಹಬ್ಬ ಹರಿದಿನಗಳಲ್ಲಿ ಮಾಡುವ ತಿಂಡಿಗಳ ಬಗೆಗೆ ಸಂಶೋಧನೆ ನಡೆಸಲು ಭಾರತಕ್ಕೆ ಅದರಲ್ಲೂ ಗೊರೂರಿಗೆ ಬಂದ ರಾಬರ್ಟ್‌ಗೆ ಸಲಹೆ ಸೂಚನೆ ನೀಡಿತ್ತಾ, ಹುಳಿಯನ್ನ ತಯಾರಿ ಮಾಡುವ ವಿಧಾನವನ್ನು ಗೊರೂರರು ವರ್ಣನೆ ಮಾಡಿರುವುದನ್ನು ಈ ಕೆಳಗಿನಂತೆ ನೋಡಬಹುದು. "ನಮ್ಮವರು ಒಳ್ಳೆ ಅಡಿಗೆಯನ್ನು ನಳಪಾಕ ಎಂದು ಹೇಳಿದುದು ಅತಿಶೋಕ್ತಿಯಲ್ಲ, ಅದೊಂದು ದೊಡ್ಡ ವಿದ್ಯೆ, ತಂತ್ರಶಾಸ್ತ್ರ. ಹುಳಿಯನ್ನದಲ್ಲಿ ಗೊಜ್ಜು ಮುಖ್ಯ. ಅದು ಸರಿಯಾದ ಹದದಲ್ಲಿ ಕುದಿದರೆ ಲೇಹ್ಯದ ಹಾಗೆ ಇರುತ್ತದೆ. ಮನುಷ್ಯನ ದೇಹದ ಪ್ರತಿಯೊಂದು ಜೀವಾಣುವಿನಲ್ಲಿಯೂ ಅವರ ಪೂರ್ಣ ದೇಹರಚನೆಯ ಮೂಲ ಸ್ವರೂಪವಿರುವುದೆಂದು ವಿಜ್ಞಾನಿಗಳು ಹೇಳುತ್ತಾರೆ. ಹಾಗೆ ಹುಳಿಯನ್ನದ ಗೊಜ್ಜಿನ ಒಂದು ಕಡಲೆಕಾಳು ಗಾತ್ರದಲ್ಲಿಯೂ ಪೂರ್ಣ ಹುಳಿಯನ್ನದ ಸಾರಸರ್ವಸ್ವವಿರುತ್ತದೆ. ಗೊಜ್ಜಿನಿಂದ ಅನ್ನವನ್ನು ಕಲೆಸಬೇಕು. ಗೊಜ್ಜು ಸರಿಯಾದ ಹದದಲ್ಲಿದ್ದರೆ ಉಪ್ಪು, ಖಾರ, ಹುಳಿ ಎಲ್ಲ ಸರಿಯಾಗಿ ಅನ್ನಕ್ಕೆ ಸೇರಿ ಅನ್ನ ಉದುರು ಉದುರಾಗಿ ಉಳಿಯುವುದು. ಅನ್ನ ಕಳಿಯಾಗಲೇಕೂಡದು".[22] ಎಂದು ಉಪದೇಶಿಸಿರುವಲ್ಲಿ ಲೇಖಕರ ಪಾಕಶಾಸ್ತ್ರ ಪ್ರಾವೀಣ್ಯತೆಯನ್ನು ಮತ್ತು ಪಾಕಪ್ರಿಯರೆನ್ನುವುದು ತಿಳಿದುಬರುತ್ತದೆ.

ಅಮೇರಿಕದ ಶಾಲೆಯ ಮಕ್ಕಳಿಗೆ ಪಂಚತಂತ್ರದ ಕಥೆಗಳನ್ನು ಸ್ವಾರಸ್ಯವಾಗಿ ವಿವರಿಸುವುದರ ಮೂಲಕ ಮೆಚ್ಚುಗೆ ಗಳಿಸಿದ್ದಾರೆ. ಕಥೆಯಲ್ಲಿ ಸಿಂಹದ ಪ್ರಸ್ತಾಪ ಬಂದಾಗ ಮಕ್ಕಳಿಗೆ ಅದು ಏನೆಂದು ಅರ್ಥವಾಗದಿದ್ದಾಗ ಗೋಲ್ಡವಿನ್ ಮೇಯರ್ ಕಂಪನಿಯ ಚಿತ್ರಗಳ ಪ್ರಾರಂಭದ ಸಂಕೇತ ಅದೆಂದು ಹೇಳಿದಾಗ ಅರ್ಥವಾಯಿತಂತೆ! ಹಾಗೆಯೇ ಬಾವಿಯ ಪ್ರಸ್ತಾಪ ಬಂದಾಗಲೂ ಮಕ್ಕಳಿಗೆ ಅದು ಅರ್ಥವಾಗಲಿಲ್ಲ. ಎಲ್ಲೆಲ್ಲಿಯೂ ಬಿಸಿನೀರು-ತಣ್ಣೀರು ನಲ್ಲಿಯಲ್ಲಿ ಹರಿಯುತ್ತಿರುವಾಗ ಬಾವಿಯನ್ನು ನೋಡುವುದೆಲ್ಲಿ? ಎನ್ನುತ್ತಲೇ ಗೊರೂರರು ಮಕ್ಕಳಿಗೆ ಕಷ್ಟಪಟ್ಟು ಬಾವಿ ಎಂದರೇನು ಎಂದು ತಿಳಿಸಿರುವುದನ್ನು ಕಾಣಬಹುದು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುವಾಗ ಗೊರೂರರು ರಾಮಾಯಣ, ಮಹಾಭಾರತ, ಉಪನಷತ್ತು, ಕಾಳಿದಾಸನ ಕೃತಿಗಳ ಬಗ್ಗೆ ಹೇಳಿ ಜನಪಿಯರಾಗಿದ್ದಾರೆ. "ನನ್ನನ್ನು ಅಮೇರಿಕಾದಲ್ಲಿ ಬಜಾಯಿಸಿದುದು ವೇದಗಳ ಅನೇಕ ಪಠಣ, ಉಪನಿಷತ್ತುಗಳ ವಿವರಣೆ, ಸಂಸ್ಕೃತ ಕವಿತೆಗಳ ನಾನಾ ಬಗೆಯ ಛಂದಸ್ಸು, ಸಂಸ್ಕೃತ ಹಾಸ್ಯ ಶ್ಲೋಕಗಳು" ಎಂದು ಗೊರೂರರೇ ಹೇಳಿಕೊಂಡಿರುವಲ್ಲಿ ಲೇಖಕರಿಗಿರುವ ಶಾಸ್ತ್ರ-ಗ್ರಂಥಗಳು ಜ್ಞಾನವನ್ನು ತಿಳಿಯಬಹುದು.

ಕನ್ನಡಿಗರು ಸಭೆ ಸಮ್ಮೇಳನಗಳನ್ನು ಏರ್ಪಡಿಸಿ ಗೌರವಿಸಿದಾಗ ಅಲ್ಲಿ ತಮಗೆ ಪ್ರಿಯವಾದ ಜನಪದ, ಹಾಸ್ಯ ಹಾಗೂ ಶೃಂಗಾರ ಗೀತೆಗಳನ್ನು ತಪ್ಪದೆ ಹಾಡಿ ಅಲ್ಲಿನವರನ್ನು ರಂಜಿಸಿದ್ದಾರೆ. ಒಮ್ಮೆ ಆಲ್ಬರ್ಟ್ ವಿಶ್ವವಿದ್ಯಾಲಯದ ಸಭೆಯಲ್ಲಿ "ಒಲೆಕಾರ ನಿನಗೆ ಒಳ್ಳೆ ಹೆಂಡತಿ ಯಾರೋ।

ನೀ ಹೋದೆ ದೇಶ, ತಿರುಗೂತ ನಿನ ನಾರಿ।

ಕಂಡೋರ್ಗೆ ಬಾಯಿ ಬಿಡುತಾಳ।

ಎಂಬ ಜಾನಪದ ಗೀತೆಯನ್ನು ಹಾಡಿದಾಗ ಸಭೆಯಲ್ಲಿದ್ದ ಹಲವರು ನಕ್ಕಿದ್ದಾರೆ. ಅರ್ಥವಾಗದಿದ್ದ ಕೆಲವರಿಗೆ ಅದರ ವಿವರಣೆ ಕೊಟ್ಟಾಗ ಅವರಿಗು ನಗು ಬಂದಿದೆ. ಅಮೇರಿಕನ್ ವಿದ್ಯಾರ್ಥಿಗಳಿಗೆ ಬಹಳ ಮೆಚ್ಚುಗೆಯಾದುದು ಗೊರೂರು ತಮ್ಮ ದಾಟಿಯಲ್ಲಿ ಹಾಡಿದ ಜಾನಪದ ಹಾಡುಗಳು

"ಈ ಪ್ರಾಯದಾಗ ಕುಡು ಕೈಯ।

ಒಲ್ಲೆ ಅನಬೇಡ, ಒಲ್ಲೆ ಅನಬೇಡ ನಡೆ ರಂಗಮಾಲದಾಗ

ಬಂದುಕೂಡ, ನನಜೋಡ ನನಜೋಡ

ಈ ಹರೆಯ ಹೋದಮೇಲೆ ಸರದ ಅಲ್ಲಿಂದ ಬರದ ಈಗಿನ ಧಮಕ" ಎಂದು ಹಾಡು ಹೇಳಿ ಅದರ ಅರ್ಥ ವಿವರಿಸಿದಾಗ ವಿದ್ಯಾರ್ಥಿಗಳು ಎದ್ದುನಿಂತು ಚಪ್ಪಾಳೆ ಹೊಡೆದು ಹುರಹುರ ಎಂದರು. ಸ್ವಲ್ಪ ವಯಸ್ಸಾದ ಉಪಾಧ್ಯಾಯರು ಸಹ "ಯವ್ವನ ಎಷ್ಟು ಬೇಗ ಜಾರಿಹೋಗಿ ಮಧ್ಯ ವಯಸ್ಸು ಬಂದು ಬಿಡುತ್ತದೆ" ಎಂದರಂತೆ. ಹೀಗೆ ಲೇಖಕರು ಹೋದಲೆಲ್ಲಾ ತಮ್ಮ ಸಹಜ ತಿಳಿಯಾದ ಹಾಸ್ಯದಿಂದ ಮನ ಮುಟ್ಟುವಂತೆ ಹಾಡಿ ನಲಿಸಿದ್ದಾರೆ.

ಲೇಖಕರು ಲಾಕಪ್ಪಿನಲ್ಲಿ ಒಂದು ರಾತ್ರಿ ಕಳೆದ ಘಟನೆಯನ್ನು ಸ್ವಾರಸ್ಯಯುತವಾಗಿ ವಿವರಿಸಿದ್ದಾರೆ; ಮಿನಪೋಲಿಸ್ ನಗರಕ್ಕೆ ಮಿತ್ರರನ್ನು ನೋಡಲು ಹೋದರು ಆದರೆ ಅವರು ಇರಲಿಲ್ಲ. ಅವರ ಪರಿಚಿತರೊಬ್ಬರು ಸಿಕ್ಕಿ ಲೇಖಕರನ್ನು ಮೋಟಾರಿನಲ್ಲಿ ಕೂರಿಸಿಕೊಂಡು ತಮ್ಮ ಕೆಲಸದ ಮೇಲೆ ಹೊರಟಾಗ, ಲೇಖಕರು ದಾರಿಯಲ್ಲಿ ಒಂದೆಡೆ ಕಾರಿನಿಂದ ಇಳಿದು, ಅವರು ಅದೇ ದಾರಿಯಿಂದ ಹಿಂದಿರುಗುವಾಗ ರಾತ್ರಿ ಎರಡು ಗಂಟೆಗೆ ತಮ್ಮನ್ನು ಕರೆದುಕೊಂಡು ಹೋಗಲು ಹೇಳಿದ್ದರು. ಲೇಖಕರು ನಗರದಲ್ಲಿ

ಅಲ್ಲಲ್ಲಿ ಸುತ್ತುತ್ತಾ ಗೊತ್ತು ಮಾಡಿಕೊಂಡಿದ್ದ ಸ್ಥಳದಿಂದ ತಪ್ಪಿಸಿಕೊಂಡರು. ಹೀಗೆ ರಸ್ತೆ ಹುಡುಕಾಟದಲ್ಲಿ ರಾತ್ರಿ ಒಂಬತ್ತು ಗಂಟೆ. ಜೇಬಿನಲ್ಲಿ ಒಂದು ರಿಟರ್ನ್ ಟಿಕೆಟ್ ಮತ್ತು ಎರಡು ಡಾಲರ ಮಾತ್ರವಿದ್ದು, ಈ ಸಮಯದಲ್ಲಿ ಒಬ್ಬ ಟ್ರಾಫಿಕ್ ಪೋಲಿಸ್ ಕಣ್ಣಿಗೆ ಬಿದ್ದ ಆತನಗೆ ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲು ಆತ ಲೇಖಕರನ್ನು ತನ್ನ ಮನೆಗೆ ಕಾರಿನಲ್ಲಿ ಕರೆದೊಯ್ದು ಅಲ್ಲಿ ಬ್ರೇಡ್, ಹಾಲು, ಹಣ್ಣು, ಬಿಸ್ಕತ್ತಗಳ ರಾತ್ರಿ ಊಟಮಾಡಿಸಿದ್ದಾರೆ. ಆ ನಂತರ ಪೋಲಿಸನವ" ನಮ್ಮ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸದೆ ಇರುವುದರಿಂದ ಧೂಳು ತುಂಬಿದೆ. ನೀವು ಏನೂ ತಿಳಿದುಕೊಳ್ಳದಿದ್ದರೆ, ಮಗ್ಗುಲಲ್ಲಿ ನನ್ನ ವಶದಲ್ಲಿಯೇ ಒಂದು ಲಾಕಪ್ ಇದೆ. ಗಾಳಿ, ಬೆಳಕು, ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆ ಮಾಡಿದ ಸ್ವಚ್ಛವಾದ ಹಾಸಿಗೆ ಇದೆ ಅಲ್ಲಿ ಮಲಗಿಬಿಡಿ, ನಿಮಗೆ ಸೊಗಸಾದ ನಿದ್ರೆ ಬರುತ್ತೆ"[23] ಎಂದನು ಪೋಲಿಸನವರ ಸಹವಾಸವಾದ ಮೇಲೆ ಲಾಕಪ್ ಸಹವಾಸ ಆಗಲೇಬೇಕಷ್ಟೆ ಎಂದು ನಿದ್ದೆ ಮಾಡಿ, ಬೆಳಗಾದ ನಂತರ ಮಿತ್ರರನ್ನು ಭೇಟಿಯಾಗಿರುವಲ್ಲಿ ಲೇಖಕರು ಯಾವುದೇ ಸಂದರ್ಭದಲ್ಲಿಯೂ ಕಂಗೆಡದೆ ಜೀವನೋತ್ಸಹದಿಂದಿರುವುದನ್ನು ಗ್ರಹಿಸಬಹುದು.

ಈ ಪ್ರವಾಸಕಥನದಲ್ಲಿ ಸಾಕಷ್ಟು ಹಾಸ್ಯ ಪ್ರಸಂಗಗಳನ್ನು ನಾವು ನೋಡಬಹುದು ಅದಕ್ಕೆ ಒಂದು ನಿದರ್ಶನವೆಂದರೆ ಮಾಸ್ಕೋ ಸರ್ಕಸ್ ನೋಡಲು ಹೋದಾಗ ಅಲ್ಲಿನ ಬಾತ್ ರೂಂ ಬಾಗಿಲು ತೆರೆಯದೆ ಹೋದಾಗ ಅಲ್ಲಿದ್ದ ಎಲೆಕ್ಟ್ರಿಕ್ ಸ್ವಿಚ್‌ಗಳನ್ನು ಒಂದೊಂದಾಗಿ ಅಮುಕಿದ್ದಾರೆ. ಒಂದೊಂದು ಸ್ವಿಚನ್ನು ಎರಡು-ಮೂರು ಸಲ ಅಮುಕಿ ಫೈರ್ ಅಲಾರಂ ಬೆಲ್ ಮಾಡಿ ಸರ್ಕಸ್ ಕಂಟ್ರಾಕ್ಟದಾರನ ಆಪ್ತಕಾರ್ಯದರ್ಶಿಯ ಕೋಪಕ್ಕೆ ಗುರಿಯಾದರು. ಆತ ಮೊಕದ್ದಮೆ ಹೂಡುತ್ತೇನೆ ಎಂದು ಹೇಳಿದಾಗ ಲೇಖಕರು 'ಕೆರೆ ಒಡೆದವನ ಹತ್ತಿರ ಗೋಮಟೆ ಕಿತ್ತುಕೊಂಡರು' ಎಂಬ ಗಾದೆಯನ್ನು ಹೇಳಿ ಅದನ್ನು ವಿವರಿಸಿದ ನಂತರ ಅವನಿಗೆ ಅದರ ಸ್ವಾರಸ್ಯ ಗೊತ್ತಾಗಿ ಅವನು" ನಿಮ್ಮ ಹಾಸ್ಯ ಸ್ವಭಾವವನ್ನು ಮೆಚ್ಚುತ್ತೇನೆ. ದೇವರು ನಿಮ್ಮನ್ನು ನನ್ನನ್ನೂ ಪಾರು ಮಾಡಿದ" ಎಂದು ಲೇಖಕರನ್ನು ಕರೆದುಕೊಂಡು ಸರ್ಕಸ್ಸಿನೊಳಗೆ ಪ್ರವೇಶಿಸಿದರು. ಹೀಗೆ ಹಾಸ್ಯದಿಂದಾಗಿ ಬಂದ ಆಪತ್ತಿನಿಂದ ಪಾರಾಗಿದ್ದಾರೆ. "ವಿಜ್ಞಾನ ಬ್ರಹ್ಮರಾಕ್ಷಸನಂತೆ, ಅದನ್ನು ಆಳಲು ತಿಳಿದಿರಬೇಕು ಇಲ್ಲದಿದ್ದರೆ ಅದು ನಮ್ಮನ್ನು ನಾಶಮಾಡುತ್ತದೆ"[24] ಎಂದು ಆಧುನಕ ಸಲಕರಣೆಗಳಿಂದ ತಮ್ಮಗೊದಗಿದ ವಿಪತ್ತಿನಿಂದ ಈ ಮಾತು ಹೊಮ್ಮಿದೆ. ಕಾರು ಪಾರ್ಕಿಂಗ್‌ಗೆ ಸ್ಥಳಾವಾಶ ಸಿಗದೆ ಕಾರನ್ನು ನೆಲಮಾಳಿಗೆ ಪಾರ್ಕಿಂಗ್ ಲಾಟ್‌ನಲ್ಲಿ ಗಂಡ ಬಿಟ್ಟರೆ, ಹೆಂಡತಿ ಆ ಕಾರು ಓಡಿಸಿದರೆ ಇನ್ಸೂರೆನ್ಸ್ ಪ್ರೀಮಿಯಂ ಕಟ್ಟಬೇಕು. ಅಲ್ಲದೆ ಅಪಘಾತವಾದರೆ ಕೋರ್ಟ್ ವಿಧಿಸುವ ದುಬಾರಿ ದಂಡ

ಕಟ್ಟಬೇಕು ಈ ತಾಪತ್ರಯಗಳೇ ಬೇಡವೆಂದು ಅವಳೂ ನೆಲ ಮಾಳಿಗೆಯ ಪಾರ್ಕಿಂಗ್ ಲಾಟ್‌ನಲ್ಲಿ ಕಾರನ್ನು ತಳ್ಳಿ ಗಂಡ ಹೆಂಡತಿಯರು ನಡೆದುಕೊಂಡೇ ಹೋಗಬೇಕಾಗಿ ಬಂದದ್ದನ್ನು ನೋಡಿದ ಲೇಖಕರು "ಹೀಗೆ ವೈಭವದಲ್ಲಿಯೂ ದಾರಿದ್ರ್ಯ, ಸಮೃದ್ಧಿಯಲ್ಲಿಯೂ ಕೊರತೆ, ಅಮೇರಿಕಾದಲ್ಲಿ ಇಂಥ ವಿರೋದಾಭಾಸಗಳಿವೆ" ಎಂದು ವ್ಯಂಗ್ಯವಾಡಿದ್ದಾರೆ.

ಎಂಪೈರ್ ಸ್ಟೇಟ್ ಬಿಲ್ಡಿಂಗ್ ಮೆಟ್ಟಿಲುಗಳನ್ನು ಲೇಖಕರು ನಡೆದುಕೊಂಡು ಹತ್ತುವಾಗ ಅಲ್ಲಿಯ ಒಬ್ಬರು "ಛೆ-ಛೆ ಎಲ್ಲಾದರೂ ಉಂಟೆ? ಇಲ್ಲಿ ಯಾರೂ ನಡೆದು ಹತ್ತುವುದೇ ಇಲ್ಲ. ಲಿಫ್ಟ್ ಇರುವುದೇ ಅದಕ್ಕಾಗಿ" ಎನ್ನುತ್ತಾರೆ. ಅದಕ್ಕೆ ಲೇಖಕರು ಈ ರೀತಿ ಉತ್ತರಿಸುತ್ತಾರೆ. "ನಾವು ಕೈ ಕಾಲುಗಳನ್ನು ಉಪಯೋಗಿಸದಿದ್ದಲ್ಲಿ ಅವು ಬಿದ್ದೇ ಹೋಗಬಹುದು. ದೇವರು ಇವನಿಗೆ ಈ ಅಂಗಗಳು ಬೇಕಿಲ್ಲವೆಂದು ಅವುಗಳನ್ನು ನಮ್ಮಿಂದ ಕಸಿದು ಕೊಳ್ಳಬಹುದು. ನಿಮಗೇನೂ ಕೈಕಾಲು ಇಲ್ಲದಿದ್ದರೂ ನಡೆಯುತ್ತೆ. ಮೋಟಾರು ಲಿಫ್ಟ್‌ಗಳು ನಿಮ್ಮ ಸೇವೆಗೆ ಬರುತ್ತವೆ. ಆದರೆ ನಮಗೆ ಕೈ ಕಾಲು ಉಪಯೋಗಕ್ಕೆ ಬರದಿದ್ದರೆ ನಮ್ಮ ಕಥೆ ಮುಗಿದಂತೆಯೆ. ನಮ್ಮ ಬಸ್ಸುಗಳಲ್ಲಿ ನಾವು ನಿಂತುಕೊಳ್ಳುವುದಕ್ಕಾಗಿಯಾದರೂ ನಮ್ಮ ಕಾಲುಗಳು ಗಟ್ಟಿಯಾಗಿರಬೇಕು" ಎನ್ನುತ್ತಾರೆ. ಲೇಖಕರ ಈ ಎರಡು ಹಾಸ್ಯ ಸಂದರ್ಭದಲ್ಲಿ ವ್ಯಂಗ್ಯ ಅಡಗಿದೆಯಾದರೂ ನಮ್ಮ ಸಾರಿಗೆ ವ್ಯವಸ್ಥೆಯ ಬಗ್ಗೆ ಅಸಮಧಾನದ ಎಳೆ ಇರುವುದನ್ನು ಗುರುತಿಸಬಹುದು.

ಲೇಖಕರು ಎಲ್ವಿಸ್ ಪ್ರಿಸ್ಲೀ, ನಯಾಗಾರ ಜಲಪಾತ, ರಾಕೀ ಪರ್ವತ, ಗ್ಲೇಸಿಯರ್ಸ್, ನ್ಯಾಷನಲ್ ಪಾರ್ಕ್, ಸ್ವಾತಂತ್ರ್ಯ ಪ್ರತಿಮೆ, ಎಂಪೈರ್ ಸ್ಟೇಟ್ ಭವನ, ಲಾಸ್ ಏಂಜಲೀಸ್, ಹಾಲಿವುಡ್, ಡಿಸ್ನಿಲ್ಯಾಂಡ್ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದ್ದಾರೆ. ಇವುಗಳ ಬಗ್ಗೆ ವಿಸ್ತಾರವಾದ ವಿವರಣೆಯನ್ನು ಕೊಟ್ಟಿದ್ದಾರೆ. ನಯಾಗಾರ ಜಲಪಾತದ ಸೌಂದರ್ಯವನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. "ಜಗತ್ತಿನ ಸೌಂದರ್ಯವೆಲ್ಲ ಒಂದು ಕೈ. ತಾನೇ ಒಂದು ಕೈಗೆ. ಇದೇ ಭುವನದ ಭಾಗ್ಯ. ಆ ನೀರು ಪೇನಸಿಕ್ತವಾಗಿರುವುದರಿಂದಲೂ ಕೆಳಗಿನ ನೊರೆಯು ಮೇಲಕ್ಕೆ ಏರುತ್ತಿರುವುದರಿಂದಲೂ ಜಲಪಾತ ಹಾಲಿನ ಕಡಲು ಎಂಬ ಭ್ರಾಂತಿಯೇ ನಮಗೆ ಉಂಟಾಗುತ್ತದೆ".[25] ಎನ್ನುತ್ತಾ ಇದು ಪ್ರಕೃತಿಯ ಕೊಡುಗೆ ಎಂದು ತಿಳಿಸುತ್ತಾರೆ. ಈ ಸಂದರ್ಭದಲ್ಲಿ ಲೇಖಕರು ಭಾರತದ ಪ್ರಕೃತಿ ವೈಚಿತ್ರ್ಯದ ಸೊಬಗು, ಅಗಾಧತೆ, ವೈವಿಧ್ಯತೆ ಎಲ್ಲವೂ ಅಮೇರಿಕಕ್ಕಿಂತ ಹೆಚ್ಚು ಬೃಹತ್ತಿನದು. ಅದೊಂದು ತರದ ಸೊಗಸು.

ಇದೊಂದು ತರಹದ ಸೊಗಸು. ಎಂದು ನಮ್ಮ ಗೇರುಸೊಪ್ಪೆ ಜಲಪಾತದ ಬಗ್ಗೆ ತಿಳಿಸುತ್ತಾ ತುಲನಾತ್ಮಕವಾಗಿ ವಿವರಿಸಿದ್ದಾರೆ.

ನಮ್ಮ ಪ್ರೇಕ್ಷಣೀಯ ಸ್ಥಳಗಳಲ್ಲಿ ಯಾವ ಸೌಕರ್ಯಗಳೂ ಇರುವುದಿಲ್ಲ. ಯಾವ ಬಸ್ ಸ್ಟೇಷನ್‌ನಲ್ಲಿಯೂ ಕುಡಿಯುವ ನೀರು, ಶೌಚಗೃಹ ಮೊದಲಾದವು ಇರುವುದಿಲ್ಲ ಇದ್ದರೂ ಸ್ವಚ್ಛವಾಗಿರುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸುತ್ತಾ, ಅಮೇರಿಕ ಎಲ್ಲ ಸೌಕರ್ಯಗಳನ್ನು ತಮ್ಮ ಜನರಿಗಾಗಿ ಮಾಡಿರುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.[26] ಆದರೆ ನಮ್ಮ ಸರ್ಕಾರಗಳು ಜನರಿಗಾಗಿ ಮಾಡದೆ ತಮಗಾಗಿ ಮಾಡಿಕೊಳ್ಳುವುದನ್ನು ನೋಡುತ್ತಾ ಅನುಭವಿಸುತ್ತಿದ್ದೇವೆ.

ಅಮೇರಿಕದಲ್ಲಿ ಲೇಖಕರಿಗೆ ನಮ್ಮ ಅಸ್ಪೃಶ್ಯತೆಯ ಬಗ್ಗೆ ಹಲವಾರು ಬಾರಿ ಕಿರಿಕಿರಿಯನ್ನುಂಟುಮಾಡಿದೆ. ಕಾರಣ ಅಮೇರಿಕದಲ್ಲಿ, ಭಾರತದಿಂದ ಹೋದವರು ಮಾತನಾಡುವ ಯಾವ ಸಭೇಯಲ್ಲಾಗಲೀ ಭಾರತದಲ್ಲಿರುವ ಅಸ್ಪೃಶ್ಯತೆಯ ವಿಷಯ ತಲೆ ಎತ್ತುತ್ತದೆ. ಲೇಖಕರು ಇದಕ್ಕೆ ಸಾಕಷ್ಟು ಸಮಜಾಯಿಷಿಗಳನ್ನು ಕೊಡುತ್ತಿದ್ದರು -ಬಹುಮಟ್ಟಿಗೆ ಅವರನ್ನು ನಿರುತ್ತರನ್ನಾಗಿ ಮಾಡಿದೆ ಆ ಸಂದರ್ಭದಲ್ಲಿ ಲೇಖಕರು "ನೀಗ್ರೋಗಳ ವಿಷಯದಲ್ಲಿ ನೀವು ಯಾಕೆ ಹೀಗಿದ್ದೀರಿ, ಇವತ್ತು ಸಹ, ಕಾನೂನಿನಲ್ಲಿ ನೀಗ್ರೋಗೆ ಸಮಾನತೆಯಿದ್ದರೂ ನಿಮ್ಮ ಹೋಟೆಲುಗಳಿಗೆ ಸಹ ಅವರನ್ನು ಕೊಠಡಿಗಳು ಖಾಲಿ ಇಲ್ಲವೆಂಬ ನೆಪದಿಂದ ಸೇರಿಸುವುದಿಲ್ಲ ಯಾಕೆ?" ಎಂದು ಕೇಳಿದಾಗ ಮಾತ್ರವೇ ಅವರ ಬಾಯಿ ಮುಚ್ಚುತ್ತಿತ್ತು ಎನ್ನುತ್ತಾರೆ. ಇಂತಹ ಹೀನ ಪದ್ಧತಿಯನ್ನು ನಾವು ಕೊನೆಗಾಣಿಸಬೇಕು ಇಲ್ಲದಿದ್ದರೆ ನಾವು ಎಷ್ಟೇ ಮುಂದುವರೆದರೂ ನಮ್ಮ ದುರ್ಬಲತೆಯನ್ನು ಎತ್ತಿ ತೋರಿಸುತ್ತಾರೆ ಎನ್ನುವುದು ಲೇಖಕರ ಅಭಿಪ್ರಾಯದಲ್ಲಿ ಕಂಡುಬರುತ್ತದೆ.

ಅಮೇರಿಕನ್ ಸರ್ಕಾರಗಳು, ಸಾರ್ವಜನಿಕ ಸೇವಾ ಸಂಸ್ಥೆಗಳು, ಯಾಂತ್ರೀಕರಣ, ಔದ್ಯೋಗೀಕರಣ ಇವುಗಳಿಂದ ಒಟ್ಟು ಸಮಾಜದ ಆರೋಗ್ಯ, ಆರ್ಥಿಕ ಸ್ಥಿತಿ ರಕ್ಷಿತವಾಗಿದ್ದರೂ, ವೈಯಕ್ತಿಕವಾಗಿ ಸಮಾಜ ಶಿಥಿಲವಾಗಿದೆ ಎನ್ನುತ್ತಾರೆ. ಅಮೇರಿಕನ್ ಸಂಸಾರಗಳಲ್ಲಿ ಹೆಣ್ಣು–ಗಂಡು, ಕೆಲವು ವೇಳೆ ಮಕ್ಕಳು ಸಹ ಸಂಪಾದಿಸುವುದರಿಂದ ಭಾವೈಕ್ಯತೆ, ಪರಸ್ಪರ ಅವಲಂಬನೆ, ನಿಸ್ಸಂಕೋಚ ಮಾತುಕತೆ, ಮಿಲನ ಎಲ್ಲವೂ ಬಹಳ ಔಪಚಾರಿಕವೂ ಮಿತವೂ ಆಗಿಬಿಡುತ್ತದೆ ಎಂದೆನ್ನುತ್ತಾ, ಕೆಲವು ನಿದರ್ಶನಗಳನ್ನು ಕೊಟ್ಟಿದ್ದಾರೆ.

ಪುಟ 294–295ರಲ್ಲಿ ಅಮೇರಿಕದಲ್ಲಿ ಟೆಲಿವಿಷನ್ ನಿಂದಾಗಿ ಅನೇಕ ಕೇಡುಗಳು ಸಂಭವಿಸುತ್ತದೆ. ಇದಕ್ಕೆ ಕಾರಣ ಅಮೇರಿಕನ್ ಜನ ಮಾತನಾಡುವುದೇ ಕಡಿಮೆ. ಟೆಲಿವಿಷನ್ ಬಂದ ಮೇಲಂತೂ, ಒಬ್ಬರನ್ನೊಬ್ಬರು ನೋಡಿ ಮಾತನಾಡುವುದಕ್ಕೆ ಹೋದರೂ, ಟೆಲಿವಿಷನ್ ನೋಡುತ್ತಾ ಮೌನವಾಗಿ ಕುಳಿತುಬಿಡುವರು. ಟೆಲಿವಿಷನ್ ನೋಡುವುದರಿಂದ ಬಾಲಾಪರಾಧಗಳೂ ಹೆಚ್ಚಿದ್ದು, ಈ ಅಪರಾಧಗಳಲ್ಲಿ ಕಳ್ಳತನ, ಕೊಲೆ ಎಲ್ಲವೂ ಸೇರಿವೆ ಎನ್ನುತ್ತಾರೆ. ಬಾಲಾಪರಾಧಿಗಳು ಹೆಚ್ಚಾಗುತ್ತಿದ್ದಾರೆ. ಉದಾಹರಣೆಗೆ "ಹದಿನೆಂಟು ವರ್ಷದ ಒಬ್ಬ ಯುವಕ ಅವನು ಇನ್ನೂ ಅಪ್ರಾಪ್ತವಯಸ್ಕ. ಎಂಬತ್ತೆರಡು ವರುಷದ ಒಬ್ಬ ಹೆಂಗಸಿನ ಮನೆಗೆ ನುಗ್ಗಿ ಕಳುವು ಮಾಡಿದ. ಅಲ್ಪಸ್ವಲ್ಪ ದುಡ್ಡು ಸಿಕ್ಕಿತು. ಹೆಂಗಸು 'ನನ್ನನ್ನು ಪೋಲಿಸಿಗೆ ಕೊಡುತ್ತೇನೆ" ಎಂದು ಹೆದರಿಸಿದಳು. ಅವನು ಅವಳನ್ನು ಕೊಲೆ ಮಾಡಿದ. ವಿಚಾರಣೆ ಕಾಲದಲ್ಲಿ "ಟೆಲಿವಿಷನ್‌ನಲ್ಲಿ ಹಿಂಸೆಯನ್ನು ನೋಡಿನೋಡೀ, ನಾನು ಕೊಲೆ ಮಾಡಿದೆ. ನಾನು ಹುಟ್ಟಿದಂದಿನಿಂದ ಟೆಲಿವಿಷನ್ ನೋಡುವುದರ ಹೊರತು ಮತ್ತೇನನ್ನೂ ಮಾಡಿಲ್ಲ. ಟೆಲಿವಿಷನ್ನೇ ನನ್ನ ಮನೆ. ನನ್ನ ಪಾಠಶಾಲೆ, ನನ್ನ ಚರ್ಚು"[27] ಎಂದು ಹೇಳಿದ. ದೂರದರ್ಶನದಿಂದ ಒಳ್ಳೆಯದು ಮಾತ್ರವೇ ಅಲ್ಲ ಕೆಟ್ಟದ್ದು ಸಹ ಸಂಭವಿಸಬಹುದು ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು ಎಂಬ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

"ವಿಮಾನದಲ್ಲಿ ಜೊತೆ ಪ್ರಯಾಣಿಕರಿಂದ ಅವರ ವಿಳಾಸ ಪಡೆದು ನ್ಯೂಯಾರ್ಕಿನ ಅವರ ಮನೆಗೆ ಹೋಗಿ ಆತಿಥ್ಯ ಪಡೆಯುವುದಾಗಲಿ ವಿಶ್ವಸಂಸ್ಥೆಯಲ್ಲಿ ಆಫ್ರಿಕಾದ ರಾಯಭಾರಿ ವರ್ಗದವರನ್ನು ಮಾತನಾಡಿದೆ ಅವರಿಂದ ಉಪಚಾರ ಮಾಡಿಸಿಕೊಳ್ಳುವುದಾಗಲಿ ಅವರಿಗೆ ಕಷ್ಟವಾಗುವುದಿಲ್ಲ ವಯಸ್ಸು ಅನುಭವ ಎರಡೂ ಅವರ ನೆರವಿಗೆ ಇದ್ದರೂ ಅವನ್ನು ದುಡಿಸಿಕೊಳ್ಳುವ ಜಾಣ್ಮೆ ಮಾತ್ರ ಗೋರರಿಗೆ ಮೀಸಲಾದದ್ದು ಆದ್ದರಿಂದಲೇ ಅವರ ಪ್ರವಾಸಕಥನಕ್ಕೆ ಒಂದು ವಿಶಿಷ್ಟತೆ ಬಂದಿದೆ."[28] ಎಂದು ಡಾ॥ ಹಾ.ಮಾ. ನಾಯರ್ ರವರು ನುಡಿತೋರಣದಲ್ಲಿ ಹೇಳಿರುವುದು ಅಕ್ಷರಶಃ ಸರಿಯಾಗಿದೆ.

"ಅಮೇರಿಕೆಯ ಜನಜೀವನವನ್ನು ಭಾರತದ ಇಂದಿನ ಸ್ಥಿತಿಯೊಡನೆ ವಿಶ್ಲೇಷಣೆ ಮಾಡುತ್ತ "ಅಮೇರಿಕೆಯಿಂದ ನಾವು ಕಲಿಯುವುದು ಬಹಳವಿದೆ. ಅಲ್ಲಿಯ ಜನರ ಶಿಸ್ತು, ಸಮಯನಿಷ್ಠೆ, ದೇಶಪ್ರೇಮ, ಜ್ಞಾನಾರ್ಜನೆಗಾಗಿ ಇರುವ ಹಂಬಲ, ಸ್ವಾವಲಂಬನೆ, ಉದ್ಯೋಗಪ್ರಿಯತೆ, ದುಡಿಮೆಯ ಗೌರವ ಇವು ಅನುಕರಣೀಯವಾಗಿವೆ. ಆ ಜನರಲ್ಲಿ ಇಂಥ ಗುಣಗಳಿವೆಯೆಂದೇ ಅಮೇರಿಕೆಯೂ ಇಂದು ಜಗತ್ತಿನ

ಬಲಾಢ್ಯ ಹಾಗೂ ಶ್ರೀಮಂತ ರಾಷ್ಟ್ರವಾಗಿ ಮೆರೆದಾಡತೊಡಗಿತು" ಎಂಬ ಮನದಾಳದ ಅನಿಸಿಕೆಯನ್ನು ಅಭಿವ್ಯಕ್ತಪಡಿಸಿರುವರು. ವೈಜ್ಞಾನಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿದಿರುವ ಒಂದು ದೇಶವನ್ನು ಇದೀಗ ತಾನೇ ಮುಂದುವರಿಯಲು ಅಪಾರವಾಗಿ ಶ್ರಮಿಸುತ್ತಿರುವ ಪರಾವಲಂಬನೆಯಿಂದ ಸ್ವಾವಲಂಬನೆಗೆ ಹೊರಳುತ್ತಿರುವ ದೇಶದೊಂದಿಗೆ ಹೋಲಿಸುವುದು ನ್ಯಾಯವೂ ತರ್ಕಬದ್ಧವೂ ಅಲ್ಲ. ಲೇಖಕರು ಅಮೇರಿಕಾ ದೇಶದ ಆಮಂತ್ರಿತ ಅತಿಥಿಗಳಾಗಿರುವುದರಿಂದ ಆ ದೇಶದ ಅತಿಥ್ಯ ಸ್ವೀಕರಿಸಿ ಒಂದು ಸುಪ್ರೀತ ಮನದಲ್ಲಿ ಅದನ್ನು ಮೆಚ್ಚಿ ಹೋಗಳುವುದರಲ್ಲಿ ಅರ್ಥವಿದೆ. ಆದರೆ, ಅಮೇರಿಕವನ್ನು ಭಾರತದೊಡನೆ ಹೋಲಿಸುವುದರಲ್ಲಿ ಅರ್ಥವಿಲ್ಲ. ಅಮೇರಿಕದ ಬಗೆಗಿನ ಮೆಚ್ಚುಗೆ ಹಾಗೂ ಗೌರವ ಭಾವನೆಗಳು ಕೃತಿಯುದ್ದಕ್ಕೂ ಮೈದಾಳಿ ನಿಂತಿದೆ".[29] ಎಂಬ ಡಾ॥ಎಸ್. ವಿದ್ಯಾಶಂಕರ್ ಅವರ ಅಭಿಪ್ರಾಯವು ಸಹ ಸಮರ್ಪಕವಾಗಿದೆ.

ಲೇಖಕರೇ ಹೇಳಿರುವಂತೆ "ನನ್ನದು ಬಹಳ ಅಲೆಮಾರಿ ಸ್ವಭಾವ. ಯಾವ ಬಂಧನಕ್ಕೂ ಸಿಕ್ಕದೆ "ಹರಕೆ ಪರದೇಶಿಯಂತೆ" ಗ್ರಾಮೈಕರಾತ್ರಿಯಾಗಿ ಈ ರಾಷ್ಟ್ರದ ನೆಲ, ನೀರು, ಪರ್ವತ, ಶ್ರೇಣಿ, ದೇವಾಲಯ, ವಿಶಾಲವಾದ ಅದ್ಭುತ ಬಯಲು, ಪ್ರಕೃತಿ ವೈಚಿತ್ರ್ಯಗಳನ್ನು ಅನುಭವಿಸುತ್ತಾ ಗುರುತು ಪರಿಚಯವಿಲ್ಲದ ಯಾವುದೋ ಕಡೆ ಕಂತೆ ಒಗೆಯಬೇಕೆಂದು ನನ್ನ ಇಷ್ಟ" ಎನ್ನುತ್ತಾ ಹಕ್ಕಿಯಂತೆ ಹಾರಾಡುವ ತಮ್ಮ ಬಯಕೆಯನ್ನು ಈಡೇರಿಸಿಕೊಂಡಿರುವುದಲ್ಲದೆ, ತಮಗಾದ ಅನುಭವ ರಸಾಮೃತವನ್ನು ಸಹೃದಯರಿಗೂ ಉಣಿಸಿ ಸಾರ್ಥಕಪಡಿಸಿಕೊಂಡಿದ್ದಾರೆ.

**ಅಮೇರಿಕದಲ್ಲಿ ನಾನು, ಶಾಂತಿ – ಪ್ರಭುಶಂಕರ :**

ಶೀರ್ಷಿಕೆಯಂತೆ ಲೇಖಕರು ತಮ್ಮ ಹೆಂಡತಿಯೊಂದಿಗೆ ಪ್ರವಾಸ ಕೈಗೊಂಡಿದ್ದಾರೆ. ತಮಗೆ ವಿಶಿಷ್ಟವೆನಿಸಿದ ಅನುಭವಗಳನ್ನು ದಿನಚರಿ ರೂಪದಲ್ಲಿ ನಿರೂಪಿಸಿದ್ದಾರೆ. "ನನಗೆ ಚೆನ್ನ ಕಂಡದ್ದನ್ನು ನನ್ನ ಜನರಿಗೆ ತಿಳಿಸಬೇಕೆನ್ನುವ ಆಸೆ ನನ್ನದು. ನಾನು ಅಮೆರಿಕೆಯನ್ನು ನೋಡಿದ ರೀತಿ, ಅರ್ಥಮಾಡಿಕೊಂಡ ಬಗೆ ಉಳಿದವರಿಗಿಂತ ಬೇರೆಯಾಗಿರುವ ಸಾಧ್ಯತೆ ಇದೆ. ಅದೇನು ಎನ್ನುವುದನ್ನು ನನ್ನ ಕನ್ನಡ ಜನರಿಗೆ ತಿಳಿಯ ಹೇಳುವ ಉತ್ಸಾಹ ನನ್ನದು ಅದರಿಂದಾಗಿ ಈ ಮಸ್ತಕ ಬರೆಯುತ್ತಿದ್ದೇನೆ"[30] ಎಂದು ತಮ್ಮ ಪ್ರವಾಸಕಥನದ ಉದ್ದೇಶವನ್ನು ತಿಳಿಸಿದ್ದಾರೆ.

ಅಮೇರಿಕಾಕ್ಕೆ ಹೋದ ಎರಡೇ ದಿನಗಳಲ್ಲಿ ಅಮೇರಿಕದ ಎರಡು ಅಂಶಗಳು ಅದ್ಭುತವಾಗಿ ಕಂಡಿದೆ. ಅವುಗಳಲ್ಲಿ ಒಂದು ಅಲ್ಲಿನ 'ಟೆಲಿಫೋನ್ ವ್ಯವಸ್ಥೆ'; ಅಮೇರಿಕಾದ ಯಾವ ಭಾಗಕ್ಕೆ ಆಗಲಿ ಕ್ಷಣಾರ್ಧದಲ್ಲಿ ನೇರವಾಗಿ ಟೆಲಿಫೋನ್ ಮೂಲಕ ಮಾತಾನಾಡುವ ವ್ಯವಸ್ಥೆ ಅಲ್ಲಿನದು. ಅಷ್ಟು ಪರಿಪೂರ್ಣವಾದ ಟೆಲಿಫೋನ್ ಜಾಲ ಜಗತ್ತಿನಲ್ಲಿ ಯಾವ ಭಾಗದಲ್ಲೂ ಇಲ್ಲ ಎನ್ನುತ್ತಾರೆ. ಅಲ್ಲದೆ ಟೆಲಿಫೋನ್ ಸಿಬ್ಬಂದಿ ನೀಡುವ ನೆರವು ನಮಗಂತೂ ಒಂದು ಅದ್ಭುತವೆಂದೇ ತೋರಿತು ಎನ್ನುವ ಲೇಖಕರು, ನಮ್ಮ ದೇಶದಲ್ಲಿ ಟೆಲಿಫೋನ್ ಎಕ್ಸಚೇಂಜ್ ಕೇಂದ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರ ವಿಷಯದಲ್ಲಿ ಮಧುರವಾದ ಸ್ಮೃತಿಗಳು ನನ್ನ ಪಾಲಿಗಂತೂ ಇಲ್ಲವೆಂದು ಅಲ್ಲದೆ, ಭಾರತದಲ್ಲಿ ಏನಾದರೂ ಸಹಾಯ ಬೇಕಾದಲ್ಲಿ ಎಕ್ಸ್‌ಚೇಂಜಿನವರ ಜೊತೆ ಮಾತನಾಡಲು ಪ್ರಯತ್ನಿಸಿದರೆ ಅವರು ತಮ್ಮ ಕರೆಗೆ ಓಗೊಡಬೇಕಾದರೆ ಭಗೀರಥ ಪ್ರಯತ್ನ ಮಾಡಬೇಕು. ಅವರು ತಮ್ಮ ತಮ್ಮಲ್ಲೇ ಹರಟೆ ಹೊಡೆಯುತ್ತಿರುವುದೇನೋ ಕಿವಿಗೆ ಬೀಳುತ್ತದೆ. ಆದರೆ ಅದರಿಂದ ನಮಗೇನು ಸಮಾಧಾನ? ಒಂದು ವೇಳೆ ಇನ್ನೊಂದು ತುದಿಯಲ್ಲಿ ನಮ್ಮ ಪುಣ್ಯದಿಂದ ಅವರು ಓಗೊಟ್ಟರೆ ನಾವು ಯಾವ ಊರಿಗೆ ಮಾತನಾಡಬೇಕೋ ಅಲ್ಲಿನ ಲೈನು ಕೆಟ್ಟು ಹೋಗಿದೆ ಎನ್ನುವ ಸಂಭವವೇ ಹೆಚ್ಚು. ಆ ಇನ್ನೊಂದು ಊರಿನ ವ್ಯಕ್ತಿಯ ಟೆಲಿಫೋನ್ ನಂಬರ್ ಗೊತ್ತಿಲ್ಲದಿದ್ದರೆ ನಮ್ಮ ಪಾಡು ಯಾರಿಗೂ ಬೇಡ. ಅವರು ಎಂಥ ಪ್ರಸಿದ್ಧ ವ್ಯಕ್ತಿಯಾಗಿದ್ದರೂ ಇವರ ಉತ್ತರ ಒಂದೇ, ಗೊತ್ತಿಲ್ಲ. ಹೀಗಾಗಿ ಎಲ್ಲಿಗಾದರೂ ಟೆಲಿಫೋನ್ ಮಾಡುವುದರ ಬದಲು ಹೋಗಿ ಬರುವುದೇ ಸುಲಭ ಎಂಬ ಅನುಭವ ಇಲ್ಲಿನದು[31] ಎಂದು ತಿಳಿಸುತ್ತಾ, ಅಮೇರಿಕಾದಲ್ಲಿ ಇದಕ್ಕೆ ತದ್ವಿರುದ್ಧವೆಂದು ಅದಕ್ಕೆ ಸೊಗಸಾದ ಉದಾಹರಣೆಯನ್ನು ಕೊಡುವುದರೊಂದಿಗೆ ಸ್ವದೇಶದ ಅಂದಿನ ದೂರವಾಣಿ ವ್ಯವಸ್ಥೆಯ ವಾಸ್ತವಿಕ ಅನುಭವದ ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ.

ನಮ್ಮ ದೇಶದ ಸರ್ಕಾರಕ್ಕೆ ಅಥವಾ ಯಾವುದೇ ಸಂಸ್ಥೆಗೆ ಒಂದು ಸಾರಿ ಕಟ್ಟಿದ ಹಣವನ್ನು ವಾಪಸ್ ತೆಗೆದುಕೊಳ್ಳುವುದು ತುಂಬಾ ಕಷ್ಟ ಆದರೆ ಅಮೇರಿಕಾದಲ್ಲಿ ಇದಕ್ಕೆ ವಿರುದ್ಧವಾಗಿರುವುದನ್ನು ತಮಗಾದ ಹತ್ತಾರು ಅನುಭವಗಳಿಂದ ಲೇಖಕರು ಕಂಡುಕೊಂಡಿದ್ದಾರೆ. ಅಮೇರಿಕಾದ ಜನ ಇತರರಿಗೆ ಯಾವುದೇ ವಿಧದಲ್ಲೂ ಅನಾನುಕೂಲವಾಗಬಾರದು, ತಾವು ಇತರರಿಗೆ ಅನಾನುಕೂಲ ಮಾಡಿ ಲಾಭ ಮಾಡಿಕೊಳ್ಳಬೇಕಾಗಿಲ್ಲ ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ ಎಂದು ತಿಳಿಸುತ್ತಾ, "ಸರ್ಕಾರಕ್ಕೆ ಹೋದ ಹಣ, ಸ್ಮಶಾನಕ್ಕೆ ಹೋದ ಹೆಣ ಹಿಂದಕ್ಕೆ ಬರುವುದುಂಟೆ?" ಎಂಬ ಮಾತು ಇವತ್ತಿಗೂ ಸುಳ್ಳಾಗಲಿಲ್ಲವಲ್ಲ ಎಂದು ವಿಷಾದಿಸುತ್ತಾರೆ.

ಅಮೇರಿಕಾದ ಯಾವುದೇ ಊರಿನಿಂದಾಗಲಿ ಹತ್ತಿರದ ಅಥವಾ ದೂರದ ಬೇರೆ ಬೇರೆ ಊರುಗಳಿಗೆ ಬಸ್ಸುಗಳು ಹೋಗುತ್ತಲೇ ಇರುತ್ತವೆ. ಆದರೆ ಹೆಚ್ಚು ಜನ ಬಸ್ಸುಗಳಲ್ಲಿ ಪ್ರಯಾಣ ಮಾಡುವುದರ ಬದಲಿಗೆ ಕಾರುಗಳಲ್ಲಿ ಇಲ್ಲವೆ ವಿಮಾನಗಳಲ್ಲಿ ಪ್ರಯಾಣಿಸುತ್ತಾರೆ. ಅವೆರಡಕ್ಕೂ ಅನುಕೂಲವಿಲ್ಲದವರು ಮಾತ್ರ ಬಸ್‌ಗಳಲ್ಲಿ ಓಡಾಡುತ್ತಾರೆ. ಪ್ರಯಾಣಿಕರು ಎಷ್ಟೇ ಕಡಿಮೆ ಸಂಖ್ಯೆಯಲ್ಲಿದ್ದರೂ ಬಸ್ಸುಗಳು ಮಾತ್ರ ಸಕಾಲಕ್ಕೆ ಹೊರಡುತ್ತಲೇ ಇರುತ್ತವೆ. ಒಂದು ವೇಳೆ ತುಂಬಿ ಹೋದರೆ ಕೂಡಲೇ ಬೇರೆ ಬಸ್ಸುಗಳ ವ್ಯವಸ್ಥೆ ಮಾಡುತ್ತಾರೆ. ಆಸನಗಳು ಸೊಗಸಾದ ಮೆತ್ತನೆಯವು. ಕಾಲು ಚಾಚಿಕೊಂಡು ಹಾಯಾಗಿ ಕುಳಿತುಕೊಳ್ಳಬಹುದು. ರಸ್ತೆಗಳು ಚೆನ್ನಾಗಿರುವುದರಿಂದ ಒಂದು ಸಾವಿರ ಮೈಲಿ ಪ್ರಯಾಣ ಮಾಡಿದರೂ ಸ್ವಲ್ಪವೂ ಆಯಾಸವಾಗುವುದಿಲ್ಲ. ಅಲ್ಲಿ ನಗರದ ಬಸ್ಸುಗಳಲ್ಲಾಗಾಗಲಿ ದೂರ ಪ್ರಯಾಣದ ಬಸ್ಸುಗಳಲ್ಲಾಗಾಗಲಿ ಕಂಡಕ್ಟರ್‌ಗಳಿರುವುದಿಲ್ಲ. ಡ್ರೈವರ್ ಮಾತ್ರವೆ ಇದ್ದರೂ ಭಾರವಾದ ಸಾಮಾನುಗಳಿದ್ದಾಗ ಅವುಗಳನ್ನು ಎತ್ತಿ ಸಾಮಾನಿನ ಸ್ಥಳದಲ್ಲಿ (ಇವು ಬಸ್‌ಗಳ ಮೇಲೆ ಇರುವುದಿಲ್ಲ. ಬಸ್ಸಿನ ಚಕ್ರಗಳ ಅಕ್ಕಪಕ್ಕದಲ್ಲಿ, ಸೀಟುಗಳ ಕೆಳಗೆ ಇರುತ್ತವೆ. ಸಾಮಾನುಗಳನ್ನಿಟ್ಟು ಮುಚ್ಚಿ ಭದ್ರವಾಗಿ ಬೀಗ ಹಾಕುತ್ತಾರೆ) ಇಡುವುದಕ್ಕೆ ಸಹಾಯ ಮಾಡುವುದರೊಂದಿಗೆ ದಾರಿಯಲ್ಲಿ ಹತ್ತುವ ಪ್ರಯಾಣಿಕರಿಂದ ದುಡ್ಡು ತೆಗೆದುಕೊಳ್ಳುವವರು ಸಹ ಡ್ರೈವರ್‌ಗಳೇ. "ನಿಮ್ಮ ಡ್ರೈವರ್ ವಿನಯಶಾಲಿ, ಜಾಗರೂಕನಾಗಿ ವಾಹನ ನಡೆಸುತ್ತಾನೆ" ಎಂದು ಪ್ರತಿಯೊಂದು ಬಸ್ಸಿನ ಒಳಗೂ ಬರೆದಿರುತ್ತಾರೆ. ಅದರಲ್ಲಿ ಕಿಂಚಿತ್ತು ಉತ್ಪ್ರೇಕ್ಷೆಯಿಲ್ಲ. ವೃದ್ಧರನ್ನು ಅಂಗವಿಕಲರನ್ನೂ ಅವರು ನೋಡಿಕೊಳ್ಳುವ ರೀತಿ ಹೃದಯಸ್ಪರ್ಶಿಯಾದದ್ದು[32] ಎಂದು ಲೇಖಕರು ಅಮೇರಿಕನ್ ಡ್ರೈವರ್‌ಗಳ ಮತ್ತು ಸಾರಿಗೆ ವ್ಯವಸ್ಥೆಯನ್ನು ಮೆಚ್ಚಿಕೊಳ್ಳುತ್ತಾರೆ. ಲೇಖಕರ ಈ ಅಂಶ ನಮ್ಮ ಸಾರಿಗೆ ವ್ಯವಸ್ಥೆಯ ಕುರಿತು ಚಿಂತನೆಗೆ ಎಡೆಮಾಡಿಕೊಡುತ್ತದೆ.

ಅಮೇರಿಕಾದ ಬಟ್ಟೆ ಅಂಗಡಿಗಳು ಲೇಖಕರನ್ನು ದಂಗುಬಡಿಸಿದೆ. ಕಾರಣ, ಎಲ್ಲಾ ವಯಸ್ಸಿನವರೆಗೂ ಬೇಕಾಗುವ ಎಲ್ಲ ನಮೂನೆಯ ಬಟ್ಟೆಗಳು ಸಾವಿರಾರು ಸಂಖ್ಯೆಯಲ್ಲಿ ನೇತಾಡುತ್ತಿದ್ದ ಯಾವುದೇ ಅಂಗಡಿಗಳಲ್ಲಿ ಜನಜಂಗುಳಿ ತುಂಬಿರುವುದು, ಲೇಖಕರಿಗೆ ಆಶ್ಚರ್ಯವಾಗಿ "ಇಷ್ಟು ಜನ ಎಷ್ಟು ಎಂದು ಬಟ್ಟೆಗಳನ್ನು ಕೊಳ್ಳುತ್ತಾರೆ; ಕೊಂಡು ಅವನ್ನು ಏನು ಮಾಡುತ್ತಾರೆ? ಎಂದು ವಿಚಾರಿಸಿ ಹೀಗೆ ಹೇಳುತ್ತಾರೆ. ಅಮೇರಿಕದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಇದು ಒಂದು ಗವಾಕ್ಷಿ. ಯಾವ ವಸ್ತುವನ್ನು ಅವರು ಹೆಚ್ಚು ಕಾಲ ಇಟ್ಟುಕೊಳ್ಳಲು ಬಯಸುವುದಿಲ್ಲ. "ಕೊಂಡುಕೊ, ಉಪಯೋಗಿಸು, ಎಸೆ. ಮತ್ತೇ ಕೊಂಡುಕೊ" ಇದು ವಸ್ತುಗಳ ವಿಷಯದಲ್ಲಿನ ಅವರ ಜೀವನ ತತ್ವ. ಬಟ್ಟೆಗೆ ಮಾತ್ರವಲ್ಲದೆ ಗಡಿಯಾರ, ಪೆನ್ನು,

ಕೊನೆಗೆ ಕಾರು ಇವೆಲ್ಲಕ್ಕೂ ಅನ್ವಯವಾಗುವ ತತ್ವವೂ ಸಹ ಇದೇ"[33] ಎಂದು ಲೇಖಕರು ಅಮೇರಿಕಾದ ಆರ್ಥಿಕ ವ್ಯವಸ್ಥೆಯ ಕುರಿತು ಬೆಳಕು ಚೆಲ್ಲುತ್ತಾರೆ. ಅಮೇರಿಕನ್ನರು ಈ ಮೇಲಿನ ತತ್ವವನ್ನು ಅವಲಂಬಿಸಿಯೆ ಸಾಕಷ್ಟು ವಸ್ತುಗಳನ್ನು ಉತ್ಪಾದಿಸುವ ಕಾರ್ಖಾನೆಗಳು ಅಸ್ತಿತ್ವದಲ್ಲಿದ್ದೂ ಉದ್ಯೋಗದ ಪ್ರಮಾಣವು ಕೂಡ ಅಧಿಕವಿರುವುದನ್ನು ಕಾಣಬಹುದು ಎನ್ನುತ್ತಾರೆ.

ಅಮೇರಿಕಾದಲ್ಲಿ ಲೇಖಕರಿಗೆ ಆಪ್ತರಾದ ಕನ್ನಡದ ಪ್ರಖ್ಯಾತ ಲೇಖಕರಾದ ಶ್ರೀ.ಎ.ಎನ್. ಮೂರ್ತಿರಾಯರನ್ನು ಭೇಟಿಯಾಗಿದ್ದಾರೆ ಮತ್ತು ಅಮೇರಿಕದಲ್ಲಿ ಎರಡು ಅನುಭವಗಳನ್ನು ಅಗತ್ಯವಾಗಿ ಪಡೆಯಬೇಕು ಎನ್ನುವ ಶ್ರೀ.ಮೂರ್ತಿರಾಯರ ಅಭಿಪ್ರಾಯದಂತೆ ಲೇಖಕರು ಆ ಅನುಭವವನ್ನು ತಮ್ಮದಾಗಿಸಿಕೊಂಡಿದ್ದಾರೆ. ಒಂದು ಕಾರಿನಲ್ಲಿ ಕುಳಿತುಕೊಂಡೆ ಇಡೀ ಕಾರನ್ನು ತೊಳೆಸಿಕೊಳ್ಳುವುದು. ಎರಡನೆಯದು 'ಪೀಟ್ಜ' ಎನ್ನುವ ಆಹಾರವನ್ನು ತಿನ್ನುವುದು. ಮೊದಲನೆದನ್ನು ಲೇಖಕರು ನ್ಯೂಯಾರ್ಕ್ ಮತ್ತು ಮಿನಿಯಾಪೊಲಿಸ್‌ಗಳಲ್ಲಿ ಅನುಭವವಾಗಿದ್ದನ್ನು ನಿರೂಪಿಸುತ್ತಾ, "ಕಾರು ತೊಳೆಯುವ ಸ್ಥಳದಲ್ಲಿ ನಿಲ್ಲಿಸಿದ ಕೂಡಲೇ ಅಲ್ಲಿನ ಸ್ವಯಂಚಾಲಿತ ಯಂತ್ರಗಳು ತಾನಾಗಿ ಚಲಿಸಲು ಪ್ರಾರಂಭವಾಗುತ್ತವೆ. ಹಾಗೂ ಎಲ್ಲ ದಿಕ್ಕುಗಳಿಂದಲೂ ನೀರು ತಾನೇತಾನಾಗಿ ಬೀಳುವುದಲ್ಲದೆ, ಯಂತ್ರದ ಅನೇಕಾನೇಕ ಕೈಗಳು; ಸಾಬೂನು, ಮೇಣ ಮುಂತಾದವುಗಳನ್ನು ಎಲ್ಲ ಕಡೆಗೂ ಚಕಚಕನೆ ಬಳಿಯುತ್ತವೆ. ಅದಾದನಂತರ ಮತ್ತೆ ನೀರು ಬೀಳುತ್ತದೆ. ಇಷ್ಟೆಲ್ಲ ನಡೆಯುತ್ತಿರುವಾಗ ಕಾರು ಚಲಿಸುತ್ತಲೇ ಇರುತ್ತದೆ. ನಾವು ಒಳಗೆ ಕುಳಿತೇ ಇರುತ್ತೇವೆ. ಮರುಕ್ಷಣವೆ ಬಿಸಿಗಾಳಿ ಬೀಸಿ ಕಾರನ್ನು ಒಣಗಿಸಿಬಿಡುತ್ತದೆ. ಇದಿಷ್ಟು ಸುಮಾರು ಒಂದು ಅಥವಾ ಒಂದೂವರೆ ನಿಮಿಷದಲ್ಲಿ ನಡೆದು ಹೋಗುತ್ತದೆ. ಮೊದಲ ಸಲಕ್ಕಂತೂ ಜಲಪಾತದ ಕೆಳಗೆ ಕುಳಿತ ಅನುಭವ ನಮಗಾಗಿ ರೋಮಾಂಚನವಾಗುತ್ತದೆ"[34] ಎಂಬ ಲೇಖಕರ ಅನುಭವದ ಮೂಲಕ ಅತ್ಯಾಧುನಿಕ ಯಂತ್ರ ವ್ಯವಸ್ಥೆಯ ಕುರಿತು ಅಥವಾ ವೈಜ್ಞಾನಿಕ ಪ್ರಗತಿಯ ಕುರಿತು ನಾವು ಅರಿಯಬಹುದು.

ಎರಡನೆಯ ಅನುಭವ ಪೀಟ್ಜ (Pizza) ತಿನ್ನುವುದು. ಅಮೇರಿಕನ್ನರೆಲ್ಲರೂ Pizzaಕ್ಕಾಗಿ ಪ್ರಾಣಬಿಡುತ್ತಾರೆಂತೆ, ಶ್ರೀಮೂರ್ತಿರಾಯರು ಅದನ್ನು ಮರದ ಹೊಟ್ಟು ಅದರ ಮುಖ್ಯ ಅಂಗ. ಎಂದು ಬಣ್ಣಿಸಿದ್ದು ಇದರಿಂದಾಗಿ ಲೇಖಕರಿಗೆ ಇದನ್ನು ತಿನ್ನುವಲ್ಲಿ ತೃಪ್ತಿಯುಂಟಾಗಿಲ್ಲ.

ಅಮೇರಿಕದಲ್ಲಿ ವೃದ್ಧರ ಸಮಸ್ಯೆ ಅತ್ಯಂತ ದಾರುಣವಾದದ್ದು ಎಂದು ಕೇಳಿದ ಲೇಖಕರು ಅದನ್ನು ಪ್ರತ್ಯಕ್ಷವಾಗಿ ಕಂಡು, ಕೂಲಂಕಷವಾಗಿ ಪರಿಶೀಲಿಸಿ ನೋಡಿದ್ದಾರೆ. ಅಲ್ಲಿನ ವೃದ್ಧರಿಗೆ ನಿಜವಾಗಿ ಹೊಟ್ಟೆ ಬಟ್ಟೆಯ ಕೊರತೆಯಿಲ್ಲ. ಇವರ ಯೋಗಕ್ಷೇಮವನ್ನು ಸರ್ಕಾರ ನೋಡಿಕೊಳ್ಳುತ್ತದೆ. ಆದರೆ ಅಂತಹವರಿಗೆ ಪ್ರೀತಿ ವಿಶ್ವಾಸಗಳ ಕೊರತೆ ಇದೆ ಎಂದು ತಿಳಿಸುತ್ತಾರೆ. ಇತರರ ಸಹಾಯವಿಲ್ಲದೆ ತಾವು ಗಟ್ಟಿಯಾಗಿರುವವರೆಗೆ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಾರೆ. ಆದರೆ ಶಕ್ತಿಕುಂದಿದಾಗ ಅವರ ಸ್ಥಿತಿ ಶೋಚನೀಯವೆನಿಸುತ್ತದೆ.

"ಮಗನಾಗಲಿ ಮಗಳಾಗಲಿ ಈ ದೇಶದಲ್ಲಿ ತಂದೆ-ತಾಯಿಗಳ ಜೊತೆ ಇರುವುದಕ್ಕೆ ಇಷ್ಟಪಡುವುದಿಲ್ಲ. ಹಾಗೆ ಇರುವವರು ಇಲ್ಲವೇ ಇಲ್ಲವೆಂದಲ್ಲ. ಎಲ್ಲೋ ನೂರಕ್ಕೆ ಒಬ್ಬರು. ಉಳಿದವರು ಸ್ವತಂತ್ರವಾಗಿ ಇರಲು ಬಯಸುತ್ತಾರೆ. ತಂದೆ ತಾಯಿಗಳೂ ಅಷ್ಟೆ. ತಮಗೆ ಎಷ್ಟೇ ಕಷ್ಟವಾದರು ಮಕ್ಕಳ ಜೊತೆ ಇರುವುದಕ್ಕೆ ಒಪ್ಪುವುದಿಲ್ಲ. ಹೀಗಾಗಿ ಒಂಟಿತನದ ಬವಣೆ ಅವರನ್ನು ಕಾಡುತ್ತಿರುತ್ತದೆ. ಕಾಲ ಕಳೆಯುವುದು ಕಷ್ಟ. ಕೆಲವರು ವೃದ್ಧಾಲಯಗಳಲ್ಲಿ ಇರುತ್ತಾರೆ. ವರ್ಷಕ್ಕೆ ಇಷ್ಟು ಎಂದು ಹಣ ಕೊಟ್ಟರೆ ಅಂಥ ನಿಲಯಗಳಲ್ಲಿ ಅವರಿಗೆ ಊಟ, ವಸತಿ ಎಲ್ಲ ದೊರಕುತ್ತದೆ. ಆದರೆ ವಾತ್ಸಲ್ಯದ ಶುಶ್ರೂಷೆ ಇರುವುದಿಲ್ಲ. ಕೆಲವು ವೃದ್ಧರ ಜೊತೆ ನಾವು ಮಾತನಾಡಿದೆವು. ಅವರಿಗೆ, ತಮಗೆ ಇರುವ ಕೊರತೆಯೇನು ಎಂಬುದನ್ನು ಹೇಳಿಕೊಳ್ಳುವುದಕ್ಕೆ ತುಂಬಾ ಸಂಕೋಚ. ನೋವನ್ನು ಮೌನವಾಗಿ ಸಹಿಸುವ ಜನ ಇವರು. ಯಾರ ವಿಷಯಕ್ಕೇ ಆಗಲಿ ಅಸಮಾಧಾನವನ್ನು ವ್ಯಕ್ತಪಡಿಸುವುದು ಅಪರೂಪ. ಆದರೆ ಅಲ್ಲಿನ ವೃದ್ಧರ ನಿಟ್ಟುಸಿರು ಅವರ ಸಾಮಾಜಿಕ ವ್ಯವಸ್ಥೆಯ ಕೊರತೆಯನ್ನೆಲ್ಲಾ ಮನಕರಗುವಂತೆ ವರ್ಣಿಸುತ್ತದೆ"[35] ಎಂದು ಲೇಖಕರು ಅಲ್ಲಿನ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸಿದ್ದಾರೆ.

ಅಮೇರಿಕಾದ ಜನರಿಗೆ ಚರ್ಚುಗಳ ಮೇಲಿನ ಆಸಕ್ತಿ ಕಡಿಮೆಯಾಗುತ್ತಿದೆ ಎಂಬ ಅಂಶವನ್ನು ಕಂಡುಕೊಂಡ ಲೇಖಕರು ಅದಕ್ಕೆ ಕಾರಣವನ್ನು ಅಲ್ಲಿಯ ಕ್ರಿಶ್ಚಿಯನ್ ವ್ಯಕ್ತಿಯಿಂದ ತಿಳಿದುಕೊಂಡಿದ್ದಾರೆ. ಅಂದರೆ "ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಪ್ರವಚನ ನೀಡುವ ಪಾದ್ರಿ ನಮ್ಮಂತೆಯೇ ಲೌಕಿಕ ವ್ಯಕ್ತಿ. ನಮಗೆ ಅವನಿಂದ ಭಾನುವಾರ ಬೆಳಗ್ಗೆ ತಿಳಿಯುತ್ತದೆ; ಏಕೆಂದರೆ ಹಿಂದಿನ ದಿನ ತಾನೆ ಅವನು ತನ್ನ ಪ್ರವಚನವನ್ನು ಬರೆದು ಸಿದ್ಧಪಡಿಸಿಕೊಳ್ಳುತ್ತಾನೆ[36].

ಅಮೇರಿಕದ ಇಡೀ ಶಿಕ್ಷಣ ವ್ಯವಸ್ಥೆಯನ್ನು, ತಜ್ಞರನ್ನು, ಅಧ್ಯಾಪಕರನ್ನು, ತಂದೆ-ತಾಯಿಗಳನ್ನು ಚಿಂತೆಗೆ ಎಡೆಮಾಡಿರುವ ಸಮಸ್ಯೆ ಎಂದರೆ 'ಹೈಸ್ಕೂಲ್ ಶಿಕ್ಷಣ' ಎಂದು ತಿಳಿಸುತ್ತಾ, ಅಲ್ಲಿನ ನರ್ಸರಿ ಮತ್ತು ಪ್ರೈಮರಿ ಮಟ್ಟದಲ್ಲಿ ಯಾವುದೇ ಸಮಸ್ಯೆಗಳಿರುವುದಿಲ್ಲ. ಸುಸಜ್ಜಿತ ಕಟ್ಟಡ, ಶಿಸ್ತು, ಉತ್ತಮ ಉಪಾಧ್ಯಾಯರು ಮನರಂಜನೆ ಎಲ್ಲವು ಇದ್ದು ಯಾವುದೇ ಕೊರತೆಯಿರುವುದಿಲ್ಲ. ಆದರೆ ಹೈಸ್ಕೂಲ್‌ಗೆ ಬರುವ ವೇಳೆಗೆ ಹುಡುಗ, ಹುಡುಗಿಯರು ಸ್ವಚ್ಛಂದ ಘಟ್ಟವನ್ನು ಮುಟ್ಟಿರುತ್ತಾರೆ. ಲೈಂಗಿಕ ಭಾವನೆಗಳು ಮೂಡಿ ಯಾರಿಗೂ ಅಂಜದೆ ತಪ್ಪು ಮಾಡುತ್ತಾರೆ. ಸ್ವೇಚ್ಛೆಯಾಗಿರುವುದು ತಪ್ಪು ಎಂದು ಅವರ ತಂದೆ-ತಾಯಿಗಳಾಗಲಿ, ಅಧ್ಯಾಪಕರಾಗಲಿ ಭಾವಿಸುವುದಿಲ್ಲ ಎಂದು ಹೇಳುತ್ತಾ, ತಮ್ಮ ಮಿತ್ರರಾದ ಡಾ॥ಲಾರ್ಸನ್ ತಮ್ಮದೆ ತರಗತಿಯಲ್ಲಿ ಕಂಡ ದೃಶ್ಯವನ್ನು ತಿಳಿಸುತ್ತಾರೆ. ತರುಣ ತರುಣಿಯರ ಒಂದು ಜೋಡಿ ಇವರು ಬೋಧಿಸುತ್ತಿದ್ದ ತತ್ವಶಾಸ್ತ್ರವನ್ನು ಕೇಳುತ್ತಾ ಪರಸ್ಪರ ಅಪ್ಪಿಕೊಂಡು ಪ್ರೇಮೋನ್ಮಾದದಲ್ಲಿದ್ದರಂತೆ, ಅದನ್ನು ಗಮನಿಸದಂತೆ ಇರಬೇಕಾದದ್ದು ಅಧ್ಯಾಪಕರ ಕರ್ತವ್ಯ. ಹೈಸ್ಕೂಲಿನಲ್ಲಿ ಹುಡುಗರಿಗೆ ಯಾವ ಜವಬ್ದಾರಿಯೂ ಇಲ್ಲ. ಇವರಿಗೆ ಹಣ ಕೊಟ್ಟು ಓದಿಸುವುದು ಕಾನೂನು ಪ್ರಕಾರ ತಂದೆ-ತಾಯಿಗಳ ಜವಾಬ್ದಾರಿ. ಆಗಲೇ ಎಲ್ಲ ದುಶ್ಚಟಗಳೂ ಪ್ರಾರಂಭವಾಗುತ್ತವೆ. ನಶೀಲಿ ಪದಾರ್ಥಗಳನ್ನು ಸೇವಿಸಿ ಮತ್ತರಾಗಿ ಬಿದ್ದಿರುವುದು ಹೈಸ್ಕೂಲಿನಿಂದ ಪ್ರಾರಂಭ."[37] ಎಂಬ ಲೇಖಕರ ಮಾಹಿತಿಯ ಮೂಲಕ ನಾವು ಸ್ವಾತಂತ್ರ್ಯ, ಒಪ್ಪಂದಗಳ ಮೂಲಕ ಯುವ ಪೀಳಿಗೆ ಹಾಳಾಗುತ್ತಿರುವುದನ್ನು ಅರಿಯಬಹುದು. ಪದವಿ ತರಗತಿಗಳಿಗೆ ವಿದ್ಯಾರ್ಥಿಗಳು ಬಂದಾಗ ಅವರ ಬಹುಪಾಲು ಸಮಸ್ಯೆ ಪರಿಹಾರವಾಗಿರುತ್ತದಂತೆ. ಏಕೆಂದರೆ ಹುಡುಗರು ಮನೆ ಬಿಟ್ಟು ಹೋಗಿರುತ್ತಾರೆ. ಅವರ ವಿದ್ಯಾಭ್ಯಾಸದ ಜವಾಬ್ದಾರಿ ಅವರ ತಂದೆ-ತಾಯಿಗಳಿಗೆ ಇರುವುದಿಲ್ಲ. ತಾವೇ ಸಂಪಾದಿಸಿಕೊಂಡು ಓದುತ್ತಿರುತ್ತಾರೆ. ಇದರಿಂದಾಗಿ ಶ್ರದ್ಧೆಯಿಂದ ಚೆನ್ನಾಗಿ ಓದುತ್ತಾರಂತೆ. ಸ್ನಾತಕೋತ್ತರ ತರಗತಿಗಳಲ್ಲಿ ವಿದ್ಯಾರ್ಥಿಗಳ ಪಾಡು ಶೋಚನೀಯವೆನ್ನುತ್ತಾರೆ. ಏಕೆಂದರೆ ಒಂದು ಕಡೆ ದುಡಿಯಬೇಕು. ಮತ್ತೊಂದು ಕಡೆ ಅಧ್ಯಾಪಕರು ಹೇಳಿದ ಮನೆಗೆಲಸವನ್ನು ಮುಗಿಸಬೇಕಾದ್ದರಿಂದಾಗಿ ಅವರ ಸಮಯವೆಲ್ಲಾ ಓದು, ಬರಹ, ದುಡಿತದಲ್ಲಿ ಕಳೆದು ಹೋಗುತ್ತದೆ ಎಂದು ಲೇಖಕರು ತಿಳಿಸುವುದರಿಂದ, ವಯಸ್ಸಿಗನುಗುಣವಾಗಿ ಬುದ್ಧಿಮಟ್ಟ ಹೆಚ್ಚಾದಂತೆ ಯುವಕರಿಗೆ ತಿಳುವಳಿಕೆ ಮೂಡಿ ಉತ್ತಮ ನಾಗರೀಕರಾಗಲು ಯತ್ನಿಸುವುದನ್ನು ಗ್ರಹಿಸಬೇಕಾಗುತ್ತದೆ.

ಭಾರತೀಯರು ಅಮೇರಿಕೆಯಲ್ಲಿ ಕೈತುಂಬ ಸಂಬಳ, ವಾಸಕ್ಕೆ ಸುಸಜ್ಜಿತವಾದ ಮನೆ, ಓಡಾಡಲು ಎರಡು-ಮೂರು ಕಾರು ಇವೆಲ್ಲವನ್ನು ಹೊಂದಿದ್ದರೂ ಅವರ ಬದುಕು ಸಮಾಧಾನಕರವಾಗಿಲ್ಲವೆಂಬುದನ್ನು

ಹಲವು ಭಾರತೀಯ ಕುಟುಂಬಗಳನ್ನು ಸಂದರ್ಶಿಸಿ ಕಂಡುಕೊಂಡಿರುವರು[38] 'ನೀವೇಕೆ ಭಾರತಕ್ಕೆ ಹಿಂತಿರುಗಿ ಹೋಗುವುದಿಲ್ಲ?' ಎಂದು ಅನೇಕರನ್ನು ಪ್ರಶ್ನಿಸಿದ್ದಾರೆ. ಎಲ್ಲರದೂ ಒಂದೇ ಬಗೆಯ ಉತ್ತರ. 'ಹೋಗುವ ಮನಸ್ಸಿದೆ, ತುಂಬ ಯೋಚಿಸುತ್ತಿದ್ದೇನೆ' ಎಂಬುದನ್ನು ಕೇಳಿದ ಲೇಖಕರು, ವಾಸ್ತವ ಸಂಗತಿ ಬೇರೆ ಅವರೆಲ್ಲರೂ ಇಲ್ಲಿಗೆ ಹೊಂದಿಕೊಂಡಿರುವರು. ಈಗ ಬಿಟ್ಟು ಹೋಗುವುದು ಬಹಳ ಕಷ್ಟ. ತಂದೆ–ತಾಯಿ ಬಂಧು, ಬಳಗವನ್ನು ಅಗಲಿ ದೂರದಲ್ಲಿರುವ ಅವರಿಗೆ ಭೌತಿಕ ತೃಪ್ತಿಯಿದ್ದರೂ, ಆಂತರಿಕ ತೃಪ್ತಿಯಿಲ್ಲ. ಅವರಿಗೆ ಅವರದೇ ಆದ ಸಮಸ್ಯೆಗಳಿವೆ. ಅವುಗಳಿಗೆ ದಾರುಣವಾದ ಆಯಾಮಗಳಿವೆ ಎಂದು ಆಲೋಚಿಸುತ್ತಾ, ಮನಕಲಕುವ ಘಟನೆಯೊಂದನ್ನು ನಿದರ್ಶನವಾಗಿ ಕೊಡುವರು. ಭಾರತಕ್ಕೆ ಹಿಂತಿರುಗುವಾಗ ಲೇಖಕರು ತಮ್ಮ ಭಾರತೀಯ ಮಿತ್ರರ ಮನೆಗೆ ಹೋಗಿದ್ದರು. ಆ ಮಿತ್ರರಿಗೆ ವಯಸ್ಸಿಗೆ ಬರುತ್ತಿರುವ ಮಗಳೊಬ್ಬಳಿದ್ದು, ರಾತ್ರಿ ಹನ್ನೆರಡು ಗಂಟೆಯಾದರೂ ಮನೆಗೆ ಬರಲಿಲ್ಲ. ಅವಳಿಗೆ ಫೋನ್ ಮಾಡಿ ಕರೆಯಿಸಲಾಯಿತು. ತಮ್ಮ ಮಕ್ಕಳ ಬಗ್ಗೆ ಇಂತಹ ದೂರುಗಳನ್ನು ಬೇರೆ ಕಡೆಗಳಲ್ಲಿ ತಂದೆ–ತಾಯಿಗಳು ಎತ್ತಿದ್ದಾಗ ಲೇಖಕರು, ಆ ಸಂದರ್ಭದಲ್ಲಿ ಕೊಟ್ಟ ಉತ್ತರದ ಸಾರಾಂಶವಿಷ್ಟು. "ನೋಡಿ ಇದೊಂದು ಸಗಟು ವ್ಯಾಪಾರ, ಅಮೇರಿಕನ್ ಸಮಾಜ ನಿಮಗೆ ಸೋಫಾಸೆಟ್, ಟೆಲಿಪೋನ್, ಬಟ್ಟೆ ಒಗೆಯುವ ಮತ್ತು ಪಾತ್ರೆ ತೊಳೆಯುವ ಯಂತ್ರ, ಟೆಲಿವಿಷನ್, ಮನೆ ಹಾಗೂ ತಲೆಗೊಂದು ಕಾರು ಇಷ್ಟನ್ನು ಕೊಟ್ಟಿದೆ. ಇದರ ಜೊತೆಗೆ ಹೆಣ್ಣು ಮಕ್ಕಳು, ಗಂಡು ಮಕ್ಕಳು ಸ್ವತಂತ್ರವಾಗಿ ಓಡಾಡುವುದಕ್ಕೆ ಏನು ಮಾಡಬೇಕು ಎನ್ನುವ ಸಮಸ್ಯೆಯೊಂದಿಗೆ ಬೇರೆ ಸಮಸ್ಯೆಗಳೂ ಇವೆ. ಅವೂ ನಿಮಗೂ ಗೊತ್ತು. ಈ ಸಮಾಜ ಕೊಡುವ ಹಣ ಬೇಕು, ಅವು ಕೊಡುವ ಸಮಸ್ಯೆಗಳು ಬೇಡ ಎಂದರೆ ಯಾರು ಒಪ್ಪುತ್ತಾರೆ, ಅವನ್ನು ಅನುಭವಿಸಿಯೇ ತೀರಬೇಕು. ಇಷ್ಟಕ್ಕೂ ನೀವು ಇಲ್ಲಿಗೆ ಬರಲೇಬೇಕು ಎಂದು ಇವರೇನು ಅಕ್ಷತೆ ಕೊಟ್ಟು ಕರೆದಿಲ್ಲ. ಹೋಗುತ್ತೇವೆ ಎಂದರೆ ಹಿಡಿದು ನಿಲ್ಲಿಸಿಲ್ಲ. ಇಷ್ಟೆಲ್ಲಾ ಅರ್ಹತೆಗಳಿರುವ ನಿಮಗೆ ಭಾರತದಲ್ಲಿ ಮಾನವಾಗಿ ಜೀವನ ನಡೆಸುವಷ್ಟು ಸಂಬಳ ಸಿಕ್ಕುವುದಿಲ್ಲ ಎಂದರೆ ಯಾರು ನಂಬುವುದಿಲ್ಲ. ಇದರ ಬಗ್ಗೆ ತೀರ್ಮಾನ ನಿಮಗೆ ಬಿಟ್ಟಿದ್ದು"[39] ಎನ್ನುವ ಲೇಖಕರ ಈ ಮಾತಿನಲ್ಲಿ ಬಾಹ್ಯ ಆಕರ್ಷಣೆ ಮತ್ತು ಭೌತಿಕ ಸುಖಕ್ಕಿಂತ ಮಾನಸಿಕ ನೆಮ್ಮದಿ ಮುಖ್ಯ. ಭಾರತದಲ್ಲಿ ನೆಮ್ಮದಿಯಿಂದ ಜೀವನ ನಡೆಸಿಕೊಂಡು ಹೋಗ ಬಹುದೆಂದು ಅನಿವಾಸಿ ಭಾರತೀಯರಿಗೆ ಮರ್ಮಜ್ಞವಾಗಿ ತಿಳಿಸುತ್ತಲೇ ಆಹ್ವಾನಿಸುವುದನ್ನು ಕಾಣಬಹುದು.

ಲೇಖಕರಿಗೆ ಅವರ ಮಿತ್ರರೊಬ್ಬರು ಅಮೇರಿಕನ್ ಸಮಾಜದಲ್ಲಿ ಕಾಣುವ ಬಹುದೊಡ್ಡ ಕೊರತೆ 'ಪ್ರೀತಿ–ವಿಶ್ವಾಸ' ಎನ್ನುವುದನ್ನು ಈ ಘಟನೆ ಮೂಲಕ ವಿವರಿಸುತ್ತಾರೆ. ಅಮೇರಿಕನ್ ಮಿತ್ರರಿಗೆ ಒಬ್ಬ

ಪರಿಚಿತನ ತಾಯಿಗೆ ಕಾಯಿಲೆ ಎಂಬ ವರ್ತಮಾನ ಬಂದಿತು. ಈತ ಒಂದು ತಿಂಗಳಾದ ಮೇಲೆ ಆಸ್ಪತ್ರೆಗೆ ಹೋಗಿ ತಾಯಿಯನ್ನು ನೋಡಿದ. ಆಕೆ "ಏನಪ್ಪ ಹೀಗೆ ಮಾಡಿದೆ. ಒಂದು ತಿಂಗಳಿನಿಂದ ನೀನು ಬರುತ್ತೀಯೆ ಎಂದು ಕಾದಿದ್ದೇನೆ" ಎಂದರಂತೆ ಈ ಪುಣ್ಯಾತ್ಮ 'ನಿನಗೆ ಕಾಯಿಲೆ ಎಂಬುದು ಮರತೇ ಹೋಗಿತ್ತು' ಎಂದದ್ದನ್ನು ಕೇಳಿ, ಆಕೆ ಇನ್ನೂ ಬೇಸರ ಮಾಡಿಕೊಂಡದ್ದಕ್ಕೆ ಇವನು, 'ಇದರಲ್ಲೇನು ವಿಶೇಷ, ನೀನೂ ಎಷ್ಟೋ ವಿಷಯಗಳನ್ನು ಮರೆತು ಬಿಡುವುದಿಲ್ಲವೇ?" ಎಂದನಂತೆ. ಎಂಬುದನ್ನು ಕೇಳಿ ಎಂತಹ ಹೃದಯಶೂನ್ಯ ವರ್ತನೆ; ಮಾತೆಯ ಮಮತೆಗೆ ಇಲ್ಲಿ ಬೆಲೆಯೇ ಇಲ್ಲವೆ? ಎಂಬ ಆಲೋಚನೆಯಾಯಿತು. ಆ ಘಟನೆಗನುಗುಣವಾಗಿ ಲೇಖಕರು ಕೇಳಿ ಓದಿದ ಮತ್ತೊಂದು ವಿಷಯವನ್ನು ಪ್ರಸ್ತಾಪಿದ್ದಾರೆ. "ಅಮೇರಿಕನ್ ಸಮಾಜದಲ್ಲಿ ತಂದೆಗೋ-ತಾಯಿಗೋ ಆರೋಗ್ಯವಿಲ್ಲ ಎಂಬ ವರ್ತಮಾನ ಬಂದರೆ ಇವನು, ಅವರು ಯಾವ ಊರಿನ ಆಸ್ಪತ್ರೆಯಲ್ಲಿದ್ದಾರೂ ಆ ಊರಿನ ಒಂದು ಹೂವಿನ ಅಂಗಡಿಗೆ ಕಾಗದ ಬರೆಯುತ್ತಾನೆ ಅಥವಾ ಟೆಲಿಫೋನ್ ಮಾಡುತ್ತಾನೆ. ಆ ಅಂಗಡಿಯವನು ಅವನು ಹೇಳಿದಷ್ಟು ಬೆಲೆಯ ಹೂವನ್ನು ಕಾಯಿಲೆಯವರಿಗೆ ಕಳುಹಿಸುತ್ತಾನೆ. ಹೂವಿನ ಖರ್ಚಿಗೆ ಹಣವನ್ನು ಮಗ ಕೊಡುತ್ತಾನೆ. ಅಲ್ಲಿಗೆ ಮಗನ ಜವಾಬ್ದಾರಿ ಮುಗಿಯಿತಂತೆ[40] ಎಂದು ಲೇಖಕರು ತಿಳಿಸುವಲ್ಲಿ ಭಾವಾನಾತ್ಮಕ ಸಂಬಂಧದ ಅಭದ್ರತೆಯನ್ನು ಗುರುತಿಸಬಹುದು.

ಕ್ಲೀವ್ ಲ್ಯಾಂಡ್‌ನಲ್ಲಿದ್ದ ಮಿತ್ರರ ಮನೆಗೆ ಲೇಖಕರು ಟ್ಯಾಕ್ಸಿಯೊಂದರಲ್ಲಿ ಹೋಗುತ್ತಿದ್ದಾಗ ಅದನ್ನು ನಡೆಸುತ್ತಿದ್ದ ಕಪ್ಪು ಹೆಂಗಸು ಮಾತಿನ ನಡುವೆ ಸಂಕೋಚದ ಧ್ವನಿಯಲ್ಲಿ "ನಿಮ್ಮ ದೇಶದಲ್ಲಿ ಜನ ಇನ್ನೂ ಹಸಿವಿನಿಂದ ಸಾಯುತ್ತಾ ಇದ್ದಾರೆಯೆ? ಎಂದು ಕೇಳಿದರು. ಸಾನ್‌ಫ್ರಾನ್ಸಿಸ್ಕೋನಲ್ಲಿ ಸಿಟಿಬಸ್‌ನ ಡ್ರೈವರ್‌ನೊಬ್ಬನು ಇದೇ ಪ್ರಶ್ನೆಯನ್ನು ಕೇಳಿದ್ದನು. 'ನಿಮಗೆ ಯಾರು ಹೇಳಿದರು?' ಎಂದು ಲೇಖಕರು ಕೇಳಿದ್ದಕ್ಕೆ 'ಚರ್ಚಿನ ಪಾದ್ರಿಗಳು' ಎಂಬ ಉತ್ತರ ಬಂದಿತು. ದುಡ್ಡು ಕೀಳುವುದಕ್ಕೆ ಇಂಡಿಯಾದಲ್ಲೂ ಆಫ್ರಿಕಾದಲ್ಲೂ ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ ಎಂದು ಪಾದ್ರಿಗಳು ಅಪಪ್ರಚಾರ ಮಾಡುತ್ತಿದ್ದಾರೆ. ಅವರಿಗೆ ಒಂದು ಡಾಲರನ್ನೂ ಕೊಡಬೇಡಿ ಎಂದು ಲೇಖಕರು ನಿಜ ಸಂಗತಿ ತಿಳಿಸಿ ಅವರನ್ನು ನಂಬಿಸಬೇಕಾಯಿತು. ಇಂಡಿಯಾದವರನ್ನು ಉದ್ಧಾರ ಮಾಡಲು ಪ್ರತಿಯೊಬ್ಬರಿಂದಲೂ ತಿಂಗಳಿಗೆ ಕನಿಷ್ಟ ಹತ್ತು ಡಾಲರ್ ವಸೂಲು ಮಾಡುತ್ತಿರುವ ಪಾದರಿಗಳ ಮೋಸದ ಸಂಗತಿ ಕೇಳಿ ಹೇಸಿಗೆಯಾಗುತ್ತದೆ. ಅಮೇರಿಕನ್ನರಿಗೆ ತಿಳುವಳಿಕೆ ಕೊಡುವುದರಲ್ಲಿ ನಮ್ಮ ಸರ್ಕಾರ ಏನು ಮಾಡಿದೆ? ಎಷ್ಟು ರೀತಿಯ ಚಲನ ಚಿತ್ರಗಳನ್ನು ತೆಗೆದು ಅಲ್ಲಿನ ಸ್ಕೂಲು ಕಾಲೇಜುಗಳಲ್ಲಿ ಪ್ರದರ್ಶಿಸಬಹುದು. ಇನ್ನು ಇಷ್ಟೊಂದು

ಬಗೆಯಲ್ಲಿ ನಮ್ಮ ದೇಶ ಎಂದರೇನು ಎಂಬುದನ್ನು ಆ ಜನರಿಗೆ ತಿಳಿಸುವುದು ಸಾಧ್ಯ! ಇದನ್ನು ಯೋಚನೆ ಮಾಡುವವರು ಯಾರು?[41] ಎಂದು ಲೇಖಕರು ವಿಚಾರ ಮಾಡಿರುವುದನ್ನು ಎಸ್. ವಿದ್ಯಾಶಂಕರ ಡಾ॥ಎಸ್. ವಿದ್ಯಾಶಂಕರ[42] ಅವರು ಪುರಸ್ಕರಿಸಿರುವುದು ಸಮರ್ಪಕವಾಗಿದ್ದು ಓದುಗರನ್ನು ಚಿಂತನೆಗೆ ತೊಡಗಿಸುವಂತಾಗಿದೆ.

ಲೇಖಕರು ಬರ್ಕ್‌ಲಿಯ ವೇದಾಂತ ಸಂಘಕ್ಕೆ 'ಮೋನಿಕಾ' ಎಂಬ ಸಂಶೋಧನಾ ವಿದ್ಯಾರ್ಥಿ ಜೊತೆ ಕಾರಲ್ಲಿ ಹೊರಟಾಗ, ಕಾರನ್ನು ನಿಲ್ಲಿಸಲು ಸ್ಥಳಕ್ಕಾಗಿ ಪೇಚಾಡುತ್ತಿದ್ದು ಕೊನೆಗೆ ಕಾರು ನಿಲ್ಲಿಸಿ ಬಂದಾಗ, ಲೇಖಕರು ಅವಳಿಗೆ "ನಿಮ್ಮ ಮನೆ ಹತ್ತಿರವೆ ಇದೆ, ಎನ್ನುತ್ತೀರಿ. ಇಷ್ಟು ಹತ್ತಿರಕ್ಕೆ ಕಾರು ಏಕೆ ತರುತ್ತೀರಿ? ನಡೆದುಕೊಂಡು ಬರಬಾರದೆ? ಎಂದು ಆಕೆಯನ್ನು ಕೇಳಿದ್ದಕ್ಕೆ ಆಕೆ, 'ನನ್ನ ತರಗತಿಗಳು ಮುಗಿದು ಮನೆಗೆ ಹೋಗುವುದಕ್ಕೆ ಸಂಜೆ ಏಳು ಅಥವಾ ಎಂಟು ಗಂಟೆ ಆಗಿಯ ಆಗುತ್ತದೆ. ನಾನೊಬ್ಬಳೇ ನಡೆದುಕೊಂಡು ಹೋದರೆ ನಾನು ಅತ್ಯಾಚಾರಕ್ಕೆ ಒಳಗಾಗುವುದು ಖಂಡಿತ. ಈ ವಿಶ್ವವಿದ್ಯಾನಲಯದ ಆವರಣಗಳ ಇನ್ನೊಂದು ಭಯಂಕರ ಮುಖ ಇದು. ಎಂದು ಕೇಳಿದಾದ ಕೆಲವೇ ನಿಮಿಷಗಳಲ್ಲಿ ನೋಟಿಸ್ ಬೋರ್ಡಿನ ಮೇಲೆ ನೋಡಿದರೆ 'ಅತ್ಯಾಚಾರಗಳಿಂದ ಪಾರಾಗುವ ವಿಧಾನ' ಎಂಬುವುದರ ಮೇಲೆ ಎರಡು ವಿಶೇಷೋಪನ್ಯಾಸಗಳನ್ನು ಏರ್ಪಡಿಸಿದ್ದುದ್ದು ಗೊತ್ತಾಯಿತು"[43] ಎಂದು ತಿಳಿಸುತ್ತಾ, ಕತ್ತಲಾದ ಮೇಲೆ ಹೆಂಗಸರು ಓಡಾಡುವಂತಿಲ್ಲ. ಇದು ಆ ಸಮಾಜದ ಭಯಂಕರ ಸಮಸ್ಯೆಗಳಲ್ಲಿ ಒಂದಾಗಿದ್ದು ಇದನ್ನು ಎದುರಿಸಿಯೇ ಬಾಳಬೇಕಾದ ಅನಿವಾರ್ಯತೆ ಅವರಿಗೆ ಎನ್ನುತ್ತಾರೆ.

ಇಂತಹ ಅನೇಕ ಸಮಸ್ಯೆಗಳಿದ್ದರೂ ಅಮೇರಿಕನ್ನರು, ಔದಾರ್ಯ ಮನೋಭಾವದವರು ಎನ್ನುವುದನ್ನು ಈ ಪ್ರಸಂಗದ ಮೂಲಕ ಲೇಖಕರು ತಿಳಿಸಿದ್ದಾರೆ. ಹೋಟೆಲ್ ಒಂದರಲ್ಲಿ ಕೆಲಸ ಮಾಡುವ ದಂಪತಿಗಳ ಯೋಗಕ್ಷೇಮವನ್ನು ವಿಸ್ತಾರವಾಗಿ ವಿಚಾರಿಸಿ ವಿವರಿಸುವ ಸಂದರ್ಭದಲ್ಲಿ ಕಂಡುಕೊಂಡಿದ್ದಾರೆ. "ನಿಮಗೆ ಮಕ್ಕಳಿಲ್ಲವೆ ಎಂದು ವಿಚಾರಿಸಿದಾಗ ಇಲ್ಲ ಎಂದರಂತೆ ಯಾಕೆಂದು ಕೇಳಿದಾಗ ಒಂದು ಮಗುವನ್ನು ಸಾಕುವ ಚೈತನ್ಯವಿರಲಿಲ್ಲ. ಆದ್ದರಿಂದ ಮಕ್ಕಳನ್ನು ಮಾಡಿಕೊಳ್ಳಲಿಲ್ಲ ಎಂದನಂತೆ. ಮಕ್ಕಳು ಬೇಕು ಎಂದು ನಿಮಗೆ ಅನಿಸುವುದಿಲ್ಲವೇ? ಎಂದು ಪ್ರಶ್ನಿಸಿದಾಗ, ಅನಿಸುತ್ತದೆ. ನಮಗೆ ಮಕ್ಕಳನ್ನು ಸಾಕುವ ಚೈತನ್ಯ ಬರುವ ವೇಳೆಗೆ ವಯಸ್ಸಾಗಿ ಹೋಗಿದೆ. ಅದಕ್ಕೆ ಮುಂದಿನ ವರ್ಷ ಒಂದು ಮಗುವನ್ನು ದತ್ತು ತೆಗೆದುಕೊಳ್ಳೋಣ ಎಂದಿದ್ದೇವೆ ಅದೂ ವಿಯೆಟ್ನಾಂನ ಒಂದು ಹುಡುಗನನ್ನು ತೆಗೆದುಕೊಳ್ಳಲು

ನಿಶ್ಚಯಿಸಿದ್ದೇವೆ" ಎನ್ನುವ ಆತನ ಮಾತನ್ನು ಕೇಳಿ ಲೇಖಕರಿಗೆ ಭಾರತದ ಸಹಸ್ರಾರು ಅನಾಥ ಮಕ್ಕಳು ಕಣ್ಣಮುಂದೆ ಸುಳಿದು ಹೋಗಿ, ನಮಗೆ ಸಾಕಲು ಶಕ್ತಿ ಇರಲಿ ಇಲ್ಲದಿರಲಿ ಮನೆ ತುಂಬ, ಮನೆಯಿಲ್ಲದಿದ್ದರೆ ಬೀದಿ ತುಂಬ, ಚರಂಡಿ ತುಂಬ ಮಕ್ಕಳು ಬೇಕು ಎಂದು ಟೀಕಿಸುತ್ತಾರೆ. ಯಾವ ದೇಶದ ಯಾವ ತಂದೆ–ತಾಯಿಗಳ ಮಕ್ಕಳಾದರೇನು? ಮಕ್ಕಳ ಮೇಲಿನ ಪ್ರೀತಿಗಾಗಿ ತಮ್ಮ ದುಡಿಮೆಯಿಂದ ಅವನ್ನು ಸಾಕುತ್ತೇವೆ ಎಂದು ಹೇಳುವ ಆ ವ್ಯಕ್ತಿ ಲೇಖಕರ ಕಣ್ಣಿಗೆ ದೊಡ್ಡ ಸಂತನಂತೆ ಕಾಣುತ್ತಾನೆ. ಅಮೇರಿಕಾದ್ಯಂತ ಸಾವಿರಾರು ತಂದೆ–ತಾಯಿಗಳು ವಿಯೆಟ್ನಾಂ ದೇಶದ ಅನಾಥ ಮಕ್ಕಳನ್ನು ಸಾಕುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿತ್ತಾ, ಭಾರತದಲ್ಲಿ ಎಂಥ ಅಯೋಗ್ಯ ಮಗನಾಗಿರಲಿ, ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಪಿಂಡ ಪ್ರಧಾನ ಮಾಡಿ 'ಮೋಕ್ಷ' ಕಾಣಿಸಬೇಕು ಎಂಬುದನ್ನು ಕುರಿತು ಭಲೆ ಭಲೆ ಆಧ್ಯಾತ್ಮ ಭಾರತವೇ![44] ಎಂಬ ಲೇಖಕರ ಅಭಿಪ್ರಾಯದಲ್ಲಿ ಇಲ್ಲಿನ ಜನಸಂಖ್ಯೆ ಮತ್ತು ಅವರ ವಿಚಾರಪರತೆಯ ಬಗ್ಗೆ ವ್ಯಂಗ್ಯ, ಬೇಸರ ವ್ಯಕ್ತವಾಗುವುದನ್ನು ಅರ್ಥೈಸಬಹುದು.

"ಡಾ.ಪ್ರಭುಶಂಕರರ ಈ ಪ್ರವಾಸಾನುಭದಲ್ಲಿ ನಮ್ಮ ನೆನಪಿನಲ್ಲಿ ನಿಲ್ಲುವಂತಹವು; ಅವರು ಕೊಡುವ ವ್ಯಕ್ತಿ ಚಿತ್ರಗಳು ಮತ್ತು ಅವರು ನೀಡುವ ಭಾರತೀಯ ಮಿತ್ರರ, ಇಲ್ಲವೆ ರಾಮಕೃಷ್ಣಾಶ್ರಮದ, ಇಲ್ಲವೆ ಭೇಟಿಯಾದ ಅಮೇರಿಕನ್ ವ್ಯಕ್ತಿ ಚಿತ್ರಗಳು ತಮ್ಮದೇ ಆದ ವಿಶಿಷ್ಟ ಗುಣಗಳಿಂದ ನಮ್ಮನ್ನು ಆಕರ್ಷಿಸುತ್ತವೆ. ಅಮೇರಿಕಾವನ್ನು ಅವರು ಬರಿಯ ಸುತ್ತಾಟಗಳಿಂದ ಮಾತ್ರ ನೋಡುವುದಿಲ್ಲ. ತಾವು ನಡೆಸಿದ ಸಂದರ್ಶನಗಳಿಂದಲೂ ಅಮೇರಿಕಾವನ್ನು ಗ್ರಹಿಸುತ್ತಾರೆ. ಒಬ್ಬ ಕೂಲಿಕಾರನಿಂದ ಹಿಡಿದು ಒಂದು ವಿಶ್ವವಿದ್ಯಾಲಯದ ಸಹ ವೈಸ್ ಛಾನ್ಸಲರ್‌ರವರೆಗೆ ಅವರು ಭೇಟಿಯಾದ ಜನರಿರುವರು. ಹೀಗಾಗಿ ಅವರ ವ್ಯಕ್ತಿ ಚಿತ್ರಗಳಲ್ಲಿ ವೈವಿಧ್ಯತೆ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ತಾವು ಭೇಟಿಯಾದ ಅಮೇರಿಕದ ಎಲ್ಲ ವೇದಾಂತ ಸಂಘಗಳ ಬಗೆಗೂ ವಿವರಣೆ ಕೊಟ್ಟಿರುವುದು ಓದುಗನ ಪಾಲಿಗೆ ಸ್ವಲ್ಪ ಹೆಚ್ಚೆನ್ನಿಸಿದ್ದರೂ, ರಾಮಕೃಷ್ಣಾಶ್ರಮದ ಅತಿಥಿಯಾಗಿ ಡಾ॥ ಪ್ರಭುಶಂಕರ ದಂಪತಿಗಳು ಅಮೇರಿಕವನ್ನು ಪ್ರದಕ್ಷಿಣೆ ಮಾಡಿರುವುದರಿಂದ ವೇದಾಂತ ಸಂಘಗಳ ಬಗೆಗೆ ಅವರು ಸ್ವಲ್ಪ ಹೆಚ್ಚಿನ ಔದಾರ್ಯ ಮಾತಿನಲ್ಲಿ ತೋರ್ಪಡಿಸಿರುವರು. ಬಣ್ಣನೆಗಿಂತ ಮಿಗಿಲಾದ ಕೃತಜ್ಞತೆ ಮತ್ತೊಂದಿಲ್ಲವಲ್ಲವೆ![45] (ಅಡಿ ಟಿಪ್ಪಣಿ 297) ಡಾ॥ಎಸ್. ವಿದ್ಯಾಶಂಕರ ಅವರ ಅಭಿಪ್ರಾಯ ಸೂಕ್ತವಾದುದಾಗಿದೆ.

ಭಾರತಕ್ಕೆ ಆಗಮಿಸುತ್ತಿದ್ದ ಅಮೇರಿಕನ್ ಮಹಿಳೆಯನ್ನುದ್ದೇಶಿಸಿ ಲೇಖಕರು "ನಿಮ್ಮ ದೇಶದಲ್ಲಿ ಎಲ್ಲ ಸರಿ, ಸಂಪತ್ತು ಕೂಡ ಸೂರೆ ಹೋಗುತ್ತದೆ. ಆದರೆ ಜನ ಏಕೆ ಅಷ್ಟು ದು:ಖಿಗಳಾಗಿದ್ದಾರೆ?"

ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಆ ಮಹಿಳೆ ಹೀಗೆ ನಿರೂಪಿಸುತ್ತಾಳೆ. 'ಅಮೇರಿಕನ್ನರು ಎಂದರೆ ಯಾರು? ಜಗತ್ತಿನ ನಾನಾ ಭಾಗಗಳಿಂದ ಬಂದು ನೆಲೆಸಿರುವ ಜನ, ಅವರು ಅತೃಪ್ತರಾಗಿ, ದು:ಖಿಗಳಾಗಿ ಬಂದವರು. ತಮ್ಮ ದೇಶದಲ್ಲಿ ಇರಲು ಸಾಧ್ಯವಿಲ್ಲದೆ ಬಂದವರೂ ಬಹಳ ಮಂದಿ. ಈಚೆಗೆ ಬಂದು ನೆಲೆಸಿರುವ ಭಾರತೀಯರನ್ನೇ ತೆಗೆದುಕೊಳ್ಳಿ ಅವರು ಬಂದಿರುವುದು ಏಕೆ? ತಮ್ಮ ದೇಶದಲ್ಲಿ ಕೆಲಸ ಸಿಕ್ಕಲಿಲ್ಲ, ಸೌಲಭ್ಯ ಸಾಲದು ಎಂದು ತಾನೆ ಬಂದಿದ್ದಾರೆ? ಈ ಎಲ್ಲ ಜನ ನಮ್ಮ ದೇಶಕ್ಕೆ ಹೊಂದಿಕೊಳ್ಳಲು ಈ ದೇಶದ ಅವಿಭಾಜ್ಯ ಅಂಗವಾಗಿ ಮಾರ್ಪಡಲು ಸುಮಾರು ಎರಡು ತಲೆಮಾರಿನ ಕಾಲವಾದರೂ ಬೇಕು. ಅಲ್ಲಿಯವರೆಗೆ ಯಾವ ಟೀಕೆಯನ್ನು ಮಾಡದೆ ಸುಮ್ಮನಿರುವುದು ಲೇಸು"[46] ಎಂದು ವಿಶ್ಲೇಷಿಸುತ್ತಾಳೆ ಆಕೆಯ ವಿಶ್ಲೇಷಣೆ ಲೇಖಕರಿಗೆ ಹಿಡಿಸಿರುವುದಲ್ಲದೆ ಓದುಗರಿಗೂ ಸಹ ಹಿಡಿಸುತ್ತದೆ.

ಕುವೆಂಪುರವರು ಮುನ್ನುಡಿಯಲ್ಲಿ ಹೇಳಿರುವಂತೆ "ಕಾದಂಬರಿಯ ಸ್ವಾರಸ್ಯವೂ ಭಾವ ಪ್ರಬಂಧದ ಆತ್ಮೀಯತೆಯೂ ಹೊಸೆದುಕೊಂಡು ಪ್ರವಾಸ ಕಥನ ಪ್ರವಹಿಸುತ್ತಿತ್ತು; ಕುತೂಹಲದ ಆಶ್ಚರ್ಯದ ಪರಿಹಾಸ್ಯದ ವ್ಯಂಗ್ಯದ ಭರ್ತನೆಯ ತರಂಗಗಳಲ್ಲಿ! ಯಾವುದೂ ಬರಿಯ 'ವಿಷಯ' ಮಟ್ಟದಲ್ಲಿ ನಿಲ್ಲದೆ ಭಾವಾಂಚಿತವಾಗಿ 'ಪಕ್ವತೆ'ಯನ್ನು ಪಡೆದ 'ವಸ್ತು'ವಾಗುತ್ತಿತ್ತು. ಊರಾಗಲೀ, ವ್ಯಕ್ತಿಯಾಗಲೀ, ದೃಶ್ಯವಾಗಲಿ ಪ್ರಭುಶಂಕರ ವ್ಯಕ್ತಿತ್ವದ ರಸಮೂಷೆಯಲ್ಲಿ ಸಂಸ್ಕಾರಗೊಂಡು ಸಂಗದೂರವಾಗಿ ಶ್ರಮ ಪ್ರಚುರವಾಗಿಯೂ ದೂರ ಸಂಗಮವಾಗದೆ ದಳದಳ ಅರಳಿ ಆತ್ಮೀಯವಾಗುತ್ತಿತ್ತು" ಎಂದು ವರ್ಣಿಸಿರುವುದು ಅಕ್ಷರಶಃ ಸಾರ್ಥಕವಾಗಿದೆ. ಏಕೆಂದರೆ ಆ ದೇಶದ ಚಿಕ್ಕ ಪುಟ್ಟ ವಿವರಗಳನ್ನು ಕೂಡಾ ಸೂಕ್ಷ್ಮವಾಗಿ ಅವಲೋಕಿಸುತ್ತಾ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ತಮಗೆ ಕಂಡು ಬಂದ ಸಣ್ಣತನವನ್ನು ಕಟುವಾಗಿ ಟೀಕಿಸಿವ ಶೈಲಿ ಅಮೋಘವಾಗಿದೆ.

### ಜಯಶ್ರೀ ಕಂಡ ಜಗತ್ತು – ಹೊ. ಶ್ರೀನಿವಾಸಯ್ಯ :

ಲೇಖಕರು ತಮ್ಮ ಪತ್ನಿಯೊಂದಿಗೆ ಅಮೇರಿಕಾ ಪ್ರವಾಸ ಕೈಗೊಂಡು ತಾವು ಪಡೆದ ಅನುಭವಗಳನ್ನು ಸ್ವಾರಸ್ಯಕರವಾಗಿ ಬಿತ್ತರಿಸಿದ್ದಾರೆ. ಯೂರೋಪು ಪ್ರವಾಸ ಮುಗಿಸಿಕೊಂಡು ಲಂಡನ್ ಮಾರ್ಗವಾಗಿ ನ್ಯೂಯಾರ್ಕ್ ತಲುಪಿ ಅಲ್ಲಿನ ಅನುಭವಗಳನ್ನು ಈ ಪ್ರವಾಸಕಥನದ ಪುಟ 161–303ರವರೆಗೆ ಹಂಚಿಕೊಂಡಿದ್ದಾರೆ.

ಪ್ರವಾಸಕಥನದ ಆರಂಭದಲ್ಲಿ ಅಮೇರಿಕದ ಕಿರು ಪರಿಚಯವನ್ನು ಕೊಡುತ್ತಾ, ವಿಜ್ಞಾನ ಕ್ಷೇತ್ರದಲ್ಲಿ ಜಗತ್ತಿನಲ್ಲಿಯೇ ಅಗ್ರಸ್ಥಾನ ಪಡೆದಿದೆ. ಬಹುಸಂಪದ್ಯುಕ್ತ ದೇಶವಾದ ಅಮೇರಿಕಾದಲ್ಲಿ ನ್ಯೂಯಾರ್ಕ್, ವಾಷಿಂಗ್‌ಟನ್, ಲಾಸ್ ಏಂಜಲೀಸ್, ಚಿಕಾಗೋ ಮೊದಲಾದವು ಸಂಯುಕ್ತ ಸಂಸ್ಥಾನದ ಮುಖ್ಯ ನಗರಗಳಾಗಿವೆ ಎನ್ನುತ್ತಾರೆ.

ಅಮೇರಿಕ ಸಂಯುಕ್ತ ಸಂಸ್ಥಾನ 'ಐವತ್ತು' ರಾಜ್ಯಗಳನ್ನು ಒಳಗೊಂಡ ರಾಷ್ಟ್ರ. ಇದನ್ನು ಪ್ರಾಕೃತಿಕವಾಗಿ ಮೂರು ವಿಭಾಗಗಳನ್ನಾಗಿ ಮಾಡಬಹುದು. ಪೂರ್ವಕ್ಕೆ ಎತ್ತರವಾದ ಪ್ರದೇಶ. ಪಶ್ಚಿಮದಲ್ಲಿ ಪರ್ವತಗಳು, ಇವೆರಡರ ಮಧ್ಯೆ ಇರುವ ವಿಸ್ತೃತ ಭೂ ಪ್ರದೇಶ, ವಿಶಾಲವಾದ ಈ ನಾಡಿನಲ್ಲಿ ಅನೇಕ ಬಗೆಯ ಹವಾಗುಣಗಳಿವೆ. ಉತ್ತರದಲ್ಲಿರುವ ವಿಪರೀತ ಚಳಿಯಿಂದ ಹಿಡಿದು ದಕ್ಷಿಣದಲ್ಲಿ ಉಷ್ಣವಲಯದ ಹವಾಗುಣದವರೆಗೂ ಬೇರೆ ಬೇರೆ ರೀತಿಯ ಉಷ್ಣಾಂಶವಿದೆ. ಶಾಂತಸಾಗರದ ತೀರಪ್ರದೇಶದಲ್ಲಿ ಮಾತ್ರ ವರ್ಷವಿಡೀ ಹಿತಕರ ಹವಾಮಾನ, ಕೆಲವಡೆ ತಂಪಾದ ಮಳೆ, ಅರಿಜೋನಾ ಮುಂತಾದ ಕಡೆ ಮಳೆ ಬಹಳ ಕಡಿಮೆ ಎಂಬ ಭೌಗೋಳಿಕ ಅಂಕಿ ಅಂಶಗಳನ್ನು ನೀಡಲು ಪ್ರಯತ್ನಿಸಿದ್ದಾರೆ.

"ಪ್ರಪಂಚದಲ್ಲೆ ಸಂಯುಕ್ತ ಸಂಸ್ಥಾನದಲ್ಲಿನ ಜೀವನ ಮಟ್ಟ ಅತ್ಯುನ್ನತವಾದುದು. ಸ್ತ್ರೀಯರು ಪುರುಷರನ್ನು ಹಲವು ಕ್ಷೇತ್ರಗಳಲ್ಲಿ ಸರಿಗಟ್ಟಿರುವ ದೇಶವಿದು. ಯಂತ್ರಗಳ ಬಳಕೆ ಅಪಾರ. ಗೃಹೋಪಯೋಗಿ ವಿದ್ಯುತ್ ಸಲಕರಣೆಗಳಿಂದ ಮನೆಕೆಲಸ ಹಗುರವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಸಂಯುಕ್ತ ಸಂಸ್ಥಾನ ಬಹಳ ಮುಂದುವರಿದಿರುವುದನ್ನು ಕ್ಯಾನ್ಸರ್ ವಿರುದ್ಧ ಹೋರಾಟ, ಮನೋರೋಗ ಚಿಕಿತ್ಸೆ, ಬದಲಿ ಹೃದಯ ಜೋಡಣೆ ಇತ್ಯಾದಿ ಪ್ರಗತಿಗಳ ಮೂಲಕ ಅರಿಯಬಹುದು. ರಾಷ್ಟ್ರದ ಅಧ್ಯಕ್ಷರನ್ನು ನಾಲ್ಕು ವರ್ಷಗಳಿಗೊಮ್ಮೆ ಆಯ್ಕೆ ಮಾಡುತ್ತಾರೆ. ರೈತರ ದೇಶವಾಗಿ ಆರಂಭವಾದ ನಾಡಾದರೂ ಪ್ರಾಕೃತಿಕ ಸಂಪನ್ಮೂಲಗಳನ್ನು ಜಾಣತನದಿಂದ ಬಳಸಿಕೊಂಡು ಪ್ರಪಂಚದಲ್ಲಿ ಶ್ರೀಮಂತ ಕೈಗಾರಿಕಾ ದೇಶವಾಗಿದೆ. ಪ್ರಪಂಚದ ಅತಿ ಬಲಿಷ್ಠ ರಾಷ್ಟ್ರಗಳಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನ ಒಂದು. ವಿಜ್ಞಾನ ಬಲದಿಂದ ಹಲವು ಪವಾಡಗಳನ್ನು ಈ ದೇಶದ ಜನ ಸಾಧಿಸಿದ್ದಾರೆ'[47] ಎಂದು ಲೇಖಕರು ಅಮೇರಿಕಾದ ಸಾಧನೆ, ಶ್ರೀಮಂತಿಕೆ ವೈಜ್ಞಾನಿಕ ಪ್ರಗತಿಯನ್ನು ತಿಳಿಸುತ್ತಾರೆ. ಅಲ್ಲದೆ ಅಲ್ಲಿನ ಭಾಷೆ, ಧರ್ಮ, ಜನಸಂಖ್ಯೆ ಈ ಮೊದಲಾದ ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ಪ್ರಯತ್ನವನ್ನು ಸಹ ಮಾಡಿದ್ದಾರೆ.

ಅಮೇರಿಕನ್ನರು ಸ್ವಾತಂತ್ರ್ಯಪ್ರಿಯರು, ವೃದ್ಧರೂ ಕೂಡಾ ಇನ್ನೊಬ್ಬರಿಗೆ ಹೊರೆಯಾಗಲು ಇಷ್ಟಪಡುವುದಿಲ್ಲವಂತೆ. ಅಭಿಮಾನ ಉಳ್ಳವರಾದ ಅಮೇರಿಕನ್ನರು ಸಾಹಸ ಜೀವನದಲ್ಲಿ ಪ್ರೀತಿಯುಳ್ಳವರಾಗಿದ್ದಾರೆ. ಅಲ್ಲದೆ ಪ್ರಪಂಚದಲ್ಲಿ ಅಮೇರಿಕ ಎಲ್ಲದರಲ್ಲೂ ಮುಂಚೂಣಿಯಲ್ಲಿರಬೇಕೆಂಬ ಅಭಿಲಾಷೆಯುಳ್ಳವರು. ಕಷ್ಟಪಟ್ಟು ಕೆಲಸ ಮಾಡುವ ಹಾಗೂ ವಿರಾಮದಲ್ಲಿ ಸಂತೋಷ ಪಡುವ ಮನೋವೃತ್ತಿ ಹೊಂದಿದ್ದು, ಸುಂದರ ಹಾಗೂ ಸುವ್ಯವಸ್ಥಿತ ನಗರಗಳನ್ನು ನಿರ್ಮಿಸುವ ಕ್ರಿಯಾಶಕ್ತಿ, ಪ್ರಾಮಾಣಿಕತೆಯನ್ನು ಕಾಣಬಹುದು ಎಂದು ಲೇಖಕರು ತಿಳಿಸುವುದಕ್ಕೆ ಪೂರಕವಾಗಿ ಕೆಲವು ಪ್ರಸಂಗಗಳನ್ನು ನೋಡಬಹುದು.

ಲೇಖಕರೊಮ್ಮೆ ಮಿತ್ರರ ಜೊತೆಗೆ ಅವರ ಮನೆಗೆ ಹೋಗುವಾಗ ಒಂದು ಸೇತುವೆ ಮೇಲೆ ಹಾದು ಹೋಗುವಾಗ ಕಾರು ನಿಲ್ಲಿಸಿ ಒಂದೂವರೆ ಡಾಲರ ಕೊಟ್ಟರು ಅದಕ್ಕೆ ಲೇಖಕರು ಹೀಗೆಕೆ ಎಂದು ವಿಚಾರಿಸಿದಾಗ "ಈ ಸೇತುವೆ ದುರಸ್ತಿ ಮಾಡಲು ಮತ್ತು ವ್ಯವಸ್ಥೆಯನ್ನು ನೋಡಿಕೊಳ್ಳುವುದು ಅವರ ಜವಾಬ್ದಾರಿ. ಸೇತುವೆ ಉಪಯೋಗಿಸಿಕೊಳ್ಳುವವರು ಸುಂಕ ಕೊಡಬೇಕು. ಹೈವೇ ರಸ್ತೆಯಲ್ಲಿ ಸಹ ಇದೇ ಪರಿಸ್ಥಿತಿ. ಐದು ಮೈಲಿ ದೂರದಲ್ಲಿಯೇ ಫಲಕಗಳನ್ನು ಹಾಕಿರುತ್ತಾರೆ. 'ಸುಂಕದ ಕಟ್ಟೆ ಸಮೀಪಿಸುತ್ತಿದೆ' ಎಂದು ಲಾರಿ, ಕಾರು, ಬಸ್ಸುಗಳಿಗೆ ಬೇರೆ ಬೇರೆ ವಿಭಾಗವಿದೆ. ಮೊದಲೇ ಟಿಕೆಟ್ ಕೊಂಡಿದ್ದರೆ ಯಂತ್ರದಲ್ಲಿ ಹಾಕಿದರೆ ಅಥವಾ ತೋರಿಸಿದರೆ ಅಥವಾ ಮುಂದೆ ಹೋಗಿ ಸರಿಯಾದ ಚಿಲ್ಲರೆ ಡಬ್ಬದಲ್ಲಿ ಹಾಕಿದರೆ ಮುಂದಿನ ಬಾಗಿಲು ತರೆಯುವುದು, ಎರಡೂ ಇಲ್ಲದೆ ಹಣ ಕೊಟ್ಟು ಟಿಕೆಟ್ ಪಡೆದರೆ ಬಾಗಿಲು ತೆರೆಯುತ್ತದೆ ಎಂದು ತಿಳಿಸುತ್ತಾರೆ. ಇದರಿಂದ ಸಾರ್ವಜನಿಕ ಆಸ್ತಿಯ ಬಗ್ಗೆ ಜನರ ಕಾಳಜಿಯನ್ನು ನಾವು ಅರಿಯಬಹುದು.

ಇನ್ನೊಮ್ಮೆ ಕಾರಿನಲ್ಲಿ ಹೋಗುತ್ತಿರಬೇಕಾದರೆ ಪಿಪ್, ಪಿಪ್ ಶಬ್ದ ಕಾರಿನ ಒಳಗಡೆ ಬಂತು. ಶ್ರೀ ಮಹಾದೇವ ಹೇಳಿದರು. ಹತ್ತಿರದಲ್ಲಿ ಪೋಲಿಸ್ ರಾಡಾರ್ ಇದೆ. ವೇಗವನ್ನು ತನಿಖೆ ಅಥವಾ ಚೆಕ್ ಮಾಡುತ್ತಿದ್ದಾರೆ ಎಂದು ವೇಗ ಕಡಿಮೆ ಮಾಡಿದರು. ಸ್ವಲ್ಪ ದೂರ ಬರುವಷ್ಟರಲ್ಲಿ ದೀಪಗಳಿಂದ ಸುತ್ತುತ್ತಿರುವ ರಾಡಾರ್ ಇದ್ದ ಪೋಲಿಸ್ ವ್ಯಾನ್ ಕಾಣಿಸಿತು. ಕಾರಿನಲ್ಲಿ ಈ ಎಲೆಕ್ಟ್ರಾನಿಕ್ ಉಪಕರಣವನ್ನು ಇಟ್ಟುಕೊಂಡಿರುತ್ತಾರೆ. ಆದರೆ ಇದು ನಿಷಿದ್ಧ ಎಂದು ತಿಳಿಯಿತು. ಆದರೂ ಪೋಲೀಸಿನವರಿಂದ ತಪ್ಪಿಸಿಕೊಳ್ಳಲು ಇವನ್ನು ಉಪಯೋಗಿಸುತ್ತಾರೆ. ಹಾಗೆ ಹೋಗುತ್ತಿರಬೇಕಾದರೆ ಪೋಲಿಸ್ ವ್ಯಾನು,

ಕಾರೊಂದನ್ನು ಹಿಂಬಾಲಿಸಿಕೊಂಡು ಬಂದು ಅಡ್ಡ ಹಾಕಿತು. ಆತ ಮಿತಿ ಮೀರಿದ ವೇಗದಲ್ಲಿ ಹೋಗುತ್ತಿದ್ದುದರಿಂದ ಹಿಡಿದರು ಅಂತ ಕಾಣುತ್ತೆ[48] ಎಂಬ ಮಾಹಿತಿಯನ್ನೊದಗಿಸುವ ಲೇಖಕರು ಅಮೇರಿಕನ್ನರ ದೂರ ದೃಷ್ಟಿಯನ್ನು ಮೆಚ್ಚಿಕೊಂಡಿದ್ದಾರೆ.

ಅಲ್ಲಿನ ಅಂಗಡಿಗಳಲ್ಲಿ ಸಾಮಾನುಗಳನ್ನು ಬಹು ಸ್ವಚ್ಛವಾಗಿ ಅಂದವಾಗಿ ಜೋಡಿಸಿಡುತ್ತಾರೆ. ಕೆಲವು ಅಂಗಡಿಗಳಂತೂ ಬಹಳ ವಿಸ್ತಾರವಾಗಿದ್ದು, ಜೀವನೋಪಯುಕ್ತವಾದ ಅನೇಕ ವಸ್ತುಗಳು ದೊರೆಯುತ್ತದೆ. ಒಂದು ಕೈಗಾಡಿಯನ್ನು ತೆಗೆದುಕೊಂಡು ಹೋದರೆ ಬೇಕಾದ ವಸ್ತುಗಳನ್ನು ತುಂಬಿಕೊಂಡು ಕೌಂಟರ್‌ನಲ್ಲಿ ಹಣಕೊಟ್ಟು, ವಾಹನವಿರುವವರೆಗು ಗಾಡಿಯನ್ನು ತಳ್ಳಿಕೊಂಡು ಬಂದು ಅನಂತರ ಪಕ್ಕಕ್ಕೆ ತಳ್ಳಬಹುದಂತೆ. ಯಾವುದೇ ಅಂಗಡಿ, ಹೋಟೆಲ್ ಇತ್ಯಾದಿ ಸ್ಥಳಗಳಿಗೆ ಹೋದರೂ ಅಲ್ಲಿ ಸ್ವಚ್ಛತೆಯಿಂದ ಕೂಡಿರುವುದು ಕಂಡ ಲೇಖಕರಿಗೆ ಸಂತೋಷ ಉಂಟಾಗುತ್ತದೆ. ವ್ಯಾಪಾರವಾಗದೆ ಉಳಿದ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರುವ ವ್ಯವಸ್ಥೆ ಎಂಬ ಶೀರ್ಷಿಕೆಯೊಂದಿಗೆ ಪ್ರದರ್ಶಿಸುವುದು ಅಲ್ಲಿನ ಪದ್ಧತಿ ಎನ್ನುತ್ತಾರೆ.

ಅಮೇರಿಕನ್ನರ ವ್ಯಾಪಾರ ಕೇಂದ್ರಗಳು, ಅವರ ಸಾಹಸದ ಪ್ರತೀಕಗಳು ಎಂದು ತಿಳಿಸುತ್ತಾರೆ. ಕಾರಣ, ವೇಗವಾಗಿ ಚಲಿಸುವ ಅಮೇರಿಕಾದ ಜೀವನಕ್ಕೆ ಬೇಕಾಗುವ ವಸ್ತುಗಳು ಅಂಗಡಿಗಳಲ್ಲಿ ಸಿಗುವುದರಿಂದ, ಅಡಿಗೆ ಮಾಡಲು ಬಿಡುವಿಲ್ಲದವರು ಟಿನ್‌ಗಳಲ್ಲಿ ಸಿದ್ಧವಾದ ವಸ್ತುಗಳನ್ನು ಕೊಳ್ಳುತ್ತಾರೆ. ಕಲಬೆರಕೆ ವಸ್ತುಗಳನ್ನು ಮಾರುವ ಪದ್ಧತಿ ಅಮೇರಿಕಾದಲ್ಲಿ ಇಲ್ಲವಾದ್ದರಿಂದ ಪ್ರತಿಯೊಂದು ವಸ್ತು ಶುದ್ಧ ರೂಪದಲ್ಲಿ ದೊರೆಯುತ್ತದೆ. ಶುದ್ಧ ರೂಪದಲಿಲ್ಲದಿದ್ದರೆ ಸರ್ಕಾರ ಕಠಿಣ ಶಿಕ್ಷೆ ವಿಧಿಸುತ್ತದೆ. ಇದರಿಂದಾಗಿ ಕೆಲವು ಕಂಪನಿಗಳು ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದು ಬೃಹತ್ ಬಂಡವಾಳ ಹಾಕಿ ಲಾಭ ಗಳಿಸುವುದನ್ನು ನೋಡಬಹುದು ಮತ್ತು ಅಲ್ಲಿನ ವ್ಯಾಪಾರಿಗಳು ಜಾಹಿರಾತಿಗಾಗಿಯೇ ಸಾಕಷ್ಟು ಹಣ ಖರ್ಚು ಮಾಡುತ್ತಾರೆ. ಏಕೆಂದರೆ ಉತ್ತಮ ವಸ್ತುಗಳನ್ನು ಒದಗಿಸಿ ಪ್ರಸಿದ್ಧರಾಗಬೇಕೆಂಬ ಸಂಕಲ್ಪ ಅಮೇರಿಕನ್ನರದು ಎಂಬ ಲೇಖಕರ ವಿಚಾರದಲ್ಲಿ ಅಮೇರಿಕನ್ನರ ಚಾಣಾಕ್ಷತನವನ್ನು ಕಾಣಬಹುದು.

ಅಮೇರಿಕಾದಲ್ಲಿ ವ್ಯಾಪಾರಿ ವರ್ಗವನ್ನು ಮೀರಿಸುವವರೆಂದರೆ 'ವಿಮಾ ಕಂಪನಿ'ಯವರು ಎನ್ನುತ್ತಾರೆ. ಆರೋಗ್ಯದ ವಿಮೆ ಮಾಡಿಸಿದವರಿಗಿಂತೂ ಬಹಳ ಲಾಭ. ಡಾಕ್ಟರರ ಸಲಹಾ ಫೀಯಾಗಲಿ, ಔಷದೋಪಚಾರದ ಖರ್ಚಾಗಲಿ ಬಹಳ ದುಬಾರಿ ಅದಕ್ಕಾಗಿ ಪ್ರತಿಯೊಬ್ಬರು ವಿಮೆ ಮಾಡಿಸಬೇಕಾಗುತ್ತದೆ ಎಂದು ಅಲ್ಲಿನ ದುಬಾರಿ ವೈದ್ಯಕೀಯ ವ್ಯವಸ್ಥೆಯನ್ನು ತಿಳಿಸುತ್ತಾರೆ.

"ಕಾರಿನ ಸಾಲ, ಮನೆಯ ಸಾಲ (ಮನೆ ಕಟ್ಟಿದರೆ) ವಿಮೆಯ ಕಂತು, ಉಳಿತಾಯದ ಕಂತು ಮುಂತಾದವುಗಳಿಗೆ ಹಣ ತೆತ್ತ ನಂತರ ಸಂಬಳವಾದ ದಿನ ಕೈಯಲ್ಲಿ ನೂರು ಡಾಲರು ಕೂಡ ಉಳಿಯುವುದಿಲ್ಲ. ಹೀಗಾಗಿ ಬಹಳ ಇಕ್ಕಟ್ಟಿನಲ್ಲಿ ದಿನ ಕಳೆಯಬೇಕಾಗುತ್ತದ್ದಾರಿಂದ ಅಮೇರಿಕೆಯಲ್ಲಿ ಎಷ್ಟೋ ಜನ ಸ್ಮಶಾನಯಾತ್ರೆಯ ವ್ಯಾಪಾರದಲ್ಲಿ ತೊಡಗಿದ್ದಾರೆ. ಪ್ರತಿ ಊರಿನಲ್ಲೂ ಅಲಂಕಾರಭರಿತವಾದ ಸ್ಮಶಾನ ಯಾತ್ರೆಯ ಅಂಗಡಿಗಳು ತಪ್ಪದೆ ಕಣ್ಣಿಗೆ ಬೀಳುವುವು. ಬೆಲ್ಲದಂತಹ ಮಾತು ಆಡಿ ಮರುಳು ಮಾಡುವ ಅಂಗಡಿಕಾರರು, ಇವನ್ನು ನಡೆಸುತ್ತಾರೆ. ಯಾವನೊಬ್ಬ ಮೃತನಾದರೆ ಆತನ ಮನೆಯವರು ಏನೇನೂ ಚಿಂತಿಸುವ ಕಾರಣವಿಲ್ಲ. ಈ ವ್ಯಾಪಾರಿಗಳಿಗೆ ಪೋನ್ ಮಾಡಿದರೆ ಸಾಕು ಶವದ ಜವಾಬ್ದಾರಿಯನ್ನು ಸಂಪೂರ್ಣವಾಗಿ ವಹಿಸಿಕೊಳ್ಳುತ್ತಾರೆ. ಅದಕ್ಕೆ ತಗಲುವ ಖರ್ಚು, ಕೊನೆಗೆ ದೊಡ್ಡಬಿಲ್ ರೂಪದಲ್ಲಿ ಬರುತ್ತದೆ"[49] ಎಂದು ಲೇಖಕರು ಅಮೇರಿಕಾದ ಸಾಮಾನ್ಯ ಜೀವನವನ್ನು ಸೊಗಸಾಗಿ ವಿವರಿಸಿದ್ದಾರೆ.

ಲೇಖಕರ ಮಿತ್ರರಾದ ಬಿ.ಟಿ. ಲಕ್ಷ್ಮಣ್ ಅವರ ಮನೆಯಲ್ಲಿದ್ದಾಗ ಒಬ್ಬ ಹುಡುಗ ಚೆವರ್‌ಲೆಟ್ ಕಾರಿನಲ್ಲಿ ಬಂದು, ನಮ್ಮ ಮುಂದೆ ಇಳಿದು ಬಂದು "ಹಾಯ್ ಲಕ್ಷ್ಮಣ್, ಹುಲ್ಲು ಕತ್ತರಿಸಿದ್ದೇನೆ. ಎರಡು ಗಂಟೆಗಳ ಕೆಲಸ ಮಾಡಿರುವೆ, ನಲವತ್ತು ಡಾಲರ್ ಕೊಡಿ" ಎಂದ. ಲಕ್ಷ್ಮಣ್ ಅವರು ಪೂರ್ಣ ಮಾಡಿಲ್ಲ. ಇನ್ನೂ ಕೆಲಸವಿದೆ ಎಂದು ಹೇಳಿದಾಗ ಮುಂದಿನ ಸಾರಿ ಬಂದು ಮಾಡುತ್ತೇನೆಂದು ಹೇಳಿ ನಲವತ್ತು ಡಾಲರ್ ಪಡೆದು ಹೋದ. ಇದನ್ನು ಗಮನಿಸಿದ ಲೇಖಕರು ಲಕ್ಷ್ಮಣ್ ಅವರನ್ನು ಹೀಗೆ ಪ್ರಶ್ನಿಸುತ್ತಾರೆ 'ಆತ ಕಾರಿನಲ್ಲಿ ಬಂದನಲ್ಲಾ, ಇವನು ಹುಲ್ಲು ಕತ್ತರಿಸುವವನೆ? ಎಂದು ಕೇಳುತ್ತಾರೆ. ಅದಕ್ಕೆ ಅವರು ಹೌದು ಆತ 'ವಿದ್ಯಾರ್ಥಿ' ಎಂದು ತಿಳಿಸುತ್ತಾ ಪಾಠ ಪ್ರವಚನ ಮುಗಿದ ಮೇಲೆ ಬಿಡುವಿನ ವೇಳೆಯಲ್ಲಿ ಸಂಪಾದಿಸಿ ವಿಶ್ವವಿದ್ಯಾನಿಲಯಕ್ಕೆ ಕಟ್ಟಬೇಕಾದ ಹಣ ಗಳಿಸುತ್ತಾರೆ. ಒಮ್ಮೊಮ್ಮೆ ನನ್ನೊಡನೆ ಗಾಲ್ಫ್ ಆಡಲು ಬರುತ್ತಾನೆ" ಎಂದು ಹೇಳುತ್ತಾರೆ. ಅದಕ್ಕೆ ಲೇಖಕರು "ಹುಲ್ಲು ಕತ್ತರಿಸುವವ ಗಾಲ್ಫ್‌ಗ್ರೌಂಡ್ ನೋಡುವರೇ ಹೊರತು, ಗಾಲ್ಫ್ ಆಡುವ ಮಟ್ಟಕ್ಕೆ ನಮ್ಮ ದೇಶದಲ್ಲಿ ಬರುವುದು ಯಾವಾಗ?" ಎಂದೆ. ಅದಕ್ಕೆ ಅವರ ಮಿತ್ರರು "ಈ ಹುಡುಗನ ರೀತಿಯೇ ನಮ್ಮಲ್ಲೂ ಕೆಲಸಮಾಡಿ ಹಣ ಸಂಪಾದಿಸಿದರೆ ಯಾರು ಬೇಕಾದರೂ ಆಡಬಹುದು" ಎಂದು ಉತ್ತರಿಸಿರುವುದು ನಿಜಕ್ಕೂ ಸರಿಯೆನಿಸುತ್ತದೆ. ಓದಿನೊಂದಿಗೆ ದುಡಿಮೆ ಇದ್ದರೆ ಸ್ವಾಭಿಮಾನ ಮತ್ತು ಶ್ರದ್ಧೆಯಿಂದ ಓದುತ್ತಾ ಮುನ್ನುಗ್ಗಬಹುದದಲ್ಲದೆ, ದೇಶದ ಆರ್ಥಿಕತೆಗೆ ನೆರವಾದಂತಾಗುತ್ತದೆ.

[illegible]

ಅಮೇರಿಕಾದಲ್ಲಿನ ವಿದ್ಯಾರ್ಥಿಗಳು ಯಾವುದೇ ಸಣ್ಣ ಕೆಲಸವಾದರೂ ಉದಾಹರಣೆಗೆ ಕಾರು ತೊಳೆಯುವುದು, ಕಟ್ಟಡ ಕಟ್ಟುವುದರಲ್ಲಿ; ಕಲ್ಲು, ಮಣ್ಣು ಹೊರುವುದು. ಹೊಟೇಲುಗಳಲ್ಲಿ ಪಾತ್ರೆ ತೊಳೆಯುವುದು, ಪೆಟ್ರೋಲ್ ಮಾರುವುದು ಈ ಮೊದಲಾದವುಗಳನ್ನು ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಮಾಡಿ ಧನಸಂಪಾದಿಸುವ ಗುಣವನ್ನು ಲೇಖಕರು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಆದರೆ ಇಂತಹ ವಿದ್ಯಾರ್ಥಿಗಳ ಮೇಲೆ ಸಾಲದ ಭಾರ ಅಧಿಕವಾಗಿರುತ್ತದೆ ಎಂದು ತಿಳಿಸಿತ್ತಾ, ಅದಕ್ಕೆ ಕಾರಣಗಳನ್ನು ಕೊಡುತ್ತಾರೆ. ಕಾಲೇಜಿನ ಖರ್ಚು ಹೆಚ್ಚು. ಇನ್ನೂ ಅವರಿಗೆ ಕುಮಾರಿಯರ ಸಹವಾಸ, ತಮ್ಮ ಸ್ವಂತ ಸಂಪಾದನೆಯ ಜೊತೆ ಬ್ಯಾಂಕಿನ ಸಾಲವನ್ನು ತೀರಿಸಬೇಕಾಗುತ್ತದೆ. ಅಮೇರಿಕ ಬ್ಯಾಂಕುಗಳು ಭಾರತದ ಮಾರವಾಡಿಗಳಿದ್ದಂತೆ ಎಂದು ಹೇಳುವುದನ್ನು ಈ ನಿದರ್ಶನದ ಮೂಲಕ ತಿಳಿಸುತ್ತಾರೆ "ನೂರು ಡಾಲರುಗಳನ್ನು ಹತ್ತು ತಿಂಗಳಿಗಾಗಿ ಸಾಲ ತೆಗೆದುಕೊಳ್ಳಬೇಕಾಗಿದೆ ಎಂದು ಇಟ್ಟುಕೊಳ್ಳೋಣ. ಹತ್ತು ತಿಂಗಳಿಗೆ ಹತ್ತು ಡಾಲರ್ ಬಡ್ಡಿ ಸೇರಿಸಿ ನಿಮ್ಮ ಸಾಲ ನೂರಹತ್ತು ಡಾಲರ್ ಆಯಿತು ಎನ್ನುತ್ತಾರೆ. ಅಂದರೆ ಪ್ರತಿ ತಿಂಗಳು ನೀವು ಹನ್ನೊಂಧೂ ಡಾಲರ್ ಕೊಡುತ್ತಾ ಹೋಗಬೇಕು. ಮೊದಲ ಕಂತನ್ನು ಮುರಿದುಕೊಂಡೇ ಎಂಬತ್ತೊಂಬತ್ತು ಡಾಲರ್‌ಗಳನ್ನು ಕೈ ಮೇಲೆ ಹಾಕುವ ಹೊಸ ಮಾದರಿಯ ಸಾಹುಕಾರರಿವರು, ಈ ಸಾಲ ಮುಗಿಯುವ ಮೊದಲೇ ಇನ್ನೊಂದು ಸಾಲ ತೆಗೆಯುವುದು ಅನವಾರ್ಯವಾಗುತ್ತದೆ. ಇಷ್ಟರಲ್ಲಿ ಮದುವೆಯಾದವರಂತೂ (ಹೆಚ್ಚಿನ ಅಮೇರಿಕನ್ನರು ವಿದ್ಯಾರ್ಥಿ ದೆಸೆಯಲ್ಲೇ ಮದುವೆಯಾಗುತ್ತಾರೆ)ತೀರಿ ಹೋಯಿತು ಸಾಲಕ್ಕೆ ಸಾಲ ಸೇರುತ್ತದೆ. ಪತಿ-ಪತ್ನಿಯರಿಬ್ಬರು ವಿದ್ಯಾರ್ಥಿಗಳಾದಲ್ಲಿ ಒಂದು ವರ್ಷ ಪತ್ನಿ ಕಾಲೇಜು ಸೇರಿದಾಗ ಪತಿ ಧನಸಹಾಯ ಒದಗಿಸುತ್ತಾನೆ. ಅಷ್ಟರಲ್ಲಿ ಒಂದೆರಡು ಮಕ್ಕಳು ಆಗಿರುತ್ತವೆ. ಓದನ್ನು ಮುಗಿಸಿದ ಕೂಡಲೇ ಒಳ್ಳೇ ನೌಕರಿ ಕಾದಿರುತ್ತದೆ. ಆದರೆ ಸಾಲ ಬೆನ್ನಿನ ಹಿಂದೆ ಇರುತ್ತದೆ"[50]. ಎನ್ನುವ ಲೇಖಕರು ವಿದ್ಯಾರ್ಥಿ ಜೀವನದಲ್ಲಿ ಅವರು ಎದುರಿಸುತ್ತಿರುವ ಸಮಸ್ಯೆಯನ್ನು ತಿಳಿಸುತ್ತಾರೆ. ಆದರೆ ಎಂತಹ ಸ್ಥಿತಿಯಲ್ಲಿಯೂ ಸಾಲಕ್ಕೆ ಅಂಜದೆ, ಧೃತಿಗೆಡದೆ ಓದಿ ನೌಕರಿಗೆ ಸೇರಿಸಿಕೊಳ್ಳುವ ಅವರ ಸಾಹಸವನ್ನು ನಾವು ಮೆಚ್ಚಿಕೊಳ್ಳಲೇಬೇಕಾಗುತ್ತದೆ.

ನ್ಯೂಯಾರ್ಕ್ ನಗರವನ್ನು ನೋಡಿದ ಲೇಖಕರು ಇಲ್ಲಿನ ಗಗನ ಚುಂಬಿ ವಾಣಿಜ್ಯ ಭವನಗಳೇ ಅಮೇರಿಕ ಸಂಯುಕ್ತ ಸಂಸ್ಥಾನದ ಸಂಕೇತವಾಗಿದ್ದವು. ರಾಕ್ ಫೆಲರ್ ಕೇಂದ್ರ ಅಮೇರಿಕಾದಲ್ಲೆಲ್ಲಾ ಅತ್ಯಂತ ದೊಡ್ಡದಾದಂತ ವಾಣಿಜ್ಯ ಮತ್ತು ಮನೋರಂಜನೆಗಳ ಖಾಸಗಿ ಸಂಸ್ಥೆ. ಈ ಕೇಂದ್ರವೇ ಉತ್ತುಂಗ ಭವನಗಳ ಒಂದು ನಗರ. ಅರಮನೆಗಳು, ರಂಗಮಂದಿರಗಳು, ರೇಡಿಯೋ ಮತ್ತು ಟೆಲಿವಿಷನ್

ಕೇಂದ್ರಗಳು, ಮಂದಿರಗಳು, ವಿಜ್ಞಾನದ ಮ್ಯೂಸಿಯಂಗಳು ಅಂಗಡಿಗಳು ಹೀಗೆ ಮೊದಲಾದವು ಬೃಹತ್ ಸಂಸ್ಥೆಗಳಾಗಿದ್ದು ಆಕಾಶ ಚುಚ್ಚುವ ಭವನಗಳಾಗಿವೆ ಎಂದು ತಿಳಿಸುತ್ತಾರೆ. ಇಲ್ಲಿಯ ಮಹತ್ವವಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದಾರೆ. ಉದಾಹರಣೆಗೆ ಪ್ರಪಂಚದ ವಾಣಿಜ್ಯ ಕೇಂದ್ರ, ಎತ್ತರವಾದ ಕಟ್ಟಡ, ನೂರ ಏಳು ಮಹಡಿಗಳನ್ನು ಹೊಂದಿದ್ದು, ಲಿಫ್ಟಿನಲ್ಲಿ ಹೋಗಲು ಐವತ್ತೊಂಬತ್ತು ಸೆಕೆಂಡುಗಳು ತಗುಲುತ್ತದೆ. ಇಲ್ಲಿಂದ ನ್ಯೂಯಾರ್ಕ್ ಸಂಪೂರ್ಣ ಕಾಣುತ್ತದೆ ಎನ್ನುತ್ತಾರೆ.

ಸ್ವಾತಂತ್ರ್ಯ ಪ್ರತಿಮೆ ಈ ವಿಗ್ರಹ ಮೂನ್ನೂರೈದು ಅಡಿಗಳ ಎತ್ತರ, ಇನ್ನೂರ ಇಪ್ಪತ್ತೈದು ಮೆಟ್ರಿಕ್ ಟನ್ ತೂಕ ಇದ್ದೂ ಈ ವಿಗ್ರಹವನ್ನು ಪೂರ್ಣವಾಗಿ ನಾಲ್ಕು ಅಂಗುಲ ದಪ್ಪದ ತಾಮ್ರದ ತಗಡುಗಳಿಂದ ಮುಚ್ಚಿದ್ದಾರೆ. ವಿಗ್ರಹಕ್ಕೆ ನೂರ ಎಪ್ಪತ್ತೊಂದು ಮೆಟ್ಟಲಿನ ಗದ್ದಿಗೆಗೆ ನೂರ ಅರವತ್ತೇಳು ಮೆಟ್ಟಿಲುಗಳ ದುಂಡುಮಹಡಿ ಮೆಟ್ಟಿಲುಗಳು ಇವೆ ಎಂದು ತಿಳಿಸುವ ಲೇಖಕರು ಅದರ ಪೂರ್ವೇತಿಹಾಸವನ್ನು ಕೊಡುತ್ತಾರೆ.

ಚೈನಾ ನಗರ, ಬ್ರಿಡ್ಜ್ ಪೋಸ್ಟ್, ಯು.ಎನ್.ಓ ಕಛೇರಿ, ಇಂಪೀರಿಯಲ್ ಕಟ್ಟಡ, ವಾಷಿಂಗ್‌ಟನ್ ಮೆಮೊರಿಯಲ್, ನ್ಯಾಷನಲ್ ಏರ್ ಸ್ಪೇಸ್ ಮ್ಯೂಸಿಯಂ ಹೀಗೆ ಮೊದಲಾದವುಗಳನ್ನು ನೋಡಿ ಆನಂದ ಪುಲಕಿತರಾಗಿದ್ದಾರೆ.

ಅಮೇರಿಕಾದ ರಾಜಧಾನಿಯಾಗುವ ಅದೃಷ್ಟ ನ್ಯೂಯಾರ್ಕಿಗೆ ಇಲ್ಲವಾದರೂ ಅದು ಪ್ರಪಂಚದ ರಾಜಧಾನಯಾಗಿದೆ. ಅಂದರೆ ಅಂತರ ರಾಷ್ಟ್ರೀಯ ಸಂಸ್ಥೆಗಳೆಲ್ಲಾ ಇಲಿರುವುದರಿಂದ ಅಮೇರಿಕಾದ ಸಾಂಸ್ಕೃತಿಕ ಕೇಂದ್ರವಾಗಿದೆ. ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳ ಕೇಂದ್ರವೂ ಆಗಿದೆ. ಯು.ಎನ್.ಓ. ಸಂಸ್ಥೆಯ ಏಳು ಅಂಗಗಳಲ್ಲಿ ಹೇಗ್‌ನ ಇಂಟರ್ ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್ ಹೊರತುಪಡಿಸಿ ಉಳಿದ ಜನರಲ್ ಅಸೆಂಬ್ಲಿ, ಸೆಕ್ಯೂರಿಟಿ ಕೌನ್ಸಿಲ್, ಎಕನಾಮಿಕ್ ಮತ್ತು ಸೋಸಿಯಲ್ ಕೌನ್ಸಿಲ್, ಟ್ರಸ್ಟೀಷಿಪ್ ಕೌನ್ಸಿಲ್ ಮತ್ತು ಸೆಕ್ರೇಟರಿಯಟ್ ಮೊದಲಾದ ದೊಡ್ಡ ಕಟ್ಟಡಗಳು ನ್ಯೂಯಾರ್ಕ್‌ನಲ್ಲಿ ಇರುವುದರಿಂದಾಗಿ ಇದನ್ನು ಪ್ರಪಂಚದ ರಾಜಧಾನಿಯೆಂದು ಲೇಖಕರು ಹೇಳಿರುವುದು ಸೂಕ್ತವಾಗಿದೆ.

ಲೇಖಕರಿಗೆ ಆಕರ್ಷಣೆ ತಂದ ಇನ್ನೊಂದು ಸಂಗತಿ ಎಂದರೆ ಅಮೇರಿಕದ ಸಂಗೀತ. ಸುಮಾರು ಎರಡು ಸಾವಿರ ಆಸನಗಳಿರುವ ಪ್ರೇಕ್ಷಕಾಂಗಣದಲ್ಲಿ ಕುಳಿತ ಕೂಡಲೇ ಇಡೀ ಅಂಗಣವೇ ನಿಧಾನವಾಗಿ

ಚಲಿಸತೊಡಗುತ್ತದೆ. ರಂಗ ಭೂಮಿಯ ಮೇಲೆ ವಿವಿಧ ರೀತಿಯ ಆಕೃತಿಗಳು ಅಮೇರಿಕದ ಸಂಗೀತ ಬೆಳೆದು ಬಂದ ರೀತಿಯನ್ನು ಹಾಕಿ ತೋರಿಸುತ್ತವೆ. ವಾದ್ಯಗಳೂ ಉಂಟು, ಸುಮಾರು ಒಂದು ಗಂಟೆಯ ಕಾರ್ಯಕ್ರಮದಲ್ಲಿ ಅಮೇರಿಕದ ಸಂಗೀತದ ಇತಿಹಾಸವನ್ನು ಅಭಿನಯಿಸಿ ನುಡಿಸಿ ತೋರಿಸುವುದು ಲೇಖಕರಿಗೆ ಹಿತವೆನಿಸಿದೆ. ಅಲ್ಲದೆ ತಾವು ನೋಡಿದ ಅದ್ಭುತಗಳಲ್ಲಿ ಒಂದು ಪರಿಮಾಣು ಪ್ರದೇಶ, ಎಂದು ಹೇಳಿ ಅದರ ಕಿರು ಪರಿಚಯವನ್ನು ನೀಡುತ್ತಾರೆ. "ಅತ್ತಿತ್ತ ತಿರುಗುವ ಕುರ್ಚಿಯ ಮೇಲೆ ನಾವು ಕುಳಿತುಕೊಳ್ಳುತ್ತೇವೆ. ಕಂಬಿಯ ಮೇಲೆ ಅದು ಚಲಿಸತೊಡಗುತ್ತಿದೆ. ಕಟ್ಟಡದ ಒಳಕ್ಕೆ ನಮ್ಮ ರೈಲು ಕುರ್ಚಿ ಪ್ರವೇಶಿಸುತ್ತಿದ್ದಂತೆಯೆ, ನಕ್ಷತ್ರಲೋಕವನ್ನು ಹೊಕ್ಕಿದ್ದೇವೆಯೊ ಎನಿಸುತ್ತದೆ. ವಕ್ತಾರರು ನಿರೂಪ ನೀಡುತ್ತಿರುವರು. "ಇದು ಪರಮಾಣುವಿನ ಲೋಕ, ನೀವು ಪರಮಾಣುವಿನ ಗರ್ಭವನ್ನು ಪ್ರವೇಶಿಸುತ್ತಿದ್ದೀರಿ, ಇವು ಎಲೆಕ್ಟ್ರಾನ್‌ಗಳು, ಇವು ನ್ಯೂಟ್ರಾನ್‌ಗಳು, ಇವುಗಳ ಚಲನವಲನಗಳು ಹೀಗೆ ಅವುಗಳ ನಡುವೆ ನೀವು ಚಲಿಸುತ್ತಿದ್ದೀರಿ". ನಿರೂಪಣೆ ಮುಂದುವರಿಯುತ್ತದೆ. ಪರಮಾಣುವಿನ ರಚನೆಯನ್ನು ಕುರಿತು ಎಷ್ಟು ವಿವರಿಸಿದರೂ ಅರ್ಥವಾಗುವುದು ಕಷ್ಟ. ಅಂಥ ಪರಮಾಣುವಿನ ಹೃದಯಾಂತರಾಳವನ್ನು ಪರೀಕ್ಷಿಸಿ ಕಾಲ ದೇಶಗಳ ಹಿಡಿತದಿಂದ ಸಂಪೂರ್ಣವಾಗಿ ಪಾರಾಗಿ ಪರಮಾಣುವಿನ ಸಹಜ ಸ್ವರೂಪದಲ್ಲಿ ಬೆರೆತು ಹೋಗಿದ್ದೇವೆ. ಪ್ರದರ್ಶನದ ಈ ಭಾಗ ವಿಜ್ಞಾನವು ಸಾಧಿಸಿರುವ ಪರಮಸಿದ್ಧಿ"[52] ಎಂದು ತಮ್ಮ ಸೊಗಸಾದ ಅನುಭವವನ್ನು ಸಂಕ್ಷಿಪ್ತವಾಗಿ ವಿವರಿಸುವುದರೊಂದಿಗೆ ಇತರ ಪ್ರೇಕ್ಷಣೀಯ ಸ್ಥಳಾಗಳಾದ ಡಿಸ್ನಿಲ್ಯಾಂಡ್, ಯುನಿವರ್ಸಲ್ ಸ್ಟುಡಿಯೋ, ನಯಾಗಾರ ಜಲಪಾತ ಮೊದಲಾದವುಗಳ ಬಗ್ಗೆಯೂ ಸ್ವಾರಸ್ಯಕರವಾಗಿ ಒಪ್ಪಿಸಿದ್ದಾರೆ.

ಅಮೇರಿಕದಲ್ಲಿ ದಿನದ ಇಪ್ಪತ್ನಾಲ್ಕು ಗಂಟೆ ಕೂಡಾ ವೈದ್ಯಕೀಯ ಸೌಲಭ್ಯ ಲಭ್ಯವಿದ್ದು ವೈದ್ಯರಿಗೆ ಬಿಡುವಿರುವುದಿಲ್ಲ ಎನ್ನುವುದನ್ನು ಲೇಖಕರ ಮಿತ್ರರಾದ ಡಾ॥ಕೃಷ್ಣಪ್ಪ ಅವರ ಮುಖಾಂತರ ಕಂಡುಕೊಂಡಿದ್ದಾರೆ. "ಕೃಷ್ಣಪ್ಪ ತಿಂಡಿ ತಿನ್ನುತ್ತಿದ್ದಾಗಲೇ ಅವರ ಬೆಲ್ಟಿನಲ್ಲಿ ಒಂದು ಸಣ್ಣ ಡಬ್ಬಿಯಿಂದ ಪಿಂಪ್, ಪಿಂಪ್ ಶಬ್ದ ಬಂತು. ಕೆಂಪು ದೀಪ ಬಂದು ಆರಿಹೋಯಿತು. ಅದರಲ್ಲಿದ್ದ ಗುಂಡಿ ಒತ್ತಿ, ದೂರವಾಣಿ ಮೂಲಕವೇ ರೋಗಿಗೆ ಏನೇನು ಔಷಧಿ ಕೊಡಬೇಕೆಂದು ಹೇಳಿ ಪುನಃ ತಿಂಡಿಗೆ ಬಂದರು. ನಾನು ಬೆಲ್ಟಿನಲ್ಲಿ ಕಟ್ಟಿದ್ದ ಡಬ್ಬಿಯ ಬಗ್ಗೆ ಕೇಳಿದೆ ಕೃಷ್ಣಪ್ಪ ವಿವರ ಕೊಟ್ಟರು"[53] ಮನೆಯಲ್ಲಿದ್ದರೂ ಕೂಡಾ ವೈದ್ಯರಿಗೆ ಬಿಡುವುದಿಲ್ಲರುವುದು ಕಂಡುಬರುತ್ತದೆ. ವೈದ್ಯರು ಕೆಲಸ ಮಾಡುವ ಆಸ್ಪತ್ರೆಯಲ್ಲಿ ವೈರ್‌ಲೆಸ್‌ನ ಗುಂಡಿ ಒತ್ತಿದರೆ, ವೈದ್ಯರು ಬೆಲ್ಟಿಗೆ ಹಾಕಿಕೊಂಡಿರುವ ಡಬ್ಬಿಯಲ್ಲಿರುವ ಯಂತ್ರ ಶಬ್ದ

ಮಾಡುತ್ತದೆ. ಆ ನಂತರ ಸಣ್ಣ ಕೆಂಪು ದೀಪ ಕಾಣಿಸಿಕೊಳ್ಳುತ್ತದೆ. ಆಗ ವೈದ್ಯರು ತಕ್ಷಣ ಆಸ್ಪತ್ರೆಗೆ ದೂರವಾಣಿ ಮಾಡುತ್ತಾರೆ. ಆಸ್ಪತ್ರೆಯಲ್ಲಿ ಸಹಾಯಕ ವೈದ್ಯರಾಗಲಿ, ನರ್ಸ್‌ಗಳಾಗಲಿ ರೋಗಿಯ ಖಾಯಿಲೆ ವಿವರಕೊಟ್ಟು ಅಥವಾ ಗಂಭೀರ ಸ್ವರೂಪದ್ದಾಗಿದ್ದರೆ ತಕ್ಷಣ ಏನು ಔಷಧಿ ಕೊಡಬೇಕೆಂದು ಹೇಳುತ್ತಾರೆ. ಆನಂತರ ನೇರವಾಗಿ ಆಸ್ಪತ್ರೆಗೆ ಹೋಗಿ ಉಪಚರಿಸುತ್ತಾರೆ. ಊರನ್ನು ಬಿಟ್ಟು ಹೊರಗಡೆ ಹೋಗುವಾಗ ಇನ್ನೊಬ್ಬ ವೈದ್ಯರಿಗೆ ಹೇಳಿ ಹೋಗಬೇಕಾಗುತ್ತದೆ. ಈ ವಿವರ ಗಮನಿಸಿದಾಗ ಆಧುನಿಕವಾಗಿ ಎಷ್ಟೊಂದು ಮುಂದುವರೆದಿದ್ದಾರೆ ಎನ್ನುವುದಲ್ಲದೆ ಅಮೇರಿಕದಲ್ಲಿನ ವೈದ್ಯರ ನಿರಂತರ ಸೇವಾ ಮನೋಭಾವನೆ ಮೆಚ್ಚುವಂತದ್ದಾಗಿದೆ.

ಲೇಖಕರ ಮಿತ್ರರಾದ ರಾಥ್‌ಪ್ಯಾಡ್‌ಲಾಗ್ ಅವರ ಬಳಿ ಎಪ್ಪತ್ತೈದರಿಂದ ಎಂಬತ್ತು ವರ್ಷದ ಮುದುಕಿ ಪಿಯಾನೋ ಕಲಿಯಲು ಬಂದಿದ್ದು ನೊಡಿ ಆಶ್ಚರ್ಯ ಪಟ್ಟಿದ್ದಾರೆ. ಆಕೆಯನ್ನುದ್ದೇಶಿಸಿ ಲೇಖಕರು "ಈ ವಯಸ್ಸಿನಲ್ಲಿ ಪಿಯಾನೋ ಕಲಿಯುತ್ತಿದ್ದೀರಿ ಇದರಿಂದ ಏನು ಪ್ರಯೋಜನ? ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಆಕೆ "ನನಗೆ ಈಗಲೆ ಬೇಕಾಗಿರುವುದು ಚಿಕ್ಕ ವಯಸ್ಸಿನಲ್ಲಿ ಬೇಕಾದಷ್ಟು ಕೆಲಸ ಇತ್ತು. ಸಂಗೀತ ಕಲಿಯುವ ಹವ್ಯಾಸಕ್ಕೆ ಹೋಗಲಿಲ್ಲ ಈಗ ಬಿಡುವಾಗಿದ್ದೇನೆ ಮಾಡಲು ಏನೂ ಕೆಲಸವಿಲ್ಲ. ಮನುಷ್ಯ ಹರ್ಷವಾಗಿರಬೇಕಾದರೆ ಸಂಗೀತದಿಂದ ಮಾತ್ರ. ನಾನು ಒಬ್ಬಳೇ ಇದ್ದಾಗ, ಇದರಿಂದ ಸಂತೋಷವಾಗಿರಬಹುದು. ಅದಕ್ಕಾಗಿ ಈಗ ಪಿಯಾನೋ ಕಲಿಯುತ್ತಿದ್ದೇನೆ. ಆನಂದ ನೀಡುವ ವಿದ್ಯೆ ಕಲಿಯಲು ವಯಸ್ಸು ಎಷ್ಟಾದರೇನು?"[54] ಎಂದು ಹೇಳುವ ಆಕೆಯನ್ನು ಲೇಖಕರು ನೋಡಿ, ಆಕೆಯ ಈ ಮಾತಿನಿಂದ ಅಪಾರ ಸಂತೋಷಪಟ್ಟಿದ್ದಾರೆ.

ಅಮೇರಿಕನ್ ಮಕ್ಕಳಲ್ಲಿ ತಮ್ಮ ಭವಿಷ್ಯದ ಬಗ್ಗೆ ಚಿಂತಿಸುತ್ತಾರೆ. ಒಂದು ಧ್ಯೇಯ ಹೊಂದಿದ್ದು ಅದನ್ನು ಸಾಧಿಸಲು ಯತ್ನಿಸುತ್ತಾರೆ. ಆದರೆ ಭಾರತದಲ್ಲಿ ಇದಕ್ಕೆ ವ್ಯತಿರಿಕ್ತ ಎನ್ನುತ್ತಾರೆ. ಕಂಪ್ಯೂಟರ್ ಬಗ್ಗೆ ಆಸಕ್ತಿ ಇರುವ ಹತ್ತನೇ ತರಗತಿಯ ವಿದ್ಯಾರ್ಥಿಗೆ ಮುಂದೆ ನೀನು ಏನು ಓದುತ್ತೀಯಾ? ಎಂದು ಕೇಳಿದ್ದಾಗ ಅದಕ್ಕೆ ಆ ಹುಡುಗ ತಕ್ಷಣ "ನನು ಕಂಪ್ಯೂಟರ್ ಇಂಜಿನಿಯರ್ ಆಗುತ್ತೇನೆ ಈಗಾಗಲೇ ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ನೋಡಿ, ಅದಕ್ಕೆ ಬೇಕಾದ ಪತ್ರಿಕೆಗಳಿವು" ಎಂದು ತೋರಿಸುತ್ತಾನೆಂದು ತಿಳಿಸುತ್ತಾರೆ. ಹೀಗೆ ಅಲ್ಲಿಯ ಪ್ರತಿ ಮಗುವಿಗೂ ತನ್ನ ಭವಿಷ್ಯದ ಚಿಂತನೆ ಇರುತ್ತದೆ ಎನ್ನುವುದು ತೋರಿಸಿದ್ದಾರೆ.

ಭಾರತದಲ್ಲಿನ ಮಕ್ಕಳನ್ನು, ಕಾಲೇಜು ವಿದ್ಯಾರ್ಥಿಗಳನ್ನು ಅವರ ಭವಿಷ್ಯತ್ತಿನ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಿದರೆ; ಅವರು ವಿದ್ಯಾಭ್ಯಾಸ ಮುಗಿಸಿದ ಮೇಲೆ ಯೋಚಿಸುತ್ತೇವೆ. ತಂದೆಯನ್ನು ಕೇಳಬೇಕು. ತಾಯಿಯ ಆಸಕ್ತಿ ಏನು ತಿಳಿಯಬೇಕು. ಹಣವಿಲ್ಲ. ಹೀಗೆ ಏನೋ ಉತ್ತರ ಹೇಳಿ, ತಪ್ಪಿಸಿಕೊಳ್ಳಲು ಯತ್ನಿಸುತ್ತಾರೆ ಎನ್ನುವ ಲೇಖಕರು ಭಾರತೀಯರಿಗೆ ಭವಿಷ್ಯದ ಬಗ್ಗೆ ಒಂದು ದೃಢವಾದ ನಿಲುವು, ಧ್ಯೇಯ ಇಲ್ಲದಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತಲೇ, ಅಮೇರಿಕದಲ್ಲಿರುವ ಭಾರತೀಯ ಮಕ್ಕಳ ಸಮಸ್ಯೆಗಳನ್ನು ಕುರಿತು ಒಂದು ಚರ್ಚಾಕೂಟದ ಮೂಲಕ ತಿಳಿದುಕೊಂಡಿದ್ದಾರೆ. ಅಲ್ಲಿಯ ತಂದೆ-ತಾಯಿಯರು, ಮಕ್ಕಳು ಹೇಗಿರಬೇಕು? ಅನ್ನುವ ವಿಚಾರ ಮಾತನಾಡಿದಾಗ ಆ ತಂದೆ-ತಾಯಿಗಳು ತಮ್ಮ ಮಕ್ಕಳು ಭಾರತದ ಸಂಸ್ಕೃತಿಯನ್ನು ಮರೆಯಬಾರದು. ದೇವಸ್ಥಾನಗಳಿಗೆ ಹೋಗಬೇಕು, ಭಾರತೀಯ ಉಡುಪನ್ನು ಹಾಕಬೇಕು. ಅಮೇರಿಕ ದೇಶದವರಂತೆ ನಡೆದುಕೊಳ್ಳಬಾರದು, ಭಾರತದ ಸಂಸ್ಕೃತಿ, ಸಂಗೀತ ಕಲಿಯಬೇಕು. ಭಾರತೀಯರೊಂದಿಗೆ ಸ್ನೇಹ ಬೆಳೆಸಬೇಕೆಂಬ ಅನೇಕ ವಿಚಾರವನ್ನು ವ್ಯಕ್ತಪಡಿಸುತ್ತಾ, ಮಕ್ಕಳಿಗೆ ಉಪದೇಶ ನೀಡುವುದನ್ನು, ನಂತರ ಯುವಕರು ಮಾತನಾಡುವುದರಲ್ಲಿ ಎಂಟರಿಂದ ಹತ್ತು ವರ್ಷದ ಹುಡುಗಿ ಧೈರ್ಯವಾಗಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಹೀಗೆ ನೋಡಬಹುದು. "ನೀವು ಹಿರಿಯರು ದೊಡ್ಡವರು ಉಪದೇಶ ಮಾಡುವುದು ಸರಿ. ನಾವು ಅಮೇರಿಕ ದೇಶದಲ್ಲಿದ್ದೇವೆ. ಅಮೇರಿಕದ ಯುವಕರಿಗೆ ಸ್ವಾತಂತ್ರ್ಯವಿದೆ. ಅವರು ಇಚ್ಛೆ ಬಂದಂತೆ ನಡೆದುಕೊಳ್ಳುವರು. ನಾವು ಇಲ್ಲಿಯೇ ಜನಿಸಿ, ಇಲ್ಲಿಯೇ ಬೆಳೆದು ಅಮೇರಿಕಾದ ಪ್ರಜೆಗಳಾಗಿದ್ದೇವೆ. ಇಲ್ಲಿಯ ಪ್ರಜೆಗಳಂತೆ ನಾವು ಬೆಳೆಯಬಾರದೆ? ಭಾರತದ ಯುವಕರಂತೆ ಬೆಳೆಯುವ ನಿರ್ಬಂಧ ನಮಗೇಕೆ? ದೇವಸ್ಥಾನಕ್ಕೆ ಏಕೆ ಹೋಗಬೇಕು, ಸಂಗೀತ ಕಲಿಯದಿದ್ದರೆ ಆಗುವ ನಷ್ಟವೇನು? ಅಮೇರಿಕಾದ ಹುಡುಗರೇಲ್ಲಾ ಕೆಟ್ಟವರೆ? ಅಮೇರಿಕದಲ್ಲಿ ಇದ್ದ ಮೇಲೆ ನಾವು ಅವರಂತೆ ನಡೆಯುತ್ತೇವೆ. ಹೆಚ್ಚಾಗಿ ಟಿ.ವಿ. ನೋಡಬಾರದು, ಶನವಾರ, ಭಾನುವಾರ ಎಲ್ಲಿಯೂ ಹೋಗಬಾರದು ಎಂಬ ನಿರ್ಬಂಧ ಸರಿಯೇ? ಅಮೇರಿಕಾದ ಯುವಕರು ನಮ್ಮ ಸ್ನೇಹಿತರು. ಅವರೆಲ್ಲರೂ ಶನಿವಾರ, ಭಾನುವಾರ ಏನು ಮಾಡಿದರು ಎಂದು ವಿವರಿಸುತ್ತಾರೆ. ನಾನು ಎಲ್ಲಿಯೂ ಹೋಗಲಿಲ್ಲ. ಟಿ.ವಿ. ನೋಡಲಿಲ್ಲ ಅಂದರೆ ಹಾಸ್ಯ ಮಾಡುವುದಿಲ್ಲವೆ? ಈ ದೇಶದಲ್ಲಿರುವವರು ಸ್ವತಂತ್ರವಾಗಿ ಆಲೋಚಿಸುವರು. ಹೆದರುವುದು ಬೇಕಿಲ್ಲ, ನಮ್ಮನ್ನು ಬಲವಂತ ಮಾಡುವಿರಿ! ನೀವು ಹೇಳುವ ಹಾಗೆ ಮಾಡಬೇಕಾದರೆ ನೀವೇಕೆ ಅಮೇರಿಕ ದೇಶಕ್ಕೆ ಬಂದಿರಿ! ಇಲ್ಲೇ ಏಕೆ ನೆಲಸಿದ್ದಿರಾ? ಚಿಕ್ಕ ವಯಸ್ಸಿನಲ್ಲಿ ನೀವು ಭಾರತದಲ್ಲಿ ಏನು ಮಾಡಿದರೋ ಅದೇ ರೀತಿ ನಿಮ್ಮ ಮಕ್ಕಳಾದ ನಾವು ಅಮೇರಿಕದಲ್ಲಿ

ನಡೆಯಬೇಕೆಂದು ಏಕೆ ಹೇಳುತ್ತೀರಾ? ಇದು ಹೇಗೆ ಸಾಧ್ಯ?[55] ಎಂದು ಆ ಹುಡುಗಿ ಹಾಕಿದ ಸವಾಲಿಗೆ ಉತ್ತರಿಸಲು ಕಷ್ಟವಾಯಿತೆಂದು ತಿಳಿಸುತ್ತಾ, ಅಮೇರಿಕಾಕ್ಕೆ ಬಂದು, ಅಲ್ಲಿ ನೆಲೆಸಿ ಆ ದೇಶದಂತೆ ಇದ್ದು, ಮಕ್ಕಳು ಮಾತ್ರ ಭಾರತೀಯರಂತೆ ಇರಬೇಕು ಎಂದು ಬಯಸುವುದು ಖಂಡಿತ ತಪ್ಪು ಎನ್ನುತ್ತಾರೆ ಹಾಗೂ ಅಲ್ಲಿನ ತಂದೆ-ತಾಯಿಗಳಿಗೆ ಇದು ಬಿಡಿಸಲಾಗದ ಸಮಸ್ಯೆ ಎಂದು ತಿಳಿಸುತ್ತಾರೆ.

ಅಮೇರಿಕದ ಅನರಕ್ಷತೆ ಸಮಸ್ಯೆ ಪ್ರಕಾಶವಾಗದೆ ಗುಪ್ತವಾಗಿದೆ ಎಂದು ಹೆಳುತ್ತಾ, ಕೆಲವು ಯುವಕರಿಗೆ ಓದಲು ಬರೆಯಲು ಬರುವುದಿಲ್ಲ ಇದನ್ನು ಭಯದ ತೊಡಕಿನಿಂದಾಗಿ ಗುಪ್ತವಾಗಿಡಲಾಗಿದೆ. ಆಗಾಗ ಪ್ರಕಟಗೊಳ್ಳುವ ಸುದ್ಧಿ ಸಮಾಚಾರದಲ್ಲಿ ಆಶ್ಚರ್ಯಕರವಾದ ನೈಜ ವಿಷಯ ಬಹಿರಂಗಗೊಂಡಿದೆ ಎನ್ನುವುದನ್ನು ಲೇಖಕರು ಒಂದು ಘಟನೆಯ ಮೂಲಕ ಹೀಗೆ ತಿಳಿಸುತ್ತಾರೆ. 'ಚಿಕಾಗೋದಲ್ಲಿ ನಡೆದಿರುವುದು', "ಒಬ್ಬ ರೈತ ಓದಲು ಬರದೆ ಹಸುಗಳ ಮಂದೆಯನ್ನೇ ಹಾಳು ಮಾಡಿದ. 'ವಿಷ' ಎಂಬ ಪದವನ್ನು ಓದಲು ಬಾರದೆ ಹಸುವಿನ ಆಹಾರದ ಪಟ್ಟಣ ಎಂದು ತಿಳಿದು ಹಸುಗಳಿಗೆ ವಿಷ ಹಾಕಿ ಅವುಗಳ ಸಾವಿಗೆ ಕಾರಣನಾದ"[56] ಅನಕ್ಷರತೆ ಎಂಬ ಪದ ಭಾರತಕ್ಕಂತೂ ಸರ್ವೇಸಾಮಾನ್ಯ. ಇದನ್ನು ತೊಡೆದು ಹಾಕಲು ಭಾರತ ಸರ್ಕಾರ ಹಲವಾರು ಕಾರ್ಯಕ್ರಮ ಹಾಕಿಕೊಂಡಿದೆ. ಪ್ರಪಂಚದಲ್ಲಿಯೇ ಮುಂದುವರೆದ ರಾಷ್ಟ್ರ ಎಂದು ಹೆಸರು ಪಡೆದಿರುವ ಅಮೇರಿಕ ದೇಶದಲ್ಲಿ ಅನಕ್ಷರತೆ ಇದೆ ಎಂದರೆ ನಂಬಲು ಕಷ್ಟ. ಎಂದು ಲೇಖಕರು ಆಶ್ಚರ್ಯ ಸೂಚಿಸಿದ್ದರೂ ನಂಬಲೇಬೇಕಾದ ಅಂಶವೆಂದು ಈ ಮೂಲಕ ತಿಳಿಸುತ್ತಾರೆ. "ಅಮೇರಿಕದ ಸೆನೆಟ್, ಶಿಕ್ಷಣದ ಉಪಸಮಿತಿ ಜಂಟಿಯಾಗಿ ನೀಡಿರುವ ಹೇಳಿಕೆ ಪ್ರಕಾರ ಅರವತ್ತರಿಂದ ಎಂಬತ್ತು ದಶಲಕ್ಷ ಅಮೇರಿಕಾದ ಪ್ರಜೆಗಳಿಗೆ ಓದಲು ಬರುವುದಿಲ್ಲ. ಪ್ರತಿ ನಿತ್ಯ ಬರುವ ಪತ್ರಿಕೆಗಳು, ಆದಾಯ ತೆರಿಗೆ ಸೂಚನೆ, ಔಷಧದ ಬಾಟಲ್ ಮೇಲಿರುವ ಎಚ್ಚರಿಕೆ, ಅತ್ಯಗತ್ಯವಾದ ಸಲಹೆಗಳನ್ನು ಓದಲು ಬರುವುದಿಲ್ಲ. ಸಹಿ ಹಾಕಲು ಬರುವವರೆಲ್ಲ ಅಕ್ಷರಸ್ಥರಲ್ಲಾ ಎಂಬುದು ಆ ದೇಶದವರ ಅಭಿಮತ"[57] ಶಿಕ್ಷಣ ಕ್ಷೇತ್ರದಲ್ಲಿ ಅಮೇರಿಕ ಎಡೆವಿರುವುದು ಲೇಖಕರ ಮನಸ್ಸಿಗೆ ಖೇದವೆನಿಸಿದರೂ, ಅನಕ್ಷರತೆಯನ್ನು ಹೋಗಲಾಡಿಸಲು ಆ ದೇಶದಲ್ಲಿ ಸ್ವಯಂ ಸೇವಕರ ತಂಡ ಕಾರ್ಯಪ್ರವೃತ್ತವಾಗಿದೆ. ಎಂದು ತಿಳಿಸುತ್ತಾರೆ. ಅಮೇರಿಕಾದ ಎಲ್ಲಾ ರಾಜ್ಯಗಳಲ್ಲು ಓಡಾಡಿ ವಿದ್ಯಾರ್ಥಿಗಳಿಗೆ ಎಲ್ಲಾ ವಯಸ್ಸಿನವರಿಗೆ ಶುಲ್ಕವಿಲ್ಲದೆ ಭೋಧಿಸುತ್ತಾರಂತೆ. ಅಂಥವರನ್ನು ಲೇಖಕರು ಭೇಟಿಯಾಗಿ ಅವರ ಉತ್ಸಾಹವನ್ನು ಮೆಚಿಕೊಳ್ಳುತ್ತಾ, ಅಲ್ಲಿನ ಸ್ವಯಂಭೋಧನೆ ಬಹಳಷ್ಟು ಅನುಕೂಲವಾಗಿದೆ ಎನ್ನುತ್ತಾರೆ. ಅಲ್ಲದೆ, ಭಾರತದೇಶವು ಸಹ ಸ್ವಾತಂತ್ರ್ಯವಾಗಿ ಇಂಥ ಕಾರ್ಯದಲ್ಲಿ ತೊಡಗಲು ಈ

ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕು. ಆದರಿಂದ ನಮ್ಮ ಸರ್ಕಾರ ಕಾರ್ಯಪ್ರವೃತರಾದಲ್ಲಿ ಅನಕ್ಷರತೆಯನ್ನು ಹೋಗಲಾಡಿಸಲು ಸಾಧ್ಯವಾಗಬಹುದು ಎಂದು ಲೇಖಕರು ಸಲಹೆಯನ್ನು ಸೂಚಿಸಿದ್ದಾರೆ.

ಸಾರ್ವಜನಕ ಮತ್ತು ಇತರರ ಆಸ್ತಿ ಬಗ್ಗೆ ಅಮೇರಿಕನ್ನರ ಮನೋಭಾವ ಉತ್ತಮವಾಗಿದೆ ಎಂದು ತಿಳಿಸುತ್ತಾ ಈ ನಿದರ್ಶನವನ್ನು ನೀಡುತ್ತಾರೆ. "ದಾರಿಯಲ್ಲಿನ ಹಣ್ಣಿನ ತೋಟದಲ್ಲಿ, ಮರದ ತುಂಬ ಹಣ್ಣುಗಳು. ಮರದಡಿ ಸಾವಿರಾರು ಸೇಬು ಹಣ್ಣುಗಳು ಬಿದ್ದಿದ್ದವು. ಕೊಳೆಯುತ್ತಿದ್ದರು ಯಾರು ಮುಟ್ಟಿರಲ್ಲಿಲ್ಲ. 'ಇದೇಕೆ'? ಎಂದು ಕೇಳಿದೆ "ಈ ದೇಶದಲ್ಲಿ ಗಿಡಗಳು ಸಾರ್ವಜನಿಕರ ಸ್ವತ್ತಾದ್ದರಿಂದ ಯಾರೂ ಮುಟ್ಟುವುದಿಲ್ಲ. ಕೆಳಗಡೆ ಬಿದ್ದು ಕೊಳೆತರೂ ಯಾರೂ ತೆಗೆದುಕೊಳ್ಳುವುದಿಲ್ಲ ಎಂದರು"[58] ಎನ್ನುವಲ್ಲಿ ಲೇಖಕರು ಅಮೇರಿಕಾದ ಸಾಮಾಜಿಕ ಬದುಕಿನ ಚಿತ್ರವನ್ನು ತಮ್ಮ ಪ್ರವಾಸಕಥನ ಮೂಲಕ ತೋರಿಸುವುದರೊಂದಿಗೆ ಅಮೇರಿಕದ ಬಗ್ಗೆ ಸಾಕಷ್ಟು ಮಾಹಿತಿಗಳನ್ನೋದಗಿಸಿದ್ದಾರೆ.

**ಅಪರವಯಸ್ಕನ ಅಮೇರಿಕಾಯಾತ್ರೆ – ಎ.ಎನ್. ಮೂರ್ತಿರಾವ್ :**

ಲೇಖಕರು ಮಗ–ಸೊಸೆಯ ಆಹ್ವಾನದೊಂದಿಗೆ, ಮೊಮ್ಮಗನನ್ನು ನೋಡಬೇಕೆಂಬ ಸೆಳೆತದ ಮೇರೆಗೆ ಎಪ್ಪತ್ಮೂರರ ಅಪರ ವಯಸ್ಸಿನಲ್ಲಿ ಅಮೇರಿಕಾ ಪ್ರವಾಸ ಕೈಗೊಂಡು, ಪ್ರವಾಸಕಾಲದಲ್ಲಿ ಪಡೆದ ಅನುಭವಗಳನ್ನು 'ಅಪರವಯಸ್ಕನ ಅಮೆರಿಕಾಯಾತ್ರೆ' ಔಚಿತ್ಯಪೂರ್ಣ ಶೀರ್ಷಿಕೆಯೊಂದಿಗೆ ಸ್ವಾರಸ್ಯಯುತವಾಗಿ ನಿರೂಪಿಸಿದ್ದಾರೆ.

ಅಮೇರಿಕಾದಲ್ಲಿ ಲೇಖಕರ ಗಮನ ಸೆಳೆದದ್ದು ಮೊದಲು ರಸ್ತೆಗಳು, ಕಾರು ಪಾರ್ಕು ಮಾಡುವ ಸ್ಥಳಗಳು, ತಿರುಗಾಡುವ ಕಾಲುದಾರಿಗಳು ಮತ್ತು ಮನೆಗಳು ಹಾಗೂ ಮಕ್ಕಳು ಆಡುವ ಸ್ಥಳಗಳು ಮುಂತಾದವು. ಅಲ್ಲಿಯ ಜೀವನ ಕ್ರಮದ ಪರಿಚಯ ಹೆಚ್ಚಿದಂತೆ ಇದು ಹೇಗೋ ಅದು ಹೇಗೋ ಎಂಬ ಮನಸ್ಸಿನ ಅನಿಶ್ಚಿತತೆ, ಅಸ್ಥಿರತೆ ಕಡಿಮೆಯಾಗಿ ತಮ್ಮ ದೈನಂದಿನ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದಾರೆ.

ಲೇಖಕರು ದೆಹಲಿಯಲ್ಲಿ ಕಲ್ಕತ್ತೆಯಲ್ಲೂ ದೊಡ್ಡ ದೊಡ್ಡ ಅಂಗಡಿಗಳನ್ನು ನೋಡಿದ್ದರೂ 'ಇಲ್ಲಿರುವಂಥ ಬೃಹತ್ ಪ್ರಮಾಣದ ಸ್ಟೋರುಗಳನ್ನು ಇದುವರೆಗೆ ನೋಡಿರಲಿಲ್ಲ ಎನ್ನುತ್ತಾರೆ. "ಸಿಯರ್ಸ್, ವಾಲ್‌ಗ್ರೀನ್ಸ್, ಜುಯಲ್, ಪೆನ್ನಿ ಮೊದಲಾದ ಸ್ಟೋರುಗಳನ್ನು ದೈತ್ಯ ವರ್ತಕರು ದೈತ್ಯ ಗಿರಾಕಿಗಳಿಗಾಗಿ ಸ್ಥಾಪಿಸಿರಬೇಕು

ಎನಿಸುತ್ತದೆ. "ತಾವು ಹೋದದ್ದು ಪೆನ್ನಿ ಸ್ಟೋರಿಗೆ. ಅದು ನಮ್ಮ ಮನೆಯ ಹತ್ತಿರದಲ್ಲಿರುವ ವ್ಯಾಪಾರಕೇಂದ್ರದಲ್ಲಿದೆ. ಈ ಡಿಪಾರ್ಟ್‌ಮೆಂಟ್ ಸ್ಟೋರು ಸುಮಾರು 500 ಅಡಿ ಉದ್ದ, 500 ಅಡಿ ಅಗಲ ಇರಬಹುದು! ಅದಿರುವುದು ಷಿಕಾಗೋ ನಗರದ ಮಧ್ಯದಲ್ಲಲ್ಲ, ಅಲ್ಲಿಗೆ 15 ಮೈಲಿ ದೂರದಲ್ಲಿರುವ ಉಪನಗರದಲ್ಲಿ. ಉಪನಗರದ ಜನಸಂಖ್ಯೆ ಸುಮಾರು 45000 ಅದನ್ನು 'ನೈಲ್ಸ್ ಹಳ್ಳಿ'–The Village of Niles ಎಂದು ಕರೆಯುತ್ತಾರೆ. ಅಮೇರಿಕದ ಆಡಳಿತ ಪರಿಭಾಷೆಯಲ್ಲಿ Village ಎಂಬ ಪದ ಜನಸಂಖ್ಯೆಯನ್ನು ಮಾತ್ರ ಸೂಚಿಸುತ್ತದೆಯಂತೆ. ಈ ಸಣ್ಣ ಊರಿನಲ್ಲಿ ಮೇಲೆ ಹೆಸರಿಸಿದುವಲ್ಲದೆ ಕೆ ಮಾರ್ಟ್, ಗೋಲ್ಡ್ ಬ್ಲಾಟ್ಸ್ ಮುಂತಾದ ಬೃಹತ್ಪ್ರಮಾಣದ ಸ್ಟೋರುಗಳು ಹತ್ತಾರು ಇವೆ. ಇಲ್ಲಿಯ ಜನರ ಕೊಳ್ಳುವ ಶಕ್ತಿ ಎಷ್ಟಿದೆಯೆಂಬುದನ್ನು ಇದರಿಂದ ಊಯಿಸಬಹುದು".[59] ಎಂದು ಲೇಖಕರು ತಾವು ನೋಡಿದ ವ್ಯಾಪಾರ ಕೇಂದ್ರಗಳ ಪರಿಪೂರ್ಣ ಮಾಹಿತಿಯನ್ನು ತಿಳಿಸುತ್ತಾರೆ.

ಬ್ರುಕ್ಲಿನ್ ಮೃಗಾಲಯಕ್ಕೆ ಹೋಗುವಾಗ ಅಲ್ಲಿನ ರಸ್ತೆ, ಕಾಡನ್ನು ವರ್ಣಿಸಿದ್ದಾರೆ. ಅವರ ಸಾಗುವ ರಸ್ತೆ ಹೆದ್ದಾರಿಯಲ್ಲಿ, ಇಕ್ಕೆಲದಲ್ಲೂ ಹುಲ್ಲುಗಾವಲಿನ ಹರವು, ಕಾಡಿನ ದಟ್ಟಣೆ, ಹಸುರಿನ ಸೂರೆ, ಮುಕ್ಕಾಲು ದಾರಿ ರಕ್ಷಿತವನವೊಂದರ ನಡುವೆ ಹೋಗುವುದು, ಅಲ್ಲಲ್ಲೇ ಗಾಲ್ಫ್ ಆಡಲು ಅನುಕೂಲವಾಗುವಂತೆ ಕಾಡನ್ನು ಅಳವಡಿಸಿಕೊಂಡಿರುವುದು, ಇಂಥ ಕಡೆಗಳಲ್ಲಿ ಬಣ್ಣ ಬಣ್ಣದ ಉಡುಪು ಧರಿಸಿ ಜನ ತಿರುಗಾಡುತ್ತಿರುವುದು. ಇದರಿಂದ ಪ್ರಕೃತಿಯ ಸೊಬಗಿಗೆ ಯಾವ ಭಂಗವೂ ಇಲ್ಲ ಎನ್ನುತ್ತಾರೆ.

ಲೇಖಕರು ಹಸಿವಾದಾಗ ಒಮ್ಮೆ ಸ್ವೀಡಿಷ್ ಹೋಟೆಲ್‌ಗೆ ಹೋಗುತ್ತಾರೆ. ಅದರ ವರ್ಣನೆಯನ್ನು ತಿಳಿಸುತ್ತಾ, ಈ ಹೋಟೆಲು ಮೂರು ಹಂತಗಳುಳ್ಳ ಸುಮಾರು 50 ಅಡಿ ಉದ್ದದ ಗ್ಯಾಲರಿ, ಅದರ ಮೇಲೆ ಸಾಲಾಗಿ ತಿಂಡಿ ತಿನಿಸುಗಳನ್ನು ಇಟ್ಟಿದ್ದರು. ಮಾಂಸಾಹಾರಿಗಳಲ್ಲದ ಲೇಖಕ ಮತ್ತು ಕುಟುಂಬದವರಿಗೆ ಬೇಯಿಸಿದ ಆಲೂಗೆಡ್ಡೆ, ಸೊಪ್ಪು, ಈರುಳ್ಳಿ, ಕೋಸುಗಡ್ಡೆ, ಟೊಮೊಟೊ ಮುಂತಾದವುಗಳನ್ನೊಳಗೊಂಡ ಸ್ಯಾಲಡ್, ಚಟ್ನಿಯಂತಿದ್ದ ಪದಾರ್ಥ(sauce?), ಐಸ್‌ಕ್ರೀಂ, ಸೊಗಸಾದ ಕಾಫಿ, ಬಫೆ ಪದ್ದತಿ, ನಾಲ್ಕಾರು ಪದಾರ್ಥಗಳನ್ನು ತಂದು ರುಚಿ ನೋಡಿ, ಇಷ್ಟವಾದದ್ದನ್ನು ಮತ್ತೆ ತರಬಹುದೆಂದು ಅಮೇರಿಕಾದ ರೆಸ್ಟೋರಾಂಟ್ ಅಥವಾ ಅಲ್ಲಿನ ಹೋಟೆಲ್‌ಗಳ ಸಸ್ಯಹಾರಗಳನ್ನು ತಿಳಿಸಿದ್ದಾರೆ.

ನಮ್ಮ ಜನರ ಮನೋವೃತ್ತಿಗೂ ಅಲ್ಲಿಯ ಜನರ ಮನೋವೃತ್ತಿಗೂ ಸಾಕಷ್ಟು ವ್ಯತ್ಯಾಸ ಇದೆ ಎನ್ನುತ್ತಾರೆ. ಇದನ್ನು ಲೇಖಕರು ಮೃಗಾಲಯಗಳು, ಸರೋವರದ ತೀರದಲ್ಲಿ, ಬೆಟ್ಟದ ತಪ್ಪಲಲ್ಲಿ ವಿಹಾರಕ್ಕಾಗಿ ಬಂದ ಸ್ಥಳಗಳಲ್ಲಿ ಅಲ್ಲಿಯ ಜನರನ್ನು ನೋಡಿ ತಿಳಿದಿದ್ದಾರೆ. "ಈ ಜನ ಗೆಲುವಿನಲ್ಲಿ ಮಕ್ಕಳೊಡನೆ ಸ್ಪರ್ಧೆ ಹೂಡುತ್ತಾರೆ. ನಕ್ಕು ನಲಿದು, ಕೆಲೆದು ಕುಪ್ಪಳಿಸಿ ಹಾಡಿ ಕುಣಿದು ಆನಂದಪಡುತ್ತಾರೆ. ತಮ್ಮ ಸ್ಥಾನಮಾನಗಳು, ವಯಸ್ಸು, ಇತರರೆದುರಿಗೆ ಗಂಭೀರವಾಗಿ ನಡೆದುಕೊಳ್ಳಬೇಕೆಂಬ ಸಭ್ಯ ಮನೋವೃತ್ತಿ, ಕೊನೆಗೆ ತಾನು ಗಂಡು ಅಥವಾ ಹೆಣ್ಣು ಎಂಬುವುದರ ಅರಿವು–ಎಲ್ಲವನ್ನು ಮರೆತು ಹಿಡಿತ ಹಿಂಜರಿಕೆಗಳನ್ನು ಗಾಳಿಗೆ ತೋರಿಕೊಟ್ಟು, ಗೆಲುವಿನಿಂದ ಬದುಕುವ ಶಕ್ತಿ ಇವರಿಗಿದೆ. ಅದು ನಮ್ಮಲ್ಲಿ, ಎಂದೂ ಇರಲಿಲ್ಲವೋ ಅಥವಾ ಹಿಂದೆ ಇದ್ದದನ್ನು ಈಗ ಕಳೆದು ಕೊಂಡಿದ್ದೇವೆಯೋ? ನಂದಾಮ ಶರದಶ್ಯತಾ (ನೂರು ವರ್ಷ ಆನಂದವಾಗಿರೋಣ) ಎಂದವರು ನಮ್ಮ ಪೂರ್ವಿಕರೇ ಹೌದೆ? ನಮ್ಮಲ್ಲಿ ಜೀವನೋತ್ಸಾಹದ ಚಿಲುಮೆ ಬತ್ತಿ ಹೋಗಿದೆಯೇ? ಅಥವಾ... ಅಥವಾ ನಾವು ಅದನ್ನು ನಿಯಂತ್ರಿಸಿ ಉಚಿತ ಪ್ರಮಾಣದಲ್ಲಿ ಮಾತ್ರ ಹೊರಹೊಮ್ಮಿಸುತ್ತಿದ್ದೇವೆಯೊ? ಭಾರತೀಯ ಸಂಸ್ಕೃತಿಗೆ ಹೊಂದಿಕೊಂಡು ಬೆಳೆದವರು ಸ್ತ್ರೀಯರ ವಿಷಯದಲ್ಲಿ ತೋರಿಸುವ ಸಲಿಗೆಯ ಮಿತಿ, ಇತರರೆದುರಿಗೆ ಪ್ರೇಮ ಪ್ರದರ್ಶನ ಮಾಡುವ ವಿಷಯದಲ್ಲಿ ಉಳಿಸಿಕೊಂಡಿರುವ ಹಿಂಜರಿಕೆ–ಇದನ್ನು ನೋಡಿದಾಗ ನಮ್ಮಲ್ಲಿರುವುದು ಉತ್ಸಾಹದ ಅಭಾವವಲ್ಲ, ಔಚಿತ್ಯದ ಅಸ್ತಿತ್ವ ಎನಿಸುತ್ತದೆ. ಇದರಲ್ಲಿ ಸತ್ಯಾಂಶವಿದೆಯಾದರೂ ನಮ್ಮ ಬದುಕಿನಲ್ಲಿ ಗೆಲುವನ್ನು ಸ್ವಲ್ಪ ಹೆಚ್ಚಿಸಿಕೊಳ್ಳುವುದು ಬಹುಶ: ಅವಶ್ಯಕ"[60] ಎಂದು ಲೇಖಕರು ತಿಳಿಸುವಲ್ಲಿ ಅಮೇರಿಕನ್ನರ ಮತ್ತು ಭಾರತೀಯರ ಸಂಸ್ಕೃತಿ ಹಾಗೂ ಮನೋವೃತ್ತಿಗಳಲ್ಲಿರುವ ವ್ಯತ್ಯಾಸಗಳನ್ನು ಪರಿಚಯಿಸುವುದರೊಂದಿಗೆ ಅಮೇರಿಕನ್ನರ ಕೆಲವು ಗುಣ ಸ್ವಭಾವಗಳು ಅನುಕರಣೀಯವೆಂಬ ಭಾವನೆಯನ್ನು ತಳೆದಿದ್ದಾರೆ.

ಅಮೇರಿಕಾದ ಪ್ರೀ ಫ್ಯಾಟ್ ಮನೆಗಳು ಲೇಖಕರನ್ನು ಆಕರ್ಷಿಸಿದೆ. ಅವುಗಳ ಪ್ರಮಾಣ ಸುಮಾರು 40X10; ಹೊರಗಿನಿಂದ ನೋಡುವುದಕ್ಕೆ ರೈಲು ಗಾಡಿಯಂತೆ ಕಾಣುತ್ತದೆ. ಇಂತಹ ಮನೆಗಳನ್ನು ಅಮೇರಿಕಾದ ಅನೇಕ ಕಡೆಗಳಲ್ಲಿ ಕಾಣಬಹುದೆನ್ನುತ್ತಾರೆ. ಅವುಗಳನ್ನು ಕಾರ್ಖಾನೆಗಳಲ್ಲಿ ತಯಾರಿಸಿ ಎಲ್ಲಿಗೆಂದರೆ ಅಲ್ಲಿಗೆ ಕಳುಹಿಸಿಕೊಡುತ್ತಾರೆ. ಈ ಮನೆ ಮರದಿಂದ ಮಾಡಿದ್ದು, ಒಳಕ್ಕೆ ಹೋದೊಡನೆ ಒಂದು ದೊಡ್ಡ ಕೊಠಡಿ; ಅದರ ಒಂದು ಕೊನೆಯಲ್ಲಿಗೆ ಅಡಿಗೆ ಮನೆ, ಟಿ.ವಿ., ರೇಡಿಯೋ, ರೆಫ್ರಿಜರೇಟರ್ ಎಲ್ಲ ಅಡಕವಾಗಿರುತ್ತವೆ. ಸೋಫಾಗಳನ್ನು ಹಾಕಿ ಅದನ್ನು ದಿವಾನಖಾನೆಯಾಗಿಯೂ ಉಪಯೋಗುಸುತ್ತಾರೆ. ಅಲ್ಲಿಂದ ಮುಂದೆ ಹೋದರೆ ಮಲಗುವ ಮನೆ, ಅಲ್ಲಿಂದ ಆಚೆಗೆ ಸ್ನಾನ ಹಾಗೂ ಶೌಚಗೃಹ, ನಾನು

ಹಿಂದೆ ಬಣ್ಣಿಸಿದ ಡುಪ್ಲೆಕ್ಸ್ ಮನೆಗಳಂತೆಯೇ ಇದ್ದೂ ಹೊರಗಿನ ಅಂದ ಏನೂ ಇಲ್ಲ; ಒಳಗಿನ ಅನುಕೂಲ ಅಚ್ಚುಕಟ್ಟುಗಳನ್ನು ಎಷ್ಟು ಹೊಗಳಿದರೂ ತೀರದು. ಈ ಮನೆಗೆ ನೂರು ಅಡಿ ದೂರದಲ್ಲಿ ಕಾರಿಗೆ ಲಗತ್ತು ಮಾಡಬಹುದಾದ ಟ್ರೇಲರನ್ನು ನಿಲ್ಲಿಸಿದ್ದಾರೆ. ಅದು ಒಂದು ಮನೆಯೇ? ಮನೆಯ ಸುತ್ತ ಹುಲ್ಲುಗಾವಲು' ಹತ್ತಾರು ಮರಗಳು, ನಾವು ಅಲ್ಲಿಗೆ ಹೋದ ಸಮಯದಲ್ಲಿ ಸೂರ್ಯ ರಚಿಸಿದ್ದ ನೆರಳು–ಬೆಳಕುಗಳ ಚಿತ್ರ ಬಹು ಸುಂದರವಾಗಿತ್ತು. ಮಳೆ ಬಂದರೆ ಕೆಸರಾಗದಿರಲೆಂದು ನಡೆಯುವ ದಾರಿಯಲ್ಲಿ ಸಣ್ಣ ಹರಳುಗಳನ್ನು ಹರಡಿದ್ದಾರೆ. ದಾರಿಯ ಮತ್ತು ಮನೆಯ ಪಕ್ಕದಲ್ಲಿ ಹೂವಿನ ಗಿಡಗಳು, ನಾವು ಹೋದ ದಿನ ಗುಲಾಬಿಯ ಹೂವಿನಂತಿದ್ದ, ಹಿತವಾದ ಪರಿಮಳವನ್ನು ಬೀರುತ್ತಿದ್ದ ಒಂದು ಜಾತಿಯ ಹೂ ಬೇಕಾದ ಹಾಗೆ ಅರಳಿತ್ತು. ಇದು ಕವನಗಳಲ್ಲಿ ನನಗೆ ಪರಿಚಿತವಾಗಿದ್ದ ಪಿಯೋನಿ ಎಂದು ಅಮೇಲೆ ತಿಳಿಯಿತು. ಒಟ್ಟಿನಲ್ಲಿ ಊರಿಗೆ ಹತ್ತಿರವಾಗಿದ್ದು ವಿವಿಕ್ತವಾಗಿ ಗಲಭೆ ಇಲ್ಲದ ಸ್ಥಳದಲ್ಲಿರುವ ಆ ಮನೆಯ ಸನ್ನಿವೇಶ ಬಹಳ ಆಕರ್ಷಕವಾದದ್ದು[61] ಎಂದು ಲೇಖಕರು ಮರದ ಮನೆಗಳ ವರ್ಣನೆ ಮಾಡುತ್ತಾರೆ.

ಲೇಖಕರಿಗೆ ಹೆಚ್ಚು ಆಕರ್ಷಕವಾಗಿ ದಿವ್ಯ ದೃಶ್ಯವೆನಸದ್ದು 'ಡಾಲ್ಫಿನ್ ಪ್ರದರ್ಶನ'. "ಅದು ಸುಮಾರು 100 ಅಡಿ ಉದ್ದ, 30–35 ಅಡಿ ಅಗಲದ ದೊಡ್ಡ ಕೊಳ, ನೀರಿನ ಆಳ 14 ಅಡಿ. ಅದರಲ್ಲಿ 4–5 ಪಳಗಿಸಿದ ದಾಲ್ಫಿನ್‌ಗಳು ನೀರೊಳಗಿನ ಬದುಕಿಗೆ ಅನುಕೂಲವಾಗುವಂತೆ ಅವುಗಳ ಶರೀರ ಶತ ಸಹಸ್ರಮಾನಗಳಲ್ಲಿ ಮೀನಿನ ಶರೀರದಂತೆಯೇ ವಿಕಾಸಗೊಂಡಿರುತ್ತದೆ. ಅವು ತಿಮಿಂಗಿಲ ಜಾತಿಗೆ ಸೇರಿದ ಪ್ರಾಣಿಗಳಾಗಿದ್ದು ನಾಯಿಗಳನ್ನು ಪಳಗಿಸಿದಂತೆ ಪಳಗಿಸಿ ಅವುಗಳಿಗೆ ಆಟಗಳನ್ನು ಕಲಿಸಿದ್ದಾರೆ. ಜನ ಸೇರಿದೊಡನೆಯೇ ಅವು ಯಾರ ಮಾತಿಗೂ ಕಾಯದೆ ನೀರಿನಿಂದ 7–8 ಅಡಿ ಎತ್ತರಕ್ಕೆ ಹಾರಿ ಲಾಗ ಹಾಕಲಾರಂಭಿಸುತ್ತವೆ. ನೀರಿಗೆ ಟೋಪಿಯನ್ನೆಸೆದರೆ ಈಜಿಕೊಂಡು ಹೋಗಿ ಅದನ್ನು ತಂದು ಎಸೆದವನ ಕೈಗೆ ಕೊಡುತ್ತವೆ, ಬ್ಯಾಸ್ಕೆಟ್ ಚಂಡನ್ನು ಅದಕ್ಕಾಗಿ ಮಾಡಿದ ಕುಕ್ಕೆಯೊಳಕ್ಕೆ ಗುರಿಯಿಟ್ಟು ಎಸೆಯುತ್ತವೆ. ನಾಲ್ಕಡಿ ವ್ಯಾಸವುಳ್ಳ ದೊಡ್ಡ ಬಳೆಯ ಮೂಲಕ ಶರವೇಗದಿಂದ ತೂರಿ ಹಾರುತ್ತವೆ. 12 ಅಡಿ ಎತ್ತರದಲ್ಲಿ ಆಹಾರವನ್ನು ತೂಗುಬಿಟ್ಟರೆ ಅಷ್ಟೆತ್ತರಕ್ಕೂ ನೆಗೆದು ಅದನ್ನು ಕಚ್ಚಿಕೊಂಡು ಹಾಗೇ ನೀರಿಗೆ ಲಾಗಹಾಕುತ್ತವೆ"[62] ಎಂದು ಹೇಳುತ್ತಾ, ಇಂತಹ ಜಲತರ ಪ್ರಾಣಿಗಳನ್ನು ಪಳಗಿಸಿ, ಮನೋರಂಜನೆಯ ಮೂಲಕ ಹಣ ಸಂಪಾದಿಸುವ ಅಮೇರಿಕನ್ನರ ಜಾಣ್ಮೆ ಮೆಂಚುವಂತದ್ದೆನ್ನುತಾರೆ.

ಈ ಸರ್ಕಸ್‌ನಲ್ಲಿ ಮುಖ್ಯವಾಗಿ ಗಮನಿಸುವಂತದ್ದು ದಾಲ್ಫಿನ್‌ಗಳ ಮುಖದಲ್ಲಿ ಸ್ಪಷ್ಟವಾಗಿ ಕಾಣುವ ಸ್ನೇಹಪರತೆ ಎನ್ನುತ್ತಾ, ಮಕ್ಕಳ ಮುಖದಲ್ಲಿ ಧೈರ್ಯ, ಚೇಷ್ಟೆ, ನಗು ಇವೆಲ್ಲ ಸುಳಿದು ಹೋವುವಂತೆಯೇ ಇವುಗಳ ಮುಖದಲ್ಲೂ ಸುಳಿಯುತ್ತವೆ. ಬೇಕಾದ ತಿಂಡಿಯನ್ನು ಪಡೆಯಲು ಮಕ್ಕಳು ಕಾಡಿ ಬೇಡಿಯೋ ಅತ್ತು ಕರೆದೋ ಕೋಪಗೊಂಡು ನಗುವಿನಿಂದ ತಾಯಿಯನ್ನು ಪ್ರಸನ್ನವಾಗಿಸುವಂತೆ ಇವೂ ಯಜಮಾನರಲ್ಲಿ ಹಾಗೇ ತಂತ್ರಗಳನ್ನು ಬಳಸಿ ತಿಂಡಿಯನ್ನು ಕಸಿದುಕೊಳ್ಳುತ್ತವೆ ಎಂದು ಡಾಲ್ಫಿನ್‌ಗಳ ಮನೋಹರ ವೈಖರಿಗಳನ್ನು ಗಮನಿಸುತ್ತಾ ಲೇಖಕರು ತಮ್ಮ ಮೊಮ್ಮಗನೊಂದಿಗೆ ತಾವು ಆನಂದಪಟ್ಟಿದ್ದಾರೆ. ಅಲ್ಲದೆ ಇಂತಹ ಸ್ಥಳಗಳಿಗೆ ಚಿಕ್ಕ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದು ಒಳ್ಳೆಯದೆಂದು ತಿಳಿಸುತ್ತಾರೆ.

ಲೇಖಕರು ಓಮ್ಮೆ ವೃತ್ತಪತ್ರಿಕೆಯನ್ನು ಓದಿ, ಅಮೇರಿಕೆಯದು ಬೇರೆ ಪ್ರಪಂಚ ಎಂದು ಅಭಿಪ್ರಾಯಪಡುತ್ತಾ, ಆ ವೃತ್ತಪತ್ರಿಕೆಗಳಲ್ಲಿ ಬಂದ ವಿವರಗಳನ್ನು ತಿಳಿಸುತ್ತಾರೆ. ಆ ಮೂಲಕ ಅಲ್ಲಿನ "ಖೂನಿ, ಲೈಂಗಿಕ, ಅತ್ಯಾಚಾರ ಮುಂತಾದ ಅಸಹ್ಯ ಮತ್ತು ಭಯಂಕರ ವಾರ್ತೆ ಇಲ್ಲದಿದ್ದ ದಿನವೇ ಇಲ್ಲ. ನಿನ್ನೆಯ ಪೇಪರಿನಲ್ಲಿ ಯಾವನೋ ಒಬ್ಬ ಏಳು ಜನರನ್ನು–ತನ್ನ ಮನೆಯನವರೇ ನಾಲ್ಕು ಜನ, ನೆರೆಯಮನೆಯವರು ಮೂರು ಜನ–ಕೊಲೆಮಾಡಿದನಂತೆ. ಅವನು ಹಿಂದೆ ಏನೋ ಮನೋರೊಗದಿಂದ ನರಳುತ್ತಿದ್ದನಂತೆ; ಸ್ವಲ್ಪ ದಿನ ಆಸ್ಪತ್ರೆಯಲ್ಲೂ ಇದ್ದ. ಈಗ ಹುಚ್ಚು ಮರುಕಳಿಸಿತೇನೋ ಅಥವಾ ತನ್ನ ರಿವಾಲ್ವರಿಗೆ ಕೆಲಸ ಕೊಟ್ಟು ಬಹಳ ದಿನ ಆಯಿತಲ್ಲ ಎಂದುಕೊಂಡಿರಬಹುದು![63] ಎಂಬ ಘಟನೆಯಲ್ಲದೆ ಅಮೇರಿಕಾಕ್ಕೆ ಹೋದ ಹೊಸತರಲ್ಲಿ ಕೇಳಿದ ವಾರ್ತೆಯನ್ನು ತಿಳಿಸುತ್ತಾರೆ. "ಯಾವನೋ ಒಬ್ಬ ಹದಿನಾಲ್ಕು ವರ್ಷದ ಹುಡುಗನನ್ನು ಕಂಡೊಡನೆ ಗುಂಡಿಟ್ಟು ಕೊಂದ! ದಿನಪತ್ರಿಕೆಗಳಲ್ಲೂ ಮಾಸ ಪತ್ರಿಕೆಗಳಲ್ಲೂ ಓದಿದ್ದಂತೂ ಒಂದಲ್ಲ ಎರಡಲ್ಲ. ಷಿಕಾಗೋ ಊರೋಳಗೆ ತಾನು ಹೋಗಬೇಕಾಗಿದ್ದ ದಾರಿ ಗೊತ್ತಾಗದೆ ಯಾರನ್ನೋ ಕೇಳಿ ಮತ್ತೆ ಕಾರನ್ನು ಹತ್ತುವುದರಲ್ಲದ್ದವನನ್ನು ಯಾವನೋ ಕೊಂದು ಓಡಿ ಹೋದ. ಐವತ್ತೇಳನೇ ಹೆದ್ದಾರಿಯಲ್ಲಿ (ಸಂಖ್ಯೆ ತಪ್ಪಿದ್ದರೂ ಇರಬಹುದು)ಕಾರಿನಲ್ಲಿದ್ದವರಿಬ್ಬರನ್ನು ಗುಂಡಿಟ್ಟು ಕೊಂದರು; ಅವರಲ್ಲಿ ಒಬ್ಬಾಕೆಯ ನಗ್ನಶವ ಬೆನ್ನು ಕೆಳಗಾಗಿ ಬಿದ್ದಿತು. ಎಂಟು ವರ್ಷದ ಹುಡುಗನೊಬ್ಬ ಮನೆಯೊಳಗಿನಿಂದ ರಿವಾಲ್ವರ್ ತಂದು ತನ್ನ 'ಬೇಬಿಸಿಟರ್' (baby sitter)ಅನ್ನು ಕೊಂದ. ಪಾತಕಿಯೊಬ್ಬ ಒಂದು ಮನೆಗೆ ನುಗ್ಗಿ ಮನೆಯ ಯಜಮಾನ ಯಜಮಾನಿತಿಯರಿಬ್ಬರನ್ನೂ ಕೊಂದ–ಅವರ ಅನಾಥರಾದ ಮಕ್ಕಳಲ್ಲಿ ಎಲ್ಲರಿಗಿಂತ ಹಿರಿಯನಾದವನಿಗೆ ಹದಿನಾಲ್ಕು ವರ್ಷ. ಕೆಲವು

ದಿನಗಳ ಕೆಳಗೆ ಮಿಷಿಗನ್ ಅವೆನ್ಯೂವಿಗೆ (ಅಲ್ಲಿ ಜನರ ಓಡಾಟ ಹೆಚ್ಚು) ಕೆಲವೇ ಗಜ ದೂರದಲ್ಲಿ ದೊಡ್ಡ ಕಟ್ಟಡದ ಬಳಿ ಇದ್ದ ಪೊದೆಗಳ ಮಧ್ಯೆ ಹುಡುಗಿಯೊಬ್ಬಳ ನಗ್ನ ಶವ ಸಿಕ್ಕಿತಂತೆ. ಈ ಕೃತ್ಯ ನಡೆದದ್ದು ಹಾಡುಹಗಲಿನಲ್ಲಿ. ಇಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ ನಡೆಸುವವರಿಗೆ ಕಾಮತೃಪ್ತಿಯೊಂದಾದರೆ ಸಾಲದೇನೋ ಅವರು ಆ ಹೆಣ್ಣನ್ನು ಕೊಂದು ಮುಗಿಸುತ್ತಾರೆ. ಸತ್ತವರು ಸಾಕ್ಷ್ಯ ಹೇಳಲಾರರು (Dead people tell no tales)[64] ಕಾಡುಗಿಚ್ಚಿನ ಮುಂದೆ ಬೆಂಕಿಕಡ್ಡಿಯಂತೆ ಕಾಣುವ ಇನ್ನೊಂದು ದೃಶ್ಯದ ಬಗ್ಗೆ ತಿಳಿಸುತ್ತಾರೆ. "ಇಪ್ಪತ್ತೈದು ವರ್ಷದ ಯುವಕನೊಬ್ಬ ಬೆಳಿಗ್ಗೆ ಎದ್ದು ಕಬ್ಬಿಣದ ದಂಡವನ್ನೋ ಅಥವಾ ಅಂಥಾದ್ದು ಮತ್ತೇನನ್ನೋ ಹಿಡಿದುಕೊಂಡು ಹೊರಟು ಅರವತ್ತೊಂದು ಕಾರುಗಳನ್ನು ಮನಸಾರೆ ಬಡಿದು ಹಾಳುಮಾಡಿದ. ಅಷ್ಟು ಹೊತ್ತಿಗೆ ಪೋಲಿಸಿನವರು ಅವನನ್ನು ಹಿಡಿದರು. 'ಇದೇಕೆ ಹೀಗೆ ಮಾಡಿದೆ?' ಎಂದು ಕೇಳಿದಾಗ 'ಏನಾದರೂ ಸ್ವಲ್ಪ ಗಲಾಟೆ ಮಾಡೋಣ ಅನ್ನಿಸಿತು' ಎಂದ. ನಾವು ಆ ಕಾರುಗಳಿಗಾಗಿ ಕಣ್ಣೀರು ಕರೆಯಬೇಕಾದ್ದಿಲ್ಲ. ಆದರೆ ಆ ಮನೋವೃತ್ತಿ ಎಂಥ ಅಪಾಯಕರವಾದದ್ದು ಎಂಬುದನ್ನು ಗಮನಿಸಬಹುದು".[65] ಎಂದು ಅಮೇರಿಕಾದ ಹಿಂಸಾಪ್ರವೃತ್ತಿಗಳನ್ನು ಹಲವಾರು ನಿದರ್ಶನಗಳ ಮೂಲಕ ತಿಳಿಸುತ್ತಾ, ಭಾರತದಲ್ಲೂ ಇಂತಹ ಪ್ರವೃತಿಗಳು ಕಡಿಮೆ ಇಲ್ಲ ಎನಿಸುತ್ತದೆ. ಇಂತಹ ಹಿಂಸಾಪ್ರವೃತ್ತಿ ಮೂಲಕ ವೃತ್ತಪತ್ರಿಕೆಗಳು ತಮ್ಮ ಪತ್ರಿಕೆಗಳು ಹೆಚ್ಚು ಮಾರಾಟವಾಗಲೆಂದು ಎಬ್ಬಿಸುವ ಕೋಲಾಹಲ ಎಂದು ಭಾವಿಸುವಂತಹದಲ್ಲ ಎನ್ನುತ್ತಾರೆ.

ಕೊಲೆಗೂ ಇತರ ಹಿಂಸಾಕೃತ್ಯಗಳು ನಡೆಯಲು ಕಾರಣವಾದವುಗಳಲ್ಲಿ ಮುಖ್ಯವಾಗಿ ಬಡತನವೊಂದು ದೊಡ್ಡ ಕಾರಣ ಎನ್ನುತ್ತಾರೆ. ಇದರಿಂದಾಗಿ ಜನ ಕದಿಯುತ್ತಾರೆ. ದರೋಡೆ ಮಾಡುತ್ತಾರೆ. ಸಿಕ್ಕಿ ಬಿಳುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಕೊಲೆ ಮಾಡುತ್ತಾರೆ "ಇವನು ಬದುಕಿದ್ದರೆ ಚುನಾವಣೆಯಲ್ಲಿ ನಾನು ಗೆಲ್ಲಲಾರೆ" ಎಂದೋ ಮಾತ್ಸರ್ಯ ಸ್ವಾರ್ಥಗಳಿಂದ ಪ್ರೇರಿತರಾಗಿ ಕೊಲೆ ಮಾಡುತ್ತಾರೆ. ಇವೆಲ್ಲ ರೀತಿಯ ಕೊಲೆಗಳೂ ಪಾತಕಗಳೇ; ಇವು ಹೆಚ್ಚಿದರೆ ಸಮಾಜ ಹೊಲಸುಗೆಡುತ್ತೆದೆಯೆಂದು ಅರ್ಥ. ಆದರೆ ಅಮೇರಿಕಾದಲ್ಲಿ ಇವುಗಳ ಜೊತೆಗೆ ಇವೆಲ್ಲಕ್ಕಿಂತ ಭಯಂಕರವಾದ ಬೇರೊಂದೂ ಬಗೆಯ ಕೊಲೆ ಸಾಮಾನ್ಯವಾಗಿರುವಂತೆ ತೋರುತ್ತದೆ–ಕೊಲೆಗಾಗಿ ಕೊಲೆ, ಹಿಂಸೆಗಾಗಿ ಹಿಂಸೆ, ಒಂದು ಕೊಲೆಯಾಗಿದೆ; ಕೊಲೆಗಾರ ಶವವನ್ನು, ಕೊಂದ ಸ್ಥಳದಿಂದ ಸ್ವಲ್ಪ ದೂರಕ್ಕೆ ಸಾಗಿಸಿದ್ದಾನೆ– ಅವನಿಗೆ ಅಷ್ಟು ಕಾಲಾವಕಾಶವಿತ್ತು. ಆದರೂ ಶವದ ಜೇಬಿನಲ್ಲಿ ಇದ್ದ ಹಣವನ್ನಾಗಲಿ, ಕೈಯಲ್ಲಿದ್ದ ಗಡಿಯಾರವನ್ನಾಗಲಿ ಕೊಲೆಗಾರ ತೆಗೆದುಕೊಂಡಿಲ್ಲ. ಅಂದ ಮೇಲೆ ಆ ಕೊಲೆ ಹಣಕ್ಕಾಗಿ ನಡೆದದ್ದಲ್ಲ. ಇಂಥ ಪ್ರಸಂಗಗಳು ಎಷ್ಟೋ

ನಡೆದಿವೆಯಂತೆ. ಅನೇಕ ವೇಳೆ ಕೊಲೆಪಾತಕನಿಗೂ ಕೊಲೆಯಾದವನಿಗೂ ಪರಿಚಯ ಸಹ ಇಲ್ಲ. ಯಾವ ಸಂಬಂಧವೂ ಇಲ್ಲ. ಕೊಲೆಪಾತಕನಲ್ಲಿ ಪಿಸ್ತೂಲಿತ್ತು. ಕೊಲ್ಲಿಸಿಕೊಳ್ಳುವುದಕ್ಕೆ ಒಬ್ಬ ಸಿಕ್ಕಿದ ಅಷ್ಟೇ".[66] ಎಂದು ನೀಗ್ರೊ ಯುವಕ ಮತ್ತು ಇತರರ ಚಿತ್ರ-ವಿಚಿತ್ರ ನಡತೆಗಳಲ್ಲಿ, ಭ್ರಮೆಗೊಳಗಾದ ಪ್ರಸಂಗಗಳಲ್ಲಿ ಕಾರಣವನ್ನು ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ.

ಅಮೇರಿಕಾದಲ್ಲಿ ಪೆಟ್ರೋಲ್‌ನ್ನು ಗ್ಯಾಸ್ ಎಂದು ಕರೆಯುವ ಇದಕ್ಕಾಗಿ ಲೇಖಕರು ಮತ್ತು ಕುಟುಂಬ ಅನುಭವಿಸಿದ ಸಮಸ್ಯೆಯ ಮೂಲಕ ಅಮೆರಿಕದಲ್ಲಿ ಯಾವುದಕ್ಕೂ ಅಭಾವವಿಲ್ಲ ಎಂಬ ಭಾವನೆ ತಪ್ಪಾಗಬಹುದೆಂದು ಮನವರಿಕೆಯಾದ ಸಂದರ್ಭವನ್ನು ತಿಳಿಸಿದ್ದಾರೆ. ಲೇಖಕರು ಆಚೆ ಹೊರಡುವಾಗ ಪೆಟ್ರೋಲ್ ಭರ್ತಿ ಮಾಡಿಕೊಳ್ಳುವುದು ಮರೆತು ಹೋದಾಗ ದಾರಿಯಲ್ಲಿ ನಾಲ್ಕೈದು ಗ್ಯಾಸ್ ಸ್ಟೇಷನ್ನುಗಳಿಗೆ ಹೊಗಿ, ಎಲ್ಲೆಲ್ಲೋ ಸುತ್ತಿ ಪೆಟ್ರೋಲ್‌ನ್ನು ತುಂಬಿಸಿಕೊಂಡಿದ್ದರ ಮೂಲಕ ತಿಳಿಸುತ್ತಾರೆ.

ಸ್ಟಾರ್ವ್‌ಡ್ ರಾಕ್ ಸ್ಟೇಟ್ ಪಾರ್ಕಗೆ ಹೋಗುವಾಗ ಅವರಿಗೆ ದಾರಿಯುದ್ದಕ್ಕು ಕಾಣಿಸಿಕೊಂಡ ರಮ್ಯ ಪ್ರಕೃತಿ ಸೌಂದರ್ಯ ಆಕರ್ಷಿಸಿದೆ. ಇದನ್ನು ನೋಡಿ ನಮ್ಮ ಪಶ್ಚಿಮ ಘಟ್ಟಗಳನ್ನು ನೆನಪಾಯಿತ್ತೆನ್ನುತ್ತಾ, "ಮಡಿಕೇರಿಯ ಬಳಿ ಇರುವ ಘಾಟಿ, ಆಗುಂಬೆ ಘಾಟ್, ಚಾರ್ಮುಡಿ ಇಂಥ ಕಡೆಗಳಲ್ಲಿರುವಷ್ಟು ಕಡಿದಲ್ಲ ಇಲ್ಲಿಯ ಬೆಟ್ಟಗಳು; ಅಷ್ಟು ಎತ್ತರವೂ ಅಲ್ಲ, ಆದರೂ ಇಲ್ಲಿ ನದಿಯ ಹರವು, ಅಲ್ಲಿ ಕಂದರ, ಮತ್ತೊಂದು ಕಡೆ ಇಕ್ಕೆಲದಲ್ಲೂ ಎದ್ದಿರುವ ಬೆಟ್ಟ ಪ್ರತಿಯೊಂದು ತಿರುವನ್ನು ದಾಟಿದಾಗಲೂ ಪ್ರಕೃತಿ ಹೊಸದೊಂದು ಬಗೆಯ ಅಲಂಕಾರ ಮಾಡಿಕೊಂಡು ಹೊಸದೊಂದು ಭಂಗಿಯಲ್ಲಿ ನಿಂತಂತೆ ತೋರಿತು"[67] ಎಂದು ಸ್ಟಾರ್ವ್‌ಡ್ ರಾಕ್ ಸ್ಟೇಟ್ ಪಾರ್ಕನ ವೈಶಿಷ್ಟತೆಯನ್ನು ತಿಳಿಸುತ್ತಾರೆ.

ಸಾಮಾನ್ಯವಾಗಿ ಅಲ್ಲಿಯ ಜನ ಸ್ವಚ್ಚತೆಯ ಪ್ರಿಯರು ಎನ್ನುತ್ತಾ, "ವಿಸರ್ಜಿತಗಳನ್ನು ಗೊತ್ತಾದ ಒಂದು ಕಡೆ ತೆಗೆದುಕೊಂಡು ಹೋಗಿ ಎಲ್ಲೋ ಹಾಕುತ್ತಾರಂತೆ. ಕಾರಿನಲ್ಲಿ ಹೋಗುವಾಗ ಲೇಖಕರ ಸೊಸೆ ಬಾಳೆಹಣ್ಣು ತಿಂದು ಸಿಪ್ಪೆಯನ್ನು ಹೊರಕ್ಕೆ ಎಸೆಯುವ ಬದಲು ಒಂದು ಪ್ಲಾಸ್ಟಿಕ್ ಚೀಲದಲ್ಲಿಟ್ಟು ಅದನ್ನು ಮನೆಗೆ ತಂದು ಕಸದಬುಟ್ಟಿಗೆ ಹಾಕಿದ್ದನ್ನು ನೋಡಿದಾಗ ಇವರಿಗೆ ಖುಷಿಯೆನಿಸಿದೆ. ಈ ವಿಷಯದಲ್ಲಿ ನಾವು ಅಮೇರಿನ್ನರಿಂದ ಪಾಠ ಕಲಿಯಬೇಕು ಎನ್ನುತ್ತಾರೆ.

[illegible]

ಅಮೇರಿಕನ್ನರ ಭೋಗಜೀವನ ಪರಮಾವಧಿಯನ್ನು ಮುಟ್ಟಿದೆಂದು ತಿಳಿಸುತ್ತಾ, ಅದಕ್ಕೆ ಹಲವಾರು ನಿದರ್ಶನಗಳನ್ನು ಕೊಡುತ್ತಾರೆ. "ಅಮೇರಿಕಾದಲ್ಲಿ! ಕಾರ್ ಇಲ್ಲದ್ದವರು ಅಪರೂಪ; ನೈಲ್ಸ್‌ನ ರಸ್ತೆಗಳ ಮಗ್ಗುಲಲ್ಲಿ ಒಂದೊಂದು ಸಂಸಾರಕ್ಕೂ ಎರಡೆರಡು ಕಾರ್ ನಿಲ್ಲಿಸುವಷ್ಟು ಪಾರ್ಕಿಂಗ್ ಸ್ಥಳವನ್ನು ಕಾದಿಟ್ಟಿದ್ದಾರೆ–ಮನೆಗೆರಡು ಕಾರ್‌ಗಳು ಇರುತ್ತವೆನ್ನುವುದು ಸ್ವತಸ್ಸಿದ್ಧ! ಎಲ್ಲರ ಮನೆಯಲ್ಲೂ ರೆಫ್ರಿಜಿರೇಟರ್ ಇದೆ. ಕೊಠಡಿಗೊಂದರಂತೆ ಏರ್‌ಕಂಡಿಷನರ್, ಸೆಂಟ್ರಲ್ ಹೀಟಿಂಗ್, ತಟ್ಟೆ ತೊಳೆಯುವ ಯಂತ್ರ, ವ್ಯಾಕ್ಯುಅಮ್ ಕ್ಲೀನರ್, ರೇಡಿಯೋ ಟೆಲಿವಿಷನ್, ಟೇಪ್ ರಿಕಾರ್ಡರ್, ಟೈಪ್‌ರೈಟರ್, ಟೆಲಿಫೋನ್, ಅಸ್ಪರೈಸರ್, ಪೆನ್ಸಿಲ್ ಚೂಪು ಮಾಡುವ ಯಂತ್ರ, ಎಷ್ಟು ಸೂಟಿದ್ದರೆ ಅಷ್ಟು ಹೊಂದುವ 'ಮ್ಯಾಚಿಂಗ್' ಜೋಡುಗಳು, ಕ್ಷಣ ಸಿದ್ಧ ಕಾಫಿ, ಎರಡು ನಿಮಿಷದಲ್ಲಿ ಸಿದ್ಧಮಾಡಬಹುದಾದ ನೂರಕ್ಕೆ ತ್ತೊಂಬತ್ತರಷ್ಟು ಬೆಂದಿರುವ ಅನ್ನ, ತರಕಾರಿ– ಅಮೇರಿಕನ್ನರು ಕೂಡ ಇನ್ನೇನು ಕೊಂಡಾರು"[68] ಎಂದಿರುವುದಲ್ಲದೆ, "ಭೋಗಜೀವನಕ್ಕೆ ಹೊಸ ಹೊಸ ಸಾಮಗ್ರಿಗಳನ್ನು ಸೃಷ್ಟಿಸುವ ಚಟ ಇಷ್ಟಕ್ಕೆ ನಿಲ್ಲುವುದಿಲ್ಲ. ಸ್ನಾನ ಮಾಡುವಾಗ ತಲೆಗೆ ಸಾಬೂನು ನೊರೆ ಬಳಿಯುವುದಕ್ಕೆಂದು ಉಪಕರಣ; ನೀರಿನ ಉಷ್ಣಾಂಶ ಇಷ್ಟಿರಬೇಕೆಂದು ಬಾಯಲ್ಲಿ ಹೇಳಿದರೆ ಅದು ಅಷ್ಟಾಗುವಂತೆ ವ್ಯವಸ್ಥೆ (regulating temperature by voice command) ಹಲ್ಲುಜ್ಜುವುದಕ್ಕೊಂದು ಇಲೆಕ್ಟ್ರಿಕ್ ಬ್ರಷ್, ಬೆನ್ನು ಕೆರೆದು ಕೊಳ್ಳುವುದಕ್ಕೆಂದು ಉಪಕರಣ. ಜೋಡಿನ ಲೇಸ್ ಕಟ್ಟುವುದಕ್ಕೆ ಮತ್ತೊಂದು"[69] ಹೀಗೆ ಅಮೇರಿಕನ್ನರ ಭೋಗಜೀವನ ಕಂಡ ಲೇಖಕರು ಅಮೆರಿಕನ್ನರು ಎಲ್ಲ ಪೂರ್ಣತೆಯನ್ನು ಸಾಧಿಸಿದ್ದಾರೆ. ಇನ್ನೇನನ್ನು ಸಾಧಿಸುವ ಅವಶ್ಯಕತೆಯೇ ಇಲ್ಲವೆನ್ನುತ್ತಾ, ವೈಜ್ಞಾನಿಕ ಪ್ರಗತಿಯಲ್ಲಿ ಸಾಧಿಸಿರುವ ಮುನ್ನಡೆ ಮೆಚ್ಚುವಂತಹದ್ದು ಎನ್ನುತ್ತಾರೆ.

ಒಂದು ಸಾರಿ ಉಪಯೋಗಿಸಿದ ಕೂಡಲೆ ಎಸೆದು ಬಿಡುವಂಥ ಸಾಮಾನುಗಳ ಬಳಕೆಯು ಹೆಚ್ಚುತ್ತಿದೆ ಎನ್ನುತ್ತಾ, ಕರವಸ್ತ್ರ ಬಟ್ಟೆಯದಾದರೆ ಅದನ್ನು ಒಗೆದು ಮತ್ತೆ ಉಪಯೋಗಿಸಬಹುದು. ಕಾಗದದ್ದಾದರೆ ಅದನ್ನು ಉಪಯೋಗಿಸಿದ ಮೇಲೆ ಎಸೆಯಲೇಬೇಕು. ಹೊಸದನ್ನು ಕೊಳ್ಳಲೇಬೇಕು. ಹಾಲಿನ ಪಾತ್ರೆ ಹಿತ್ತಾಳೆಯದೋ ಅಲ್ಯೂಮಿನಿಯಂದ್ದೋ, ಲೋಹದ್ದೋ ಆಗಿದ್ದರೆ ಅದನ್ನು ತೊಳೆದು ತೊಳೆದು ವರ್ಷಗಟ್ಟಲೆ ಉಪಯೋಗಿಸಬಹುದು. ವ್ಯಾಪಾರಿ ನಮಗೆ ಹೊಸ ಪಾತ್ರೆಯನ್ನು ಮಾರುವಂತಿಲ್ಲ. ಅದೇ ತೆಳುವಾದ ಕಾಗದದ ಅಥವಾ ಪ್ಲಾಸ್ಟಿಕ್‌ನ ಪಾತ್ರೆಯಾದರೆ ಅದನ್ನು ಉಪಯೋಗಿಸಿ ಎಸೆಯಬಹುದು. ನಾಳೆ ಮತ್ತೊಂದನ್ನು ಕೊಳ್ಳಬೇಕೆಂದು ಅಮೇರಿಕನ್ನರ ಎಸೆಯುವ ಪದಾರ್ಥಗಳ ಬಗ್ಗೆ ತಿಳಿಸುವುದಲ್ಲದೆ

ಸಾವಿರಾರು ಕಾರುಗಳು ಕೂಡಾ ಮೂಲೆಗುಂಪಾಗಿವೆ ಎನ್ನುತ್ತಾರೆ. ಏಕೆಂದರೆ ಅವರು ಎರಡು ವರ್ಷ ಮೂರು ವರ್ಷಕ್ಕೊಂದು ಕಾರು ಬದಲಾಯಿಸುತ್ತಾರೆ ಎಂದು ಹೇಳುತ್ತಾರೆ. ಇದರಿಂದ ಅಮೇರಿಕನ್ನರಿಗೆ ಕಾರಿನ ವ್ಯಾಮೋಹ ಅಧಿಕವಾಗಿರುವುದು ತಿಳಿಯುವುದರೊಂದಿಗೆ ಅಮೇರಿಕನ್ನರ ಔದ್ಯೋಗಿಕ ಸೃಷ್ಟಿಯೂ ಕಂಡುಬರುತ್ತದೆ.

ಅಮೇರಿಕನ್ನರು ಅವಶ್ಯಕತೆಯನ್ನು ಹೆಚ್ಚಿಸಿಕೊಂಡಿದ್ದರಿಂದ ಪ್ರಕೃತಿಯ ಭಂಡಾರವನ್ನು ಬರಿದು ಮಾಡುತ್ತಿದ್ದಾರೆ. ಇದರಲ್ಲಿ ಸಂದೇಹವೆ ಇಲ್ಲ ಎನ್ನುತ್ತಾ, ಹಿಂದುಳಿದಿದ್ದ ದೇಶಗಳೂ ಈಗ ಅವರೊಡನೆ ಸ್ಪರ್ಧಿಸಲಾರಂಭಿಸಿವೆ. ಅಮೇರಿಕನ್ನರು ಒಂದು ಕಡೆ ಪರಿಸರವನ್ನು ಕೊಳಕು ಮಾಡುತ್ತಾರಾದರೂ ಮರ–ಗಿಡಗಳು, ಹೂವುಗಳು, ಗಿರಿ–ವನ–ನದಿಗಳು ಹಿಮಾವೃತ ಪರ್ವತ ಮೊದಲಾದವುಗಳನ್ನು ಮರೆತಿಲ್ಲ. 'ನ್ಯಾಷನಲ್ ಪಾರ್ಕ್' ಮಾಡಿ ಸುಂದರವಾದ ಪ್ರದೇಶಗಳ ಸೌಂದರ್ಯವನ್ನು ರಕ್ಷಿಸಿಕೊಳ್ಳಬೇಕೆಂಬ ಯೋಚನೆಯ ಪ್ರಥಮ ಫಲ"[70] ಎನ್ನುತ್ತಾ ಅಮೇರಿಕನ್ನರಲ್ಲಿ ಸೌಂದರ್ಯಕಾಂಕ್ಷೆ ಇದೆ. ಅಲ್ಲದೆ ಶಾಂತಿ ಪ್ರೇಮವು ಇದೆ ಎಂದು ತಿಳಿಸುತ್ತಾರೆ.

ಅಮೇರಿಕದಲ್ಲಿರುವ ಕೆಲವು ಮುಖ್ಯ ಸಮಸ್ಯೆಗಳನ್ನು ಚರ್ಚಿಸಿರುವುದರಲ್ಲಿ ಮುಖ್ಯವಾಗಿ ಕಪ್ಪು ಜನರ ಸಮಸ್ಯೆಗಳನ್ನು ಕೆಲವರು ಹೇಳಿದ ಅಭಿಪ್ರಾಯದ ಮೂಲಕ ತಿಳಿಸುತ್ತಾರೆ. ಕಪ್ಪು ಜನ ತಮ್ಮ ಕಷ್ಟವನ್ನೂ ನಿವಾರಿಸಿಕೊಳ್ಳಲು ಇದುವರೆಗೆ ಮಾಡಿದ ಪ್ರಯತ್ನವನ್ನು ಹೇಳುತ್ತಾ, ಇಂಡಿಯನ್ನರಿಗಾದಷ್ಟುಲ್ಲದಿದ್ದರೂ "ಕಪ್ಪು ಜನರಿಗೂ ಸಾಕಷ್ಟು ಅನ್ಯಾಯವಾಗಿದೆಯಷ್ಟೆ. ಆದರೆ ಅವರು ಯಾರನ್ನು ಅಳಿಯುತ್ತಿರುವ ಜನಾಂಗವಲ್ಲ. ಬಿಳಿಯರೊಡನೆ ವ್ಯವಸ್ಥಿತವಾಗಿ ಹೋರಾಡುತ್ತಿದ್ದಾರೆ. ಅಮೇರಿಕನ್ನರು ಗುಲಮಗಿರಿಯನ್ನು ತೊಡೆದು ಹಾಕಿದ್ದನ್ನೂ ಕು ಕ್ಲುಕ್ಸ್ ಕ್ಲ್ಯಾನನ್ನು (ku Klux. klan)ಹದಕ್ಕೆ ತಂದದ್ದನ್ನೂ ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಆದರೆ ಈಗಲೂ ಆ ಜನರು ಸಹಿಸಬೇಕಾದ ಕೋಟಲೆಯಿದೆ. ಎಷ್ಟೋ ಬಿಳಿಯ ಜನರು ಈಗಲೂ 'ನೀಗ್ರೋ' ಎಂದರೆ ಉರಿದುಬೀಳುತ್ತಾರೆ. ನಮ್ಮ ನ್ಯಾನ್ಸಿಯ ಹತ್ತಿರದ ಬಂಧುವೊಬ್ಬರು–ಹಳೆಯ ಕಾಲದವರು, ಮೊನ್ನೆ ಮೊನ್ನೆ ತೀರಿಕೊಂಡವರು– ಹೇಳುತ್ತಿದ್ದರಂತೆ; "ಇದಕ್ಕೆಲ್ಲ (ಅಂದರೆ ಅಮೇರಿಕದಲ್ಲಿ ಅಹಿತವಾದದ್ದು ಏನು ನಡೆದರೂ–ಟಾರ್ನೇಡೊ ಸುಂಟರಗಾಳಿಗಳು, ಭೂಕಂಪ ಇತ್ಯಾದಿಗಳು ಮೊದಲುಗೊಂಡು!– ಅದಕ್ಕೆಲ್ಲ) ಈ ಹಾಳು ನೀಗ್ರೋಗಳೇ ಕಾರಣ! ಅವರನ್ನು ಒದ್ದೋಡಿಸಿ, ಎಲ್ಲ ಸರಿಹೋಗುತ್ತೆ" (It's all because of these bl-y

niggers, you know. kick them out and everything will be all right) ಎಂದು. ಆದರು ಅವರ ಸ್ಥಿತಿಯನ್ನು ಉತ್ತಮಗೊಳಿಸುವ ಪ್ರಯತ್ನ ನಡೆಯುತ್ತಿದೆ- ಇಲ್ಲವೆನ್ನುವಂತಿಲ್ಲ'[71] ಎಂದು ತಿಳಿಸುತ್ತಾರೆ.

ಅಮೇರಿಕಾಕ್ಕೆ ಹೊಗಿ ಅಲ್ಲಿ ನೆಲೆಸಿರುವ ಭಾರತೀಯರ ಮನೋವೃತಿಯನ್ನು ತಿಳಿಸುತ್ತಾ, ಎರಡು ಬಗೆಯ ಮನೋವೃತ್ತಿಯ ಜನರನ್ನು ಕಂಡಿದ್ದಾರಲ್ಲದೆ, ಕೆಲವರನ್ನು ಸಂದರ್ಶಿಸಿದಾಗ ಬಂದ ಅಭಿಪ್ರಾಯ ತಿಳಿಸುತ್ತಾರೆ. "ನೋಡಿ, ಇಲ್ಲಿ ನಮಗೆ ಬೇಕಾದ ಅನುಕೂಲವೆಲ್ಲ ಸಿಕ್ಕಿದೆ. ಜೀವನ ಸುಖಕರವಾಗಿ ಸಾಗುತ್ತಿದೆ. ಭಾರತದಲ್ಲಿ ನಮಗೆ ಇಷ್ಟು ವರಮಾನ ಬರುವುದಿಲ್ಲ. ಸುಖಸಾಮಗ್ರಿಗಳು ಇಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ಇಲ್ಲಿ ಯಾವುದಕ್ಕೂ ಕ್ಯೂ ನಿಲ್ಲಬೇಕಾಗಿಲ್ಲ. ಒಂದು ಕಿಲೋ ಸಕ್ಕರೆ ಬೇಕಾದರೆ, ರೈಲಿನಲ್ಲಿ ಒಂದು ಬರ್ತ್ ಬೇಕಾದರೆ, ಕಚೇರಿಗೆ ಅಲೆದು ಗುಮಾಸ್ತರ ಮೇಜಿನ ಮುಂದೆ ನಿಂತು ಅವರ ಜುಜುಬಿ ದರ್ಪವನ್ನೂ ಲಂಚಕೋರತನವನ್ನೂ ಸಹಿಸಬೇಕಾಗಿಲ್ಲ. ಇಲ್ಲಿ ಲಂಚರುಷುವತ್ತುಗಳು ಇಲ್ಲವೆಂದಲ್ಲ. ಆದರೆ ಸಾಮಾನ್ಯ ಮಾನವನ ದೈನಂದಿನ ಜೀವನ ಸುಗಮವಾಗಿ ಸಾಗುತ್ತದೆ. ಭಾರತವನ್ನು ಬಿಟ್ಟು ಬಂದೆವಲ್ಲ ಎಂದು ನಮಗೇನೂ ಸಂಕಟವಿಲ್ಲ. ಎರಡು ಮೂರು ವರ್ಷಕ್ಕೊಮ್ಮೆ ಅಲ್ಲಿಗೆ ಹೋಗಿ ಬಂಧುಮಿತ್ರರನ್ನು ನೋಡಿಕೊಂಡು ಬರುತ್ತೇವೆ. ನಮ್ಮ ವರಮಾನದ ದೃಷ್ಟಿಯಿಂದ ಅದು ಸುಲಭ- ಡೆಲ್ಲಿಯಲ್ಲಿದ್ದು ಬೆಂಗಳೂರು ಮೈಸೂರುಗಳಿಗೆ ಹೋಗಿ ಬರುವುದಕ್ಕಿಂತ ಇಲ್ಲಿಂದ ಹೋಗಿ ಬರುವುದೇ ಸುಲಭ!'[72] ಎಂದು ಯಾವುದೇ ಸಂಕೋಚವಿಲ್ಲದೆ ಹೇಳಿರುವುದನ್ನು ನೊಡಿ, ಇವರಿಗೆ ಮೆಚ್ಚುಗೆಯನ್ನಲ್ಲದಿದ್ದರೂ ಸಹಾನುಭೂತಿಯನ್ನಾದರೂ ಸಲ್ಲಿಸಬಹುದೆನ್ನುತ್ತಾರೆ. ಏಕೆಂದರೆ ಇವರು ಹೇಳಿದ್ದರಲ್ಲಿ ಹೆಚ್ಚಾಗಿ ತಪ್ಪಿಲ್ಲ. ಅವರು ಹೇಳುವಂತೆ ಭಾರತದಲ್ಲಿ ಆ ಸ್ಥಿತಿ ಇದೆ ಎಂದು ಒಪ್ಪಿಕೊಳ್ಳಬಹುದು. ಇವರು ಒಂದು ಬಗೆಯಾದರೆ, ಇನ್ನೊಂದು ಬಗೆಯ ಜನರನ್ನು ಗುರುತಿಸಿ ಹೀಗೆ ತಿಳಿಸುತ್ತಾರೆ. "ತಾವು (ಭಾರತೀಯರೆಲ್ಲರಂತೆ ಎಂದು ಅವರು ಬಾಯಿಬಿಟ್ಟು ಹೇಳುವುದಿಲ್ಲ!) ಅನಾಗರಿಕರಲ್ಲ; ('ಅಮೇರಿಕದವರಂತೆ?') ನಾಗರಿಕತೆಯ ಮೆರಗು ತಳೆದವರು, ಎಂದು ತೋರಿಸಿಕೊಳ್ಳಲು ವಿಶ್ವಪ್ರಯತ್ನ ಮಾಡುತ್ತಾರೆ. "ನಮಗೆ ಕನ್ನಡ ಮರೆತುಹೋಗಿದೆ" ಎಂದು ಹೇಳಿಕೊಳ್ಳುವುದು ಅವರಿಗೆ ಹೆಮ್ಮೆ. ಭಾರತೀಯ ಸಂಗೀತ ಅವರಿಗೆ ರುಚಿಸದು. ಇದಕ್ಕಿಂತ ಹೆಚ್ಚಾಗಿ ಅವರಲ್ಲಿ ಇನ್ನೊಂದು ಪ್ರವೃತ್ತಿ ಬೆಳೆದಂತೆ ತೊರುತ್ತದೆ. ತಾವು ಭಾರತವನ್ನು ಬಿಟ್ಟು ಬಂದವರು, ಅಲ್ಲಿಗೆ ಮತ್ತೆ ಹೆ ೋಗಲು ಇಷ್ಟವಿಲ್ಲದವರು. ಆದರೆ ತಾಯಿ-ತಂದೆ ಬಂಧುಮಿತ್ರರು ಎಲ್ಲರನ್ನು ಬಿಟ್ಟು ಅಮೇರಿಕದಲ್ಲಿ ನೆಲೆಸುವುದನ್ನು ಜನ ಮೆಚ್ಚುವುದಿಲ್ಲ

ಎಂಬ ಚಿಂತೆ ಅವರನ್ನು ಕಾಡುತ್ತದೆ. ಆದ್ದರಿಂದ ಅವರು ತಮ್ಮನ್ನು ತಾವು ಸಮರ್ಥಿಸಿಕೊಳ್ಳಬೇಕು. ಸಮರ್ಥನೆಯನ್ನು ಬಹುಶಃ ಹೀಗೆ ಸಂಗ್ರಹಿಸಬಹುದು: "ಈ ಭಾರತ ನಮಗೆ ಏನು ಮಾಡಿದೆ! ನಾನು ಮನುಷ್ಯರು ಎನ್ನಿಸಿಕೊಂಡದ್ದು ನಮ್ಮ ದೇಶ ಬಿಟ್ಟು ಇಲ್ಲಿಗೆ ಬಂದ ಮೇಲೆ. ನಮ್ಮ ಸಂಸ್ಕೃತಿಯ ವಿಷಯದಲ್ಲಿ ನಾವು ಹೇಳುವುದೆಲ್ಲ ಒಣ ಬಡಾಯಿ. ನಮ್ಮ ಬಡತನವೋ, ಭಿಕ್ಷುಕ ಮನೋವೃತ್ತಿಯೋ, ಜನರ ಅನಕ್ಷರತೆಯೋ, ಪಟ್ಟಣಗಳ ಹೊಲಸೋ, ಮಂತ್ರಿಗಳ ದುರಾಸೆಯೋ, ರಾಜಕೀಯ ಅಂತಃಕಲಹಗಳೋ, ಪಾಶ್ಚಾತ್ಯರೆದುರಿಗೆ ನಾವು ತೋರಿಸುವ ಗುಲಾಮಬುದ್ಧಿಯೋ (ಈ ಮಾತನ್ನು ಅವರು ಹೇಳಬಾರದು! ಅವರ ಐರನ ಅವರಿಗೆ ಹೊಳದೇ ಇಲ್ಲ)... ಇಂಥ ಭಾರತದಲ್ಲಿ ನಾವೇಕಿರಬೇಕು!" ಬ್ರಿಟಿಷರು ಹೊರಟುಹೋದಮೇಲೆ ಈ ಬಗೆಯ ಜನರ ಸಂಖ್ಯೆ ಕಡಿಮೆಯಾಗಿರಬಹುದು. ಆದರೆ ಇನ್ನು ಅಂಥವರಿದ್ದಾರೆ"[73] ಎಂದು ಎರಡನೆಯ ಮನೋವೃತ್ತಿಯ ಜನರ ಅಭಿಪ್ರಾಯದ ಬಗ್ಗೆ ಲೇಖಕರಿಗೆ ಅಸಹನೆ ಎನಿಸಿದೆ. ಆದರೂ ಭಾರತೀಯರು ಇಲ್ಲಿಗೆ ಬಂದು ಅಮೇರಿಕನ್ನರೊಡನೆ ಸ್ಪರ್ಧೆ ಹೂಡಿ ಬದುಕುತ್ತಿದ್ದರೆನ್ನುವುದು ಸಂತೋಷದ ವಿಷಯ ಎನ್ನುತ್ತಾರೆ.

**ಭಾಷೆ ಮತ್ತು ಶೈಲಿ :** ಲೇಖಕರು ಪದ ಪದಗಳಲ್ಲೂ ನವಿರಾದ ಹಾಸ್ಯ ಮೇಳೈಸಬಲ್ಲರೂ ಎಂಬುದಕ್ಕೆ ನಿದರ್ಶನವಾಗಿ "ನಾನು ಪ್ರಯಾಣ ಹೊರಟದ್ದು ದೊಡ್ಡದೊಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ತರುಣದಲ್ಲಿ. ದೇಹದಲ್ಲಿ ನಿಶ್ಶಕ್ತಿ; ದಾರಿಯಲ್ಲೇನಾದರೂ ತೊಂದರೆಯಾದರೇನು ಗತಿ ಎಂಬ ಭಯವೂ ಕಾಡುತ್ತಿತ್ತು. ಸಾಮಾನ್ಯವಾಗಿ ಮನುಷ್ಯನ ಜೀವಮಾನ ಕಾಲ ಎಪ್ಪತ್ತು ವರ್ಷ ('three score and ten.') ಎಂದು ಕ್ರೈಸ್ತರ ಸತ್ಯವೇದ ಹೇಳುತ್ತದೆ. ಆ ವೇಳೆಗಾಗಲೇ ನಾನು ವಿಧಿಯ ಕಣ್ಣು ಮರೆಸಿ ಮೂರು ವರ್ಷ ಕೊಸರನ್ನು ಬಳಸಿಕೊಂಡಾಗಿತ್ತು. ಇನ್ನು ಯಾವ ಘಳಿಗೆಯಲ್ಲಿ ಏನಾದರೇನಂತೆ! ಅಮೆರಿಕಕ್ಕಾದರೂ ಸಿದ್ಧ, ಅಪರಕರ್ಮಕ್ಕಾದರೂ ಸಿದ್ಧ ಎಂದು ಸಮಧಾನ ಹೇಳಿಕೊಂಡೆನಾದರೂ ಮನಸ್ಸಿನ ಸ್ಥಿತಿ ಇಳಿಮುಖವಾಗಿಯೇ ಇತ್ತು. ಪ್ಲೇನು ಹೊರಡುವ ಮುನ್ನ ಗಗನಸಖಿ ಎಲ್ಲರಿಗೂ ಪೆಪ್ಪರಮೆಂಟು ಹಂಚುವುದುಂಟಷ್ಟೆ ಅದನ್ನು ಬಾಯಿಗೆ ಹಾಕಿಕೊಂಡು ಹತ್ತು ಸೆಕೆಂಡು ಕಳೆಯುವುದರೊಳಗೆ ನನ್ನ ದುಮ್ಮಾನ ಮಂತ್ರಶಕ್ತಿಯಿಂದಲೋ ಎಂಬಂತೆ ಹರಿದುಹೋಯಿತು. ನನ್ನ ದೇಹದಲ್ಲಿ ಸಕ್ಕರೆಯ ಕೊರತೆಯಿದ್ದು ಅದರಿಂದ ಮನಸ್ಸು ದುರ್ಬಲವಾಗಿದ್ದಿರಬೇಕು!"[74] ಎಂಬ ಲೇಖಕರ ಪ್ರತಿವಾಕ್ಯದಲ್ಲೂ ವಕ್ರೋಕ್ತಿಯ ಮೂಲಕ ತಮ್ಮನ್ನೇ ಛೇಡಿಸಿಕೊಳ್ಳುವ ಹಾಸ್ಯ ಮಿಶ್ರಿತ ಶೈಲಿಯನ್ನು ಗುರುತಿಸಬಹುದು.

ವಿಮಾನಯಾನದ ವಿವರಣೆಯು ಸೇರಿದಂತೆ ಮತ್ತ್ಯಾವುದೂ ಸಹ ವರದಿಯಂತೆ ನೀರಸವೆನಸದಂತ ನಿರೂಪಣೆಗೆ ನಿದರ್ಶನವಾಗಿ "ವಿಮಾನಯಾನದಲ್ಲಿ ವೇಗ ಹೆಚ್ಚು, ಅದು ಬೇಗ ಮುಗಿಯುತ್ತದೆ.

ಅದುರಾಟ ಉರುಲಾಟಗಳಿಂದ ಮೈ ಜರ್ಝರಿತವಾಗುವುದಿಲ್ಲ. ಇದಿಷ್ಟೇ ಅದರಲ್ಲಿರುವ ಗುಣ. ಆ ಕಡೆ, ಈ ಕಡೆ, ಮೇಲ್ಗಡೆ ಕೆಳಗಡೆ ಏನೂ ಕಾಣುವುದಿಲ; ವಿಮಾನ ಚಲಿಸುತ್ತಿದೆಯೆಂಬುದರ ಅನುಭವವೂ ಆಗುವುದಿಲ್ಲ. ಲಂಡನ್ ಬಿಟ್ಟು ನ್ಯೂಯಾರ್ಕ್‌ನ್ನು ತಲುಪುವವರೆಗೆ ವಿಮಾನ ಎಲ್ಲೂ ನಿಲ್ಲುವುದು ಕೂಡಾ ಇಲ್ಲವಷ್ಟೆ. ಆ ಏಳು ಘಂಟೆಯ ಕಾಲ ಮುಗಿಯುವುದರೊಳಗೆ ನನಗೆ ಮೈಪರಚಿಕೊಳ್ಳುವಷ್ಟು ಬೇಸರವಾಗಿತ್ತು"[75] ಎಂಬ ಭಾವಾನುಭಾವನೆಗಳು ಸ್ಪಷ್ಟವಾಗಿರುವುದನ್ನು ಕಾಣಬಹುದು.

ಲೇಖಕರ ಅತ್ಯುತ್ತಮ ಶೈಲಿಗೆ ಉದಾಹರಣೆಯಾಗಿ ನ್ಯೂಯಾರ್ಕಿನಲ್ಲಿರುವ ಎರಡು ದೃಶ್ಯಗಳ ನಿರೂಪಣೆಯಲ್ಲಿ ಗುರುತಿಸಬಹುದು. "ಮೊದಲನೆಯದು ಎಂಪೈರ್ ಸ್ಟೇಟ್ ಕಟ್ಟಡ. ಇದು ಮೊನ್ನೆಮೊನ್ನೆಯವರೆಗೂ ಪ್ರಪಂಚದಲ್ಲಿ ಅತ್ಯುನ್ನತವಾದ ಕಟ್ಟಡ ಎನ್ನಿಸಿಕೊಂಡಿದ್ದು ಈಗ ಆ ಸ್ಥಾನವನ್ನು ಷಿಕಾಗೋವಿನ ಸಿಯರ್ಸ್ (Sears) ಗಗನಚುಂಬಿಗೆ ಬಿಟ್ಟುಕೊಟ್ಟಿದೆ. ಕಟ್ಟಡಕ್ಕಿಂತ ಹೆಚ್ಚಾಗಿ ಅದರ ಕೊನೆಯ ಮಾಡದಿಂದ ರಾತ್ರಿ ಕಾಣುವ ನ್ಯೂಯಾರ್ಕಿನ ವಿಹಂಗಮ ದೃಶ್ಯ ನೋಡಬೇಕಾದದ್ದು. ಕೆಂಪು ಹಾವುಗಳಂತೆ ಸಂತತವಾಗಿ ಚಲಿಸುತ್ತಿರುವ ಸಾವಿರಾರು ಕಾರುಗಳು ಹಿಂದೀಪಗಳ ತುದಿಮೊದಲಿಲ್ಲದ ಸಾಲು; ಹತ್ತಾರು ಬಣ್ಣಗಳ ನಿಯಾನ್ ಸೈನುಗಳು; ಸಾವಿರಾರು ಅಡಿ ಮೇಲಕ್ಕೆ ಎದ್ದು ಅಂತರಿಕ್ಷವನ್ನು ಬೆಳಕುಮಾಡಿರುವ ವಿದ್ಯುದ್ದೀಪಗಳ ಪ್ರಭೆ–ಅದೊಂದು ಯಕ್ಷಪ್ರಪಂಚ. ಅದರ ಪ್ರಸ್ತಾಪ ಬಂದಾಗ ಸಿಡ್ನಿ ಲೊ(Sidney Low) ರಚಿಸಿದ ವ್ಯಂಗ್ಯಚಿತ್ರವೊಂದರ ನೆನಪಾಗುತ್ತದೆ. ಆ ನಗರದ ಜನರೆಲ್ಲರಿಗೂ ಪಾಪಜೀವನವನ್ನು ಕಲಿಸಿ ಉತ್ತರೋತ್ತರ ಅವರನ್ನು ನರಕಕ್ಕೆ ಸೆಳೆದುಕೊಳ್ಳಬೇಕೆಂದು ಸೈತಾನ ಒಂದು ರಾತ್ರಿ ಹಾರಿ ಬಂದು ಎಂಪೈರ್ ಸ್ಟೇಟ್ ಕಟ್ಟಡದ ಶಿಖರದಲ್ಲಿ ಕುಳಿತ; ಅಲ್ಲಿಯ ನಿಶಾಜೀವನವನ್ನು ನೋಡಿದ ನೋಡುತ್ತ ನೋಡುತ್ತ ಕೇಡಿಗರಲ್ಲಿ ತಾನೇ ಅಗ್ರಗಣ್ಯ ಎಂಬ ಅತನ ಹೆಮ್ಮೆ ಕರಗಿಹೋಯಿತು. ಅಚ್ಚರಿಗೊಂಡು, ನಮ್ರನಾಗಿ, "Well, live and learn, live and learn!" (ಬದುಕು, ಕಲಿ; ಬದುಕು, ಕಲಿ!) ಬದುಕಿದ್ದಷ್ಟೂ ಇನ್ನೂ ಕಲಿಯಬೇಕಾದದ್ದು ಗೋಚರಿಸುತ್ತಲೇ ಇರುತ್ತದೆ ಎಂದು, ಇದರ ಭಾವಾರ್ಥ ಎಂದುಕೊಂಡು ಅಲ್ಲಿಂದ ಹಾರಿಹೋದ. ಕೇಡಿಗತನದಲ್ಲಿ ನ್ಯೂಯಾರ್ಕಿನವರು ಅವನಿಂದ ಕಲಿಯಬೇಕಾದ್ದು ಏನೂ ಇರಲಿಲ್ಲ. ಸೈತಾನನೇ ಅವರಿಂದ ಕಲಿಯಬೇಕು! ಎಂದು ಹೇಳಿದ್ದಾರೆ.

ಅಲ್ಲಿ ನೋಡಬೇಕಾದ ಇನ್ನೊಂದು ದೃಶ್ಯ: ನ್ಯೂಯಾರ್ಕ್ ಕೊಲ್ಲಿಯಲ್ಲಿರುವ ಬೆಡ್ಲೂ. (Bedloe, ಇದಕ್ಕೆ ಸ್ವಾತಂತ್ರ್ಯದ್ವೀಪ ಎಂಬ ಹೆಸರೂ ಉಂಟು.) ದ್ವೀಪದ ಮೇಲಿರುವ ಸ್ವಾತಂತ್ರ್ಯದೇವಿಯ ಪ್ರತಿಮೆ.

ಮೇಲೆತ್ತಿರುವ ಬಲಗೈಯಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಹಿಡಿದು ಹೆಮ್ಮೆಯಿಂದ ನಿಂತಿರುವ ಭವ್ಯ ಸ್ತ್ರೀಮೂರ್ತಿ, ಅದು. ನಕ್ಷತ್ರದಿಂದ ಕಿರಣಗಳು ಹೊರಡುವಂತೆ ಅದರ ಕಿರೀಟದಿಂದ ಶಲ್ಯಗಳು ಹೊರಟುಕೊಂಡಿವೆ. ಇದಕ್ಕಿಂತ ದೊಡ್ಡ ಪ್ರಮಾಣದ ಪ್ರತಿಮೆ ಪ್ರಪಂಚದಲ್ಲೆಲ್ಲೂ ಇಲ್ಲವಂತೆ. ಅಮೆರಿಕದ ದಿನದಿನದ ಜೀವನದಲ್ಲಿ ನಿಜವಾದ ಸ್ವಾತಂತ್ರ್ಯ ಎಷ್ಟಿದೆಯೋ ನಾನು ಅಳೆದು ನೋಡಿಲ್ಲ–ಬಹುಶಃ ಭಾರತದ ಇಂದಿನ ದೈನಂದಿನ ಜೀವನದಲ್ಲಿ ಆಧ್ಯಾತ್ಮಿಕತೆ ಎಷ್ಟು ಉಳಿದಿದೆಯೋ ಅದಕ್ಕಿಂತ ಹೆಚ್ಚೇ ಇರಬಹುದು. ಅದು ಹೇಗಾದರೂ ಇರಲಿ, ಸ್ವಾತಂತ್ರ್ಯದ ಆದರ್ಶವಾದರೂ ಜೀವಂತವಾಗಿದೆಯೆಂಬುದರ ಪ್ರತೀಕ, ಆ ಪ್ರತಿಮೆ"[76] ಎಂಬುದು ಲೇಖಕರ ಸರಳ, ಸ್ಪಷ್ಟ, ಸುಂದರ ನಿರೂಪಣೆಯಾಗಿದೆ.

ಲೇಖಕರ ಮೊಮ್ಮಗನ ಪ್ರಥಮ ಭೇಟಿಯಲ್ಲಿ "ಇಂಗ್ಲಿಷಿನಲ್ಲಿ ಮಾತಾಡಿದ್ದನ್ನು ಕೇಳಿ ಮನಸ್ಸಿನ ಮೂಲೆಯೊಂದರಲ್ಲಿ ಅಸಮಾಧಾನ ಕಾಣಿಸಿಕೊಂಡಿತು. ನನ್ನ ಭಾಷಾಭಕ್ತಿ ಅಷ್ಟೇನೂ ಹೊಗಳಿಕೊಳ್ಳುವಂಥದಲ್ಲ. ಕೈಲಾಸಂ ಲೇವಡಿ ಮಾಡಿರುವ (ಕನ್ನಡ ಇಂಗ್ಲಿಷುಗಳನ್ನು ಬೆರೆಸಿ ಮಾತಾಡುವ)ರೋಗ ಅವರಿಗಿದ್ದಂತೆ ನನಗೂ ಇದೆ–ಪ್ರಾಸ ವಿನಾ, ಆದರೂ ಎರಡು ವರ್ಷದ ಮೊಮ್ಮಗ ಇಂಗ್ಲಿಷಿನಲ್ಲಿ ಮಾತಾಡಿಸಿದರೆ, ಮತ್ತು ಅವನನ್ನು ಇಂಗ್ಲಿಷಿನಲ್ಲಿ ಮುದ್ದುಮಾಡಬೇಕಾಗಿ ಬಂದರೆ ಮನಸ್ಸಿಗೆ ಹಿತವಾದೀತೆ? ಅವನದ್ದೇನೂ ತಪ್ಪಿಲ. ನಾಲ್ಕು ದಿನ ಕಳೆದ ಮೇಲೆ ಅವನ ಇಂಗ್ಲಿಷ್ ನನಗೆ ಒಪ್ಪಿಹೋಗುತ್ತದೆ; ಅಥವಾ ಅವನಿಗೆ ಕನ್ನಡದ ಋಣವೇನಾದರೂ ಇದ್ದರೆ ಅವನು ಕನ್ನಡ ಕಲಿಯುತ್ತಾನೆ. ಸುನೀಲನೇನೊ ನನ್ನಿಂದ 'ಸಾಕು' ಎಂಬ ಒಂದು ಕನ್ನಡ ಮಾತು ಕಲಿತ. ಅದನ್ನು ಉಪಯೋಗಿಸುತ್ತಿದ್ದ ರೀತಿಗೆ ಒಂದು ಉದಾಹರಣೆ; "ಸಾಕು, give me some more!"(ಸಾಕು, ಇನ್ನು ಸ್ವಲ್ಪ ಕೊಡು!)"[77] ಎಂಬಲ್ಲಿ ಲೇಖಕರ ವಿವೇಚನಾಯುಕ್ತ ಸಾಮರಸ್ಯವನ್ನು ಅರಿಯಬಹುದು. ಇದರಲ್ಲಿನ ವಿಶೇಷವೆಂದರೆ ಅನ್ಯ ಪ್ರವಾಸ ಕಥನಗಳಲ್ಲಿ ಆ ದೇಶದವರ ಪ್ರಸಂಗಗಳು ಉದಾಹರಣೆಯಾಗಿ ಬಂದರೆ ಈ ಕೃತಿಯಲ್ಲಿ ವೈಯಕ್ತಿಕ ರಕ್ತಸಂಬಂಧದ ಪುರಾವೆಗಳೆ ಸಹಜವಾಗಿ ಬರುತ್ತವೆ.

ಲೇಖಕರ ಹೃದಯ ವೈಶಾಲ್ಯಯನ್ನು ನೋಡುವುದಾದರೆ; ಎರಡನೇ ಸೊಸೆ ಡಯಾನಳಿಗೆ ಮೃಗಾಲಯಕ್ಕೆ ಹೋಗಬೇಕೆಂದು ಅಪೇಕ್ಷೆ. ಆದರೆ ನನ್ನ ಇಷ್ಟವೇನು ಎಂಬುದು ತಿಳಿಯದೆ "ಮೃಗಾಲಯಕ್ಕೆ ಹೋದರೆ ಸುನೀಲನಿಗೆ ಖುಷಿಯಾಗುತ್ತೆ. ಆದರೆ ತಾತನಿಗೆ ಬೇಸರವಾಗಬಹುದು. ಪಾರ್ಕಿಗೇ ಹೋಗೋಣ" ಎಂದಳು. ಈ ತಾತಾನ ಬುದ್ಧಿ ಅಷ್ಟೇನೂ ಮಂದವಲ್ಲ. ಅವಳ ಅಪೇಕ್ಷೆ ಅರ್ಥವಾಯಿತು. ನಾನೂ

[illegible]

ಅವಳ ಕಡೆಗೇ ವೋಟು ಮಾಡಿದೆ"[78] ಎಂಬುದು ಲೇಖಕರ ಹೃದಯವಂತಿಕೆಯ ಸಾಕ್ಷಿಯಲ್ಲದೆ ಸೃಜನಶೀಲ ಮನಶಾಸ್ತ್ರಜ್ಞತೆಯ ಅರಿವನ್ನು ನೋಡಬಹುದು. ಅಲ್ಲದೆ ವಾಕಿಂಗ್‌ಗೆ 'ಆರೋಗ್ಯಸಂಚಾರ'ವೆಂದು, ಜ್ಯೂಸ್‌ಗೆ 'ಫಲಾಮೃತ'ವೆಂಬ ಅಚ್ಚಕನ್ನಡದಲ್ಲಿನ ಹಲವಾರು ಪದಗಳನ್ನು ಕೃತಿ ತುಂಬ ಬಳಸಿರುವ ಲೇಖಕರ ಅಪಾರ ಕನ್ನಡಾಭಿಮಾನವನ್ನು ಅರ್ಥೈಸಿಕೊಳ್ಳಬಹುದು.

**ಆಹಾರ ಪದ್ಧತಿಗಳು** : ಅಮೆರಿಕನ್ ಶೈಲಿಯ ಆಹಾರ ಪದ್ಧತಿಯನ್ನು ಹೀಗೆ ಗುರುತಿಸಬಹುದು. ಲೇಖಕರ ಮಗ ರಾಮು, ಸೊಸೆ ಡಯಾನಳಿಗೆ ತುಂಬ ಬೇಕಾದವರು; ಲೇಖಕರಿಗೂ ಪರಿಚಯವಿದ್ದರಾದ ಇಂಗ್ಲೆಂಡಿನವಳಾದ 'ಕ್ಯಾರಲ್' ಮತ್ತು ಹಾಲೆಂಡಿನವನಾದ 'ಯಾನ್ಸೆನ್' ದಂಪತಿಗಳು ಊಟಕ್ಕೆ ಬರುತ್ತಾರೆಂದು ತಿಳಿದ ಲೇಖಕರು ಡಯಾನಳನ್ನು ಕೇಳುತ್ತಾರೆ; "ಏನಮ್ಮ, ಈ ಅತಿಥಿಗಳ ಜೊತೆಯಲ್ಲಿ ಪಂಚೆ ಉಟ್ಟುಕೊಂಡು ಕೂಡಬಹುದೋ ಅಥವಾ ಶಾಸ್ತ್ರೋಕ್ತವಾಗಿ ಷರಾಯಿ, ಬೂಟ್ಸು ಇತ್ಯಾದಿಗಳನ್ನೆಲ್ಲ ಧರಿಸಬೇಕೊ? ಕೈಯಿಂದ ಊಟಮಾಡಬಹುದೊ? ಅನ್ನ ಸಾರು ಕಲಸಬಹುದೋ ಅಥವಾ ನಾಜೂಕಾಗಿ ಅನ್ನಕ್ಕೆ ಸಾರು ಸುರಿದು ಚಮಚದಲ್ಲಿ ಅದು ತಟ್ಟೆಗೆ ತಗಲಿದ ಸದ್ದು ಕೇಳದಂತೆ ಬಾಯಿಗೆ ಸಾಗಿಸಿ, ಅಗಿಯುವುದು ಕಾಣದಂತೆ ಅಗಿದು, ನುಂಗುವುದು ಕಾಣದಂತೆ ನುಂಗಬೇಕೊ?" ಎಂದಾಗ ಡಯಾನ ನಗುತ್ತಾ, ನೀವು ಕೈಯನ್ನೇ ಉಪಯೋಗಿಸಿದರೆ ಅವರಿಗೆ ವಿಚಿತ್ರವಾಗಿ ಕಾಣುವುದಿಲ್ಲ... ನೀವು ಈಗ ಜಾಕು ತ್ರಿಶೂಲ (ಫೋರ್ಕ್)ಚಮಚ ಇವುಗಳನ್ನೆಲ್ಲ ಚೆನ್ನಾಗಿಯೇ ಉಪಯೋಗಿಸುತ್ತೀರಲ್ಲ! ಎಂದಾಗ "ತಿಳಿಯಿತು ಮಹರಾಯತಿ, ತಿಳಿಯಿತು. ನನ್ನನ್ನು ಹೊಗಳಿ ನಿನ್ನ ಉದ್ದೇಶ ಸಾಧಿಸಿಕೊಳ್ಳುತ್ತೀಯಲ್ಲವೆ? ಆಗಲಿ ಬಿಡು, ಚಮಚ ಫೋರ್ಕುಗಳನ್ನೇ ಉಪಯೋಗಿಸುತ್ತೇನೆ. ಅವರೆಲ್ಲಾದರೂ ನಿನ್ನ ಮಾವ ಆಫ್ರಿಕಾದ ಕಗ್ಗತ್ತಲು ಕಾಡಿನಿಂದ ಬಂದ ಕಿರಾತ ಎಂದುಕೊಂಡಾರು!" "ಹಾಗೆಂದುಕೊಳ್ಳುವುದಕ್ಕೆ ಎಂಟೆದೆ ಇರಬೇಕು!"[79] ಎಂಬುದರಲ್ಲಿ ಲೇಖಕರು ಸೊಸೆಯೊಡನೆ ಹೊಂದಿದ್ದ ಆತ್ಮೀಯ ಸಂಬಂಧ, ಸ್ವವಿಡಂಬನೆಯ ವಕ್ರೋಕ್ತಿಯಲ್ಲಿ ಆತ್ಮವಿಶ್ವಾಸದ ಸ್ವಪ್ರಶಂಸೆಯನ್ನು ತಿಳಿಯುವುದರೊಂದಿಗೆ ಅಮೇರಿಕಾದ ಊಟೋಪಚಾರಗಳ ರೀತಿ–ನೀತಿಯನ್ನು ಸಹ ಅರಿಯಬಹುದು. ಅಲ್ಲದೆ ಅಮೆರಿಕನ್ ಉಡುಪಾದ ಬಿಕನಿ ಕುರಿತು ಲೇಕಕರ ಅಪ್ರತ್ಯಕ್ಷ ಅಸಮಾಧಾನವನ್ನು ಕ್ಯಾರಲ್ ಮತ್ತು ಡಯಾನಳೊಂದಿಗಿನ ಬಿಕಿನಿ ಚರ್ಚೆಯಲ್ಲಿ ಗುರುತಿಸಬಹುದು.

ಪಾಶ್ಚಾತ್ಯರ ಪದ್ಧತಿಯ ಪ್ರಕಾರ ಅತಿಥಿಗೆ ಬೇರೆ ಕೊಠಡಿ, ಕುರ್ಚಿ, ಮೇಜು, ಮಂಚ ಮೊದಲಾದ ಸೌಕರ್ಯಗಳೊಂದಿಗೆ ಊಟದ ಸಮಯದಲ್ಲಿ ಯಾರ ಮಗ್ಗುಲಲ್ಲಿ ಕೂರಿಸಬೇಕು, ಯಾವ ಮಾತೆತ್ತಬೇಕು,

ಮಾತೆತ್ತಬಾರದೆಂಬ ಅವಾಂತರವನ್ನು ನೋಡಿ ಲೇಖಕರೊಮ್ಮೆ ಬಂಧುಗಳನ್ನು ಪ್ರಶ್ನಿಸಿದಾಗ ಆಕೆ ಪ್ರತಿಕ್ರಿಯಿಸಿ "ಇಂಥ ವಿಷಯಗಳಲ್ಲಿ ಎಷ್ಟು ಜಾಗರೂಕತೆ ವಹಿಸಿದರೂ ಸಾಲದು. ಲೋಪ ಕಂಡುಬಂದರೆ ಅಮೆರಿಕದಲ್ಲಿ ಮಾನಕ್ಕೆ ಕಡಮೆ!"[80] ಆದರೆ ಭಾರತದ ಜೀವನಕ್ರಮವೇ ಬೇರೆ. ದೈನಂದಿನ ವಸ್ತುಗಳ ಬಳಕೆ ಕಡಮೆ; ನಮ್ಮ ಅವಶ್ಯಕತೆಗಳೇ ಕಡಮೆ. ಮಂಚವಿಲ್ಲದೆ ನೆಲದ ಮೇಲೆಯೇ ಹಾಸಿಗೆಯಲ್ಲಿ ಮಲಗುವುದು. ಕುರ್ಚಿಯಿಲ್ಲದಿದ್ದರೆ ಚಾಪೆಯ ಅಥವಾ ಜಮಖಾನದ ಮೇಲೆ ಕೂರುವುದೆಲ್ಲ ಸರ್ವಸಾಮಾನ್ಯ. ಮನೆಗೆ ಬಂದವರೊಡನೆ ನಮ್ಮ ವ್ಯವಹಾರವೂ ಸರಳ ರೀತಿಯದು. ನಮ್ಮ ಅತಿಥಿಗಳು ಅದಕ್ಕೆ ಹೊಂದಿಕೊಳ್ಳುತ್ತಾರೆ– ಅವರೂ ನಮ್ಮ ಮನೋವೃತ್ತಿಯವರಾದ್ದರಿಂದ ಇದ್ದದನ್ನು ಪ್ರೀತಿಯಿಂದ ನೀಡಿ ಉಪಚರಿಸಿದರೆ ಇರಬೇಕೆನ್ನುವ ಹಾಗೂ ಮತ್ತೆ ಬರಬೇಕೆನ್ನುವ ಭಾವನೆ ಸಹಜವಾಗಿ ಉಂಟಾಗುತ್ತದೆಂದು ಭಾರತ ಮತ್ತು ಅಮೇರಿಕಾಗಳ ಅತಿಥಿ, ಅತಿಥೇಯ ಕ್ರಮಗಳನ್ನು ತೌಲನಿಕವಾಗಿ ವಿಮರ್ಶಿಸಿದ್ದಾರೆ.

ಲೇಖಕರನ್ನೊಮ್ಮೆ ಮೆಕ್‌ಮಿಲನ್ ಬೀಗ ದಂಪತಿಗಳು "ಸ್ವೀಡಿಷ್ ಕಾಫಿ ಹೌಸ್‌ಗೆ ಕರೆದುಕೊಂಡು ಹೋಗಿ, 'ನಿಮಗೆ ಗ್ರಿಲ್ಡ್ ಚೀಸ್, ಸ್ಯಾಂಡ್‌ವಿಚ್ ತಿಂದು ತಿಂದು ಬೇಸರವಾಗಿದೆ. ಇಲ್ಲಿನ 'ಪ್ಯಾನ್‌ಕೇಕ್' ಹೇಗಿದೆ ನೋಡಿ' ಎಂದು ಶಿಫಾರಸು ಮಾಡಿದಾಗ ಅದುವರೆಗೆ ಅಮೆರಿಕದಲ್ಲಿ ಅಷ್ಟು ರುಚಿಯಾದ ದೋಸೆಯನ್ನು ತಿಂದಿರಲಲ್ಲ. ಅದು ನಮ್ಮ ಮೆಂತ್ಯದ ದೋಸೆ, ಕಾಯಿದೋಸೆಗಳ ಸಮಕ್ಕೆ ಬರಲಾರದೆಂದರೂ ಅವುಗಳ ಹತ್ತಿರ ನಿಲ್ಲಬಹುದು–ರಾಮನ ಬಳಿಯಲ್ಲಿ ಆಂಜನೇಯ ನಿಲ್ಲುವಂತೆ"[81] ಎಂದು ಭಾರತದ ದೋಸೆಯ ಅಮೋಘ ರುಚಿಯೊಂದಿಗೆ ಹೋಲಿಸಿರುವುದಲ್ಲದೆ ಅಮೆರಿಕಾದಲ್ಲಿನ ಹೊಟೆಗಳಲ್ಲಿ ಬೈಬಲ್ ಇಟ್ಟಿರುತ್ತಾರೆ ಎಂದು ತಿಳಿಸುತ್ತಾರೆ.

ಇಟಾಲಿಯನ್ನರಿಗೆ ಹೊಗಳಿಕೆ ಸಲ್ಲಬೇಕಾದು ಪೀಟ್ಸ (Pizza)ಕ್ಕಾಗಿ, ಇಲ್ಲಿ ಇಟಾಲಿಯನ್ನರು ಗೆದ್ದಿದ್ದಾರೆ ಎಂದು ಅನೇಕರ ಅಭಿಪ್ರಾಯ ನನ್ನದಲ್ಲ. ಎನ್ನುವ ಲೇಖಕರು ಪೀಟ್ಸ ನಮ್ಮ ರೊಟ್ಟಿಯ ಹಾಗೆ ಕಾಣುತ್ತದೆ. ಆದರೆ ಈರುಳ್ಳಿ, ಟೊಮೋಟೊ, ದಪ್ಪಮೆಣಸಿನಕಾಯಿ ಮೊದಲಾದವುಗಳಿಂದ ಅದಕ್ಕೊಂದು ವೈಶಿಷ್ಟ್ಯ ಬರುತ್ತದೆಂದು ಮತ್ತು ದಕ್ಷಿಣ ಇಂಡಿಯಾದ ಸಾರಿನ ಕೀರ್ತಿಗೆ ಸವಾಲಾಗಿ ಮಷ್‌ರೂಮ್ ಸೂಪ್‌ಅನ್ನು ತಯಾರಿಸುತ್ತಾರೆ. ಇದು ನಮ್ಮ ಮೆಣಸಿನ ಸಾರಿನಂತೆ. ಅದಕ್ಕೆ ಕನ್ನಡಿಗರು ಕೊಟ್ಟಿರುವ ಹೆಸರು 'ನಾಯಿಕೊಡೆ'[82] ಎಂದು ಹಲವು ಆಹಾರಗಳ ಹೋಲಿಕೆಗಳನ್ನು ಮಾಡಿದ್ದಾರೆ.

ಲೇಖಕರ ಮಿತ್ರರೊಮ್ಮೆ ಲೇಖಕರಿಗೆ "ನೀವು ಏನೂ ಯೋಚನೆ ಮಾಡಬೇಡಿ. ಈಗ ಇಂಗ್ಲಿಷ್ ಭಾಷೆ ವಿಶ್ವವ್ಯಾಪಿಯಾಗಿರುವಂತೆ ಬ್ರೆಡ್ ಕೂಡ ವಿಶ್ವವ್ಯಾಪಿಯಾಗಿದೆ. ಏನು ಸಿಕ್ಕದಿದ್ದರೂ ಅದು ಸಿಕ್ಕಿಯೇ ಸಿಕ್ಕುತ್ತದೆ" ಎಂದು ಶಾಕಾಹಾರಿಗಳಿಗೆ ಸಂದೇಶ ನೀಡುವುದನ್ನು ಕುರಿತು ಲೇಖಕರು ಅಮೆರಿಕನ್ನರಿಗೆ ಬ್ರೆಡ್ ವ್ಯಾಮೋಹ ಸ್ವಾಭಾವಿಕ. ಆದರೆ ನಾವು ಅವರನ್ನು ಅನುಕರಿಸಹೋದರೆ ದೋಸೆ, ಉಪ್ಪಿಟ್ಟು, ಪೊಂಗಲುಗಳನ್ನು ಮಾಡುವ ಕಲೆಯೇ ನಾಶವಾದೀತೆಂದು, ಬ್ರೆಡ್ ಟೋಸ್ಟ್ ಮತ್ತು ಸ್ಯಾಂಡ್‌ವಿಚ್ ಮುಂತಾದ ವೈವಿಧ್ಯ ರೂಪಗಳಲ್ಲಿ ಪ್ರಸಿದ್ಧವಾಗಿರುವುದನ್ನು ಸವಿಸ್ತಾರವಾಗಿ ಹಂಚಿಕೊಳ್ಳುತ್ತಾರೆ.[83]

"ಅಮೆರಿಕದವರಿಗೆ ಸಿಹಿ ಎಂದರೆ ಪ್ರಾಣ. ನನ್ನಂಥ ಸಂಯಮಿಗಳೂ ಕೂಡ ನಾಲ್ಕು ತಿಂಗಳಿನಲ್ಲಿ ಹಿಂದಿನ ನಾಲ್ಕು ವರ್ಷಗಳಿಗಿಂತ ಹೆಚ್ಚು ಸಿಹಿ ತಿಂದಿದ್ದೇನೆ!. ಮಿಚಿಗನ್ ರಾಜ್ಯದಲ್ಲಿ ಅನೇಕ ಕಡೆ ಚೆರ‍್ರಿ, ರಾಸ್ಪ್ ಬೆರಿ, ಸ್ಟ್ರಾಬೆರಿ, ಸೇಬು ಮುಂತಾದ ಹಣ್ಣುಗಳನ್ನು ಹೇರಳವಾಗಿ ಬೆಳೆಯುತ್ತಾರೆ. ಚೆರಿಪೈಯನ್ನು ವೆನಿಲ ಪರಿಮಳದಿಂದ ಸ್ವಲ್ಪ ಮರಳುಮರಳಾಗಿ ನಾಲಿಗೆಯ ಮೇಲೆ ಹೊರಳಿಸಿ, ಹೊರಳಿಸಿ ಸವಿಯಬಹುದಾದ ಐಸ್‌ಕ್ರೀಮ್, ಅದರ ಜೊತೆಗೆ ಹದವಾಗಿ ಬೆರೆತ ಚಾಕೊಲೆಟ್ಟಿನ ಕಂಪು, ಗರಿಗರಿಯಾಗಿ ಸಿಕ್ಕುವ ಬಾದಾಮಿ, ಹಲ್ಲೂರಿದರೆ ರಸವುಕ್ಕುವ ಚೆರಿ, ನೆನೆದರೆ ಮತ್ತೆ ಅಮೆರಿಕಕ್ಕೆ ಓಡಿಹೋಗೋಣವೆ ಎನ್ನಸುತ್ತದೆ"[84] ಎಂದು ಹೇಳುವ ಲೇಖಕರ ರುಚಿಪ್ರಿಯತೆಯನ್ನು ಗ್ರಹಿಸಬಹುದು.

**ಸಂಸ್ಕೃತಿಗಳ ಮುಖಾಮುಖಿ :** ಲೇಖಕರ ಪ್ರವಾಸದ ಉದ್ದೇಶಗಳಲ್ಲಿ ಸೊಸೆ ನ್ಯಾನ್ಸಿಯ ಪೋಷಕರನ್ನು ಭೇಟಿಯಾಗುವುದ್ದಿದರೂ ಮೊದಮೊದಲು ಬೀಗರ ಭೇಟಿಯ ವಿಷಯದಲ್ಲಿ ಕುತೂಹಲದೊಂದಿಗೆ ನಿರುತ್ಸಾಹವೂ ಇರಲು ಕಾರಣವೆಂದರೆ; ಪಾಶ್ಚಾತ್ಯರಲ್ಲಿ ಮಾವ–ಅಳಿಯಂದರ ಮಾವ–ಸೊಸೆಯರ, ಕೊನೆಗೆ ತಂದೆ–ಮಕ್ಕಳ ಸಂಬಂಧ ತಾವರೆಯೆಲೆಗೂ ಅದರ ಮೇಲಿರುವ ನೀರಿಗೂ ಇರುವಂಥಾದ್ದು. ಇನ್ನು ಬೀಗರ ಸಂಬಂಧ–ಅದರಲ್ಲೂ ಅಮೆರಿಕನ್ ಬೀಗರು ಜನಾಂಗ, ದೇಶ, ಮತ, ಸಂಸ್ಕೃತಿ, ಎಲ್ಲ ವಿಷಯದಲ್ಲೂ ಬೇರೆಯವರಾಗಿರುವ ಪರಿಸ್ಥಿತಿಯಲ್ಲಿ–ಹೇಗಿದ್ದೀತು! ಎಂಬ ಕಳವಳವಿರುವುದನ್ನು ಕಾಣಬಹುದು.

ಲೇಖಕರ ಮಗ ರಾಜು ಮೆಕ್‌ಮಿಲನ್ ದಂಪತಿಗಳ ಮಗಳು ನ್ಯಾನ್ಸಿಯನ್ನು ವಿವಾಹವಾಗುವ ವಿಷಯ ತಿಳಿದು ಅಸಮ್ಮತಿಯಿಂದ ತಂತಿ ಕೊಟ್ಟಿದ್ದ ಪ್ರಸಂಗವನ್ನು ವಿವರಿಸುತ್ತಾ, "ನಿಮ್ಮ ಮಗ ಮತ್ತು ನಮ್ಮ ಮಗಳು ಮದುವೆಯಾಗಬೇಕೆಂದಿದ್ದಾರೆ. ನಡವಳಿಕೆ, ಮತ, ಸಂಸ್ಕೃತಿ, ಇವೆಲ್ಲ ದೃಷ್ಟಿಯಿಂದಲೂ

ಇದು ನಮಗೆ ಇಷ್ಟವಿಲ್ಲ. ನೀವು ನಿಮ್ಮ ಮನಗನಿಗೆ ಬೇಡ ಎಂದು ಹೇಳಿ; ನಮ್ಮೊಡನೆ ಸಹಕರಿಸಿ" ಎಂದು. ಅವರಂತೆ ನಾನೂ ಆ ಮದುವೆಗೆ ವಿರೋಧಿಯೇ. "ಇದು ನನಗೂ ಇಷ್ಟವಿಲ್ಲ, ನಿನ್ನ ತಾಯಿಗೂ ಇಷ್ಟವಿಲ್ಲ" ಎಂದೇನೋ ರಾಜುವಿಗೆ ಸ್ಪಷ್ಟಪಡಿಸಿದೆ. ಆದರೆ 'ಬೇಡ' ಎಂದು ಬರೆಯಲಿಲ್ಲ. ನಾವು ಆ ಮದುವೆಯನ್ನು ವಿರೋಧಿಸುವುದಕ್ಕೆ ಕಾರಣವೇನು, ಅದರ ಪರವಾಗಿಯೂ ವಿರೋಧವಾಗಿಯೂ ಹೇಳಬಹುದಾದದ್ದೇನು, ಎಂದೆಲ್ಲ ವಿವರಿಸಿ, "ಇದನ್ನೆಲ್ಲ ಯೋಚಿಸಿ ನಿನ್ನಿಷ್ಟವಿದ್ದಂತೆ ಮಾಡು" ಎಂದು ಕಾಗದ ಬರೆದೆ; ಆ ಕಾಗದದ ಪ್ರತಿಯನ್ನು ಮೆಕ್‌ಮಿಲನ್‌ರಿಗೆ ಕಳಿಸಿದೆ. ರಾಜು ತನ್ನ ನಿಲುವನ್ನು ಬದಲಾಯಿಸಲಿಲ್ಲ. "ನ್ಯಾನ್ಸಿಯನ್ನೇ ಮದುವೆಯಾಗಬೇಕೆಂದು ನಿಶ್ಚಯಿಸಿದ್ದೇನೆ. ನನ್ನ ಸೌಖ್ಯಕ್ಕೆ ಅದು ಅವಶ್ಯಕ. ನಿಮ್ಮಿಬ್ಬರ ಒಪ್ಪಿಗೆಯನ್ನೂ ಆಶೀರ್ವಾದವನ್ನೂ ತಿಳಿಸಿ" ಎಂದು ಉತ್ತರ ಬರೆದ. ನಾನೂ ನನ್ನ ನಿಲುವನ್ನು ಬದಲಾಯಿಸಲಿಲ್ಲ. "ನಮ್ಮ ಒಪ್ಪಿಗೆಯುಂಟು ಎಂದು ಬರೆದರೆ ಅದು ಸುಳ್ಳಾಗುತ್ತದೆ. ನಮ್ಮ ಆಶೀರ್ವಾದ ಮಾತ್ರ ಖಂಡಿತ ಇದೆ. ಅದು ಯಾವಾಗಲೂ ಇದ್ದೇ ಇರುತ್ತದೆ" ಎಂದು ಹೇಳಿ ಆ ಸಂಬಂಧ ಪತ್ರವ್ಯವಹಾರವನ್ನು ಮುಗಿಸಿದೆ"[85] ಎನ್ನುತ್ತಾರೆ.

"ಮದುವೆಯಾದ ಮೇಲೆ ರಾಜು ಎರಡು ವಾರ ರಜ ಪಡೆದು ತಾನೊಬ್ಬನೇ ಇಂಡಿಯಾಕ್ಕೆ ಬಂದ.–ಕೇವಲ ನಮ್ಮನ್ನು ಸಮಾಧಾನಪಡಿಸಲೆಂದು, ಅವನು ವಾಪಸು ಹೋದಾಗ ನಾನು ನಮ್ಮ ವೈದಿಕ ಆಶೀರ್ವಾದ ಮಂತ್ರವನ್ನು... ಅದರ ಕೆಲವು ಭಾಗಗಳು ನನಗೆ ಬಹಳ ಮೆಚ್ಚು–ಇಂಗ್ಲಿಷಿಗೆ ಭಾಷಾಂತರಿಸಿ ನ್ಯಾನ್ಸಿಗೆ ಅವುಗಳನ್ನೊಳಗೊಂಡ ಕಾಗದ ಬರೆದೆ. ಅದಕ್ಕೆ ನನ್ನ ಹೆಂಡತಿ, ನಾನು, ನನ್ನ ತಮ್ಮಂದಿರು, ಎಲ್ಲರೂ ರುಜುಮಾಡಿ ರಾಜುವಿನ ಕೈಯಲ್ಲಿ ಕೊಟ್ಟು ಕಳಿಸಿದೆವು. ಅಮೆರಿಕನ್ ಹುಡುಗಿಗೂ ನಮಗೂ ಹೊಂದಿಕೆ ಬೆಳೆಯಬೇಕಾದರೆ ಸ್ವಲ್ಪ ಕಾಲ ಬೇಕೆಂದು ನಾವೆಲ್ಲ ಬಲ್ಲೆವು. ಆದರೂ ಆ ವೇಳೆಗೆ ನಮ್ಮ ಮನಸ್ಸಿನಲ್ಲಿ ನ್ಯಾನ್ಸಿ ಮೆಕ್‌ಮಿಲನ್‌ರ ಮಗಳಲ್ಲ, ನಮ್ಮ ಮನೆಗೆ ಬಂದ ಸೊಸೆ"[86] ಎಂಬ ಲೇಖಕರ ಕಾಳಜಿಯನ್ನು ಭಾರತೀಯ ಪ್ರತಿನಿಧಿಯಾಗಿ ಸ್ವೀಕರಿಸಬಹುದೊಂದಿಗೆ, ಒಬ್ಬ ಸಾಮಾನ್ಯ ಮಾವ ತನ್ನ ಮನೆಯ ಸೊಸೆಯನ್ನು ತನ್ನ ಮನೆಯ ವಸ್ತುವೆಂದು ಭಾವಿಸುವಲ್ಲಿನ ಭಾವುಕತೆಯನ್ನು ಅರಿಯಬಹುದು.

ಲೇಖಕರ ಮಗ ರಾಜು ತನ್ನ ಹೆಂಡತಿ ನ್ಯಾನ್ಸಿ ಮತ್ತು ಮಗಳು ಕಮಲಳೊಂದಿಗೆ ಪ್ರಥಮ ಬಾರಿ ಆಗಮಿಸುವಾಗ ಸಂಪ್ರದಾಯಸ್ಥ ಕುಟುಂಬದ ಪೋಷಕರಲ್ಲಿ ಸಹಜವಾಗಿ ಮೂಡುವ ಹರ್ಷೋಲ್ಲಾಸಗಳು,

ಭಿನ್ನ ಧರ್ಮ, ಭಿನ್ನ ದೇಶ, ಭಿನ್ನ ಜನಾಂಗಗಳ ಸ್ವಭಾವ ಮೊದಲಾದವುಗಳ ಕುರಿತು ಉಂಟಾಗುವ ಭಾವೋದ್ವೇಗಗಳನ್ನು ಓದುಗರಲ್ಲಿ ಲೀನವಾಗುವಂತೆ ಹೇಳಿರುವ ಬಗೆ; "ಆಧುನಿಕ ಯೋಜನಾ ತರಂಗಗಳು–ಅವುಗಳ ಪರಿಚಯ ತಕ್ಕ ಮಟ್ಟಿಗೆ ಇದ್ದರೂ–ಲೇಖಕರ ಪತ್ನಿಯ ಮತಶ್ರದ್ಧೆ ಆಚಾರಶ್ರದ್ಧೆ ದೈವಶ್ರದ್ಧೆಗಳ ಮೇಲೆ ಕೊಚ್ಚಿ ಹರಿದಿಲ್ಲ. ಲೇಖಕರಿಗೂ ಅವರ ಪತ್ನಿಗೂ ಆಗಾಗ ನಡೆಯುತ್ತಿದ್ದ ವಾಗ್ವಾದಗಳು "ನಿಮ್ಮ ಮಾತು ಬಿಡಿ, ನಿಮಗೆ ದೇವರಿಲ್ಲ ದಿಂಡರಿಲ್ಲ!" ಎಂಬ ಪತ್ನಿಯ ನಗೆ–ಮಾತಿನಲ್ಲಿ ಕೊನೆಗಾಣುತ್ತಿದ್ದವು ಎಂದು ತಿಳಿಸಿದ್ದಾರೆ.

ಹೆಂಡತಿ, ಮಗ, ಸೊಸೆ ಮತ್ತು ಇತರ ಮನಸ್ಸಿನ ಸೂಕ್ಷ್ಮ ಸಂಬಂಧಗಳ ಕುರಿತು ಲೇಖಕರು ಪರ್ಯಾಲೋಚಿಸುವುದು ಹೀಗೆ; ಅಮೆರಿಕದ ಕ್ರಿಶಿಯನ್ ಸೊಸೆ ಮನೆಗೆ ಬಂದರೆ ಸತಿಯ ಪ್ರತಿಕ್ರಿಯೆ ಹೇಗಿರುತ್ತೋ ಏನೋ, ಎಂದು ನನ್ನ ಶಂಕೆ. ಅವಳು ನ್ಯಾನ್ಸಿಯ ಮನಸ್ಸನ್ನು ನೋಯಿಸುವುದಿಲ್ಲ–ಆ ವಿಷಯದಲ್ಲಿ ನನಗೆ ಸಂದೇಹವಿಲ್ಲ. ಆದರೆ ತಾನು ಒಳಗೇ ಎಷ್ಟು ನೊಂದುಕೊಳ್ಳುತ್ತಾಳೆಯೊ! ನ್ಯಾನ್ಸಿಗೆ ಹೇಳಬೇಕಾದ್ದನ್ನು ರಾಜು ಹೇಳುತ್ತಾನೆ. ಜಯಲಕ್ಷ್ಮಿಗೆ ನಾನು ಏನು ಹೇಳಲಿ? ಈ ಅತ್ತೆಸೊಸೆಯರು ಹೊಂದಿಕೊಂಡಿರಲೆಂದು, ಅದು ಸಾಧ್ಯವಲ್ಲದಿದ್ದರೆ ಒಬ್ಬರನ್ನೊಬ್ಬರು ನೋಯಿಸದಿರಲೆಂದು, ತನ್ನ ಉತ್ಕಟವಾದ ಆಸೆ.. ಜಯಲಕ್ಷ್ಮಿಗೆ ಏನು ಹೇಳಲಿ? ಅವರ ನಂಬಿಕೆಗೆ ವಿರುದ್ಧವಾಗಿ ನಡೆದುಕೊಳ್ಳಬೇಕೆಂದು ಹೇಗೆ ಒತ್ತಾಯಪಡಿಸಲಿ? ನಾನು ಲಘುವಾಗಿ ಸೂಚನೆ ಕೊಟ್ಟರೂ ಅವಳಿಗೆ ಅದು ಒತ್ತಾಯವಾಗಿಯೇ ಪರಿಣಮಿಸುತ್ತದೆ. ಹೀಗೆ ಅಳೆದು ಸುರಿದು ಕೊನೆಗೆ ಏನೂ ಹೇಳದೆ ಸುಮ್ಮನಿರುವುದೇ ಲೇಸು ಎಂದು ನಿಶ್ಚಯಿಸಿದೆ. ನ್ಯಾನ್ಸಿಯ ಮನಸ್ಸು ನೋಯಬಾರದು. ಇವಳ ಮನಸ್ಸೂ ನೋಯಬಾರದು.

ಕೊನೆಗೆ ಅವಳೇ ಕೇಳಿದಳು;

"ಸೊಸೆ ಬಂದಾಗ ಏನು ಮಾಡಬೇಕು? ಹೇಳಿ."

"ರಾಜು ಇದೇ ಪ್ರಶ್ನೆ ಕೇಳಿ ಕಾಗದ ಬರೆದಿದ್ದನಲ್ಲ? ಅವನಿಗೆ ಕೊಟ್ಟ ಉತ್ತರ ನಿನಗೆ ಗೊತ್ತಲ್ಲ? ಹೀಗೆ ಮಾಡು ಅಂತ ನಾನು ಹೇಳುವುದಿಲ್ಲ. ನಿನಗೆ ಸರಿತೋರಿದಂತೆ ನಡೆದುಕೊ. ನಾನು ಪ್ರತಿ ಹೇಳುವುದಿಲ್ಲ."

"ಬಾಯಲ್ಲಿ ಹೇಳುವುದಿಲ್ಲ. ಮನಸ್ಸಿನಲ್ಲಿ..."

"ಮನಸ್ಸಿನಲ್ಲೂ ಅಸಮಾಧಾನ ಇಟ್ಟುಕೊಳ್ಳುವುದಿಲ್ಲ."

"ಎಲ್ಲ ನನ್ನ ತಲೆಯ ಮೇಲೆ ಹೊರಿಸುತ್ತಾ ಇದೀರಿ!"

"ನಿನ್ನ ತಲೆ ಹೊರಬಲ್ಲದು. ಹೊತ್ತು ಕೊ."

ರಾಜು, ನ್ಯಾನ್ಸಿ, ಕಮಲ, ಎಲ್ಲಾ ಸಂಜೆಯ ರೈಲಿನಲ್ಲಿ ಬಂದರು. ಮನೆಗೆ ಬಂದೊಡನೆ ನ್ಯಾನ್ಸಿ ಜಯಲಕ್ಷ್ಮಿಗೆ ನಮಸ್ಕಾರ ಮಾಡಿದ್ದನ್ನು ಗಮನಿಸಿದೆ-ಅದು ರಾಜು ಕೊಟ್ಟ ಸಲಹೆಯಿರಬೇಕು. ಮಾರನೆಯ ದಿನ ನ್ಯಾನ್ಸಿ ಅಡಿಗೆ ಮನೆಯ ಬಾಗಿಲಿನ ಬಳಿ ನಿಂತು ವಿನಯದಿಂದ, ನಗುಮುಖದಿಂದ ಕೇಳಿದಳು;

"ನಾನು ಎಲ್ಲಿಯವರೆಗೆ ಬರಬಹುದು?" ನಮ್ಮಲ್ಲಿರುವ 'ಮಡಿ' ಕಲ್ಪನೆಯನ್ನು ರಾಜು ಅವಳಿಗೆ ವಿವರಿಸಿದ್ದಿರಬೇಕೆಂದು ಸ್ಪಷ್ಟ.

ಜಯಲಕ್ಷ್ಮಿಗೆ ಇಂಗ್ಲಿಷಿನ ಮೇಲೆ ಮಾತಾಡುವಷ್ಟು ಮಟ್ಟಿನ ಪ್ರಭುತ್ವವಿಲ್ಲ. ಆದರೆ ಆಡಿದ್ದನ್ನು ಸ್ವಲ್ಪ ಮಟ್ಟಿಗೆ ಅರ್ಥಮಾಡಿಕೊಳ್ಳಬಲ್ಲಳು. ಅವಳು ಕನ್ನಡದಲ್ಲೇ ಉತ್ತರ ಕೊಟ್ಟಳು;

"ನೀನು ನಮ್ಮ ಮನೆಯ ಸೊಸೆ. ಎಲ್ಲಿ ತಿರುಗಾಡಲು ತಾನೆ ಅಡ್ಡಿಯೇನು?"

"ನಾನು ನಿಮ್ಮನ್ನು ಏನೆಂದು ಕರೆಯಲಿ?"

"ಎಲ್ಲರೂ ನನ್ನನ್ನು ಜಯಮ್ಮ ಎಂದು ಕರೆಯುತ್ತಾರೆ. ನೀನೂ ಹಾಗೇ ಕರಿ."

ಇದಾದ ಮೂರುನಾಲ್ಕು ದಿನಗಳಲ್ಲೇ ಗೌರಿಯ ಹಬ್ಬ ಬಂತು. ಅವತ್ತು ಲೇಖಕರು ನೋಡಿದ ದೃಶ್ಯವನ್ನು ಎಂದಿಗೂ ಮರೆಯಲಾರೆ ಎನ್ನುತ್ತಾ; ನ್ಯಾನ್ಸಿ ಸ್ನಾನ ಮಾಡಿ ತಲೆ ಬಾಚಿ ಜಡೆ ಹೆಣೆದುಕೊಂಡು (ಆ ವೇಳೆಗಾಗಲೇ ಅವಳು ಕೇಶವನ್ನು ಉದ್ದವಾಗಿ ಬೆಳೆಸಿದ್ದಳು)ಹಣೆಗೆ ಕುಂಕುಮ ಇಟ್ಟು ಜಯಲಕ್ಷ್ಮಿ ಹೇಳಿಕೊಟ್ಟಂತೆ ಅವಳ ಮಗ್ಗುಲಲ್ಲಿ ಕುಲಿತು ಗೌರೀ ಪೂಜೆ ಮಾಡುತ್ತಿದ್ದಳು.-ಲೇಖಕರ ಕಣ್ಣಲ್ಲಿ ನೀರು ಬಂದದ್ದನ್ನು ಯಾರೂ ಕಾಣದಿರಲೆಂದು ನಾನು ಅಲ್ಲಿಂದ ಹೊರಟುಹೋದೆ. ಒಂದು ಕಡೆ ತಾನು ನಂಬಿದ ದೈವ, ಸಾವಿರಾರು ವರ್ಷಗಳಿಂದ ಬಂದ ನಿಯಮಗಳು, ವಿಧಿನಿಷೇಧಗಳು; ಮತ್ತೊಂದು ಕಡೆ ಕ್ರೈಸ್ತಮತಾನುಯಾಯಿಯಾದ ಹೆಣ್ಣು. ಹಿಂದೆ ಮಾಂಸ ತಿನ್ನುತ್ತಿದ್ದವಳು-ಇವೊಂದು ಜಯಲಕ್ಷ್ಮಿಯ

ನೈಸರ್ಗಿಕ ಹಿರಿತನಕ್ಕೆ ಕುಂದು ತರಲಿಲ್ಲ. ಗೌರೀದೇವಿಯ ವರದ ಹಸ್ತ ತನಗೆ ಬೇಕಾದರೆ ತನ್ನ ಸೊಸೆಗೆ ಬೇಡವೆ?.. ಇವಳೊಡನೆ ನಲವತ್ತು ವರ್ಷ ಸಂಸಾರ ಮಾಡಿದ್ದೆ. ಆದರೂ ಸತಿಯ ಔದಾರ್ಯದ ಮತ್ತು ಘನತೆಯ ಔನ್ನತ್ಯವನ್ನು ತಿಳಿದಿರಲಿಲ್ಲ! ಅವಳನ್ನು ಮನಸಾರ ಹೊಗಳಬೇಕಾಗಿತ್ತು; ಹಾಗೆ ಮಾಡಲಿಲ್ಲ. ನನ್ನ ಮೆಚ್ಚಿಕೆ ಮನಸ್ಸಿನಲ್ಲೇ ಉಳಿದುಹೋಯಿತು"[87] ಎಂದು ಲೇಖಕರು ಪತ್ನಿಗೆ ತಮ್ಮ ಮನದಮೌನ ಕೃತಜ್ಞತೆಯನ್ನರ್ಪಿಸಿದ್ದಾರೆ.

ಹಾಗೆಯೆ ಸೊಸೆ ನ್ಯಾನ್ಸಿಯ ಕುರಿತು ಈ ಅತ್ತೆಗೆ ತಕ್ಕ ಸೊಸೆ. 'ಪೂಜೆ ಮಾಡುತ್ತೀಯಾ' ಎಂದು ಕೇಳಿದೊಡನೆ ಒಪ್ಪಿದಳು, ಹಿಂದೂ ಅತ್ತೆಗಿದ್ದಂತೆಯೇ ಕ್ರೈಸ್ತ ಸೊಸೆಗೂ ಸಾವಿರಾರು ವರ್ಷದಿಂದ ಬಂದ ವಿಧಿ ನಿಷೇಧಗಳಿದ್ದವು. 'ಹೂವು ಮಂತ್ರಾಕ್ಷತೆಗಳನ್ನು ಪೂಜೆ ಮಾಡು' ಎಂದಾಗ ಅವಳಿಗೆ ಬೈಬಲ್‌ನಲ್ಲಿ ಬರುವ ದಶಾಜ್ಞೆಗಳಲ್ಲಿ ಒಂದಾದ 'Thou shall not make unto thee a graven image ('ನೀನು-ಪೂಜೆಗಾಗಿ-ಕಡೆದ ಮೂರ್ತಿಯನ್ನು ನಿರ್ಮಿಸಕೂಡದು') ಎಂಬುದು ನೆನಪಿಗೆ ಬಂದು ಪೂಜೆ ಮಾಡಲು ಮನಸ್ಸು ಹಿಂಜರಿಯಿತಂತೆ. ಜಯಲಕ್ಷ್ಮಿಯಂತೆಯೇ ಅವಳೂ ಈ ಹಿಂಜರಿಕೆಯನ್ನು ಅದುಮಿದಳು ಎನ್ನುವ ಲೇಖಕರು ತಮ್ಮ ಸಂಸಾರದ ಈ ಪ್ರಸಂಗವನ್ನು ಹೆಮ್ಮೆಯಿಂದ ಬರೆಯುತ್ತೇನೆ"[88] ಎಂದು ಹೇಳಿರುವಲ್ಲಿ ಲೇಖಕರ ಆತ್ಮಾಭಿಮಾನದ ಈ ಸಂದರ್ಭದಲ್ಲಿನ ಪರಸ್ಪರ ಪ್ರತಿಯೊಂದು ಸಂಬಂಧಗಳು ತಮ್ಮ ಹಿತಕ್ಕಿಂತ. ಅನ್ಯದೃಷ್ಟಿಗೆ ಒತ್ತುಕೊಡುತ್ತಾ ಹೇಗೆ ಪ್ರಜ್ಞಾಪೂರ್ವಕವಾಗಿ ನಡೆಯುತ್ತಾರೆಂಬಲ್ಲಿ ಇದಕ್ಕಿಂತ ಮಿಗಿಲಾದ ಮಾನವೀಯತೆ ಉಂಟೇ ಎನಸುತ್ತದೆ.

ಲೇಖಕರು ಈ ಮಾದರಿಯ ಇನ್ನೊಂದು ಪ್ರಸಂಗದವನ್ನು ಸ್ಮರಿಸುತ್ತಾ ಹೀಗೆ ನಿರೂಪಿಸಿದ್ದಾರೆ. "ಒಮ್ಮೆ ಲೇಖಕರು ಡಿ.ವಿ. ಗುಂಡಪ್ಪನವರೊಡನೆ ಮಾತನಾಡುತ್ತಿದ್ದಾಗ ಅಲ್ಲಿಗೆ ಗುಂಡಪ್ಪನವರ ಮಿತ್ರರಾದ ಗಣ್ಯವ್ಯಕ್ತಿ ಆಗಮಿಸಿದರು ಅವರಿಬ್ಬರ ಮಾತಿಗೆ ಭಂಗ ತರಬಾರದೆಂದು ಲೇಖಕರು ಹೊರಡಲನುವಾದಾಗ "ನಿಮಗೆ ತಿಳಿಯಬಾರದ ವಿಷಯವೇನೂ ಇಲ್ಲ. ಕೂತುಕೊಳ್ಳಿ" ಎಂದು ಕೂರಿಸಿಕೊಂಡು ಬಹುಹಿಂದೆ ಆ ವ್ಯಕ್ತಿ "ಪಾಶ್ಚಾತ್ಯ ಮಹಿಳೆಯೊಬ್ಬಳನ್ನು ಮದುವೆಯಾಗಬೇಕೆಂದಿದ್ದೇನೆಂದು ಆಶೀರ್ವಾದ ಬಯಸಿ ಅಕ್ಕ-ಭಾವನಿಗೆ ಪತ್ರ ಬರೆದರಂತೆ. ಆ ಹಿರಿಯರು ಬಹಳ ನೊಂದುಕೊಂಡು 'ಖಂಡಿತ ಹಾಗೆ ಮಾಡಬೇಡ' ಎಂದರೂ ಪಾಶಿಮಾತ್ಯ ಯುವತಿಯನ್ನು ಮದುವೆಯಾದ ಮೇಲೆ ಬಿರುಸು ಮಾತುಗಳು ನಡೆಯದಿದ್ದರೂ ಮುಂದೆ ಆ ಹಿರಿಯರೊಡನೆ ಅಕಾರಣವಾಗಿ ವ್ಯವಹಾರ ನಿಂತುಹೋಗಿತಂತೆ.

ಮೂರ್‍ನಾಲ್ಕು ವರ್ಷಗಳ ನಂತರ ಆ ವ್ಯಕ್ತಿ "ನಾನು ಇಂಥ ದಿನ ಇಂಥ ರೈಲಿನಲ್ಲಿ ಪತ್ನಿಯೊಂದಿಗೆ ಪ್ರಯಾಣಿಸುವುದಾಗಿ, ಅಲ್ಲಿಗೆ ಕೃಪೆ ಮಾಡಿ ಬರುವುದು ಸಾಧ್ಯವೇ? ಎಂದಾಗ ಆ ಹಿರಿಯರು; 'ಇದೇನು ನಿನ್ನ ಮಾತು? ನಿನ್ನ ಹೆಂಡತಿ ಜೊತೆಯಲ್ಲಿ ಬರುತ್ತಾಳೆಂದಮೇಲೆ ಮನೆಗೆ ಬಂದುಹೋಗಲೇಬೇಕಲ್ಲವೆ? ನಮ್ಮ ಮನೆಯಲ್ಲಿ ಎರಡು ದಿನ ಇದ್ದು ಹೋಗುವ ಏರ್ಪಾಡು ಮಾಡು". ಎಂಬ ಆಣತಿಯ ಮೇರೆಗೆ ಆ ವ್ಯಕ್ತಿ ದಂಪತಿ ಸಮೇತ ಮನೆಯ ಬಳಿಗೆ ಹೋಗುವ ಹೊತ್ತಿಗೆ ಬಾಗಿಲಿನಲ್ಲಿ ಮಣೆ ಹಾಕಿತ್ತು; ಅರಿಶಿನ ಕುಂಕುಮದ ತಟ್ಟೆ ಆರತಿಯ ತಟ್ಟೆ ಸಿದ್ಧವಾಗಿದ್ದವು. ಮನೆಗೆ ಬಂದ ಸೊಸೆಗೆ ಕುಂಕುಮ ಇಟ್ಟು ಆರತಿ ಎತ್ತಿ ಒಳಕ್ಕೆ ಬರಮಾಡಿಕೊಂಡರು. ಬಂಧುಗಳನ್ನು ಕರೆದು ಔತಣ ಮಾಡಿ, "ಇವಳು ನಮ್ಮ ಸೊಸೆ, ತಡವಾದರೂ ಇವತ್ತು ಮನೆ ತುಂಬಿಸಿಕೊಳ್ಳುತ್ತಿದ್ದೇವೆ" ಎಂದು ನಗು ಮುಖದಿಂದ ಆಕೆಯನ್ನು ಎಲ್ಲರಿಗೂ ಪರಿಚಯ ಮಾಡಿಕೊಟ್ಟರಂತೆ. ಮಾರನೆಯ ದಿನ ಆ ದಂಪತಿ ಹೊರಡುವುದಕ್ಕಿಂತ ಮುಂಚೆ ಸೊಸೆಯನ್ನು ಹಸೆಮಣೆಯ ಮೇಲೆ ಕೂರಿಸಿ ಮಡಿಲು ತುಂಬಿ ಹೂವು ಮುಡಿಸಿ "ಇನ್ನೊಂದು ಸಾರಿ ಬರುವಾಗ ಮಗುವನ್ನೆತ್ತಿಕೊಂಡು ಬಾ ನನ್ನ ತಾಯಿ!"[89] ಎಂದು ತಲೆಯ ಮೇಲೆ ಕೈಯಿಟ್ಟು ನೇವರಿಸಿ ಆಕೆಯನ್ನು ಆಶೀರ್ವದಿಸಿ ಕಳಿಸಿಕೊಟ್ಟದ್ದನ್ನು ಕೇಳಿದ ಲೇಖಕರು ಭಾವಪೂರ್ಣವಾಗಿ, ಅರ್ಥಪೂರ್ಣವಾಗಿ ನಿವೇದಿಸಿದ್ದಾರೆ.

ಲೇಖಕರು ಮೂರ್ತಿಪೂಜೆಯ ನಿಜವಾದ ಪ್ರಜ್ಞಾಪೂರ್ಣ ಮಾಹಿತಿಯನ್ನು ಪುಟ 64ರಲ್ಲಿ ವಿವೇಚಿಸಿದ್ದಾರೆ. ಭಾರತ ಮತ್ತು ಅಮೇರಿಕಗಳಲ್ಲಿನ 'ಹುಟ್ಟಿದದಿನ' ಹಾಗೂ 'ಮದುವೆದಿನ'ಗಳಲ್ಲಿನ ಪ್ರಾಶಸ್ತ್ಯದ ವ್ಯತ್ಯಾಸವನ್ನು ತೌಲನಿಕವಾಗಿ ವಿಮರ್ಶಿಸಿದ್ದಾರೆ. ಅಲ್ಲದೆ ಭಾರತ ಮತ್ತು ಭಾರತದ ವೈವಾಹಿಕ ಹಾಗೂ ಅಮೆರಿಕದ ಕುಟುಂಬ ವ್ಯವಸ್ಥೆಗಳ ಪರಿಗಳನ್ನು, ಹಿಂದೂ-ಕ್ರೈಸ್ತ-ಮುಸ್ಲಿಂ ಧರ್ಮಗಳ ಜಿಜ್ಞಾಸೆಗಳನ್ನು ಆಳವಾಗಿ ನ್ಯಾನ್ಸಿ ತಂಗಿ ಲಿಂಡಳೊಂದಿಗೆ ಧ್ವನಿಪೂರ್ಣ ಭಾಷಾಶೈಲಿಯಲ್ಲಿ ಚರ್ಚಿಸಿದ್ದಾರೆ. ಲೇಖಕರು ಮಗ-ಸೊಸೆ-ಸ್ಕಿನ್ನರ್ ಜೊತೆ ನೋಡಿದ ಯೆಹೂದ್ಯ ಸಿನಿಮಾದಿಂದ ಲೇಖಕರ ಮನಸ್ಸಿಗೆ ಮೆಚ್ಚಿಗೆಯಾಗುವುದರೊಂದಿಗೆ ಭಾರತೀಯ ಆಡಂಬರದ ಈಗಿನ ಮದುವೆಗಳ ದುಂದುವೆಚ್ಚವನ್ನು ಹೀಗಳಿಯುತ್ತಾ ಹಳೆಯ ಶಾಸ್ತ್ರಾಚರಣೆಗಳ ಮದುವೆಗಳ ಅರ್ಥಬದ್ಧತೆಯನ್ನು ಹಾಗೂ ಯಹೂದ್ಯರ ಶಾಸ್ತ್ರಾಚರಣೆಗಳ ಸದುದ್ದೇಶಗಳ ಹೋಲಿಕೆಗಳಲ್ಲಿ ಸಂಸ್ಕೃತಿಗಳ ವಿವೇಚನಾಪೂರ್ಣ ಮುಖಾಮುಖಿಯನ್ನು ವಿಶ್ಲೇಷಿಸಿದ್ದಾರೆ.

ಒಟ್ಟಾರೆಯಾಗಿ ಲೇಖಕರಿಗೆ ಅಮೇರಿಕನ್ನರ ಶಿಸ್ತು, ಅಚ್ಚುಕಟ್ಟುತನ, ಕಲಾಪ್ರೇಮ ಮೊದಲಾದವುಗಳು ಮೆಚ್ಚಿಗೆಯಾಗಿರುವುದರೊಂದಿಗೆ ಅವರಲ್ಲಿನ ಹಿಂಸಾ ಪ್ರವೃತ್ತಿಯನ್ನು ಟೀಕಿಸುತ್ತಾರೆ. ಅವರೇ ಅರಿಕೆಯಲ್ಲಿ

ಮೂರ್‍ನಾಲ್ಕು ವರ್ಷಗಳ ನಂತರ ಆ ವ್ಯಕ್ತಿ "ನಾನು ಇಂಥ ದಿನ ಇಂಥ ರೈಲಿನಲ್ಲಿ ಪತ್ನಿಯೊಂದಿಗೆ ಪ್ರಯಾಣಿಸುವುದಾಗಿ, ಅಲ್ಲಿಗೆ ಕೃಪೆ ಮಾಡಿ ಬರುವುದು ಸಾಧ್ಯವೇ? ಎಂದಾಗ ಆ ಹಿರಿಯರು; 'ಇದೇನು ನಿನ್ನ ಮಾತು? ನಿನ್ನ ಹೆಂಡತಿ ಜೊತೆಯಲ್ಲಿ ಬರುತ್ತಾಳೆಂದಮೇಲೆ ಮನೆಗೆ ಬಂದುಹೋಗಲೇಬೇಕಲ್ಲವೆ? ನಮ್ಮ ಮನೆಯಲ್ಲಿ ಎರಡು ದಿನ ಇದ್ದು ಹೋಗುವ ಏರ್ಪಾಡು ಮಾಡು". ಎಂಬ ಆಣತಿಯ ಮೇರೆಗೆ ಆ ವ್ಯಕ್ತಿ ದಂಪತಿ ಸಮೇತ ಮನೆಯ ಬಳಿಗೆ ಹೋಗುವ ಹೊತ್ತಿಗೆ ಬಾಗಿಲಿನಲ್ಲಿ ಮಣೆ ಹಾಕಿತ್ತು; ಅರಿಶಿನ ಕುಂಕುಮದ ತಟ್ಟೆ ಆರತಿಯ ತಟ್ಟೆ ಸಿದ್ಧವಾಗಿದ್ದವು. ಮನೆಗೆ ಬಂದ ಸೊಸೆಗೆ ಕುಂಕುಮ ಇಟ್ಟು ಆರತಿ ಎತ್ತಿ ಒಳಕ್ಕೆ ಬರಮಾಡಿಕೊಂಡರು. ಬಂಧುಗಳನ್ನು ಕರೆದು ಔತಣ ಮಾಡಿ, "ಇವಳು ನಮ್ಮ ಸೊಸೆ, ತಡವಾದರೂ ಇವತ್ತು ಮನೆ ತುಂಬಿಸಿಕೊಳ್ಳುತ್ತಿದ್ದೇವೆ" ಎಂದು ನಗು ಮುಖದಿಂದ ಆಕೆಯನ್ನು ಎಲ್ಲರಿಗೂ ಪರಿಚಯ ಮಾಡಿಕೊಟ್ಟರಂತೆ. ಮಾರನೆಯ ದಿನ ಆ ದಂಪತಿ ಹೊರಡುವುದಕ್ಕಿಂತ ಮುಂಚೆ ಸೊಸೆಯನ್ನು ಹಸೆಮಣೆಯ ಮೇಲೆ ಕೂರಿಸಿ ಮಡಿಲು ತುಂಬಿ ಹೂವು ಮುಡಿಸಿ "ಇನ್ನೊಂದು ಸಾರಿ ಬರುವಾಗ ಮಗುವನ್ನೆತ್ತಿಕೊಂಡು ಬಾ ನನ್ನ ತಾಯಿ!"[89] ಎಂದು ತಲೆಯ ಮೇಲೆ ಕೈಯಿಟ್ಟು ನೇವರಿಸಿ ಆಕೆಯನ್ನು ಆಶೀರ್ವದಿಸಿ ಕಳಿಸಿಕೊಟ್ಟದ್ದನ್ನು ಕೇಳಿದ ಲೇಖಕರು ಭಾವಪೂರ್ಣವಾಗಿ, ಅರ್ಥಪೂರ್ಣವಾಗಿ ನಿವೇದಿಸಿದ್ದಾರೆ.

ಲೇಖಕರು ಮೂರ್ತಿಪೂಜೆಯ ನಿಜವಾದ ಪ್ರಜ್ಞಾಪೂರ್ಣ ಮಾಹಿತಿಯನ್ನು ಪುಟ 64ರಲ್ಲಿ ವಿವೇಚಿಸಿದ್ದಾರೆ. ಭಾರತ ಮತ್ತು ಅಮೇರಿಕಗಳಲ್ಲಿನ 'ಹುಟ್ಟಿದದಿನ' ಹಾಗೂ 'ಮದುವೆದಿನ'ಗಳಲ್ಲಿನ ಪ್ರಾಶಸ್ತಯದ ವ್ಯತ್ಯಾಸವನ್ನು ತೌಲನಿಕವಾಗಿ ವಿಮರ್ಶಿಸಿದ್ದಾರೆ. ಅಲ್ಲದೆ ಭಾರತ ಮತ್ತು ಭಾರತದ ವೈವಾಹಿಕ ಹಾಗೂ ಅಮೆರಿಕದ ಕುಟುಂಬ ವ್ಯವಸ್ಥೆಗಳ ಪರಿಗಳನ್ನು, ಹಿಂದೂ–ಕ್ರೈಸ್ತ–ಮುಸ್ಲಿಂ ಧರ್ಮಗಳ ಜಿಜ್ಞಾಸೆಗಳನ್ನು ಆಳವಾಗಿ ನ್ಯಾನ್ಸಿ ತಂಗಿ ಲಿಂಡಳೊಂದಿಗೆ ಧ್ವನಿಪೂರ್ಣ ಭಾಷಾಶೈಲಿಯಲ್ಲಿ ಚರ್ಚಿಸಿದ್ದಾರೆ. ಲೇಖಕರು ಮಗ–ಸೊಸೆ–ಸ್ಕಿನ್ನರ್ ಜೊತೆ ನೋಡಿದ ಯೆಹೂದ್ಯ ಸಿನಿಮಾದಿಂದ ಲೇಖಕರ ಮನಸ್ಸಿಗೆ ಮೆಚ್ಚಿಗೆಯಾಗುವುದರೊಂದಿಗೆ ಭಾರತೀಯ ಆಡಂಬರದ ಈಗಿನ ಮದುವೆಗಳ ದುಂದುವೆಚ್ಚವನ್ನು ಹೀಗಳಿಯುತ್ತಾ ಹಳೆಯ ಶಾಸ್ತ್ರಾಚರಣೆಗಳ ಮದುವೆಗಳ ಅರ್ಥಬದ್ಧತೆಯನ್ನು ಹಾಗೂ ಯಹೂದ್ಯರ ಶಾಸ್ತ್ರಾಚರಣೆಗಳ ಸದುದ್ದೇಶಗಳ ಹೋಲಿಕೆಗಳಲ್ಲಿ ಸಂಸ್ಕೃತಿಗಳ ವಿವೇಚನಾಪೂರ್ಣ ಮುಖಾಮುಖಿಯನ್ನು ವಿಶ್ಲೇಷಿಸಿದ್ದಾರೆ.

ಒಟ್ಟಾರೆಯಾಗಿ ಲೇಖಕರಿಗೆ ಅಮೇರಿಕನ್ನರ ಶಿಸ್ತು, ಅಚ್ಚುಕಟ್ಟುತನ, ಕಲಾಪ್ರೇಮ ಮೊದಲಾದವುಗಳು ಮೆಚ್ಚಿಗೆಯಾಗಿರುವುದರೊಂದಿಗೆ ಅವರಲ್ಲಿನ ಹಿಂಸಾ ಪ್ರವೃತ್ತಿಯನ್ನು ಟೀಕಿಸುತ್ತಾರೆ. ಅವರೇ ಅರಿಕೆಯಲ್ಲಿ

ಹೇಳಿರುವಂತೆ "ಅಮೇರಿಕದಲ್ಲೇ ಆದ ಅನುಭವಗಳ ಜೊತೆಗೆ ಅದರಿಂದ ಪ್ರಚೋದಿತವಾಗಿ ಮನಸ್ಸಿನ ಮೇಲ್ಪದರಕ್ಕೆ ಬಂದ ಹಳೆಯ ಅನುಭವಗಳೂ ಸೇರಿವೆ. ಅನುಭವಕ್ಕೂ ಅದು ಅಭಿವ್ಯಕ್ತಿ ಪಡೆದದ್ದಕ್ಕೂ ನಡುವೆ ವರ್ಷಗಳ ಅಂತರವಿದೆ. ಬರೆಯುತ್ತಿದ್ದಾಗ ಎಷ್ಟೋ ಅಂಶಗಳು ನೆನಪಿಗೆ ಬರಲಿಲ್ಲ. ಆದರೆ ಬಂದಷ್ಟರಲ್ಲಿ ಸತ್ಯ ಮಸಕಾಗಿಲ್ಲ ಎಂದು ನನ್ನ ನಂಬಿಕೆ"[90] ಎಂದು ಸಾದರಪಡಿಸಿದ್ದಾರೆ.

**ವಿಸ್ಮಯಗಳ ನಾಡಿನಲ್ಲಿ – ದೇ.ಜ.ಗೌ. :**

ಲೇಖಕರು ಅಮೇರಿಕಾ ಪ್ರವಾಸದ ಅನುಭವಗಳನ್ನು ಕಾದಂಬರಿ ರೂಪದಲ್ಲಿ ರಚಿಸಿದ್ದಾರೆ. ಕಥಾ ನಿರೂಪಣೆಗಾಗಿ ಈ ರೂಪವನ್ನು ಬಳಸಿದ್ದಾರೆ. ಇಲ್ಲಿ ಯಾವುದೇ ಪಾತ್ರಗಳನ್ನು ಸೃಷ್ಟಿಸಿಲ್ಲ. ಕಾದಂಬರಿ ರೂಪದಲ್ಲಿಯೇ ಅಮೇರಿಕಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ ಮುಂತಾದ ಅಂಶಗಳ ಕುರಿತು ಬೆಳಕು ಚೆಲ್ಲುತ್ತಾರೆ.

ಅಮೇರಿಕೆಯ ನಿಸರ್ಗ ಸಂಪತ್ತು, ವೈಜ್ಞಾನಿಕ ತಾಂತ್ರಿಕ ಪ್ರಗತಿ, ಸುಖ ಸಾಧನಗಳ ದುಂದುಗಾರಿಕೆ, ಉದಾರ ನೀತಿಯ ರಾಜಕೀಯ ವ್ಯವಸ್ಥೆ, ಬಹು ದೇಶಿಯರ ವಲಸೆ, ಮುಕ್ತ ಪರಿಸ್ಥಿತಿ ಇವೇ ಮೊದಲಾದ ವೈಶಿಷ್ಟ್ಯಗಳ ಬಗ್ಗೆ ಲೇಖಕರು ಪ್ರವಾಸಿಗಳಿಂದ ಹಾಗೂ ಗ್ರಂಥಗಳಿಂದ ನಾನಾ ರೀತಿಯ ಪ್ರಶಂಸಾ ವ್ಯಾಖ್ಯಾನ ಕಥೆಗಳನ್ನು ತಿಳಿದುಕೊಂಡಿದ್ದುದರಿಂದ ಎಂದಾದರೊಮ್ಮೆ ದೇಶದ ಪ್ರಮುಖ ನಗರಿಗಳಿಗಾದರೂ ಭೇಟಿ ನೀಡಿ, ಅಮೇರಿಕೆಯ ಜೀವನವನ್ನು ಸ್ಥೂಲವಾಗಿಯಾದರೂ ಅಧ್ಯಯನ ಮಾಡಬೇಕೆಂದು ಹಂಬಲಿಸಿರುವಂತೆ ಎಲ್ಲವನ್ನು ಅಧ್ಯಯನ ಮಾಡಿ ಸ್ಪಷ್ಟಪಡಿಸಿರುವುದು ಕಂಡುಬರುತ್ತದೆ.

ಅಮೇರಿಕಾಗೆ ವಲಸೆ ಬಂದು ನೆಲೆಸಿರುವ ಭಾರತೀಯರ ಬದುಕಿನ ಚಿಂತೆ ಲೇಖಕರ ಮನಸ್ಸನ್ನು ಆವರಿಸಿಕೊಳ್ಳುತ್ತದೆ. ಅಲ್ಲಿ ದುಡಿಯಬಲ್ಲವರಿಗೆಲ್ಲ ಕೆಲಸ ಸಿಗುತ್ತದೆ, ನಿಜ. ನೌಕರಿಯಲ್ಲಿರುವ ಗಂಡ ಹೆಂಡಿರು ಬೆಳಿಗ್ಗೆ ಏಳು ಘಂಟೆಗೆ ಮನೆ ಬಿಟ್ಟರೆ ಸಂಜೆ ಆರೇಳು ಗಂಟೆಗೆ ಮೊದಲು ಮನೆಗೆ ಬರುವಂತಿಲ್ಲ. ಕಾರು ಉಳ್ಳವರು ಒಂದು ಗಂಟೆ ಮುಂಚೆ ಬಂದಾರೂ. ಒಂದು ವರ್ಷದ ಕೂಸುಗಳನ್ನು ಶಿಶುಪೋಷಕಿಯರ ಬಳಿ ಮತ್ತು ಮಕ್ಕಳನ್ನು ಶಿಶು ವಿಹಾರ ಅಥವಾ ಶಾಲೆಗಳಲ್ಲಿ ಬೆಳಿಗ್ಗೆ ಬಿಟ್ಟರೆ, ಅವರನ್ನು ತಂದೆ–ತಾಯಿಯರು ಮತ್ತೆ ನೋಡುವುದಿಲ್ಲ. ಸಂಜೆಯ ಮೇಲೆ, ಶಾಲೆಯಿಂದ ಸುಸ್ತಾಗಿ ಬಂದ ಮಂಕು ಮೋರೆಯ ಮಕ್ಕಳು ಸೋಫಾಗಳ ಮೇಲೆ ಅಬ್ಬೆಪಾರಿಗಳಂತೆ ಬಿದ್ದುಕೊಂಡು ಗಾಢ

ನಿದ್ರೆಯಲ್ಲಿ ಮುಳುಗುತ್ತಾರೆ. ಕೈ ತುಂಬಾ ಗಳಿಕೆಯ ವೈದ್ಯರು ಅಥವಾ ಇಂಜಿನಿಯರು ಮಕ್ಕಳ ಉಸ್ತುವಾರಿಗಾಗಿ ಮನೆಯಲ್ಲಿ ಆಯಾಗಳನ್ನು ಇಟ್ಟುಕೊಂಡಿರುತ್ತಾರೆ ಎನ್ನುತ್ತಾರೆ.

ಅಮೇರಿಕಾದ ಜನ ವಾರಕ್ಕೆ 'ಐದು' ದಿನ, ದಿನಕ್ಕೆ 'ಎಂಟು' ಗಂಟೆ ಸತತವಾಗಿ ದುಡಿಯುತ್ತಾರೆ. ತಲೆಯ ಮೇಲೆ ತಲೆ ಬಿದ್ದರೂ ಅವರು ಸೋಮವಾರದಿಂದ ಶುಕ್ರವಾರದ ದಿನಗಳಲ್ಲಿ ಕರ್ತವ್ಯಚ್ಯುತರಾಗುವುದಿಲ್ಲ. ಉಳಿದೆರಡು ದಿನ ರಜ. ರಜೆಯಲ್ಲಿ ಮನೆ ಕೆಲಸ ಅವರಿಗೆ ಇದ್ದೆ ಇರುತ್ತದೆ. ಇಲ್ಲವೆ ಪ್ರೇಕ್ಷಣೀಯ ಸ್ಥಳಗಳಿಗೆ ವಿಹಾರಯಾತ್ರೆ ಕೈಗೊಳ್ಳುತ್ತಾರೆ. ಖಾಸಗಿ ವೈದ್ಯರಿಗೆ ರಜಾ ದಿನಗಳಲ್ಲಿ ಅಲ್ಪ ಸ್ವಲ್ಪ ಕೆಲಸ ಇದ್ದೆ ಇರುತ್ತದೆ ಎಂದು ಲೇಖಕರು ಸಾಮಾನ್ಯ ಅಮೇರಿಕನ್ನರ ದೈನಂದಿನ ಬದುಕನ್ನು ತಿಳಿಸುತ್ತಾರೆ. "ಕೈ ಕೆಸರಾದರೆ ಬಾಯಿ ಮೊಸರು" ಎನ್ನುವಂತೆ ವಾರಕ್ಕೆ ಐದು ದಿನ ಕರ್ತವ್ಯನಿಷ್ಠೆಯಿಂದ ಕಷ್ಟ ಪಡುತ್ತಾರೆ. ಉಳಿದೆರಡು ದಿನ ವಿಶ್ರಾಂತಿ ಪಡೆಯುತ್ತಾರೆ. ಇದರಿಂದಾಗಿಯೇ ಅವರು ರಾಷ್ಟ್ರಾಭ್ಯುದಯಕ್ಕೆ ಕಾರಣರಾಗಿದ್ದಾರೆ. ನಮ್ಮಲ್ಲಿ ಇದು ತತ್ವಿರುದ್ದವಾಗಿದೆ ಎನ್ನುತ್ತಾ ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ.

-ಲೇಖಕರು ಸ್ವಾಮೀಜಿಯವರೊಂದಿಗೆ ಸಾಗುವಾಗ ದಾರಿಯುದ್ದಕ್ಕೂ ವೈದ್ಯವೃತ್ತಿ, ಪಾಶ್ಚಾತ್ಯ-ಪೌರ್ವಾತ್ಯ ದೇಶಗಳ ಆರ್ಥಿಕ ಪ್ರಗತಿ, ದುರ್ಗತಿ, ಅಮೇರಿಕೆಯ ಸಮಾಜದ ಗುಣ ದೋಷ ಈ ಮೊದಲಾದ ವಿಷಯಗಳನ್ನು ಚರ್ಚಿಸುತ್ತಾ, "ಸತಿ-ಪತಿಯರಲ್ಲಿ ಹೊಂದಾಣಿಕೆ ಇಲ್ಲದೆ, ನಿರಂತರವಾದ ಚಿಂತೆಯಿಂದ ಅಪರಿಹಾರ್ಯವಾದ ದು:ಖಗೊಳಗಾಗಿ ಬದುಕನ್ನು ಹಾಳು ಮಾಡಿಕೊಳ್ಳುವುದಕ್ಕಿಂತ, ವಿವಾಹವಿಚ್ಛೇದನದ ನಂತರ ಸಮಾನ ಮನೋಧರ್ಮದ ಸಮಾನುರೂಪದ ವ್ಯಕ್ತಿಗಳ ಕೂಡುವಳಿಯ ಮೂಲಕ ಭೂಮಿಯಲ್ಲಿ ಇದ್ದಷ್ಟು ದಿನ ಪೂರ್ಣ ಸುಖ ಪಡೆಯುವುದು ಮೇಲು; ಹಿತವಲ್ಲದ ದಾಂಪತ್ಯದಿಂದ ವ್ಯಕ್ತಿಗಳಿಗೆ ಸುಖವಿಲ್ಲ; ಸಮಾಜಕ್ಕೆ ಕೇಡು ತಪ್ಪದು; ವಿಷಮ ವಿವಾಹ ಅನೇಕ ಸಾಮಾಜಿಕ ರೋಗರುಜಿನಗಳಿಗೂ ಕಾರಣವಾಗುತ್ತದೆಂದೂ, ಸ್ವಾತಂತ್ರ್ಯಾಪಹರಣಕ್ಕೆ ದಾರಿಯಾಗುತ್ತದೆಂದೂ ಅವರ ಚರ್ಚೆಯಿಂದ ಸ್ಪಷ್ಟವಾಗುತ್ತದೆ. ಇಲ್ಲಿಯ ಈ ಸಾಮಾಜಿಕ ಪದ್ದತಿ ಹೊಲ್ಲದೆಂಬ ಟೀಕೆ ವಿವೇಕಶೂನ್ಯವಾದದೆಂದೂ, ಖಂಡನಾರ್ಹವಾದದೆಂದೂ ಇಬ್ಬರೂ ಒಪ್ಪುತ್ತಾರೆ. ಕಾಮುಕ ಜೀವನ ಅಮೇರಿಕಾಗೆ ಮಾತ್ರ ಸೀಮಿತವಾದದ್ದಲ್ಲ. ಅತಿಕಾಮಿಗಳು ಎಲ್ಲ ದೇಶಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಇದ್ದವರೇ. ಅದಕ್ಕಾಗಿ ಖೇದಪಡಬೇಕಾದ ಅಗತ್ಯವೂ ಇಲ್ಲ. ದ್ವೇಷ ಮಾತ್ಸರ್ಯಾದಿ ದೋಷಗಳಂತೆ ಅದು ಒಂದು ಮಾನವ ದೌರ್ಬಲ್ಯ. ಬೇರೆ ದೇಶಗಳಿಗೂ ಅಮೇರಿಕೆಗೂ ಇರುವ ವ್ಯತ್ಯಾಸವೆಂದರೆ, ಅಲ್ಲಿ

ಗುಟ್ಟಾಗಿಯೇ ನಡೆಯುವಂತದ್ದು ಇಲ್ಲಿ ಬಹಿರಂಗವಾಗಿ ನಡೆಯುತ್ತದೆ. ಇಲ್ಲಿ ಮುಚ್ಚುಮರೆ ಇಲ್ಲ. ಅದು ಈ ದೇಶದ ಗುಣವು ಹೌದು, ದೌರ್ಬಲ್ಯವೂ ಹೌದು. ಇಲ್ಲಿ ರಾತ್ರಿ ಕ್ಲಬ್ಬುಗಳಿಗೆ, ಕೆಂಪು ದೀಪಗಳ ಬೀದಿಗಳಿವೆ. ನೀಲಿ ಚಿತ್ರಗಳಿವೆ, ನಗ್ನ ಶರೀರ ಪ್ರದರ್ಶನಾಲಯಗಳಿವೆ, ಕೃತಕ ಸಂಭೋಗ ಸಾಧನಗಳಿವೆ. ಮುಷ್ಠಿ ಮೈಥುನ ಮತ್ತು ಸಲಿಂಗರತಿಯ ಮೂಲಕ ಕಾಮವಿಕಾರವನ್ನು ತೃಪ್ತಿಪಡಿಸಿಕೊಳ್ಳುವ ಅತಿರೇಕಗಳು ಉಂಟು"[91] ಎಂದಿರುವಲ್ಲಿ ಮುಕ್ತ ಲೈಂಗಿಕತೆಯ ಕುರಿತು ಟೀಕಿಯ ಎಳೆಯೂ ಇದೆ ಎನಿಸುತ್ತದೆ. ಇದು ಮಾನವ ಸಹಜ ಪ್ರವೃತ್ತಿಯಾದರೂ ಸೀಮಿತತೆ ಇರಬೇಕು ಅದೇ ಜೀವನವಲ್ಲ ಎಂಬುದನ್ನು ಮನಗಾಣಬೇಕು.

ಅಮೇರಿಕನ್ನರು ಸುಂದರವಾಗಿ ಕಾಣಲು ಏನು ಬೇಕಾದರೂ ಮಾಡಬಲ್ಲರೆಂಬುದು ಲೇಖಕರು ತಿಳಿಸುವ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸೆಯ ಮೂಲಕ ತಿಳಿಯಬಹುದು. ಯಾವಾಗಲೂ ಯುವಕ ಯುವತಿಯರಂತೆ ಕಾಣಬೇಕೆಂಬುದು ಅವರ ಬಯಕೆಯಂತೆ, ತಾರಾಗಣಕ್ಕಂತೂ ಹಾಗೆ ಕಾಣಬೇಕಾದ್ದೂ ಅತ್ಯಗತ್ಯ ಎನ್ನುತ್ತಾರೆ. ಅವರು ಉದ್ಯೋಗದ ಯಶಸ್ಸಿನ ದೃಷ್ಟಿಯಿಂದ ಚರ್ಮದ ಸುಕ್ಕುಗಳನ್ನು ಸರಿಪಡಿಸಿಕೊಳ್ಳುತ್ತಾರಂತೆ. ಪೀನ ಕುಚಗಳ ಗಾತ್ರವನ್ನು ಕುಗ್ಗಿಸಿಕೊಳ್ಳುತ್ತಾರೆ. ಅಗೋಚರ ಕುಚಗಳನ್ನು ಹಿಗ್ಗಿಸಿಕೊಳ್ಳುತ್ತಾರೆ. ಅಲ್ಲದೆ ಅವರು ಅಂಗಸಾಧನೆಯ ಮೂಲಕವೂ ಬೊಜ್ಜು, ಹೊಟ್ಟೆ ನಿತಂಬಗಳನ್ನು ಕರಗಿಸಿಕೊಂಡು ಸಪೂರಗೊಳಿಸಿಕೊಳ್ಳುತ್ತಾರೆ. ಇಂತಹ ಚಿಕಿತ್ಸೆಗಾಗಿ ಆರೋಗ್ಯ ವಿಮೆ, ಸೌಕರ್ಯ ದೊರಕುವುದಿಲ್ಲವೆಂಬ ಲೇಖಕರ ಹೇಳಿಕೆಯಿಂದ ಪ್ರತಿಯೊಬ್ಬರಿಗೂ ಸೌಂದರ್ಯದ ಬಗ್ಗೆ ಕನಿಷ್ಠ ಪ್ರಜ್ಞೆ ಇರಬೇಕಾದರೂ ಅದೇ ಅತಿಯಾಗಬಾರದೆಂದೆನಿಸುತ್ತದೆ.

ಒಮ್ಮೆ ಲೇಖಕರಿಗೆ ಬೇಸರವಾದಾಗ ಅಲ್ಲಿ ದಿವಾನಖಾನೆಯಲ್ಲಿ ಕುಳಿತು ಸುತ್ತಮುತ್ತ ನಡೆಯುತ್ತಿದ್ದ ವಿದ್ಯಮಾನಗಳನ್ನು, ಅವರ ರೀತಿ–ನೀತಿ ಹಾಗೂ ಲೋಪ–ದೋಷಗಳನ್ನು ವೀಕ್ಷಿಸಿದ್ದರ ಕುರಿತು ಹೀಗೆ ಹೇಳುತಾರೆ. "ಒಬ್ಬರ ತೋಳ ಮತ್ತೊಬ್ಬರ ರೆಟ್ಟೆಯನ್ನು ಬಳಸಿ ಕುಳಿತಿರಲಾಗಿ ತರುಗಳನ್ನು ತಬ್ಬಿಕೊಂಡಿದ್ದ ಲತೆಗಳಂತೆ ಜೋಡು ಬಾಳೆ ಹಣ್ಣುಗಳಂತೆ, ಗಂಡ ಭೇರುಂಡಗಳಂತೆ, ಹೆಣ್ಣೆವಕ್ಕಿಗಳಂತೆ ತೋರುತ್ತಿದ್ದ ಸತಿ–ಪತಿಯರನ್ನು ಕಂಡಾಗ ಇವರಂಥವರು ಎಂದಾದರೂ ಅಗಲುವುದುಂಟೆ" ಎಂದು ಲೇಖಕರು ಸೂಜಿಗಗೊಳ್ಳುತ್ತಾ, ಅದು ಕೇವಲ ಕ್ಷಣ ಅಥವಾ ಕೆಲ ದಿನಗಳವರೆಗೂ ಮಾತ್ರ ಇರಬಹುದೆಂಬುದು ಆಶ್ಚರ್ಯವನ್ನುಂಟುಮಾಡುತ್ತದೆ.

ಭಾರತೀಯ ಮತ್ತು ಅಮೇರಿಕೆಯ ವೈದ್ಯ ಶಿಕ್ಷಣಗಳ ನಡುವಿನ ಅಂತರವನ್ನು ತಿಳಿಯಲು ಯತ್ನಿಸುತ್ತಾ, ಇಂಡಿಯಾದಲ್ಲಿ ಕಟ್ಟಡ, ಆಸ್ಪತ್ರೆ, ಪ್ರಯೋಗಾಲಯ, ಉಪಕರಣ ಮೊದಲಾದ ಸಿದ್ಧತೆ ಇಲ್ಲದೆಯೇ ವೈದ್ಯ ಕಾಲೇಜನ್ನು ಪ್ರಾರಂಭಿಸುತ್ತಾರೆ. ಆಸ್ಪತ್ರೆಗಳಲ್ಲಿ ಬೋದನೋಪಕರಣಗಳ, ಆಧುನಿಕ ಯಂತ್ರಗಳ ಹಾಗೂ ಸಾಕಷ್ಟು ಔಷಧಗಳ ಸೌಕರ್ಯವಿರುವುದಿಲ್ಲ. ಆದರೆ ಅಮೇರಿಕದಲ್ಲಿ ಖಾಸಗಿ ಆಸ್ಪತ್ರೆಗಳೇ ಹೆಚ್ಚಾಗಿವೆ. ಇವುಗಳಲ್ಲಿರುವ ಸೌಲಭ್ಯಾನುಕೂಲಗಳು ಅಲ್ಲಿಯ ಅತ್ಯಂತ ಶ್ರೇಷ್ಠ ಆಸ್ಪತ್ರೆಯಲ್ಲಿಯೂ ಇಲ್ಲ. ರಾಂಜೋ, ಮೀರಜ್ ಅಥವಾ ಇಂಡಿಯಾದಲ್ಲಿರುವ ಆಸ್ಪತ್ರೆಗಳಿಗೆ ಭೇಟಿಕೊಟ್ಟು ನೀಡಿ ಎನ್ನುತ್ತಾರೆ. ಫಾಮ್ ಡೆಸರ್ಟ್ ಆಸ್ಪತ್ರೆಯಲ್ಲಿ ಏಕಕಾಲಕ್ಕೆ ಅರವತ್ತು ಜನ ರೋಗಿಗಳಿಗೆ ಚಿಕಿತ್ಸೆ ನೀಡುವಷ್ಟು ಯಂತ್ರಗಳಿವೆ ಎನ್ನುತ್ತಾರೆ. ಅಲ್ಲದೆ ಇಂಡಿಯೋ ಆಸ್ಪತ್ರೆಯಲ್ಲಿರುವ ಸೂಕ್ಷ್ಮಾತಿಸೂಕ್ಷತರದ ಡಯಾಲಿಸಸ್ ಯಂತ್ರ ಭಾರತದಲ್ಲಿ ಅಪರೂಪವೆನ್ನುವ ಮೂಲಕ ಲೇಖಕರು ತಮ್ಮ ಅನಿಸಿಕೆಯನ್ನು ಹಂಚಿಕೊಂಡು, ಹೀಗಿರುವಾಗ ಸಹಜವಾಗಿಯೇ ಶಿಕ್ಷಣದ ಗುಣಮಟ್ಟ ಅಮೇರಿಕನ್ನರಂತೆ ಇರಲಾರದೆಂದು ಅಭಿಪ್ರಾಯಪಟ್ಟರೂ ಕೆಲವು ವಿಷಯಗಳಲ್ಲಿ ಅಮೆರಿಕೆಯಲ್ಲಿಯೂ ಕೊರತೆಗಳಿವೆ ಎಂದು ತಿಳಿಸುವುದನ್ನು ಮರೆಯುವುದಿಲ್ಲ.

ಲೇಖಕರು ಎಲ್ಲಿಯೇ ಸುತ್ತಾಡಲಿ ಹೋದ ಕಡೆ ಅಲ್ಲಿಯ ನೈಸರ್ಗಿಕ ಸೌಂದರ್ಯವನ್ನು, ಜನರ ರೀತಿ–ನೀತಿ, ವೇಷ–ಭೂಷಣಗಳನ್ನು ವೀಕ್ಷಿಸುವ ಕುತೂಹಲದಿಂದ ಹಗಲು ನೋಡಿದ ದೃಶ್ಯಗಳು, ಕೇಳಿದ ಮಾತುಗಳು ಅವರ ಚಿತ್ತಕೋಶದಲ್ಲಿ ಸಂಚರಿಸುವಾಗ ಹೇಗೆ ನಿದ್ದೆಬರುತ್ತದೆಂದು ಬೇಗ ಎದ್ದು ಯಾವುದೇ ಸ್ಥಳಕ್ಕಾದರೂ ಹೊರಡಲು ಸಿದ್ಧರಾಗುತ್ತಾರೆ. ಇದರಿಂದಾಗಿ ಲೇಖಕರ ತಿಳಿಯುವ ಆಸಕ್ತಿ, ಜ್ಞಾನದಾಹ ಎಷ್ಟೆಂಬುದನ್ನು ಮನಗಾಣಬಹುದು.

ಡಿಸ್ನಿಲ್ಯಾಂಡನ್ನು ಕುತೂಹಲದಿಂದ ವಿಕ್ಷೀಸಿದ್ದಿದ್ದನ್ನು ಈ ಮೂಲಕ ತಿಳಿಯತ್ತಾರೆ. “ಇಪ್ಪತ್ತೆಂಟು ಸಾವಿರ ಎಕರೆ ವಿಸ್ತಾರದಲ್ಲಿ ಹಬ್ಬಿಕೊಂಡಿರುವ ಡಿಸ್ನಿ ಪ್ರಪಂಚ (world) ಇಂದಿನ ಜಗತ್ತಿನ ಏಕೈಕ ಅದ್ಭುತ. ಭೂತವರ್ತಮಾನ ಭವಿಷ್ಯಗಳು ಸಂಗಮಿಸುವ ರೋಮಾಂಚಕಾರಕ ದೃಶ್ಯ ಪರಂಪರೆಯದು. ಜಗತ್ತಿನ ಎಲ್ಲ ಸಂಸ್ಕೃತಿ ಶೋತೃಗಳು ಹರಿದುಬರುವ ಮಹಾಸಾಗರವದು. ಭೂತವರ್ತಮಾನಗಳಿಗೆ ಕನ್ನಡಿಯಾಗಿರುವ, ಭವಿಷ್ಯಕ್ಕೆ ಮುನ್ನುಡಿಯಾಗಿರುವ ಆ ವಿನೂತನ ಪ್ರಪಂಚವನ್ನು ಪ್ರವೇಶಿಸಿದಾಗ, ಶ್ರೀಕೃಷ್ಣನ ವಿಶ್ವರೂಪವನ್ನು ನೋಡಿ ತತ್ತರಿಸಿದ ಅರ್ಜುನನಂತೆ, ಸುಲಭಮತಿಯ ಮಾನವ ತತ್ತರಿಸಿ,

ಕುಬ್ಜನಾಗಬಹುದು; ಕಲ್ಪನಾ ಪ್ರತಿಭೆಯ ಮಾನವ ಸಾಗರೋಲ್ಲಂಘನ ಪೂರ್ವದ ಅಂಜನೇಯನಂತೆ ವಿಗುರ್ವಿಸಬಹುದು. ಒಂದಲ್ಲ ಒಂದು ದಿನ ಮಾನವನ ಮತಿ ವಿಶ್ವವಿಜಯಿಯಾಗಬಲ್ಲುದೆಂಬುದಕ್ಕೆ ಇಲ್ಲಿಯ ವಿಜ್ಞಾನ, ತಂತ್ರಜ್ಞಾನಗಳ ಸಾಧನೆ ಮುನ್ಸೂಚಿಯಾಗಲಿದೆ. ಇದರೊಳಗೊಮ್ಮೆ ಸುತ್ತಿದಾಗ ಜಗತ್ತನ್ನೆಲ್ಲ ಪರ್ಯಟನಮಾಡಿದ, ಮೂರು ಜನ್ಮಗಳನ್ನೆತ್ತಿ ಬಂದ ಅನುಭವವಾಗುತ್ತದೆ. ಕಾಲಾತೀತವಾದ ವಿಶ್ವಜ್ಞಾನವನ್ನು ಭಟ್ಟಿಯಿಳಿಸಿ, ಅದಕ್ಕೊಂದು ಮೂರ್ತಿಸ್ವರೂಪವನ್ನು ಕಲ್ಪಿಸಿದ ಅದ್ಭುತ ತಂತ್ರಜ್ಞಾನದ ಕಲಾನೈಪುಣ್ಯದ ಹರಹಿದೆ. ವಿಜ್ಞಾನಿಯ ಕಾವ್ಯ ಪ್ರತಿಭೆಯೂ, ತಂತ್ರಜ್ಞಾನಿಯ ಕಲಾನೈಪುಣ್ಯವೂ ಇಲ್ಲಿ ಕೋಡಿವರಿದಂತಿದೆ. ಜ್ಞಾನವಿಜ್ಞಾನ ತಂತ್ರಜ್ಞಾನಗಳನ್ನು, ಕಲಾ ಸಂಭ್ರಮವನ್ನು, ತಮಾಷೋತ್ಸವಗಳನ್ನು ಏಕತ್ರ ನೋಡಿ, ಕಲಿತು, ಅನುಭವಿಸಬೇಕೆನ್ನುವವರು, ಜಗತ್ತಿನ ಎಲ್ಲ ಜನಾಂಗಗಳ ಜನರನ್ನು ಒಮ್ಮೆಗೆ ಸಂಧಿಸಬೇಕೆನ್ನುವವರು ಇಲ್ಲಿಗೆ ಬರಬೇಕು ಇದೊಂದು ಸಂಕ್ಷಿಪ್ತ ಜಗತ್ತು"[92] ಎನ್ನುವ ಲೇಖಕರು ಮಾಯಾಜಗತ್ತಾದ ಡಿಸ್ನಿಲ್ಯಾಂಡಿನ ಮನೋಹರತೆಯನ್ನು ಬಿಂಬಿಸಿವ ಮೂಲಕ ಅಮೇರಿಕಾದ ವೈಜ್ಞಾನಿಕ ಪ್ರಗತಿಯ ಛಾಯೆ ಮೂಡಿಸುತ್ತಾರೆ.

ಮುಂದೆ ಸ್ವಾತಂತ್ರ್ಯ ಸೌಧದಲ್ಲಿ ಸುತ್ತಾಡಿ, ಆ ಸಮಯದಲ್ಲಿ ಹೋರಾಟ ನಡೆಸಿದ ಗಣ್ಯರ ಭಾವಚಿತ್ರಗಳನ್ನು ದರ್ಶಿಸಿ ಅಲ್ಲಿಂದ ಸ್ವಾತಂತ್ರ್ಯ ಘಂಟೆಯ ಭವನಕ್ಕೆ ತೆರಳಿ ಸ್ವಸಂತೋಷಕ್ಕಾಗಿ ಆ ತೋರದ ಗಂಟೆಯನ್ನು ಸವರಿ, ಕ್ರಾಂತಿಕಾಲದ ಮತ್ತು ಪ್ರಾರಂಭದ ಸಂಯುಕ್ತ ಸರ್ಕಾರ ನಡೆಸಿದ ಆಡಳಿತ ಕಟ್ಟಡಗಳನ್ನು ನೋಡುತ್ತಾರೆ. ಮೊತ್ತ ಮೊದಲ ಕಾಂಗ್ರೆಸ್ ಅಧಿವೇಶನ ನಡೆದ ನಿವೇಶನವನ್ನು ನೋಡುವಾಗ, ಹದಿನೆಂಟನೆಯ ಶತಮಾನ ಮಹಾಯೋಧರ ಮತ್ತು ಮಹಾನಾಯಕರ ಜೀವನಸ್ಮೃತಿಯಿಂದ ಲೇಖಕರು ಪುಲಕಿತಗೊಂಡಿದ್ದಾರೆ. ಅಮೇರಿಕೆಯ ಸ್ವಾತಂತ್ರ್ಯ ಸಮರದೊಡನೆ ಭಾರತೀಯ ಸ್ವಾತಂತ್ರ್ಯ ಸಮರವನ್ನು ಹೋಲಿಸಿಕೊಂಡು ಎರಡನೆಯದರ ಮಹತ್ವವನ್ನು ಕೊಂಡಾಡುತ್ತಾರೆ. ಎರಡು ಸಮರಗಳ ನಡುವೆ ಒಂದು ಶತಮಾನಕ್ಕೂ ಹೆಚ್ಚಿನ ಅಂತರವಿದೆ. ಒಂದೇ ಕುಟುಂಬದೊಳಗೆ ನಡೆದ ಅಮೇರಿಕಾ ಕದನ ರಕ್ತ ಪ್ರವಾಹದೊಡನೆ ನಾಲ್ಕೈದು ವರ್ಷಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಎರಡು ಭಿನ್ನ ಜನಾಂಗಗಳ ನಡುವಣದ್ದಾದರೂ ಅಹಿಂಸಾತ್ಮಕವಾದ್ದರಿಂದ ಅರ್ಧಶತಮಾನದಷ್ಟು ಎಳೆಯುತ್ತದೆ. ಅದೊಂದು ಮಹಾತ್ಯಾಗದ ಕಥೆ. ನೂರಾರು ಮಂದಿ ಭಾರತೀಯರು ಆಂಗ್ಲರ ಮದ್ದು ಗುಂಡುಗಲ್ಲುಗಳಿಗೆ ತುತ್ತಾದರೂ ಲಕ್ಷಾಂತರ ಮಂದಿ ಜೈಲುಗಳಲ್ಲಿ ಕುಳಿತರೂ, ಕೊನೆಗೆ ಅಸುರೀಶಕ್ತಿ

ಸಾತ್ವಿಕ ಶಕ್ತಿಗೆ ಶರಣಾಗುತ್ತದೆ. ಆದರೆ ಸ್ವಾತಂತ್ರ್ಯಾ ನಂತರ ಅಮೇರಿಕ ನಾಗಾಲೋಟದಿಂದ ಪ್ರಗತಿ ಸಾಧಿಸುತ್ತಿದೆ; ಭಾರತದ ಪ್ರಗತಿ ಕುಂಟುತ್ತಿದೆ ಎಂದು ಎರಡು ದೇಶಗಳ ಸ್ವಾತಂತ್ರ್ಯ ಸಮರ ಮತ್ತು ಪ್ರಗತಿಯ ಕುರಿತು ತೌಲನಿಕವಾಗಿ ಆಲೋಚಿಸಿದ್ದಾರೆ.

ವಾಷಿಂಗ್‌ಟನ್ ನಗರದ ಎರಡು ಕೊಹಿನೂರ್‌ಗಳೆಂದರೆ 'ಶ್ವೇತಭವನ' ಮತ್ತು 'ಕ್ಯಾಪಿಟೇಲ್‌ಹಿಲ್' ಎನ್ನುತ್ತಾರೆ. 107 ಕೋಣೆಗಳನ್ನೊಳಗೊಂಡ ಶ್ವೇತಭವನ ವಾಷಿಂಗ್‌ಟನ್ ಹೊರತಾಗಿ ಉಳಿದೆಲ್ಲ ಅಧ್ಯಕ್ಷರ ಅಧಿಕೃತ ನಿವಾಸವಾಗಿದೆನ್ನುತ್ತಾರೆ. ವರ್ಷ ವರ್ಷಕ್ಕೂ ಅದರ ಮಹತ್ತು ಅಧಿಕವಾಗುತ್ತಿದೆ. ಅದೀಗ ಒಂದು ರಾಷ್ಟ್ರದ ಶ್ವೇತಭವನವಾಗಿ ಉಳಿಯದೆ ಪ್ರಪಂಚದ ಶ್ವೇತಭವನವಾಗಿ ಅದರ ಶಕ್ತಿ ವಿಕಾಸಗೊಂಡಿದೆ ಇಲ್ಲಿಗೆ ಯಾತ್ರೆ ಕೈಗೊಳ್ಳದ ರಾಜಕೀಯ ನಾಯಕರೇ ಜಗತ್ತಿನಲ್ಲಿಯೇ ವಿರಳ ಎನ್ನುತ್ತಾರೆ. ಪ್ರಪಂಚದ ಯಾವುದೇ ದೇಶದ ಕಷ್ಟಸುಖಗಳು, ನೀತಿ–ರೀತಿಗಳು, ಸಂದೇಹ ಸಮಸ್ಯೆಗಳು, ವ್ಯಾಪಾರ ವ್ಯವಹಾರಗಳು, ಭಿನ್ನ ಭಿನ್ನ ರಾಜ್ಯಗಳ ನಡುವಣ ವ್ಯಾಜ್ಯ ಸಂಧಾನಗಳು ಇಲ್ಲಿ ಚರ್ಚಿಸಲಾಗುತ್ತದೆಯಂತೆ; ಆಯಾಯ ರಾಷ್ಟ್ರಗಳ ಶಾಸನ ಸಭೆ ಮಂತ್ರಿಮಂಡಲ ಮತ್ತು ನ್ಯಾಯಮಂಡಲಿಗಳಿಗಿಂತ ಶ್ವೇತ ಭವನವೇ ಹೆಚ್ಚು ಪ್ರಬಲವೇನೋ ಎಂದೆನಿಸುವಷ್ಟು ಪ್ರಬಲವಾಗಿದೆ ಎನ್ನುತ್ತಾರೆ. ತಮಗೆ ಬೇಕಾದ ಸಹಾಯಕ್ಕಾಗಿ, ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸಹಸ್ರ ಸಹಸ್ರ ಮೈಲಿಗಳ ದೂರದಿಂದ ಉಸಿರು ಕಟ್ಟಿಕೊಂಡು ಇಲ್ಲಿಗೆ ಧಾವಿಸುತ್ತಾರೆ. ಜಗತ್ತಿನ ನಾನಾ ರಾಷ್ಟ್ರಗಳ, ಅಂತೆಯೇ ಬಹುಜನರ ಹಣೆಬರಹವನ್ನು ಬರೆಯುವ ಒಡೆಯುವ ಕೆಂಪು–ಕಪ್ಪು ಮನೆಗಳು ಶ್ವೇತಭವನದಲ್ಲಿ ವಿಪುಲ ಪ್ರಮಾಣದಲ್ಲಿವೆ. ಇಡೀ ಜಗತ್ತಿನ ಇತಿಹಾಸದಲ್ಲಿಯೇ ಇಷ್ಟೊಂದು ಪ್ರಾಮುಖ್ಯವನ್ನು ಪಡೆದ ದೇಶವಾಗಲಿ, ರಾಜಧಾನಿಯಾಗಲಿ, ಪಾರ್ಲಿಮೆಂಟಾಗಲಿ, ಶ್ವೇತಭವನವಾಗಲಿ ಇನ್ನೊಂದು ಇಲ್ಲ ಎಂದು ತಿಳಿಸುತ್ತಾರೆ. ಇಲ್ಲಿ ನಾವು ಗಮನಿಸುವಂತದ್ದು ರಾಜಕೀಯವಾಗಿ ಅಮೇರಿಕ ಎಷ್ಟು ಬಲಿಷ್ಠವಾಗಿತ್ತಾ ಸಾಗುತ್ತಿದೆ ಎನ್ನುವುದು, ವಿಶ್ವಸಂಸ್ಥೆ ಮಾಡಬೇಕಾದ ಕೆಲಸವನ್ನು ಅಮೇರಿಕ ಮಾಡುತ್ತಿದೆ. ಒಂದು ಕಡೆಯಿಂದ ಅದರ ಸಹಾಯ, ಸಮಸ್ಯೆಗಳನ್ನು ಪರಿಹರಿಸುವುದು, ನ್ಯಾಯಯುತ ತೀರ್ಮಾನ ಈ ಮೊದಲಾದ ಗುಣಗಳನ್ನು ಕಂಡಾಗ ಸಂತೋಷವೆನಿಸುತ್ತದೆ. ಇನ್ನೋಂದು ಕಡೆಯಿಂದ ಬಲಾಢ್ಯರಾಷ್ಟ್ರ ಎಲ್ಲಿ ಚಿಕ್ಕ–ಪುಟ್ಟ ಬಡ ರಾಷ್ಟ್ರಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತದೆಯೋ ಎಂದೆನಿಸಿದಾಗ ಆತಂಕವಾಗುತ್ತದೆ. ಒಟ್ಟಿನಲ್ಲಿ ಶ್ವೇತಭವನ ಮತ್ತು

ಕ್ಯಾಪಿಟೇಲ್ ಹಿಲ್‌ಗಳು ಗಣರಾಜ್ಯ, ಪ್ರಜಾಪ್ರಭುತ್ವ ಹಾಗೂ ಮಾನವ ಸಮಾನತೆಯ ಪ್ರತಿಮೆಯಾಗಿರುವುದನ್ನು ಅರ್ಥೈಸಬಹುದು.

ಲೇಖಕರು ಅಮೇರಿಕಾದಲ್ಲಿ ಅನೇಕ ಗ್ರಂಥ ಭಂಡಾರಗಳಿಗೆ ಭೇಟಿ ನೀಡಿದ್ದಾರೆ. ಒಂದು ಬಾರಿ ಲೇಖಕರು ಗ್ರಂಥ ಭಂಡಾರದಿಂದ ತತ್ವಶಾಸ್ತ್ರದ ಬಗೆಗಿನ ಗ್ರಂಥಗಳನ್ನು ತೆಗೆದುಕೊಂಡು ಮೂಲೆಯಲ್ಲಿ ಕುಳಿತು ವ್ಯಾಸಂಗನಿರತರಾಗುತ್ತಾರೆ. ಆ ಕೇಂದ್ರಕ್ಕೆ ಬರುವ ಭೇಟಿಕಾರರಲ್ಲಿ ಸ್ತ್ರೀಯರ ಸಂಖ್ಯೆಯೇ ಹೆಚ್ಚೆಂದು ತೋರುತ್ತದೆ. ವೇಷಭೂಷಣ ಚಹರೆಗಳಿಂದಲೇ ಧರ್ಮೇಂದ್ರರು ಭಾರತೀಯರಿರಬೇಕೆಂದು ಊಹಿಸಿಕೊಂಡ ಕೆಲವು ಮಂದಿ ಸ್ತ್ರೀಯರು ಅವರ ಬಳಿ ಕುಳಿತು ಭಾರತದ ಬಗ್ಗೆ, ಅಲ್ಲಿಯ ಸಂತರ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. "ಗಾಂಧಿಯಂಥ ವ್ಯಕ್ತಿ ಇದ್ದದ್ದು ನಿಜವೆ? ನೀವವರನ್ನು ನೋಡಿದ್ದಿರಾ? ಅವರ ದನಿ ಕೇಳಿದ್ದೀರಾ? ಅವರು ವಾಸಿಸುತ್ತಿದ್ದ ಕುಟೀರವನ್ನು ನೋಡಿದ್ದೀರಾ? ಎಂದವರು ಪ್ರಶ್ನಿಸುತ್ತಾರೆ." ಅವರಿದ್ದದ್ದು ನಿಜ. ಹತ್ತಿರದಿಂದ ನಾನವರನ್ನು ನೋಡಿದ್ದೇನೆ ಅವರ ಭಾಷಣವನ್ನು ಕೇಳಿದ್ದೇನೆ ಅವರು ವಾಸಿಸುತ್ತಿದ್ದ ಕುಟೀರವನ್ನು ಹೊಕ್ಕು ಬಂದಿದ್ದೇನೆ ಎಂದು ನುಡಿದಾಗ ಅವರಿಗೆ ಆಶ್ಚರ್ಯವಾಗುತ್ತದೆ. ಹೀಗೆ ಅನೇಕ ಪ್ರಶ್ನೆಗಳನ್ನು ಕೇಳಿ ತಮ್ಮ ಅನುಮಾನವನ್ನು ಬಗೆಹರಿಸಿಕೊಳ್ಳುತ್ತಾರೆ. ಆಕೆ ಕ್ರಿಸ್ತನ ವಿಷಯ ನಿಮಗೆ ಗೊತ್ತೆ? ಎಂದಾಗ ಚೆನ್ನಾಗಿ ಗೊತ್ತು ಬೈಬಲ್ ಓದಿದ್ದೇನೆ. ಬ್ಲೆತ್ ಹೆಮ್, ನಜರೀತ್, ಜೆರೂಸಲೆಮ್‌ಗಳಿಗೆ ಹೋಗಿದ್ದೇನೆ, ಗೊಲ್ಗೊಥಾ ನೋಡಿದ್ದೇನೆ' ಎಂದಾಗ ಆ ಹೆಂಗಸು ಲೇಖಕರ 'ಕೈ ಕುಲುಕಿ' ನೀವು ಕ್ರಿಶ್ಚಿಯನ್ನರೇ? ಎಂದು ಕೇಳುತ್ತಾಳೆ. 'ಬೈಬಲ್ಲನ್ನು ಓದಲು, ಕ್ರಿಸ್ತನನ್ನು ಆರಾಧಿಸಲು ಕ್ರಿಶ್ಚಿಯನ್ನರೇ ಆಗಬೇಕಾಗಿಲ್ಲ. ಕ್ರೀಸ್ತರಂಥ ಮಹಾತ್ಮರು ಎಲ್ಲರಿಗೂ ಸೇರಿದವರು. ಗಾಂಧೀಜಿ ಎಂತೋ ಅಂತೆ ಪೈಗಂಬರರ ಬಗ್ಗೆಯೂ ನನಗೆ ಗೌರವವಿದೆ. ಮೆಕ್ಕಾ, ಮದೀನ ನೋಡಬೇಕೆಂಬ ಕುತೂಹಲವಿದ್ದರೂ ಅಲ್ಲಿಗೆ ಹೋಗಲು ಮುಸ್ಲಿಮೇತರರಿಗೆ ಅವಕಾಶವಿಲ್ಲ ಎನ್ನುತ್ತಾರೆ. ಹೀಗೆ ಲೇಖಕರ ವಿಚಾರದಲ್ಲಿ ಧರ್ಮ ಸಮನ್ವಯತೆಯನ್ನು ಕಾಣಬಹುದು. ಆ ಮೂಲಕ ಆ ಸ್ತ್ರೀಯರು ಇವರ ಬಗ್ಗೆ ವಿಶ್ವಾಸ ಮೂಡಿ ಹಲವು ವಿಷಯಗಳನ್ನು ತಿಳಿಯಲು ಮತ್ತು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಮಾರನೇ ದಿನವೇ ಅದೇ ಕೇಂದ್ರಕ್ಕೆ ಬರುತ್ತಾರೆ. ವಿವಾಹ ವಿಚ್ಛೇಧನ, ಮಾನಸಿಕ ಅಶಾಂತಿ ಮೊದಲಾದ ವಿಷಯಗಳ ಚರ್ಚೆಯಾಗುತ್ತದೆ. ಮಹಿಳೆಯೊಬ್ಬಳು ತನಗೊದಗಿದ ಸಂಕಷ್ಟವನ್ನು ಅವರಲ್ಲಿ ತೋಡಿಕೊಳ್ಳುತ್ತಾಳೆ. ಇವರಿಬ್ಬರ ಮಾತುಗಳ ಮೂಲಕ ಅಮೇರಿಕಾದ

ಸಾಮಾಜಿಕ ಜೀವನ ಸ್ಥಿತಿಗತಿಗಳನ್ನು ಗ್ರಹಿಸಬಹುದಲ್ಲದೆ ವಿದೇಶಿಯರಿಗೆ ಭಾರತೀಯರ ಬಗೆಗಿನ ಗ್ರಹಿಕೆಗಳು, ಹಾಗೆಯೇ ಭಾರತೀಯರಿಗೆ ವಿದೇಶಿಯರ ಬಗೆಗಿನ ನಿಲುವುಗಳು ಚರ್ಚೆಗೊಳಪಟ್ಟಿರುವುದನ್ನು ಕಾಣಬಹುದು.

"ಅಮೇರಿಕಾವನ್ನು ಕುರಿತಂತೆ ಇಷ್ಟೊಂದು ಗ್ರಂಥರಾಶಿಯಿರುವಾಗ ಮತ್ತೊಂದು ಅಗತ್ಯವಿದೆಯೇ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಸುರ್ಯೋದಯಾಸ್ತಮಾನಗಳನ್ನು ಋತುವಿಲಾಸವನ್ನು ಅನಂತಾನಂತ ಪ್ರಾಕೃತಿಕ ಸೌಂದರ್ಯ ದೃಶ್ಯಗಳನ್ನು, ರಾಮ ರಾವಣ, ಕೃಷ್ಣ ಕೌರವರ ಗುಣಾವಗುಣಗಳನ್ನು ಯುದ್ಧ, ವಿವಾಹ, ದಿಗ್ವಿಜಯ ಮೊದಲಾದ ಮಾನವನ ಸಾಹಸ ಕಾರ್ಯಗಳನ್ನು ಕುರಿತು ಎಷ್ಟು ಮಂದಿ ಕವಿಗಳು ವರ್ಣಿಸಿಲ್ಲ? ವಸ್ತು ಒಂದೆಯಾದರೂ ಅದು ಸ್ಪಂದಿಸುವ ಮನೋ ಹೃದಯಗಳ ಸ್ವರೂಪ ಸಂದರ್ಭ ಕ್ರಿಯೆಗಳಿಗನುಗುಣವಾಗಿ ಭಾವಾನುಭವಗಳು ಅನಂತ. ಆದ್ದರಿಂದ ನನ್ನ ಕಲ್ಪನೆಯ ಅಮೇರಿಕ ಇತರರ ಕಲ್ಪನೆಯ ಅಮೇರಿಕಗಳಿಗಿಂತ ತಕ್ಕಷ್ಟು ಭಿನ್ನವಾಗಿರಬಹುದೆಂಬ ನಂಬಿಕೆ ನನ್ನದಾಗಿದೆ" ಎನ್ನುತ್ತಾ ಲೇಖಕರು ತಮ್ಮ ಪ್ರವಾಸವು ವಿಭಿನ್ನವಾದ, ವಿವಿಧ ಅನುಭವಗಳ ಗ್ರಹಿಕೆಯಿಂದ ಕೂಡಿರುವುದನ್ನು ತಿಳಿಸುತ್ತಾರೆ. ಈ ಪ್ರವಾಸಕಥನ ಓದಿದ ನಂತರ ಲೇಖಕರ ಮಾತು ಸತ್ಯವೆನಿಸುವುದರೊಂದಿಗೆ ಭಾರತ ಮತ್ತು ಅಮೇರಿಕದ ಸಾಮಾಜಿಕ ಸಾಂಸ್ಕೃತಿಕ, ರಾಜಕೀಯ ಮೊದಲಾದ ಅಂಶಗಳ ಬಗ್ಗೆ ತೌಲನಿಕವಾಗಿ ವಿಶ್ಲೇಷಿಸಿದ್ದಾರೆನ್ನಿಸುತ್ತದೆ.

[illegible]

## ಕೊನೆ ಟಿಪ್ಪಣಿ :

1. ನಾನು ಕಂಡ ಅಮೇರಿಕೆ–1988, ಡಾ॥ರಾ.ಯ.ಧಾರವಾಡಕರ್, ಪುಟ–20.
2. ನಾನು ಕಂಡ ಅಮೇರಿಕೆ–1988, ಡಾ॥ರಾ.ಯ.ಧಾರವಾಡಕರ್,ಪುಟ 23, 24.
3. ನಾನು ಕಂಡ ಅಮೇರಿಕೆ–1988, ಡಾ॥ರಾ.ಯ.ಧಾರವಾಡಕರ್, ಪುಟ 27, 28.
4. ನಾನು ಕಂಡ ಅಮೇರಿಕೆ–1988, ಡಾ॥ರಾ.ಯ.ಧಾರವಾಡಕರ್, ಪುಟ 30, 31.
5. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ ಎಸ್. ವಿದ್ಯಾಶಂಕರ, ಪುಟ 328.
6. ಪಾತಾಳಕ್ಕೆ ಪಯಣ–1973, ಶಿವರಾಮ ಕಾರಂತ, ಪುಟ 169.
7. ಪಾತಾಳಕ್ಕೆ ಪಯಣ–1973, ಶಿವರಾಮ ಕಾರಂತ, ಪುಟ 120.
8. ಪಾತಾಳಕ್ಕೆ ಪಯಣ–1973, ಶಿವರಾಮ ಕಾರಂತ, ಪುಟ 170.
9. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ ಎಸ್. ವಿದ್ಯಾಶಂಕರ, ಪುಟ 287.
10. ಪಾತಾಳಕ್ಕೆ ಪಯಣ–1973, ಶಿವರಾಮ ಕಾರಂತ, ಪುಟ 188.
11. ಪಾತಾಳಕ್ಕೆ ಪಯಣ–1973, ಶಿವರಾಮ ಕಾರಂತ, ಪುಟ 189.
12. ಪಾತಾಳಕ್ಕೆ ಪಯಣ–1973, ಶಿವರಾಮ ಕಾರಂತ, ಪುಟ–289.
13. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ ಎಸ್. ವಿದ್ಯಾಶಂಕರ, ಪುಟ 273.
14. ಅಮೇರಿಕದಲ್ಲಿ ನಾನು–1962, ಬಿ.ಜಿ.ಎಲ್. ಸ್ವಾಮಿ, ಪುಟ 76.
15. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ xvi.
16. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 94.
17. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 76–77.
18. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 53.
19. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 165.
20. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 300.
21. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 301.
22. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 232.
23. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 225.
24. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 133.
25. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 81.

26. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 69.

27. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ 204.

28. ಅಮೇರಿಕಾದಲ್ಲಿ ಗೊರೂರು–1979, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪುಟ–7 ಮುನ್ನುಡಿ.

29. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ ಎಸ್. ವಿದ್ಯಾಶಂಕರ, ಪುಟ 313.

30. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 13.

31. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 35.

32. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 45, 46.

33. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 48.

34. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 52, 53.

35. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 76.

36. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 121.

37. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 129.

38. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 20.

39. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 225.

40. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 204.

41. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 222–223.

42. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ ಎಸ್. ವಿದ್ಯಾಶಂಕರ, ಪುಟ 294–295.

43. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 97–98.

44. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 175.

45. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಡಾ॥ ಎಸ್. ವಿದ್ಯಾಶಂಕರ, ಪುಟ 297.

46. ಅಮೇರಿಕದಲ್ಲಿ ನಾನು, ಶಾಂತಿ–1978, ಪ್ರಭುಶಂಕರ, ಪುಟ 224.

47. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 162.

48. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 166.

49. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ,ಪುಟ 171.

50. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 170–171.

51. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 183–184.

52. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 264.

53. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 218.
54. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 238.
55. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 225–226.
56. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 287.
57. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 286.
58. ಜಯಶ್ರೀ ಕಂಡ ಜಗತ್ತು–1989, ಹೊ. ಶ್ರೀನಿವಾಸಯ್ಯ, ಪುಟ 302.
59. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 27.
60. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 35.
61. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 45.
62. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 37.
63. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 77.
64. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 77–78.
65. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 78.
66. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 81.
67. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 111.
68. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 156.
69. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 158.
70. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 225.
71. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 239.
72. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 296.
73. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 292.
74. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 11.
75. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 11.
76. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 15–16
77. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 18.
78. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 33.
79. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 83

80. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 80

81. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 81

82. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 198

83. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 193

84. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 201.

85. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 39.

86. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 39.

87. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 42–44

88. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 44.

89. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಪುಟ 44–46.

90. ಅಪರವಯಸ್ಕನ ಅಮೇರಿಕಾಯಾತ್ರೆ–1979, ಎ.ಎನ್. ಮೂರ್ತಿರಾವ್, ಅರಿಕೆ.

91. ವಿಸ್ಮಯಗಳ ನಾಡಿನಲ್ಲಿ–1995, ದೇ.ಜ.ಗೌ, ಪುಟ 53.

92. ವಿಸ್ಮಯಗಳ ನಾಡಿನಲ್ಲಿ–1995, ದೇ.ಜ.ಗೌ, ಪುಟ 239.

* * *

# ಅಧ್ಯಾಯ – 8

# ಉಪಸಂಹಾರ

# ಉಪಸಂಹಾರ

"ಗತಕಾಲದ ಮತ್ತು ವಿದೇಶಗಳ ಕುರಿತಾದ ಅರಿವು ಮಾನವನ ಬುದ್ಧಿಯನ್ನು ಬೆಳೆಸುವುದು ಮತ್ತು ಅಲಂಕರಿಸುವುದು". -ಲಿಯನಾರ್ಡೊ ಡಾವಿಂಚಿ ಮೂರು ದಶಕಗಳ ಹಿಂದೆ ಪ್ರವಾಸವು ಕಾಲ ಮತ್ತು ಹಣವನ್ನು ವಿನಿಯೋಗಿಸಲು ಸಮರ್ಥರಾದವರಿಗೊಂದು ಭೋಗವಸ್ತು (Luxury Product) ಆಗಿದ್ದಿತ್ತು. ಇತ್ತೀಚಿನ ದಿನಗಳಲ್ಲಿ ವಿದೇಶ ಪ್ರವಾಸ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ಪ್ರಗತಿಪರ ರಾಷ್ಟ್ರಗಳು ಸಹಾ ತಮ್ಮ ಪ್ರಜೆಗಳು ರಜೆಯಲ್ಲಿ ವಿದೇಶಗಳಿಗೆ ಹೋಗಲು ಅನುಕೂಲವಾಗುವಂತೆ ನಿಯಮಾವಳಿಗಳನ್ನು ಉದಾರಗೊಳಿಸುತ್ತಲಿವೆ. ಅಂತಹ ರಾಷ್ಟ್ರಗಳಲ್ಲಿ ಭಾರತವೂ ಒಂದು. ಪ್ರಪಂಚದಾದ್ಯಂತ ಪ್ರವಾಸೋದ್ಯಮವು ಅಭಿವೃದ್ಧಿಗೊಳ್ಳುತ್ತಿದ್ದರೂ, 1982ರಲ್ಲಿ ದಕ್ಷಿಣ ಏಷ್ಯಾ ತನ್ನ ಗರಿಷ್ಠ ಬೆಳವಣಿಗೆಯನ್ನು ಲಕ್ಷಿಸುವಂತಿತ್ತು. ವಿದೇಶಗಳಲ್ಲಿ ಪ್ರವಾಸಿಗರಿಗೆ ಹೊಸ ಅನುಭವ ಪ್ರಪಂಚ ಕೈ ಬೀಸಿ ಸ್ವಾಗತಿಸುತ್ತದೆ. ಭಾರತೀಯ ಪರಿಸರಕ್ಕೆ ಭಿನ್ನವಾದ ಪರಿಸರವನ್ನು ಕೈಗಾರಿಕೆ, ವಿಜ್ಞಾನ ಹಾಗೂ ಆರ್ಥಿಕ ರಂಗಗಳಲ್ಲಿನ ಅದ್ಭುತವಾದ ಪ್ರಗತಿಯನ್ನು ಸುಖಜೀವನಕ್ಕೆ ಅಗತ್ಯವೆನಿಸುವ ಸೌಲಭ್ಯಗಳನ್ನು ಅಚ್ಚರಿಯ ಕಣ್ಣುಗಳಿಂದ ಪ್ರವಾಸಿಗರು ನೋಡುವರು. ಕೈಗಾರಿಕೆ, ವಿಜ್ಞಾನ ಹಾಗೂ ಆರ್ಥಿಕ ರಂಗಗಳ ಅದ್ಭುತ ಪ್ರಗತಿ ಅಲ್ಲಿ ಮಾನವ ಸುಖ ಶಾಂತಿಗಳಿಗೆ ಹೇಗೆ ಮಾರಕವಾಗಿವೆ, ಸ್ವಚ್ಛಂದ ಲೈಂಗಿಕ ಜೀವನ ಇಲ್ಲಿನ ಗೃಹಶಾಂತಿಯನ್ನು ಹೇಗೆ ನುಚ್ಚು ನೂರು ಮಾಡಿದೆ. ಹತೋಟಿ ತಪ್ಪಿದ ಯುವ ಪೀಳಿಗೆ ಮಧ್ಯಪಾನ ಹಾಗೂ ಮಾದಕ ಔಷಧಗಳ ಸೇವನೆಯಿಂದ, ಸುಲಭ ಗಳಿಕೆಗಾಗಿ ಇಲ್ಲವೆ ವಿನೋದಕ್ಕಾಗಿ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರಗಳಲ್ಲಿ ಹೇಗೆ ಮೈಮರೆತಿದೆ ಎಂಬುದನ್ನು ನಮ್ಮ ಪ್ರವಾಸಿಗರು ಕಂಡಿರುವರು. ವೈಜ್ಞಾನಿಕ ಪ್ರಗತಿ ಪಾಶ್ಚಾತ್ಯ ಸಮಾಜದ ನೆಮ್ಮದಿಯನ್ನು ಧೂಳಿಪಟ ಮಾಡಿದೆ. ತಮ್ಮ ಬದುಕಿನಲ್ಲಿ ಶಾಂತಿ ಸಮಾಧಾನಗಳನ್ನು ಕಾಣದ ಅವರು ಭಾರತದ ಸಾಮಾಜಿಕ ಮತ್ತು ಕೌಟುಂಬಿಕ ಜೀವನ ವಿಧಾನವನ್ನು ಮೆಚ್ಚುತ್ತಿರುವರು ಭಾರತದ ಧರ್ಮ-ಸಾಹಿತ್ಯ-ಸಂಸ್ಕೃತಿಗಳ ಬಗೆಗೆ ವಿಶೇಷವಾದ ಆಸಕ್ತಿ-ಆಧ್ಯಾತ್ಮದತ್ತ ತಿರುಗುತ್ತಿದ್ದು ವೇದ, ಉಪನಿಷತ್ತು, ಯೋಗ ಮೊದಲಾದವುಗಳ ಅಭ್ಯಾಸದಿಂದ ಶಾಂತಿ ನೆಮ್ಮದಿಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವರು.

ವಿದೇಶ ಪ್ರವಾಸ ಮಾಡಿದ ನಮ್ಮವರು ಅಲ್ಲಿನ ಸುಖ-ಸಮೃದ್ಧಿ-ಪ್ರಗತಿ, ಶುಚಿಯಾದ ನಾಜೂಕು ಜೀವನ, ಶಿಸ್ತು-ಸೌಲಭ್ಯ ಇವುಗಳನ್ನು ನೋಡಿ ಭಾರತೀಯ ಸ್ಥಿತಿಗತಿಗಳೊಂದಿಗೆ ಅವನ್ನು ತುಲನೆ

ಮಾಡಿ ಭಾರತ ಹಿಂದುಳಿದಿರುವುದರ ಬಗೆಗೆ ಜಿಗುಪ್ಸೆಗೊಂಡು ತೆಗಳಿರುವುದು ಉಂಟು. ಭಾರತ ಹಿಂದುಳಿಯಲು ಅದರದೇ ಆದ ಕಾರಣಗಳುಂಟು. ಬಹುಪಾಲು ಭಾರತೀಯರ ಸೋಮಾರಿತನ, ರಾಜಕೀಯ ಮತ್ತು ಸಾಮಾಜಿಕ ಶೋಷಣೆ, ಅವಿದ್ಯೆ, ಮೋಸ, ವಂಚನೆ, ಹುಸಿತನ, ಡಾಂಭಿಕ ಜೀವನ, ಪರಂಪರಾಗತ ಮೂಢನಂಬಿಕೆ, ಹಿಂದಿನಿಂದಲೂ ಬೆಳೆದು ಬಂದಿರುವ ಅರ್ಥಹೀನ ಆಚರಣೆ ಪದ್ಧತಿಗಳು– ಹೀಗೆ ಅನೇಕ ಕಾರಣಗಳಿಂದ ಭಾರತ ಹಿಂದುಳಿದಿರುವುದನ್ನು ಗ್ರಹಿಸಬಹುದು. ನಮ್ಮಲ್ಲಿ ಎಲ್ಲವೂ ಸರಿಯಾಗಿದೆ. ನಮ್ಮದು ನೆಮ್ಮದಿಯ ಬದುಕು ಎಂಬ ಹುಸಿ ಸಿದ್ಧಾಂತ ಕೆಲವರದು. ಈ ರೀತಿಯ ಅತಿರೇಕದ ಅಭಿಮಾನವೂ ಸಲ್ಲದು. ನಮಗೆ ನಮ್ಮ ದೇಶದ ಪ್ರಗತಿಗೆ ಬೇರೆಯವರಿಂದ ಕಲಿಯಬೇಕಾದ ಅನೇಕ ವಿಷಯಗಳಿವೆ. ಅನ್ಯ ದೇಶಗಳ ಸಂಚಾರದಿಂದ ನಾವು ನಮ್ಮ ಕೊರತೆಗಳನ್ನು ಕಂಡುಕೊಳ್ಳಬಹುದು. ಮಿಂಚಿನ ಗತಿಯಲ್ಲಿ ನಮ್ಮ ಸುತ್ತಮುತ್ತ ಬದಲಾವಣೆಗಳಾಗುತ್ತಿರುವಾಗ, ಜನ ಮುನ್ನಡೆಯುತ್ತಿರುವಾಗ, ಸುಖ–ಸಂತೃಪ್ತಿಗಳ ಕೀಲಿ ಕೈಯನ್ನು ಹೊಂದಿರುವಾಗ, ಆ ತೀವ್ರ ಸ್ವರೂಪದ ಮಾದುರತೆಗೆ ಕಾರಣಗಳೇನು? ಹೊಂದದಿದ್ದರೆ ನಮ್ಮ ಪಾಲಿಗೆ ಅದೊಂದು ಬಹುದೊಡ್ಡ ನಷ್ಟ. ಈ ತಿಳುವಳಿಕೆ ಪುಸ್ತಕ ಹಾಗೂ ಪ್ರಸಾರ ಮಾಧ್ಯಮಗಳ ಮೂಲಕ ಆಗುವುದಾದದರೂ ಸಾಕ್ಷಿತ ಅನುಭವ ಬೇರೆಲ್ಲ ರೀತಿಯ ಪರಿಣಾಮಗಳಿಗಿಂತ ತೀವ್ರ ತರವಾದುದರಿಂದ ಪ್ರವಾಸ ಇಲ್ಲಿ ಮುಖ್ಯವಾಗುತ್ತದೆ. ನಮ್ಮ ಪ್ರಗತಿಗೆ ಅಡ್ಡಿ ಯಾವುದು ಎಂಬುದು ಸ್ಪಷ್ಟವಾಗಿ ತಿಳಿಯಬೇಕಾದರೆ ನಾವು ಅನ್ಯರನ್ನು, ಅವರ ಜೀವನ ವಿಧಾನವನ್ನು ಅವರ ಪ್ರಗತಿಯ ಮೂಲ ರಹಸ್ಯವನ್ನು ಮೊದಲಿಗೆ ಅರಿಯಲು ಪ್ರಯತ್ನಿಸಬೇಕು. ಈ ದಿಸೆಯಲ್ಲಿ ನಾವು ಅಮೇರಿಕನ್ನರ ಸಮಯ ಪ್ರಜ್ಞೆ, ಶಿಸ್ತು, ಸ್ವಚ್ಛತೆ, ಕರ್ತವ್ಯ ನಿಷ್ಠತೆ, ರಾಷ್ಟ್ರಾಭಿಮಾನ, ನಾಗರಿಕ ಪ್ರಜ್ಞೆ ಈ ಮೊದಲಾದವು ನಮಗೆ ಆದರ್ಶವಾಗಬೇಕು.

ಪ್ರವಾಸ ಸಾಹಿತ್ಯ ಏಕೆ ಬೇಕು? ಪ್ರವಾಸಿ ಲೇಖಕರಿಗೆ ಇರಬೇಕಾದ ಅರ್ಹತೆಗಳಾವುವು? ಎಂಬ ಈ ಪ್ರಶ್ನೆಗಳಿಗೆ ಡಾ॥ಹಾ.ಮಾ.ನಾಯಕ ಅವರು ರಾಜಾಮಣಿ ಸಿ.ಕೆ. ನಾಗರಾಜರಾವ್‌ರವರ ಸುವರ್ಣ ಮಧುಚಂದ್ರ ಪ್ರವಾಸ ಕಥನಕ್ಕೆ ಮುನ್ನುಡಿ ಬರೆಯುತ್ತಾ ಹೀಗೆ ವಿವರಿಸಿರುವರು; "..ಪ್ರವಾಸ ಕಥನ ಬರೆಯುವ ಲೇಖಕರಿಗೆ ಅನೇಕ ಅರ್ಹತೆಗಳು ಮತ್ತು ಆಸಕ್ತಿಯ ಜೊತೆಗೆ ಕುತೂಹಲವಿರಬೇಕು; ಹೊಸತಾದುದನ್ನು ತಿಳಿಯುವುದಕ್ಕೆ ಪ್ರಯತ್ನಪಡಬೇಕು; ನೋಡಿದುದರ ಬಗೆಗೆ ಮಾಹಿತಿ ಸಂಗ್ರಹಿಸಬೇಕು. ಇತಿಹಾಸದ ಜ್ಞಾನವಿರಬೇಕು, ಭೂಗೋಳದ ಪರಿಚಯವಿರಬೇಕು; ಬದುಕಿನ ವೈವಿಧ್ಯಗಳನ್ನು ಗ್ರಹಿಸುವ, ಅವನ್ನು ಸಮನಾಗಿ ನೋಡುವ ಶಕ್ತಿ, ಸಮಚಿತ್ತಗಳನ್ನು ಪಡೆದಿರಬೇಕು; ಹೊಸದಾಗಿ ಪರಿಚಿತರಾದವರೊಡನೆ

ಹೊಂದಿಕೊಂಡು ಹೋಗುವ ಗುಣವಿರಬೇಕು. ಇದೆಲ್ಲದರ ಜೊತೆಗೆ ಬರೆಯುವ ಶಕ್ತಿ ಇರಬೇಕು ಯಾವುದನ್ನು ಬರೆಯಬೇಕು, ಯಾವುದನ್ನು ಬಿಡಬೇಕು ಎಂಬುದರ ಬಗೆಗೆ ತಾರತಮ್ಯ ಜ್ಞಾನವಿರಬೇಕು. ಪ್ರವಾಸ ಕಥನದ ಬರವಣಿಗೆ ಚರಿತ್ರೆಯೋ, ಭೂಗೋಳವೋ ಆಗಬಾರದು; ದಿನಚರಿಯ ನೀರಸ ವರದಿಯೂ ಆಗಬಾರದು. ಅದು ಅನುಭವದ ಅಭಿವ್ಯಕ್ತಿ. 'ಕಂಡ'ದ್ದನ್ನು 'ಕಾಣಿಸು'ವ ಕಲೆ ಆದ್ದರಿಂದಲೇ ಪ್ರವಾಸ ಕಥನದ ಬರವಣಿಗೆ ಸುಲಭವಲ್ಲ. ಅತ್ಯಂತ ಸುಂದರವಾದ ಪ್ರವಾಸ ಕಥನ. ಖಂಡಿತವಾಗಿಯೂ ಸೃಜನಶೀಲ ಪ್ರತಿಕೃತಿಯೆನಿಸಿಕೊಳ್ಳುತ್ತದೆ. ಅದರ ಸ್ವರೂಪ ಸಂಕೀರ್ಣವಾದದ್ದು. ಅದು ಕಥೆ, ಪ್ರಬಂಧ, ವಿಚಾರ, ವಿಮರ್ಶೆ ಮೊದಲಾದವುಗಳನ್ನೆಲ್ಲ ಒಳಗೊಳ್ಳಬಹುದಾದ ಪ್ರಕಾರ, ಒಳ್ಳೆಯ ಪ್ರವಾಸ ಕಥನ ನಮಗೆ ಸಂತೋಷ ಕೊಡುವುದರ ಜೊತೆಗೆ ನಮ್ಮ ಅನುಭವವನ್ನು ವಿಸ್ತರಿಸುತ್ತದೆ. ಅದು ವಸ್ತುಸ್ಥಿತಿಗಳ ದಾಖಲೆಯೂ ಹೌದು; ಆಲೋಚನೆ ಅನುಭವಗಳ ಏರಿಳಿತ ದಾಖಲೆಯೂ ಹೌದು. ಬಹುಶ: ಈ ಕಾರಣದಿಂದಲೇ ಒಳ್ಳೆಯ ಪ್ರವಾಸ ಕಥನಗಳು ಅಪರೂಪವಾಗಿರುವುದು".

ಹಾ.ಮಾ.ನಾಯಕ ಅವರ ಈ ಮೇಲಿನ ಅಭಿಪ್ರಾಯ ಇರುವಂತಹ ಹಲವು ಪ್ರವಾಸ ಕಥನಗಳು ಅಮೇರಿಕಾ ಕುರಿತಾಗಿವೆ. ಅದರಲ್ಲಿ ಕೆಲವು ನೀರಸ ಪ್ರವಾಸ ಕಥನಗಳನ್ನು ನೋಡಬಹುದು. ಆದರೆ ಈ ಮುಂದೆ ತಿಳಿಸುವ ಪ್ರವಾಸ ಕಥನಗಳ ವಸ್ತು ಒಂದೇ ಆದರೂ ಪ್ರವಾಸಿಗಳ ಅಭಿರುಚಿ ಮನೋಧರ್ಮ ದೃಷ್ಟಿ ಕಲ್ಪನೆ ಆಲೋಚನೆಗಳಲ್ಲಿ ವ್ಯತ್ಯಾಸವದ್ದರಿಂದ ಅವರ ಕೃತಿಗಳಲ್ಲಿ ವಿಷಯ ವೈವಿಧ್ಯವನ್ನು ವಿಶಿಷ್ಟಾನುಭವದ ಸಂಪತ್ತು, ಬೇರೆಯಾಗಿದ್ದರಿಂದ ಈ ಎಲ್ಲ ಪ್ರವಾಸ ಕಥನಗಳು ಭಿನ್ನವೆನಿಸಿ ರಸಾನುಭವವನ್ನು ನೀಡುತ್ತವೆ. ವಿದೇಶದಲ್ಲೂ ತಾಯ್ನಾಡನ್ನು ಕುರಿತು ಅಂತ:ಕರಣ ತುಂಬಿ ಬರುವ ಹಾಗೆ ಅನನ್ಯ ರೀತಿಗಳಲ್ಲಿ ಅನುಪಮವಾಗಿ ಅಭಿವ್ಯಕ್ತಿಸಿದ್ದಾರೆ. ವೈಜ್ಞಾನಿಕ ಹಾಗೂ ವೈಚಾರಿಕ ಚಿಂತನೆಗಳು ರೂಪಗೊಂಡಿವೆ. ಪ್ರವಾಸ ಕಥನಗಳಿಂದ ಜಗತ್ತು ಅತ್ಯಂತ ವಿಶಾಲವಾದದ್ದು, ವೈವಿಧ್ಯಮಯ ಹಾಗೂ ವರ್ಣಮಯವಾದುದು. ವಿಚಾರ ಸಮೃದ್ಧವಾದುದು ಎಂಬ ವಿಶಾಲ ದೃಷ್ಟಿಕೋನವನ್ನು ರೂಪಿಸಿವೆ. ನಮ್ಮ ಅರಿವಿನ ದಿಗಂತವು ವಿಸ್ತಾರಗೊಳ್ಳುವಲ್ಲಿ, ಹೊಸ ಸೃಷ್ಟಿ, ಹೊಸ ಚೈತನ್ಯ ಮೂಡಲು ಅಮೇರಿಕ ಕುರಿತ ಈ ಪ್ರವಾಸ ಕಥನಗಳು ಸಹಾಯಕವಾಗಿವೆ.

ಅಮೇರಿಕ ಜಗತ್ತಿನ ಅತ್ಯಂತ ಆಕರ್ಷಕ ರಾಷ್ಟ್ರವಾಗಿದೆ. ಅದು ವಲಸಿಗರ ನಾಡೆಂಬುದು, ಅಲ್ಲಿ ಮುಕ್ತ ಅವಕಾಶವಿದೆ ಎಂಬುದು, ಭಾರತೀಯ ಸಂಜಾತರು ಸಾಕಷ್ಟು ಸಂಖ್ಯೆಯಲ್ಲಿದ್ದರೆಂಬುದು ಆ

ಆಕರ್ಷಣೆಗೆ ಕಾರಣವಾಗಿವೆ. ಅಲ್ಲಿಯ ಬಂಧು ಮಿತ್ರರ ಹೃದಯಗಳು ಇಲ್ಲಿಯವರನ್ನು ಸೂಜಿಗಲ್ಲಿನಂತೆ ಸೆಳೆದುಕೊಳ್ಳುತ್ತವೆ. ಜತೆಗೆ ಪ್ರಪಂಚದೆ ಅತ್ಯಂತ ಬಲಿಷ್ಠ ಶ್ರೀಮಂತ ರಾಷ್ಟ್ರವೆನಿಸಿಕೊಂಡಿರುವ ಆ ದೇಶದ ಸಾಧನೆ ಸಿದ್ಧಿಗಳನ್ನು, ವಿಸ್ಮಯ ಘವಾಡಗಳನ್ನು ನೋಡುವ ಕುತೂಹಲ ಆ ಸೆಳೆತವನ್ನು ಚುರುಕುಗೊಳಿಸುತ್ತದೆ. ಹೀಗಾಗಿ ಪ್ರತಿ ದಿನವೂ ಕರ್ನಾಟಕದಿಂದ, ಭಾರತದಿಂದ ನೂರಾರು ಸಾವಿರಾರು ಸಂಖ್ಯೆಯಲ್ಲಿ ಅಮೆರಿಕಾ ದೇಶಕ್ಕೆ ಪ್ರವಾಸ ಕೈಗೊಳ್ಳುತ್ತಾರೆ. ಹೋದವರು ಸಹಜವಾಗಿಯೇ ಅನುಭವ ಸಂಪನ್ನರಾಗಿ ವಾಪಸಾಗುತ್ತಾರೆ. ಅಂತಹವರಲ್ಲಿ ಸಾಹಿತಿ ಹೃದಯವಿದ್ದು, ಅನುಭವವೂ ಸಂವೇದನೆಯೋ ತೀವ್ರವಾದಾಗ ಅವು ಸಾಹಿತ್ಯ ರೂಪದಲ್ಲಿ ಹೊರಹೊಮ್ಮುತ್ತವೆ.

ಹೀಗಾಗಿ ಅಲ್ಲಿಯ ಜನಜೀವನವನ್ನು, ದೃಶ್ಯಗಳನ್ನು ವೈಜ್ಞಾನಿಕ-ತಾಂತ್ರಿಕ ಸಂಸ್ಕೃತಿಯನ್ನು ಕುರಿತ ಗ್ರಂಥಗಳು ಅಪಾರ ಸಂಖ್ಯೆಯಲ್ಲಿ ಪ್ರಕಟಗೊಂಡು ಪ್ರವಾಸ ಸಾಹಿತ್ಯ ಕ್ಷೇತ್ರದಲ್ಲಿ ನೂತನ ಪರಂಪರೆಯನ್ನು ತೆರೆದಿವೆ. ಅಲ್ಲಿಗೆ ಹೋಗಲಾದವರಿಗೆ ದೊಡ್ಡ ಗವಾಕ್ಷಿಗಳಾಗಿವೆ. ಪ್ರವಾಸ ಸಾಹಿತ್ಯದಲ್ಲಿ ಅಮೇರಿಕ ಪರವಾದ ಸಾಹಿತ್ಯವೇ ರಾಯಭಾಗವನ್ನು ಆಕ್ರಮಿಸಿಕೊಂಡಿದೆ ಎಂಬುದು ಸರ್ವವೇದ್ಯ. ವೈಫಲ್ಯವಿದ್ದಲ್ಲಿ ವೈವಿಧ್ಯವಿರಲಾರದೆಂಬ ಅನುಮಾನವಿದ್ದರೂ ಅಲ್ಲಿಯ ಸಾಂಸ್ಕೃತಿಕ ಬದುಕನ್ನು ನೋಡಿರುವ ದೃಷ್ಟಿಕೋನ ಭಿನ್ನವಾಗಿದೆ.

ಭಾರತವು ಬಹು ಸಂಸ್ಕೃತಿಗಳ ದೇಶವಾಗಿದ್ದು, ಒಂದೊಂದು ಸಂಸ್ಕೃತಿಗು ಒಂದೊಂದು ಅನನ್ಯತೆ ಇದೆ. ಹೀಗಾಗಿ ಅನ್ಯ ದೇಶಗಳ ಸಾಮಾಜಿಕ ವ್ಯವಸ್ಥೆಯನ್ನು ಗ್ರಹಿಸುವಾಗ ಎರಡು ದೇಶಗಳ ಸಾಮಾಜಿಕ ಸಾಂಸ್ಕೃತಿಕ ವ್ಯವಸ್ಥೆಯನ್ನು ತುಲನೆಗೆ ಒಳಪಡಿಸಿ ನೋಡಿರುವುದನ್ನು ಈ ಅಧ್ಯಾಯಗಳಲ್ಲಿ ನಮನಿಸಬಹುದಾಗಿದೆ.

ಮೊದಲನೇ ಅಧ್ಯಾಯದ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ಚೌಕಟ್ಟನ್ನು ಹಾಕಿಕೊಳ್ಳಲಾಗಿದೆ. ಪ್ರವಾಸ, ಪ್ರವಾಸಿ ಪದಗಳ ನಿಷ್ಪತ್ತಿಯೊಂದಿಗೆ, ವಾಣಿಜ್ಯಕ್ಕಾಗಿ, ದಂಡಯಾತ್ರೆಗಾಗಿ, ಜ್ಞಾನದಾಹಕ್ಕಾಗಿ ಸಂಚರಿಸಿರುವ ಪ್ರಾಚೀನ ಕುರುಹುಗಳಲ್ಲಿ ಪ್ರವಾಸದ ಪೂರ್ವಸ್ಥಿತಿಯನ್ನು, ಅನಂತರ ಅದೇ ಸಂಚಾರ ಮನರಂಜನೆ, ಖುಷಿ ಮೊದಲಾದವುಗಳಾಗಿ ಮಾರ್ಪಟ್ಟ ಪ್ರವಾಸದ ಉತ್ತರಸ್ಥಿತಿಗಳನ್ನು ಪ್ರವಾಸದ ಪೂರ್ವೋತ್ತರದಲ್ಲಿ ಸೂಚಿಸಲಾಗಿದೆ. ಪ್ರವಾಸ ಮತ್ತು ಪ್ರವಾಸ ಸಾಹಿತ್ಯಗಳು ಹುಟ್ಟಿ ಬೆಳೆದು ಬಂದ ಬಗೆಯನ್ನು ಮತ್ತು ಹಲವು ವಿದ್ವಾಂಸರುಗಳ ವಿವೇಚನೆಯಲ್ಲಿ ಪ್ರಥಮ ಪ್ರವಾಸ ಕಥನದ ಅಸ್ತಿತ್ವಗಳನ್ನು

[illegible]

ಗುರುತಿಸಲಾಗಿದೆ. ಪ್ರವಾಸವನ್ನು ಕುರಿತಾದ ಭಾರತೀಯ ಮತ್ತು ಕನ್ನಡಿಗರ ದೃಷ್ಟಿಕೋನಗಳಲ್ಲಿ ಹಾಗೂ ಪಾಶ್ಚಾತ್ಯರ ಪರಿಕಲ್ಪನೆಗಳಲ್ಲಿ ಸೂತ್ರೀಕರಿಸಿರುವ ನಿರ್ವಚನಗಳನ್ನು ಚಿಂತಿಸಲಾಗಿದೆ. ಹಲವಾರು ಲೇಖಕ ಮತ್ತು ಲೇಖಕಿಯರ ಅಮೇರಿಕಾ ಪ್ರವಾಸಕಥನಗಳ ಬಗೆಗೆ ಬಂದಿರುವ ಸಮೀಕ್ಷೆಗಳನ್ನು ಹಿಡಿದಿಡಲಾಗಿದೆ.

ಹವ್ಯಾಸಿ ಪ್ರವಾಸ ಕಥನಗಳ ಸಂದರ್ಭಗಳಲ್ಲಿ ಹಲವರ ಪ್ರವಾಸಕಥನಗಳನ್ನು ನೋಡಲಾಗಿದೆ. ಇವರುಗಳೆಲ್ಲ ಸ್ವಂತ ಖರ್ಚಿನಲ್ಲಿ, ಸ್ವತಂತ್ರವಾಗಿ ಕಾಲದ ಮಿತಿಯಿಲ್ಲದೆ ಪ್ರವಾಸ ಮಾಡುವ ಅವಕಾಶ ದೊರೆತದ್ದರಿಂದ ಅಮೇರಿಕಾದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹಾಗೂ ಪ್ರೇಕ್ಷಣೀಯ ಮೊದಲಾದ ಅಂಶಗಳನ್ನು ಕೂಲಂಕಷವಾಗಿ ಗಮನಿಸಿ ಸಾಕಷ್ಟು ವಿವರಗಳೊಂದಿಗೆ ತುಲನೆ ಮಾಡುತ್ತಾ, ಭಾರತದ ಅಭಿವೃದ್ಧಿಗೆ ಸಹಾಯಕವಾಗುವ ಅಂಶಗಳನ್ನು ತಿಳಿಸಿರುವುದು ಚಿಂತನಾರ್ಹವಾಗಿದೆ.

ಬಿ. ವಿರೂಪಾಕ್ಷಪ್ಪನವರ 'ನಾನು ಕಂಡ ಅಮೇರಿಕಾ'ದಲ್ಲಿ 'No waste no wants' ಎಂಬ ರಸಾಯನಶಾಸ್ತ್ರದ ಮೂಲ ಸೂತ್ರವನ್ನು ಅಮೇರಿಕನ್ನರು ಅಳವಡಿಸಿಕೊಂಡಂತೆ ನಮ್ಮ ದೇಶದಲ್ಲಿಯೂ ಜಾರಿಗೆ ಬರಬೇಕೆಂಬ ಆಶಾಭಾವನೆ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ. ಯಂತ್ರಧಾರಿತವಾದ ಅಮೇರಿಕಾದ ವೈಜ್ಞಾನಿಕ ಕೃಷಿ ಪದ್ಧತಿಯಿಂದ ಪ್ರಗತಿಯೊಂದುತ್ತಿರುವ, ಉದ್ದಿಮೆ ಕೈಗಾರಿಕೆಗಳಿಂದ ದೇಶದ ಮುನ್ನಡೆ ಸಾಧಿಸಿಸುತ್ತಿರುವ ಬಗ್ಗೆ ತಿಳಿಸಿರುವುದರಲ್ಲಿ, ಅಭಿವೃದ್ಧಿ ಹೊಂದುತ್ತಿರುವ ದೇಶವಾದ ಭಾರತಕ್ಕೆ ವೈಜ್ಞಾನಿಕ ಕೃಷಿ ಪದ್ಧತಿ ಅವಶ್ಯಕವೆಂಬ ಲೇಖಕರ ಮನಸ್ಥಿತಿಯನ್ನು ಅರಿಯಬಹುದಾಗಿದೆ.

ವಿದೇಶದಲ್ಲೂ ನಮ್ಮ ಭಾರತೀಯ ಸಂಸ್ಕೃತಿಯ ಕಂಪು ಪಸರಿಸುವಲ್ಲಿ, ಉಳಿಸಿ–ಬೆಳೆಸುವಲ್ಲಿ ಅಮೇರಿಕಾದಲ್ಲಿನ ಕನ್ನಡ ಸಂಸ್ಥೆಗಳು, ಸಮ್ಮೇಳನ, ಕಾರ್ಯಕ್ರಮ ಮೊದಲಾದವುಗಳನ್ನು ನಡೆಸುವ ಮೂಲಕ ಹೇಗೆ ಕಾರ್ಯಗತವಾಗಿವೆ ಎಂಬುದನ್ನು ಮಂಡಗದ್ದೆ ಶ್ರೀನಿವಾಸಯ್ಯನವರ ಅಮೇರಿಕಾದಲ್ಲಿ ಕಂಡಿದ್ದು ಕೇಳಿದ್ದು ಪ್ರವಾಸಕಥನದ 'ಅನಿವಾಸಿ ಭಾರತೀಯ ತನ್ನ ಸಂಸ್ಕೃತಿ ಉಳಿಸಿ ಬೆಳೆಸುವುದು' ಎಂಬ ಉಪಶೀರ್ಷಿಕೆಯಲ್ಲಿ ನೋಡಬಹುದಾಗಿದೆ.

ಅಮೇರಿಕಾದ ವೈವಾಹಿಕ ಜೀವನದ ನಿಷ್ಫಲತೆ, ವೃದ್ಧಾಶ್ರಮಗಳ ಬೆಳವಣಿಗೆ ಮುಂತಾದ ಸಾಮಾಜಿಕ ಅಂಶಗಳೊಂದಿಗೆ ಭಾರತೀಯ ಸಾಮಾಜಿಕ ಮೌಲ್ಯಗಳನ್ನು ತುಲನೆ ಮಾಡುತ್ತಾ, ಭಾರತೀಯ ಮೌಲ್ಯಗಳು ಅಮೇರಿಕನ್ನರಿಗಿಂತ ಹೇಗೆ ಶ್ರೇಷ್ಠವಾಗಿವೆ ಎಂಬುದನ್ನು ಗ್ರಹಿಸಬಹುದಾಗಿದೆ. ಹಲವು ಭಾರತೀಯರು

[illegible]

ಉದ್ಯೋಗವನ್ನು ಕಳೆದುಕೊಂಡು ಹಿಂದುರುಗಿ ಬರುವ ಪರಿಸ್ಥಿತಿ ಉಂಟಾಗಿದ್ದರಿಂದ ಅತಿಯಾದ ವಿದೇಶ ವ್ಯಾಮೋಹ ಸಲ್ಲದು ಎಂದು ಅಮೇರಿಕಾ ಆರ್ಥಿಕ ಕುಸಿತದ ಮೇಲೆ ಬೆಳಕು ಚೆಲ್ಲಿರುವುದನ್ನು ಹೊಳಲ್ಕೆರೆ ಶ್ರೀಪಾಲಶ್ರೇಷ್ಠಿ ವಸಂತಕುಮಾರರ ಅಮೇರಿಕಾ ಅಮೇರಿಕಾ (ತಂದೆ ತಾಯಿ–ಮಕ್ಕಳು) ಪ್ರವಾಸಕಥನದಲ್ಲಿ ಕಾಣಬಹುದಾಗಿದೆ.

ಹೀಗೆ ಇತರ ಹವ್ಯಾಸಿ ಪ್ರವಾಸಿಗರು ಸಹ ಅಮೇರಿಕಾವನ್ನು ಸ್ಥೂಲವಾಗಿ ಗಮನಿಸಿರುವುದನ್ನು ಗ್ರಹಿಸಬಹುದಾಗಿದೆ.

ನಿಯೋಗಿ ಪ್ರವಾಸ ಕಥನಗಳ ಸಂದರ್ಭದಲ್ಲಿ ಲೇಖಕರು ಅತಿಥಿಯಾಗಿ, ಕಾರ್ಯಕ್ರಮಗಳ ಆಹ್ವಾನಿತರಾಗಿ ಪ್ರವಾಸ ಕೈಗೊಂಡು ಪೂರ್ವನಿಯೋಜಿತ ಕಾರ್ಯಕ್ರಮಗಳ ವಿಧ್ಯುಕ್ತದಂತೆ ಸುತ್ತಾಡಿ, ದೊರೆತ ಸೀಮಿತ ಕಾಲಾವಧಿಯಲ್ಲಿ ಆರೋಗ್ಯ, ಶಿಕ್ಷಣ, ಪ್ರೇಕ್ಷಣೀಯ ಮೊದಲಾದ ಅಂಶಗಳ ಕುರಿತು ಗಮನಸಿ ಅವುಗಳ ಮಾಹಿತಿಯನ್ನು ಸೊಗಸಾಗಿ ನಿರೂಪಿಸಿರುವುದನ್ನು ಅರಿಯಬಹುದಾಗಿದೆ.

ಭಾರತದ ಶಿಕ್ಷಣ ವ್ಯವಸ್ಥೆಗೂ ಅಮೇರಿಕಾದ ಶಿಕ್ಷಣ ವ್ಯವಸ್ಥೆಗೂ ಸಾಕಷ್ಟು ವ್ಯತ್ಯಾಸವಿರುವುದನ್ನು ಮ.ನಾಗರಾಜರಾವ್ ಅವರ ನಾರಿ ನಿನಗೆ ನಮೋ ನಮೋ ಪ್ರವಾಸಕಥನದಲ್ಲಿ ನೋಡಬಹುದಾಗಿದೆ. ಹನ್ನೆರಡು ವರ್ಷಗಳನ್ನು ಮಾಧ್ಯಮಿಕ ಶಾಲೆಯಲ್ಲಿ ಕಳೆಯುವುದರೊಳಗಾಗಿ ಒಂದು ಗುರಿಯನ್ನು ಅಲ್ಲಿನ ವಿದ್ಯಾರ್ಥಿಗಳು ತಲುಪಿ ಸ್ವಾವಲಂಬಿಗಳಾಗಿರುತ್ತಾರೆ. ಇಂತಹ ಶಿಕ್ಷಣದ ಅವಶ್ಯಕತೆ ಭಾರತದಲ್ಲಿಯೂ ಇದೆ ಎಂಬುದನ್ನು ಗ್ರಹಿಸಬಹುದಾಗಿದೆ. ಒಕ್ಕಲುತನದಿಂದ ಹಿಡಿದು ವಿಮಾನ ನಡೆಸುವುದರವರೆಗೆ ಎಲ್ಲ ತರಬೇತಿಯನ್ನು ಪಡೆಯುತ್ತಿರುವ ಅಮೇರಿಕಾದಲ್ಲಿನ ಯುವಜನತೆಯಂತೆ ಭಾರತೀಯ ಯುವಜನತೆಯನ್ನು ಅಣಿಗೊಳಿಸುವುದು ಅತ್ಯಗತ್ಯವೆಂದು ಲೇಖಕರು ಮನಗಂಡಿರುವುದನ್ನು ತಿಳಿಯಬಹುದಾಗಿದೆ.

ಉಚ್ಚಶಿಕ್ಷಣವನ್ನು ಪಡೆದ ಪ್ರತಿಭಾವಂತ ಭಾರತೀಯರಿಗೆ ಸ್ವದೇಶದಲ್ಲಿ ಯೋಗ್ಯ ಮನ್ನಣೆ, ಉದ್ಯೋಗ, ಪ್ರೋತ್ಸಾಹ ಮೊದಲಾವುಗಳು ಸೂಕ್ತವಾಗಿ ದೊರೆಯದೆ ನಿರಾಶರಾಗಿ ವಿದೇಶಗಳಿಗೆ ತೆರಳಿ ಉತ್ತುಂಗಕ್ಕೇರಿರುವ ಅಂಶಗಳನ್ನು ಕೃಷ್ಣಾನಂದ ಕಾಮತ್ ಅವರ 'ನಾನು ಅಮೇರಿಕೆಗೆ ಹೋಗಿದ್ದೆ' ಪ್ರವಾಸಕಥನದಲ್ಲಿ ಅರಿಯಬಹುದಾಗಿದೆ.

ಅಮೇರಿಕನ್ನರ ಆರೋಗ್ಯ ಮತ್ತು ಸೌಂದರ್ಯ ಪ್ರಜ್ಞೆಗಳನ್ನು ಹಾಗೂ ಅವುಗಳ ಬಗೆಗಿನ ಅವರ ಮುಂಜಾಗ್ರತಾ ಕ್ರಮಗಳ ಕಾಳಜಿಯನ್ನು ಎಚ್.ಕೆ. ರಂಗನಾಥ್ ಅವರ ಪರದೇಶಿಯಾದಾಗ ಪ್ರವಾಸಕಥನದಲ್ಲಿ ನೋಡಬಹುದಾಗಿದೆ.

ವಿಶ್ವಕನ್ನಡ ಸಮ್ಮೇಳನದಲ್ಲಿ ಭಾಗವಹಿಸುವುದರ ಮೂಲಕ ಅಮೇರಿಕಾದಲ್ಲಿ ನಡೆಯುವ ಕನ್ನಡ ಸಭೆ–ಸಮ್ಮೇಳನಗಳು, ಕಾರ್ಯಕ್ರಮಗಳು ಮೊದಲಾವುಗಳ ಮೂಲಕ ಅಮೇರಿಕಾದಲ್ಲಿನ ಕನ್ನಡಪರತೆಯನ್ನು ಜೀವಿ ಕುಲಕರ್ಣಿಯವರ ಮತ್ತೊಮ್ಮೆ ಅಮೇರಿಕಾ ಪ್ರವಾಸ ಕಥನದಲ್ಲಿ ಗ್ರಹಿಸಬಹುದಾಗಿದೆ.

ಕೆ. ಗಣೇಶ ಮಲ್ಯ ಅವರು ರೋಟರಿ ಗ್ರೂಪ್‌ಸ್ಟಡಿ ಎಕ್ಸ್‌ಛೇಂಜ್ ಪ್ರೋಗ್ರಾಂನ ಅಂಗವಾಗಿ ಅಮೇರಿಕಾ ಮತ್ತು ಕೆನಡಾ ಪ್ರವಾಸದಲ್ಲಿ ಅಮೇರಿಕಾದ ಸರ್ಕಾರ, ನ್ಯಾಯದಾನ, ವಿದ್ಯಾದಾನ, ಆರೋಗ್ಯ, ಸಮಾಜ ಸೇವೆ, ವ್ಯವಸಾಯ, ವಾಣಿಜ್ಯ, ಕೈಗಾರಿಕಾ ಸಂಶೋಧನೆ, ಧರ್ಮ, ಸಂಸ್ಕೃತಿ ಇತ್ಯಾದಿ ಅಂಶಗಳನ್ನು ಅರವತ್ತು ದಿನಗಳಲ್ಲಿ ಮೂರ್ಮೂರು ದಿನಕ್ಕೊಮ್ಮೆ ಬೇರೆ ಬೇರೆ ಊರುಗಳ ಆರಾರು ಕುಟುಂಬಗಳೊಂದಿಗಿದ್ದು ಅಭ್ಯಸಿಸಿದ ಜೀವನ ಕ್ರಮಗಳನ್ನು ವಿಶ್ಲೇಷಿಸಲಾಗಿದೆ.

ಹೀಗೆ ಇತರ ನಿಯೋಗಿ ಪ್ರವಾಸ ಕಥನಗಳಲ್ಲಿ ಅಮೇರಿಕಾದ ಎಲ್ಲ ಅಂಶವನ್ನು ಒಳಗೊಂಡಿದ್ದು, ನೋಡಿದಷ್ಟನ್ನು, ಪಡೆದಷ್ಟನ್ನು ಮನಮುಟ್ಟುವಂತೆ ಸೃಜಿಸಿರುವುದನ್ನು ಕಾಣಬಹುದಾಗಿದೆ.

ಸಾಹಿತ್ಯ ಪ್ರವಾಸ ಕಥನಗಳ ಸಂದರ್ಭದಲ್ಲಿ ಲೇಖಕರು ತಾವು ಕಂಡದ್ದನ್ನು, ಅನುಭವಿಸಿದ್ದನ್ನು, ಆಕರ್ಷಿತವಾಗಿ ಹೇಳಿದ್ದಾರೆ. ಅವರ ವರ್ಣನಾ ಕಲೆ, ನಿರೂಪಣಾ ವೈಖರಿಗಳಲ್ಲಿ ನಾವು ಸೃಜನಶೀಲತೆಯನ್ನು ಕಾಣಬಹುದಾಗಿದೆ.

ಸಂಜೆಯ ಸೂರ್ಯನ ಬೆಳಕಿನಲ್ಲಿ ಬಂಗಾರದ ಹಾಸಿಗೆಯಾಗಿತ್ತು, ಸಂಜೆಯ ಬಿಸಿಲು, ಬಣ್ಣ ಬಳಿಯುವ ಕಾರ್ಯದಲ್ಲಿ ತನ್ಮಯವಾಗಿತ್ತು. ಕಲಕಿಸುವ ಬಿಸಿಲಿನಲ್ಲಿ ನಿಶ್ಚಲವಾದ ಬಣ್ಣದ ಜ್ವಾಲೆಗಳಂತೆ ಹರಡಿಕೊಂಡ ಮರಗಳ ದಾರಿ.. ಎನ್ನುವ ಕವಿ ಹೃದಯವನ್ನು ಜಿ.ಎಸ್.ಶಿವರುದ್ರಪ್ಪನವರ ಪ್ರವಾಸ ಕಥನದಲ್ಲಿ ಕಾಣುತ್ತೇವೆ. ತಾವು ಕಂಡ ಪ್ರೇಕ್ಷಣೀಯ ಸ್ಥಳಗಳ ಪೂರ್ವೇತಿಹಾಸದೊಂದಿಗೆ ಅವುಗಳ ಸೊಬಗನ್ನು ಸುಂದರವಾಗಿ ವರ್ಣಿಸಿದ್ದಾರೆ. ಪ್ರಕೃತಿಯ ವರ್ಣನೆಯಲ್ಲಿ ಬಳಸುವ ದೃಷ್ಟಾಂತಗಳು ಕವಿ

ಪ್ರತಿಭೆಯ ಮೂಡಿಗೆಯಿಂದ ಹೊರಹೊಮ್ಮಿದಂತಿದೆ. ತಮಗಾದ ಅನುಭವವನ್ನು ಸಾಕ್ಷಾತ್ತಾಗಿ ಕಣ್ಣಿಗೆ ಕಟ್ಟಿ ಸಹೃದಯರನ್ನು ಆ ಅನುಭವದೊಳಗೆ ಸೆಳೆದುಕೊಂಡು ತನ್ಮಯಗೊಳಿಸಿದ್ದಾರೆ. ಅಲ್ಲದೆ ಎರಡು ದೇಶಗಳ ಸಾಂಸ್ಕೃತಿಕ ಅಂಶಗಳ ಮೂಲಕ ಗಂಭೀರ ಚಿಂತನೆಯನ್ನು ವಿವೇಚಿಸಿದ್ದಾರೆ. ಅಮೇರಿಕಾದ ಜೀವನದಲ್ಲಿ ಬೆರೆತು ಹೋಗಿರುವ ಅವರ ಸಂಸ್ಕೃತಿಯ ಮುಖವೇ ಆಗಿರುವ ಸ್ವಚ್ಛಂದ ಲೈಂಗಿಕತೆ, ಶಿಥಿಲ ಕುಟುಂಬ ವ್ಯವಸ್ಥೆ, ಮಾದಕದ್ರವ್ಯ ಸೇವನೆ, ವ್ಯಾಪಾರಿ ಮನೋವೃತ್ತಿಗಳು ಅಲ್ಲಿನ ಭಾರತೀಯ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತಿವೆ ಮತ್ತು ಅಲ್ಲಿನ ಭಾರತೀಯರು ನೆಚ್ಚಿಕೊಂಡಿರುವ ಸಾಂಸ್ಕೃತಿಕ, ಧಾರ್ಮಿಕ ಮಾರ್ಗಗಳು ಎಷ್ಟರ ಮಟ್ಟಿಗೆ ಅಮೇರಿಕದಲ್ಲಿ ಭಾರತೀಯ ಸಾಂಸ್ಕೃತಿಯ ಅನನ್ಯತೆಯನ್ನು ಬಿಂಬಿಸಲಾಗುತ್ತಿದೆ ಎಂಬ ವಿವೇಚನೆಯನ್ನು ವ್ಯಾಸರಾಯ ಬಲ್ಲಾಳರ ನಾನೊಬ್ಬ ಭಾರತೀಯ ಪ್ರವಾಸಿ ಈ ಪ್ರವಾಸ ಕಥನ ಕಾಣಬಹುದು. ಪ್ರವಾಸ ಕಥನದ ಆಕರ್ಷಣೆ ಅದರ ನಿರೂಪಣೆಯಲ್ಲಿರುವಂತೆ ಹಾಗೂ ಅಮೆರಿಕ ಭಾರತೀಯನ ದೃಷ್ಟಿಯಲ್ಲಿರುವಂತೆ 'ಅಮೇರಿಕ ಭಾರತೀಯನ ದೃಷ್ಟಿಯಲ್ಲಿ' ಪ್ರೊ.ನಂಜುಂಡಶಾಸ್ತ್ರಿಯವರ ಈ ಪ್ರವಾಸ ಕಥನದಲ್ಲಿ ಕಾಣಬಹುದು. ಇಲ್ಲಿ ಅವರು ಬಳಸುವ ಭಾಷೆಗೆ ..ಉದಾಹರಣೆಯಾಗಿ ಅರೆನೀರ್ ಮನೆ, ಮುಂಗವಚ್, ಸಾಗಣೆತೊಟ್ಟಿ, ತೊಟ್ಟಿಸ್ನಾನ, ವೃಷ್ಟಿಸ್ನಾನ, ಸರ್ವ ಸಾಮಾಗ್ರಿ ಮಳಿಗೆ– ಹೀಗೆ ಕನ್ನಡ ನುಡಿ ಗಟ್ಟುಗಳು ಬಳಕೆಯಾಗಿವೆ. ಅಮೇರಿಕಾದ ಬಹುತೇಕ ಎಲ್ಲ ಅಂಶಗಳ ಬಗ್ಗೆ ಸೊಗಸಾಗಿ ನಿರೂಪಿಸಿದ್ದಾರೆ.

ನಾನು ನನಗನ್ನಿಸಿದ್ದನ್ನು, ನಾನು ಸ್ಪರ್ಶಿಸಿದ್ದನ್ನು ನಿಮಗೆ ಹೇಳಲೆ ಬೇಕೆನಿಸಿದ್ದನ್ನು ಮಾತ್ರ ಹೇಳುತ್ತೇನೆ ಎಂದು ಲೇಖಕರು ಐದು ವಾರಗಳ ಕಾಲ, ಸೀಮಿತ ಅವಧಿಯಲ್ಲಿ ತಾವು ಕಂಡದ್ದನ್ನು, ತಮ್ಮ ಮೇಲೆ ಪ್ರಭಾವ ಬೀರಿದ್ದನ್ನು ಮಾತ್ರ ಪ್ರಾಮಾಣಿಕವಾಗಿ ನಿರೂಪಿಸಿರುವುದನ್ನು ಅಮೇರಿಕದಲ್ಲಿ ಆಲೂರು ಪ್ರವಾಸ ಕಥನದಲ್ಲಿ ಕಾಣಬಹುದು. ಇವರು ಯಾವುದೇ ಪೂರ್ವಗ್ರಹ ಪೀಡಿತರಾಗಿ ವೈಭವೀಕರಿಸಿ ವರ್ಣಿಸಿಲ್ಲವಾದರೂ ನಿರೂಪಣೆ ಹಿತವೆನಿಸುತ್ತದೆ.

ಅಮೇರಿಕಾ, ಅನ್ಯದೇಶೀಯರನ್ನು ತನ್ನೆಡೆಗೆ ಸೆಳೆಯುವಲ್ಲಿ ಅಲ್ಲಿ ಅವಕಾಶಗಳು, ಅನುಕೂಲಗಳು ಮುಖ್ಯವಾಗಿವೆ. ಉತ್ಸಾಹಿಗಳಿಗೆ ಅಮೇರಿಕ ವಿಪರೀತ ಪ್ರೋತ್ಸಾಹ ಕೊಡುತ್ತಿದೆ. ಓದು, ಪರಿಣತಿ ಮತ್ತು ಅನುಭವಕ್ಕೆ ಸರಿಸಮವಾದ ಕೆಲಸ ಸಿಗುವ ಅಮೇರಿಕಾದಲ್ಲಿ ಕೆಲಸ ಮಾಡುವವನಿಗೆ ಅನುಕೂಲ ವಾತಾವರಣ ಇದ್ದು ಕೆಲಸದ ಸ್ಥಳ, ಗೃಹ ಸೌಕರ್ಯ, ಎಲ್ಲವೂ ಸಂತೃಪ್ತಿ ನೀಡುವಂತದ್ದು ಇಲ್ಲಿ

ಯಾವುದೇ ಸಂಪ್ರದಾಯದ ಸಂಕೋಲೆ ಇಲ್ಲ. ಇದರಿಂದಾಗಿ ಯುವ ಜನಾಂಗ ಅಮೇರಿಕಾಕ್ಕೆ ಹೋಗಲು ಬಯಸುತ್ತಾರೆ. ಇದರಿಂದಾಗಿ ಅಮೇರಿಕಾ ಅವಕಾಶಗಳ ಅಮರಾವತಿಯಾಗಿದೆ ಎಂದು ಗುರುಮೂರ್ತಿ ಪೆಂಡರೂರ ಅಭಿಪ್ರಾಯ ಪಡುತ್ತಾರೆ. ಅಮೇರಿಕಾದ ಆಕರ್ಷಣೆ ಬಿಡಿಸಲಾರದ ಮಾಹೆಯಾಗಿರುವುದು ನಿಜವಾಗಿದೆ.

ಅಮೇರಿಕದಲ್ಲಿ ಕನ್ನಡ ವಾತಾವರಣದ ನಿರ್ಮಾಣ– ಕನ್ನಡ ಸಂಘಗಳು, ಕನ್ನಡ ಸಮ್ಮೇಳನಗಳು, ಸಭೆ–ಸಮಾರಂಭಗಳ ಕಾರ್ಯವೈಖರಿ ಲೇಖಕರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡಿದೆ. ಅಲ್ಲಿಯ ಬಹು ಸಂಖ್ಯಾತ ಇಂಜಿನಿಯರ್, ಡಾಕ್ಟರುಗಳು ಹಾಗೂ ವಿವಿಧ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಪ್ರಯತ್ನ ಮತ್ತು ಶ್ರಮ ಸಾರ್ಥಕವಾಗಿದೆ. ಆದರೆ ಕನ್ನಡ ನಾಡಿನಲ್ಲಿ ಕನ್ನಡದ ಕುರಿತಾದ ಯಾವುದೇ ಕಾರ್ಯಕ್ರಮ ಏರ್ಪಟ್ಟರು, ಅಮೆರಿಕದಲ್ಲಿ ಸೇರುವಷ್ಟು ಜನ ಕನ್ನಡ ನಾಡಿನಲ್ಲಿ ಸೇರುವುದಿಲ್ಲ. ಪರದೇಶಗಳಲ್ಲಿ ನೆಲೆಸಿರುವವರಿಗೆ ಇರುವಷ್ಟೇ ಕನ್ನಡಾಭಿಮಾನ ಸ್ವದೇಶದಲ್ಲಿ ನೆಲೆಸಿರುವವರಿಗೆ ಇಲ್ಲವೆಂಬ ವಿಷಾದದೊಂದಿಗೆ ಕನ್ನಡತನ ಕ್ಷೀಣಿಸುವ ಪರಿಯನ್ನು ತಮ್ಮ ಪ್ರವಾಸಕಥನದ ಮೂಲಕ ಜಿ.ಎಸ್. ಶಿವರುದ್ರಪ್ಪನವರು ಚಿಂತನೆಗೆ ಎಡೆಮಾಡಿಕೊಟ್ಟಿದ್ದಾರೆ.

ಈ ಎಲ್ಲಾ ಸಾಹಿತ್ಯಿಕ ಪ್ರವಾಸ ಕಥನಗಳ ಮೂಲಕ ಎರಡು ದೇಶಗಳ ಸಾಂಸ್ಕೃತಿಕ, ಸಾಮಾಜಿಕ ಅಂಶಗಳನ್ನು ತುಲನಾತ್ಮಕವಾಗಿ ವಿವೇಚಿಸುವಲ್ಲಿ ಹೇಗೆ ಭಿನ್ನವಾಗಿವೆ ಎಂಬುದನ್ನು ನೋಡಲಾಗಿದೆ. ಎಲ್ಲಾ ಲೇಖಕರು ಅಮೇರಿದ ಸಾಫಲ್ಯ, ಭಾರತದ ವೈಫಲ್ಯಗಳನ್ನು ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ. ವಿಪುಲ ಜೀವನಾನುಭವಗಳನ್ನು ಹೊಂದಿವ ಕೆಲವರು ಮಾತ್ರ ಪ್ರಜ್ಞಾಪೂರ್ವಕದಿಂದ, ಪರಿಜ್ಞಾನದಿಂದ ವಿವೇಚಿಸಿ ನಿರೂಪಿಸಿದ್ದಾರೆ. ಅಂತಹ ಸ್ವಾರಸ್ಯಪೂರ್ಣಲೇಖಕರಲ್ಲಿ ವ್ಯಾಸರಾಯ ಬಲ್ಲಾಳ, ಎನ್. ನಂಜುಂಡಶಾಸ್ತ್ರಿ, ಜಿ.ಎಸ್.ಶಿವರುದ್ರಪ್ಪ, ಗುರುಮೂರ್ತಿಗಳ ಈ ಪ್ರವಾಸ ಕಥನಗಳು ವಿಶಿಷ್ಟವಾಗಿವೆ.

ಅನ್ಯ ಕೃತಿಗಳಲ್ಲಿ ಅಮೇರಿಕಾ ಅಧ್ಯಾಯದಲ್ಲಿ ಅಮೇರಿಕಾ ದೇಶವನ್ನು ಹವ್ಯಾಸಿಯಾಗಿ, ನಿಯೋಗಿಯಾಗಿ ಅಲ್ಲದೇ ಇತರ ಯಾವುದೇ ಕಾರ್ಯ ಅಥವಾ ಕಾರಣ ನಿಮಿತ್ತ ಪ್ರವಾಸ ಮಾಡಿ ಪಡೆದ ಜೀವನಾನುಭವಗಳನ್ನು ತಮ್ಮದೆ ಆದ ಜೀವನ ಚರಿತ್ರೆ, ಆತ್ಮ ಕಥೆ ಮೊದಲಾದವುಗಳಲ್ಲಿ ನಿವೇದಿಸಿರುವುದನ್ನು ಸಂಗ್ರಹಿಸಿ ಆ ಮೂಲಕ ಅಮೇರಿಕಾ ದೇಶದ ಪ್ರವಾಸಗಳ ವಿಶಿಷ್ಟ ಅನುಭವವವನ್ನು ರೂಪಿಸಲಾಗಿದೆ.

ಸಮಾಜದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ್ದ ಮಹನೀಯರು ಅಮೇರಿಕಾ ಪ್ರವಾಸ ಕೈಗೊಂಡಿದ್ದರ ಬಗ್ಗೆ, ಅವರು ವಿಶಿಷ್ಟ ಅನುಭವದ ಮೂಲಕ ಅಮೇರಿಕ ಮತ್ತು ಭಾರತಗಳೆಂಬ ಎರಡು ದೇಶಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಇತರ ಅಂಶಗಳ ಕುರಿತು ತುಲನಾತ್ಮಕವಾಗಿ ವಿಶ್ಲೇಷಿಸಿರುವುದನ್ನು ಅನ್ಯಕೃತಿಗಳಲ್ಲಿ ಕಾಣಬಹುದಾಗಿದೆ.

ಮಹಿಳಾ ಪ್ರವಾಸ ಕಥನಗಳನ್ನು ನೋಡುವ ಸಂದರ್ಭದಲ್ಲಿ ಲೇಖಕಿಯರು ಇಲ್ಲಿ ಲಿಂಗ ಸಮಾನತೆ, ವೃತ್ತಿಯಲ್ಲಿ ಅಭೇದ ಕುಟುಂಬ ವ್ಯವಸ್ಥೆ ಈ ಮೊದಲಾದ ಅಂಶಗಳನ್ನು ಗಮನಿಸಿರುವುದು ತಿಳಿದು ಬರುತ್ತದೆ. ಹೆಣ್ಣಿಗೆ ಕೊಟ್ಟಿರುವ ಸ್ವಾತಂತ್ರ್ಯ, ಸಮಾನತೆಯನ್ನು ಪ್ರಸ್ತಾಪಿಸುತ್ತಾ ಅದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಸ್ತ್ರೀಯರಲ್ಲಿರುವ ಅನುಮಾನ ಮತ್ತು ಸಂಕುಚಿತ ಸ್ವಭಾವಗಳ ಬಗ್ಗೆ ಬೇಸರ ವ್ಯಕ್ತಪಡಿಸಿರುವುದನ್ನು ನೋಡಬಹುದು.

ಶ್ರೀಮತಿ. ಲಲಿತಾ ಸುಬ್ಬಾರಾವ್‌ರ 'ನಾನು ಮತ್ತು ಅಮೇರಿಕ' ಪ್ರವಾಸ ಕಥನದ ಮುಖಾಂತರ ಲೇಖಕಿ ವಿದ್ಯಾಭ್ಯಾಸದ ನಿಮಿತ್ತ ಒಂದು ವರ್ಷ ಅಮೇರಿಕಾದಲ್ಲಿದ್ದು ಅಮೇರಿಕನ್ನರ ಜೀವನದ ಹಲವು ಮುಖಗಳನ್ನು ದರ್ಶಿಸಿದ್ದು ಕಂಡು ಬರುತ್ತದೆ. ಹದಿನೈದು ವರ್ಷದ ಹೈಸ್ಕೂಲ್ ಹುಡುಗಿ, ಆ ವಯಸ್ಸಿನವಳಾದರೂ ಅವಳ ಕೋಣೆಯ ತುಂಬಾ ವಿಧ ವಿಧವಾದ ಗೊಂಬೆಗಳು, ಅನೇಕ ಪುಸ್ತಕಗಳು, ಹೆಣ್ಣು ಮಕ್ಕಳ ಆಟದ ಸಾಮಾನುಗಳು ತುಂಬಿದ್ದನ್ನು ನೋಡಿ ನಮ್ಮ ದೇಶದ ಹೆಣ್ಣು ಮಕ್ಕಳ ಸ್ಥಿತಿಯನ್ನು ಸ್ಮರಿಸುತ್ತಾ ಭಾರತದಲ್ಲಿನ ಬಾಲ್ಯವಿವಾಹ, ಲಿಂಗ ತಾರತಮ್ಯಗಳನ್ನು ಕಠೋರವಾಗಿಯೆ ಟೀಕಿಸಿದ್ದಾರೆ. ಅವರಂತೆ ಸ್ವತಂತ್ರತೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎನ್ನುವ ಮನೋಭಾವ ತಿಳಿದು ಬರುತ್ತದೆ.

ಅದ್ಭುತ ಅಮೇರಿಕ ಮತ್ತು ಅನ್ಯ ರಾಷ್ಟ್ರಗಳಲ್ಲಿ ಪ್ರವಾಸ ಕಥನದ ಮೂಲಕ ಲೇಖಕಿ ಕೆ.ರಾಜೇಶ್ವರಿಗೌಡ ಸುಲಭವಾಗಿ ದೊರೆತ ವಿದೇಶಗಳ ಸುತ್ತಿ ಬರುವ ಸುಸಂದರ್ಭವನ್ನು ಉಪಯೋಗಿಸಿಕೊಂಡಿದ್ದಾರೆ. ಹಲವು ಧಾರ್ಮಿಕ ಕೇಂದ್ರಗಳಿಗೆ ಭೇಟಿ ನೀಡಿದ್ದಾರೆ. ಧಾರ್ಮಿಕ ಚರ್ಚೆ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವ ನೀಡಿರುವುದು ಕಾಣಬಹುದು.

ಇಪ್ಪತ್ತು ವರ್ಷಗಳಲ್ಲಿ ಅಮೇರಿಕಾಕ್ಕೆ ಏಳು ಸಲ ಹೋಗಿ ಬಂದಿದ್ದು, ಮೂವತ್ತೆರಡು ತಿಂಗಳು ಅಮೆರಿಕಾದಲ್ಲಿ ವಾಸ ಮಾಡಿರುವ ಲೇಖಕಿ ಸಾಕಷ್ಟು ಕಾಲಾವಕಾಶ ಲಭಿಸಿದ್ದರಿಂದ ಅಮೇರಿಕಾದ

ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಗಮನಿಸಿ, ಅಮೇರಿಕಾದ ಇತಿಹಾಸವನ್ನು ಪೂರ್ಣ ಮಾಹಿತಿಯೊಂದಿಗೆ ನೀಡಿದ್ದಾರೆ. ಅಲ್ಲದೆ ಪ್ರವಾಸ ಕಾಲದ ಅನುಭವಗಳನ್ನು ತಿಳಿಸುವಲ್ಲಿ, ಸ್ತ್ರೀಯರ ಸಹಜ ಸ್ವಭಾವಕ್ಕನುಗುಣವಾಗಿ ಗೃಹಸೌಖ್ಯ, ಗೃಹಾಲಂಕಾರ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಕುತೂಹಲದಿಂದ ಪರಿಶೀಲಿಸಿರುವುದು ಕಂಡುಬರುತ್ತದೆ. ಅಮೇರಿಕನ್ನರ ವ್ಯವಹಾರಿಕ ಪ್ರವೃತ್ತಿಯಿಂದ ಸಾಮಾಜಿಕ ಜೀವನ ಹೇಗೆ ಕುಸಿಯುತ್ತಿದೆ ಎನ್ನುವುದನ್ನು ತಿಳಿಸಿಕೊಟ್ಟಿದ್ದಾರೆ.

ಮಹಿಳಾ ಪ್ರವಾಸ ಕಥನಗಳೆಲ್ಲಾ ಇತರ ಲೇಖಕ ಪ್ರವಾಸ ಕಥನಗಳಂತೆ ಸಮಗ್ರ ಅಮೇರಿಕಾದ ಅಂಶಗಳನ್ನು ಕುರಿತು ಚರ್ಚಿಸಿರುವುದನ್ನು ಕಾಣುತ್ತೇವೆ. ಸಾಮಾನ್ಯ ಜನರ ರೀತಿ–ನೀತಿ, ಶಿಕ್ಷಣ, ಆರ್ಥಿಕತೆ ಮೊದಲಾದ ಅಂಶಗಳನ್ನು ಭಾರತದ ಅಂಶಗಳೊಂದಿಗೆ ತುಲನೆ ಮಾಡುತ್ತಾ ವಿಶ್ಲೇಷಿಸಿರುವುದನ್ನು ನೋಡಬಹುದಾಗಿದೆ.

ಆಯ್ದ ಕೃತಿಗಳ ಆನ್ವಯಿಕ ವಿಮರ್ಶೆ ಅಧ್ಯಾಯದಲ್ಲಿ ಕೆಲವು ಪ್ರಮುಖ ಲೇಖಕರ ಕೃತಿಗಳನ್ನು ಆಯ್ಕೆ ಮಾಡಿಕೊಂಡು ಆನ್ವಯಿಕ ವಿಮರ್ಶೆಗೆ ಅಳವಡಿಸಲಾಗಿದೆ. ಲೇಖಕರುಗಳು ಅಮೇರಿಕಾ ಪ್ರವಾಸದ ಮೂಲಕ ಪಡೆದ ಅನುಭವಗಳನ್ನು ಅಭ್ಯಸಿಸಿ, ಆಯಾ ಲೇಖಕರ ಆಯಾ ಕೃತಿಗಳ ಮೂಲಕ ಅದರಲ್ಲಡಗಿರುವ ತತ್ವಾಂಶಗಳನ್ನು ವಿವೇಚಿಸಲಾಗಿದೆ. ಆಯಾಯ ಲೇಖಕರು ತಾವು ನಂಬಿದ ತತ್ವ, ಧೋರಣೆ, ಸಿದ್ಧಾಂತಗಳನ್ನು, ನಿಲುವುಗಳನ್ನು, ಅಂಶಗಳನ್ನು ತಮ್ತಮ್ಮ ಕೃತಿಗಳ ಮೂಲಕ ಹೇಗೆ ವಿಶ್ಲೇಷಿಸಿದ್ದಾರೆ ಎನ್ನುವುದನ್ನು ಅರಿಯಲಾಗಿದೆ.

ನಾನು ಕಂಡ ಅಮೇರಿಕಾ ಪ್ರವಾಸ ಕಥನದ ರಾ.ಯ. ಧಾರವಾಡಕರ್ ಅವರು ಮೂರು ಬಾರಿ 3, 6, 12 ತಿಂಗಳ ದುಪ್ಪಟ್ಟು ಕಾಲಾವಧಿಯಲ್ಲಿ ಪ್ರವಾಸ ಮಾಡುವಾಗಿನ ಅನುಭವಗಳಾದ ಡಾಲರ್ ವಂದನೆ ನಿರೀಕ್ಷೆ, ಸೌಥ್ ಕೆರೊಲೈನಾ ರಾಜ್ಯದಲ್ಲಿನ ಮಾದಕ ಪಾನೀಯಗಳ ಕಾನೂನು, ಅಮೇರಿಕಾದ ಅನಿವಾಸಿ ಭಾರತೀಯರು ನೊಬೆಲ್ ಪ್ರಶಸ್ತಿ, ಸಂಶೋಧನೆ, ಉನ್ನತ ಅಧಿಕಾರ ಗಳಿಕೆಗಳ ಸಾಧನೆಯ ಹಿನ್ನೆಲೆ, ವಾಲ್ ಸ್ಟ್ರೀಟ್ ಜರ್ನಲ್‌ದ 'ಜೇಮ್ಸ್ ಪಿ. ಸ್ಟೆರಾ' ಸೂಚಿಸುವ ಭಾರತೀಯರ ಯಶಸ್ಸಿನ ಕಾರಣ, ದೈನಂದಿನ ಕ್ರಿಯೆ, ಆರೋಗ್ಯ, ವ್ಯವಹಾರ ಮೊದಲಾದವುಗಳಲ್ಲಿನ ಅಸಾಧಾರಣ ಯಂತ್ರ ವ್ಯವಸ್ಥೆ, ಅಮೇರಿಕನ್ನರ ಸ್ವಚ್ಛಂದ ಜೀವನ ರೀತಿ, ನೀಗ್ರೋ ಮತ್ತು ಜನಾಂಗಿಕ ತಾರತಮ್ಯ ಸಮಸ್ಯೆ, ಅಮೇರಿಕದಲ್ಲಿನ ಭಾರತ ಮತ್ತು ಕನ್ನಡಗಳ ಅಸ್ತಿತ್ವ ಮೊದಲಾದ ಅಂಶಗಳನ್ನು ವಿಮರ್ಶಿಸಲಾಗಿದೆ.

ವಿಸ್ಮಯಗಳ ನಾಡಿನಲ್ಲಿ ದೇಜಗೌ ಅವರು ಕಾದಂಬರಿ ತಂತ್ರದ ನಿರೂಪಣೆಯಲ್ಲಿ ತಂದೆ-ತಾಯಿಗಳ ನೌಕರಿಯಲ್ಲಿ ಅಬ್ಬೆಪಾರಿಗಳಾಗುವ ಮಕ್ಕಳ ಪರಿಸ್ಥಿತಿಯನ್ನು, ಅಮೇರಿಕನ್ನರ ಐದು ದಿನಗಳ ಕಠಿಣ ಪರಿಶ್ರಮ-ಎರಡು ದಿನಗಳ ಮಜಾ, ವಿವಾಹ ವಿಚ್ಛೇದನದ ಗುಣ-ದೋಷ, ಕಾಮುಕ ಜೀವನದಲ್ಲಿನ ಅಮೆರಿಕನ್ ಮುಕ್ತತೆ ಭಾರತದ ಗುಪ್ತತೆ, ಮಿತಿ ಇಲ್ಲದ ಸೌಂದರ್ಯ ಪ್ರಜ್ಞೆಯ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ, ಅನ್ಯೋನ್ಯ ಸತಿ ಪತಿಗಳಂತಿರುವ ಅಮೇರಿಕನ್ನರ ವಿಚ್ಚೇದನಾ ಚಕಿತತೆ, ಅಮೇರಿಕ ಮತ್ತು ಭಾರತಗಳ ವೈದ್ಯಕೀಯ ಶಿಕ್ಷಣದ ಅಂತರ, ಡಿಸ್ನಿಲ್ಯಾಂಡ್, ಕ್ಯಾಪಿಟಲ್ ಹಿಲ್ ಮೊದಲಾದ ವರ್ಣರಂಜಿತ ಪ್ರೇಕ್ಷಣೀಯ ಸ್ಥಳಗಳು ಮತ್ತು ಗ್ರಂಥಾಲಯಗಳ ಕುರಿತಾದ ಧೋರಣೆಗಳನ್ನು ವಿಮರ್ಶಿಸಿಲಾಗಿದೆ.

'ಅಮೇರಿಕಾದಲ್ಲಿ ಗೊರೂರು' ಪ್ರವಾಸ ಕಥನದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ ತನ್ನವನ್ನು ಬಿಟ್ಟುಕೊಡದೆ ಅಮೇರಿಕನ್ ಜನಜೀವನದಲ್ಲಿ ಕಳೆದು ಹೋಗಿರುವುದನ್ನು ಕಾಣಬಹುದಾಗಿದೆ. ಭಾರತದ ನಾಗರೀಕತೆಯೇ ಅತ್ಯುತ್ತಮ, ನಮ್ಮ ಸಂಸ್ಕೃತಿ, ಜೀವನ, ಇಲ್ಲಿಯ ಆರ್ಷೇಯ ಧರ್ಮ, ಧಾರ್ಮಿಕ ಪುರುಷರು ಇವೇ ನಮಗೆ ತುಂಬ ಪ್ರಿಯ ಎಂಬ ನಿಲುವನ್ನು, ಅಮೇರಿಕಾದ ಸರ್ಕಾರ ಮತ್ತು ಪ್ರಜೆಗಳ ಪರಸ್ಪರ ಪೂರಕ ಸಂಬಂಧ, ಅಮೇರಿಕನ್ನರ ಯಾಂತ್ರಿಕ ಬದುಕು, ಕನ್ನಡ ಸಂಘಗಳ ಕಾರ್ಯಶ್ರದ್ಧೆ, ಲೇಖಕರು ಜ್ಯೋತಿಷಿಗಳಾದ ಸಂದರ್ಭ, ಭಾರತೀಯ ಮಹಾನ್ ಗ್ರಂಥಗಳ ಸಾರವನ್ನು ಪರಿಚಯಿಸಿಕೊಟ್ಟ ಲೇಖಕರು, ಜೈಲಿನಲ್ಲಿ ಕಳೆದ ರಾತ್ರಿ, ಸರ್ಕಸ್‌ನಲ್ಲಿ ಫೈರ್ ಅಲಾಂ ಬೆಲ್ ಮಾಡಿದ ಅವಾಂತರ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ಗೊರೂರರು ನೋಡಿರುವ ರೀತಿ, ಪ್ರತಿಯೊಂದು ನಿರೂಪಣೆಯೂ ವಾಚಕರಲ್ಲಿ ನಗೆಯುಕ್ಕಿಸುವ ಹಾಸ್ಯ ಮಿಶ್ರಿತ ಶೈಲಿಯ ಗುಣಗಳನ್ನು, ಶ್ರದ್ಧಾವಂತ ವೈಷ್ಣವ ಬ್ರಾಹ್ಮಣರ ಮಡಿವಂತಿಕೆಯನ್ನು ಪ್ರವಾಸಕಾಗುವಷ್ಟು ಪುಳಿಯೋಗರೆ ಗೊಜ್ಜು ಮತ್ತು ಪತ್ನಿ ಕೈ ಚೀಲದಲ್ಲಿ ಸದಾ ಇಟ್ಟುಕೊಂಡ ಲೋಟ, ಸ್ವ ಊರಿನ ದೇವಾಂಗ ಹುಡುಗ ತಿಂಡಿ ಆಹಾರದ ಸಹಾಯಕ್ಕೆ ಬಂದಾಗ ಲೇಖಕರ ಮನಸ್ಥಿತಿಗಳಲ್ಲಿರುವ ದೋಷಗಳನ್ನು ವಿಮರ್ಶಿಸಿಲಾಗಿದೆ.

'ಜಯಶ್ರೀ ಕಂಡ ಜಗತ್ತು' ಪ್ರವಾಸ ಕೃತಿಯ ಹೋ. ಶ್ರೀನಿವಾಸಯ್ಯನವರು ದಂಪತಿ ಸಮೇತರಾಗಿ ಪ್ರವಾಸ ಮಾಡಿರುವ ಹೋ.ಶ್ರೀನಿವಾಸಯ್ಯನವರು ಪ್ರಾರಂಭದಲ್ಲಿ ಅಮೇರಿಕಾದ ಕಿರು ಪರಿಚಯವನ್ನು ಅಮೆರಿಕಾದ ಸಾರ್ವಜನಿಕ ಆಸ್ತಿಯ ಕಾಳಜಿ, ವೃದ್ಧರಾದಿಯಾಗಿ ಸ್ವಾತಂತ್ರ್ಯ ಪ್ರಿಯತೆ. ಅಮೇರಿಕದ ವ್ಯವಹಾರಿಕ ಚಾತುರ್ಯ, ಹುಲ್ಲು ಕತ್ತರಿಸುವ ವಿದ್ಯಾರ್ಥಿಯ ಗಾಲ್ಫ್ ಸಂದರ್ಭ ಮುಂತಾದ ಕಾಯಕ

ಮತ್ತು ವೃತ್ತಿಪರತೆಗಳನ್ನು, ಪಿಯಾನು ಕಲಿಯಲು ವಯಸ್ಸೇಪ್ಪಾದರೇನು ಎನ್ನುವ ಮುದುಕಿಯ ಸಂದರ್ಭ, ಅಮೇರಿಕನ್ ಮಕ್ಕಳು ತಮ್ಮ ಭವಿಷ್ಯತ್ತುಗಳ ಧ್ಯೇಯೋದ್ದೇಶಗಳು, ಅಮೆರಿಕಲ್ಲಿನ ಅನಕ್ಷರತೆ, ಅನಿವಾಸಿ ಭಾರತೀಯ ಮಕ್ಕಳ ಭಾರತ ಸಂಸ್ಕೃತಿ ಕುರಿತು ವ್ಯಕ್ತಪಡಿಸುವ ವಿಷಾದ ಮೊದಲಾದ ವಿಷಯಗಳಲ್ಲಿನ ನಿಲುವುಗಳನ್ನು ವಿಶ್ಲೇಷಿಸಲಾಗಿದೆ.

'ಅಮೇರಿಕದಲ್ಲಿ ನಾನು, ಶಾಂತಿ' ಪ್ರವಾಸ ಕಥನದ ಪ್ರಭುಶಂಕರ ಅವರು ಅಮೇರಿಕಾದ ಆರ್ಥಿಕ ವ್ಯವಸ್ಥೆಯನ್ನು ಭಾರತವು ಅನುಸರಿಸುವುದು ಉತ್ತಮವೆಂಬ ಭಾವನೆಯನ್ನು ಗುರುತಿಲಾಗಿದೆ. ಅಮೇರಿಕನ್ ಯುವಜನತೆಯ ಸ್ವಚ್ಛಂದ ಜೀವನದ ಪ್ರಭಾವದಿಂದ ಅನಿವಾಸಿ ಭಾರತೀಯ ಯುವಜನತೆಯ ಸಮಸ್ಯೆ, ಅಮೇರಿಕಾದ ಭೌತಿಕ ಶ್ರೀಮಂತಿಕೆಗಿಂತ ಭಾರತದ ಮಾನಸಿಕ ಶ್ರೀಮಂತಿಕೆ ಮುಖ್ಯವೆಂದು ಅನಿವಾಸಿ ಭಾರತೀಯರನ್ನು ಆಹ್ವಾನಿಸುತ್ತಿರುವ ಧೋರಣೆಯನ್ನು ವಿಮರ್ಶಿಸಲಾಗಿದೆ.

'ಅಮೇರಿಕಾದಲ್ಲಿ ನಾನು' ಪ್ರವಾಸ ಕಥನದ ಬಿ.ಜಿ.ಎಲ್. ಸ್ವಾಮಿ ಅವರು ತಮ್ಮ ನವಿರಾದ ಹಾಸ್ಯ ಮಿಶ್ರಿತ ಶೈಲಿಯಲ್ಲಿ ಪರಿಸರ ಸಂದರ್ಭಗಳ ವ್ಯತ್ಯಾಸವಿದ್ದರೂ ಮನುಷ್ಯ ಸ್ವಭಾವ ಒಂದೇ ಎಂಬ ಧೋರಣೆಯನ್ನು, ಭಾರತೀಯ ಟೋಪಿಯ ಆಕರ್ಷಣೆ ಮತ್ತು ವಿಶೇಷತೆಗಳನ್ನು, ಅಮೇರಿಕನ್ ಸ್ತ್ರೀಯರ ಸೀರೆಯ ಹುಚ್ಚುಗಳನ್ನು, ಅಮೇರಿಕನ್ನರ ಗುಣ–ಸ್ವಭಾವ ಇತ್ಯಾದಿಗಳನ್ನು, ಲೇಖಕರ ನವಿರಾದ ಹಾಸ್ಯ ಮಿಶ್ರಿತ ಶೈಲಿಯ ಆಯಾಮಗಳನ್ನು ವಿಮರ್ಶಿಸಲಾಗಿದೆ.

'ಪಾತಾಳಕ್ಕೆ ಪಯಣ' ಪ್ರವಾಸ ಕೃತಿಯ ಶಿವರಾಮ ಕಾರಂತರವರು ಅಮೇರಿಕಾದ ಒಂದು ತಿಂಗಳ ಪ್ರವಾಸದನುಭವ ಮತ್ತು ಉದ್ದೇಶಗಳಾದ ಅಮೇರಿಕಾದಲ್ಲಿ ಚಿತ್ರ ಶಾಲೆಗಳ ವೀಕ್ಷಣೆ, ನ್ಯಾಚುರಲ್ ಹಿಸ್ಟರಿ ಮ್ಯೂಸಿಯಮ್, ಸನ್ ಫ್ಲವರ್ ಭೂದೃಶ, ಬರ್ಕ್ಲಿ ವಿಶ್ವವಿದ್ಯಾಲಯ ಆಧುನಿಕ ಪರಮಾಣು ವಿಜ್ಞಾನಕ್ಕೆ ನೀಡಿರುವ ಕಾಣಿಕೆ, ಅಮೇರಿಕಾದ ಸೌಕರ್ಯಯುತ ದೂರವಾಣಿ ವ್ಯವಸ್ಥೆ, ಸಮಯವನ್ನು ಕಾಂಚನವಾಗಿ ಮಾರ್ಪಡಿಸಿಕೊಳ್ಳುವ ಅಮೇರಿಕನ್ನರ ಧ್ಯೇಯ, ದ್ರವ್ಯಾರ್ಜನೆಯಲ್ಲಿನ ವೃತಿಪರತೆ ಮತ್ತು ವೃತ್ತಿ ಗೌರವ, ನೀಗ್ರೋಗಳಿಗಿಂತ ಹೀನಾಯವಾದ ಭಾರತೀಯ ಅಸ್ಪೃಶ್ಯತೆ ಮುಂತಾದ ವಿಶೇಷಣಾಂಶಗಳನ್ನು ವಿವೇಚಿಸಲಾಗಿದೆ.

'ಅಪರ ವಯಸ್ಕನ ಅಮೇರಿಕಾ ಯಾತ್ರೆ' ಎಂಬ ಪ್ರವಾಸ ಕಥನದ ಎ.ಎನ್. ಮೂರ್ತಿರಾಯರ ಆಹಾರ ಪದ್ಧತಿಗಳ ವೈಶಿಷ್ಟ್ಯಗಳನ್ನು, ಸಂಸ್ಕೃತಿಗಳ ಮುಖಾಮುಖಿ ಅಂಶಗಳನ್ನು, ಅಲ್ಲಿ-ಇಲ್ಲಿನ ಜನರ ಮನೋವೃತ್ತಿಗಳ ವ್ಯತ್ಯಾಸಗಳನ್ನು, ಫ್ರೀ ಫ್ಲ್ಯಾಟ್ ಮನೆ ಮತ್ತು ಹಿಂಸಾಕೃತ್ಯಗಳನ್ನು ಅಮೇರಿಕಾದ ಭೋಗ ಜೀವನದ ಪರಮಾವಧಿಯನ್ನು, ಬಳಸಿ ಎಸೆಯುವಲ್ಲಿನ ಔದ್ಯೋಗಿಕ ಸೃಷ್ಟಿ, ನೀಗ್ರೋಗಳನ್ನು ಕುರಿತ ದೃಷ್ಟಿಕೋನ ಮೊದಲಾದ ತರ್ಕಾತೀತ ಅಂಶಗಳನ್ನು ವಿಮರ್ಶಿಸಿರುವುದೊಂದಿಗೆ ಲೇಖಕರ ವಿಶಿಷ್ಟ ಭಾಷಾ ಶೈಲಿಗಳನ್ನು ವಿಶ್ಲೇಷಿಸಲಾಗಿದೆ.

ಒಟ್ಟಾರೆ ಈ ಎಲ್ಲ ಲೇಖಕರ ಪ್ರವಾಸಕಥನಗಳಲ್ಲಿ ಅಮೇರಿಕಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮೊದಲಾದ ಅಂಶಗಳಲ್ಲಿ ಒಂದೊಂದು ಅಂಶದ ಬಗ್ಗೆ ಒಬ್ಬೊಬ್ಬ ಲೇಖಕರ ಚರ್ಚೆಯನ್ನು ಪ್ರಧಾನವಾಗಿ ಚರ್ಚಿಸಿರುವುದರೊಂದಿಗೆ ಇತರ ಕೆಲವು ವಿಶಿಷ್ಟ ಅಂಶಗಳನ್ನು ಚರ್ಚಿಸಲಾಗಿದೆ. ಅಮೇರಿಕಾದ ಪ್ರವಾಸಕಥನಗಳಲೆಲ್ಲಾ ಕಂಡುಬರುವ ಸಾಮಾನ್ಯ ಅಂಶಗಳೆಂದರೆ ಪ್ರಯಾಣದ ಸಿದ್ಧತೆ, ವೀಸದ ಪ್ರಯಾಸ, ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಯಲ್ಲಿ ಭಾವಪರವಶತೆ ಇತ್ಯಾದಿಗಳನ್ನು ಕಾಣಬಹುದಾಗಿದೆ. ಕೆಲವರು ಪ್ರೇಕ್ಷಣಿಯ ಸ್ಥಳಗಳಿಗೆ ಮಹತ್ವಕೊಟ್ಟರೆ ಮತ್ತೆ ಕೆಲವರು ಪ್ರೇಕ್ಷಣೀಯ ಸ್ಥಳಗಳೊಂದಿಗೆ ಅಮೇರಿಕದ ಇತರ ಸಾಂಸ್ಕೃತಿಕ ಅಂಶಗಳನ್ನು ವಿವೇಚಿಸಿದ್ದಾರೆ. ಇಲ್ಲಿ ಗಮನಿಸಬೇಕಾಗಿರುವ ಅಂಶವೆಂದರೆ ಅನಿವಾಸಿ ಭಾರತೀಯರು ಎನ್ನುವಲ್ಲಿ ಬಹುಪಾಲು ಕನ್ನಡಿಗರಾಗಿರುತ್ತಾರೆ.

ಈ ಅಧ್ಯಯನದ ಫಲಿತಗಳ ಬಗ್ಗೆ ಹೇಳುವುದಾದರೆ ಭಾರತೀಯ ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಅಮೇರಿಕಾದ ಶಿಕ್ಷಣವನ್ನು, ಅವರ ವೃತ್ತಿ ಮನೋಭಾವ, ಸಮಯ ಪ್ರಜ್ಞೆಯನ್ನು ಮೆಚ್ಚಿಕೊಳ್ಳುತ್ತಾ ಅವುಗಳನ್ನು ಅನುಸರಿಸಿ ಅಳವಡಿಸಿಕೊಳ್ಳುವ, ಗಳಿಸುವ, ರೀತಿಯನ್ನು ಈ ಎಲ್ಲ ಪ್ರವಾಸಕಥನಗಳು ತೆರೆದಿಡುತ್ತವೆ.

ಒಂದು ದೇಶದ ಅಭಿವೃದ್ಧಿಗೆ ಆ ದೇಶದ ಆರ್ಥಿಕ ನೀತಿಯೇ ಕಾರಣವಾಗುತ್ತದೆ. ಅದರಂತೆ ಅಮೇರಿಕಾ ಸುಧಾರಿತ ಆರ್ಥಿಕ ನೀತಿ ಗಮನಿಸಿದಾಗ ಏನೆಲ್ಲಾ ಹೊಸ ಸಾಧ್ಯತೆಗಳನ್ನು ಹಮ್ಮಿಕೊಳ್ಳಬಹುದು ಎಂಬುದನ್ನು ಅರಿಯಬಹುದಲ್ಲದೆ, ರಾಜಕೀಯ ವ್ಯವಸ್ಥೆಯಿಂದ ಒಂದು ರಾಷ್ಟ್ರ ಹೇಗೆ ಬಲಾಢ್ಯವಾಗಲು ಸಾಧ್ಯವೆಂಬುದನ್ನು ಅಮೇರಿಕಾ ಪ್ರವಾಸ ಕಥನಗಳು ತಿಳಿಸಿಕೊಡುತ್ತವೆ. ಅಮೇರಿಕಾ ತನ್ನ ರಾಷ್ಟ್ರೀಯ ಆದಾಯದಲ್ಲಿ ಪ್ರವಾಸೋದ್ಯಮದ ಪ್ರಾಶಸ್ತ್ಯವನ್ನು ಕಾಣಬಹುದಾಗಿದೆ. ಇದನ್ನು ನೋಡಿದಾಗ

[illegible]

[illegible]

[illegible]

[illegible]

[illegible]

ದೂರದೇಶಗಳಿಂದ ಪ್ರವಾಸಿಗಳನ್ನು ಆಕರ್ಷಿಸಲು ನಮ್ಮಲ್ಲಿ ಸಾಕಷ್ಟು ಸ್ಥಳಗಳಿವೆ. ಅವುಗಳನ್ನು ಆಕರ್ಷಣೀಯ ತಾಣಗಳನ್ನಾಗಿ ಮಾಡಿ ನಾವು ನಮ್ಮ ಪ್ರವಾಸೋದ್ಯಮದ ಮೂಲಕ ರಾಷ್ಟ್ರೀಯ ಆದಾಯ ಹೆಚ್ಚಿಸಿಕೊಳ್ಳುವಂತೆ ಮಾಡಿಕೊಳ್ಳಬೇಕೆಂಬ ಮನೋಭಾವವನ್ನು ತಿಳಿಸುವ ಗುಣವನ್ನು ಈ ಪ್ರವಾಸ ಕಥನಗಳು ತಿಳಿಸಿಕೊಟ್ಟಿವೆ. ವಿಮರ್ಶಾತ್ಮಕ ದೃಷ್ಟಿಯಿಂದ ಈ ಎಲ್ಲಾ ಪ್ರವಾಸ ಕಥನಗಳನ್ನು ವಿವೇಚಿಸಲಾಗಿದೆ.

ಒಟ್ಟಿನಲ್ಲಿ ಅಮೇರಿಕಾ ದೇಶವನ್ನು ಕುರಿತು ಬಹುತೇಕ ಎಲ್ಲಾ ಲೇಖಕ-ಲೇಖಕಿಯರು ತಮ್ಮ ಪ್ರವಾಸ ಕಥನಗಳಲ್ಲಿ ಅಮೇರಿಕಾವನ್ನು ಹೊಗಳಿರುವುದು, ತೆಗಳಿರುವುದು, ತಿರಸ್ಕಾರ ಮನೋಭಾವ ಹೊಂದಿರುವುದು, ಮೆಚ್ಚಿಕೊಂಡಿರುವುದು, ಪ್ರಶಂಸಿಸಿರುವುದರಿಂದ ಅಮೇರಿಕಾದ ಸ್ಥೂಲ ನೋಟವನ್ನು ಕಂಡುಕೊಳ್ಳಲಾಗಿದೆ. ಹಾಗೂ ಈ ಅಧ್ಯಯನದ ಮೂಲಕ ನಾಳಿನ ಭವಿಷ್ಯತ್ತಿಗೆ ಸಮಗ್ರವಲ್ಲದಿದ್ದರೂ ಸ್ಥೂಲ ಪರಿಚಯವನ್ನೊದಗಿಸಿ ವಾಚಕರಲ್ಲಿ ಅಮೇರಿಕಾ ಕುರಿತು ಪ್ರಶ್ನಿಸಿಕೊಳ್ಳುವ ವಿವೇಚನಾ ಶಕ್ತಿಯನ್ನುಂಟುಮಾಡುತ್ತೆಂದು ತಿಳಿದುಕೊಳ್ಳಲಾಗಿದೆ. ಆ ಮೂಲಕ ಈ ಮಹಾಪ್ರಬಂಧದ ಹೊಸ ಸಾಧ್ಯತೆಗಳನ್ನು, ಸಾರ್ಥಕತೆಯನ್ನು ತೆರೆದಿಡುತ್ತದೆ.

ನಾನು ಈ ವರೆಗೆ ಅಧ್ಯಯನ ಮಾಡಿದ ಹಲವಾರು ಕೃತಿಗಳಲ್ಲಿ ವಿಷಯವನ್ನು ಕ್ರೋಢಿಕರಿಸಿ ವಿಶ್ಲೇಷಿಸಿ ಸಂಶೋಧನಾ ವಿಧಿ ವಿಧಾನಗಳ ಅಡಿಯಲ್ಲಿ ನನ್ನ ಸಂಶೋಧನಾ ಮಹಾಪ್ರಬಂಧವನ್ನು ಮಂಡಿಸುತ್ತಿದ್ದೇನೆ. ನನ್ನ ಈ ಮಹಾ ಪ್ರಬಂಧದಲ್ಲಿ ಮುಂದಿನ ಹಲವು ಸಂಶೋಧನಾ ಗ್ರಂಥಗಳಿಗೆ ಆಕರವಾಗುವಂತಹ ವಿಷಯ ಸಂಗ್ರಹಣೆ ಮಾಡಿದ್ದೇನೆ ಎಂಬ ವಿಶ್ವಾಸವಿದೆ.

* * *

## ಅನುಬಂಧಗಳು

1. ಮುಖ್ಯ ಆಕರ ಕೃತಿಗಳು
2. ಅನ್ಯ ಆಕರ ಕೃತಿಗಳು
3. ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು
4. ಇತರೆ ಅಮೆರಿಕ ಪ್ರವಾಸ ಕೃತಿಗಳು

# 1. ಮುಖ್ಯ ಆಕರ ಕೃತಿಗಳು


1. ಅನುಪಮಾ ನಿರಂಜನ : ಅಂಗೈಯಲ್ಲಿ ಯೂರೋ. ಅಮೆರಿಕ :1984 (ಪ್ರ. ಮುದ್ರಣ), ಡಿ. ವಿ. ಕೆ. ಮೂರ್ತಿ ಮೈಸೂರು–4.

2. ಆರ್ಯಾಂಬ ಪಟ್ಟಾಭಿ : ವಿದೇಶ ಪ್ರವಾಸ–2001, (93ರ ಸಾ.ಅ.ಪ್ರ & ಲಿಂಗರಾಜ ಸಾ.ಪ್ರ ಪಡೆದ ವರ್ಷದ ಅತ್ಯುತ್ತಮ ಗ್ರಂಥ), ತ್ರಿವೇಣಿ ಪಬ್ಲಿಕೇಷನ್ಸ್, ಚಾಮರಾಜಪುರಂ, ಮೈಸೂರು–05.

3. ಕುಲಶೇಖರಿ : ಬೊಗಸೆ ಬುತ್ತಿ–1997 (ಪ್ರ. ಮುದ್ರಣ) ಚಿನ್ಮಯಿ ಪ್ರಕಾಶನ, 'ಕ್ಷಿತಿಜ', 5ನೇ ತಿರುವು ಮಲ್ಲೇಶ್ವರ, ಬೆಂಗಳೂರು–03.

4. ಕೆ.ಎನ್. ಕೃಷ್ಣಮೂರ್ತಿರಾವ್ : ಅಮೆರಿಕ ಪ್ರವಾಸದ ಅನುಭವಗಳು–1988 (ಪ್ರ. ಮುದ್ರಣ), ಸುವಿದ್ಯಾ ಪ್ರಕಾಶನ. ನಂ. 7, ಸರ್ವೇಯರ್ ರಸ್ತೆ, ಬಸವನಗುಡಿ, ಬೆಂಗಳೂರು–4.

5. ಕೃಷ್ಣಾನಂದ ಕಾಮತ್ : ನಾನು ಅಮೆರಿಕೆಗೆ ಹೋಗಿದ್ದೆ : 1969 (ಪ್ರ. ಮುದ್ರಣ), ಮನೋಹರ ಗ್ರಂಥ ಮಾಲೆ, ಧಾರವಾಡ–680 001.

6. ಕೆ.ಗಣೇಶ್ ಮಲ್ಯ : ಅಮೆರಿಕದಲ್ಲಿ ಅರವತ್ತು ದಿನಗಳು–1972 (ಪ್ರ. ಮುದ್ರಣ), ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದಕ್ಷಿಣ ಕನ್ನಡ.

7. ಶ್ರೀ. ಗುರುಮೂರ್ತಿ ಪೆಂಡಕೂರು, : ಅವಕಾಶಗಳ ಅಮರಾವತಿ ಅಮೇರಿಕಾ–2004, ಯುವಕರ ಸಂಘ (ರಿ), ರಾಮನಗರ, ಹಗರಿ ಬೊಮ್ಮನಹಳ್ಳಿ–583212, ಬಳ್ಳಾರಿ ಜಿಲ್ಲೆ.

8. ಗೊರೂರು ರಾಮಸ್ವಾಮಿ ಅಯ್ಯಂಗಾರ್ : ಅಮೆರಿಕದಲ್ಲಿ ಗೊರೂರು–1979 (ಪ್ರ. ಮುದ್ರಣ) ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇತೆ, ಬೆಂಗಳೂರು– 18.

9. ಚಂದ್ರಶೇಖರ ಆಲೂರು : ಅಮೆರಿಕಾದಲ್ಲಿ ಆಲೂರು–2002 (ಪ್ರ. ಮುದ್ರಣ), ಭಾವನ ಪ್ರಕಾಶನ, # 2, 80 ಅಡಿಗಳು ರಸ್ತೆ ಬನಶಂಕರಿ, 2ನೇ ಹಂತ, ಕದಿರೇನಹಳ್ಳಿ.

10. ಕೋ. ಚೆನ್ನಬಸಪ್ಪ : ಈ ಇ ಆ ಅ–2006, ಸಂವಹನ, 12/1o, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು – 570 001.

11. ಜಲಜಾ ಗಂಗೂರ್ : ಅವನಿಯ ಅಪ್ಸರೆ ಅಮೆರಿಕ : 2001 (ಪ್ರ. ಮುದ್ರಣ), ಜಗತಾನಿ ಪ್ರಕಾಶನ, ಹೊಸಪೇಟೆ–583201.

12. ಡಾ. 'ಜೀವಿ' ಕುಲಕರ್ಣಿ : ಮತ್ತೊಮ್ಮೆ ಅಮೇರಿಕಾ ಪ್ರವಾಸ–2007 (ಡೆಟ್ರಾಯಿಟ್‌ನಲ್ಲಿ ನಡೆದ ಎರಡನೆಯ ವಿಶ್ವ ಕನ್ನಡ ಸಮ್ಮೇಳನದ ಪ್ರತ್ಯಕ್ಷ ವರದಿಯೊಂದಿಗೆ) ಹರ್ಷವರ್ಧನ ಪ್ರಕಾಶನ, 8–ಅ, 15, ಜವಾಹರ ಸೊಸೈಟಿ, ಗೋವಿಂದ ನಗರ, ಬೋರಿವಲಿ (ಪಶ್ಚಿಮ) ಮುಂಬಯಿ–400 092.

13. ಧಾರವಾಡಕರ ರಾ. ಯ. : ನಾನು ಕಂಡ ಅಮೆರಕೆ–1988 (ಪ್ರ. ಮುದ್ರಣ) ಪವನ ಪ್ರಕಾಶನ, ಸಾರಸ್ವತಪುರ, ಧಾರವಾಡ–580002.

| | | |
|---|---|---|
| 14. ದೇವಕಿ ಮೂರ್ತಿ | : | ಯೂರೋ ಅಮೇರಿಕಾ ಇಣಕೂ ನೋಟ–1994 ಕಾವ್ಯಾಲಯ ಪ್ರಕಾಶಕರು, ಜಯನಗರ, ಮೈಸೂರು–560014 |
| 15. ಪ್ರೊ. ದೇಜಗೌ | : | ವಿಸ್ಮಯಗಳ ನಾಡಿನಲ್ಲಿ–1995 (ಪ್ರ. ಮುದ್ರಣ) ಸಂವಹನ ಪ್ರಕಾಶನ, 12/1, ಈವಿನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು–570001. |
| 16. ಎನ್. ನಂಜುಂಡಶಾಸ್ತ್ರಿ | : | ಅಮೆರಿಕ ಭಾರತೀಯನ ದೃಷ್ಟಿಯಲ್ಲಿ–1987 (ಪ್ರ. ಮುದ್ರಣ), ಪ್ರೊ. ನಂಜುಂಡಶಾಸ್ತ್ರಿ ಪ್ರಕಾಶನ, 105, ಡಿ 29ನೇ ಅಡ್ಡರಸ್ತೆ, ಜಯನಗರ, ಬೆಂಗಳೂರು. |
| 17. ಮ. ನಾಗರಾಜರಾವ್ | : | ನಾರಿ ನಿನಗೆ ನಮೋ ನಮೋ 1979 (ಪ್ರ. ಮುದ್ರಣ), ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. |
| 18. ನಾಗೇಶ್ ಹೆಗಡೆ | : | ಗಗನ ಸಖಿಯರ ಸೆರಗಹಿಡಿದು–2006, ವಸಂತ ಪ್ರಕಾಶನ, ಸಂಖ್ಯೆ 10, ತುಳಸಿವನಂ, ಬೆಂಗಳೂರು–560 053. |
| 19. ನೀಳಾದೇವಿ | : | ನಾ ಕಂಡ ಆ ಖಂಡ–1985 (ಪ್ರ. ಮುದ್ರಣ) ಐ.ಬಿ.ಹೆಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–9. |
| 20. ನೇಮಿಚಂದ್ರ | : | ಪೆರುವಿನ ಪವಿತ್ರ ಕಣಿವೆಯಲ್ಲಿ–2004, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–01. |

| | | |
|---|---|---|
| 21. ಪ್ರಭುಶಂಕರ (ಡಾ) | : | ಅಮೆರಿಕದಲ್ಲಿ ನಾನು, ಶಾಂತಿ–1978 (ಪ್ರ.ಮುದ್ರಣ) ಅಪರ್ಣಾ ಪ್ರಕಾಶನ, ಮೈಸೂರು. |
| 22. ಪಾರ್ವತಮ್ಮ ಮಹಾಲಿಂಗಶೆಟ್ಟಿ | : | ಅಮೆರಿಕದ ಇತಿಹಾಸ ಮತ್ತು ಇಂದಿನ ಜನಜೀವನ–2004, ಐಬಿಎಚ್ ಪ್ರಕಾಶನ 645/6, 10ನೇ 'ಬಿ' ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ ಬೆಂಗಳೂರು–11. |
| 23. ಎನ್.ಡಿ. ಬಗರಿ | : | ವಿದೇಶ ಪ್ರವಾಸದ ಅನುಭವಗಳು–1976 (ಪ್ರ. ಮುದ್ರಣ), ಕಲಾ ಪ್ರಕಾಶನ, ಬೆಂಗಳೂರು. |
| 24. ಮೂರ್ತಿರಾವ್ ಎ. ಎನ್. | : | ಅಪರ ವಯಸ್ಕನ ಅಮೆರಿಕಾಯಾತ್ರೆ–1979, (ಪ್ರ. ಮುದ್ರಣ), ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು–4 |
| 25. ಮಂಡಗದ್ದೆ ಶ್ರೀನಿವಾಸಯ್ಯ, | : | ಅಮೆರಿಕಾದಲ್ಲಿ ಕಂಡಿದ್ದು– ಕೇಳಿದ್ದು–2010, ನಿರಂತರ ಪ್ರಕಾಶನ, ನಂ.39/2&3, 1ನೇ ಮಹಡಿ, ರೆಮ್ಕೊ ಲೇಔಟ್, ವಿಜಯನಗರ, ಬೆಂಗಳೂರು–560040. |
| 26. ಹೆಚ್.ಕೆ. ರಂಗನಾಥ್ | : | ಪರದೇಶಿಯಾದಾಗ–1983 (ಪ್ರ. ಮುದ್ರಣ) ಐ.ಬಿ.ಹೆಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–9. |
| 27. ಕೆ. ರಾಜೇಶ್ವರಿ ಗೌಡ | : | ಅದ್ಭುತ ಅಮೆರಿಕಾ ಮತ್ತು ಅನ್ಯ ರಾಷ್ಟ್ರಗಳಲ್ಲಿ–2000 (ಪ್ರ. ಮುದ್ರಣ), ಶ್ರೀ. ಆದಿ ಚುಂಚನಗಿರಿ ಮಹಾ ಸಂಸ್ಥಾನ ಮತ್ತು ಆದಿ ಚುಂಚನಗಿರಿ ಕ್ಷೇತ್ರ. |

28. ರಾಜಾಮಣಿ ಸಿ.ಕೆ. ನಾಗರಾಜರಾಯ : ಸುವರ್ಣ ಮಧುಚಂದ್ರ–1988,
ಶ್ರೀಕಾಂತ ಪ್ರಕಾಶನ, #435, 19ನೇ ಅಡ್ಡರಸ್ತೆ,
ಜಯನಗರ 1 ಮತ್ತು 3ನೇ ಬ್ಲಾಕ್ ಪೂರ್ವ,
ಬೆಂಗಳೂರು–560011.

29. ಲಲಿತಾ ಶಾಸ್ತ್ರಿ : ಉತ್ತರ ಅಮೇರಿಕಾದಲ್ಲಿ ಚಾತುರ್ಯಮಾಸ–2000
512, 47ನೇ ಕ್ರಾಸ್, 5ನೇ ಬ್ಲಾಕ್, ಜಯನಗರ,
ಬೆಂಗಳೂರು–560041

30. ಲಲಿತಾ ಸುಬ್ಬರಾವ್ : ನಾನು ಮತ್ತು ಅಮೆರಿಕ 1971 (ಪ್ರ. ಮುದ್ರಣ)
ವಾಗ್ದೇವಿ ಪ್ರಕಾಶನ, ಬೆಂಗಳೂರು.

31. ಎನ್.ಕೆ. ವಸಂತರಾಜ : ಅಮೆರಿಕಾದೊಳಗೊಂದು ಇಣುಕು–2004,
ಅಧ್ಯಯನ ಪ್ರಕಾಶನ.

32. ಹೊ. ಶ್ರೀ. ವಸಂತಕುಮಾರ್, : ಅಮೇರಿಕಾ–ಅಮೇರಿಕಾ ತಂದೆ ತಾಯಿ ಮತ್ತು
ಮಕ್ಕಳು– 2009,
ಸಹನಾ ಪ್ರಕಾಶನ, # 35, ಧರ್ಮಶ್ರೀನಲಯ,
2ನೇ ಅಡ್ಡರಸ್ತೆ, ಆಚಿಜನೇಯನಗರ, ಬನಶಂಕರಿ
3ನೇ ಹಂತ, ಬೆಂಗಳೂರು–560085.

33. ಬಿ. ವಿರೂಪಾಕ್ಷಪ್ಪ : ನಾ ಕಂಡ ಅಮೆರಿಕ–1996 (ಪ್ರ. ಮುದ್ರಣ)
ಬಸವ ಸಮಿತಿ ಪ್ರಕಾಶನ, ಬಸವೇಶ್ವರ ವೃತ್ತ,
ಬೆಂಗಳೂರು–1.

34. ವ್ಯಾಸರಾಯ ಬಲ್ಲಾಳ : ನಾನೊಬ್ಬ ಭಾರತೀಯ ಪ್ರವಾಸಿ–1987
(ಪ್ರ. ಮುದ್ರಣ), ಗೀತಾಬುಕ್ ಹೌಸ್, ಮೈಸೂರು.

35. ಶಿವರುದ್ರಪ್ಪ ಜಿ. ಎಸ್. : ಅಮೆರಿಕದಲ್ಲಿ ಕನ್ನಡಿಗ–1988 (ಪ್ರ. ಮುದ್ರಣ) ಶಾರದಾ ಪ್ರಕಾಶನ, ಗಾಂಧೀ ನಗರ, ಬೆಂಗಳೂರು–9.

36. ಶಿವರಾಮ ಕಾರಂತ ಕೆ. : ಪಾತಾಳಕ್ಕೆ ಪಯಣ–1973 (ಪ್ರ. ಮುದ್ರಣ) ಇಂಡಿಯಾ ಬುಕ್ ಹೌಸ್, ಗಾಂಧೀನಗರ ಬೆಂಗಳೂರು–9.

37. ಸುಶೀಲಾ ಕೊಪ್ಪರ : ಪಡುವಣದ ಪತ್ರಮಾಲೆ–1990 (ಪ್ರ. ಮುದ್ರಣ) ಸಾಹಿತ್ಯ ಪ್ರಕಾಶನ, ದಾಜೀಬಾನ್ ಪೇಟೆ, ಹುಬ್ಬಳ್ಳಿ.

38. ಸುಧಾಮೂರ್ತಿ : ಅಟ್ಲಾಂಟಿಕ್‌ದಾಚೆಗೆ–1981 (ಪ್ರ. ಮುದ್ರಣ) ಮನೋಹರ ಗ್ರಂಥ ಮಾಲೆ, ಧಾರವಾಡ–680 001.

39. ಸ್ವಾಮಿ ಬಿ.ಜಿ. ಎಲ್. : ಅಮೆರಿಕಾದಲ್ಲಿ ನಾನು : 1962 (ಪ್ರ. ಮುದ್ರಣ) ಕಾವ್ಯಾಲಯ, ಮೈಸೂರು–4.

40. ಸುಬ್ರಾಯಾಚಾರ್ ಉ. ಕಾ. : ಅಮೇರಿಕಾದ ಅನುಭವ–1985 (ಪ್ರ. ಮುದ್ರಣ) ಜಿ. ಸಾವಿತ್ರಿ 23, 3ನೇ ಬ್ಲಾಕ್, ಜಯಲಕ್ಷ್ಮಿ ಪುರ, ಮೈಸೂರು.

* * *

# 2. ಅನ್ಯ ಆಕರ ಕೃತಿಗಳು


| | | | |
|---|---|---|---|
| 1. | ಶ್ರೀಮತಿ ಆರ್ಯಾಂಭ ಪಟ್ಟಾಭಿ | : | ಮಹಿಳಾ ಸಾಹಿತ್ಯ ಸಮೀಕ್ಷೆ–2004, ಸಂವಹನ, 12/1o, ಈವ್ನಿಂಗ್ ಬಜಾರ್ ಹಿಂಭಾಗ, ಶಿವಾರಾಂ ಪೇಟೆ, ಮೈಸೂರು–570001. |
| 2. | ಕಮಲಾ ಎಂ.ಎಸ್. ಬಾಲು | : | ಅಮೇರಿಕಾದಲ್ಲಿ 'ಕನ್ನಡದ ಕಂಪು'. |
| 3. | ಶಾ. ಮಂ. ಕೃಷ್ಣರಾಯ | : | ಪಾಪು (ಡಾ: ಪಾಟೀಲ ಪುಟ್ಟಪ್ಪನವರ ಜೀವನ ಚರಿತ್ರೆ) |
| 4. | ಎಂ.ಎಚ್. ಕೃಷ್ಣಯ್ಯ, | : | ಮಗನಿಗೊಂದು ಪತ್ರ (ಲೇಖನ)<br>ಕಾವ್ಯಭಾಷೆ, ಸಾಹಿತ್ಯ ವಿಮರ್ಶಾ ಲೇಖನಗಳು, ಪ್ರಕಾಶಕರು: ಅಂಕಿತ ಪುಸ್ತಕ, 53. ಶ್ಯಾಮ್ ಸಿಂಗ್ ಕಾಂಪ್ಲೆಕ್ಸ್, ಗಾಂಧಿ ಬಜಾರ್ ಮುಖ್ಯರಸ್ತೆ, ಬಸವನ ಗುಡಿ, ಬೆಂಗಳೂರು–560004. |
| 5. | ಡಾ॥ ಎಸ್. ಆರ್. ಗುಂಜಾಳ | : | ನಾನು (ಆತ್ಮಚರಿತ್ರೆ)–2007,<br>ಹಿತಚಿಂತಕ ಪ್ರಕಾಶನ, ಮಹಾಲಿಂಗಪುರ, ಬಾಗಲಕೋಟೆ. |
| 6. | ಸಂ : ನಾಗ ಐತಾಳ | : | ಕಾರಂತ ಚಿಂತನ ಕಡಲಾಚೆಯ ಕನ್ನಡಿಗರಿಂದ–2000,<br>ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ |
| 7. | ಪಾರ್ವತಮ್ಮ ಮಹಾಲಿಂಗಶೆಟ್ಟಿ | : | ಹೆಣ್ಣಿನ ದೇಷ್ಟಿಯಲ್ಲಿ ಈ ಶತಮಾನ–1998 (ಆತ್ಮಚರಿತ್ರೆ), ಐ.ಬಿ.ಎಚ್, ಪ್ರಕಾಶನ, ಗಾಂಧಿನಗರ, ಬೆಂಗಳೂರು–09. |

[illegible]

8. ಬೆಳವಾಡಿ ಮಂಜುನಾಥ : ಸಮಾಜಮುಖಿ ಎಂ.ಶಂಕರಮೂರ್ತಿ–2009, (ಕೌಟಂಬಿಕ ಚಿತ್ರ) ಉದ್ಭವ ಪ್ರಕಾಶನ, ಅಗ್ರಹಾರ ವೃತ್ತ, ಹೊಸಮನೆ ರಸ್ತೆ, ಚಿಕ್ಕಮಗಳೂರು–577101.

9. ಕೆ. ಮಾಯಿಗೌಡ. : ಕುಲಪತಿ ಎನ್. ಎಸ್. ರಾಮೇಗೌಡ (ಜೀವನಚರಿತ್ರೆ) ಸ್ವಾಮಿ ವಿವೇಕಾನಂದ ಜೀವನ ಚರಿತ್ರೆ,ರಾಂಕೃಷ್ಣಾಶ್ರಮ.

10. ಪ್ರಧಾನ ಸಂ:ವಿಜಯ್ ಪೂಣಚ್ಚ ತಂಬಂಡ : ಸಂಪುಟ.ಸಂ.–ವಿರೂಪಾಕ್ಷಿ ಪೂಜಾರಹಳ್ಳಿ : ಅಮೇರಿಕಾ ಚರಿತ್ರೆಯ ವಿವಿಧ ಆಯಾಮಗಳು–2010: ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ, ಸಂಪುಟ–8.

* * *

# 3. ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು


| | | | |
|---|---|---|---|
| 1. | ಸಂ : ಅನುರಾಧ ಬಿ.ಟಿ.<br>ಮಾರ್ಗದರ್ಶನ: ಡಾ॥ ಸಿದ್ಧಲಿಂಗಯ್ಯ, | : | ಕನ್ನಡದಲ್ಲಿ ಪ್ರವಾಸ ಸಾಹಿತ್ಯ–ಒಂದು ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು ವಿಶ್ವವಿದ್ಯಾನಲಯದ ಮಹಾಪ್ರಬಂಧ. |
| 2. | ಡಾ॥ಕೆ. ಅನಂತರಾಮು,<br>ಸಂ:ಮಲೇಪುರಂ ಜಿ. ವೆಂಕಟೇಶ್. | : | ಪ್ರವಾಸ ಸಾಹಿತ್ಯ, ಧವಳಶ್ರೀ |
| 2. | ಲೇ:ಅಮರೇಶ ನುಗಡೋಣಿ<br>ಸಂ:ರಹಮತ್ ತರೀಕೆರೆ, | : | ಪ್ರವಾಸ ಸಾಹಿತ್ಯ,<br>ಕನ್ನಡ ವಾರ್ಷಿಕ 1994,<br>ಪ್ರಸಾರಂಗ ಹಂಪಿ ವಿಶ್ವವಿದ್ಯಾಲಯ. |
| 3. | ಕನ್ನಡ ನುಡಿ ಪತ್ರಿಕೆ | : | ಪ್ರವಾಸ ಸಾಹಿತ್ಯ–1963, ಬೆಳ್ಳಿಯ ಸಂಚಿಕೆ. |
| 4. | ಕಿಟ್ಟೆಲ್ | : | ಕನ್ನಡ–ಇಂಗ್ಲಿಷ್ ನಿಘಂಟು–1970, , 3ನೇ ಸಂಚಿಕೆ, ಮದ್ರಸ್ ವಿಶ್ವವಿದ್ಯಾಲಯ. |
| 5. | ಡಾ॥ ಎನ್.ಎಸ್. ತಾರಾನಾಥ್ | : | ಪ್ರವಾಸ ಸಾಹಿತ್ಯ–1990,<br>ಶಕ್ತಿ ಪ್ರಕಾಶನ, 3ನೇ ಹಂತ, ಗೋಕುಲಂ, ಮೈಸೂರು. |
| 6. | ನರಹಳ್ಳಿ ಬಾಲಸುಬ್ರಹ್ಮಣ್ಯಂ | : | ಪ್ರವಾಸ ಸಾಹಿತ್ಯ ಬೆಳೆದು ಬಂದ ದಾರಿ–1989, ತುಷಾರ. |
| 7. | ಸಂಶೋಧಕಿ : ಎನ್. ನಳಿನಿ<br>ಮಾರ್ಗದರ್ಶನ:ಡಾ॥ಸಂ.ಗುರುಪ್ರಸಾದ್ | : | "ಕನ್ನಡ ಸಾಹಿತಿಗಳ ವಿದೇಶ ಪ್ರವಾಸಕಥಗಳು : ಒಂದು ತೌಲನಿಕ ಅಧ್ಯಯನ" ಮಹಾಪ್ರಬಂಧ ಬೆಂಗಳೂರು ವಿಶ್ವವಿದ್ಯಾಲಯಕ್ಕೆ |
| 7. | ಎಚ್.ಎಲ್, ನಾಗೇಗೌಡ | : | ನಾಗಸಿರಿ ವಿದೇಶ ಯಾತ್ರೆ–1986 (ಆತ್ಮಕಥೆ), ಐಬಿಎಚ್ ಪ್ರಕಾಶನ, ಬೆಂಗಳೂರು–09. |

8. ಸಂ:ಪ್ರಭುಶಂಕರ ಮತ್ತು ಭಾ.ವೇ. ಶ್ರೀಧರ : ಕನ್ನಡ–ಇಂಗ್ಲೀಷ್ ನಿಘಂಟು–2007.

9. ಆರ್. ಪೂರ್ಣಿಮಾ : ಅಮೆರಿಕದಲ್ಲಿ ಒಂದು ಶ್ರಾದ್ಧ, ಸಂಕ್ರಮಣ/106–107.

10. ಡಾ॥ ಮಂದಾಕಿನಿ ಪುರೋಹಿತ : ಪ್ರವಾಸ ಸಾಹಿತ್ಯ, ಹೊಸತು ಪತ್ರಿಕೆ, ಡಿಸೆಂಬರ್ 2003.

11. ಸಂ: ಮಲೇಪುರಂ ಜಿ.ವೆಂಕಟೇಶ್ : ಪ್ರವಾಸ ಸಾಹಿತ್ಯ ಒಂದು ಅಧ್ಯಯನ–1992, ಹೊನ್ನ ಪ್ರಕಾಶನ, ನಂ. 102. 6ನೇ ತಿರುವು, ಮಲ್ಲೇಶ್ವರಂ, ಬೆಂಗಳೂರು–03.

12. ಲೇ: ಸಾ.ಶಿ. ಮರುಳಯ್ಯ : ಪ್ರವಾಸ ಸಾಹಿತ್ಯ (Travelogue), ಕನ್ನಡ ನುಡಿ, ಡಿಸೆಂಬರ್ 1963.

13. ಕೆ. ಮರುಳಸಿದ್ಧಪ್ಪ : ಪ್ರವಾಸ ಸಾಹಿತ್ಯ: ಸಾಹಿತ್ಯ ವಾರ್ಷಿಕ–1974 ಪ್ರಕಟನೆ ಬೆಂ.ವಿ.ವಿ.

14. ಡಾ॥ ಲತಾ ಗುತ್ತಿ : ಕನ್ನಡ ಪ್ರವಾಸ ಸಾಹಿತ್ಯದ ಒಳನೋಟಗಳು–2009, ಅಕ್ಷರ ಮಂಟಪ, 624, 9ನೇ 'ಡಿ' ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು–560104.

15. ವರದರಾಜ ಹುಯಿಲಗೋಳ : ಪ್ರವಾಸ ಸಾಹಿತ್ಯ, ಪ್ರಬುದ್ಧ ಕರ್ನಾಟಕ, ಚಿನ್ನದ ಸಂಚಿಕೆ, ಸಾಹಿತ್ಯ ಸಂಘುಟ–1969.

16. ಬಿ.ಎ. ವಿವೇಕರೈ : ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1970, ಪ್ರಬುದ್ಧ ಕರ್ನಾಟಕ.

17. ಎಸ್. ವಿದ್ಯಾಶಂಕರ್ : ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ–1991, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ

ಭವನ, ರವೀಂದ್ರ ಕಲಾಕ್ಷೇತ್ರ ಆವರಣ,
ಬೆಂಗಳೂರು–02.

18. ಪಿ.ವ್ಹಿ. ಶಾಸ್ತ್ರೀ ಕಿಬ್ಬಳ್ಳಿ : ಸಾಹಿತ್ಯದ ಪ್ರಕಾರಗಳು–1973,
ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ,
ಧಾರವಾಡ–1.

19. ಡಾ॥ ಶಿವರಾಮ ಕಾರಂತ : ಸಿರಿಗನ್ನಡ ಅರ್ಥಕೋಶ–1990.

20. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1972,
ಬೆಂಗಳೂರು ವಿಶ್ವವಿದ್ಯಾಲಯ.

21. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1973,
ಬೆಂಗಳೂರು ವಿಶ್ವವಿದ್ಯಾಲಯ.

22. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1974,
ಬೆಂಗಳೂರು ವಿಶ್ವವಿದ್ಯಾಲಯ.

23. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1975,
ಬೆಂಗಳೂರು ವಿಶ್ವವಿದ್ಯಾಲಯ.

24. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1976,
ಬೆಂಗಳೂರು ವಿಶ್ವವಿದ್ಯಾಲಯ.

25. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1977,
ಬೆಂಗಳೂರು ವಿಶ್ವವಿದ್ಯಾಲಯ.

26. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1978,
ಬೆಂಗಳೂರು ವಿಶ್ವವಿದ್ಯಾಲಯ.

27. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1979,
ಬೆಂಗಳೂರು ವಿಶ್ವವಿದ್ಯಾಲಯ.

28. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1980, ಬೆಂಗಳೂರು ವಿಶ್ವವಿದ್ಯಾಲಯ.

29. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1981, ಬೆಂಗಳೂರು ವಿಶ್ವವಿದ್ಯಾಲಯ.

30. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1982, ಬೆಂಗಳೂರು ವಿಶ್ವವಿದ್ಯಾಲಯ.

31. ಸಂ : ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ವಾರ್ಷಿಕ 1983, ಬೆಂಗಳೂರು ವಿಶ್ವವಿದ್ಯಾಲಯ.

32. ಸಂ:ಪ್ರೊ. ಎಲ್.ಎಸ್.ಶೇಷಗಿರಿರಾವ್ : ಸುಭಾಷ್ ಕನ್ನಡ–ಕನ್ನಡ–ಇಂಗ್ಲಿಷ್–ಇಂಗ್ಲಿಷ್–ಕನ್ನಡ ನಘಂಟು–1998.

33. ಡಾ॥ ಬಿ.ಎಸ್. ಸ್ವಾಮಿ : ಸಾಹಿತ್ಯ ಚಿಂತನ–1999, ನವೀನ ಪ್ರಕಾಶನ, ಆರ್.ಪಿ.ಸಿ. ಲೇಔಟ್, ವಿಜಯನಗರ, ಬೆಂಗಳೂರು–560040.

34. ಡಾ॥ ಸೀತಾ ಹನಸೋಗೆ : ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ–2004.

35. by Jean L. Mckechinic : Websters new 20th Websters new 20th Century Dictonary of English Language-1979, Noah Websters of Subpervised.

36. by H.W. Fowler & F.G. Fowler. : The Concise Oxford Dictionary of current English-1964, Edited


* * *

# 4. ಇತರೆ ಅಮೆರಿಕ ಪ್ರವಾಸ ಕಥನಗಳು

| | | | |
|---|---|---|---|
| 1. | ಅಜ್ಜಂಪುರ ಕೃಷ್ಣಸ್ವಾಮಿ | : | ಆಗಮಿಕರ ನಾಡು–1995 (ಅಮೇರಿಕಾ ಸಂಯುಕ್ತ ರಾಷ್ಟ್ರದ ಸಂಕ್ಷಿಪ್ತ ಇತಿಹಾಸ) ಸ್ವರ್ಣಾಂಭ ಪ್ರಕಾಶನ, #74, 3ನೇ ಮುಖ್ಯರಸ್ತೆ, ಬಿ.ಹಚ್.ಸಿ.ಎಚ್, ಲೇಔಟ್, ಬೆಂಗಳೂರು–560076. |
| 2. | ಎನ್.ಆರ್. ಕೃಷ್ಣಮೂರ್ತಿ ಪ್ರ: | : | ಅಮೇರಿಕಾಯಣ–2007, ಪೂರ್ಣಿಮ ಪ್ರಕಾಶನ, 112, ವೃಂದಾವನ, ಮೊದಲ ಮಹಡಿ, 5ನೆಯ ಅಡ್ಡರಸ್ತೆ, ಸಿದ್ದಾಥ ರಸ್ತೆ, ಚೆನ್ನಮ್ಮನ ಕೆರೆ, ಬನಶಂಕರಿ 2ನೇಯ ಹಂತ ಬೆಂಗಳೂರು–70. |
| 3. | ಡಾ. ಕೆ.ಜಿ. ಗುರುಮೂರ್ತಿ | : | ಅಮೆರಿಕಯಲ್ಲಿ ಪ್ರವಾಸ–2000 (ಪ್ರ. ಮುದ್ರಣ), ಪ್ರಿಯದರ್ಶಿನಿ ಪ್ರಕಾಶನ, 138, 7ನೇ 'ಸಿ' ಮೈನ್, ವಿಜಯನಗರ 2ನೇ ಹಂತ, ಬೆಂಗಳೂರು– 40. |
| 4. | ಜಿ. ಗೋಪಾಲ್ (ಡಾ) | : | ಮೈಸೂರಿನಿಂದ ಮೆಕ್ಸಿಕೋಗೆ–1982 ಗಿರಿ ಪ್ರಕಾಶನ, ಜಯನಗರ, ಮೈಸೂರು–570 004. |
| 5. | ಎಸ್.ಆರ್. ಗೌತಮ್ | : | ನಯಾಗಾರಕ್ಕೆ ಐನೂರು ಮೈ.ಲಿ–1981 (ಪ್ರ. ಮುದ್ರಣ), ಗಿರಿ ಪ್ರಕಾಶನ ಜಯನಗರ ಮೈಸೂರು–570 004. |
| 6. | ಚಂದ್ರ ಭಾಗಾದೇವಿ (ಉಡುಪಿ ಕೃಷ್ಣರಾವ್) | : | ಗೆಜ್ಜೆಯ ಹೆಜೆ ನುಡಿ–1971 (ಪ್ರ. ಮುದ್ರಣ), ಲೋಕ ಶಿಕ್ಷಣ ಮಾಲೆ, ಬೆಂಗಳೂರು. |
| 7. | ಡಾ. ಚಂದ್ರಶೇಖರ ಚಡಗ | : | ಅಗ್ರಹಾರದಿಂದ ಅಮೇರಿಕಕ್ಕೆ |

| | | | |
|---|---|---|---|
| 8. | ಚಂದ್ರವದನರಾವ್ ಎಚ್.ಆರ್. (ಪ್ರಾಂ. ನಿ) | : | ವಿದೇಶ ಪ್ರವಾಸ–2001, #370. 14ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ, 5ನೇ ಸ್ಟೆಸ್, ಜೆ.ಪಿ. ನಗರ, ಬೆಂ–560078. |
| 9. | ಚಂದ್ರವದನರಾವ್ ಎಚ್.ಆರ್. | : | ವಿದೇಶ ಪ್ರವಾಸ–2001, ಪ್ರಾಂಶುಪಾಲರು (ನ) ಎವಿವಿ ಗ್ರಾಫಿಕ್ಸ್, 176/ಸಿ.ಎಸ್.ಎನ್. ಪಂದಿತ ಸ್ಟ್ರೀಟ್, ಮೈಸೂರು–570004. |
| 10. | ಜಯ ಕಲ್‌ಬಾಗಲ್ | : | ಅಮೇರಿಕದಲ್ಲಿ ಅರುವತ್ತೇಳರ ಹುಟ್ಟುಹಬ್ಬ–1996 ಕ್ರಿಯೆಟಿವ್ ಕಂಬೈನ್ಸ್, ಯಾದವಗಿರಿ, ಮೈಸೂರು–570020. |
| 11. | ಜಗದಂಬಾ ಮಲ್ಲೇದೇವರು | : | ಪಯಣಿಗಳಾಗಿ ಪಶ್ಚಿಮದೆಡೆಗೆ–2002, ಸಂವಹನ ಪ್ರಕಾಶನ, 12/1ಎ, ಈವಿನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು–01, |
| 12. | ಶ್ರೀಮತಿ. ಜಯಾ ರಾಜಶೇಖರ್ | : | ಮರಳಿ ಬಂದ ಮಧುರ ಮಾಸ–1989, ಲೋಕ ಶಿಕ್ಷಣ ಟ್ರಸ್ಟ್ ಗ್ರಂಥ ಮಾಲೆ, ಹುಬ್ಬಳ್ಳಿ, ಬೆಂಗಳೂರು. |
| 13. | ಆಂಗ್ಲ ಮೂಲ: ಜಾನ್ ಸ್ಟೈನ್ ಬೆಕ್ : ಅನು: ವಿಶ್ವನಾಥ್ ಹುಲಿಕಲ್(U.S.A) | | ಅಮೆರಿಕ ಮತ್ತು ಅಮೇರಿಕನ್ನರು–2006, ಕಾವ್ಯಾಲಯ ಪ್ರಕಾಶಕರು: ಜಯನಗರ, ಮೈಸೂರು–570 014. |
| 14. | ತ್ರಿವೇಣಿ ಶಿವಕುಮಾರ್ | : | ದಿವ್ಯ ಮೌನದ ದೇಶಗಳಲ್ಲಿ, ಪ್ರಭುದೀಪ ಪ್ರಕಾಶನ ನಂ. 230, ಶಿವ ಸಂತೃಪ್ತಿ, 14ನೇ ತಿರುವು, ಎಂ. ವಿ. ಬಡಾವಣೆ, ವಿಜಯನಗರ, ಬೆಂಗಳೂರು–40. |

| | | |
|---|---|---|
| 15. ದೇವೇಂದ್ರಪ್ಪ ಬಸವಂತಪ್ಪ ಪಾಟೀಲ | : | ಸಪ್ತಸಾಗರದಾಚೆ–2005 |
| 16. ದೊಡ್ಡರಂಗೇಗೌಡ | : | ಲೋಕಾಯಣ |
| 17. ಜಿ.ಆರ್. ನಂಜುಂಡೆಗೌಡ | : | ಕೆರೇಬಿಯನ್ ದ್ವೀಪಗಳಲ್ಲಿ–1986 (ಪ್ರ. ಮುದ್ರಣ) ಅರವಿಂದ ಪ್ರಕಾಶನ, 34, 'ಸ್ವರೂಪ' ಕುವೆಂಪುನಗರ, ಮೈಸೂರು. |
| 18. ಎಚ್.ಬಿ. ನಂಜೇಗೌಡ ಸೀತಮ್ಮ ನಂಜೇಗೌಡ | : | ನಾವು ಕಂಡ ಅಮೆರಿಕಾ–1981 (ಪ್ರ. ಮುದ್ರಣ), ಶ್ರೀ ಶಾರದಾಂಬ ಪ್ರಕಾಶನ, ಶಾರದಾಂಬ ಎಸ್ಟೇಟ್, ಮೂಡಿಗೆರೆ–577 132. |
| 19. ಬಿ.ವಿ. ನಾಗರಾಜು | : | (ಕೆನಡಾ–ಅಮೆರಿಕ & ಯೂರೋಪ್ರಕಾಶನ ಪ್ರವಾಸ ಕಥನ) ಕೆನಡಾದಲ್ಲಿ ಬಿವಿ ದಿನಚರಿ, ಆಪ್ತ ಪ್ರಕಾಶನ, ಲೆಕಾನಿ, 18/1, ಎಂ.ಐ.ಜಿ. ಫ್ಲಾಟ್, 'ಆರ್' ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–96 |
| 20. ನಾಗತಿಹಳ್ಳಿ ಚಂದ್ರಶೇಖರ | : | ಅಮೆರಿಕ ಅಮೆರಿಕ – 1997 (ಪ್ರ. ಮುದ್ರಣ) 'ಅಭಿವ್ಯಕ್ತಿ' ಒಂದು ಸಾಂಸ್ಕೃತಿಕ ವೇದಿಕೆ, ಬೆಂಗಳೂರು–11. |
| 21. ನಾಗ ಐತಾಳ (ಆಹಿತಾನಲ) | : | ಅಮೆರಕನ್ನಡಿಗನೊಬ್ಬನ ದಿನಚರಿಯಿಂದ–2002 (ಪ್ರ. ಮುದ್ರಣ), ವಸಂತ ಪ್ರಕಾಶನ, ನಂ.10, ತುಳಸಿವನಂ, ಬೆಂಗಳೂರು– 53. |
| 22. ಟಿ.ಆರ್. ನಾಗಪ್ಪ, | : | ದೇಶ ನೋಡು ಕೋಶ ಓದು–1992, #2904, ಚಾಮುಂಡಿಪುರಂ, ಮೈಸೂರು–570. |

| | | |
|---|---|---|
| 23. ಜಿ.ಟಿ. ನಾರಾಯಣರಾವ್ | : | ಸಪ್ತಸಾಗರದಾಚೆಯೆಲ್ಲೋ–1999,<br>ಅತ್ರಿಬುಕ್ ಸೆಂಟರ್, ಶರಾವತಿ ಕಟ್ಟಡ ಬಲ್ಮಠ,<br>ಮಂಗಳೂರು–575001. |
| 24. ಪದ್ಮ ಉಮಾಪತಿ | : | ನಾವು ಕಂಡ ಅಮೆರಿಕ–1973 (ಪ್ರ. ಮುದ್ರಣ)<br>ಸುದರ್ಶನ ಪ್ರಕಾಶನ, ತಿಪಟೂರು. |
| 25. ಪದ್ಮಾಶೆಣೈ, | : | ಅಮೇರಿಕಾ ವಾಸ–ಪ್ರವಾಸ–1993,<br>ವೆಸ್ಟ್ ಕೋಸ್ಟ ಪೇಪರ್ ಏಂಡ್ ಸ್ಟೇಶನರ್ಸ್,<br>ಹಂಪನಕಟ್ಟೆ, ಮಂಗಳೂರು–575001. |
| 26. ಡಾ॥ ಎಸ್.ಎಚ್. ಪಾಟೀಲ | : | ಅಮೇರಿಕಾ, ಲಂಡನ್ ಮತ್ತು ಪ್ಯಾರಿಸ್ ಪ್ರವಾಸ<br>ಅನುಭವಗಳು–2008,<br>ಲಿಂಗರಾಜ ಪ್ರಕಾಶನ, ಲಿಂಗರಾಜ ನಿಲಯ,<br>ಕೆಲಗೇರಿ ರೋಡ್, ಸಾಯಿನಗರ,<br>ಧಾರವಾಡ–580001. |
| 27. ಪ್ರೊ.ವಿ. ಪುಟ್ಟಮಾದಪ್ಪ | : | ಮಂಜಿನ ಮಡಿಲಲ್ಲಿ–1985,<br>ವಾಗ್ದೇವಿ ಪುಸ್ತಕಗಳು, ದೇವರಾಜ ಅರಸ್ ರಸ್ತೆ,<br>ಮೈಸೂರು–560001. |
| 28. ಪರಮೇಶ್ವರಿ ಲೋಕೇಶ್ವರ್ | : | ಅಮೇರಿಕದಲ್ಲಿ ಅರವತ್ತು ದಿನಗಳು–2003,<br>ಪುಸ್ತಕ ನಿಧಿ, ಗಾವಳಿ, ಕುಂದಾಪುರ (ತಾ) |
| 29. ಪುಟ್ಟಮಾದಪ್ಪ ವೀ. | : | ನೆಮ್ಮಗೆಯ ನಾಡು–1983 & ಮಂಜಿನ ಮಡಿಲಲ್ಲಿ–<br>1985 (ಪ್ರ. ಮುದ್ರಣ) ವಾಗ್ದೇವಿ ಪುಸ್ತಕಗಳು,<br>ದೇವರಾಜ ಅರಸ್ ರಸ್ತೆ, ಮೈಸೂರು–1. |

30. ಪೆಂಡಕೂರು ಗುರುಮೂರ್ತಿ ವಿರೂಪಣ್ಣ : ಬಹುರೂಪಿ ವಸುಂಧರಾ–1973 (ಪ್ರ. ಮುದ್ರಣ) ಯುವಕರ ಸಂಘ, ಹಗರಿಬೊಮ್ಮನಹಳ್ಳಿ, ಬಳ್ಳಾರಿ (ಜಿಲ್ಲೆ).

31. ಎನ್. ಭದ್ರಯ್ಯ : ಪ್ರಪಂಚ ಪರ್ಯಟನ–1976 (ಪ್ರ. ಮುದ್ರಣ) ಸಾಧನ ಸಾಹಿತ್ಯ ಮಂದಿರ, ಲಕ್ಷ್ಮಿ ವಿಲಾಸ ರಸ್ತೆ, ಮೈಸೂರು.

32. ಮಾಳವಾಡ ಸ. ಸ. : ಸಂಚಾರ ಸಂಗಮ (ಅಮೆರಿಕ ಪ್ರವಾಸ)–1979 ಜಯ ಪ್ರಕಾಶನ, ಧಾರವಾಡ.

33. ಪ್ರೊ. ವೈ. ಆರ್. ಮೋಹನ್ : ಅಮೇರಿಕಾಯಣ–2003 (ಪ್ರ. ಮುದ್ರಣ) ಅಭಿನವ ಪ್ರಕಾಶನ, 58ನೇ ಮಹಡಿ, 5ನೇ 'ಎ' ಕ್ರಾಸ್, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು– 40.

34. ರಂಜನ ಭಟ್ಟ : ಕುಬೇರ ರಾಜ್ಯದ ಚಿತ್ರವಿಚಿತ್ರ–1983 (ಪ್ರ. ಮುದ್ರಣ) ಗೀತಾಬುಕ್ ಹೌಸ್, ಮೈಸೂರು.

35. ರಜತಾದ್ರಿ : ಪಶ್ಚಿಮದ ಹೊಂಬೆಳಗು–1968 (ಪ್ರ. ಮುದ್ರಣ), ಸ್ವರ್ಣಕಿರಣ ಪ್ರಕಾಶನ 30 4ನೇ ಕ್ರಾಸ್ ಗೋಕುಲ, ವಿ. ವಿ. ಮೊಹಲ್ಲಾ, ಮೈಸೂರು–2.

36. ಬಿ.ವಿ. ರಾಮನ್ : ಅಮೆರಕಾದಲ್ಲಿ ಓರ್ವ ಹಿಂದೂ–1973 (ಪ್ರ. ಮುದ್ರಣ) ಐ.ಬಿ.ಹೆಚ್. ಪ್ರಕಾಶನ ಗಾಂಧಿನಗರ, ಬೆಂಗಳೂರು–9.

37. ಟಿ.ಕೆ. ರಾಮರಾವ್ : ಗೋಳದ ಮೇಲೊಂದು ಸುತ್ತು–1971 (ಪ್ರ. ಮುದ್ರಣ), ಹಂಸಧ್ವನಿ ಪ್ರಕಾಶನ, 6ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು– 10.

| | | |
|---|---|---|
| 38. ಕೆ. ರಾಜಲಕ್ಷ್ಮಿ ಗೋಪಾಲ್ | : | ಅಮರಲೋಕದಲ್ಲಿ ಅಧ್ಯಾಪಕಿ–1998 ನಾದ ಪ್ರಕಾಶನ, ದೊಮ್ಮಲೂರು, ಬೆಂಗಳೂರು–560071 |
| 39. ವೈ.ಎಸ್. ಲೂಯಿಸ್ | : | ಕೊಲಂಬಿಯಾ ಯಾತ್ರೆ – 1951 (ಪ್ರ. ಮುದ್ರಣ) ಳ ಕ್ರೌನ್, |
| 40. ವನಜಾ ರಾಜನ್ | : | ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ–1998 (ಪ್ರ. ಮುದ್ರಣ), ದಿವ್ಯಚಂದ್ರ ಪ್ರಕಾಶನ, ಕೆಎಚ್‌ಬಿ ಕಾಲೋನ, 2ನೇ ಹಂತ, 6ನೇ ಮೈನ್, 8ನೇ ಕ್ರಾಸ್, ಬಸವೇಶ್ವರನಗರ, ಬೆಂಗಳೂರು– 79. |
| 41. ವಸಂತೀ ಚಂದ್ರ | : | ಭೋಗಭೂಮಿಯ ಮಡಿಲಲಿ (ಭಾಗ–1)–1999 (ಪ್ರ. ಮುದ್ರಣ), ವಿಜಯ ಸಾಹಿತ್ಯ ಪ್ರಕಾಶನ 160, 3ನೇ ಕ್ರಾಸ್, 3ನೇ ಮೈನ್ ಹನುಮಂತನಗರ, ಬೆಂಗಳೂರು– 19. |
| 42. ವೆಂಕಟಸ್ವಾಮಿ | : | ಅಮೆರಿಕಾದಲ್ಲಿ ನನ್ನ ಅನುಭವಗಳು–2004 (ಪ್ರ. ಮುದ್ರಣ), ಅಳಿಲು ಸೇವಾ ಸಂಸ್ಥೆ, 133, ಮೊದಲ ಮಹಡಿ, ಓಬಳಪ್ಪ ಗಾರ್ಡನ್, ಕೆ.ಆರ್. ರಸ್ತೆ, ಬೆಂಗಳೂರು–82. |
| 43. ಎನ್. ವೆಂಕಟಸ್ವಾಮಿ ನಂದಿ | : | ಪಾಶ್ಚಾತ ಪ್ರವಾಸ ನೆನಪುಗಳು–1984 (ಪ್ರ. ಮುದ್ರಣ), ಆರ್. ಬಿ. ಪ್ರಕಾಶನ, ಬೆಂಗಳೂರು–4. |
| 44. ಎಸ್. ವೆಂಕಟರಾಮ್ | : | ಪ್ರದಕ್ಷಿಣೆ–1981 (ಪ್ರ. ಮುದ್ರಣ), ಅಕ್ಷರ ಪ್ರಕಾಶನ, ಸಾಗರ. |

| | | |
|---|---|---|
| 45. ವೆಂಕಟೇಶ್ ರಾಘವೇಂದ್ರ, | : | ವೆಂಕಿ ಬರ್ಗರ್–ನ್ಯೂಯಾರ್ಕ್ ನೆನಪುಗಳು–2009, ಪ್ಯಾಪಿರಸ್ ಮೇಫ್ಲವರ್ ಮೀಡಿಯಾ ಹೌಸ್ ಪ್ರಕಟಣೆ, ಯಮುನಾಬಾಯಿ ರಸ್ತೆ, 1ನೇ ಮಹಡಿ, ಮಧವನಗರ, ಬೆಂಗಳೂರು–10. |
| 46. ಪ್ರೊ. ಶಿವರಾಮಯ್ಯ | : | ಯಾರದೀ ಅಮೇರಿಕ?–1996 ಧಾತ್ರಿ ಪುಸ್ತಕ, ವಿನಾಯಕ ಬಡಾವಣೆ, ನಾಗರಬಾವಿ, ಬೆಂಗಳೂರು 560072. |
| 47. ಎಸ್.ವಿ. ಶ್ರೀನಿವಾಸ್ ರಾವ್, | : | ಇಣಿಕು ನೋಟ–1997, ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು–80. |
| 48. ಶೀರ್ನಾಳಿ ಚಂದ್ರಶೇಖರ | : | ನನ್ನ ಕನಸು ನನಸಾದಾಗ–1979 (ಪ್ರ. ಮುದ್ರಣ) ತಮಸೋಮಾ ಪ್ರಕಾಶನ, ಕಸ್ತೂರಿಬಾ ರಸ್ತೆ, ಶಿವಮೊಗ್ಗ. |
| 49. ಶ್ರೀಮಿತ್ತೂರು | : | ಅಮೇರಿಕಾ, ನಾನು ಕಂಡಂತೆ–1994, ಪ್ರಕಾಶಕರು ಜನಜೀವನ ಸಾಹಿತ್ಯ ಸಾಧನೆ, ಚಿಕ್ಕಬಾಣಾವರ, ಬೆಂಗಳೂರು–560090. |
| 50. ಬಿ. ಶ್ರೀಧರ | : | ಸ್ವಪ್ನಲೋಕ–1978 (ಪ್ರ. ಮುದ್ರಣ) ಶ್ರೀ. ಶ್ರೀ. ಶಿಕ್ಷಣ ಸಂಸ್ಥೆ, 382, 6ನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಂಗಳೂರು–27. |
| 51. ಡಾ॥ಬಿ. ಶ್ರೀಧರ | : | ಸ್ವಪ್ನಲೋಕ ಪುನರ್ ದರ್ಶನ (ಎರಡನೆ ಭಾಗ)–1981 (ಪ್ರ. ಮುದ್ರಣ) ಶ್ರೀ. ರಾಘವೇಂದ್ರ ಪ್ರಕಾಶನ ನಂ.14, 5ನೇ ಕ್ರಾಸ್, ಹೊಂಬೇಗೌಡನಗರ, ಬೆಂಗಳೂರು–27. |

52. ಹೊ. ಶ್ರೀನಿವಾಸಯ್ಯ : ಜಯಶ್ರೀ ಕಂಡ ಅಮೆರಿಕ–1989, (ಪ್ರ. ಮುದ್ರಣ) ಸುವಿದ್ಯಾ ಪ್ರಕಾಶನ, ಬಸವನಗುಡಿ, ಬೆಂಗಳೂರು–4.

53. ಎಂ. ಸಿ. ಶೆಟ್ಟಿ : ಬೈ. ಬೈ. ಅಮೆರಿಕ, ಗುರುದೇವ್ ಪ್ರಕಾಶನ, ಮೂಡನಾಮ್ರು , ಉಡುಪಿ–576101.

54. ಬಿ.ಎಸ್. ಸಣ್ಣಯ್ಯ : ನಾನೂ ಹೋಗಿದ್ದೆ ಅಮೆರಿಕಾಗೆ–2001 (ಪ್ರ. ಮುದ್ರಣ), ಸಂವಹನ ಪ್ರಕಾಶನ, 12/1, ಈವಿನಿಂಙ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು–570001.

55. ಕೆ.ಎಂ. ಸೀತಾರಾಮಯ್ಯ, : ಅಪೂರ್ವ–2001, ಪ್ರಕಾಶಕರು ಸುಜಾತ ಸಾಹಿತ್ಯ, ನಂ.11, 'ವಸಿಷ್ಠ', ಸಿದ್ಧಿವಿನಾಯಕ ಲೇಔಟ್, ಬನಶಂಕರಿ 3ನೇ ಘಟ್ಟ, ಬೆಂಗಳೂರು–560085.

56. ಸೈಯದ್ ಹಫೀಜುದ್ದೀನ್ : ಅಮೇರಿಕದ ಸಂಯುಕ್ತ ಸಂಸ್ಥಾನಗಳು ಅದರ ಭೂಗೋಳ ಮತ್ತು ಬೆಳವಣಿಗೆ : 1965 (ಪ್ರ. ಮುದ್ರಣ) ಕಾವ್ಯಾಲಯ, ಮೈಸೂರು–4

* * *